ದುರ್ಗದ ಓಬವ್ವ : ಸಾಂಸ್ಕೃತಿಕ ಸಂಕಥನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಶ್ರೀಮತಿ ಕೆ.ವಿ. ಗೀತಮ್ಮ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೬

727

ದುರ್ಗದ ಓಬವ್ವ : ಸಾಂಸ್ಕೃತಿಕ ಸಂಕಥನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಶ್ರೀಮತಿ ಕೆ.ವಿ. ಗೀತಮ್ಮ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೬

ಪರಿವಿಡಿ

ದುರ್ಗದ ಓಬವ್ವ – ಸಾಂಸ್ಕೃತಿಕ ಸಂಕಥನ

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ಕೆ.ವಿ. ಗೀತಮ್ಮ ಇವರು ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ದುರ್ಗದ ಓಬವ್ವ : ಸಾಂಸ್ಕೃತಿಕ ಸಂಕಥನ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ: ೨೨/೬/೧೮

ಸಂಶೋಧಕರ ಘೋಷಣಾ ಪತ್ರ

ದುರ್ಗದ ಓಬವ್ವ : ಸಾಂಸ್ಕೃತಿಕ ಸಂಕಥನ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಮಂಜುನಾಥ ಬೇವಿನಕಟ್ಟಿ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

[signature]

ಶ್ರೀಮತಿ ಕೆ.ವಿ. ಗೀತಮ್ಮ
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : **ವಿದ್ಯಾರಣ್ಯ**
ದಿನಾಂಕ : ೨೨/೮/೧೬

ಅಧ್ಯಾಯ : ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಕರ್ನಾಟಕದ ಇತಿಹಾಸದಲ್ಲಿ ಚಿತ್ರದುರ್ಗ ಪಾಳೆಯಗಾರರ ಚರಿತ್ರೆ ರೋಚಕವಾದುದು. ದುರ್ಗವೆಂದರೆ ಗಂಡು ಮೆಟ್ಟಿದ ನಾಡು ಎಂದೇ ಪ್ರಸಿದ್ಧಿಯಾಗಿದೆ. ವಿಜಯನಗರ ಸಾಮ್ರಾಜ್ಯದ ಪತನಾನಂತರ ಕರ್ನಾಟಕದಲ್ಲಿ ಪ್ರಬಲರಾದವರು ಪಾಳೆಯಗಾರರು. ಈ ಪಾಳೆಯಗಾರರ ಮೂಲದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದರೆ, ಮೂಲತಃ ಭಾರತದ ಎಲ್ಲಾ ಕಡೆಗಳಲ್ಲೂ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ್ದ ಬಹಳಷ್ಟು ಪಾಳೆಯಗಾರರು ಶೌರ್ಯ, ಸಾಹಸಗಳಿಗೆ ಹೆಸರಾಗಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರ ಮನೆತನಗಳು ಒಟ್ಟು ಏಳು; ರಾಯದುರ್ಗ, ಹರತಿ (ಹರ್ತಿಕೋಟೆ), ಬೇಲೂರು, ಚಿತ್ರದುರ್ಗ, ಸಂತೆಬೆನ್ನೂರು, ಹಟ್ಟಿ(ನಾಯಕನ ಹಟ್ಟಿ), ಮತ್ತೋಡು. ಈ ಜಿಲ್ಲೆಗಳಲ್ಲಿ ಪಾಳೆಯಗಾರರ ಆಳ್ವಿಕೆಯನ್ನು ಕುರಿತು ಲೇಖನ ರಚಿಸಲು ಆಯಾ ಮನೆತನಗಳ ಶಿಲಾಶಾಸನ, ತಾಮ್ರಪಟ ಶಾಸನಗಳು ಆಧಾರವಾಗಿವೆ.

ಭಾರತದ ಇತಿಹಾಸದಲ್ಲಿ ಶತ್ರುಗಳ ದಾಳಿಯನ್ನು ಯಶಸ್ವಿಯಾಗಿ ಎದುರಿಸಿದ ಹಾಗೂ ಯುದ್ಧ ತಂತ್ರಗಳ ದೃಷ್ಟಿಯಿಂದಲೇ ಕಟ್ಟಲ್ಪಟ್ಟ ಬಲಿಷ್ಠ ದುರ್ಗವೆಂದು ಹೆಸರಾಗಿರುವ ಚಿತ್ರದುರ್ಗವು ನಮ್ಮ ಪೂರ್ವಿಕರ ಜಾಣ್ಮೆ ಹಾಗೂ ಸಾಹಸದ ಗುರುತು. ಚಿತ್ರದುರ್ಗದ ರೋಮಾಂಚಕಾರಿ ಇತಿಹಾಸದಲ್ಲಿ ಮಹತ್ವಪೂರ್ಣ ಪಾತ್ರವಹಿಸಿದ ಸಾಧ್ವಿಶಿರೋಮಣಿ ಒನಕೆ ಓಬವ್ವನ ವಿಷಯವನ್ನು ಕರ್ನಾಟಕ ಇತಿಹಾಸದಲ್ಲಿ ಉಲ್ಲೇಖಿಸಿದ್ದು ಕೆಲವು ಲೇಖಕರು ಆಕೆಯ ಬಗ್ಗೆ ಪುಸ್ತಕಗಳನ್ನು ರಚಿಸಿದ್ದಾರೆ. ಲೇಖನಗಳನ್ನು ಬರೆದಿದ್ದಾರೆ. ಆದರೆ ಅವರಿಗೆ ದೊರೆತ ಮಾಹಿತಿ ಅಲ್ಪಸ್ವಲ್ಪ. ಅದರಲ್ಲಿ ಸತ್ಯಕ್ಕೆ ಕೊಂಚ ಸಮೀಪ ಬಂದಿರುವವರೆಂದರೆ "ಚಿತ್ರದುರ್ಗದ ಪಾಳೆಯಗಾರರು" ಗ್ರಂಥ ಕರ್ತೃ ಶ್ರೀ ಎಂ.ಎಸ್.ಪುಟ್ಟಣ್ಣರವರು.

ಮಹಿಳೆಯರ ಸಂದರ್ಭಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಆ ಕಾಲದ ಅವರ ಬಗೆಗಿನ ವಿಚಾರಧಾರೆಗಳು, ಅವರ ಬಗೆಗಿನ ಜನರ ಮೌಖಿಕ ಸಾಹಿತ್ಯವನ್ನು ಚರಿತ್ರೆ ರಚನೆಗೆ ತರುವುದು ಕಷ್ಟಕರವಾದುದು. ಪ್ರಾಥಮಿಕ ಆಕರಗಳು ಅಲ್ಪವಾಗಿ ದೊರೆತಾಗ ಹೆಚ್ಚಾಗಿ ಜನಪದ ಸಾಹಿತ್ಯವನ್ನೇ ಆಶ್ರಯಿಸಬೇಕಾಗುತ್ತದೆ.

ನಮ್ಮ ಸಂಶೋಧನೆಯಲ್ಲಿ ಯಾವುದನ್ನು ಸಾಕ್ಷ್ಯವಾಗಿ ಸ್ವೀಕರಿಸಬೇಕು, ಯಾವುದನ್ನು ಅಲಕ್ಷಿಸಬೇಕು ಎಂಬುದು ಅತಿ ಮಹತ್ವದ್ದಾಗಿರುತ್ತದೆ. ಎಲ್ಲಾ ಪ್ರಮಾಣಗಳೂ ಸಾಕ್ಷ್ಯಗಳೂ ಒಂದೇ ಮಟ್ಟದವುಗಳಾಗಿರುವುದಿಲ್ಲ ಗಂಭೀರವಾಗಿ ಪರಿಗಣಿಸಬೇಕು. ನಮ್ಮನ್ನಾಳಿದ ನಮ್ಮ ನಾಯಕರು ಸಹ ನಾಯಕರಾಗುವುದಕ್ಕಿಂತ ಮೊದಲು ಅತೀ ಸಾಮಾನ್ಯರೇ ಎನ್ನುವುದನ್ನು ನಾವು ಮರೆಯಬಾರದು. ನಮ್ಮಲ್ಲೇ ನಮ್ಮ ಕನ್ನಡ ನಾಡಿನಲ್ಲೇ ಸಾಮಾನ್ಯ ಅವಿದ್ಯಾವಂತ ಮಹಿಳೆಯೊಬ್ಬಳು ಏಕಾಂಗಿಯಾಗಿ ಶತ್ರುಗಳ ವಿರುದ್ಧ ಹೋರಾಡಿ ತನ್ನ ನಾಡನ್ನು ರಕ್ಷಿಸುವಲ್ಲಿ ತನ್ನನ್ನೇ ತಾನು ಸಮರ್ಪಿಸಿಕೊಂಡಿದ್ದಾಳೆ. ಆಕೆಯನ್ನು ಗುರುತು ಹಿಡಿಯುವಲ್ಲಿ ಇತಿಹಾಸವೇನು ಹಿಂದುಳಿದಿಲ್ಲ. ಆದರೆ ಕೆಲವು ಇತಿಹಾಸಕಾರರಿಗೆ ಈ ಘಟನೆ ಚಿಕ್ಕದಾಗಿ ಕಾಣಿಸಿರಬಹುದು. ಹಾಗಾಗಿ ಓಬವ್ವನ ಘಟನೆಯ ಬಗ್ಗೆ ವಿಪುಲವಾದ ಶಿಷ್ಟಸಾಹಿತ್ಯ ದಾಖಲಾಗಿಲ್ಲದೇ ಇರುವುದಕ್ಕೆ ಈ ಅಂಶವೂ ಕಾರಣವಾಗಿರಬಹುದು. ಆದರೆ ದುರ್ಗದ ಇತಿಹಾಸದಲ್ಲಿ ಓಬವ್ವನ ಸಾಹಸ ದಾಖಲಾಗಿದೆ. ಜನಪದರು ದಾಖಲು ಮಾಡುತ್ತಾ ಬಂದಿರುವುದು ಅಕ್ಷರಶಃ ಸತ್ಯ. ಹಾಗಾಗಿ ಓಬವ್ವ ನಾಡಿನ ಜನಜೀವನದೊಂದಿಗೆ ಅವಿಭಾಜ್ಯ ಸಂಬಂಧವನ್ನು ಹೊಂದಿರುವ ಐತಿಹಾಸಿಕ ಮಹಿಳೆ ಆಗಿದ್ದಾಳೆ. ದುರ್ಗದ ಇತಿಹಾಸದಲ್ಲಿ ಬಹಳಷ್ಟು ಉಪನಾಯಕಿ, ನಾಯಕಿಯರು ತಮ್ಮ ಸಾಹಸಗಳಿಂದ ನೀರ್ಝರಿಗಳಂತೆ ಸೇರಿದ್ದರೂ, ಆಯಾ ಸಂದರ್ಭದ ಮಹತ್ವದಿಂದಾಗಿ ಮಹೋನ್ನತಿಯನ್ನು ಸಾಧಿಸಿದ್ದಾರೆ. ಅದರಲ್ಲಿ "ಓಬವ್ವ" ನಾಡಿಗಾಗಿ ಧೃಢ ನಿರ್ಧಾರ ಕೈಗೊಂಡ ಮಹಿಳೆಯಾಗಿದ್ದಾಳೆ. ಈ ನಿಟ್ಟಿನಲ್ಲಿ "ದುರ್ಗದ ಓಬವ್ವ-ಸಾಂಸ್ಕೃತಿಕ ಕಥನ"ವನ್ನು ಕೈಗೆತ್ತಿಕೊಳ್ಳಲಾಗಿದೆ.

೧.೧. **ಅಧ್ಯಯನದ ಉದ್ದೇಶ** : ವಿಶೇಷವೆಂದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಬುಡಕಟ್ಟು ಜನರು ಇನ್ನೂ ಗ್ರಾಮಗಳಿಗೆ ಬಾರದೆ ಹಟ್ಟಿ, ಕಪಿಲೆ, ತೋಟ, ಅಡವಿಗಳಲ್ಲಿ ಜೀವಿಸುತ್ತಿರುವುದರಿಂದ ಪ್ರತಿಯೊಂದು ಹಟ್ಟಿಯಲ್ಲಿಯು ಚರಿತ್ರೆ ಮತ್ತು ಸಂಸ್ಕೃತಿ ನಿರ್ಮಾಣಗೊಂಡಿರುತ್ತದೆ. ಬಹುತೇಕ ಬುಡಕಟ್ಟು ಜನರು ಕೆರೆ, ಬಾವಿಯ ನೀರನ್ನು ಅಡವಿಯ ಸೌದೆಯನ್ನು ಅವಲಂಬಿಸಿರುವರು. ಜನಸಾಮಾನ್ಯರ ಚರಿತ್ರೆಯೇ ಇಲ್ಲಿ ಪ್ರಧಾನವಾದುದು. ಹಿಂದೆ ಸಮಾಜದಲ್ಲಿ ತಮ್ಮ ಸಾಹಸ, ತ್ಯಾಗಗಳಿಂದ ಹೆಸರಾದ ಜನಸಾಮಾನ್ಯರಿಗೆ ಹತ್ತಿರವಾದ ವ್ಯಕ್ತಿಗಳನ್ನು ಸ್ಮರಿಸುತ್ತಾ ಅವರ ಧೈರ್ಯ, ಪರಾಕ್ರಮಗಳನ್ನು ಕೊಂಡಾಡುವುದು ತಮ್ಮ ವಂಶದವರಿಗೆ ಆ ಹೆಸರುಗಳನ್ನು ಇಡುವುದರ ಮೂಲಕ ನೆನಪಿಸಿಕೊಳ್ಳುವುದು ರೂಢಿಯಲ್ಲಿದೆ.

ಸ್ಥಳೀಯ ಚರಿತ್ರೆಯನ್ನು ಹೆಣೆಯುವಾಗ ಜನಪದರು ತಮ್ಮ ಪ್ರತಿಷ್ಠೆಯನ್ನು ಮೆರೆಯುತ್ತಾರೆ. ಇನ್ನು ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಹೇಳುವಾಗ ಅವರ ನಂಬಿಕೆ, ಜನರಲ್ಲಿರುವ ಅವರ ಭಕ್ತಿ, ಅವರ ಪವಾಡ ಸದೃಶ್ಯವಾದ ಜೀವನವನ್ನು ಹೇಳುತ್ತಾರೆ.ಅವರನ್ನು ತಮ್ಮವರೆಂದು ಕಾಣುತ್ತಾರೆ. ಕಾಲ ಬದಲಾದಂತೆಲ್ಲಾ ಯುಗಧರ್ಮ ಬೇರೆಯಾದಾಗ ಆ ಯುಗದಲ್ಲಿ ಬದುಕಿದ ಜನರ ಅಭಿರುಚಿಗಳು ಸಹಜವಾಗಿ ಬದಲಾಗುತ್ತವೆ. ಇವುಗಳಿಗನುಗುಣವಾಗಿ ಅಭಿವ್ಯಕ್ತಿ ಮಾಧ್ಯಮ ರೂಪುಗೊಳ್ಳುತ್ತದೆ.

ಕರ್ನಾಟಕ ಚಾರಿತ್ರಿಕ ಕಥಾ ಮಂಜರಿಯಲ್ಲಿ ಚಿತ್ರದುರ್ಗದ ಒನಕೆ ಓಬವ್ವನಿಗೂ ಮಹತ್ವದ ಸ್ಥಾನ ಇದ್ದು ಚಾರಿತ್ರಿಕ ಯುಗದ ವೀರವನಿತೆಯರ ಸಾಲಿನಲ್ಲಿ ಈಕೆಯನ್ನು ಗುರುತಿಸಿದ್ದು, ಧೀರೋದತ್ತ ನಿಲುವನ್ನೂ ಪ್ರಶಂಸಿಸಲಾಗಿದೆ. ಮುಖ್ಯವಾಗಿ ಸ್ವಾಮಿನಿಷ್ಠೆ, ಸಮಯಸ್ಫೂರ್ತಿ. ಧೈರ್ಯ ಇವು ಈಕೆಗೆ ಆರೋಪಿಸಿ ಕೊಂಡಾಡಲಾಗುತ್ತಿರುವ ಗುಣಗಳು. ಚಿತ್ರದುರ್ಗ ನಾಯಕರ ಅರಸರ ಚರಿತ್ರೆಯಲ್ಲಿ ಈಕೆ ನಿರ್ವಹಿಸಿದ ಪಾತ್ರದ ಬಗೆಗೆ ಚರಿತ್ರೆಯನ್ನಾಧರಿಸಿದ ಕೆಲವು ಗ್ರಂಥಗಳಲ್ಲಿ, ಪ್ರಬಂಧಗಳಲ್ಲಿ ಪ್ರಸ್ತಾಪಿಸಲಾಗಿದೆ. ಇತಿಹಾಸಕಾರರಾದ ಸಂಶೋಧಕರಾದ ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಒಳಗೊಂಡಂತೆ ಹಲವಾರು ಲೇಖಕರು ಇದೇ ಸಂಗತಿಯನ್ನು ನಾನಾ ರೀತಿಯಲ್ಲಿ ಬರೆದು ಪ್ರಕಟಿಸಿದ್ದಾರೆ. "ದೇಶ ನಮಗೇನು ಮಾಡಿತು?" ಭವ್ಯ ಭಾರತದ ಪ್ರತಿಯೊಬ್ಬ ನಾಗರೀಕನ ಬಾಯಲ್ಲಿ ಬರುವ ವಾಕ್ಯವಿದು. ಇದಕ್ಕೆ ಪ್ರತಿಯಾಗಿ ನಾನು ಸಾಮಾನ್ಯ ಪ್ರಜೆ, ನನ್ನಿಂದ ಏನೂ ಆಗದು ಎಂಬ ಮಾತಿಗೆ, ಓಬವ್ವನ ಸಾಹಸಗಾಥೆ ಉದಾಹರಣೆಯಾಗಬಹುದು. ಇಂಥಹ ಸಾಹಸವನ್ನು ಮೆರೆದ ಓಬವ್ವ ಇತಿಹಾಸದ ತಾತ್ಸಾರಕ್ಕೆ ಗುರಿಯಾದಳೇ? ಅಥವಾ ಲಿಂಗಬೇಧಕ್ಕೆ ಒಳಪಟ್ಟಳೇ, ಅಥವಾ ಜಾತೀಯತೆಯೇ ಅವಳಿಗೆ ಮುಳುವಾಯಿತೇ? ಈ ಎಲ್ಲಾ ಪ್ರಶ್ನೆಗಳ ಶೋಧನೆಯೇ ಈ ಸಂಶೋಧನೆ.

ಜನಪದ ಕಥೆಗಳಲ್ಲಿ ಕೌಟುಂಬಿಕ ಕಥೆಗಳು ವಂಶ ವೃತ್ತಾಂತ ಅವುಗಳ ವಸ್ತು, ಪಿತೃಪೂಜೆ ಪ್ರಧಾನಸ್ಥಾನ ಪಡೆದಿರುವ ಕಥಾನಕಗಳಾಗಿವೆ. ಇವುಗಳಲ್ಲಿ ಚಾರಿತ್ರಿಕ ಸತ್ಯ ದಟ್ಟವಾಗಿದ್ದರೂ ಐತಿಹ್ಯಗಳು, ಕೌಟುಂಬಿಕ ಸಂಪ್ರದಾಯ ಮತ್ತು ಆಚರಣೆಗಳು ಸಮಾವೇಶಗೊಳ್ಳುತ್ತವೆ. ಪುರಾಣಗಳು ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿರುತ್ತವೆ. ಕಥೆಗಳು ಹಲವಾರು ವಿಷಯಗಳ ಸುತ್ತ ಹೆಣೆದುಕೊಂಡಿರುತ್ತವೆ. ಒಂದು ರೀತಿಯಲ್ಲಿ ಆಯಾ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಥೆಗಳಿಗೆ ಧಾರ್ಮಿಕ ಚೌಕಟ್ಟನ್ನು ನೀಡಲಾಗಿದೆ. ಆದರೆ ಐತಿಹ್ಯದ ಕಥೆಗಳು ಶುದ್ಧ ಲೌಕಿಕ ಸ್ವರೂಪದ ಕಥೆಗಳು ನಿಸರ್ಗದ ಅದ್ಭುತಗಳಿಗೆ ಐತಿಹಾಸಿಕ ಲೇಪನವನ್ನು ಹಚ್ಚಿ ಕಟ್ಟಿದ ಕಥೆಗಳು, ಸುತ್ತಣ ಅದ್ಭುತಗಳನ್ನು ಕುತೂಹಲದ ಕಣ್ಣು ಕಂಡಾಗ ಅದಕ್ಕೊಂದು ಕಥೆಯನ್ನು ಕಟ್ಟುತ್ತದೆ. ಅದು ಜೀವಂತವಾಗಿ ಸಹಸ್ರಾರು ವರ್ಷ ಉಳಿದು ಬರುವಂತೆ ಮೌಖಿಕ ಸಂಪ್ರದಾಯ ಸಹಾಯ ಮಾಡುತ್ತದೆ. ಇಂತಹ ಐತಿಹ್ಯಗಳಲ್ಲಿ ಓಬವ್ವನ ಕಿಂಡಿಯೂ ಒಂದಾಗಿದೆ.

ಇತಿಹಾಸದಲ್ಲಿ ಹುಡುಕಿ ಹೆಕ್ಕುತ್ತಾ ಬಂದರೆ ಕೆಲವಾರು ಕೃತಿಗಳಲ್ಲಿ ಮಾತ್ರ ಓಬವ್ವನ ಪ್ರಸ್ತಾಪ ಕಾಣಸಿಗುತ್ತದೆ. ೧೭ನೇ ಶತಮಾನದಲ್ಲಿ ವೀರ ಮಹಿಳೆ ಓಬವ್ವ, ಪತಿಯ ಒಡೆಯನ ಸಲುವಾಗಿ ಹೋರಾಡಿದ್ದಾಳೆ, ಸ್ವಾಮಿಯ ಸಲುವಾಗಿಯೂ ಮನುಷ್ಯ ತನ್ನ ಪ್ರಾಣವನ್ನು ಕೊಡಬೇಕೆಂಬ ಮಾತು ಒಂದು ಕಾಲಕ್ಕೆ ಈ ನಾಡಿನಲ್ಲಿ ಸಾಮಾನ್ಯರೆಂದು ತೋರುವವರಲ್ಲಿಯೂ ಆಳವಾಗಿ ಬೇರೂರಿಕೊಂಡಿತ್ತು ಎಂಬುದು ಓಬವ್ವನ ಘಟನೆಯಿಂದ ತಿಳಿದು ಬರುತ್ತದೆ. ಅತ್ಯಂತ ಸಾಮಾನ್ಯ ಹೆಣ್ಣೊಬ್ಬಳು ತನ್ನ ದೊರೆಗಾಗಿ ಇಂಥ ತ್ಯಾಗ ಭಾವವನ್ನು ಪ್ರದರ್ಶಿಸಿದ್ದು ಇತಿಹಾಸದಲ್ಲಿ ಮಹತ್ವದ ಸಂಗತಿ. ಇದನ್ನು ಪರಾಮರ್ಶಿಸುತ್ತಾ ಹೊರಟಾಗ ದೊರೆಯಾದವನು ತನ್ನ ಪ್ರಜೆಗಳನ್ನು ಅದರಲ್ಲೂ ಸಾಮಾನ್ಯ ವರ್ಗದವರ ಪ್ರಜೆಗಳನ್ನು ಅದೆಷ್ಟು ಸಮಾನ ಗೌರವ ಪ್ರೀತ್ಯಾದರಗಳಿಂದ ಕಾಣುತ್ತಿದ್ದರು ಎಂಬ ಅಂಶ ಗಮನಾರ್ಹ. ದೊರೆಯ ಬಗ್ಗೆ ಒಬ್ಬ ಸಾಮಾನ್ಯ ಮಹಿಳೆಗೆ ಇಂಥ ಉತ್ಕಟ ಭಕ್ತಿ, ಗೌರವ ಮೂಡಬೇಕಾದರೆ ದೊರೆಗಾಗಿ ಪ್ರಾಣತ್ಯಾಗಕ್ಕೂ ಸಿದ್ದರಾಗುತ್ತಿದ್ದರೆಂದರೆ ಆ ಕಾಲದ ದೊರೆಗಳು ಸಾಮಾನ್ಯ ಕೆಲಸದವರನ್ನು ನಡೆಸಿಕೊಳ್ಳುತ್ತಿದ್ದ ರೀತಿ, ಒದಗಿಸಿದ ಸವಲತ್ತುಗಳು, ತೋರಿದ ಅಭಿಮಾನ, ನೀಡಿದ್ದ ರಕ್ಷಣೆ, ಪೋಷಣೆ, ಪ್ರೋತ್ಸಾಹದ ಪ್ರಭಾವವೂ ಜನ ಸಾಮಾನ್ಯರಲ್ಲಿ ಇದು ತನ್ನ ಕೋಟೆ, ತಾನು ಉಳಿಸಲೇಬೇಕೆಂಬ ಕೆಚ್ಚು ಉಂಟಾಗಲು ದೊರೆಗಳ ಔದಾರ್ಯತೆ ಎದ್ದು ಕಾಣುತ್ತದೆ. ಆಗಿನ ದೊರೆಗಳಿಗೆ ಧನಿಕ ದರಿದ್ರ ಮೇಲು-ಕೀಳೆಂಬ ಬೇಧಭಾವ ಅಷ್ಟಾಗಿ ಇರಲಿಲ್ಲವೆಂಬುದನ್ನು ಮನಗಾಣಬಹುದು. ಇಂಥಹ ನಾಯಕರ ಆಳ್ವಿಕೆಯಲ್ಲಿ ವೀರರಮಣಿ ಓಬವ್ವ ಎಂದೇ ಹೆಸರು ವಾಸಿಯಾಗಿದ್ದ ಓಬವ್ವನನ್ನು ಕುರಿತ ಕೃತಿಗಳು ಕಡಿಮೆಯಾಗಿರುವುದಕ್ಕೆ ಹುಡುಕುವ ಒಂದು ಉದ್ದೇಶ ಈ ಅಧ್ಯಯನದ್ದಾಗಿದೆ.

ಮೊಟ್ಟ ಮೊದಲ ಬಾರಿಗೆ ಇತಿಹಾಸಕಾರರಾದ ಹುಲ್ಲೂರು ಶ್ರೀನಿವಾಸ ಜೋಯಿಸರು ಮೇ ೧೯೩೨ರಲ್ಲಿ ಸರಸ್ವತಿ ಪತ್ರಿಕೆಗೆ ಬರೆದ "ವೀರ ಕನ್ನಡಗಿತ್ತಿ ಓಬವ್ವ" ಎಂಬ ಹೆಸರಿನಲ್ಲಿ ಈ ವೀರನಾರಿಯ ಕತೆಯನ್ನು ಸಾರಿದ್ದಾರೆ. ನಂತರ ೧೯೫೩ರಲ್ಲಿ "ವೀರ ರಮಣಿ ಓಬವ್ವ" ಎಂಬ ಲೇಖನವನ್ನು ಸುಬೋಧ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಹೀಗೆ ಯಾವುದೇ ಒಬ್ಬ ವ್ಯಕ್ತಿಯ ಇತಿಹಾಸವೇ ಇಲ್ಲದಿದ್ದಾಗ ಅವನನ್ನು ಏಕಾಏಕಿಯಾಗಿ ಐತಿಹಾಸಿಕ ವ್ಯಕ್ತಿಯಾಗಿ ಬರೆದು ನಿರ್ಮಿಸಲು ಸಾಧ್ಯವಿಲ್ಲ. ಅದೂ ತಮ್ಮ ಜೀವನವನ್ನೇ ಇತಿಹಾಸಕ್ಕಾಗಿ ಸವೆಸಿದ ಸಾಧನಾ ಜೀವಿಯೊಬ್ಬರು ಬರೆದಿದ್ದು ನಾಡಿನ ಮಹಿಳೆ ಓಬವ್ವನ ಬಗ್ಗೆ. ವೃತ್ತಿಯಿಂದ ವಕೀಲರಾಗಿದ್ದರೂ, ಪ್ರವೃತ್ತಿಯಿಂದ ಇತಿಹಾಸಕಾರರಾಗಿ ಜೋಯಿಸರು ನಾಡಿನ ಇತಿಹಾಸಕ್ಕೆ, ಇತಿಹಾಸ ರಚನೆಗೆ ಸಲ್ಲಿಸಿದ ಸೇವೆ ಶ್ಲಾಘನೀಯ.

ಇವರಿಂದ ತನ್ನ ಜೀವಂತಿಕೆಯನ್ನು ಸಾರಿದ ಓಬವ್ವ ಅಲ್ಲಿಂದ ಮುಂದೆ ಇತಿಹಾಸದಲ್ಲಿ ವಿಮುಖಳಾಗಲಿಲ್ಲ. ಅಲ್ಲಿಂದ ಮುಂದೆ ಲೇಖನಗಳಲ್ಲಿ, ಕೃತಿಗಳಲ್ಲಿ, ಕಾದಂಬರಿಗಳಲ್ಲಿ ಸಾಗುತ್ತಾ ಪುಟ್ಟಣ್ಣ ಕಣಗಾಲರ "ನಾಗರಹಾವು" ಚಲನಚಿತ್ರದಲ್ಲಿ ಅಭಿನಯ ಶಾರದೆ ಜಯಂತಿಯವರ

ಅಭಿನಯದಲ್ಲಿ ನಾಡಿನಾದ್ಯಂತ ಮನೆಮಾತಾದಳು. ಕಣಗಾಲರು ಅನಿರೀಕ್ಷಿತವಾಗಿ ದುರ್ಗಕ್ಕೆ ಭೇಟಿಯಿತ್ತು ಚಲನಚಿತ್ರ ತೆಗೆಯಲು ಆಪೇಕ್ಷಿಸಿದರಂತೆ ಹಾಗೆಯೇ ದುರ್ಗದ ಇತಿಹಾಸದಲ್ಲಿ ವರ್ಣರಂಜಿತ ಕೆಚ್ಚೆದೆಯ ಈ ನಾರಿಯ ರೋಚಕ ಸಾಹಸವನ್ನು ಕೇಳಿ ರೋಮಾಂಚನಗೊಂಡು ಆಕೆಯ ಸಾಹಸವನ್ನು ನಾಡಿಗೆ ತೋರಿಸುವ ಒಂದು ದೃಶ್ಯವನ್ನು ಚಿತ್ರೀಕರಿಸಿದರಂತೆ ಹಾಗಾಗಿ ಓಬವ್ವ ಅಂದಿನಿಂದ ಇಂದಿನವರೆಗೆ ಅಮರಳಾಗಿದ್ದಾಳೆ. ಆದರೂ ಓಬವ್ವನ ಜೀವಂತಿಕೆಯ ಬಗ್ಗೆ, ಆಕೆಯ ಜೀವನ, ಜಾತಿ ಇತ್ಯಾದಿಗಳ ಬಗ್ಗೆ ದ್ವಂದ್ವತೆ, ವಿಮರ್ಶೆಗಳು ಇದ್ದು, ಆಕೆಯ ಸಾವಿನ ಬಗ್ಗೆಯೂ ಸಹ ಈ ಸಾಹಸಗಾಥೆಯ ವೇಳೆಯಲ್ಲಿ ಮರಣ ಹೊಂದಿದಳೆಂದು, ಇಲ್ಲಾ ಕಾಲಾನಂತರದಲ್ಲಿ ಪಶ್ಚಾತ್ತಾಪದ ತಲೆ ಜಜ್ಜಿ ಸಾಯಿಸಿದ ಪಾಪ ಪ್ರಜ್ಞೆಯಿಂದ ನರಳಿನರಳಿ ಕೃಶಳಾಗಿ ಮರಣ ಹೊಂದಿದಳು ಎಂಬುದಾಗಿ ದ್ವಂದ್ವಗಳಿದ್ದು, ಈ ಹಿನ್ನೆಲೆಯಲ್ಲಿ ಓಬವ್ವೆಯ ಘಟನೆಯು ದುರಂತವಾದ ಘಟನೆಯೇ ಎಂಬುದರ ಬಗ್ಗೆ ಸವಿವರ ಪಡೆಯಲು ಈ ಅಧ್ಯಯನ ಕೈಗೆತ್ತಿಕೊಂಡಿದ್ದೇನೆ.

ಶ್ರೀಯುತ ಪ್ರೊ. ವಿಜಯ ಪೂಣಚ್ಚ ತಂಬಂಡ. ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ ಹಂಪಿ. ಅವರ ಮಾರ್ಗದರ್ಶನದಲ್ಲಿ ಶ್ರೀ ಬಸವರಾಜರವರು "ಚಿತ್ರದುರ್ಗಕೋಟೆಯ ಐತಿಹ್ಯಗಳು"ಎಂಬ ಮಹಾಪ್ರಬಂಧವನ್ನು ಮಂಡಿಸಿದ್ದು, ಅದರಲ್ಲಿ ಓಬವ್ವನ ಕಿಂಡಿಯ ಬಗ್ಗೆ ಪ್ರಸ್ತಾಪಿಸಲಾಗಿದೆ. ಅದರಲ್ಲಿ ಗುಡೇಕೋಟೆಯ ಸಂಸ್ಥಾನದಲ್ಲಿ ಪಾಳೆಯಗಾರರ ಬಳಿ ಕಹಳೆಯವನಾಗಿ ಕೆಲಸ ನಿರ್ವಹಿಸುತ್ತಿದ್ದ ಛಲವಾದಿ ಚಿನ್ನಪ್ಪನ ಮಗಳು ಓಬವ್ವ ಎಂದು ಬರೆಯಲಾಗಿದೆ. ಆದಾಗಿ ಎಲ್ಲಾ ನೆಲೆಗಳನ್ನು ಶೋಧಿಸಿ, ಓಬವ್ವನನ್ನು ಕುರಿತು ಸಮಗ್ರವಾದ ಚಿತ್ರಣವನ್ನು ನಿರೂಪಿಸುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ದುರ್ಗವನ್ನು ಕಾಪಾಡುವಲ್ಲಿ ಓಬವ್ವ ಪ್ರದರ್ಶಿಸಿದ ಸ್ವಾಮಿನಿಷ್ಠೆಯನ್ನು, ಇತಿಹಾಸದಿಂದ ಅಷ್ಟಾಗಿ ಪರಿಗಣಿತವಾಗಿರದ ಬಗ್ಗೆ ಮತ್ತು ಅಂದಿನ ಸಮಾಜದಲ್ಲಿನ ಯಾವ ಶೋಷಿತ ಅಂಶ ಓಬವ್ವನ ಇತಿಹಾಸವನ್ನು ದಾಖಲಿಸುವಲ್ಲಿ ನಿರಾಕರಣೆಯನ್ನು ವ್ಯಕ್ತಪಡಿಸಿದೆ, ಹೀಗೆ ವಿಭಿನ್ನ ನೆಲೆಗಳನ್ನು ಸಂಶೋಧಿಸುವುದು ಈ ಮಹಾಪ್ರಬಂಧದ ಮೂಲ ಉದ್ದೇಶವಾಗಿದೆ.

೧.೨. ಅಧ್ಯಯನದ ಸ್ವರೂಪ : "ದುರ್ಗದ ಓಬವ್ವ : ಸಾಂಸ್ಕೃತಿಕ ಕಥನ"– ಎಂಬ ಶೀರ್ಷಿಕೆಯ ಈ ಮಹಾಪ್ರಬಂಧದಲ್ಲಿ ಒಟ್ಟು ಒಂಬತ್ತು ಅಧ್ಯಾಯಗಳಿವೆ. ಓಬವ್ವನ ಜನ್ಮ ವೃತ್ತಾಂತ, ತಂದೆಯ ಹಿನ್ನೆಲೆ ಮತ್ತು ಲಭ್ಯವಿರುವ ಕೃತಿಗಳು ಮತ್ತು ಕ್ಷೇತ್ರ ಕಾರ್ಯವನ್ನಾಧರಿಸಿ ಆಕೆ 'ದೇಶ್‌ಭಾಗ್' ಹೆಣ್ಣು ಮಕ್ಕಳ ಪಡೆಯಲ್ಲಿ ತರಬೇತಿ ಪಡೆದವಳಾಗಿದ್ದಳು. ಎಂಬುದನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನಕ್ಕೆ ಅನುಕೂಲವಾಗುವಂತೆ ಮುಂದೆ ಓಬವ್ವ ಕೋಟೆಯ ಪ್ರವೇಶ, ಹೆಣ್ಣು ಸೈನಿಕೆಯಂತೆ ಆಕೆ ಪೆದ್ದಕ್ಕನಾಗತಿಗೆ ಆಪ್ತ ಸಹಾಯಕಿಯಾಗಿ ಬಂದದ್ದು (ಶ್ರೀ ವೀರಭದ್ರ ನಾಯ್ಕರ ಹೇಳಿಕೆ: ಪಾಳೆಯಗಾರರ ವಂಶಸ್ಥರೆಂದೇ ಅಧಿಕೃತವಾಗಿ ದಾಖಲೆಗಳಿಂದ

ಗುರ್ತಿಸಲ್ಪಟ್ಟವರು) ನಂತರ ಕೋಟೆಗಾಗಿ ಆಕೆ ತನ್ನನ್ನು ಮರೆತು ಹೋರಾಡಿದ ಕೆಚ್ಚನ್ನು ಕೇಂದ್ರವಾಗಿಟ್ಟುಕೊಂಡು ಐತಿಹಾಸಿಕ ಓಬವ್ವೆಯ ಬದುಕಿನ ಚಿತ್ರಣವನ್ನು ಉಪಶೀರ್ಷಿಕೆಗಳಾಗಿ ಮಾಡಿಕೊಳ್ಳಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಸಮಾಜದಲ್ಲಿ ಸಾಂಸ್ಕೃತಿಕತೆ ಮತ್ತು ನಾಗರೀಕತೆಯನ್ನು ಅಳೆಯುವ ಮಾನದಂಡವೇ ಸ್ತ್ರೀಯರ ಸ್ಥಾನಮಾನ . ಭಾರತವು ಮೂಲಭೂತವಾಗಿ ಮಾತೃ ಪ್ರಧಾನ ಸಮಾಜವಾಗಿದ್ದರೂ ಈ ಪರಂಪರೆಯಲ್ಲಿ ಮಹಿಳೆ ಎರಡನೇ ದರ್ಜೆಯಾಗಿ ಈ ಸಮಾಜದಲ್ಲಿದ್ದಾಳೆ, ಮಹಿಳೆ ಅಧೀನ ಸ್ಥಾನದಲ್ಲಿದ್ದಾಳೆ.ಆದರೆ ಪ್ರಸ್ತುತ ಸ್ತ್ರೀ ಪುರುಷನ ನೆರಳು ಎಂಬುದು ಹಿಂದಿನದಾಗಿದ್ದು, ವರ್ತಮಾನದಲ್ಲಿ ಸ್ತ್ರೀಯ ಸ್ಥಾನಮಾನ ಉತ್ತಮವಾಗಿದೆ. ಲಿಂಗ ತಾರತಮ್ಯ ಇಂದು ನಿನ್ನೆಯದಲ್ಲ. ಕಾಲ, ದೇಶ, ಜಾತಿ, ಜನಾಂಗಗಳನ್ನು ಮೆಟ್ಟಿನಿಂತಹ ಪ್ರವೃತ್ತಿಯದು. ಮಹಾಭಾರತದ ಕಾಲದಲ್ಲಿ ಸ್ತ್ರೀಯರಿಗೆ ಗೌರವಪೂರ್ಣ ಮಹತ್ವವಿದ್ದು ಸ್ವಾತಂತ್ರ್ಯವನ್ನು ಹೊಂದಿದವರಾಗಿದ್ದರು. 'ಮನುಸ್ಮೃತಿ'ಯ ಸಾಹಿತ್ಯವು ಸ್ತ್ರೀಗೆ ಸ್ವಾತಂತ್ರ್ಯ ನೀಡಿದ್ದರೂ ನಂತರ ಸ್ವತಂತ್ರಕ್ಕೆ ಅರ್ಹರಲ್ಲ ಎಂದು ತಿಳಿಸಿದೆ. ಕಾಲಾಂತರದಲ್ಲಿ ಸ್ತ್ರೀ ಸಬಲೀಕರಣ ಕಾಲಿಟ್ಟಿತು. ಹೀಗೆ ಭಾರತೀಯ ಇತಿಹಾಸದುದ್ದಕ್ಕೂ ಸ್ತ್ರೀಯರಿಗೆ ಮಹತ್ವದ ಸ್ಥಾನ ಕಾಲಕ್ರಮೇಣ ನೀಡುತ್ತಾ ಬಂದಿದ್ದು, ಸ್ತ್ರೀ ಹೋರಾಟದ ಚಿಂತನೆಗಳು ಕ್ರಮೇಣ ಪರಿಹಾರಗಳ ಶೋಧನೆಯಲ್ಲಿ ತೊಡಗಿ ಕಾರ್ಯ ಪ್ರವೃತ್ತವಾಗಿವೆ. ಹಾಗಾಗಿ ಜಾಗೃತಿ ಉಂಟಾಗಿ ತುಳಿತಕ್ಕೊಳಗಾದ ಸ್ತ್ರೀಯರೇ ಐತಿಹಾಸಿಕ ಪುಟಗಳಲ್ಲಿ ದಾಖಲಾಗಬೇಕು ಎಂಬುದನ್ನು ಈ ಅಧ್ಯಾಯದಲ್ಲಿ ಚಿತ್ರಿಸಿದೆ.

ಅಧ್ಯಾಯ ಮೂರರಲ್ಲಿಅಧ್ಯಯನಕ್ಕೆ ಅನುಕೂಲವಾಗುವಂತೆ ಓಬವ್ವನ ಬಗೆಗಿನ ಮೌಖಿಕ ಚರಿತ್ರೆಯನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಶಿಷ್ಟ ಜಗತ್ತಿನಲ್ಲಿ ನಿರಾಕರಣೆಯಾದವರು ಜನಪದರ ಚಾರಿತ್ರಿಕ ಪ್ರಜ್ಞೆಯಲ್ಲಿ ಉಳಿದುಕೊಂಡು ಬಂದಿರುವುದು, ಶಿಷ್ಟ ಸಾಹಿತ್ಯದ ಮೂಲ ಜನಪದವೇ ಆಗಿದ್ದರೂ, ಮತ್ತೆ ಶಿಷ್ಟದತ್ತ ಮುಖ ಮಾಡಿದಾಗ ಅಲ್ಲಿ ಲಿಖಿತವೇ ಪ್ರಧಾನವಾಗಿ, ಐತಿಹಾಸಿಕತೆಯನ್ನು ಬಿಂಬಿಸದೆ ತಿರಸ್ಕರಿಸಲಾಗಿದೆ. ಆದರೆ ನಮ್ಮ ಜನಪದರು ದೊರೆಯ ಬಗ್ಗೆ ಮೌನವಾಗಿದ್ದರೂ, ತಮ್ಮೊಡನೇ ಇದ್ದ ಜನಸಾಮಾನ್ಯರಾಗಿದ್ದು ಹತ್ತಿರವಾದ ವ್ಯಕ್ತಿಗಳ ಧೈರ್ಯ, ಪರಾಕ್ರಮಗಳನ್ನು ಕೊಂಡಾಡಿರುವುದು ಇಲ್ಲಿದೆ.

ಅಧ್ಯಾಯ ನಾಲ್ಕರಲ್ಲಿ "ಓಬವ್ವನ ಕುರಿತು ಶಿಷ್ಟ ಸಾಹಿತ್ಯ ಮತ್ತು ಬರವಣಿಗೆಗಳು" ಶೀರ್ಷಿಕೆಯಡಿಯಲ್ಲಿ ಓಬವ್ವನ ಬಗೆಗಿನ ಇತಿಹಾಸಕಾರರ ಮೌನ, ಅದಕ್ಕೆ ಕಾರಣಗಳು ನೂರಿರಬಹುದು, ಆದರೆ ಚಿತ್ರದುರ್ಗದಷ್ಟೇ ಸತ್ಯವಾದ ಓಬವ್ವಳ ಚರಿತ್ರೆಗ್ರಾಥೆಯನ್ನು ಆಕೆಯ ಸಾಹಸವನ್ನು

ಸಾರುವಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರಿಂದ, ಎಂ.ಎಸ್.ಪುಟ್ಟಣ್ಣನವರಿಂದ ಇಲ್ಲಿಯವರೆಗಿನ ಪ್ರಕಟವಾದ ಲೇಖನಗಳು, ಕೃತಿಗಳು, ಕಾದಂಬರಿಗಳು, ಸಣ್ಣಕಥೆಗಳು ಅಲ್ಲಿ ವ್ಯಕ್ತವಾಗಿರುವ ಪ್ರತಿಯೊಬ್ಬರ ದೃಷ್ಟಿಕೋನಗಳು, ಆ ದೃಷ್ಟಿಕೋನಗಳಲ್ಲಿ ಬಿಂಬಿತಳಾದ ಓಬವ್ವ ಈ ಚಿತ್ರಣಗಳನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ. ಹಾಗೂ ಶಿಷ್ಟಸಾಹಿತ್ಯ ಹೊರತಾದ ಮೌಖಿಕ ಕಥನಗಳು ಓಬವ್ವನ ಸಾಹಸಗಾಥೆಯನ್ನು ಸಾರುವ ಪ್ರಮುಖ ಧ್ವನಿಗಳಾಗಿವೆ ಎಂಬುದನ್ನು ಬಿಂಬಿಸಿದೆ.

ಅಧ್ಯಾಯ ಐದರಲ್ಲಿ "ಓಬವ್ವನ ಕುರಿತು ಜನಪದ ಸಾಹಿತ್ಯ" ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿ ಐದು ಉಪಶೀರ್ಷಿಕೆಗಳನ್ನು ರಚಿಸಿಕೊಂಡಿದ್ದು,

ಎ. ಓಬವ್ವನ ಬಗೆಗಿನ ಹಾಡುಗಳು, ಇತ್ತೀಚಿನವಾಗಿದ್ದರೂ ಜನಪದರ ಗಣನೆಯಲ್ಲಿ ಓಬವ್ವನಿಗಿರುವ ಸ್ಥಾನವನ್ನು, ಕ್ಷೇತ್ರಕಾರ್ಯದಿಂದ ಆಕೆಯ ಬಗೆಗಿನ ಹಾಡುಗಳನ್ನು ಸಂಗ್ರಹಿಸಲಾಗಿದೆ.

ಬಿ. ಓಬವ್ವನ ಬಗೆಗೆ ಜನಪದರು ಹೇಳುತ್ತಿರುವ ಕಥೆಗಳು, ಐತಿಹ್ಯಗಳ ಬಗ್ಗೆ ಕ್ಷೇತ್ರ ಕಾರ್ಯ ನಡೆಸಿ ಸಂಗ್ರಹಿಸಿ ಬರೆಯಲಾಗಿದೆ. ಹಾಗೆಯೇ ಆಕೆಯ ಬಗ್ಗೆ ಶಿಷ್ಟ ಸಾಹಿತ್ಯದಲ್ಲಿ ಒಂದು ಲಾವಣಿ ದೊರಕಿದ್ದು, ಉಳಿದ ಲಾವಣಿಗಳು ರಚಿತವಾಗಿದ್ದರೂ ಲಭ್ಯವಿಲ್ಲದ ಕಾರಣ ಅವು ರಚಿತವಾಗಿದ್ದವು ಎಂಬುದನ್ನು ತಿಳಿಸುತ್ತಾ ಬರೆಯಲಾಗಿದೆ.

ಸಿ. ಜೊತೆಗೆ ಓಬವ್ವನ ಸಂಬಂಧಿಕರು ಎನ್ನಲಾದವರು ಹೇಳಲಾದ ಜನಪದ ಧಾಟಿಯ ಕಥೆಗಳನ್ನು ಅವರ ಬಾಯಿಂದಲೇ ಕೇಳಿ ಸಂಗ್ರಹಿಸಿ ಬರೆಯಲಾಗಿದೆ. ಜೊತೆಗೆ ಆಕೆಯ ಸಾಹಸಗಾಥೆಯೊಂದಿಗೆ ಆಕೆಯ ಅಂತ್ಯದ ಬಗ್ಗೆ ಇರುವ ಕಥೆಗಳನ್ನು ಸಂಗ್ರಹಿಸಿ ಬರೆದಿದ್ದೇನೆ.

ಅಧ್ಯಾಯ ಆರರಲ್ಲಿ "ಓಬವ್ವನ ಕುರಿತ ಆಚರಣಾಲೋಕ" ಶೀರ್ಷಿಕೆಯ ಅಧ್ಯಾಯದಲ್ಲಿ ನಿರ್ದಿಷ್ಟವಾಗಿ ಓಬವ್ವನ ಹೆಸರಲ್ಲಿ, ಆಕೆ ತಮ್ಮವಳೆಂದು ಭಾವಿಸಿ ಆಕೆಯ ಉತ್ಸವಗಳನ್ನು ನಡೆಸಿಕೊಂಡು ಬರುತ್ತಿರುವ ಜನಾಂಗವನ್ನು ಭೇಟಿಮಾಡಿ ಕ್ಷೇತ್ರಕಾರ್ಯ ನಡೆಸಿದ್ದು, ಅಲ್ಲಿ ಅವರು ನಡೆಸುವ ವಾರ್ಷಿಕ ಉತ್ಸವ, ಜಲಧಿ ಉತ್ಸವ, ಮನೆದೇವತೆಯಾಗಬೇಕೆಂಬ ಆಕೆಯ ಆಪೇಕ್ಷೆಯಂತೆ ತಾವು ಆಕೆಯನ್ನು ಮನೆದೇವತೆಯನ್ನಾಗಿ ಮಾಡಿಕೊಂಡು ಮಾಡುತ್ತಿರುವ ಪೂಜೆಗಳ ಬಗ್ಗೆ ತಿಳಿಸಿದ್ದು, ಅದನ್ನು ಸಂಗ್ರಹಿಸಿ ಬರೆಯಲಾಗಿದೆ. ಆಕೆಗಾಗಿ ಅವರು ನಿರ್ಮಿಸಿಕೊಂಡಿರುವ ಪುಟ್ಟ ದೇವಸ್ಥಾನ ಮತ್ತು ಕಂಚಿನ ಪ್ರತಿಮೆ, ಕಲ್ಲಿನ ಪ್ರತಿಮೆಯ ಅನಾವರಣ ದುರ್ಗದ ಕೋಟೆಯಲ್ಲಿದ್ದ, ಹೈದರ್ ದಾಳಿಯ ನಂತರ ವಿಗ್ರಹ ಹಾಳಾಗಿದ್ದು ಉಳಿದ ಪಾದುಕೆಗಳನ್ನು ತಂದು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿ ಕೊಂಡಿರುವ ಮಾಹಿತಿಯ ಬಗ್ಗೆ ಚರ್ಚಿಸಲಾಗಿದೆ. ಓಬವ್ವನ ಸಾಹಸ ವಾಸ್ತವಿಕತೆಯ ಬಗ್ಗೆಯೂ ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿ ಬರೆಯಲಾಗಿದೆ. ದುರ್ಗದ ಜಿಲ್ಲಾಡಳಿತವು ಪುರ ಪ್ರಮುಖರ ಜೊತೆ ಸೇರಿ ಆಚರಿಸುವ ಉತ್ಸವಗಳ ಬಗ್ಗೆಯೂ ಬರೆಯಲಾಗಿದೆ.

ಅಧ್ಯಾಯ ಏಳರಲ್ಲಿ ಚಾರಿತ್ರಿಕ ಓಬವ್ವನನ್ನು ಕುರಿತು ಹಲವಾರು ವಿದ್ವಾಂಸರನ್ನು ಭೇಟಿ ಮಾಡಿದ್ದು ಅವರ ದೃಷ್ಟಿಯಲ್ಲಿ ಓಬವ್ವ ಮತ್ತು ಆಕೆಯ ವೀರಗಾಥೆಯನ್ನು ಚರ್ಚಿಸಿದ್ದು ಅದರ ಸವಿವರವನ್ನು ಬರೆಯಲಾಗಿದೆ.ಚರಿತ್ರೆಯನ್ನು ರಚಿಸುವಲ್ಲಿ ಸಾಕ್ಷಿಯೇ ಮುಖವಲ್ಲ, ಭಾವನಿಷ್ಠತೆಯು ಚರಿತ್ರೆಯಾಗುತ್ತದೆ. ಇದಕ್ಕೆ ನಿದರ್ಶನ ದುರ್ಗದ ಓಬವ್ವ, ಜನಪದರು ಸಾಂಸ್ಕೃತಿಕ ವೀರರನ್ನು ಉಳಿಸಿ ಬೆಳೆಸಿಕೊಂಡು ಬರುತ್ತಾರೆ, ಬರುತ್ತಿದಾರೆ. ಹಲವಾರು ವಿದ್ವಾಂಸರು ಮೌಖಿಕ ಪರಂಪರೆಯ ಚರಿತ್ರೆಗಳನ್ನು ಸಂಗ್ರಹಿಸಿ ಚರಿತ್ರೆಯ ದಾಖಲೆಯನ್ನೇ ಮಾಡಿದ್ದಾರೆ. ಇಂಥಹ ಮೌಖಿಕತೆ ಚಾರಿತ್ರಿಕತೆಯಾಗಿರುವುದಕ್ಕೆ ನಿದರ್ಶನ ದುರ್ಗದ ಓಬವ್ವ. ಈ ಹಿನ್ನೆಲೆಯಲ್ಲಿ ಐತಿಹಾಸಿಕ ದುರ್ಗದ ಜಿಲ್ಲೆಗೆ ಭೇಟಿನೀಡಿ ಜಿಲ್ಲೆಗೆ ಸಂಬಂಧಿಸಿದ ಇತಿಹಾಸಕಾರರು, ವಿದ್ವಾಂಸರನ್ನು ಸಂದರ್ಶಿಸಿ ಅವರ ದೃಷ್ಟಿಕೋನವನ್ನು ಓಬವ್ವನ ಬಗೆಗೆ ಅವರಿಗಿರುವ ಮನಃಸ್ಥಿತಿಯನ್ನು ಈ ಅಧ್ಯಾಯದಲ್ಲಿ ಸಂಗ್ರಹಿಸಿ, ಸಂದರ್ಶಿಸಿ ಬರೆಯಲಾಗಿದೆ.

ಅಧ್ಯಾಯ ಎಂಟರಲ್ಲಿ ಓಬವ್ವನ ನಾಡ ಪ್ರೇಮದ ಮತ್ತು ಆಕೆಯ ಜನನ, ತಂದೆ, ಜಾತಿ ಬಗೆಗಿನ ವಿಚಾರಗಳನ್ನು ಚರ್ಚಿಸಲಾಗಿದೆ. ಲಭ್ಯವಾದ ಶಿಷ್ಟಸಾಹಿತ್ಯದಲ್ಲಿ ಉಲ್ಲೇಖವಾದ ಜಾತಿ, ನಂತರ ಚಿತ್ರದುರ್ಗ ಗೆಜೆಟಿಯರ್‌ನಲ್ಲಿದ್ದ ಬೇಡ ಮಹಿಳೆ, ಎಂಬುದನ್ನು ನಂತರ ಆಕೆ ಪರಿಶಿಷ್ಟ ಜಾತಿಗೆ ಸೇರಿದ ಚಲುವಾದಿ ಪಂಗಡದ ಗುಡೇಕೋಟೆಯ ಚಿನ್ನಪ್ಪನ ಮಗಳು ಓಬವ್ವೆಯೆಂದು ವಿದ್ವಾಂಸರು ಚರ್ಚಿಸಿ ಪ್ರಭುತ್ವದ ಗಮನಕ್ಕೆ ತರುವಲ್ಲಿ ಚರ್ಚೆ ಪ್ರಸ್ತಾಪಗಳನ್ನು ಮಾಡಿದ್ದಾರೆ. ಇವುಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಿದೆ. ಇಡೀ ನಾಡಿನಲ್ಲೇ ಮನೆ ಮಾತಾಗಿರುವ ಓಬವ್ವನ ಚರಿತ್ರೆ, ದಾಖಲೆಗಳು ಸಿಕ್ಕಲಿಲ್ಲ ಎಂದಾಗ ಅದು ಮರೆಯಾದ ಚರಿತ್ರೆ ಎಂಬಂತೆ ಉದ್ಭವವಾದ ಧ್ವನಿಗಳ ಬಗ್ಗೆ ಚರ್ಚಿಸಿ ಬರೆಯಲಾಗಿದೆ. ಆದರೆ ಮೂಕ ಸಾಕ್ಷಿಯಾಗಿ ನಿಂತ ಓಬವ್ವನ ಕಿಂಡಿಯ ಬಗೆ ಕೈಫಿಯತ್‌ನಲ್ಲಿ ಪ್ರಸ್ತಾಪ ಇರುವುದನ್ನು ಮಾತ್ರ ಅಲ್ಲಗೆಳೆಯಲಾಗದು ಎಂಬುದನ್ನು ಕುರಿತು ಬರೆಯಲಾಗಿದೆ.

ಅಧ್ಯಾಯ ಒಂಬತ್ತರಲ್ಲಿ ಮೇಲಿನ ಇದುವರೆವಿಗೂ ಎಲ್ಲಾ ಅಧ್ಯಾಯಗಳ ಅಧ್ಯಯನದಿಂದ ತಿಳಿದು ಬಂದಿರುವ ಮಾಹಿತಿಯನ್ನು ವಿವರಿಸಲಾಗಿದೆ. ಅಧ್ಯಯನದ ಉದ್ದೇಶ ನೆರವೇರುವಲ್ಲಿ ದೊರೆತಿರುವ ಮೂಲಗಳನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಿ ಒಟ್ಟು ಪ್ರಬಂಧದ ಮೂಲ ಉದ್ದೇಶ, ಸಫಲತೆಯ ಸಂಕ್ಷಿಪ್ತ ವಿಶ್ಲೇಷಣೆಯನ್ನು ನೀಡಲಾಗಿದೆ.

ಈ ಮಹಾಪ್ರಬಂಧದ ಅಂತ್ಯದಲ್ಲಿ ಪ್ರಬಂಧಕ್ಕೆ ಪೂರಕವಾಗಿ ಬಳಸಿರುವ ಕ್ಷೇತ್ರಕಾರ್ಯದ ಟಿಪ್ಪಣಿಗಳು, ಪ್ರಕಟಣೆಗಳು, ಡೈರಿಗಳು, ಛಾಯಾಚಿತ್ರಗಳು, ವಂಶವೃಕ್ಷ, ಗ್ರಂಥಋಣ, ವಕ್ತೃಗಳ ವಿವರ ಮುಂತಾದವುಗಳ ವಿವರವನ್ನು ತಿಳಿಸಲಾಗಿದೆ ಒಟ್ಟಾರೆ ಇದು ಅಧ್ಯಯನದ ಸ್ಥೂಲ 'ಸ್ವರೂಪ'ದಾಗಿದೆ.

೧.೩. ಅಧ್ಯಯನದ ವ್ಯಾಪ್ತಿ ಮತ್ತು ವಿಧಾನ. :

"ದುರ್ಗದ ಓಬವ್ವ-ಸಾಂಸ್ಕೃತಿಕ ಕಥನ" ಎಂಬ ಶೀರ್ಷಿಕೆಯ ಈ ಅಧ್ಯಯನದಲ್ಲಿ ಓಬವ್ವನನ್ನು ಕುರಿತು ರಚಿಸಲಾದ ಕೃತಿಗಳನ್ನು ಕುರಿತು ಮೊದಲು ಅಧ್ಯಯನ ಮಾಡಲಾಗಿದೆ. ಶಿಷ್ಟ ಸಾಹಿತ್ಯದಲ್ಲಿ ಕಳೆದು ಹೋದ ಓಬವ್ವನನ್ನು ಜನಪದ ಸಾಹಿತ್ಯದಲ್ಲಿ ಹುಡುಕಿ ಹೆಕ್ಕಿ ತೆಗೆದಿದ್ದೇ ಇಲ್ಲಿ ಹೆಚ್ಚು. ಜನಪದ ಸಾಹಿತ್ಯ, ಮೌಖಿಕ ಕಥನಗಳೇ ಇಲ್ಲಿ ಹೆಚ್ಚು ಮಾಹಿತಿಯನ್ನು, ಸಾಮಗ್ರಿಯನ್ನು ಒದಗಿಸಿರುವುದರಿಂದ ಬಹುತೇಕ ಇದನ್ನೇ ಮುಖ್ಯವಾಗಿಟ್ಟುಕೊಂಡು ಅಧ್ಯಯನ ನಡೆಸಲಾಗಿದೆ. ಓಬವ್ವನನ್ನು ಕೇಂದ್ರವಾಗಿಟ್ಟುಕೊಂಡು ನಡೆಸಿದ ಕ್ಷೇತ್ರಕಾರ್ಯದಲ್ಲಿ ಜನಪದರಿಂದ ಬಂದ ಅಭೂತಪೂರ್ವ ಪ್ರತಿಕ್ರಿಯೆ ಇಲ್ಲಿ ಮೂಲ ವಸ್ತುವಾಗಿದೆ. ಜನಪದರ ಮಾಹಿತಿಗಳನ್ನು ಒಗ್ಗೂಡಿಸಿ ವಿವರಣಾತ್ಮಕವಾಗಿ ಶೋಧಿಸುವ ಪ್ರಯತ್ನ ಇಲ್ಲಿದೆ. ಓಬವ್ವನ ಚಾರಿತ್ರಿಕತೆಯನ್ನು ಸಮರ್ಥಿಸಲು ಮುಖ್ಯವಾಗಿ ಇರುವ ಒನಕೆ ಕಿಂಡಿ, ಓಬವ್ವಳ ಕಿಂಡಿಗಳ ನಿರ್ದಿಷ್ಟ ಎಡೆಗಳ ಬಗ್ಗೆ ಗುರುತಿಸಲಾಗಿದೆ. ಈಕೆಯ ಸಾಹಸಗಾಥೆಯು ನಡೆದ ಕಾಲಮಾನವನ್ನು ಕೈಫಿಯತ್ ಒಂದು ಕಾಲಮಾನ. ಹೇಳಿದರೆ ಉಳಿದ ಗ್ರಂಥಗಳಲ್ಲಿ ಸ್ವಲ್ಪ ಬೇರೆಯಾಗಿಯೇ ಇದೆ. ಹಾಗಾಗಿ ನಿಗದಿಯಾದ ಕಾಲಮಾನವನ್ನು ಕುರಿತು ಚರ್ಚಿಸಲಾಗಿದೆ. ನಾಯಕ ಅರಸರ ವಂಶಸ್ಥರು ಒನಕೆ ಓಬವ್ವ ವಂಶಸ್ಥರಿಗೆ ಕೊಟ್ಟಿರುವ ನಿರೂಪ ಅಧಿಕಾರ ಹಾಗೂ ದೊರೆತ ಮಾಹಿತಿಗಳನ್ನು ಸಂಶೋಧಿಸಿ, ಜನಪದರು ನೀಡಿರುವ ಮೌಖಿಕ ನಿರೂಪಣೆಗಳನ್ನು ಆಧರಿಸಿ ಈ ಅಧ್ಯಯನ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.

ಜನಪದರ ಪ್ರಮುಖ ಲಕ್ಷಣವಾದ ಮೌಖಿಕ ಪರಂಪರೆಯನ್ನು ಅನುಲಕ್ಷಿಸಿ ಶಿಷ್ಟಸಾಹಿತ್ಯದಲ್ಲಿ ಒಮ್ಮೆ ಕಳೆದು ಹೋದ ಸ್ತ್ರೀ ಬಗ್ಗೆ, ಆಕೆಗಿದ್ದ ಗೃಹಬಂಧನ, ಅಕ್ಷರತೆಯ ಕೊರತೆ, ಕಠೋರ ನಿಬಂಧನೆಗಳು ಆಕೆಯನ್ನು ಶಿಷ್ಟಸಾಹಿತ್ಯದಿಂದ ದೂರವಿಟ್ಟಿರಬಹುದಾದ ಮಹತ್ತರ ವಿವರಣೆಗಳನ್ನು, ಸಂಗ್ರಹಿಸುವುದರ ಜೊತೆಯಲ್ಲಿ, ಅಂದಿನಿಂದ ಇಂದಿನವರೆಗೂ ಬೆಳೆದು ಬಂದ ಸಾಹಿತ್ಯ ಬೆಳವಣಿಗೆ, ಆಳಿ ಹೋದ ನಾಯಕರ ಕಾಲಘಟ್ಟ, ಅದರಲ್ಲಿ ಮಿಂಚಿ ಹೋದ ಸಾಮಾನ್ಯರ ಚರಿತ್ರೆಗಳನ್ನು ಓದಿ, ಸಾಹಿತ್ಯದ ತೆಕ್ಕೆಗೆ ಬಾರದೆ ಮರೆಯಾದ ವೀರವನಿತೆ ಓಬವ್ವೆಯಂಥವರ ಬಗೆಗಿನ ಜನಪದರ ಮನದಾಳದ ಸಾಹಿತ್ಯದೆಡೆಗೆ ಅಧ್ಯಯನವನ್ನು ವಿಸ್ತರಿಸಲಾಗಿದೆ. ಶಿಷ್ಟಸಾಹಿತ್ಯದಲ್ಲಿ ವಿದ್ವಾಂಸರ ಓಬವ್ವನ ಬಗೆಗಿನ ಹೇಳಿಕೆಗಳನ್ನು ಉಲ್ಲೇಖಗಳನ್ನು ಅಧ್ಯಯನ ಮಾಡಿ, ಅಲ್ಲಿನ ಸತ್ಯಾಂಶಗಳನ್ನು ಒಂದು ಕೃತಿಯಿಂದ ಇನ್ನೊಂದು ಕೃತಿಗೆ ಹರಿದು ಬಂದಿರುವ ವ್ಯತ್ಯಾಸಗಳನ್ನು ಗಮನಿಸುತ್ತಾ, ಸಂಪೂರ್ಣವಾದ ಮಾಹಿತಿಯನ್ನು ಅಭ್ಯಸಿಸುವುದು, ಅಧ್ಯಯನದ ವ್ಯಾಪ್ತಿಯಲ್ಲಿದೆ. ಕ್ಷೇತ್ರಕಾರ್ಯದಲ್ಲಿ ಆಕೆಯ ವಂಶಜರು ತಾವೆಂದು ಹೇಳಿಕೊಂಡಿರುವವರು ನೀಡಲಾದ ಓಬವ್ವನ ವಂಶವೃಕ್ಷವನ್ನು ಪರಿಶೀಲಿಸಿ, ಓಬವ್ವನ ತಂದೆ-ತಾಯಿ, ನಂತರ ಆಕೆ ವರಿಸಿದ ಮನೆಯ ವಂಶದ ವಿವರ, ಗಂಡ, ಗಂಡನ ಅಣ್ಣ ತಮ್ಮಂದಿರು(ಪಿತೃಪ್ರಧಾನ ಸಮಾಜವಾದ್ದರಿಂದ), ಭಾವಂದಿರು,

ಅವರ ಮಕ್ಕಳು ಹೀಗೆ ಸಾಗುತ್ತಾ ಬಂದು ಈಗ ಹಾಲಿ ಚಿತ್ರದುರ್ಗದಲ್ಲಿ ನೆಲೆಸಿರುವವರ ವಿವರವನ್ನು ದಾಖಲಿಸುವತ್ತ ಅಧ್ಯಯನ ವಿಸ್ತಾರಗೊಂಡಿದೆ.

ಇತಿಹಾಸದಲ್ಲಿ ಉಪೇಕ್ಷೆಗೊಳಗಾದವರು ಜನಪದರ ಜೀವನದಲ್ಲಿ ಮಹತ್ವದ ಪಾತ್ರ ಪಡೆಯುತ್ತಾರೆ ಎನ್ನುವಲ್ಲಿ ಮೆಚ್ಚಿನ ನಾಯಕಿಯಾಗಿದ್ದಾಳೆ ಓಬವ್ವ. ಹೇರಳವಾಗಿ ದೊರೆತ ಜನಪದ ಸಾಹಿತ್ಯವನ್ನು ಎಲ್ಲಾ ಕ್ರೋಢೀಕರಿಸಿ ಅಧ್ಯಯನಕ್ಕೆ ತೊಡಗಿಸಲಾಗಿದೆ. ನಿರ್ಲಕ್ಷಿತ ಓಬವ್ವನ ಸಾಹಸಗಾಥೆಯ ನೆಲೆಯನ್ನು ಸವಿವರವಾಗಿ ದಾಖಲಿಸುತ್ತಾ, ಆಕೆಗೆ ಸಿಗಬೇಕಾದ 'ಐತಿಹಾಸಿಕ ನ್ಯಾಯ'ದ ಒತ್ತಾಸೆಯನ್ನು ಶೋಧಿಸಿತ್ತಾ, ಈ ಅಧ್ಯಯನದ ಮೂಲಕ ಇತಿಹಾಸದಲ್ಲಿ ಶೋಷಣೆಗೊಳಗಾಗಿ, ದಾಖಲಾದ ಎಷ್ಟೋ ಐತಿಹಾಸಿಕ ವ್ಯಕ್ತಿಚಿತ್ರಣಗಳಿಗೆ ನ್ಯಾಯ ಸಿಗಲಿ ಎಂಬ ಆಶಯದಲ್ಲಿ ಈ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಹೀಗೆ ಅಧ್ಯಯನವು ಕರ್ನಾಟಕ ಚಾರಿತ್ರಿಕ ಕಥಾಮಂಜರಿಯಲ್ಲಿ ಚಿತ್ರದುರ್ಗದ ಓಬವ್ವೆಯ ಘಟನೆಯು ಚಿತ್ರದುರ್ಗದ ಚರಿತ್ರೆಯಿಂದ ಬೇರ್ಪಡಿಸಲಾಗದಷ್ಟು ಗಟ್ಟಿಯಾಗಿ ಬೆಸೆದುಕೊಂಡಿದ್ದು, ಸಮಾಜಮುಖಿ ಚಿಂತನೆಗಳ ವ್ಯಾಪಕತೆಯಲ್ಲಿ ಈಕೆಗೆ ಒದಗಿದ ದುರಂತವನ್ನು ಪರಿಶೋಧಿಸಿ ಜಾನಪದರ ಚಿಂತನೆಗಳ, ಮೌಲ್ಯಗಳ ಹಾಗೂ ಶಿಷ್ಟ ಸಾಹಿತ್ಯದ ಭಿನ್ನ ಮೌಲ್ಯಗಳ ಹಿನ್ನೆಯಲ್ಲಿ ವಿಮರ್ಶಾತ್ಮಕವೂ ಮತ್ತು ಸಂಶೋಧನಾತ್ಮಕವೂ ಆದ ಅಧ್ಯಯನವಾಗಿದೆ. ಆದ್ದರಿಂದ ಕಾಲಘಟ್ಟದಲ್ಲಿ ಮಿಂಚಿ ಮರೆಯಾದ ಒನಕೆ ಓಬವ್ವೆಯ ಇತಿಹಾಸವನ್ನು "ದುರ್ಗದ ಓಬವ್ವ–ಸಾಂಸ್ಕೃತಿಕ ಸಂಕಥನ" ಎಂಬ ಈ ಮಹಾಪ್ರಬಂಧದಲ್ಲಿ ಸವಿವರವಾಗಿ ವಿಶ್ಲೇಷಿಸಿ ಕಟ್ಟಿಕೊಡುವ ಪ್ರಯತ್ನವಾಗಿದೆ.

ಅಧ್ಯಾಯ : ೨

ಭಾರತೀಯ ಸಮಾಜ ಮತ್ತು ಸ್ತ್ರೀ

೨.೧ ಋಗ್ವೇದ

೨.೨. ಅಥರ್ವಣ ವೇದ

೨.೩. ಬ್ರಾಹ್ಮಣಕಗಳು ಮತ್ತು ಉಪನಿಷತ್ತುಗಳು

೨.೪. ಸ್ಮೃತಿಗಳು

೨.೫. ಪುರಾಣಗಳು

೨.೬. ಬೌದ್ಧ ಮತ್ತು ಜೈನ ಯುಗ

೨.೭. ಮಧ್ಯಕಾಲೀನ ಯುಗ

ಅಧ್ಯಾಯ : ಎರಡು

ಭಾರತೀಯ ಸಮಾಜ ಮತ್ತು ಸ್ತ್ರೀ

ಭಾರತೀಯ ಸಂಸ್ಕೃತಿಯಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಶಕ್ತಿದೇವತೆಯ ಆರಾಧನೆ ನಡೆದುಬಂದಿದೆ. ಈ ಸೃಷ್ಟಿಯ ಮೂಲದಲ್ಲಿ ಪ್ರಕೃತಿ ಮತ್ತು ಪುರುಷ ಎಂಬ ಎರಡು ಶಕ್ತಿಗಳಿವೆ. ಆ ಶಕ್ತಿಗಳಲ್ಲಿ ಪುರುಷನಿಗಿಂತ ಪ್ರಕೃತಿಯ ಪಾತ್ರವೇ ದೊಡ್ಡದೆಂದು ಭಾರತೀಯ ಚಿಂತನಧಾರೆ ಸ್ಪಷ್ಟಪಡಿಸುತ್ತದೆ. ಆ ಪ್ರಕೃತಿಯೇ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಗಳೆಂದು ಅವಳೇ ಆದಿಶಕ್ತಿಯೆಂದು ಹೇಳಲಾಗಿದೆ. ಆ ಆದಿಶಕ್ತಿಯೇ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ತಾಯಿ ಎಂದು ಶಾಕ್ತ ಸಂಪ್ರದಾಯವು ಹೇಳುತ್ತದೆ. ಇಂದು ಬೇರೆಬೇರೆ ದೇವರುಗಳ ಪೂಜೆ ನಡೆಯುತ್ತಿದ್ದರೂ ಅವುಗಳಲ್ಲಿ ಶಕ್ತಿದೇವತೆಯ ಉಪಾಸನೆಯೇ ಅತ್ಯಂತ ಪ್ರಮುಖವಾದುದಾಗಿದೆ. ಗ್ರಾಮದೇವತೆಗಳೆಂದು ಹೇಳುವ ಎಲ್ಲ ಆರಾಧ್ಯಮೂರ್ತಿಗಳು ಸ್ತ್ರೀಶಕ್ತಿಯ ವಿವಿಧ ರೂಪಗಳೆಂಬುದನ್ನು ನಾವು ಮನಗಾಣಬಹುದಾಗಿದೆ. ಲೋಕವ್ಯವಹಾರದಲ್ಲಿಯೂ ಮನುಷ್ಯನಿಗೆ ತಂದೆಗಿಂತ ತಾಯಿ ಹೆಚ್ಚು ಹತ್ತಿರದವಳಾಗುತ್ತಾಳೆ. ಅವನ ಬೇಕು ಬೇಡಗಳನ್ನು ಬೇಸರವಿಲ್ಲದೆ ಕೇಳಿಸಿಕೊಳ್ಳುತ್ತಾಳೆ. ಅವನ ಯೋಗಕ್ಷೇಮಕ್ಕೆ ತನ್ನ ಕೈಲಾದುದನ್ನೆಲ್ಲ ಮಾಡುತ್ತಾಳೆ.

ಪಂಚಮಹಾಭೂತಗಳಿಂದ ಈ ಸೃಷ್ಟಿಯ ರಚನೆಯಾಗಿದೆ ಎಂಬುದು ವಿದಿತವಾದ ವಿಚಾರ. ಆಕಾಶ, ವಾಯು, ಅಗ್ನಿ, ಜಲ ಮತ್ತು ಭೂಮಿ ಎಂಬೀ ಪಂಚಮಹಾಭೂತಗಳು ಒಂದರಿಂದ ಒಂದಕ್ಕೆ ದಾಟುತ್ತ, ಸ್ಥೂಲವಾಗುತ್ತ ಹೋಗುತ್ತವೆ. ಭೂಮಿಯಾದರೋ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬೀ ಪಂಚಗುಣಗಳಿಂದ ಪರಿಶೋಭಿತವಾಗಿ ಸಕಲ ಜೀವರಾಶಿಗಳಿಗೆ ಆಧಾರಭೂತವಾಗಿದೆ. ನಮ್ಮೆಲ್ಲರ ಬದುಕು ಸಂಪನ್ನವಾಗಿರುವುದು ಈ ಭೂಮಿಯ ಆಶ್ರಯದಿಂದಲೆ. ಆದ್ದರಿಂದಲೇ ಭೂಮಿಯನ್ನು ಶಕ್ತಿದೇವತೆಯ ರೂಪದಲ್ಲಿ ಭೂಮಾತೆ ಎಂದು ಕಲ್ಪಿಸಲಾಗಿದೆ. ನಮ್ಮ ಜನಪದ ಪರಂಪರೆಯಲ್ಲಿಯೂ ಭೂಮಾತೆಗೆ ವಿಶೇಷ ಪ್ರಾಶಸ್ತ್ಯವಿದೆ.

ಏಳುತಾಲೇ ಎದ್ದು, ಯಾರ್‍ಯಾರ ನೆನೆಯಾಲೆ
ಎಳ್ಳು ಜೀರಿಗೆ ಬೆಳೆಯೋಳೇ ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು
ಎಲ್ಲಕ್ಕೂ ನಿನ್ನ ಮೊದಲಲ್ಲೆ ನಾ ಬಲಗೊಂಬೆ
ಎಳ್ಳುರಾಜನ್ನ ಬೆಳೆವಾಕೀ ಭೂತಾಯಿ
ಬಲ್ಲಿದಳ ಮೊದಲ ಬಲಗೊಂಬೆ

ಎಂಬ ಜನಪದ ತ್ರಿಪದಿಗಳು ಆ ಪವಿತ್ರ ಭಾವನೆಯ ದ್ಯೋತಕವಾಗಿವೆ. "ಒಂದು ಸಮಾಜದಲ್ಲಿ ಸ್ತ್ರೀಯರಿಗೆ ನೀಡಲಾಗಿರುವ ಸ್ಥಾನಮಾನಗಳು ಆ ಸಮಾಜದ ಸಂಸ್ಕೃತಿಯ ಹಿರಿಮೆಯನ್ನು, ನಾಗರಿಕತೆಯ ಗರಿಮೆಯನ್ನು ಮತ್ತು ಅದರ ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ಆಧ್ಯಾತ್ಮಿಕ ಮಹಿಮೆಯನ್ನು ಎತ್ತಿತ್ತೋರುವ ನಂಬಲರ್ಹವಾದ ಸೂಚಿಯಾಗಿರುತ್ತವೆ. ಒಂದು ದೇಶದ ಸಂಸ್ಕೃತಿಯ ಸತ್ತ್ವ, ನಾಗರಿಕತೆಯ ನವಿರು ಮತ್ತು ಅದರ ಪ್ರಜೆಗಳ ಸರ್ವತೋಮುಖ ಪ್ರಗತಿಯು ಆ ನಾಡಿನಲ್ಲಿ ಮಹಿಳೆಯರಿಗೆ ತೋರಿರುವ ಗೌರವಾದರ, ಅವರನ್ನು ಪುರುಷರಿಗೆ ಸರಿಸಮಾನವಾಗಿ ಕಂಡುಕೊಟ್ಟಿರುವ ಮರ್ಯಾದೆ ಮತ್ತು ಅವರಿಗೆ ಒದಗಿಸಿಕೊಟ್ಟಿರುವ ಅವರ ಸರ್ವತೋಮುಖ ವಿಕಾಸಕ್ಕೆ ಬೇಕಾದ ಸದಾವಕಾಶಗಳನ್ನು ಅವಲಂಬಿಸಿರುತ್ತವೆ ಮತ್ತು ಸ್ತ್ರೀಯರು ಸಂಸ್ಕೃತಿ–ನಾಗರಿಕತೆಯ ಸಂರಕ್ಷಕರೂ, ಪೋಷಕರೂ, ಪ್ರವಾಚಕರೂ ಹಾಗೂ ಪ್ರಚಾರಕರೂ ಆಗಿದ್ದಾರೆ ಎಂಬ ಹೇಳಿಕೆಗಳು ಕಾಲದ ಆವಾರಗಳಲ್ಲಿ ಪ್ರತಿಧ್ವನಿಸುತ್ತವೆ".[೧] ವೇದಗಳ ಕಾಲದಿಂದಲೂ ಭರತಖಂಡದಲ್ಲಿ ಸ್ತ್ರೀಯರಿಗೆ ಗೌರವಪೂರ್ಣವಾದ ಸ್ಥಾನಸಂದಾಯವಾಗುತ್ತಲೇ ಬಂದಿದೆ. ಕ್ರಿ.ಪೂ. ೨೫೦೦ ರಿಂದ ಹಿಡಿದು ಕ್ರಿ.ಪೂ. ೧೦೦೦ ದವರೆಗಿನ ಕಾಲವನ್ನು ವೇದಗಳ ಮತ್ತು ಉತ್ತರಕಾಲಿಕ ಸಂಹಿತೆ ಮತ್ತು ಬ್ರಾಹ್ಮಣಗಳ ಕಾಲ ಎಂದು ಕರೆಯಲಾಗಿದೆ. ಆ ಕಾಲದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಸ್ವಾತಂತ್ರ್ಯವಿತ್ತು.

ಅಥರ್ವವೇದದ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನಗಳಲ್ಲಿ ಕೊಂಚ ಏರುಪೇರಾದಂತೆ ಕಂಡರೂ ಅದೇನೂ ಅವರ ಸ್ವಾತಂತ್ರ್ಯವನ್ನು ಅಪಹರಿಸಿತೆಂದು ಹೇಳಲಾಗುವುದಿಲ್ಲ. ಸ್ವರ್ಗಾದಿಲೋಕಗಳನ್ನು ಪಡೆಯಲು ಮೃತವ್ಯಕ್ತಿಗೆ ಪುತ್ರನಿದ್ದೇ ಉತ್ತರಕ್ರಿಯಾದಿಗಳನ್ನು ನಡೆಸಬೇಕು ಎಂಬ ಮಾತಿಗೆ ಆಗ ಹೆಚ್ಚಿನ ಪ್ರಾಶಸ್ತ್ಯ ಬಂದಿತು. ಅದರ ಫಲವಾಗಿ ಒಬ್ಬ ಮಡದಿಯಲ್ಲಿ ಪುತ್ರ ಸಂತಾನವಾಗದಿದ್ದರೆ ಇನ್ನೊಬ್ಬಳನ್ನು ವಿವಾಹವಾಗುವ ಪದ್ಧತಿ ಜಾರಿಗೆ ಬಂದು ಬಹುಪತ್ನಿತ್ವಕ್ಕೆ ಎಡೆಮಾಡಿಕೊಟ್ಟಿತು. ಉಪನಿಷತ್ತು ಕಾಲದಲ್ಲಿ ಸ್ತ್ರೀಯರ ಸ್ಥಾನಮಾನಗಳು ಗರಿಗೆದರಿ ವಿಜೃಂಭಿಸಿದಂತೆ ತೋರುತ್ತದೆ. ಮಡದಿಯಿಲ್ಲದ ಪುರುಷನ ವ್ಯಕ್ತಿತ್ವ ಅಪೂರ್ಣವೆಂಬ ಭಾವನೆ ಆಗ ಪ್ರಚಾರದಲ್ಲಿತ್ತು. ಪುರುಷನ ಸುಖಕ್ಕಾಗಿ ಮಾತ್ರವೇ ಹೆಣ್ಣು ಇರುವುದು ಎಂಬ ಭಾವನೆಗೆ ಆಗ ಮಾನ್ಯತೆ ಇರಲಿಲ್ಲ. ಯಜ್ಞ ಯಾಗಾದಿಗಳಲ್ಲಾಗಲಿ, ವೇದಾಧ್ಯಯನದಲ್ಲಾಗಲಿ ಸ್ತ್ರೀಯರಿಗೂ ಪ್ರಮುಖವಾದ ಪಾತ್ರವಿತ್ತು. ಬೌದ್ಧಿಕ

ಚಿಂತನೆ ಮತ್ತು ತರ್ಕಗಳಲ್ಲಿ ಸ್ತ್ರೀಯರು ಪುರುಷರಿಗೆ ಸರಿದೊರೆಯೆಂಬಂತೆ ನಿಲ್ಲುತ್ತಿದ್ದರು. ಈ ಸನ್ನಿವೇಶವನ್ನೆಲ್ಲ ವಿವರವಾಗಿ ಸಮೀಕ್ಷಿಸಿರುವ ಶಕುಂತಲಾ ಶಾಸ್ತ್ರೀರಾವ್ ಅವರು ಉಪನಿಷತ್ತುಗಳ ಯುಗದಲ್ಲಿ ಸ್ತ್ರೀಯ ಸ್ಥಾನಮಾನಗಳು ತೃಪ್ತಿಕರವಾಗಿದ್ದುವೆಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಬೌದ್ಧ ಧರ್ಮವೂ ಕೂಡ ಸ್ತ್ರೀಯರನ್ನು ಕಡೆಗಣಿಸದೆ ತನ್ನ ಸಂಘದಲ್ಲಿ ಅವರಿಗೆ ಉತ್ತಮವಾದ ಸ್ಥಾನವನ್ನು ನೀಡಿತು.

೧೧ ಮತ್ತು ೧೨ನೇ ಶತಮಾನದಲ್ಲಿ ಭರತಖಂಡದ ಮೇಲೆ ಮುಸಲ್ಮಾನರ ದಾಳಿಯಾಯಿತು. ತನಗಿಂತ ಬೇರೆಯಾದ ಧರ್ಮದ ಜೊತೆ ಸಂಘರ್ಷವಾದಾಗ, ಸಮಾಜದ ಮುಖ್ಯಸ್ಥರು ಅವರ ಹಿತಾಸಕ್ತಿಯನ್ನುಳಿಸಿಕೊಳ್ಳಲು ಅದರಲ್ಲಿಯೂ ವಿಶೇಷವಾಗಿ ಸ್ತ್ರೀಯ ಸ್ಥಿತಿಯನ್ನು ಕುರಿತು ಕಾನೂನು ರಚಿಸಿದರು. ಅವರ ಮೇಲೆ ಕಠೋರ ನಿರ್ಬಂಧಗಳನ್ನು ಹೇರಿದರು. (ಈ ಹಂತದಲ್ಲಿ ಬಾಲ್ಯವಿವಾಹವನ್ನು ಜಾರಿಗೆ ತಂದರು) ಬಾಲ್ಯವಿವಾಹ ಮತ್ತು ಸಹಗಮನ ಪದ್ಧತಿಗಳು ಹೆಚ್ಚು ಹೆಚ್ಚು ಜಾರಿಗೆ ಬಂದವು. ವಿಧವೆಯರ ಸ್ಥಿತಿಗಳು ಅತ್ಯಂತ ಚಿಂತಾಜನಕವಾದವು. ಪಾಶ್ಚಾತ್ಯ ವಿದ್ಯಾಭ್ಯಾಸದ ಪ್ರಭಾವದಿಂದಾಗಿ ಭಾರತೀಯ ಧರ್ಮಸುಧಾರಕರಾದ ರಾಜಾ ರಾಮಮೋಹನ್‌ರಾಯ್, ಈಶ್ವರಚಂದ್ರವಿದ್ಯಾಸಾಗರ, ಸ್ವಾಮಿ ದಯಾನಂದ ಸರಸ್ವತಿ ಮುಂತಾದ ಮಹನೀಯರ ರಚನಾತ್ಮಕ ಕಾರ್ಯಕ್ರಮಗಳಿಂದಾಗಿ ಸ್ತ್ರೀಯರ ಸ್ಥಿತಿಗತಿಗಳು ಸುಧಾರಿಸಿದವು. ವೇದಗಳ ಯುಗದಲ್ಲಿ ಸ್ತ್ರೀಯರಿಗಿದ್ದ ಸ್ಥಾನಮಾನಗಳನ್ನೇ ಮತ್ತೆ ಅವರಿಗೆ ದೊರಕಿಸಿಕೊಡಬೇಕು ಎಂದು ಗಾಂಧೀಜಿಯವರು ಅದಕ್ಕಾಗಿ ಹೋರಾಡಿದರು. ಅವರ ಹೋರಾಟ ಸಾಕಷ್ಟು ಫಲಕಾರಿಯೂ ಆಯಿತು. ಸ್ತ್ರೀಯರ ಮೇಲಿದ್ದ ಹಲವು ನಿರ್ಬಂಧಗಳು ತಮ್ಮಿಂದ ತಾವೇ ಸಡಿಲಗೊಂಡವು.

ಬೇಂದ್ರೆಯವರ ಕಾವ್ಯಕಲ್ಪನೆ ಭೂಮವೂ ವಿಸ್ತಾರವೂ ಆಗಿದೆ. ಅಲ್ಪದಿಂದ ಸುಖವಿಲ್ಲ. ಭೂಮದಿಂದ ಮಾತ್ರವೇ ಸುಖವೆಂಬುದು ಉಪನಿಷತ್ತಿನ ವಾಕ್ಯ. 'ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ'. ಈ ಹಿನ್ನಲೆಯಲ್ಲಿ ಬೇಂದ್ರೆಯವರು ವಿಶ್ವಭ್ರಾತೃತ್ವದ, ವಿಶ್ವಕುಟುಂಬದ, ವಿಶ್ವಪ್ರೇಮದ ಕಲ್ಪನೆಯೊಂದನ್ನು ಲೋಕದ ಮುಂದೆ ಇರಿಸಿದ್ದಾರೆ. ಪಾರ್ವತಿದೇವಿಯೆ ನಮ್ಮ ತಾಯಿ, ಮಹೇಶ್ವರನೇ ನಮ್ಮ ತಂದೆ, ಎಲ್ಲ ಶಿವಭಕ್ತರೂ ನನ್ನ ಬಂಧುಗಳು, ಮೂರು ಲೋಕಗಳೂ ನನಗೆ ಸ್ವದೇಶಕ್ಕೆ ಸಮಾನ ಎಂಬ ವ್ಯಾಪಕವಾದ ಕಲ್ಪನೆಯೊಂದನ್ನು ಕೊಡುವ 'ಮಾತಾ ಚ ಪಾರ್ವತಿದೇವಿ, ಪಿತಾದೇವೋ ಮಹೇಶ್ವರಃ ಭಾಂದವಾಃ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಂ' ಎಂಬ ಮಂತ್ರವೊಂದು ಅತ್ಯಂತ ಮನನೀಯವಾಗಿದೆ. ಇಲ್ಲಿ ಶಿವ–ಪಾರ್ವತಿಯರೆಂದರೆ ಪ್ರಕೃತಿ–ಪುರುಷರೆಂಬ ಭೂಮತತ್ತ್ವಗಳಿಗೆ ಸಂಕೇತವಾಗಿರುವ ಹೆಸರುಗಳು. ಇಂತಹ ಭೂಮತತ್ತ್ವವನ್ನು ಬೇಂದ್ರೆಯವರು ತಮ್ಮ 'ವಿಶ್ವಮಾತೆ' ಎಂಬ ಚಿಂತನೆಯ ಹಿನ್ನಲೆಯಲ್ಲಿ ಹೇಗೆ ಪಡಿಮೂಡಿಸಿದ್ದಾರೆ ಎಂಬುದನ್ನು ವಿವೇಚನೆ ಮಾಡಲಾಗಿದೆ. ಈ ಚಿಂತನೆ ಒಮ್ಮಿಂದೊಮ್ಮೆಗೆ ರೂಪುಗೊಂಡುದಲ್ಲ. ಅದಕ್ಕೆ ಪೂರ್ವಭಾವಿಯಾಗಿ ಧಾರವಾಡದ ತಾಯಿ, ಕನ್ನಡಮಾತೆ, ಭಾರತಮಾತೆ ಎಂಬ ಪ್ರಾರಂಭಿಕ ಹಂತದ ಚಿಂತನೆಗಳೂ ಅವರಲ್ಲಿವೆ.[೨]

ಸ್ತ್ರೀಶಕ್ತಿಯು ಮಾತೆಯಾಗಿ, ಮಡದಿಯಾಗಿ ಕಾಣಿಸಿಕೊಳ್ಳುವುದಲ್ಲದೆ ಪುತ್ರಿಯಾಗಿ, ಸೋದರಿಯಾಗಿ ಈ ಜಗತ್ತನ್ನು ತುಂಬಿಕೊಂಡಿದೆ. ಕರುಳಕುಡಿಯಾಗಿ ಆ ರೂಪವು ಬಂದಾಗ ಅದು ಮನುಷ್ಯನ ಕೌಟುಂಬಿಕ ಜೀವನವನ್ನು ವಿಸ್ತರಿಸುತ್ತದೆ. ಸಮೃದ್ಧಿಗೊಳಿಸುತ್ತದೆ. ತಂದೆ-ತಾಯಿಗಳು ತಮ್ಮ ಹೆಣ್ಣುಮಕ್ಕಳ ಮೇಲೆ ತೋರುವ ಒಲವು ಭಾರತೀಯ ಹಿನ್ನಲೆಯಲ್ಲಿ ತನ್ನದೇ ಅದ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ತಮ್ಮ ಜನಪದ ಸಾಹಿತ್ಯದಲ್ಲಿಯೂ ಹೆಣ್ಣುಮಗಳಾಗಿ ಕಾಣಿಸಿಕೊಳ್ಳುವ ಬಹುವರ್ಣಮಯವಾದ ಚಿತ್ರಗಳಿವೆ. ಅಲ್ಲಿ ಆಕೆಯ ಗಂಡನ ಮನೆಯಲ್ಲಿ ಅನುಭವಿಸುವ ಸಾಂಸಾರಿಕ ನೋವು, ಶೋಷಣೆಯ ಚಿತ್ರಣವಿದೆ. ಅಂತೆಯೆ ಹೆಣ್ಣು ಅಕ್ಕನೊ, ತಂಗಿಯೊ ಆಗಿ ನಮ್ಮ ಬಂಧುತ್ವವನ್ನು ವಿಕಾಸಗೊಳಿಸುವ ಶಕ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಭಾರತೀಯ ಸಮಾಜವು ಎಲ್ಲ ಕಾಲದಿಂದಲೂ ಸ್ತ್ರೀಯನ್ನು ಗೌರವದಿಂದಲೇ ಕಾಣುತ್ತ ಬಂದಿದೆ. ಇಷ್ಟಾದರೂ ಹಲವು ಸಂದರ್ಭಗಳಲ್ಲಿ ಸ್ತ್ರೀ ಸಂಕಟಕ್ಕೆ ಗುರಿಯಾಗಿದ್ದಾಳೆ. ಶೋಷಣೆಗೆ ಗುರಿಯಾಗಿದ್ದಾಳೆ. ದಾಸ್ಯಕ್ಕೆ ಗುರಿಯಾಗಿದ್ದಾಳೆ. ಶಕ್ತಿರೂಪಿಣಿಯಾದ ಹೆಣ್ಣು ಹೀಗೆಲ್ಲ ನೊಂದು ನಲುಗಿದ್ದಾಳೆ.

೨.೧. **ಋಗ್ವೇದ:** ಭಾರತದ ಸಾಮಾಜಿಕ ಇತಿಹಾಸವೆಂದರೆ ಅದು ವೇದಗಳ ಕಾಲದಿಂದಲೂ ಪ್ರಾರಂಭವಾಗುತ್ತದೆ. ಭಾರತೀಯ ಸಮಾಜದಲ್ಲಿ ಸ್ತ್ರೀಯರಿಗೆ ಇದ್ದ ಸ್ಥಾನಮಾನಗಳು ಏನೆಂಬುದನ್ನು ಋಗ್ವೇದದ ಕಾಲದಿಂದಲೇ ಅಧ್ಯಯನ ಮಾಡಬೇಕಾಗುತ್ತದೆ. ಋಗ್ವೇದದ ಕಾಲದಲ್ಲಿ ಸ್ತ್ರೀ ಮತ್ತು ಪುರುಷರಿಗೆ ಸಮಾನವಾದ ಸ್ಥಾನವಿತ್ತು. ಸ್ತ್ರೀಯು ವಿದ್ಯಾವಂತಳಾಗುತ್ತಿದ್ದಳು. ಪ್ರೌಢವಯಸ್ಸಿಗೆ ಬಂದಾಗ ವಿವಾಹವಾಗಿ ಕುಟುಂಬದ ಹೊಣೆಗಾರಿಕೆಗಳನ್ನು ನಿರ್ವಹಿಸುತ್ತ ಸಮಾಜದಲ್ಲಿ ಗೌರವಾನ್ವಿತ ಸ್ಥಾನವನ್ನು ಪಡೆದುಕೊಳ್ಳುತ್ತಿದ್ದಳು. ಯಾವುದೇ ಯಜ್ಞಕಾರ್ಯದಲ್ಲಾಗಲಿ ಗಂಡ-ಹೆಂಡಿರು ಜೋಡಿಯಾಗಿಯೇ ದೇವತೆಗಳಿಗೆ ಆಹುತಿಗಳನ್ನು ಅರ್ಪಿಸುತ್ತಿದ್ದರು. ಅವರು ಒಂದು ರಥಕ್ಕೆ ಹೂಡಿದ ಜೋಡಿ ಕುದುರೆಗಳಿದ್ದಂತೆ ಎಂದು ಋಗ್ವೇದವು ಹೇಳಿದೆ. 'ದಂಪತಿ' ಎಂಬ ಶಬ್ದವು ಒಂದು ಮನೆಗೆ ಗಂಡಹೆಂಡಿರಿಬ್ಬರೂ ಸಂಯುಕ್ತ ನಾಯಕರು ಎಂಬುದನ್ನು ಸೂಚಿಸುವಂತೆ ಬಳಕೆಯಾಗುತ್ತಿತ್ತು. ಹೆಣ್ಣುಮಕ್ಕಳು ಗೃಹಕೃತ್ಯಗಳಲ್ಲಿ ವಿಶಿಷ್ಟವಾದ ಪಾತ್ರವನ್ನು ವಹಿಸುತ್ತಿದ್ದರು. ಹಸುವಿನ ಹಾಲನ್ನು ಕರೆಯುವ ಕಾರ್ಯ ಅವರ ಪಾಲಿಗೆ ಬರುತ್ತಿದ್ದುದರಿಂದ ಆ ಅರ್ಥದಲ್ಲಿಯೇ ಅವರದನ್ನು 'ದುಹಿತಾ' ಎಂದು ಕರೆದಿರುವುದು ಅತ್ಯಂತ ಸ್ವಾರಸ್ಯಕರವಾದ ಸಂಗತಿಯಾಗಿದೆ. ಮದುವೆಯಾಗದ ಹೆಣ್ಣು ಮಕ್ಕಳು ತಂಗಿ-ತಾಯಿಯರ ಜೊತೆಯಲ್ಲಿಯೇ ಇರುತ್ತಿದ್ದರು. ಗಂಡುಮಕ್ಕಳಿಗೆ ಹೇಗೋ ಹಾಗೆ ಅವರಿಗೂ ಆಸ್ತಿಯಲ್ಲಿ ಸಮಾನವಾದ ಪಾಲು ಲಭಿಸುತ್ತಿತ್ತು.

ದೇವದಾಸಿ ಪದ್ಧತಿಯು ಅಂದಿಗೂ ರೂಢಿಯಲ್ಲಿತ್ತು. ಅವರು ವೃತ್ತಿನಿರತ ನೃತ್ಯಗಾರ್ತಿಯರೂ ಆಗಿರುತ್ತಿದ್ದರು. ಅವರನ್ನು ಸಮಾಜವು ಕೀಳಾಗಿ ಕಾಣುವುದಾಗಲಿ, ಓರೆನೋಟದಿಂದ ನೋಡುವುದಾಗಲಿ ಇರಲಿಲ್ಲವೆಂದೇ ಹೇಳಬೇಕು. ನೈತಿಕ ನಡವಳಿಕೆಗೆ ವಿರುದ್ಧವಾಗಿ ನಡೆದ ಸ್ತ್ರೀಯರನ್ನು ಕೂಡ ಒಂದಿಷ್ಟು ಸಹಾನುಭೂತಿಯಿಂದ ನೋಡುವ ಪರಿಪಾಠವೇ ಇತ್ತು. ಕರುಣೆ ಇಲ್ಲದ ಕಾನೂನಿಗೆ

ಅನುಕಂಪರಹಿತ ಸಮಾಜಕ್ಕೆ ಅವಳು ತುತ್ತಾಗಿ ಸಂಕಟಪಡುವ ಪ್ರಮೇಯವಿರಲಿಲ್ಲ. ಬೌದ್ಧಿಕ ವಲದಯದಲ್ಲಿ ಸ್ತ್ರೀಯರು ಪುರುಷರಿಗೆ ಸಮಾನಸ್ಕಂದರಾಗಿರುತ್ತಿದ್ದರು. ಅವರಲ್ಲಿ ಕೆಲವು ಕವಯಿತ್ರಿಯರೂ, ಮಂತ್ರನಿರ್ಮಾಪಕರೂ ಆಗಿರುತ್ತಿದ್ದರು. ಅತ್ರಿ ವಂಶಕ್ಕೆ ಸೇರಿದ ವಿಶ್ವಾವಾರಾಳು ಅಗ್ನಿಯನ್ನೂ, ಅಪಾಲಾಳು ಇಂದ್ರನನ್ನೂ ಸ್ತೋತ್ರ ಮಾಡಿರುವ ಕವಿತೆಗಳಿವೆ. ಸ್ತ್ರೀಯರಿಗೆ ವೇದಾಧ್ಯಯನ ಅಧಿಕಾರವೂ ಇತ್ತು. ವೈದಿಕಸೂಕ್ತ ಕರ್ತೃಗಳ ನಡುವೆ ಲೋಪಾಮುದ್ರ, ಘೋಷಾ, ಸಿಕತಾ ಮತ್ತು ನಿವಾವಾರಿ ಎಂಬ ಮಹಿಳಾನಾಮಗಳು ಕಾಣಿಸಿಕೊಳ್ಳುವುದು ಗಮನಾರ್ಹವಾದ ಸಂಗತಿಯಾಗಿದೆ. ಅಷ್ಟೇ ಅಲ್ಲ, ಸ್ತ್ರೀಯರು ವೈದಿಕ ಕರ್ಮಗಳನ್ನು ತಾವೇ ನಡೆಸಿಕೊಳ್ಳುವ ಅಧಿಕಾರವನ್ನು ಪಡೆದಿದ್ದರು.

೨.೨. ಅಥರ್ವಣ ವೇದ : ಋಗ್ವೇದದ ತರುವಾಯ ನಾವು ಅಥರ್ವವೇದವನ್ನು ಮೊರೆಹೋಗಬೇಕಾಗುತ್ತದೆ. ಅಲ್ಲಿ ಪುರುಷನೊಬ್ಬನ ಜನನದಿಂದ ಹಿಡಿದು ಮರಣದವರೆಗೆ ನೆರವೇರಬೇಕಾದ ಸಮಗ್ರ ಕ್ರಿಯಾಕಲಾಪಗಳ ವರ್ಣನೆಯಿದೆ. ಆ ಕಾಲಕ್ಕೆ ಗಂಡು–ಹೆಣ್ಣುಗಳಲ್ಲಿ ಹೆಣ್ಣಿನ ಪ್ರಾಶಸ್ತ್ಯ ಕುಗ್ಗಿ ಗಂಡಿಗೆ ಹೆಚ್ಚು ಮಹತ್ವ ಬಂದುದನ್ನು ನಾವು ಕಾಣುತ್ತೇವೆ. ಅದಕ್ಕೆ ಆಗ ಸ್ಫುಟಗೊಂಡ ಸ್ವರ್ಗ–ನರಕಗಳ ಕಲ್ಪನೆಯೇ ಕಾರಣವೆನ್ನಬೇಕು. ಮರಣಹೊಂದಿದ ಪುರುಷನನ್ನು ಸ್ವರ್ಗಕ್ಕೆ ಸೇರಿಸುವುದಕ್ಕಾಗಲಿ, ಅವನ ಜನ್ಮಾಂತರಗಳು ಸುಖಕರವಾಗಿರುವುದಕ್ಕಾಗಲಿ ಅವನ ಹೆಸರಿನಲ್ಲಿ ಕೆಲವು ವಿಶೇಷ ಕರ್ಮಗಳನ್ನು ಮಾಡಬೇಕಾಗಿತ್ತು. ಅದನ್ನು ಮಾಡಲು ಆ ಪುರುಷನ ಪುತ್ರನೇ ತಕ್ಕವನು ಎಂಬ ಭಾವನೆ ಬಲವಾಗಿ ಬೇರೂರಿತು. ಹೀಗಾಗಿ ಪುರುಷನಿಗೆ ಗಂಡು ಸಂತಾನ ಅನಿವಾರ್ಯವೆಂದಾಯಿತು. ವಿವಿಧ ಧಾರ್ಮಿಕ ಕ್ರಿಯೆಗಳಲ್ಲಿ ಈ ಹಿಂದೆ ಸ್ತ್ರೀಯರಿಗೆ ಸಂದಾಯವಾಗುತ್ತಿದ್ದ ಸಮಪಾಲು ಈಗ ತಪ್ಪಿಹೋಯಿತು. ಪುತ್ರಸಂತಾನವನ್ನು ಪಡೆಯುವುದಕ್ಕಷ್ಟೇ ಸ್ತ್ರೀಯ ಸ್ಥಾನಮಾನ ಸೀಮಿತವಾಯಿತು. ಇದೇ ಕಾರಣವಾಯಿತೋ ಏನೋ ಬಾಲ್ಯವಿವಾಹ ಪದ್ಧತಿ ರೂಢಿಗೆ ಬಂದಿತು.

ಅಥರ್ವವೇದದ ಕಾಲದಲ್ಲಿ ಸ್ತ್ರೀಯ ಸ್ಥಾನಮಾನದಲ್ಲಿ ಸಾಕಷ್ಟು ಅವನತಿಯಾಗಿದೆಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ವಿಧವಾ ವಿವಾಹ ಸಲ್ಲದು ಎಂಬ ಅಥರ್ವವೇದದ ಅಭಿಪ್ರಾಯದೊಂದಿಗೆ ವಿಧವಾವಿವಾಹವೇನೂ ದೋಷವಲ್ಲ ಎಂಬ ಅಭಿಪ್ರಾಯವೂ ಅಲ್ಲಿಯೇ ಮನ್ನಣೆಯನ್ನು ಪಡೆದಿರುವುದನ್ನು ನಾವು ಕಾಣುತ್ತೇವೆ. ವಿಧವಾವಿವಾಹದ ಮೂಲಕ ಹುಟ್ಟಿದ ಮಕ್ಕಳನ್ನೇನೂ ಸಮಾಜವು ಹೀನಾಯವಾಗಿ ಕಾಣುತ್ತಿರಲಿಲ್ಲ. ಮೊದಲ ಹೆಂಡತಿಯಲ್ಲಿ ಪುತ್ರಸಂತಾನವಾಗದಿದ್ದರೆ ಪುತ್ರನನ್ನು ಪಡೆಯಬೇಕೆಂಬ ಬಲವಾದ ಆಶಯ ಮೂಡಿಬಂದುದರಿಂದ ಬಹುಪತ್ನಿತ್ವವು ಹೆಚ್ಚು ರೂಢಿಗೆ ಬರಲು ಕಾರಣವಾಯಿತೆನ್ನಬಹುದು. ಅಥರ್ವವೇದದ ಕಾಲದಲ್ಲಿ ಸಹಗಮನ ಪದ್ಧತಿ ರೂಢಿಯಲ್ಲಿತ್ತೆಂದು ತಿಳಿಯಲಾಗಿದೆ. ವ್ಯಕ್ತಿಯೊಬ್ಬನು ಮೃತನಾದರೆ ಅವನ ಆತ್ಮವು ಜೀವಂತವಾಗಿರುತ್ತದೆ ಎಂಬುದು ಆದಿಮಾನವಯುಗದ ನಂಬಿಕೆಯಾಗಿತ್ತು. ಆ ಬಗೆಯ

ನಂಬಿಕೆಗಳು ಅಥರ್ವವೇದದ ಕಾಲಕ್ಕೂ ಮಾನ್ಯವಾಗಿದ್ದವು. ವ್ಯಕ್ತಿಯ ಆತ್ಮವು ತಾನು ಜೀವಂತವಾಗಿದ್ದಾಗ ಉಪಭೋಗಿಸುತ್ತಿದ್ದ ವಸ್ತುಗಳೆಲ್ಲವೂ ತರುವಾಯದಲ್ಲಿಯೂ ಅದಕ್ಕೆ ಬೇಕು ಎಂಬ ಮಾನ್ಯತೆ ಬೆಳೆಯಿತು. ಆ ಆತ್ಮಕ್ಕೊಂದು ಹೆಣ್ಣು ಬೇಕು ಎಂಬ ಕಾರಣಕ್ಕಾಗಿಯೇ ಮಡದಿಯು ಪತಿಯೊಡನೆ ಅಗ್ನಿಪ್ರವೇಶ ಮಾಡಬೇಕಾಯಿತು.

೨.೩. ಬ್ರಾಹ್ಮಣಗಳು ಮತ್ತು ಉಪನಿಷತ್ತುಗಳ ಕಾಲ : ಬ್ರಾಹ್ಮಣಗಳ ಯುಗವನ್ನು ಸ್ತ್ರೀಯರ ಸ್ಥಾನಮಾನಗಳ ಸಂಕ್ರಮಣಯುಗವೆಂದು ಹೇಳಬಹುದು. ಅದೊಂದು ಮಿಶ್ರಭಾವಗಳ ಯುಗ. ಸ್ತ್ರೀಯನ್ನು ಗೌರವಪೂರ್ಣವಾದ ಸ್ಥಾನದಲ್ಲಿ ಇಟ್ಟಿರುವ ಮಾತುಗಳ ಜೊತೆಗೆ ಅವಳನ್ನು ಕಡೆಗಣಿಸಿರುವ ಮಾತುಗಳು ಇವೆ. ಈ ಪರಿಸ್ಥಿತಿಯಲ್ಲಿ ಸ್ತ್ರೀಯ ವಿಷಯವಾಗಿ ಏಕಪಕ್ಷೀಯವಾದ ನಿರ್ಣಯಗಳನ್ನು ಕೊಡುವುದು ಸಾಧ್ಯವಿಲ್ಲ. ಹೆಚ್ಚು ಕಡಿಮೆ ಅಥರ್ವವೇದಯುಗದ ಭಾವನೆಗಳು ಮುಂದುವರಿದವು ಮತ್ತು ಆ ಭಾವನೆಗಳು ಇನ್ನಷ್ಟು ಗಟ್ಟಿಗೊಂಡವು ಎಂದು ಹೇಳಬಹುದಾಗಿದೆ. ನಾರದನು 'ಸತಿಯು ಒಡನಾಡಿ, ಮಗಳೊಂದು ಕಾಲ್ತೊಡಕು; ಮತ್ತಾಮಗನೊ ದಿವ್ಯ ಸ್ವರ್ಗದ ಬೆಳಕು' ಎಂದು ನುಡಿದಿದ್ದಾನೆ.[೩] ಈ ಮಾತು ಅಂದಿನ ಯುಗದ ಸ್ತ್ರೀಯರ ಸ್ಥಾನಮಾನಕ್ಕೆ ಹಿಡಿದ ಕೈಗನ್ನಡಿ ಎಂದು ಹೇಳಬಹುದು. ಮೈತ್ರಾಯಿಣಿ ಸಂಹಿತೆಯು ಸ್ತ್ರೀಯನ್ನು ಜೂಜು ಮತ್ತು ಕುಡಿತಗಳೊಂದಿಗೆ ಸಮೀಕರಿಸಿದೆ. ಅವಳನ್ನು ಸಮಾಜದ ಪ್ರಮುಖ ಅನಿಷ್ಟಗಳಲ್ಲೊಂದು ಎಂದು ಕರೆದಿದೆ. ತೈತ್ತರೀಯ ಮತ್ತು ಶತಪಥ ಬ್ರಾಹ್ಮಣಗಳು ಸ್ತ್ರೀಯನ್ನು ಒಬ್ಬ ಕೀಳು ವ್ಯಕ್ತಿಗಿಂತ ಕೀಳು ಎಂದು ನಿಂದಿಸಿವೆ. ವಿವಾಹದ ಆಚರಣೆಯಲ್ಲಿ ಸಪ್ತಪದಿ ಎಂಬ ಒಂದು ಸಂಗತಿ ಇದೆ. ಅದರ ಅಂತಾರಾರ್ಥವನ್ನು ಪರಿಶೀಲಿಸುವಾಗ ಸ್ತ್ರೀಗೆ ನೀಡಿದ ಮಹತ್ವ ಅತಿಶಯವಾದುದು ಎಂದು ಹೇಳದೆ ವಿಧಿಯಿಲ್ಲ. "ನನ್ನೊಡನೆ ಏಳು ಹೆಜ್ಜೆಗಳನ್ನು ನಡೆದು ನೀನು ನನ್ನ ಗೆಳೆತನವನ್ನು ಪಡೆಯುವಂತಾಗಲಿ, ನಿನ್ನ ಗೆಳೆತನದಿಂದ ನಾನು ಎಂದಿಗೂ ದೂರವಾಗದಂತಾಗಲಿ, ನಾನು ನಿನ್ನ ಗೆಳೆತನವನ್ನು ಪಡೆಯುವಂತಾಗಲಿ, ನಿನ್ನ ಗೆಳೆತನದಿಂದ ನಾನು ಎಂದಿಗೂ ದೂರವಾಗದಂತಾಗಲಿ, ನನ್ನ ಗೆಳೆತನದಿಂದ ನೀನು ಎಂದಿಗೂ ದೂರಳಾಗದಿರು. ನಾವು ಒಂದಾಗೋಣ. ಪ್ರೀತಿಯಿಂದ ಒಂದಾಗಿ, ಪರಸ್ಪರ ಸಹವಾಸದಿಂದ ಪ್ರಕಾಶಿಸುತ್ತ, ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಂಡು, ಎಲ್ಲ ಸಂತೋಷ ಸುಖಗಳನ್ನೂ ಹಂಚಿಕೊಂಡು ನಾವು ಆಲೋಚನೆಯಲ್ಲಿ, ಕರ್ತವ್ಯಗಳಲ್ಲಿ, ಆದರ್ಶಗಳಲ್ಲಿ ಒಂದಾಗೋಣ" (ಅಪಸ್ತಂಬ ಮಂತ್ರಬ್ರಾಹ್ಮಣ) ಎಂದು ಏಳು ಹೆಜ್ಜೆಗಳನ್ನು ನಡೆದ ಮೇಲೆ ವರನು ವಧುವನ್ನುದ್ದೇಶಿಸಿ ನುಡಿಯುತ್ತಾನೆ.[೪]

ವರ್ಣಾಶ್ರಮ ಭೇದವಿಲ್ಲದೆ, ಗಂಡು-ಹೆಣ್ಣೆಂಬ ಭೇದವಿಲ್ಲದೆ ಸಕಲರೂ ಜ್ಞಾನಸಂಪಾದನೆಗೆ ಅರ್ಹರು ಎಂದು ಹೇಳುವ ಉಪನಿಷತ್ತುಗಳು ಸ್ತ್ರೀಯರನ್ನು ಕಡೆಗಣಿಸುವುದು ಸಾಧ್ಯವೇ ಇಲ್ಲ. ಬೃಹದಾರಣ್ಯಕ ಉಪನಿಷತ್ತಾದರೊ ಗಂಡು-ಹೆಣ್ಣು ಕೂಡಿಯೆ ಒಂದು ಘಟಕ, ಅಪತ್ನೀಕನಾದ ಪುರುಷನು ಸಮಾಜದಲ್ಲಿ ಅರ್ಧ ವ್ಯಕ್ತಿತ್ವವನ್ನು ಹೊಂದಿದ ಹಾಗೆ ಎಂದು ತಿಳಿಸಿಕೊಟ್ಟಿದೆ.

೨.೪. **ಸ್ಮೃತಿಗಳು :** ಸ್ಮೃತಿಗಳು ಧರ್ಮಸೂತ್ರದ ಆಧಾರದ ಮೇಲೆ ರಚಿತವಾದ ಕಾನೂನು ವಿಧಿಗಳು ಹಾಗೂ ನಡವಳಿಕೆಯ ನಿಯಮಗಳು ಎಂದು ಹೇಳಬಹುದು. ಸ್ಮೃತಿಗ್ರಂಥಗಳ ಸಮುದಾಯದಲ್ಲಿ ಮನುವಿನಿಂದ ರಚಿತವಾದ ಮನುಸ್ಮೃತಿ ಎಂಬ ಗ್ರಂಥವು ಅತ್ಯಂತ ಪುರಾತನವೂ, ಪ್ರಸಿದ್ಧವೂ ಆಗಿದೆ. ಸ್ತ್ರೀಯರ ಬಗ್ಗೆ ಮನುಸ್ಮೃತಿಯ ಅಭಿಪ್ರಾಯಗಳನ್ನು ಕ್ರೋಢೀಕರಿಸಿಕೊಂಡರೆ ಅದು ಆ ಯುಗದ ಸ್ತ್ರೀ ಸಮಾಜದ ಕೈಗನ್ನಡಿಯೇ ಆಗುತ್ತದೆ. ಈ ಹಿಂದಿನ ಯುಗದಲ್ಲಿ ಸ್ತ್ರೀಯರಿಗೆ ಉಪನಯನವೆಂಬ ವಿಧಿ ಇದ್ದಿತು. ಗುರುಗಳನ್ನು ಆಶ್ರಯಿಸಿ ಅವರು ವೇದಗಳನ್ನು ಓದುತ್ತಿದ್ದರು. ಪ್ರತಿನಿತ್ಯ ಗಾಯತ್ರಿ ಜಪ ಮತ್ತು ಅಗ್ನಿಕಾರ್ಯಗಳನ್ನು ಮಾಡುತ್ತಿದ್ದರು. ತರುವಾಯದಲ್ಲಿ ವಿವಾಹವಾಗುವ ಅಥವಾ ಬ್ರಹ್ಮವಾದಿನಿಯರಾಗಿಯೇ ತಮ್ಮ ಬದುಕನ್ನು ಸಾಗಿಸುವ ಅವಕಾಶವನ್ನು ಅವರು ಪಡೆದಿದ್ದರು. ಆದರೆ ಮನುವಿನ ಕಾಲಕ್ಕೆ ಬಾಲ್ಯವಿವಾಹ ಪದ್ಧತಿಯು ಕಾನೂನುಬದ್ಧವಾಗಿ ಜಾರಿಗೆ ಬಂದುದರಿಂದ ಸ್ತ್ರೀಯತ ವಿದ್ಯಾಭ್ಯಾಸಕ್ಕೆ ದೊಡ್ಡ ಕೊಡಲಿಪೆಟ್ಟು ಬಿದ್ದಂತಾಯಿತು. ಬಾಲ್ಯವಿವಾಹವೇ ಹೆಣ್ಣುಮಕ್ಕಳಿಗೆ ಶ್ರೇಯಸ್ಕರವಾದುದೆಂಬ ಭಾವನೆ ಬೆಳೆಯಿತು. ಮನುಸ್ಮೃತಿ ಮಾತ್ರವೇ ಅಲ್ಲ, ಎಲ್ಲ ಸ್ಮೃತಿಗಳು ಮೈನೆರೆಯುವುದಕ್ಕೆ ಮುನ್ನವೇ ಹೆಣ್ಣು ಮಕ್ಕಳಿಗೆ ವಿವಾಹ ಮಾಡಬೇಕೆಂದು ವಿಧಿಸಿವೆ. ಅಂತೆಯೇ ಸ್ತ್ರೀಯರಿಗೂ ವೇದಾಧ್ಯಯನವಿಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಯಿತು. ಹೀಗಾಗಿ ಸ್ಮೃತಿಕಾರರು ಸ್ತ್ರೀಯರನ್ನು ಶೂದ್ರರೊಂದಿಗೆ ಸಮೀಕರಿಸಿದರು. ಸ್ತ್ರೀಯರು ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದರೂ ಅವರ ಬುದ್ಧಿಶಕ್ತಿಗೇನೂ ಕೊರತೆಯಿರಲಿಲ್ಲ. ಗೃಹಕೃತ್ಯದಲ್ಲಾಗಲಿ, ಇನ್ನಿತರ ಸಾಮಾಜಿಕ ವ್ಯವಹಾರಗಳಲ್ಲಾಗಲಿ ಅವರು ತಕ್ಕಷ್ಟು ಪ್ರಭಾವ ಬೀರುತ್ತಿದ್ದರು. ಸ್ತ್ರೀಯರಿಗೆ ವಿವಾಹವೊಂದೇ ಮಂತ್ರಸಹಿತವಾದ ಸಂಸ್ಕಾರ ಎಂದು ನಿರ್ಣಯವಾಯಿತು.

ಸ್ತ್ರೀಯರ ಸ್ಥಾನಮಾನವನ್ನು ಕುರಿತು ಹೇಳುವಾಗ ಮನುಸ್ಮೃತಿಯು 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ವಾಕ್ಯವನ್ನು ಮೇಲಿಂದ ಮೇಲೆ ಉದ್ಧರಿಸುವುದುಂಟು. ಈ ವಾಕ್ಯದ ಪೂರ್ಣಪಾಠವನ್ನು ಇದೀಗ ನಾವು ಪರಿಶೀಲಿಸಬೇಕು. ಬಾಲ್ಯದಲ್ಲಿ ತಂದೆ, ತಾರುಣ್ಯದಲ್ಲಿ ಗಂಡ, ಮುಪ್ಪಿನಲ್ಲಿ ಮಗ– ಹೀಗೆ ಅವಳು ಉದ್ದಕ್ಕೂ ಇನ್ನೊಬ್ಬರ ರಕ್ಷಣೆಯಲ್ಲಿರತಕ್ಕವಳು. ಅವಳು ಯಾವ ಸ್ವಾತಂತ್ರ್ಯಕ್ಕೂ ಅರ್ಹಳಲ್ಲ. ಅವಳು ಎಂದೂ ಒಬ್ಬಂಟಿಗಳಾಗಿ ಇರಬಾರದು. ಮನುವಿನ ಮಾತುಗಳನ್ನು ಸ್ತ್ರೀಪರವಾದ ನಿಲುವು ಎಂದು ಬೇಕಾದರೂ ಭಾವಿಸಬಹುದು. ಇಲ್ಲವೆ ಸ್ತ್ರೀಸ್ವಾತಂತ್ರ್ಯಕ್ಕೆ ವಿರುದ್ಧವಾದುದು ಎಂದು ಬೇಕಾದರೂ ವ್ಯಾಖ್ಯಾನಿಸಬಹುದು. ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂದು ನಿರೂಪಿಸಿದ ಮರುಕ್ಷಣದಲ್ಲಿಯೇ ಮನುವು ಅವರಿಗಿರುವ ಉನ್ನತ ಸ್ಥಾನವನ್ನು ಕೊಂಡಾಡುತ್ತ ಎಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಸಂತೋಷದಿಂದ ನಲಿದಾಡುತ್ತಾರೆ, ಸ್ತ್ರೀಯರಿಗೆ ಪೂಜ್ಯತೆ ಇಲ್ಲದ ಸ್ಥಾನದಲ್ಲಿ ಯಾವ ಕಾರ್ಯವು ಫಲಕಾರಿಯಾಗದು ಎಂದು ಘೋಷಿಸಿದನು. ಮಡಿದಿಯಿಲ್ಲದ ಪುರುಷನು ಯಾವ ಧರ್ಮಕಾರ್ಯಕ್ಕೂ ಅಧಿಕಾರಿಯಲ್ಲ. ಸ್ತ್ರೀಯು ಸ್ವಂತ ಆಸ್ತಿಯನ್ನು ಹೊಂದುವುದಕ್ಕೆ ಅರ್ಹಳಲ್ಲದಿದ್ದರೂ ತನ್ನದೇ ಆದ ಸ್ತ್ರೀಧನವನ್ನು ಅವಳು ಸಂರಕ್ಷಿಸಿಕೊಳ್ಳಬಹುದಾಗಿತ್ತು ಎಂದಿದ್ದಾನೆ.

೨.೫. ಪುರಾಣಗಳು : "ವೇದ ಹಾಗೂ ಉಪನಿಷತ್ತುಗಳ ಆಧ್ಯಾತ್ಮಿಕ ಹಾಗೂ ನೈತಿಕ ತತ್ತ್ವಗಳನ್ನು ಸರಳ ಸಂವಾದಗಳ ರೂಪದಲ್ಲೂ, ಕಥೆ ವಿವರಣೆಗಳ ರೂಪದಲ್ಲೂ ನಮ್ಮ ಮುಂದಿಡುವ ಭಾರತೀಯ ಪುರಾಣಗಳಲ್ಲೂ ಪ್ರಖ್ಯಾತರಾದ ಅನೇಕ ಪುರುಷರೂ ಸ್ತ್ರೀಯರೂ ಇದ್ದಾರೆ. ಋತಧ್ವಜನ ಪತ್ನಿಯಾದ ಮದಾಲಸಾ ಪುರಾಣದ ಸ್ತ್ರೀಯರಲ್ಲಿ ಅತ್ಯಂತ ಪ್ರಸಿದ್ಧಳಾದವಳು. ಆಕೆ ಪರಮ ಪಂಡಿತಳೂ, ತಪಸ್ವಿನಿಯೂ, ಕರ್ತವ್ಯಪಾರಾಯಣಳಾದ ಗೃಹಿಣಿಯೂ, ವಿಧೇಯಳಾದ ಪತ್ನಿಯೂ, ಮಾತೆಯೂ ಆಗಿದ್ದಳು. ಕಪಿಲನ ಮಾತೆಯೂ, ಶ್ರೇಷ್ಠ ಮುನಿ ಹಾಗೂ ಪ್ರಜಾಪತಿ ಕರ್ದಮನ ಪತ್ನಿಯೂ, ತಪಸ್ವಿನಿಯೂ ಆದ ಇನ್ನೊಬ್ಬ ಪೌರಾಣಿಕ ಮಹಿಳೆ ದೇವಹೂತಿ, ಕೌಟುಂಬಿಕ ಜೀವನದಲ್ಲೇ ಗೃಹಿಣಿಯಾಗಿ ಬಾಳಿದರೂ ಆಕೆ ಅಸಾಧಾರಣ ಆಧ್ಯಾತ್ಮಿಕ ಸಿದ್ಧಿ ಪಡೆದಿದ್ದಳು."[೫] ತಮ್ಮ ಜೀವನವನ್ನೇ ತಮ್ಮ ಪತಿಗಾಗಿ ಮೀಸಲಿರಿಸಿದ ಸ್ತ್ರೀಯರಲ್ಲಿ ಭಾರತೀಯ ಸ್ತ್ರೀತ್ವದ ಅಮರ ಸಂಕೇತಗಳೆನಿಸಿದ ಸತೀ ಹಾಗೂ ಉಮಾ ಇವರು ಅತ್ಯಂತ ಜಾಜ್ವಲ್ಯಮಾನವಾದ ನಿದರ್ಶನಗಳಾಗಿದ್ದಾರೆ.

ಇತಿಹಾಸಗಳು : ಮಹಾಭಾರತದ ಸಮಾಜದಲ್ಲಿ ಸ್ತ್ರೀಯರಿಗೊಂದು ಗೌರವಪೂರ್ಣವಾದ ಸ್ಥಾನವಿತ್ತು. ಅವರಿಗಿದ್ದ ಸ್ವಾತಂತ್ರ್ಯವೂ ಕಡಿಮೆ ಮಟ್ಟದ್ದೇನೂ ಆಗಿರಲಿಲ್ಲ. ಉತ್ತಮ ವಿಚಾರಶೀಲರು ನಾರಿಯರ ಬಗ್ಗೆ ವಿಶೇಷ ಗೌರವವನ್ನು ಪ್ರಕಟಿಸುತ್ತಿದ್ದರು. ಸ್ತ್ರೀಯರು, ರತ್ನಗಳು ಮತ್ತು ನೀರು ಈ ಮೂರು ವಸ್ತುಗಳು ಎಂದೂ ಅಶುದ್ಧವಾಗುವುದಿಲ್ಲ. ಸ್ತ್ರೀಯರನ್ನು ವಧಿಸಲಾಗದು ಎಂಬ ಮಾತುಗಳು ಆಗ ವಿಶೇಷ ಪ್ರಚಾರದಲ್ಲಿದ್ದವು. ದ್ರೌಪದಿಯಾದರೋ ಸ್ತ್ರೀತ್ವದ ಔನ್ನತ್ಯದ ಗೌರವದ ಚಿತ್ರಣವನ್ನೇ ಕಟ್ಟಿಕೊಟ್ಟಿದ್ದಾಳೆ. ಅವಳನ್ನು ಪಂಡಿತೆಯೆಂದೇ ಕರೆಯಲಾಗಿದೆ. ಅವಳು ಯಾವುದೇ ಸಂಕೋಚ, ಭಯಗಳಿಲ್ಲದ ತನ್ನ ಗಂಡನೊಡನೆ ರಾಜಕೀಯವೂ ಸೇರಿದಂತೆ ಎಲ್ಲ ವಿಷಯಗಳಲ್ಲಿಯೂ ವಾದಿಸಬಲ್ಲವಳಾಗಿದ್ದಳು. ಎಂತಹ ಕಠಿಣ ಸಂದರ್ಭದಲ್ಲಿಯೂ ಎದೆಗುಂದದೆ ಚೈತನ್ಯದಾಯಕವಾಗಿ ಅವಳು ನಡೆದುಕೊಂಡ ರೀತಿ, ಸಂಸಾರವನ್ನು ಹೆಣ್ಣು ಎಷ್ಟು ಉತ್ತಮವಾಗಿ ನಿಭಾಯಿಸಲು ಸಾಧ್ಯ ಎಂಬುದನ್ನು ತೋರಿಸುತ್ತದೆ. ಮನೆವಾರ್ತೆಯಲ್ಲಿ ಮಡದಿಯ ಸ್ಥಾನ ಏನೆಂಬುದನ್ನು ಮಹಾಭಾರತದ ಶಕುಂತಲೋಪಾಖ್ಯಾನದ ಕೆಳಗಿನ ಪಂಕ್ತಿಗಳಲ್ಲಿ ಅತ್ಯಂತ ಉಜ್ವಲವಾಗಿ ವರ್ಣಿಸಲಾಗಿದೆ.

ನಾರಿ ಪುರುಷರ ಅರ್ಧವಹುದು ಮೌಲ್ಯದವಳು
ಮೀರುವಳು ಉಳಿದೆಲ್ಲ ಬಂಧು ಮಿತ್ರರುಗಳನು,
ನೀಡುವಳು ಸರ್ವಲೌಕಿಕ ವರಗಳನು ಅವಳು,
ಅವಳಿಂದಲೇ ಉಂಟು ಉದ್ಧಾರವೂ ಕೂಡ,
ಶೂನ್ಯವಹ ಮನೆಗಳಲಿ, ನಾರಿಯರು ಹೊಳೆಹೊಳೆವ
ಮನಸೆಳೆವ ಸಂಗಾತಿಯಾಗಿ ನಲಿವೀಯುವರು;
ಹಿರಿಯರಂತೆ ವಿವೇಕಗೂಡಿ, ಕರ್ತವ್ಯದಲಿ
ಗೆದ್ದು,ಧರ್ಮದೊಳವರುಮಾರ್ಗದರ್ಶಿಗಳಿಹರು[೬]

೨.೬. ಬೌದ್ಧ ಮತ್ತು ಜೈನಯುಗದಲ್ಲಿ ಸ್ತ್ರೀಯರು : ಸ್ತ್ರೀಯರ ವಿಚಾರವಾಗಿ ಬುದ್ಧನ ವಿಚಾರಧಾರೆ ಅತ್ಯಂತ ಮರ್ಮಸ್ಪರ್ಶಿಯಾಗಿದೆ. ವೈದಿಕ ಧರ್ಮದಲ್ಲಿ ಬಂಜೆಯರನ್ನಾಗಲಿ, ವಿಧವೆಯರನ್ನಾಗಲಿ ಅಮಂಗಳಕಾರಿಗಳೆಂದು ಪರಿಗಣಿಸುತ್ತಿದ್ದ ಭಾವವನ್ನು ಬುದ್ಧದೇವನು ಸಂಪೂರ್ಣವಾಗಿ ತಿರಸ್ಕರಿಸಿದನು. ಪರಮ ಸಿದ್ಧಾಂತವೆಂಬುದು ಸ್ತ್ರೀ–ಪುರುಷ ಭೇದವಿಲ್ಲದೆ ಸಮಾನವಾಗಿ ವರ್ತಿಸುತ್ತದೆ. ಅದರಿಂದಾಗಿ ಮೋಕ್ಷಸಾಧನೆಯಲ್ಲಿ ಸ್ತ್ರೀ ಮತ್ತು ಪುರುಷ ಎಂಬ ಭೇದಕ್ಕೆ ಅವಕಾಶವೇ ಇಲ್ಲ. ತನ್ನ ಮೋಕ್ಷ ಸಾಧನೆಗೆ ಸ್ತ್ರೀಯಾದವಳು ತನ್ನ ನಡತೆಯನ್ನೇ ಅವಲಂಬಿಸಬೇಕು ಎಂದು ಬುದ್ಧನು ಒತ್ತಿ ಹೇಳಿದನು.

ಸತಿಪದ್ಧತಿಯನ್ನಾಗಿ ಬಾಲ್ಯವಿವಾಹ ಪದ್ಧತಿಯನ್ನಾಗಲಿ ಜೈನಧರ್ಮವು ಪುರಸ್ಕರಿಸಲಿಲ್ಲ. ಧರ್ಮ ಸಂರಕ್ಷಣೆಯಲ್ಲಿ ಪುರುಷರಿಗಿಂತ ಸ್ತ್ರೀಯರೇ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದಾರೆಂಬುದು ಎಲ್ಲ ಹಂತಗಳಲ್ಲೂ ನಿಚ್ಚಳವಾಗಿ ಗೋಚರಿಸುತ್ತದೆ. ಸಮವಸರಣವೆಂಬ ತೀರ್ಥಂಕರರ ಜೈನ ಸಭೆಯಲ್ಲಿ ಪ್ರಾಣಿ ಪಕ್ಷಿಗಳೆನ್ನದೆ ಮನುಷ್ಯ ದೇವತೆಗಳೆನ್ನದೆ ತತ್ತ್ವಾಮೃತದ ಪಾನಕ್ಕಾಗಿ ಸಮಸ್ತರೂ ಸಂಗಮಿಸುತ್ತಿದ್ದರು. ಅಂತಹ ಧರ್ಮಸಭೆಯಲ್ಲಿ ಪುರುಷರ ಸಂಖ್ಯೆಗಿಂತ ಸ್ತ್ರೀಯರ ಸಂಖ್ಯೆಯೆ ತಪ್ಪದೆ ದೊಡ್ಡದಾಗಿರುತ್ತಿದ್ದುದು ಅವರಿಗಿದ್ದ ಪ್ರಮುಖ ಸ್ಥಾನವನ್ನು ಪ್ರತಿಬಿಂಬಿಸುತ್ತದೆ.

೨.೭. ಮಧ್ಯಕಾಲೀನ ಯುಗ : ಸತಿಪದ್ಧತಿ ಮಧ್ಯಯುಗದಲ್ಲಿ ಸತಿ ಪದ್ಧತಿಗೆ ಸಂಬಂಧಿಸಿದಂತೆ ಪರ ಮತ್ತು ವಿರೋಧವಾದ ಎರಡೂ ಅಭಿಪ್ರಾಯಗಳಿದ್ದವು. ಕ್ರಿ.ಶ. ೫ನೇ ಶತಮಾನದಿಂದ ೯ನೇ ಶತಮಾನದ ಅವಧಿಯನ್ನು ಸ್ತ್ರೀಯರಿಗೆ ಸಂಬಂಧಿಸಿದಂತೆ ಸ್ಥಿತ್ಯಂತರ ಕಾಲವೆಂದು ಹೇಳಬಹುದು. ಸತಿಪದ್ಧತಿಯು ಮೊದಲು ಅನುಮರಣ ಎಂದು ಕರೆಯಲ್ಪಡುತ್ತಿತ್ತು. ಆ ಅನುಮರಣದಲ್ಲಿ ಸತ್ತವನ ಮಡದಿ ಮಾತ್ರವಲ್ಲದೆ ಅವನ ಮಗ, ಮಗಳು, ಸಹೋದರ, ಸಹೋದರಿ, ಗೆಳೆಯರು, ಗೆಳತಿಯರು – ಹೀಗೆ ಯಾರು ಬೇಕಾದರೂ ಬೆಂಕಿಗೆ ಆಹುತಿಯಾಗಬಹುದಾಗಿತ್ತು. ಮೊಘಲ್ ಸಾಮ್ರಾಜ್ಯದ ಸ್ಥಾಪನೆಯ ಕಾಲದಲ್ಲಿ ಹಿಂದೂ ಸಮುದಾಯದಲ್ಲಿ, ಅದರಲ್ಲೂ ಉನ್ನತವರ್ಗಗಳಲ್ಲಿ ಸತಿಪದ್ಧತಿಯು ಹೆಚ್ಚು ಪ್ರಚಾರದಲ್ಲಿತ್ತು. ರಜಪೂತ ಸಮುದಾಯದಲ್ಲಿ ಇನ್ನೂ ಹೆಚ್ಚಿನ ವ್ಯಾಪ್ತಿಯನ್ನು ಅದು ಪಡೆದುಕೊಂಡಿತ್ತು. ದಕ್ಷಿಣ ಭಾರತದಲ್ಲಾದರೂ ಸತಿಯ ಆಚರಣೆ ಉತ್ತರ ಭಾರತಕ್ಕಿಂತ ಸಾಕಷ್ಟು ಕಡಿಮೆ ಪ್ರಮಾಣದಲ್ಲಿತ್ತು. ವಿಧವೆಯರೆಲ್ಲರೂ ಅದನ್ನು ಆಚರಿಸಬೇಕೆಂಬ ಕಡ್ಡಾಯವೇನೂ ಇರಲಿಲ್ಲ. ಆದರೆ ವಿಜಯನಗರ ಸಾಮ್ರಾಜ್ಯದ ಉನ್ನತಿಯ ಕಾಲದಲ್ಲಿ ಈ ಪದ್ಧತಿಯು ಜನಾದರಣೆಯನ್ನು ಪಡೆದುಕೊಂಡಿದ್ದು ಸೋಜಿಗವೇ ಸರಿ.

ಕೇಶಮುಂಡನ : ಕೇಶಮುಂಡನವೆಂಬ ವಿಲಕ್ಷಣ ಪದ್ಧತಿಯೊಂದು ವಿಧವೆಯರ ವಿಷಯದಲ್ಲಿ ೧೧ನೇ ಶತಮಾನದಿಂದೀಚೆಗೆ ಬಳಕೆಗೆ ಬಂದಿದೆಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಬಾಣನ ಹರ್ಷಚರಿತೆಯಲ್ಲಿ ವಿಧವೆಯರು ತಮ್ಮ ಕೂದಲನ್ನು ಗಂಟುಹಾಕಿಕೊಳ್ಳುತ್ತಿದ್ದರೆಂಬ ವಿಚಾರ ವರ್ಣಿತವಾಗಿದೆ.[೭]

ಬಾಲ್ಯವಿವಾಹ ಮತ್ತು ಬಹುಪತ್ನಿತ್ವ : ಸತಿಪದ್ಧತಿಯನ್ನು ವಿರೋಧಿಸಿದ್ದಂತೆಯೇ ಅಕ್ಬರ್‌ನು ಬಾಲ್ಯ ವಿವಾಹವನ್ನೂ ವಿರೋಧಿಸಿದನು. ಬಾಲ್ಯವಿವಾಹದಂತೆಯೆ ಬಹುಪತ್ನಿತ್ವವನ್ನು ಅಕ್ಬರನು ವಿರೋಧಿಸಿದನು. ಆ ಪದ್ಧತಿಯು ಮನುಷ್ಯನ ಆರೋಗ್ಯಕ್ಕೆ ಮಾರಕವೆಂದು ಕುಟುಂಬದ ಸುಖ-ಸಂತೋಷಕ್ಕೆ ಪ್ರತಿಕೂಲವೆಂದು ಅವನು ಪರಿಗಣಿಸಿದನು. ಮೊದಲನೆಯ ಹೆಂಡತಿಯು ಬಂಜೆಯೆಂದು ಸ್ಥಿರಪಟ್ಟಾಗ ಮಾತ್ರವೇ ದ್ವಿತೀಯ ವಿವಾಹವನ್ನು ಯೋಚಿಸಬಹುದೆಂದು ಅವನು ಆಜ್ಞೆ ಮಾಡಿದನು. ಅಕ್ಬರನ ಕಾಲಕ್ಕೆ ಮುಸಲ್ಮಾನರಲ್ಲಿ ತರುಣರು ವೃದ್ಧ ಸ್ತ್ರೀಯನ್ನು ಮದುವೆಯಾಗುವ ಕೆಟ್ಟ ಪದ್ಧತಿಯೊಂದು ರೂಢಿಯಲ್ಲಿತ್ತು. ವಯಸ್ಸಾದ ಹೆಂಗಸಿನ ಐಶ್ವರ್ಯದಿಂದ ಆಕೃಷ್ಟನಾಗಿ ವಯೋಭೇದವನ್ನು ಪರಿಗಣನೆಗೆ ತಂದುಕೊಳ್ಳದೆ ತರುಣನು ಅವಳ ಕೈ ಹಿಡಿಯುತ್ತಿದ್ದನು. ಅಕ್ಬರನು ಇಂತಹ ವಿವಾಹವು ಶಾಸನ ವಿರುದ್ಧವೆಂದು ಆಜ್ಞೆ ಹೊರಡಿಸಿದನು. ಗಂಡು-ಹೆಣ್ಣುಗಳ ನಡುವೆ ಇರಬೇಕಾದ ವಯಸ್ಸಿನ ಅಂತರ ಹನ್ನೆರಡು ವರ್ಷಗಳಷ್ಟು ಮಾತ್ರವೇ ಇರಬೇಕು. ಅದಕ್ಕೆ ಮೇಲ್ಪಟ್ಟಿದ್ದರೆ ಆ ವಿವಾಹವು ಶಾಸನಸಮ್ಮತವಾಗುವುದಿಲ್ಲ ಎಂದು ಘೋಷಿಸಿದನು. ಈ ಹಿನ್ನಲೆಯಲ್ಲಿ ವೃದ್ಧನಾದವನು ಎಳೆಯ ವಯಸ್ಸಿನ ಹುಡುಗಿಯನ್ನು ಮದುವೆಯಾಗಬಹುದೆ ಎಂಬ ವಿಷಯದಲ್ಲಿ ಎಲ್ಲರೂ ಮೌನವಾಗಿದ್ದಂತೆ ತೋರುತ್ತದೆ. ಈ ಬಗೆಯ ವರಸಾಮ್ಯ ಹೊಂದದ ವಿವಾಹಗಳನ್ನು ಅಕ್ಬರನಾಗಲಿ ಮತ್ತಾರೇ ಆಗಲಿ ನಿಷೇಧಿಸಲು ಪ್ರಯತ್ನಿಸಿದ್ದು ಕಂಡು ಬರುವುದಿಲ್ಲ.

ವಿದ್ಯಾಭ್ಯಾಸ : ಮಧ್ಯಯುಗದಲ್ಲಿ ಸ್ತ್ರೀ ವಿದ್ಯಾಭ್ಯಾಸವು ಹಲವು ಕಾರಣಗಳಿಂದ ಹಿನ್ನೆಡೆಗೆ ಬಂದಿತು. ಹೆಣ್ಣು ಮಕ್ಕಳಿಗೆ ಈ ಮೊದಲು ಸಂಗೀತ ನೃತ್ಯ ಮುಂತಾದ ಲಲಿತಕಲೆಗಳನ್ನು ಬಹಳ ಆಸ್ಥೆಯಿಂದ ಕಲಿಸುತ್ತಿದ್ದರು. ಆದರೆ ಕಾಲಾಂತರದಲ್ಲಿ ಅದು ದೇವದಾಸಿಯರ ಕಲೆ ಎಂಬ ಹಿನ್ನಲೆಯನ್ನು ಪಡೆದು ಸುಸಂಸ್ಕೃತ ಕುಟುಂಬದ ಮಕ್ಕಳು ಆ ಕಲೆಯತ್ತ ಮನಸ್ಸು ಕೊಡದಂತಾಯಿತು. ನಮ್ಮ ನಾಡಿನಲ್ಲಿ ಪ್ರಚಾರಕ್ಕೆ ಬಂದ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಸಿದ್ಧಾಂತಗಳ ಸೂಕ್ಷ್ಮ ಚಿಂತನೆಯಲ್ಲಿ ಸ್ತ್ರೀಯರಾರೂ ಭಾಗವಹಿಸಿದಂತೆ ತೋರುವುದಿಲ್ಲ. ಅದಕ್ಕೆ ಅವರ ವಿದ್ಯಾಭ್ಯಾಸದ ಕೊರತೆಯೆ ಕಾರಣವಾಗಿರಬೇಕು. ಮುಸಲ್ಮಾನರ ದಾಳಿಗಳ ತರುವಾಯದಲ್ಲಂತೂ ಹೆಣ್ಣುಮಕ್ಕಳು ವಿದ್ಯಾವತಿಯರಾಗುವುದು ವಿರಳವಾಗಿಬಿಟ್ಟಿತು. ಆದರೆ ಆಧ್ಯಾತ್ಮಿಕ ಚೈತನ್ಯದಿಂದ ತುಂಬಿ ತುಳುಕಿದ ಕೆಲವು ಸ್ತ್ರೀಚೇತನಗಳು ಭಕ್ತಿಯ ಆಕಾಶದಲ್ಲಿ ಧ್ರುವನಕ್ಷತ್ರದಂತೆ ಮೂಡಿಬಂದುವು. ಭಕ್ತಿ ಚಳುವಳಿಯಲ್ಲಿ ರಾಜಾಸ್ಥಾನದ ಮೀರಾಬಾಯಿ, ಮಹಾರಾಷ್ಟ್ರದ ಜನಾಬಾಯಿ, ಕನ್ನಡದ ಅಕ್ಕಮಹಾದೇವಿ, ತಮಿಳುನಾಡಿನ ಆಂಡಾಳ್ ಈ ಮೊದಲಾದವರು ಭಕ್ತಿಪಂಥವನ್ನು ಬೆಳಗಿದರು.[೮] ಸಮಾಜದ ಎಲ್ಲ ಕಟ್ಟುಪಾಡುಗಳನ್ನು ಅವರು ಮೀರಿನಿಂತರು. ಪಾಶ್ಚಾತ್ಯರಲ್ಲಿ ಮಹಿಳೆಯ ಸತಿತ್ವ, ಸ್ತ್ರೀತನ ಆದರ್ಶ ಸತಿಯಲ್ಲಿ ಕೇಂದ್ರೀಕೃತವಾಗಿದೆ. ಭರತ ಖಂಡದಲ್ಲಿ ಸಾಧಾರಣವಾಗಿ ಮನುಷ್ಯನಿಗೆ ಸ್ತ್ರೀತನದ ಶಕ್ತಿಯೆಲ್ಲಾ ಮಾತೃತ್ವದಲ್ಲಿ ಕೇಂದ್ರೀಕೃತವಾಗಿದೆ. ಪಾಶ್ಚಾತ್ಯ ಗೃಹದಲ್ಲಿ ಸತಿ ಆಳುವವಳು. ಹಿಂದೂ ಗೃಹದಲ್ಲಿ ತಾಯಿ ಆಳುವವಳು.

ವೇದಯುಗದಿಂದ ಸಮಕಾಲದವರೆಗೆ ಸ್ತ್ರೀಯರ ಸ್ಥಾನಮಾನಗಳ ಒಟ್ಟು ಸ್ವರೂಪವೇನೆಂಬುದನ್ನು ನಿರ್ದಿಷ್ಟವಾಗಿ ಕಟ್ಟಿಕೊಡುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಸ್ತ್ರೀ ವಿಷಯಕವಾಗಿ ವಿಶಿಷ್ಟ ಗೌರವ ಪ್ರಕಟವಾಗುತ್ತಿದ್ದ ಸಮಕಾಲದಲ್ಲೆ ಅವಳನ್ನು ಹೀನೈಸುತ್ತಿದ್ದ ವೃತ್ತಾಂತಗಳೂ ಇವೆ. ಅವಳಿಗೆ ಏನೂ ಸ್ವಾತಂತ್ರ್ಯವಿಲ್ಲ ಎಂದು ಘೋಷಿಸುತ್ತಿರುವಾಗಲೇ ಎಲ್ಲ ಸಂಪತ್ತನ್ನೂ ತಂದು ಅವಳ ಕಾಲಬುಡದಲ್ಲಿ ಸುರಿಯುತ್ತಿದ್ದ ವಿಚಾರಗಳಿವೆ. ಸಮಸ್ತ ಜವಾಬ್ದಾರಿಗಳನ್ನು ಅವಳ ತಲೆಯ ಮೇಲೆ ಹೊರಿಸಿ ನಿನ್ನನ್ನು ಬಿಟ್ಟರೆ ಇನ್ನಿಲ್ಲ ಎಂದು ಹೇಳಿದ ವಿಚಾರಗಳಿವೆ. ಬಾಲ್ಯದಲ್ಲಿಯೇ ವಿವಾಹ ಮಾಡಿ ಗಂಡನು ತೀರಿಹೋದರೆ ನರಕಕ್ಕೆ ತಳ್ಳಿದ ಸನ್ನಿವೇಶಗಳಿವೆ. ಅದರೊಟ್ಟಿಗೆ ಅವಳು ತನ್ನಷ್ಟಕ್ಕೇ ತಾನು ಶಾಂತಿಮಯವಾದ ತ್ಯಾಗಜೀವನವನ್ನು ನಡೆಸಿದ ವಿವರಗಳು ಇವೆ. ಎಲ್ಲಿಂದ ಎಲ್ಲಿ ಹೋದರೂ ಸ್ತ್ರೀಯರ ವಿಷಯಕವಾಗಿ ದ್ವಿಮುಖ ವರ್ತನೆ ತಪ್ಪುವುದಿಲ್ಲ. ಅವಳೆಂದು ಸುಖಿಯಾಗಿದ್ದುದಿಲ್ಲ ಎಂದು ಒಮ್ಮೆ ಅನಿಸಿದರೆ, ಮತ್ತೊಮ್ಮೆ ಅವಳಷ್ಟು ಸುಖಿ ಇನ್ನಾರಿದ್ದರು ಎಂಬ ಭಾವನೆ ಮೂಡುತ್ತದೆ. ಪ್ರಕೃತಿಯೇ ಪುರುಷ ಮತ್ತು ಸ್ತ್ರೀ ಎಂಬ ಭಿನ್ನ ಭೇದವನ್ನಿಟ್ಟು ಸ್ತ್ರೀಯನ್ನು ಪುರುಷನಿಗಿಂತ ಹೆಚ್ಚು ದುಃಖವನ್ನುಣ್ಣುವಂತೆ ಮಾಡಿದೆ ಎಂದು ಬೇಕಾದರೆ ಹೇಳಬಹುದು. ಈ ಕಾಲದಲ್ಲಿ ಸ್ತ್ರೀಯರನ್ನು ರಕ್ಷಿಸಲು ಪ್ರಯತ್ನಿಸುತ್ತ ಅವಳ ಸ್ಥಾನವನ್ನು ಮೊಟಕುಗೊಳಿಸಿದ್ದು ಕಂಡುಬರುತ್ತದೆ. ಅನಂತರ ಅದನ್ನು ಸರಿಪಡಿಸಲು ಪ್ರಯತ್ನಿಸಿ ಯಶಸ್ವಿಯಾಗದಿರುವುದು ಕಾಣುತ್ತದೆ. ಪುರುಷ ಮತ್ತು ಸ್ತ್ರೀ ಭೇದ ನಿಸರ್ಗ ನಿರ್ಮಿತ. ಹೆಣ್ಣು ಸಂತಾನ ಫಲಕೊಡುವವಳಾಗಿದ್ದರಿಂದ ಅವಳು ಗಂಡಿಗಿಂತ ಯಾವಾಗಲೂ ಶ್ರೇಷ್ಠಳೆ. ಒಳಿತು ಹಾಗೂ ಕೆಡಕು ಎಂಬ ಸಮಸ್ಯೆ ಯಾವ ಕಾಲದಲ್ಲಿಯೂ ಇದ್ದದ್ದೆ.

ಸ್ತ್ರೀ ಶೋಷಿತರಲ್ಲಿ ಶೋಷಿತಳು. ಈ ನೆಲದಲ್ಲಿ ಮೊದಲು ಮಾತೃಪ್ರಧಾನ ವ್ಯವಸ್ಥೆಯಿತ್ತು. ತಾಯಿ ಇಂದಿಗೂ ಉತ್ತಮಿಕೆಯನ್ನು ಸಾಧಿಸಲು ಮಾನವರನ್ನು ತಿದ್ದುತ್ತಲೇ ಸಾಗಿದ್ದಾಳೆ. ಹೀಗೆ ತಾಯಿ ಈ ನೆಲದ ಸಂಸ್ಕೃತಿ, ನಾಗರಿಕತೆಗೆ ತವರಾಗಿದ್ದಾಳೆ. "ಈ ಜಗದ ಪೂರ್ಣ ಸತ್ಯವನ್ನು ತಿಳಿಯಲು ಪ್ರಯತ್ನಿಸುವ ಗಂಡಸು ವ್ಯಕ್ತಿ ತನ್ನ ಪ್ರಕೃತಿ ಸಹಜ ಇನ್ನೊಂದು ಮುಖವಾದ ಹೆಣ್ಣನ್ನು ತಿಳಿಯಬೇಕು. ಹಾಗೆ ಪ್ರಯತ್ನಿಸದಿದ್ದರೆ ತನ್ನನ್ನು ಸಂಪದ್ಭರಿತಗೊಳಿಸುವ ಪುನರ್ ನವೀಕರಿಸುವ ಮೂಲ ಚೇತನದಿಂದ ವಂಚಿತನಾಗುತ್ತಾನೆ" ಎಂದು ಪ್ಲೊರಿಡಾ ಸ್ಕಾಟ್ ಮ್ಯಾಕ್ಸ್‌ವೆಲ್ ಅವರು ತಿಳಿಸಿದ್ದಾರೆ.[૮]

ಕಲ್ಪನೆಗಳು–ಒಂದು ಮೂಲವಸ್ತು ಪುರುಷ ಮತ್ತೊಂದು ಸ್ತ್ರೀ ಎಂಬ ಕಲ್ಪನೆ ಕೆಳಗಿನಿಂದ ಅಂದರೆ ಮನುಷ್ಯನ ಮೆದುಳಿನಿಂದ ಬಂದಿದೆ. ಅದಕ್ಕೆ ಸ್ತ್ರೀ–ಪುರುಷ ಎಂಬುದಕ್ಕಿಂತ ಬೇರೆ ಕಲ್ಪನೆಯೇ ಬರುವುದಿಲ್ಲ. ಏಕೆಂದರೆ ಮನುಷ್ಯನಿನ್ನೂ ಪ್ರಾಣಿಯಾಗಿದ್ದಾನೆ ತಿಳಿಯಿತೆ?" ಎಂದು ಹೇಳಿದ್ದಾರೆ.

'The whole subject of marriage is put on an ethical plane. Marriage should be treated as a sacrament. In it, two complementary halves are brought together to make a complete whole. It is more of psychic bond rather than the merely physical. The husband is born of the wife in his child. The three become physically interwined'(ಮನುಸ್ಮೃತಿ, IX8).ಈ ವಿಚಾರವನ್ನೇ "ನಾನು–ನೀನು ಜೀವದ ಎರಡು ಬೇಳೆ; ಬೇಳೆಯಾದರೆ ಬೆಳೆ ಇಲ್ಲ; ಸಾವು–ಜೀವನ ಬೇರೆ ಇಲ್ಲ" ಎಂದು ಜೀಬ್ರಾನ್ ಹೇಳಿದ್ದಾನೆ. ಹೆಣ್ಣು ಎಂದು ಗಂಡಸಿನ ಅಧೀನಳಾದವಳೋ ಅಂದಿನಿಂದಲೂ ಆಕೆ ಹತೋಟಿ ಮೀರಿ ಬೆಳೆಯದಂತೆ ತನ್ನ ಕಣಿವೆಯೊಳಗೆ ಇರಿಸಿಕೊಳ್ಳುವ ಪ್ರಯತ್ನವನ್ನು ಸಮಾಜ ಕೆಲವೊಂದು ಆದರ್ಶ ಮೌಲ್ಯಗಳ ಮೂಲಕ ನಡೆಸಿಕೊಂಡು ಬಂದಿದೆ. ಪಿತೃಪ್ರಧಾನ ಸಾಮಾಜಿಕ ಸಂಸ್ಥೆಗಳಲ್ಲಿ ವಿವಾಹವೂ ಒಂದು. ಈ ಸಂಸ್ಥೆಯಲ್ಲಿ ಯಾವಾಗಲೂ ಪುರುಷನೇ ಪ್ರಧಾನ ಅಥವಾ ಯಜಮಾನ. ಹೆಣ್ಣು ಅವನ ಸೇವಕಿಯಷ್ಟೇ. ವಿವಾಹಕ್ಕೆ ಮೊದಲಾಗಲಿ ವಿವಾಹದ ನಂತರವಾಗಲಿ ಹೆಣ್ಣಿಗೆ ತನ್ನದು ಎಂಬ ಸ್ವಂತ ನೆಲೆಯಿಲ್ಲ. ಆಕೆ ಯಾವಾಗಲೂ ಗಂಡಸನೊಬ್ಬನ ಯಜಮಾನಿಕೆ ಅಥವಾ ಆಶ್ರಯದಲ್ಲಿರಬೇಕು ಎಂಬುದನ್ನು ನಮ್ಮ ವೇದಶಾಸ್ತ್ರಗಳು ಹೇಳುತ್ತವೆ. ಮುಂದುವರೆದು ಹೇಳಬೇಕೆಂದರೆ ಹೆಂಡತಿಯಾದವಳು

ಕಾರ್ಯೇಶು ದಾಸಿ
ಕರಣೇಶು ಮಂತ್ರಿ
ಶಯನೇಶು ವೇಶ್ಯೆ
ರೂಪೇಶು ರಂಭು
ಭೋಜೇಶು ಮಾತಾ

ಕ್ಷಮಯಾ ಧರಿತ್ರಿ ಯಂತೆ ಗಂಡನ ಶ್ರೇಯಸ್ಸಿಗಾಗಿ ಆರು ಪಾತ್ರಗಳನ್ನು ವಹಿಸಬೇಕು ಎಂದು ಹೇಳುತ್ತದೆ ಮನುಸ್ಮೃತಿ. ಕ್ರಿಸ್ತಪೂರ್ವದಿಂದ ಕ್ರಿಸ್ತಶಕದ ಇಂದಿನವರೆಗೂ ಹೆಣ್ಣಿನ ಸ್ಥಾನದಲ್ಲಿ ಯಾವುದೇ ರೀತಿಯ ಬದಲಾವಣೆಗಳಾಗಿಲ್ಲ.

ಪುರುಷ ಪ್ರದಾನ ಸಮಾಜದಲ್ಲಿ ಹೆಣ್ಣು ವಿವಾಹಕ್ಕೂ ಮೊದಲು ಮತ್ತು ವಿವಾಹದ ನಂತರವೂ ಶೀಲವತಿಯಾಗಿ, ಏಕಪತಿವ್ರಸ್ಥಳಾಗಿ, ಪಾತಿವ್ರತ್ಯವನ್ನು ಕಾಯ್ದುಕೊಳ್ಳಬೇಕು. ಆದರೆ ವಿವಾಹ ಮತ್ತು ಲೈಂಗಿಕತೆಗೆ ಸಂಬಂಧಿಸಿದಂತೆ ಗಂಡಸಿಗೆ ಎಲ್ಲೇ ಮೀರಿದ ಸ್ವತಂತ್ರವಿದೆ. ಅವನು ವಿವಾಹಿತನಾಗಿರಲಿ, ಆಗಲೇ ಇರಲಿ ತಾನು ಬಯಸಿದ ಬಯಸಿದಷ್ಟು ಹೆಣ್ಣುಗಳೊಂದಿಗೆ ಲೈಂಗಿಕ ಸಂಪರ್ಕವನ್ನು ಹೊಂದಬಹುದು. ಈ ವಿಷಯದಲ್ಲಿ ಅವನಿಗೆ ಯಾವುದೇ ಲಂಗುಲಗಾಮಿಲ್ಲ. ಇದನ್ನು ಸಮಾಜ ಕೂಡ ಮನ್ನಿಸುತ್ತದೆ. ಹೆಣ್ಣನ್ನು ತನ್ನ ಆಸೆ ಪೂರೈಸಿಕೊಳ್ಳುವುದಕ್ಕಾಗಿ ಬಳಸಿಕೊಳ್ಳುವವನು ಗಂಡಸೇ. ಆದರೂಸಮಾಜದ ದೃಷ್ಟಿಯಲ್ಲಿ ಅದಕ್ಕೆ ಹೊಣೆಗಾರಳು ಮಾತ್ರ

ಹೆಣ್ಣೇ. ಯಾಕೆಂದರೆ ಇದು ಪುರುಷ ನಿರ್ಮಿತ ಸಮಾಜವಾದುದರಿಂದ 'ಆನೆ ತುಳಿದದ್ದೇ ಹಾದಿ' ಎಂಬಂತೆ ಅವನು ಮಾಡಿದ್ದೇ ಸರಿ.

ಲಿಂಗತಾರತಮ್ಯ : ಲಿಂಗತಾರತಮ್ಯ ಎನ್ನುವುದು ಇಂದು ನಿನ್ನೆಯದಲ್ಲ. ಇದು ಕಾಲ, ದೇಶ, ಜಾತಿ ಜನಾಂಗಗಳ ಎಲ್ಲೆಯನ್ನು ಮೆಟ್ಟಿ ನಿಂತಂಥ ಪ್ರವೃತ್ತಿಯಾಗಿರುವುದರಿಂದ ಸಮಾಜದ ಪ್ರತಿಯೊಂದು ವಲಯದಲ್ಲಿಯೂ ಅದರ ಇರುವಿಕೆಯನ್ನು ಕಾಣಬಹುದು. ಹೆಣ್ಣು ಹುಟ್ಟಿನಿಂದ ಸಾಯುವವರೆಗೂ ಸಮಾಜ ರೂಪಿಸಿದ ನೀತಿ ನಿಯಮ, ರೂಢಿಸಂಪ್ರದಾಯ, ಕಾನೂನು ಕಟ್ಟಳೆಗಳ ಚೌಕಟ್ಟಿನಲ್ಲಿಯೇ ಬದುಕುತ್ತಿರುತ್ತಾಳೆ. ಅವಳ ಪ್ರತಿಯೊಂದು ಚಲನ, ವಲನವನ್ನು ಸಮಾಜ ನಿಯಂತ್ರಿಸುತ್ತಿರುತ್ತದೆ. ಮೇಲುನೋಟಕ್ಕೆ ಗಂಡು ಹೆಣ್ಣು ಸಮಾನರೆನಿಸಿದರು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಲಿಂಗತಾರತಮ್ಯದ ಬೇರು ಎಷ್ಟರಮಟ್ಟಿಗೆ ಆಳವಾಗಿ ಹಾಗೂ ಬಲವಾಗಿ ಇದೆ ಎಂಬುದು ತಿಳಿಯುತ್ತದೆ.

ಪಿತೃಪ್ರಧಾನ ಸಮಾಜ ವ್ಯವಸ್ಥೆಯು ಹೆಣ್ಣು-ಗಂಡುಗಳ ಜೈವಿಕ ಭಿನ್ನತೆಯನ್ನು ಆಧರಿಸಿ ಪ್ರಜ್ಞಾಪೂರ್ವಕವಾದಂತಹ ಒಂದು ಪಕ್ಷಪಾತವನ್ನು ಎಲ್ಲ ಜ್ಞಾನಶಾಖೆಗಳಲ್ಲಿ ಮಾಡಿರುವಂತೆ 'ಭಾಷೆ'ಯಲ್ಲಿಯೂ ಮಾಡಿದೆ. ಭಾಷೆ ಸಮಾಜ ಸೂಚಕ. ವಾಸ್ತವವಾಗಿ ಭಾಷೆ ಏನನ್ನೂ ಮಾತನಾಡುವುದಿಲ್ಲ. ಬದಲಿಗೆ ವ್ಯಕ್ತಿಯಿಂದ ಅಭಿವ್ಯಕ್ತಿಗೊಳ್ಳುವ ಮಾತುಗಳೆಲ್ಲವೂ ಆ ಸಮಾಜವನ್ನು ಪ್ರತಿನಿಧಿಸುತ್ತದೆ. ಯಾವುದೇ ತೆರನಾದ ಭಾಷಾಂಶಗಳಲ್ಲಿಯೂ ಸಹ ಮಹಿಳೆ ಎಲ್ಲಿಯೂ ಗೋಚರವಾಗುವುದಿಲ್ಲ. ಪುರುಷ ನಿರ್ಮಿತ ಭಾಷೆಯಲ್ಲಿ ಹೆಣ್ಣು ಕೇವಲ ಒಂದು ಸಾಧನವಾಗಿ ಪುರುಷ ವ್ಯವಸ್ಥೆಯ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾಳೆ ಅಷ್ಟೇ.

ಸಮಾಜವು ಗಂಡು ಹೆಣ್ಣುಗಳ ವಿವಾಹದ ಹಂತದಲ್ಲಿ ತೋರುವ ತಾರತಮ್ಯದ ಅಂಶಗಳು ವ್ಯಕ್ತಿಯ ಹೆಸರುಗಳನ್ನು ಹೇಳುವಾಗ ಆಡುವ ಭಾಷೆಯಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಮದುವೆಯಾದ ಹೆಣ್ಣನ್ನು 'ಶ್ರೀಮತಿ' ಎಂದೂ ಮದುವೆಯಾಗದ ಹೆಣ್ಣನ್ನು 'ಕುಮಾರಿ' ಎಂದೂ ಗುರುತಿಸಲಾಗುತ್ತದೆ. ಆದರೆ ಗಂಡಸಿಗೆ ವಿವಾಹವಾಗಲಿ ಬಿಡಲಿ ಅವನು ಯಾವಾಗಲೂ 'ಶ್ರೀ'ಯಾಗಿಯೇ ಉಳಿದಿರುತ್ತಾನೆ. ಅವನು ವಿವಾಹಿತ ಅಥವಾ ಅವಿವಾಹಿತ ಎಂದು ಗುರುತಿಸುವ ಪ್ರತ್ಯೇಕ ಪದ ಭಾಷೆಯಲ್ಲಿ ಇನ್ನೂವರೆಗೂ ರಚನೆಯಾಗಿಯೇ ಇಲ್ಲ. ಆದರೆ ಹೆಣ್ಣು ವಿವಾಹವಾಗುವವರೆಗೂ ಕುಮಾರಿಯಾಗಿದ್ದು ವಿವಾಹದ ನಂತರ ಶ್ರೀಮತಿಯಾಗುತ್ತಾಳೆ.

ಇತ್ತೀಚೆಗಷ್ಟೇ ಮಹಿಳೆ ವಿಸ್ಮೃತಿಯಿಂದ ಮೈಕೊಡವಿಕೊಂಡು ಮೇಲೇಳುತ್ತಿದ್ದಾಳೆ. ಗಂಡಸಿನಷ್ಟೇ ಸಮಾನವಾದ ಕೆಲಸ ಕಾರ್ಯಗಳನ್ನು ಮಾಡಿ ತನ್ನ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಾಳೆ. ಈ ಅಂಶವನ್ನು ಪದಕೋಶದಲ್ಲಾದ ಬದಲಾವಣೆಯಲ್ಲಿ ಗಮನಿಸಬಹುದು. ವೃತ್ತಿ ಕಸುಬುಗಳಿಗೆ ಸಂಬಂಧಿಸಿದಂತೆ ಕೆಲವು ಸಾಮಾಜಿಕ ಪರಿವರ್ತನೆಗಳಾಗುತ್ತಿವೆ ಎಂಬುದರ ಸೂಚಕವಾಗಿ ಲೇಡಿ,

ವುಮ್ಯಾನ್, ಸ್ತ್ರೀ, ಮಹಿಳಾ ಎಂಬ ವಿವರಗಳನ್ನು ಹಚ್ಚಲಾಗುತ್ತಿದೆ. ಅಥವಾ ಮಂತ್ರಿಣಿ, ಅಧ್ಯಕ್ಷೆ ಸರದಾರಿಣಿ ಎಂಬಂತಹ ಹೊಸ ರೂಪಗಳನ್ನು ಬಳಸಲಾಗುತ್ತಿದೆ. ಪಿತೃಪ್ರಧಾನ ವ್ಯವಸ್ಥೆಯೊಳಗೆ ಸಂವಹನದ ಹಂತದಲ್ಲಿ ಮಹಿಳೆ ಅದೃಶ್ಯವಾಗುತ್ತಿದ್ದುದನ್ನು ಹಲವಾರು ವಲಯಗಳಲ್ಲಿ ಕಾಣಬಹುದು.

ಮನಸ್ಸಿನ ಪ್ರಬಲ ಗುಣಗಳು ಗಂಡಸಿನಲ್ಲಿಯೂ ದೈಹಿಕ ಮತ್ತು ಮಾನಸಿಕ ದೌರ್ಬಲ್ಯದ ಗುಣಗಳು ಹೆಂಗಸಿನಲ್ಲಿ ಇರುವುದನ್ನು ಈ ಪದಗಳು ಬಿಂಬಿಸುತ್ತವೆ. ಸಮಾಜದ ಪ್ರಕಾರ ಗಂಡಸಿನ ಗುಣಗಳು ಹೆಂಗಸಿನಲ್ಲಿಯೂ ಹೆಂಗಸಿನ ಗುಣಗಳು ಗಂಡಸಿನಲ್ಲಿರುವುದು ಅವಗುಣಗಳೆನಿಸುತ್ತವೆ. ಪುರುಷ ಪ್ರಧಾನವಾದ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಹಲವು ವಿಭಿನ್ನ ನೆಲೆಗಳಲ್ಲಿ ಶೋಷಣೆಗೆ ಒಳಗಾಗಿದ್ದಾಳೆ. ಮೇಲ್ನೋಟಕ್ಕೆ ಸಮಾಜದಲ್ಲಿ ರೂಪಿತವಾಗಿರುವ ರೂಢಿ, ನಿಯಮ, ಕಾಯ್ದೆ ಕಾನೂನುಗಳನ್ನು ಹೆಣ್ಣು-ಗಂಡು ಇಬ್ಬರಿಗೂ ಸಮಾನವಾದ ಸ್ವತಂತ್ರವನ್ನು ಹಕ್ಕುಗಳು ಕೊಟ್ಟಿವೆ ಎಂಬಂತೆ ಕಂಡರೂ ಬಳಕೆಯ ನೆಲೆಯಲ್ಲಿ ವಿಭಿನ್ನವಾಗಿ ಅನ್ವಯವಾಗುತ್ತವೆ ಎಂಬುದು ವಿಪರ್ಯಾಸದ ಸಂಗತಿ. ಈ ರೀತಿಯ ಲಿಂಗತಾರತಮ್ಯದ ನೆಲೆಯನ್ನು ಪ್ರತಿಯೊಂದು ವಲಯದಲ್ಲಿಯೂ ಗುರುತಿಸಬಹುದು.

ಸಮಾಜದಲ್ಲಿ ಸಂಸಾರ ಒಂದು ಪ್ರಮುಖ ಘಟಕ. ಒಂದು ಸುಂದರ ಸಂಸಾರ ಚಿತ್ರದ ಕಲ್ಪನೆ ಬಂದಾಗ ಅದರಲ್ಲಿ ಗಂಡು-ಹೆಣ್ಣು ಇಬ್ಬರೂ ಮುಖ್ಯರಾಗುತ್ತಾರೆ. ಆದರೆ, ಸಮಾಜದಲ್ಲಿ ಗಂಡು ಹೆಣ್ಣನ್ನು ಗುರುತಿಸುವ ರೀತಿ ಬೇರೆಯೇ ಆಗಿದೆ. ಆಕೆ ಎಂದೆಂದಿಗೂ ಪುರುಷನ ದಾಸಿ, ಅವನ ಭೋಗದ ವಸ್ತು ಎನ್ನುವ ಭಾವನೆಯೇ ಹೆಚ್ಚಾಗಿ ಬೇರೂರಿದೆ. ಹೆಣ್ಣನ್ನು ಗುರುತಿಸುವ ಪುರುಷವರ್ಗವನ್ನು ಮೂರು ರೀತಿಯಲ್ಲಿ ವಿಭಜಿಸಿ ನೋಡಬಹುದು. ಒಂದು ತೀರಾ ಸಾಮಾನ್ಯ ಸ್ತರದ ಪುರುಷರ ಗುಂಪು, ಎರಡು, ಸ್ವಲ್ಪ ವಿವೇಚನೆ ಇರುವ ಪುರುಷ ಸಮೂಹ, ಮೂರು ಸಂಸ್ಕಾರಗೊಂಡ ಪುರುಷವರ್ಗ. ಇದರಲ್ಲಿ ಒಂದನೆಯ ವರ್ಗಕ್ಕೆ ಸೇರಿದವನು ಹೆಣ್ಣನ್ನು ಯಾವಾಗಲೂ ತನಗಿಂತ ಕೀಳು ಎಂದು ಭಾವಿಸುತ್ತಾನೆ. ಅದೇ ರೀತಿ ಅವಳೊಡನೆ ವರ್ತಿಸುತ್ತಾನೆ. ಎರಡನೆಯ ವರ್ಗದ ಪುರುಷ ಸ್ವಲ್ಪವಾದರೂ ವಿವೇಚನೆಯಿಂದ ಆಲೋಚಿಸುವವನು, ಹೆಣ್ಣು ತನಗೆ ಸರಿಸಮಾನಳು ಎಂದು ಭಾವಿಸುತ್ತಾನೆ. ಮೂರನೆ ವರ್ಗದ ಸಂಸ್ಕಾರಗೊಂಡ ಮನಸ್ಸಿನ ಗಂಡು, ಹೆಣ್ಣನ್ನು ಉದಾತ್ತತೆಯಿಂದ ಗೌರವಿಸುತ್ತಾನೆ.

ದಾಂಪತ್ಯದಲ್ಲಿ ಸ್ನೇಹವನ್ನು ಪ್ರತಿಪಾದಿಸಿ ಸ್ತ್ರೀಪುರುಷರಿಬ್ಬರು ಪರಸ್ಪರ ಸಮ, ಒಂದೇ ದೇಹದ ಎರಡು ಭಾಗಗಳು. ನಮ್ಮ ಸಾಮಾಜಿಕ ವ್ಯವಸ್ಥೆಗಳು ಪುರುಷ ಪರವಾಗೇ ಇದ್ದುದರ ಕಾರಣವಾಗಿ, ಸದ್ದಿಲ್ಲದೆ ಹೆಣ್ಣಿಗೆ ಬೌದ್ಧಿಕತೆಯನ್ನು ನಿರಾಕರಿಸಲಾಯಿತು. ಇದರಿಂದ ತನಗಾದ, ಆಗುತ್ತಿರುವ ಅನ್ಯಾಯ, ಅವಹೇಳನ, ದೌರ್ಜನ್ಯಗಳನ್ನೂ ಹೇಳಲಾರದ ಮೂಗುಬ್ಬಸದ ಸ್ಥಿತಿಯಲ್ಲಿ ಹೆಣ್ಣು ಬದುಕಬೇಕಾಯಿತು. ಅಧೀನ ಸಂಸ್ಕೃತಿಯ ಇಲ್ಲವೆ ಯಜಮಾನ ಸಂಸ್ಕೃತಿಯಲ್ಲಾಗಲಿ, ಪ್ರಭುತ್ವ ಸಂಸ್ಕೃತಿಯ ನೆಲೆಯಲ್ಲಾಗಲಿ, ಸ್ತ್ರೀಯ ಪಾತ್ರ ಬದಲಾಗಲೇ ಇಲ್ಲ. ಎಲ್ಲಾ ಕಾಲದಲ್ಲೂ ಹೆಣ್ಣು

ಪುರುಷನ ನೆರಳು ಮಾತ್ರವಾದಳು. ಹಾಗೆಂದೇ ನಮ್ಮ ವ್ಯವಸ್ಥೆ ನಿರ್ಧರಿಸಿಬಿಟ್ಟಿತು. ಇದೆಲ್ಲ ನಿನ್ನೆಯ ಇತಿಹಾಸ ಮಾತ್ರವಲ್ಲ, ಹೆಚ್ಚು ಕಡಿಮೆ ಇಂದಿನ ವರ್ತಮಾನವೂ ಹೌದು.

ಕುವೆಂಪು ಅವರು "ನನ್ನ ದೃಷ್ಟಿಯಲ್ಲಿ ಹೆಣ್ಣು ಕೇವಲ ಮಾನುಷಿಯಲ್ಲ; ಅಬಲೆಯೂ ಅಲ್ಲ; ಅವಳೊಂದು ಮಹಾಶಕ್ತಿ" ಎನ್ನುತ್ತಾರೆ.[೧೦] ಕುವೆಂಪು ಅವರು ಹೆಣ್ಣನ್ನು ಸಮಗ್ರ ನೆಲೆಯಲ್ಲಿ ಪರಿಭಾವಿಸುತ್ತಾರೆ. ಆಕೆಯನ್ನು ಪ್ರಕೃತಿಯೊಂದಿಗೆ ಸಮೀಕರಿಸುವ ಮೂಲಕ ಹೊಸ ವ್ಯಾಖ್ಯಾನವನ್ನು ಮಾಡುತ್ತಾರೆ. ಕುವೆಂಪು ಅವರ ಪಾಲಿಗೆ ಪ್ರಕೃತಿ ಬದುಕಿನ ಜೀವನಮೌಲ್ಯ, ಅಭಿವ್ಯಕ್ತಿಯ ಮೂಲಧಾತು, ಚೈತನ್ಯ, ಸ್ಫೂರ್ತಿ ಎಲ್ಲಾ, ಅವರಿಗೆ ಪ್ರಕೃತಿ ಬೇರೆ ಅಲ್ಲ, ಹೆಣ್ಣು ಬೇರೆ ಅಲ್ಲ. ನಿಸರ್ಗ, ಭೂಮಿ, ನದಿ, ಭಾಷೆ, ಶಾರದಾದೇವಿ, ಭಾರತಾಂಬೆ ಎಲ್ಲದರಲ್ಲೂ ಹೆಣ್ಣನ್ನು ಕಾಣುತ್ತಾರೆ. ಪ್ರಕೃತಿಗೆ ಜಗತ್ತನ್ನು ಪೊರೆಯುವಂಥ ಶಕ್ತಿ ಇರುವಂತೆ; ಹೆಣ್ಣಿಗೆ ಮನುಕುಲವನ್ನು ಬೆಳೆಸುವ, ಸಂರಕ್ಷಿಸುವ ಶಕ್ತಿಯೂ ಇದೆ. ಪ್ರಕೃತಿ ಋತುಮಾನಕ್ಕನುಗುಣವಾಗಿ ಅನೇಕ ಆಯಾಮಗಳನ್ನು ಪಡೆದುಕೊಂಡರೆ; ಹೆಣ್ಣು ವಯೋಮಾನಕ್ಕನುಸಾರವಾಗಿ ಅನೇಕ ಸ್ಥಿತ್ಯಂತರಗಳನ್ನು ಪಡೆದುಕೊಳ್ಳುತ್ತಾಳೆ. ಮೂಲತಃ ಆಕೆ ಉತ್ಪಾದನೆಯ ಶಕ್ತಿಯಾಗಿದ್ದಾಳೆ.

ಸ್ತ್ರೀತ್ವದ ದೃಷ್ಟಿಕೋನವು ಬಹುತ್ವವುಳ್ಳ ಚಿಂತನಾಕ್ರಮದಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತದೆ. ದ್ವಿತ್ವವನ್ನು ನಿಂತು ಸಾಧಿಸುವ ತರ್ಕವನ್ನು ಅದು ಗಂಡಸಿನ ಚಿಂತನಾಕ್ರಮವಾಗಿ ಗುರುತಿಸುತ್ತದೆ. ಶಕ್ತಿಯ ಉನ್ಮತ್ತ ಖಡ್ಗಳ ಝಣ ಝಣತ್ಕಾರದ ನರ್ತನಕ್ಕಿಂತ 'ಕೂಗು ಕರ್ಕಶವಿದು ತಾಳೆ ನಮ್ಮ ಹೇ ತಾಯೆ ಸೈರಿಸೆನು ರಣವಿದು ಕಠೋರ (ಜೋಗುಳ)' ಎಂಬ ಅಹಿಂಸೆಯ ಸೊಲ್ಲು ಆಳದಿಂದ ಕೇಳುತ್ತದೆ. ಹಿಂಸೆಯ ರುದ್ರ ನರ್ತನಕ್ಕಿಂತ ತಾಳಿಸುವ ಗಾಂಧಿಯ ಹೆಣ್ಣು ಮಾರ್ಗ ಅಸಾಧಾರಣ ಪ್ರಭಾವ ಬೀರಲು ಸಾಧ್ಯವಿದೆ ಎನ್ನುವುದನ್ನು ಚರಿತ್ರೆಯೇ ತೋರಿಸಿಕೊಟ್ಟಿದೆ. ರಾಜ ಮಹರಾಜರ ಜೀವನ ಚರಿತ್ರೆಗಳಿಂದಲೂ ತಿಳಿದುಕೊಳ್ಳಬಹುದು.

ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಮಹಿಳಾ ಅಧ್ಯಯನಕ್ಕೆ ಹೆಚ್ಚು ಅವಕಾಶ ದೊರೆತಿರುವುದು ಅಷ್ಟೇ ಅಲ್ಲದೆ, ಭಾರತದ ವಿಶ್ವವಿದ್ಯಾಲಯಗಳಲ್ಲಿಯೂ ಮಹಿಳಾ ಅಧ್ಯಯನಕ್ಕೆ ಮಾನ್ಯತೆ ನೀಡಿರುವುದು ಮಹಿಳಾ ಅಧ್ಯಯನ ಬೆಳವಣಿಗೆಗೆ ಚಾಲನ ಶಕ್ತಿ ಬಂದಂತಾಗಿದೆ. ಇಂದು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಯುಜಿಸಿಯ ಮಾರ್ಗದರ್ಶನದಂತೆ ಮಹಿಳಾ ಅಧ್ಯಯನ ಕೇಂದ್ರಗಳು ಸ್ಥಾಪನೆಗೊಂಡಿರುವುದು ತುಂಬಾ ಆಶಾದಾಯಕ ಸಂಗತಿಯಾಗಿದೆ.

ಸ್ತ್ರೀಪುರುಷನ ನೆರಳು ಎಂಬ ಮಾತು ವರ್ತಮಾನಕ್ಕೆ ಸಂಬಂಧಿಸಿದ್ದಲ್ಲ. ನಮ್ಮ ಪುರಾತನರ ಕೊಡುಗೆ. ರೂಢಿಗತವಾಗಿ ಪರಂಪರೆಯಿಂದ ಬಂದದ್ದು; ಸ್ತ್ರೀಶಕ್ತಿಯನ್ನು ನಡೆಸಿಕೊಂಡ ನಮ್ಮ ವ್ಯವಸ್ಥೆಯು ರೀತಿನೀತಿರಿವಾಜುಗಳ ಪ್ರತೀಕ; ಪುರುಷ ಯಜಮಾನಿಕೆಯ ದರ್ಬಾರಿನ ಸೂಚಕ. ಅದನ್ನು ಅತ್ಯಂತ ಎಚ್ಚರಿಕೆಯಿಂದ ಕಾಯ್ದುಕೊಂಡು ಬಂದ ಪುರುಷರ ತಂತ್ರಗಾರಿಕೆಗೆ ಹಿಡಿದ ಅನೇಕ ಸಾಕ್ಷಿಗಳಲ್ಲಿ ಇದೂ ಒಂದು. ಆದರೆ ಸ್ತ್ರೀಪುರುಷನ ನೆರಳಾಗಲು ಸಾಧ್ಯವೇ? ಎಂಬುದನ್ನು

ಜೈನ ಸಿದ್ಧಾಂತದ ಪರಿಭಾಷೆಯಲ್ಲೇ ಹೇಳುವುದಾದರೆ ವ್ಯವಹಾರ ನಯ, ನಿಶ್ಚಯನಯದ ಮೂಲಕ ಗ್ರಹಿಸಬಹುದೆಂದು ತೋರುತ್ತದೆ. ಆರಂಭದ ಕಾಲಘಟ್ಟದಲ್ಲಿ ಮನುಷ್ಯನಿಗೆ ಆಹಾರ ಹುಡುಕುವಿಕೆ ಮತ್ತು ಸಂರಕ್ಷಿಸಿಕೊಳ್ಳುವಿಕೆ ಎರಡೇ ಜೀವಿತದ ಮುಖ್ಯ ಅಗತ್ಯಗಳಾಗಿದ್ದವು. ಆಗ ಗಂಡು ಹೆಣ್ಣಿನ ಸಂಬಂಧ ಸಮಾನವಾಗಿತ್ತು. ಭಾವನಾತ್ಮಕವಾಗಿತ್ತು. ಶ್ರಮವಿಭಜನೆ ಶಾರೀರಿಕ ಶಕ್ತಿಯನ್ನು, ಪ್ರಕೃತಿದತ್ತ ಅಂಶಗಳನ್ನು ಹೊಂದಿಕೊಂಡಿತ್ತು. ಈ ವ್ಯವಸ್ಥೆಯಲ್ಲಿ ಲೈಂಗಿಕ ನಿರ್ಬಂಧವಿರಲಿಲ್ಲ. ವಿವಾಹ ಸಂಸ್ಥೆಯ ವ್ಯವಸ್ಥೆ ಇರಲಿಲ್ಲ. ಹುಟ್ಟಿಗೆ ಪ್ರತ್ಯಕ್ಷ ಸಾಕ್ಷಿ ತಾಯಿಯೇ ಆಗಿದ್ದರಿಂದ ತಾಯಿಯ ಮೂಲಕವೇ ಹಕ್ಕನ್ನು ನಿರ್ದೇಶಿಸಲಾಗುತ್ತಿತ್ತು. ಪ್ರಕೃತಿಯಂತೆ ಹೆಣ್ಣಿನ ಧಾರಣ ಶಕ್ತಿಯನ್ನು, ಸಂವೇದನಾ ಶಕ್ತಿಯನ್ನು ಗ್ರಹಿಸಿದ ಮನುಷ್ಯ ಆಕೆಯನ್ನು ಶಕ್ತಿಯ ಪ್ರತೀಕವೆಂದೇ ಭಾವಿಸಿದ. ಗೌರವಿಸಿದ್ದ. ಆ ಕಾರಣಕ್ಕೆ ಮಾತೃಸಂಸ್ಕೃತಿ ಪರಿಕಲ್ಪನೆಗೆ ಅವಕಾಶವಾಯ್ತು. ಮಾತೃದೇವತಾ ಆರಾಧನಾ ಸ್ಥಾನದಲ್ಲಿ ಪುರುಷನಿಷ್ಠ ದೇವತೆಗಳು ಪ್ರತಿಷ್ಠಾಪನಗೊಂಡರು. ಅವಳೆಲ್ಲಾ ಶಕ್ತಿಯನ್ನು ಹಟಕ್ಕೆ ಬಿದ್ದಂತೆ ಪುರುಷಕೇಂದ್ರಿತ ನೆಲೆಯಲ್ಲಿ ಕಾಣಿಸತೊಡಗಿದರು. ಕುಟುಂಬ ವ್ಯವಸ್ಥೆಯ ಚೌಕಟ್ಟು, ಅಧಿಕಾರ, ಆಲೋಚನಾ ಸ್ವರೂಪಗಳೇ ಬದಲಾಗಿಬಿಟ್ಟವು. ಆರಂಭದ ಕುಟುಂಬದಲ್ಲಿ ಆಕೆಯನ್ನು ಬಂಧಿಯಾಗಿಸಿ ಒಗ್ಗಿಸಿಕೊಂಡ ಪುರುಷ, ಕ್ರಮೇಣ ಬೌದ್ಧಿಕ ಅವಜ್ಞೆಗೂ ಆಕೆಯನ್ನು ಒಳಗು ಮಾಡಿದ್ದು ಇತಿಹಾಸ.

ಗಂಡು ಸಮಾಜದ ಘಟಕ ಎಂದು ಗೌರವಿಸಿದ ವ್ಯವಸ್ಥೆ ಹೆಣ್ಣು ಸಮಾಜದ ಘಟಕವೆಂದು ಒಪ್ಪಿಕೊಳ್ಳಲು ಮೀನಾಮೇಷ ಎಣಿಸಿತು. ಅದಕ್ಕೆ ತಕ್ಕಂತೆ ಕುಟುಂಬ ವ್ಯವಸ್ಥೆಯನ್ನು ಪೋಷಿಸಿತು. ಹೆಣ್ಣು ಭೋಗದ ವಸ್ತುವೆನಿಸಿದಳು. ಹೆಣ್ಣನ್ನು ಅಧೀನದಲ್ಲಿಟ್ಟುಕೊಳ್ಳುವುದು ಎಂದರೆ ಹೆಣ್ಣಿನ ದೇಹವನ್ನು ಹದ್ದುಬಸ್ತಿನಲ್ಲಿ ಇಡುವುದೆಂದು ಭಾವಿಸಿದ ಪುರುಷ ವ್ಯವಸ್ಥೆ ಶೀಲ, ಪಾತಿವ್ರತ್ಯದಂಥ ಮೌಲ್ಯಗಳನ್ನು ಸ್ತ್ರೀವರ್ಗದ ಮೇಲೆ ಹೇರಿತು.

'ಆತನ ಗುಣವ ನೋಡದೆ ತನ್ನ ಗುಣವ ಬಿಡದೆ ಇದ್ದಡೆ ಪತಿವ್ರತೆ ಎನಿಸುವಳು' ನಿಜವಾದ ಅರಿವು ಮತ್ತು ಪ್ರಾಮಾಣಿಕತೆ, ಪರಸ್ಪರ ಅಪೇಕ್ಷೆ ಮತ್ತು ತ್ಯಾಗ ಮನೋಭಾವದಿಂದ ಕೂಡಿರುತ್ತದೆ. ಮನಸ್ಸು ದೇಹಗಳು ಬೇರೆ ಬೇರೆಯಾಗಿ ನಿಲ್ಲುವುದಿಲ್ಲ. ಅಂತರಂಗಿಕವಾಗಿ ಪರಸ್ಪರ ಸಾಮರಸ್ಯವನ್ನು ತಂದುಕೊಳ್ಳುತ್ತದೆ. ನಮ್ಮ ಚರಿತ್ರೆಯ ಉದ್ದಕ್ಕೂ ಚೆಲುವಿನ ಆಕ್ರಮಣ ನಿರಂತರವಾಗಿ ನಡೆದು ಬಂದದ್ದೇ ಆಗಿದೆ. ಪುರಾಣ ಪುಣ್ಯಕಥೆಗಳು ಅದೇ ಧಾಟಿಯಲ್ಲಿ ರೂಪಿತವಾದದ್ದು ಕೂಡ ಉದ್ದೇಶಿತ ಪುರುಷ ಪ್ರಜ್ಞೆಯ ಪ್ರಾಬಲ್ಯವನ್ನು ಸೂಚಿಸುವಂಥವೇ ಆಗಿವೆ. ಈ ಹಿನ್ನಲೆಯಲ್ಲಿ ಶರಣರು ಹೆಣ್ಣು-ಗಂಡು ಸಂಬಂಧದಲ್ಲಿ ಒಡೆದು ಆಳುವ ನೀತಿಯನ್ನು ಅನುಸರಿಸಿದವರಲ್ಲ. ಅವರು ಹೆಣ್ಣು ಆಧ್ಯಾತ್ಮಕ್ಕೆ ಅಡ್ಡಿ ಎಂದೂ ಭಾವಿಸಲಿಲ್ಲ. ಹೆಣ್ಣಿನ ಬಗ್ಗೆ ಸಾಂಪ್ರದಾಯಿಕ ನಿಲುವಿನ ನಡುವೆಯೂ ಆಕೆಯ ಅಸ್ತಿತ್ವವನ್ನು ಗಂಭೀರವಾಗಿ ಚಿಂತಿಸುತ್ತಾರೆ. ಪರಂಪರೆಯ ಸ್ತ್ರೀ ಪುರುಷನ ನೆರಳಾಗಿ, ಆತನ ಆಶ್ರಯವನ್ನು ಒಪ್ಪಿಕೊಂಡು ಬಂದುದರ ಹಿಂದೆ, ಆಕೆಯನ್ನು ಬೌದ್ಧಿಕತೆಯಿಂದ

ದೂರವಿಟ್ಟಿದ್ದು ಮತ್ತೊಂದು ಪ್ರಬಲ ಕಾರಣ. ಬೌದ್ಧಿಕತೆಯ ಕಾರಣಕ್ಕೆ ಸಮಾಜದ ಮುಖ್ಯವಾಹಿನಿಯಿಂದ ಹೆಣ್ಣು ಪಕ್ಕಕ್ಕೆ ತಳ್ಳಲ್ಪಟ್ಟಿದ್ದಳು. ಹೆಣ್ಣು ಎಂದರೆ ಕೇವಲ ದೇಹವಲ್ಲ, ಹೆಣ್ಣು ದೇಹ ಎಂದರೆ ಕೇವಲ ಕಾಮವಲ್ಲ, ದುರಂತವೆಂದರೆ ನಮ್ಮ ಚರಿತ್ರೆ ಹೆಣ್ಣನ್ನು ಕೇವಲ ಹೆಣ್ಣು ದೇಹವಾಗಿಯೇ ಗ್ರಹಿಸುತ್ತಾ ಬಂದಿದೆ. ಹೆಣ್ಣಿನ ಬಂಜೆತನಕ್ಕೆ ಕಾರಣ ಮತ್ತು ಪರಿಹಾರವನ್ನು ತಮ್ಮದೆ ಆದ ಶೈಲಿಯಲ್ಲಿ ತೋರಿಸಿದ್ದಾರೆ. ಹೆಣ್ಣು ಪುರುಷನಷ್ಟೆ ಬೇಕು-ಬೇಡುಗಳಲ್ಲಿ ಸರಿಸಮಾನಳು.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಏನೆ ಕಷ್ಟ ಬಂದರೂ ಇಡಿ ಪರಂಪರೆಯ ಉದ್ದಕ್ಕೂ ಅದನ್ನು ಅನುಭವಿಸಿಕೊಂಡು ಬಂದಿರುವುದನ್ನು ನಾವು ನೋಡುತ್ತೇವೆ. ಆದರೆ ಇಂದಿನ ಆಧುನಿಕ ಸಂದರ್ಭದಲ್ಲಿ ಅಂತಹ ಸಂಪ್ರದಾಯ ಮತ್ತು ನಿಯಮ ಮೀರಿ ಸ್ವತಂತ್ರಳಾಗಿ ಬದುಕುವುದನ್ನು ಕಾಣುತ್ತೇವೆ. ಭಾರತ ಹಲವು ಜಾತಿ-ಧರ್ಮ-ದೇವರುಗಳನ್ನು ಹೊಂದಿರುವ ದೇಶ. ಆದರೆ ಬದುಕಿನ ಸಂದರ್ಭದಲ್ಲಿನ ಲೈಂಗಿಕ ದಾಂಪತ್ಯ ಜೀವನದಲ್ಲಿ ಹೆಣ್ಣು ಮತ್ತು ಗಂಡುಗಳು ಅಸಹಾಯಕತೆಯನ್ನು ಹೊಂದಿ ನಂತರ ವ್ಯವಸ್ಥೆಯಲ್ಲಿನ ನೀತಿ-ನಿಯಮ ಕಟ್ಟುಪಾಡುಗಳನ್ನು ಮೀರಿ ಹೇಗೆ ಆರೋಗ್ಯಕರವಾದ ವಾತಾವರಣವನ್ನು ಸೃಷ್ಟಿ ಮಾಡಿಕೊಳ್ಳುತ್ತಾರೆ. ಹಿಂದಿನ ಕಾಲದ ಸ್ತ್ರೀಯರು ಆರಂಭ, ಕೃಷಿ ಮತ್ತು ಸುಗ್ಗಿಯ ಮುಂತಾದವುಗಳಲ್ಲಿ ನಾರಿಯು ಪ್ರಮುಖ ಪಾತ್ರವಹಿಸಿ ಪರ್ಯಾಯವರಣದ ಸಂತುಲನವನ್ನು ಕಾಪಾಡಿಕೊಂಡು ಬಂದಿದ್ದಾರೆ.

ಗಿಡ, ವೃಕ್ಷ, ಪೊದರು, ಬಳ್ಳಿಗಳಿಗೂ ಇಂದ್ರಿಯಗಳಿವೆ ಎಂಬ ನಂಬಿಕೆಯು ಪ್ರಾಚೀನ ಕಾಲದಲ್ಲಿಯೂ ಜನ ನಂಬುತ್ತಿದ್ದರು. ವೃಕ್ಷಾಯುರ್ವೇದದಲ್ಲಿನ ವಿಸ್ತೃತ ಉಲ್ಲೇಖದಂತೆ ಉದ್ವೇಗಗೊಂಡ ಸ್ತ್ರೀ ಅಥವಾ ನವವಧು ಯುವತಿಯಿಂದ ವಿಭಿನ್ನ ಇಂದ್ರಿಯಗಳ ಸ್ಪರ್ಶದಿಂದ ಗಿಡ, ಮರ, ಬಳ್ಳಿಗಳು, ಋತುಗಳ ಹೊರತಾಗಿಯೂ ಅಕಾಲದಲ್ಲಿ ಚಿಗುರುತ್ತಿದ್ದವು. ಮತ್ತು ಹೂ ಬಿಡುತ್ತಿದ್ದವು ಎಂದು ತಿಳಿದುಬರುತ್ತದೆ. ಸ್ಪರ್ಶ ಮಾತ್ರಕ್ಕೆ ವೃಕ್ಷಗಳು ಸಂವೇದನ ಹೊಂದುತ್ತವೆ. ಯುವತಿಯರು ಮತ್ತು ಸ್ತ್ರೀಯರು ಬಿದ್ದಾಗ ಅಶೋಕವು ಅರಳುವುದು, ತಬ್ಬಿಕೊಂಡಾಗ ಕುರುವಕವೂ, ಸ್ಪರ್ಶದಿಂದ ಮಾಕಂದವೂ, ಸ್ತ್ರೀ ಸಾಮಿಪ್ಯ ಮಾತ್ರದಿಂದ ಪ್ರಿಯಂಗುವೂ ಹೂ ಬಿಡುತ್ತದೆ ಅಥವಾ ಚಿಗುರುತ್ತದೆ ಎಂದು ಹೇಳುತ್ತದೆ ವೃಕ್ಷಾಯುರ್ವೇದ. ಸ್ತ್ರೀಯ ಕಾಲ್ಗೆಜ್ಜೆಗಳ ನಾದ ಮತ್ತು ಮಧುರ ನುಡಿಗಳನ್ನಾಲಿಸಿದಾಗ ಚಂಪಕ ಕರ್ಣಿಕಾರಗಳು ಅರಳುತ್ತವೆ. ವೈದಿಕ ವೃಕ್ಷಗಳು ಪುರಾತನ ವಾಸ್ತುಶಾಸ್ತ್ರದ ನೆಲೆಯಲ್ಲಿ ಸ್ಥಾನ ಪಡೆಯದಿದ್ದರೂ ಅದು ಉತ್ತರಕಾಲೀನ ಶಿಲ್ಪಗಳಲ್ಲಿ, ವಾಸ್ತುರಚನೆಗಳ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿತ್ತು. ಅದು ಶುಂಗ, ಮೌರ್ಯ, ಶಾತವಾಹನ ಶಿಲ್ಪ ಪರಂಪರೆಯಲ್ಲಿರುವ ವಿವಿಧ ಸ್ತ್ರೀ ರೂಪದ ಶಿಲ್ಪಗಳಿಂದ ಸಿದ್ಧವಾಗುತ್ತದೆ.

ಸಂಸ್ಕೃತಿ ಮತ್ತು ಮಹಿಳೆ : ಭಾರತ ಸಮಾಜ ಹೆಚ್ಚಿನ ಪಾಲು ಗ್ರಾಮೀಣ ಸಮಾಜವನ್ನು ಹೊಂದಿದೆ. ನಮ್ಮ ಜಾನಪದ ಸಂಸ್ಕೃತಿಯ ಮೂಲ ಬೇರು ಗ್ರಾಮೀಣ ಸಮಾಜದಲ್ಲಿಯೇ ಇರುವುದು. ಮಾನವನ ಸಾಮಾಜೀಕರಣಕ್ಕೆ ಗ್ರಾಮೀಣ ಸಂಸ್ಕೃತಿ ಮತ್ತು ಸಮಾಜ ತುಂಬಾ

ಸಹಕಾರಿಯಾಗಿವೆ. ಹಾಗಾಗಿ ಮಾನವನು ಪರಂಪರೆಯ ಉದ್ದಕ್ಕೂ ಜಾನಪದ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿಕೊಂಡು ಬಂದಿದ್ದಾನೆ. ಜಾನಪದ ಸಂಸ್ಕೃತಿ ದೇಸಿ ಸಂಸ್ಕೃತಿಯ ಮೌಲ್ಯಗಳನ್ನು ಕಾಪಾಡಿಕೊಂಡು ಬಂದಿದೆ.

ಜಾನಪದ ಸಂಸ್ಕೃತಿಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾಗಿದೆ. ಇವಳಿಂದಲೇ ಜನಪದ ಸಾಹಿತ್ಯ ಹೆಚ್ಚಿನದಾಗಿ ಬೆಳೆದು ಬಂದಿದೆ. ಮಹಿಳೆ ನಿರಂತರವಾಗಿ ಒಂದೆಲ್ಲಾ ಒಂದು ಕೆಲಸದಲ್ಲಿ ಕಾರ್ಯ ನಿರತಳಾಗಿರುತ್ತಾಳೆ. ಅವಳು ತನ್ನ ಶ್ರಮಿಕ ಜೀವನದ ಮಧ್ಯೆಯು ಜನಪದ ಸಾಹಿತ್ಯವನ್ನು ಕಟ್ಟಿ ಬೆಳೆಸಿದ್ದಾಳೆ. ಅವಳು ಸಾಹಿತ್ಯದ ಮೂಲಕ ಜೀವನ ಮೌಲ್ಯಗಳನ್ನು ಗುರುತಿಸಿರುತ್ತಾಳೆ. ಕನ್ನಡ ನಾಡಿನ ಜಾನಪದ ಸಾಹಿತ್ಯದಲ್ಲಿ ಅಸಂಖ್ಯಾತ ಮಹಿಳೆಯರನ್ನು ನೋಡುತ್ತೇವೆ. ನಾಡೋಜ ಪ್ರಶಸ್ತಿ ವಿಜೇತ ಜನಪದ ಸಿರಿಯಜ್ಜಿ, ಬುರ್ರ ಕಥೆ ಈರಮ್ಮ, ಸಕ್ರಿಗೌಡ ಇನ್ನು ಮುಂತಾದವರು ಮಹಾಕಾವ್ಯಗಳನ್ನು ಹೇಳುವಲ್ಲಿ ಯಶಸ್ವಿಯಾಗಿದ್ದಾರೆ. ಕತೆ ಹೇಳುವ ಶಾಂತಮ್ಮ, ಸೋಬಾನೆ ಹೊನ್ನಮ್ಮ, ತತ್ವಪದದ ಮರಿಸಿದ್ಧಮ್ಮ ಹೀಗೆ ಇನ್ನು ಮುಂತಾದ ಮಹಿಳೆಯರನ್ನು ಜನಪದ ಸಾಹಿತ್ಯದಲ್ಲಿ ಗುರುತಿಸಲಾಗಿದೆ.

ಶಿಷ್ಟ ಸಮಾಜಕ್ಕಿಂತ ಜನಪದ ಸಮಾಜದಲ್ಲಿನ ಬಂಧುತ್ವದ ಬೇರುಗಳು ಬಿಗಿಯಾಗಿ ನಿಂತಿವೆ. ಗ್ರಾಮೀಣ ಸಮಾಜದ ಹೆಣ್ಣು ಹೃದಯವಂತಿಕೆಯ ವ್ಯಕ್ತಿಯಾಗಿದ್ದು ಪರಸ್ಪರ ಪ್ರೀತಿ, ವಾತ್ಸಲ್ಯ, ವಿಶ್ವಾಸ, ಒಳ್ಳೆಯ ನಡತೆ, ನಂಬಿಕೆ, ದಕ್ಷತೆ, ಪ್ರಾಮಾಣಿಕತೆ, ಕರುಣೆ, ದಯೆ, ಅನುಕಂಪವುಳ್ಳ ದೇಸಿ ಸಂಸ್ಕೃತಿಯ ಮೂಲಚೈತನ್ಯ ವ್ಯಕ್ತಿಯಾಗಿದ್ದಾಳೆ. ಭಾರತದ ಸಂಸ್ಕೃತಿ ಮತ್ತು ಸಂಪ್ರದಾಯದ ಬದುಕಿಗೆ ಇವಳ ಜೀವನ ಶೈಲಿ ಮಾದರಿಯಾಗಿದೆ. ಇಲ್ಲಿನ ಸಂಸ್ಕೃತಿ ಮತ್ತು ಸಮಾಜ ಅನೇಕ ಒಳನೋಟಗಳನ್ನು ಕೊಡುವ ಹೆಣ್ಣಿನ ದನಿಯನ್ನು ಗಂಭೀರವಾಗಿ ಚಿಂತಿಸುತ್ತದೆ. 'ತಾಯಿಯಾದಾಗಲೇ ಹೆಣ್ಣಿನ ಜನ್ಮ ಸಾರ್ಥಕ' ಎಂಬಂತೆ ಹೆಣ್ಣಾದವಳು ಮಕ್ಕಳಿಲ್ಲದ ಜೀವನವನ್ನು ಕನಸಿನಲ್ಲೂ ನೆನೆಸುವುದಿಲ್ಲ. ಅಷ್ಟಿಷ್ಟಲ್ಲ, 'ಬಂಜೆ'ತನದ ನೋವು ಕಳಂಕ ಎಂಬಂತೆ ಭಾವಿಸಿದ ಜನಪದರು; 'ನಡೆದ ನೆಲ ಬಂಜೆಯಾಗುತ್ತದೆ' 'ಒಳ್ಳೆಯ ಕೆಲಸಕ್ಕೆ ಹೋಗುವಾಗ ಬಂಜೆ ಎದಿರು ಬರಬಾರದು' ಎಂಬಂತಹ ನೂರಾರು ನಂಬಿಕೆಗಳನ್ನು ಸೃಷ್ಟಿ ಮಾಡಿವೆ. ಸ್ತ್ರೀಯನ್ನೇ ಗುರಿಯಾಗಿಟ್ಟುಕೊಂಡ ನಂಬಿಕೆಗಳು–ಮೂಢನಂಬಿಕೆಗಳು–ನಿಷೇಧಗಳು–ಸಂಪ್ರದಾಯಗಳು ಆಕೆಯನ್ನು ಮಾನಸಿಕವಾಗಿ, ದೈಹಿಕವಾಗಿ ಬಂಜೆತನದ ಹಿನ್ನಲೆಯಲ್ಲಿ ಕುಗ್ಗಿಸುತ್ತವೆ.

ಜಾನಪದ ಕಥೆಗಳಲ್ಲಿ ಪುತ್ರಿಯರಿಗೆ ವಿಶೇಷ ಸ್ಥಾನಮಾನವಿದ್ದು, ಹೆತ್ತವರಿಗೆ ಅವರೇ ಕಣ್ಣು, ಬೆಳಕು, ಮುದ ನೀಡುವವಳು, ಆಶ್ರಯ ನೀಡುವವಳು, ಕರುಣಾಮಯಿಗಳು ಆಗಿದ್ದಾರೆ. ಮಹಿಳೆಗೆ ಎದುರಾಗುವ ಸವಾಲುಗಳೆಂದರೆ ಕೌಟುಂಬಿಕ, ಲೈಂಗಿಕ, ಸಂತಾನೋತ್ಪತ್ತಿಯ ನೆಲೆ, ಸಾಮಾಜಿಕ ನೆಲೆ ಮತ್ತು ರಾಜಕೀಯ ನೆಲೆ ಹಾಗೂ ಲೈಂಗಿಕ ನೆಲೆಯಲ್ಲಿ ತನ್ನ ಪ್ರತಿಭೆಯನ್ನು ಚಾಲಾಕಿತನದ ವೀರತ್ವವನ್ನು ತೋರುತ್ತಾಳೆ. ಮಹಿಳೆಯ ಬದುಕಿನ ವಿಶಿಷ್ಟ ಸಂದರ್ಭಗಳಲ್ಲಿ ತೋರಿದ ಒಳ್ಳೆನಡತೆ,

ದಕ್ಷತೆ, ಪ್ರಾಮಾಣಿಕತೆ, ಕರುಣೆ, ದಯೆ, ಅನುಕಂಪ, ಪ್ರೀತಿ–ವಾತ್ಸಲ್ಯ, ತ್ಯಾಗ, ತಾಳ್ಮೆ, ಧೈರ್ಯ, ಜಾಣ್ಮೆ, ಜೊತೆಯಲ್ಲಿ ಕೆಟ್ಟಗುಣಗಳಾದ ದುಶ್ಚಟ, ದುರ್ಮಾರ್ಗ, ದುರ್ಬುದ್ಧಿ, ದುರ್ನಡತೆ, ಅಸೂಯೆ, ಮಧ, ಮತ್ಸರ, ಸ್ವಾರ್ಥ, ಕ್ಷುದ್ರತೆ ಮೊದಲಾದ ಗುಣ ಸ್ವಭಾವಗಳ ಅಧ್ಯಯನಕ್ಕೆ ಜನಪದ ಕಥೆಗಳು ಸಹಕಾರಿಯಾಗಿವೆ. ಹೆಣ್ಣಿನ ಹೃದಯದಾಳದಿಂದ ಹುಟ್ಟಿ ಬಂದ ಕಥೆಗಳಾಗಿವೆ. ಮಹಿಳೆಯರ ಚಾರಿತ್ರಿಕ ಜೀವನ, ಅನುಭವಿಸಿದ ನೋವು, ಸಂಕಟಗಳ ಸರಮಾಲೆ, ಯಾತನೆಗಳು ಹೀಗೆ ವಿನ್ಯಾಸಗೊಂಡಿವೆ ಮತ್ತು ಅವುಗಳನ್ನು ಹೇಗೆ ಎದುರಿಸಿ ದಾಟಿದ್ದಾಳೆ ಹಾಗೂ ನಿರಂತರ ಉಳಿವಿಗಾಗಿ ಪಟ್ಟ ಶ್ರಮಗಳು ಬೇರೂರಿರುವುದನ್ನು ಕಥೆಗಳು ತಿಳಿಸುತ್ತವೆ.

ಬುಡಕಟ್ಟು ಮತ್ತು ಗ್ರಾಮ ಸಮಾಜಗಳಲ್ಲಿ ಮಹಿಳೆಯು ಪುರುಷನ ಜೊತೆ ಜೊತೆಯಾಗಿ ದುಡಿಯುತ್ತಿದ್ದು, ಪುರುಷನಿಗೆ ಸರಿಸಮಾನ ಸ್ಥಾನ, ಕೆಲವೊಮ್ಮೆ ಅದಕ್ಕೂ ಹೆಚ್ಚಿನ ಸ್ಥಾನಮಾನ ಅಧಿಕಾರ–ಆರ್ಥಿಕ ಸ್ವಾವಲಂಬನೆಯಿದ್ದು, ಯಜಮಾನಿಕೆಯ ಅವಕಾಶ, ಮಹತ್ವದ ನಿರ್ಣಯ ಕೈಕೊಳ್ಳುವ ಜವಾಬ್ದಾರಿಯನ್ನು ಆಕೆ ಹೊತ್ತು ನಿಂತಿರುವ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಕಾಣುತ್ತೇವೆ. ಸಾಹಿತ್ಯ ಕ್ಷೇತ್ರದಲ್ಲಿಯೂ ಸಹ ಮಹಿಳೆಯು ಕಡಿಮೆಯೇನಿಲ್ಲ. ಸಮಸ್ಯೆಗಳನ್ನು ಎದುರಿಸುವ ದಿಟ್ಟತನ, ಮುನ್ನುಗ್ಗುವ ಪ್ರವೃತ್ತಿಯನ್ನು ಕಾಣುತ್ತೇವೆ. ಇವಳು ನಂಬಿಕೆಗೆ ಅರ್ಹಳಾಗಿ ಬೇರೆಯವರ ಕಷ್ಟ, ಸುಖಕ್ಕೆ ಸ್ಪಂದಿಸುವ, ನಿಸ್ಸಾಹಾಯಕರಿಗೆ ಹೊಸ ಜೀವಶಕ್ತಿ ತುಂಬುವ, ಶ್ರೀಮಂತ ಹೆಣ್ಣಾಗಿ, ಶಕ್ತಿಶಾಲಿಯಾಗಿ ಮೆರೆದಿರುವುದು ಕಂಡು ಬರುತ್ತದೆ. ಐತಿಹಾಸಿಕವಾಗಿಯೂ ಮಹಿಳೆ ಹೆಸರಾಗಿದ್ದಾಳೆ. ಅದರಲ್ಲಿ ಓಬವ್ವ ತನ್ನ ಛಾಪನ್ನು ಮೂಡಿಸಿದ್ದಾಳೆ.

ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ : ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರವೂ ಗಮನಾರ್ಹವಾಗಿದೆ. ಅವರಲ್ಲಿ ಪ್ರಮುಖರು ಹಾಗೂ ಪ್ರಾರಂಭಿಕ ಹೋರಾಟಗಾರರೆಂದರೆ ಔದ್‌ನ ಬೇಗಾಂ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಕಿತ್ತೂರುರಾಣಿ ಚೆನ್ನಮ್ಮ, ಇವರಿಗೂ ಮುನ್ನವೇ ಕರ್ನಾಟಕದಲ್ಲಿ ಚಾಂದ್‌ಬೇಬಿ, ಬೆಳವಾಡಿ ಮಲ್ಲಮ್ಮ, ರಾಣಿ ಅಬ್ಬಕ್ಕ, ಕೆಳದಿ ಚೆನ್ನಮ್ಮ ಮುಂತಾದವರು. ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಪುರುಷರ ಜೊತೆಗೆ ಹಲವು ಮಹಿಳಾಮಣಿಗಳು ಕೂಡ ಅವಿರತವಾಗಿ ಶ್ರಮಿಸಿ ಸ್ವಾತಂತ್ರ್ಯಕ್ಕೆ ಕಾರಣರಾಗಿದ್ದಾರೆ. ಇವರಲ್ಲಿ ಪ್ರಮುಖವಾಗಿ ಡಾ. ಅನಿಬೆಸೆಂಟ್, ಮೀರಾಬೆನ್, ಸರೋಜಿನಿನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ಕಸ್ತೂರಿಬಾ ಮುಂತಾದವರನ್ನು ಹೆಸರಿಸಬಹುದಾಗಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿಯವರ ನೆಚ್ಚಿನ ಶಿಷ್ಯೆಯಾಗಿ ಹೋರಾಡಿದ ಹಲವರಲ್ಲಿ ಸರೋಜಿನಿನಾಯ್ಡು ಅದ್ವಿತೀಯರು. ಇವರು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕೀರ್ತಿ ಇಂದಿಗೂ ಮಾದರಿಯಾಗಿದೆ. ಭಾರತದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಕರ್ನಾಟಕದ ಕಮಲಾದೇವಿ ಚಟ್ಟೋಪಾಧ್ಯಾಯರು ಅಗ್ರಗಣ್ಯರಾಗಿದ್ದಾರೆ. ಸ್ವಾತಂತ್ರ್ಯ ಭಾರತದಲ್ಲಿ ಅಧಿಕಾರವನ್ನೂ ಪಡೆಯದೆ ಒಬ್ಬ ನಮ್ರ ಸ್ವಯಂಸೇವಕಿಯಾಗಿ, ಸಮಾಜ ಕಾರ್ಯಕರ್ತೆಯಾಗಿ ಉಳಿದು ಆದರ್ಶರಾಗಿ ಮೆರೆದರು. ಸ್ವಾತಂತ್ರ್ಯಕ್ಕಾಗಿ ಅವರು ಹೋರಾಡಿದ್ದರು. ಅದು ಬಂದ ಮೇಲೆ ರಾಷ್ಟ್ರವನ್ನು ಕಟ್ಟುವುದೊಂದೇ ಅವರ ಗುರಿಯಾಗಿತ್ತು.

ಮಹಿಳಾ ಸುಧಾರಣೆಗಳು : ಕರ್ನಾಟಕ ಇತಿಹಾಸದಲ್ಲಿ ೧೨ನೇ ಶತಮಾನ ಬಹು ಮುಖ್ಯವಾದ ಶತಮಾನವಾಗಿದೆ. ೧೨ನೇ ಶತಮಾನದಲ್ಲಿ ಬಸವಣ್ಣ ಸ್ತ್ರೀಯರಿಗೆ ಸಮಾನತೆಯನ್ನು ನೀಡಿದರು. ತಾನು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಸ್ತ್ರೀಯರಿಗೂ ಪಾಲ್ಗೊಳ್ಳುವಂತೆ ಅನುಕೂಲ ಮಾಡಿಕೊಟ್ಟರು. ಪುರುಷರಂತೆ ಸ್ತ್ರೀಯೂ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಜೊತೆಗೆ ಸ್ತ್ರೀಯು ಲಿಂಗಧರಿಸಲು ಅವಕಾಶ ಮಾಡಿಕೊಟ್ಟರು. ಅನೇಕ ಸ್ತ್ರೀಯರು ಶಿಕ್ಷಣ ಕಲಿತು ವಚನಗಳನ್ನು ರಚಿಸಿದ್ದಾರೆ. ಅಲ್ಲದೆ, ವಿಧವಾ ವಿವಾಹಕ್ಕೂ ಅವಕಾಶ ಕಲ್ಪಿಸಿಕೊಟ್ಟರು. ಹೀಗೆ ಮಹಿಳೆಯರಲ್ಲಿ ಅತ್ಯಂತ ಪ್ರಭಾವಿತರಾಗಿ ಕಾಣಿಸುವವರಲ್ಲಿ ಅಕ್ಕಮಹಾದೇವಿಯವರು ಒಬ್ಬರಾಗಿದ್ದಾರೆ. ಈಕೆ ಭಕ್ತಪಂಥದ ಮಹಾನ್ ಸಾಧಕಿಯಾಗಿ ಅನುಭವದ ಮೇರುಗಿರಿಯಾಗಿ ಆಧುನಿಕ ಸ್ತ್ರೀ ಕೀರ್ತನೆಯ ನೆಲೆಯಲ್ಲಿ ಸ್ತ್ರೀ ಸ್ವಾತಂತ್ರ್ಯಕ್ಕೊಂದು ರೂಪಕವಾಗಿ ಕಾಣಿಸಿಕೊಳ್ಳುತ್ತಾಳೆ. ಅವಳು ತೋರಿದ ದಿಟ್ಟತನದ ಪ್ರತಿಭಟನೆಗಳು ಸ್ತ್ರೀ ಸಮುದಾಯಕ್ಕೆ ಮಾದರಿಯಾಗಿ ಕಾಣಿಸಿಕೊಂಡಿವೆ.

ಬಸವಣ್ಣನವರು ಅತೀ ಪ್ರಮುಖವಾಗಿ ಮಾಡಿದುದು ಸ್ತ್ರೀಯರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದುದು, ಬಸವಣ್ಣನವರು ಸ್ತ್ರೀಯು ಪುರುಷನಷ್ಟೇ ಸ್ವತಂತ್ರಳು. ಆಕೆಗೂ ದೀಕ್ಷೆ ಪಡೆಯುವ ಅಧಿಕಾರವಿದೆ ಎಂದು ಎಲ್ಲಾ ಸ್ತ್ರೀಯರಿಗೂ ಲಿಂಗ ದೀಕ್ಷೆಯನ್ನು ಕೊಟ್ಟು ಸಮಾನ ಮನಸ್ಸಿನಿಂದ ಕಂಡರು. ಅನೇಕ ಮಹಿಳೆಯರು ಶಿಕ್ಷಣವನ್ನು ಕಲಿತು ಅನೇಕ ವಚನಗಳನ್ನು ರಚಿಸಿದ್ದಾರೆ. ಅನೇಕ ಶರಣರು ಹೆಣ್ಣು ಗಂಡಿನ ತಾರತಮ್ಯವನ್ನು ಅಲ್ಲಗಳೆದಿದ್ದಾರೆ. ಜೇಡರ ದಾಸಿಮಯ್ಯನವರು ಹೆಣ್ಣು ಗಂಡು ಭೇದವಿರುವುದು ಜೈವಿಕ ನೆಲೆಯಲ್ಲಿ ಮಾತ್ರ ಎಂಬ ಸತ್ಯದ ಅರಿವಿನೊಂದಿಗೆ "ಮೊಲೆ ಮೂಡಿ ಬಂದರೆ ಹೆಣ್ಣೆಂಬರು. ಗಡ್ಡ ಮೀಸೆ ಬಂದೆಡೆ ಗಂಡೆಂಬರು" ಎಂದು ಹೇಳಿ ಹೆಣ್ಣುಗಂಡುಗಳಲ್ಲಿ ಕಾಣಿಸುವುದು ಬಾಹ್ಯದಲ್ಲಿನ ದೈಹಿಕ ವ್ಯತ್ಯಾಸಗಳೇ ಹೊರತಾಗಿ ಆಂತರಿಕವಾಗಿ ಒಂದೇ ಎಂದಿದ್ದಾರೆ.

ಬ್ರಿಟಿಷರ ಆಳ್ವಿಕೆಯ ಯುಗದಲ್ಲಿ ಭಾರತೀಯ ಸ್ತ್ರೀಯರ ಸಮಸ್ಯೆಗಳಿಗೆ ಪೂರ್ಣ ಪರಿಹಾರ ಸಿಗುವುದಂತೂ ಸಾಧ್ಯವಿರಲಿಲ್ಲ. ಈಗಲೂ ಅದು ಪೂರ್ಣವಾಗಿ ಲಭಿಸಿಲ್ಲ. ಆದಾಗ್ಯೂ ಭಾರತವು ಸ್ವತಂತ್ರಗೊಂಡ ಸಂದರ್ಭದಲ್ಲಿದ್ದ ಸ್ತ್ರೀಯರ ಸ್ಥಾನಮಾನವು ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ಸುಧಾರಿಸುತ್ತಾ ಹೋಗಿದೆ ಎಂಬುದನ್ನು ಯಾರೂ ಅಲ್ಲಗೆಳೆಯಲಾಗದು. ಮಹಿಳೆಯರ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ ಶಾಸನಗಳು, ಶಿಕ್ಷಣ, ಆರ್ಥಿಕತೆ ಅಥವಾ ಉದ್ಯೋಗ ಹಾಗೂ ರಾಜಕೀಯ ಸಹಭಾಗಿತ್ವ–ಈ ರಂಗಗಳಲ್ಲಿ ಕಾಣಬರುವ ಬದಲಾವಣೆಗಳ ಆಧಾರದ ಮೇಲೆ ಮಹಿಳೆಯರ ಸ್ಥಾನಮಾನವನ್ನು ಅಳೆಯಲು ಸಾಧ್ಯವಾಗುತ್ತದೆ.

ಒಂದು ಶತಮಾನದ ಹಿಂದೆ ಶಿಕ್ಷಣಕ್ಕಾಗಿ ಹೊಸ್ತಿಲು ದಾಟದ, ಆರ್ಥಿಕ ಲಾಭದ ದುಡಿಮೆಗಾಗಿ ಕುಟುಂಬದ ಹೊರಗೆ ಹೋಗದ ಭಾರತೀಯ ಸ್ತ್ರೀಯರು ಇಂದು ಉದ್ಯೋಗ ರಂಗದ ವಿವಿಧ ಭಾಗಗಳಲ್ಲಿ, ಇಲಾಖೆಗಳಲ್ಲಿ, ಜವಾಬ್ದಾರಿಯ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು

ಆರೋಗ್ಯಕರವಾದ ಬೆಳವಣಿಗೆ ಎನ್ನಿಸುತ್ತದೆ. ಉದ್ಯೋಗದ ಮಾರುಕಟ್ಟೆಯಲ್ಲಿಂದು ಶಿಕ್ಷಿತ ಯುವತಿಯರು ಯುವಕರಿಗೆ ಪ್ರಬಲವಾದ ಪ್ರತಿಸ್ಪರ್ಧೆ ನೀಡುತ್ತಿದ್ದಾರೆ. ಶಿಕ್ಷಕರು, ವೈದ್ಯರು, ದಾದಿಯರು, ವಕೀಲರು, ಬ್ಯಾಂಕ್ ನೌಕರರು, ಕ್ಲಾರ್ಕ್‌ಗಳು, ಟೈಪಿಸ್ಟ್‌ಗಳು, ಉನ್ನತಾಧಿಕಾರಿಗಳ ವೈಯಕ್ತಿಕ ಸಹಕಾರಿಗಳು, ಅಂಚೆ ತಂತಿ ವಿಭಾಗದಲ್ಲಿ ಆಪರೇಟರ್‌ಗಳಾಗಿ ಮತ್ತು ರೇಡಿಯೋ, ಕೈಗಡಿಯಾರ, ಕಂಪ್ಯೂಟರ್ ಮುಂತಾದವುಗಳ ತಯಾರಿಕೆಯಲ್ಲಿ ಉದ್ಯೋಗಿಗಳಾಗಿ ಹೀಗೆ ಅವರ ಸಂಖ್ಯೆ ಹೆಚ್ಚುತ್ತಲೇ ಇದೆ. ಭಾರತದ ಪರಂಪರೆಯಂತೆ ಸ್ತ್ರೀಯರನ್ನು ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಅಥವಾ ಕುಟುಂಬದ (ಸಮೂಹದ) ಒಬ್ಬ ಸದಸ್ಯೆಯನ್ನಾಗಿ ಮಾತ್ರ ಗುರುತಿಸಲಾಗುತ್ತಿದೆಯೇ ವಿನಃ ಒಬ್ಬ ಸ್ವತಂತ್ರ ವ್ಯಕ್ತಿಯನ್ನಾಗಿ ಅಲ್ಲ.

ದೇವದಾಸಿ ಪದ್ಧತಿ : ಭಾರತೀಯ ಸಮಾಜವನ್ನು ಪ್ರಪಂಚದ ಶ್ರೇಷ್ಠ ಸಮಾಜವೆಂದು ಕರೆಯುವುದುಂಟು. ಅಂತಹ ಸಮಾಜದಲ್ಲಿ ನಿತ್ಯ ಕಾಡುವ ಕಲುಷಿತಗೊಳಿಸುವ ಸಮಸ್ಯೆಗಳು ನೂರಾರು. ಸಂಪ್ರದಾಯ ಮತ್ತು ಆಚರಣೆಯ ಸೋಗಿನಲ್ಲಿ ಸ್ತ್ರೀ ಶೋಷಣೆಗಾಗಿ ಹುಟ್ಟಿಕೊಂಡ ಆಚರಣೆಗಳೇ ಹೆಚ್ಚು. ಅಂತಹ ಆಚರಣೆಗಳಲ್ಲಿ ಬಾಲ್ಯವಿವಾಹ, ಸತಿಸಹಗಮನ ಪದ್ಧತಿ, ಬಹುಪತ್ನಿತ್ವ, ಪರದಾಪದ್ಧತಿ ಹಾಗೂ ದೇವದಾಸಿ ಪದ್ಧತಿ ಬಹುಮುಖ್ಯವಾದವು. ಇವುಗಳು ಸಾಮಾಜಿಕ ಬದಲಾವಣೆ ಮತ್ತು ಜನರ ಪ್ರಜ್ಞಾವಂತಿಕೆಯಿಂದಾಗಿ ಬಾಲ್ಯವಿವಾಹ, ಸತಿಸಹಗಮನಪದ್ಧತಿ, ಬಹುಪತ್ನಿತ್ವ ಪದ್ಧತಿಯ ಆಚರಣೆಗಳು ಇತ್ತೀಚಿನ ದಿನಗಳಲ್ಲಿ ವಿರಳವಾಗಿದ್ದರೂ ವರದಕ್ಷಿಣೆ ಪದ್ಧತಿ ಮತ್ತು ದೇವದಾಸಿಯಂತಹ ಪದ್ಧತಿಗಳು ಜೀವಂತವಾಗಿವೆ.

ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯಲು ಮೊದಲು ಲಿಂಗ ಸಮಾನತೆಯುಳ್ಳ ಒಂದು ನಾಗರೀಕ ಸಮಾಜವನ್ನು ರೂಪಿಸಬೇಕು. ಅಂದರೆ ಹಿಂದಿನ ಕಾಲದ ಹಾಗೇ ಮಗುವಿನ ಲಿಂಗದ ವಿಷಯಗಳನ್ನು ಪ್ರಕೃತಿಗೆ ಬಿಡುವುದು ಉತ್ತಮ. ಪ್ರಕೃತಿ ಒಂದು ಮಹಾನ್ ಶಕ್ತಿಯಾಗಿದ್ದು ಸಮತೋಲನವನ್ನು ಸ್ವಯಂ ಕಾಪಾಡಿಕೊಂಡು ಬರುತ್ತದೆ. ಒಂದೆಡೆ ಲಿಂಗ ವ್ಯವಸ್ಥೆಯ ನ್ಯಾಯ ಸ್ಥಾಪನೆಯ ಬಗ್ಗೆ ಚರ್ಚೆ, ಮತ್ತೊಂದೆಡೆ ಮಹಿಳಾ ಸಶಕ್ತೀಕರಣದ ವರ್ಷ ಎಂಬ ಘೋಷಣೆ ಇದರ ಮಧ್ಯೆ ಬದುಕನ್ನು ಕಾಣುವ ಮೊದಲೆ ಸಾವಿರಾರು ಅಮಾಯಕ ಹೆಣ್ಣುಮಕ್ಕಳ ಬದುಕಿನ ಗೋರಿಯ ಮೇಲೆ ಸುಖದ ಸೌಧಗಳನ್ನು ಕಟ್ಟುವ ಪುರುಷ ಶಕ್ತಿಗಳು, ಬಾಲವೇಶ್ಯಾವೃತ್ತಿಯಂಥ ಸ್ತ್ರೀ ವಿರೋಧಿ ಆಚರಣೆಗಳ ಅಂತ್ಯವಾಗುವವರೆಗೂ ಮತ್ತು ಈ ಆಚರಣೆಗಳಿಗೆ ಕಾರಣರಾದವರಿಗೆ ಘೋರ ಶಿಕ್ಷೆಯಾಗುವವರೆಗೂ ಲಿಂಗನ್ಯಾಯ ಒಂದು ಮರೀಚಿಕೆಯಾಗಿ ಉಳಿಯುತ್ತಿದೆಯೆ ಹೊರತು ವಾಸ್ತವವಾಗುವುದಿಲ್ಲ.

ಮಹಿಳಾ ಸಮಸ್ಯೆಗಳು : ಪ್ರಾಚೀನ ಕಾಲದಿಂದ ಪ್ರಸ್ತುತ ಇಂದಿನ ಕಾಲದವರೆಗೆ ಗ್ರಾಮೀಣ ಕೃಷಿ ಮಹಿಳೆಯರು ಪುರುಷನ ಸರಿಸಮಾನವಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದರೂ ನಮ್ಮ ಸಮಾಜ ಅವರನ್ನು ಸರಿಸಮಾನವಾಗಿ ಕಾಣುತ್ತಿಲ್ಲ. ಬಾಲ್ಯದಲ್ಲಿ ತಂದೆಯೂ, ಯೌವನದಲ್ಲಿ

ಪತಿಯೂ, ವೃದ್ಧಾಪ್ಯದಲ್ಲಿ ಮಗನೂ, ಸ್ತ್ರೀಯನ್ನು ರಕ್ಷಿಸಬೇಕು ಎಂದು ಹೇಳಿದ ಮನುಮಹರ್ಷಿಯ ಮಂತ್ರಗಳನ್ನು ಶತಶತಮಾನಗಳಿಂದ ಅಕ್ಷರಶಃ ಪಾಲಿಸುತ್ತಾ ಬರಲಾಗುತ್ತಿದೆ. ಗ್ರಾಮೀಣ ಕೃಷಿಯಲ್ಲಿ ಮಹಿಳೆಯ ಸ್ಥಿತಿ ತುಂಬಾ ಶೋಚನೀಯವಾಗಿದೆ. ಇವರು ಈಗಲು ಕೆಲವೊಂದು ಸಮಸ್ಯೆಗಳಿಂದ ಹೊರಬರಲಾಗುತ್ತಿಲ್ಲ. ಅಂದರೆ ಪ್ರತಿದಿನ ಹೊಲಗದ್ದೆಗಳಲ್ಲಿ ಬಿಸಿಲು-ಮಳೆಯನ್ನು ಲೆಕ್ಕಿಸದೇ ದುಡಿದರೂ ದುಡಿಮೆಗೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ. ಬೀಜದ ಆಯ್ಕೆಯಿಂದ ಹಿಡಿದು ನಾಟಿ, ಕಳೆ, ಕೊಯ್ಲು ಮುಂತಾದ ಕೆಲಸಗಳಲ್ಲಿ ಅವರ ಅಚ್ಚುಕಟ್ಟುತನ, ಪರಿಣಿತಿ ಎದ್ದು ಕಾಣುತ್ತದೆ. ಇದರ ಜೊತೆಗೆ ಕೃಷಿ ಆಧಾರಿತ ಕಸುಬುಗಳಾದ ಕೋಳಿ ಸಾಕಾಣಿಕೆ, ಪಶುಸಂಗೋಪನೆ, ಮೇವು, ಗೊಬ್ಬರಗಳ ಸಂಗ್ರಹಣೆ, ಹೈನುಗಾರಿಕೆ, ಸಾಂಪ್ರದಾಯಿಕ ಕೃಷಿ ವಿಧಾನಗಳನ್ನು ನಡೆಸಿಕೊಂಡು ಬಂದಿರುವುದರಲ್ಲಿ ಅವರ ಪಾತ್ರ ಗಣನೀಯವಾಗಿದೆ.

ಭಾರತದ ಕೃಷಿ ಸಮಾಜದಲ್ಲಿ ಇನ್ನೂ ಮಹಿಳೆಯರು ಪರಂಪರಾನುಗತವಾಗಿ ಬಂದ ಮೂಢನಂಬಿಕೆ ಹಾಗೂ ಅಂದ ಶ್ರದ್ಧೆಗಳಿಂದ ಬಂಧಿಸಲ್ಪಟ್ಟಿದ್ದಾರೆ. ಅವರ ಅಸ್ತಿತ್ವವು ಕೇವಲ ನಾಲ್ಕು ಗೋಡೆಗಳಿಗೆ ಮಾತ್ರ ಸೀಮಿತಗೊಂಡಿದೆ. ಹೊರ ಪ್ರಪಂಚದ ಅರಿವಿಲ್ಲದೆ ಇನ್ನೂ ಅಜ್ಞಾನದ ಅಂದಕಾರದಲ್ಲಿ ಮುಳುಗಿರುವುದು ಗೋಚರಿಸುತ್ತದೆ. ಗ್ರಾಮೀಣ ಕೃಷಿ ಮಹಿಳೆಯರು ಎದುರಿಸುವ ಸಮಸ್ಯೆಗಳಲ್ಲಿ ಅನಕ್ಷರತೆ ಒಂದಾಗಿದೆ. ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾದ ಕೃಷಿ ಮಹಿಳೆಯರು ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರ ಬರಲು ಸಾಧ್ಯವಾಗುತ್ತಿಲ್ಲ.

ಗ್ರಾಮೀಣ ಪ್ರದೇಶದಲ್ಲಿ ಬಹಳಷ್ಟು ಜನ ಮಹಿಳೆಯರು ಬಡತನಕ್ಕೆ ಗುರಿಯಾಗುತ್ತಾರೆ. ಪುರುಷ ಪ್ರಧಾನ ಭಾರತೀಯ ಗ್ರಾಮೀಣ ಸಮಾಜದಲ್ಲಿ ವಿಧವೆಯರನ್ನು ಹೀನಾಯವಾಗಿ ಕಾಣಲಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ವಿಧವೆಯರನ್ನು ನೋಡುವ ದೃಷ್ಟಿ ತುಂಬ ನಿಕೃಷ್ಟವಾಗಿದ್ದು, ವಿಧವೆಯರ ಮುಖ ನೋಡುವುದು ಅಶುಭ, ಅಪಶಕುನವೆಂದು ತಿಳಿಯಲಾಗುತ್ತದೆ. ವಿಧವೆಯರು ಯಾವುದೇ ಶುಭ ಸಮಾರಂಭಗಳಲ್ಲಿ ಭಾಗವಹಿಸುವಂತಿಲ್ಲ. ವಿಧವಾ ವಿವಾಹಕ್ಕೆ ಕಾನೂನಿನಲ್ಲಿ ಆಸ್ಪದ ಇದ್ದರೂ ಸಹಿತ ಗ್ರಾಮೀಣ ಪ್ರದೇಶಗಳಲ್ಲಿ ವಿಧವೆಯರ ಮರುವಿವಾಹಕ್ಕೆ ಆಸ್ಪದ ಕೊಡದೇ ಇರುವುದು ಶೋಚನೀಯವಾಗಿದೆ. ಮಹಿಳೆಯರು ಹೊಂದಿರುವ ಸ್ಥಾನಮಾನಗಳು ಪ್ರತಿಯೊಂದು ಸಮಾಜದ ಸಾಂಸ್ಕೃತಿಕ ಶ್ರೀಮಂತಿಕೆ ಮತ್ತು ನಾಗರೀಕತೆಯನ್ನು ಅಳೆಯುವ ಮಾನದಂಡವಿದ್ದಂತೆ. "ಮಹಿಳೆಯರನ್ನು ಗೌರವಿಸದ ಮತ್ತು ಅವರಿಗೆ ಅರ್ಹವಾದ ಅಂತಸ್ತು ಹಾಗೂ ಅವಕಾಶಗಳನ್ನು ಕಲ್ಪಿಸಿಕೊಡದೇ ಇರುವ ಸಮಾಜವು ಮುಂದೆ ಬರುವುದು ಸಾಧ್ಯವಿಲ್ಲ" ಎಂದು ಸ್ವಾಮಿ ವಿವೇಕಾನಂದರು ಖಚಿತವಾಗಿ ತಿಳಿಸಿದ್ದಾರೆ. "ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೇ ಕೋಟಿ ರೂಪಾಯಿ, ಹೆಂಡತಿಯೊಬ್ಬಳು ಹತ್ತಿರ ಇದ್ದರೆ ನಾನು ಒಬ್ಬ ಸಿಪಾಯಿ" ಎಂಬ ಕವಿವಾಣಿ ಕುಟುಂಬಕ್ಕೆ ಹೆಣ್ಣು ಎಷ್ಟು ಅವಶ್ಯಕ ಎಂಬುದನ್ನು ತಿಳಿಸುತ್ತದೆ.[೧೧]

ಮಾಹಿತಿ ತಂತ್ರಜ್ಞಾನ ಕ್ಷೇತ್ರ ಮತ್ತು ಮಹಿಳೆ : ಪ್ರಾಚೀನ ಕಾಲದಲ್ಲಿ ಮಹಿಳೆಯರಿಗೂ ಪುರುಷ ಸಮಾನವಾದ ಗೌರವಾದಾರ ದೊರಕುತ್ತಿತ್ತು. ಕಾಲಕ್ರಮೇಣ ಸಮಾಜ ಬದಲಾಗಿ ಅವಳಿಗೆ ಮೊದಲಿನಂತೆ ಗೌರವಾದರಗಳು ಸಿಗುವುದು ಕಡಿಮೆಯಾಯಿತು. ಅವಳಿಗೆ ನಿಜವಾದ ಸ್ವಾತಂತ್ರ್ಯವಿರದ ಬಹು ಕಾಲ

ಮರವನ್ನಾಶ್ರಯಿಸುವ ಬಳ್ಳಿಯ ಹಾಗೆ ತಂದೆ ಗಂಡ ಅಥವಾ ಮಗ ಇವರ ಆಶ್ರಯದಲ್ಲಿ ಬಾಳಲೇಬೇಕೆಂಬುದೇ ಅವಳಿಗಿದ್ದ ಸಮಾಜದ ನಿಬಂಧನೆ. ಆದರೆ ಪರಿಸ್ಥಿತಿ ಬರುಬರುತ್ತಾ ಪುನಃ ಬದಲಾಗಿ ಮಹಿಳೆಗೂ ಪುರುಷ ಸಮಾನ ಹಕ್ಕು ದೊರಕತೊಡಗಿತು. ಇಂದು ಸ್ತ್ರೀಯರು ನಾನಾ ಕಾರ್ಯಗಳ ಸೇವಾರಂಗಗಳಲ್ಲಿ ಪುರುಷರಿಗೆ ಸರಿಸಮಾನರಾಗಿ ದುಡಿಯಲು ತೊಡಗಿದ್ದಾರೆ.

ಮಾಹಿತಿ ತಂತ್ರಜ್ಞಾನ ಉದ್ಯಮ ಇಂದು ಪ್ರತಿಯೊಂದು ಕ್ಷೇತ್ರದ ಅಂದರೆ ಕೃಷಿ, ಕೈಗಾರಿಕೆ, ಸಂಪರ್ಕ, ಸಾರಿಗೆ, ವಾಣಿಜ್ಯಗಳ ಅಭಿವೃದ್ಧಿಗೆ ಮೂಲಭೂತ ಪ್ರೇರಕವಾಗಿದೆ. ಮಹಿಳೆಯರು ಈ ಉದ್ಯಮದ ಪ್ರಯೋಜನ ಪಡೆಯಬೇಕು. ಈ ಉದ್ಯಮ ಪುರುಷರಿಗಿಂತ ಮಹಿಳೆಯರಿಗೆ ಹೆಚ್ಚು ಸೂಕ್ತವಾಗಿದೆ. ಅಲ್ಲದೆ ರಾಷ್ಟ್ರದ ಹಾಗೂ ರಾಜ್ಯದ ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಕ್ಷೇತ್ರದಲ್ಲಿ ಮಹಿಳೆಯರು ಪುರುಷರಿಗೆ ಸರಿಸಮಾನರಾಗಿದ್ದಾರೆ ಮತ್ತು ಇನ್ನು ಮುಂದೆಯೂ ಮಹಿಳೆಯರಿಗೆ ಕ್ಷೇತ್ರದಲ್ಲಿ ಉಜ್ವಲ ಭವಿಷ್ಯವಿದೆ ಎನ್ನಬಹುದು. ಈ ದಿಸೆಯಲ್ಲಿ, ಮಾಹಿತಿ ತಂತ್ರಜ್ಞಾನ ಉದ್ಯಮಗಳು ಮಹಿಳೆಯರಿಗೆ ಸೂಕ್ತ ವಾತಾವರಣ ರೂಪಿಸುವುದು ಇಂದಿನ ಅಗತ್ಯತೆಯಾಗಿದೆ.

ಮಹಿಳಾ ಸಬಲೀಕರಣ : ಮಹಿಳಾ ಸಬಲೀಕರಣವು ಪ್ರಪಂಚದಾದ್ಯಂತ ಬಿಸಿ ಚರ್ಚೆಗೆ ಒಳಗಾಗಿರುವ ವಿಷಯಗಳಲ್ಲಿ ಒಂದಾಗಿದೆ. ಪರಸ್ಪರ ಅಪನಂಬಿಕೆ ಮತ್ತು ಅನುಮಾನಗಳಿಗೆ ಎಡೆಮಾಡಿಕೊಡುವ ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸಬೇಕೆಂಬ ಕಿರುಉದ್ದೇಶದಿಂದ ಪ್ರಾರಂಭವಾದ ಸಂಘಸಂಸ್ಥೆಗಳಿಂದ ಅತಿ ಆವೇಶ ಪೂರಿತ ಪ್ರತಿಕ್ರಿಯೆ ಅಥವಾ ಸಂಪೂರ್ಣ ಉದಾಸೀನತೆಗೆ ಒಳಗಾಗಿರುವ ಕ್ಷೇತ್ರಗಳಲ್ಲಿ ಇದೂ ಒಂದಾಗಿದೆ. ಇಲ್ಲಿ ನನ್ನ ಪ್ರಯತ್ನವು ಏನೆಂದರೆ ನಮ್ಮ ದೇಶದಲ್ಲಿ ಪ್ರಾಚೀನಕಾಲದಲ್ಲಿ ಮಹಿಳೆಯರ ಸಬಲೀಕರಣದ ಬಗ್ಗೆ ಯಾವುದೇ ರೀತಿಯ ಚಿಂತನೆಗಳು ನಡೆದಿವೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವುದಾಗಿದೆ.

ಭಾರತೀಯ ಪರಂಪರೆಯ ವಿಚಾರಧಾರೆಯ ಉನ್ನತಿ ಅವನತಿಗಳೆಂಬ ಏರಿಳಿತಗಳ ಚಕ್ರದೊಳಗೆ ಸಿಲುಕಿರುವಂತೆ ಭಾವಿಸುತ್ತದೆ. ಆದರೆ ಪಾಶ್ಚಿಮಾತ್ಯ ವಿಚಾರಧಾರೆಯು ಕಾಲಮುಂದುವರೆದಂತೆ ಅಭಿವೃದ್ಧಿ ಹೊಂದುತ್ತದೆಂದು ಯೋಚಿಸುತ್ತದೆ. ಭಾರತೀಯ ಪರಂಪರೆಯಲ್ಲಿ ವೈಯಕ್ತಿಕ ಸುಖ ಮತ್ತು ಸ್ವಾತಂತ್ರ್ಯಕ್ಕಿಂತಲೂ ಸಮಾಜದ ಹಿತ ಮತ್ತು ಅದರ ಪ್ರಜೆಗಳ ಯೋಗಕ್ಷೇಮಕ್ಕೆ ಆದ್ಯತೆ ಇದೆ. ಭಾರತೀಯ ಪರಂಪರೆಯಲ್ಲಿ ಒಬ್ಬನ ಹಕ್ಕುಗಳಿಗಿಂತ ಆತನಿಗಿರುವ ಕರ್ತವ್ಯಗಳೇ ಬಹಳ ಮುಖ್ಯವಾದುದು. ಭಾರತೀಯ ಪರಂಪರೆಯಲ್ಲಿ ಗೃಹಸ್ಥಾಶ್ರಮಕ್ಕೆ ಬಹಳ ಪ್ರಮುಖವಾದ ಸ್ಥಾನವಿದೆ.

ಏಕೆಂದರೆ ಈ ಆಶ್ರಮವು ಇಡೀ ಸಮಾಜಕ್ಕೆ ಆಸರೆಯಾಗಿರುವಂತಹದು. ಸಂಪೂರ್ಣ ಸಮಾಜವು ಕುಟುಂಬದ ಸುತ್ತ ತಿರುಗುತ್ತದೆ. ಅಲ್ಲಿ ಪತಿ ಮತ್ತು ಪತ್ನಿಯರು ಅವಿಭಾಜ್ಯ ಅಂಗವಾಗಿರುತ್ತಾರೆ. 'ಮನುಸ್ಮೃತಿ'ಯ ಸಾಹಿತ್ಯವು ಪುರುಷರ ಆಚಾರಸಂಹಿತೆಯನ್ನು ಕುರಿತು ವಿಸ್ತಾರವಾಗಿ ವಿಶದಪಡಿಸುತ್ತದೆ. ಆದರೆ ಮಹಿಳೆಗೆ ಮಾತ್ರ ಪುರುಷನನ್ನು ಅನುಸರಿಸು ಎಂದು ಮಾತ್ರ ಹೇಳುತ್ತದೆ. "ಪತ್ನಿಗೆ ಯಾವಾಗಲೂ ಗಂಡನ ಪುಣ್ಯದಲ್ಲಿ ಭಾಗವಿದೆ. ಆದರೆ ಅವನ ಪಾಪದಲ್ಲಿಲ್ಲ. ಮಾತ್ರವಲ್ಲದೆ ಗಂಡನಿಗೆ ಹೆಂಡತಿಯ ಪಾಪದಲ್ಲಿ ಭಾಗವಿದೆಯೇ ಹೊರತು ಅವಳ ಪುಣ್ಯದಲ್ಲಿ ಅಲ್ಲ". ಅದು ಮತ್ತೆ ಗಂಡ ಹೆಂಡತಿಯರಿಬ್ಬರೂ ಒಟ್ಟಿಗೆ ಸೇರಿ ಹೇಗೆ ಮಕ್ಕಳನ್ನು ನೋಡಿಕೊಳ್ಳಬೇಕೆಂಬುದರ ಬಗ್ಗೆ ನಂತರ ತನ್ನ ಜೊತೆಯಲ್ಲಿರುವವರನ್ನು ಅತಿಥಿಗಳನ್ನು ಹೇಗೆ ಕಾಣಬೇಕೆಂಬುದನ್ನು ಹೇಳುತ್ತದೆ. ಭಾರತೀಯ ಸಂಪ್ರದಾಯವು ಕಾಲಕಾಲಕ್ಕೆ ಉಂಟಾಗುವ ಸಾಮಾಜಿಕ ಬದಲಾವಣೆ ಮತ್ತು ಸಂತತಿಯ ಸುಖವು ಮನುಷ್ಯರ ತಾತ್ಕಾಲಿಕ ಸುಖಕ್ಕಿಂತ ಮುಖ್ಯವಾದುದೆಂದು ನಿರೂಪಿಸುತ್ತದೆ. ಸಮಾನತೆ ಎಂಬದು ಇಂದಿನ ದಿನಗಳಲ್ಲಿ ಹೇಳುವುದಕ್ಕಿಂತಲೂ ಅಂದಿನ ದಿನಗಳಲ್ಲಿ ವಿಭಿನ್ನ ಅರ್ಥವನ್ನು ಹೊಂದಿತ್ತು. ಈ ದಿನಗಳಲ್ಲಿ ಕೇಳುವ ಸಮಾನತೆಯ ಹಕ್ಕು ಸ್ವಪ್ರಯೋಜನ ಮತ್ತು ಅಪನಂಬಿಕೆ ಎಂಬ ಹೆದರಿಕೆಯೊಡನೆ ಚಿಗುರೊಡೆದಿದೆ.

ಇಂದಿನ ಮಹಿಳಾ ಚಳವಳಿಯು ಕೆರಳಿಸುವ ಮತ್ತು ಎದುರಿಸಿನಿಲ್ಲುವ ಸ್ವಭಾವವನ್ನು ಅವಶ್ಯಕವೆಂದು ಪ್ರತಿಪಾದಿಸುತ್ತಿದೆ. ಆದರೆ ಅದು ಮಹಿಳೆಯ ಸಬಲೀಕರಣಕ್ಕೆ ಶಾಶ್ವತವಾದ ಪರಿಹಾರವಾಗಲಾರದು. ಈ ಸಮಯದಲ್ಲಿ ಪುರುಷರ ಬಗ್ಗೆ ವಿರುದ್ಧವಾಗಿ ಏನೇ ಹೇಳಿದರೂ ಸ್ತ್ರೀ ಪುರುಷರಿಬ್ಬರೂ ಪ್ರತ್ಯೇಕವಾಗಿ ಬದುಕಲಾರರೆಂಬುದನ್ನು ನಾವು ಅರಿತುಕೊಳ್ಳಬೇಕು.

"ಪಕ್ಷಿಗೆ ಹೇಗೆ ಒಂದು ರೆಕ್ಕೆಯಿಂದ ಹಾರುವುದು ಅಸಾಧ್ಯವಾಗಿರುತ್ತದೆಯೋ ಹಾಗೆ, ಮಹಿಳೆಯರ ಸ್ಥಿತಿಗತಿಗಳು ಉತ್ತಮಗೊಳ್ಳದ ಜಗತ್ತಿನ ಕಲ್ಯಾಣದ ಬಗ್ಗೆ ಚಿಂತಿಸುವುದು ಅಸಾಧ್ಯವಾಗಿರುತ್ತದೆ". ಮಹಿಳೆಯರನ್ನು ಇನ್ನೂ ಒಂದು ಭೋಗದ ವಸ್ತುವಾಗಿ ಉಪಯೋಗಿಸಿ ಎಸೆಯಲಾಗುತ್ತಿರುವುದು ಸಮಾಜದ ಮುಖ್ಯವಾಹಿನಿಯಿಂದ ಅವಳು ದೂರ ಇಟ್ಟು ಕಡೆಗಣಿಸಲಾಗುತ್ತಿರುವದರಿಂದ ಮತ್ತು ಮಹಿಳೆಯರು ಇನ್ನು ಅಶಕ್ತರಿರುವುದರಿಂದಲೇ ಮಹಿಳೆ ಸಶಕ್ತೀಕರಣ ಎಂಬ ವಿಷಯವು ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ ಮತ್ತು ಅವರು ಸಶಕ್ತರಾಗುವ ತನಕ ಮುಂದುವರೆಯುತ್ತಲೇ ಇರುತ್ತದೆ. ಪುರುಷ ಪ್ರಧಾನವಾದ ಈ ಸಮಾಜವು ಮಹಿಳೆಯರಿಗೆ ಯಾವಾಗಲೂ ಸ್ವಾತಂತ್ರ್ಯ ಮತ್ತು ಸ್ವಯಂ ಆಡಳಿತವನ್ನು ನಿರಾಕರಿಸುತ್ತ ಬಂದಿದೆ. ಈ ಲಿಂಗ ತಾರತಮ್ಯವು ಮಾನವೀಯ ಮುಖವನ್ನು ವಿಕಾರಗೊಳಿಸಿದೆ. ಭಾರತವು ಕೃಷಿಪ್ರಧಾನ ದೇಶವಾದ್ದರಿಂದ ಭೂಮಿಯೇ ಜೀವನಧಾರಕ್ಕೆ ಪ್ರಮುಖ ಮೂಲವಾಗಿದೆ. ಇದನ್ನು ಕೂಡ 'ಭೂತಾಯಿ' ಎಂಬ ರೂಪದಲ್ಲಿ ಹೆಣ್ಣಿಗೆ ಹೋಲಿಸಲಾಗಿದೆ. ಮಹಿಳೆಗೆ ಇಷ್ಟೆಲ್ಲಾ ಸ್ಥಾನಮಾನ ಅಧಿಕಾರಗಳನ್ನು ಕೊಟ್ಟಿದ್ದಾಗಿಯೂ ಭಾರತದಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆಯಲ್ಲೇ ನೋಡಿಕೊಳ್ಳಲಾಗುತ್ತಿದೆ.

ಮೊದಲು ಮಹಿಳೆಯ ಜೀವನವು ಅವಳ ಮನೆಯ ನಾಲ್ಕು ಗೋಡೆಗಳಿಗೆ ಮಾತ್ರ ಸೀಮಿತವಾಗಿತ್ತು. ಮಕ್ಕಳನ್ನು ಹೆರುವುದು, ಅವುಗಳ ಪಾಲನೆ, ಪಾಲನೆ ಮಾಡುವುದು ಮತ್ತು ಕುಟುಂಬದವರನ್ನು ನೋಡಿಕೊಳ್ಳುವುದು ಮಾತ್ರ ಅವಳ ಕೆಲಸವಾಗಿತ್ತು. ಆದರೆ ಈಗ ಕಾಲಬದಲಾಗುತ್ತಿದೆ. ಮಹಿಳೆಯು ಎಲ್ಲಾ ಕ್ಷೇತ್ರಗಳಲ್ಲಿಯೂ ಮುನ್ನುಗ್ಗುತ್ತಿದ್ದಾಳೆ. ಅವಳ ಈ ಸಾಧನೆಗೆ ಸಹಾಯಕವಾದ ಶಿಕ್ಷಣ ಮತ್ತು ಮಾಧ್ಯಮಗಳಿಗೆ ಧನ್ಯವಾದಗಳನ್ನು ಅರ್ಪಿಸಲೇಬೇಕು.

ಮಹಿಳಾ ಶಿಕ್ಷಣ : ಇಂದಿನ ಆಧುನಿಕ ಮಹಿಳೆ ಶಿಕ್ಷಣದ ಪ್ರಭಾವದಿಂದ ಹೊಸ ಹೊಸ ಅವಕಾಶ ಪಡೆಯುತ್ತಿದ್ದಾಳೆ. ಭಾರತೀಯ ಸಂಸ್ಕೃತಿಯಲ್ಲಿನ ಪುರುಷ ಪ್ರಧಾನ ಸಮಾಜದ ಅಡಿಯಲ್ಲಿ ಮಹಿಳೆ ಶಿಕ್ಷಣವನ್ನು ಪಡೆದು ತನ್ನ ತನವನ್ನು, ಸ್ಥಾನಮಾನವನ್ನು, ಸ್ವತಂತ್ರವನ್ನು ಗಟ್ಟಿಗೊಳಿಸಿಕೊಳ್ಳುತ್ತಿದ್ದಾಳೆ. ಶಿಕ್ಷಣದಿಂದ ಮಹಿಳೆಯರಿಗೆ ಸಾಮಾನ್ಯಜ್ಞಾನದ ಜೊತೆಗೆ ಜೀವನ ಕ್ರಮವನ್ನೇ ಮಾರ್ಪಡಿಸಿಕೊಳ್ಳಬಹುದು. ಆತ್ಮವಿಶ್ವಾಸವನ್ನು ಮೂಡಿಸುವುದು ವಿಮರ್ಶಕ ದೃಷ್ಟಿಕೋನ ಬೆಳೆಸುವುದು, ಉದ್ಯೋಗಪಡೆಯುವುದು, ಆರೋಗ್ಯ ಹಾಗೂ ಪ್ರಜನನಗಳಿಗೆ ಸಂಬಂಧಿಸಿದಂತೆ ಆಯ್ಕೆ ಸಾಮರ್ಥ್ಯ ಬೆಳೆಸುವುದು, ಅಧೀನತೆಯಿಂದ ಮುಕ್ತರಾಗಬಹುದು. ಇವೆಲ್ಲ ಮಹಿಳೆಯರಿಗೆ ಆಗುವ ಪ್ರಯೋಜನಗಳು.

ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷರು ಕೊಡುವಿಕೆಯ ಸ್ಥಾನದಲ್ಲಿದ್ದು ಮಹಿಳೆಯು ಪಡೆಯುವ ಸ್ಥಾನದಲ್ಲಿದ್ದಾಳೆ. ಇಲ್ಲಿ ಕೊಡುವುದು ಯಾವಾಗಲೂ ಕೊಡುವ ಕೈಯಾಗಿ ಮೇಲಿದ್ದು; ಪಡೆದುಕೊಳ್ಳುವುದು ಚಾಚುವ ಕೈಯಾಗಿ ವಿಧೇಯತೆಯಿಂದ ಕೆಳಗಿದೆ. ಶಿಕ್ಷಣ ವಲಯದಲ್ಲಿಯೂ ಈ ಪ್ರಕ್ರಿಯೆ ಸ್ವಲ್ಪಮಟ್ಟಿಗೆ ನಡೆಯುತ್ತಿದೆ. ಅದು ಕೊಡುವುದೆಲ್ಲ ಪುರುಷ ಪ್ರತಿನಿಧಿತ್ವವಾಗಿಯೂ ಪಡೆದುಕೊಳ್ಳುವುದೆಲ್ಲವೂ ಸ್ತ್ರೀ ಪ್ರತಿನಿಧಿತ್ವವಾಗಿ ಕಾಣಿಸಿಕೊಳ್ಳುತ್ತಿದೆ. ಇದೆಲ್ಲವನ್ನು ಗಮನಿಸಿದಾಗ ಅಧೀನ ಸ್ಥಾನದಲ್ಲಿ ಮಹಿಳೆಯರನ್ನು ಇರಿಸಲಾಗಿದೆ

ಭಾರತವು ಮೂಲಭೂತವಾಗಿ ಮಾತೃ ಪ್ರಧಾನ ಸಮಾಜವಾಗಿತ್ತು. ಅದರ ಕುರುಹುಗಳಾಗಿ ಇಂದಿಗೂ ಕೆಲವು ಬುಡಕಟ್ಟು ಕುಟುಂಬಗಳು, ಕೇರಳದ ಕೆಲವು ಜಾತಿಯ ಕುಟುಂಬಗಳನ್ನು ನಾವು ನೋಡಬಹುದು. ಈ ಪರಂಪರೆಯ ಉದ್ದಕ್ಕೂ ಮಹಿಳೆ ಎರಡನೆ ದರ್ಜೆಯ ಪ್ರಜೆಯಾಗಿ ಈ ಸಮಾಜದಲ್ಲಿ ಬದುಕುತ್ತಿದ್ದಾಳೆ. ಭಾರತೀಯ ಸಮಾಜ-ಸಂಸ್ಕೃತಿಗಳು ವಿಶಿಷ್ಟವಾದ ನೆಲೆಯಲ್ಲಿ ಮಾನವನ ಬದುಕನ್ನು ಕಟ್ಟಿಕೊಟ್ಟಿವೆ. ಇಂತಹ ವಾತಾವರಣದಲ್ಲಿ ಬದುಕುವ ಮಹಿಳೆ, ಬದುಕಿನ ಉದ್ದಕ್ಕೂ ಒಂದಲ್ಲಾ ಒಂದು ರೀತಿಯಲ್ಲಿ ಮೋಸ-ವಂಚನೆ ಅನ್ಯಾಯಕ್ಕೆ ಒಳಗಾಗುತ್ತಿದ್ದಾಳೆ. ಆದರೆ ಅದರ ಅರಿವು ಬಂದಿದ್ದು ಶಿಕ್ಷಣದ ಮೂಲಕ ಉಂಟಾದ ಜಾಗತಿಕ ಪ್ರಭಾವದಿಂದ ಎಂದು ಹೇಳಬಹುದು.

ಮಹಿಳೆಯು ತಾನು ಮಾಡುವ ಕೆಲಸಕ್ಕೆ ವೇತನವನ್ನು ಪಡೆಯುತ್ತಾಳೆ. ಪುರುಷನು ತಾನು ನಿರ್ವಹಿಸುವ ಕೆಲಸಕ್ಕೆ ವೇತನವನ್ನು ಪಡೆಯುತ್ತಾನೆ. ಇಲ್ಲಿ ಮುಖ್ಯವಾದ ಪ್ರಶ್ನೆಯನ್ನು ಎತ್ತುವ

ಅವಶ್ಯಕತೆ ಇದೆ. ಪುರುಷ ದುಡಿಯುವ ದುಡಿಮೆಗೆ ಹೆಚ್ಚು ವೇತನ ಇದ್ದು, ಮಹಿಳೆಯ ದುಡಿಯುವ ದುಡಿಮೆಗೆ ಕಡಿಮೆ ವೇತನ ಇದ್ದರೆ ಅದು ತಾರತಮ್ಯವಾಗುತ್ತದೆ. ಇಂತಹ ತಾರತಮ್ಯವಿರುವುದು ಖಾಸಗಿ ವಲಯದಲ್ಲಿ ಮಾತ್ರ.ಸರ್ಕಾರಿ ವಲಯಗಳಲ್ಲಿ ಮೊದ ಮೊದಲು ನಮ್ಮ ಸಂಸ್ಕೃತಿ ಪ್ರಭಾವದಿಂದ ಮಹಿಳೆಯು ಮನೆಯ ಹೊರಗಡೆ ಬರಬಾರದು ಅಥವಾ ಅವಳು ದುಡಿಯಲು ಹೊರಗೆ ಹೋಗಕೂಡದು ಎಂಬ ವಿರೋಧ ಸಮಾಜದಲ್ಲಿತ್ತು. ತದನಂತರ ಭಾರತ ಸಂವಿಧಾನ ಜಾರಿಗೆ ಬಂದ ನಂತರದ ದಿನಗಳಲ್ಲಿ ದುರ್ಬಲ ವರ್ಗಗಳಲ್ಲಿ ಒಂದಾದ ಮಹಿಳೆಯರು ಉದ್ಯೋಗವನ್ನು ಪಡೆಯಲು ಹಾಗೂ ಶಿಕ್ಷಣವನ್ನು ಪಡೆಯಲು ಅವಕಾಶಗಳು ಬರಲಾರಂಭಿಸಿದವು. ಸ್ತ್ರೀಯರಿಗೆ ಮಾತ್ರ ಮೀಸಲಾಗಿದ್ದ ಕೆಲಸಗಳನ್ನು ಸಾಮಾಜಿಕರಣಗೊಳಿಸಿದಾಗ ಸ್ತ್ರೀ ಪುರುಷರಿಬ್ಬರೂ ಮಾಡಿದಾಗ ಮಾತ್ರ ಗೃಹಕೃತ್ಯಗಳಿಗೂ ಮನ್ನಣೆ ದೊರಕುತ್ತದೆ ಎಂಬ ಸಲಹೆಗಳನ್ನು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ನೀಡುತ್ತಾರೆ. ಮಹಿಳೆಯು ಹೊರಗೆ ದುಡಿಯುವುದು ಆಕೆಯ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸಲಾರದು. ಆರ್ಥಿಕೇತರ ವ್ಯವಸ್ಥೆಯಲ್ಲಿಯೂ ಸ್ತ್ರೀಯ ಶೋಷಣೆಯ ಮೂಲ ಅಡಗಿದೆ.

ಗ್ರಾಮೀಣ ಅಭಿವೃದ್ಧಿಯೇ ಈ ದೇಶದ ನಿಜವಾದ ಅಭಿವೃದ್ಧಿ ಎಂಬುದು ಹಲವರ ವಾದ. ಸುಮಾರು ಒಂದು ದಶಕದಿಂದ ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಸಂಘಗಳು ಗ್ರಾಮೀಣ ಅಭಿವೃದ್ಧಿಯಲ್ಲಿ ಹಲವಾರು ಬದಲಾವಣೆಗಳನ್ನು ತರುತ್ತಿವೆ.

ಸಮಾಜ ಮತ್ತು ಸ್ತ್ರೀಯರು; ಸ್ತ್ರೀಯರು ಹೊಂದಿರುವ ಸ್ಥಾನಮಾನವೆಂಬುದು ಯಾವುದೇ ಸಮಾಜದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತು ನಾಗರಿಕತೆಯ ಮುನ್ನಡೆಯನ್ನು ಅಳೆಯುವ ಮಾನದಂಡವಿದ್ದಂತೆ ಎನ್ನುವ ಮಾತಿದೆ. ಸ್ತ್ರೀಯರಿಗೆ ನೀಡಲಾಗಿರುವ ಗೌರವ, ಸ್ಥಾನಮಾನ, ವ್ಯಾವಹಾರಿಕ ಸ್ವಾತಂತ್ರ್ಯ, ಹಕ್ಕುಗಳು, ಅಧಿಕಾರ ಮುಂತಾದವುಗಳ ಆಧಾರದ ಮೇಲೆ ಸಮಾಜವೊಂದರ ಸ್ವರೂಪವನ್ನು ಊಹಿಸಿಕೊಳ್ಳಬಹುದು. ಮಾತ್ರವಲ್ಲ, ಸ್ತ್ರೀಯರಿಗೆ ಸಮಾಜವೊಂದು ನೀಡಿರುವ ಅಂತಸ್ತಿನ ಆಧಾರದಲ್ಲಿ ಅದು ಸಾಧಿಸಿರುವ ಪ್ರಗತಿಯ ಮಟ್ಟವನ್ನು ಅಳೆಯಬಹುದು. ನಾಗರಿಕತೆಯೊಂದರ ಗುಣಮಟ್ಟವು ಅದು ತನ್ನ ಸ್ತ್ರೀ ಸಮುದಾಯವನ್ನು ನಡೆಯಿಸಿಕೊಳ್ಳುವ ರೀತಿಯನ್ನು ಅವಲಂಬಿಸಿದೆ ಎಂದರೂ ಉತ್ಪ್ರೇಕ್ಷೆಯಲ್ಲ.

ಸ್ತ್ರೀ ಸ್ವಾತಂತ್ರ್ಯದ ಹಾಗೂ ವಿಮೋಚನೆಯ ಕಹಳೆಯನ್ನೂದುತ್ತಿರುವ ಇಂದಿನ ಅದೆಷ್ಟೋ ಸಮಾಜಗಳು ಮತ್ತು ಸಮುದಾಯಗಳು ಈ ಹಿಂದೆ ಅದೆಷ್ಟೋ ಬಾರಿ ಸ್ತ್ರೀಯರ ಸ್ವಾತಂತ್ರ್ಯವನ್ನು ಹತ್ತಿಕ್ಕಿರುವುದನ್ನು ಮತ್ತು ಅವರ ಮೇಲೆ ಹಲವಾರು ನಿಷೇಧ ನಿಯಂತ್ರಣಗಳನ್ನು ಹೇರಿರುವುದನ್ನು ಕಂಡು ನಾವು ವಿಸ್ಮಿತರಾಗುವಂತಾಗುವುದು. ಸ್ತ್ರೀಯರು ಪರಿಸ್ಥಿತಿಯ ಅನಿವಾರ್ಯತೆಯಿಂದಾಗಿ ಮತ್ತು ದೈವದತ್ತವಾದ ಅಥವಾ ಪ್ರಕೃತಿ ಸಹಜವಾದ ಇತಿಮಿತಿಗಳಿಂದಾಗಿ ತಮಗೆ ನೀಡಲಾದ ದ್ವಿತೀಯ ದರ್ಜೆಯ ಸ್ಥಾನವನ್ನು ಮೌನವಾಗಿ ಒಪ್ಪಿಕೊಂಡೇ ಬಂದಿದ್ದಾರೆ. ಮಾನವನ ಸಮೂಹ

ಜೀವನವು ಗತಿಶೀಲವಾದುದು ನಿಜ. ಕಾಲ ಬದಲಾದಂತೆ ಆತನ ಸಾಮಾಜಿಕ ಜೀವನದ ರೀತಿಯಲ್ಲಿ, ರೂಢಿ-ಪದ್ಧತಿಗಳಲ್ಲಿ, ಆಚಾರ-ವಿಚಾರಗಳಲ್ಲಿ, ನಂಬಿಕೆ, ನಡವಳಿಕೆಗಳಲ್ಲಿ ಬದಲಾವಣೆಯಾಗುತ್ತದೆ ಎಂಬುದೂ ನಿಜ. ಈ ಬದಲಾವಣೆಯ ಪ್ರಕ್ರಿಯೆಯ ಹೊರತಾಗಿಯೂ ಮಾನವನು ಸ್ವಾರ್ಥದಿಂದ ಅಥವಾ ಲಾಭದಾಸೆಯಿಂದ ಕೆಲವೊಂದು ಆಚರಣಾ ಪದ್ಧತಿಗಳನ್ನು ಉಳಿಸಿಕೊಳ್ಳಬಹುದು. ವೇದಗಳ ಕಾಲದಲ್ಲಿ ಹೆಣ್ಣು ಮಕ್ಕಳನ್ನು ಅವರು ಯೌವನಕ್ಕೆ ಕಾಲಿಟ್ಟ ಬಳಿಕವೇ ವಿವಾಹ ಮಾಡಿಕೊಡಲಾಗುತ್ತಿತ್ತು. ಆದರೆ ಕಾಲಾನುಕ್ರಮೇಣ ಅವರನ್ನು ಅವರ ಕನ್ಯತ್ವದ ಸಮಯದಲ್ಲಿಯೇ ಅಂದರೆ ಅವರು ರಜಸ್ವಲೆಯಾಗುವುದಕ್ಕೂ ಮುಂಚೆಯೇ ವಿವಾಹ ಮಾಡಿಕೊಡುವ ಕ್ರಮ ಆಚರಣೆಗೆ ಬಂತು. ಇದರಿಂದ ಮಧ್ಯಕಾಲೀನ ಯುಗದಲ್ಲಿಯೇ ಕೆಲವಡೆಗಳಲ್ಲಿ ವರದಕ್ಷಿಣೆಯು ಒಂದು ಪಿಡುಗಾಗಿ ವಿಕಾಸಗೊಂಡಿತ್ತು.

ಸ್ವತಂತ್ರ ಭಾರತ ಸರ್ಕಾರವು ಸ್ತ್ರೀಯರ ಹಿತಾಸಕ್ತಿಗಳ ಸಂರಕ್ಷಣೆ ಹಾಗೂ ಅವರ ಕಲ್ಯಾಣಾಭಿವೃದ್ಧಿಯ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸುತ್ತಿದೆ. ಸ್ತ್ರೀಯರಿಗೆ ಸಾಮಾಜಿಕ ನ್ಯಾಯದೊಂದಿಗೆ ಲಿಂಗ ಸಮಾನತೆಯನ್ನು ಸ್ಥಾಪಿಸುವ ಭರವಸೆ ನೀಡಿದೆ. ಸ್ತ್ರೀಯರ ಅಭಿವೃದ್ಧಿಯನ್ನು ಸಾಧಿಸಲು ಹಾಗೂ ಅವರನ್ನು ಸಬಲರನ್ನಾಗಿಸಲು ಅದು ಹಲವಾರು ಕಾಲಮಿತಿಯುಳ್ಳ ಯೋಜನೆಗಳನ್ನು ಹಾಗು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇಂತಹ ಯೋಜನೆ ಹಾಗೂ ಕಾರ್ಯಕ್ರಮಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಯ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರಧಾನಿಯ ನೇತೃತ್ವವುಳ್ಳ ತಂಡಗಳನ್ನು ಕೂಡ ರಚಿಸಲಾಗಿದೆ. ಸ್ತ್ರೀಯರ ಶೋಷಣೆ ನಿಂತು ಅವರು ಪುರುಷರಿಗಾಗಿ ಸರಿಸಮಾನವಾಗಿ ಜೀವಿಸುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕೆಂಬ ಹಂಬಲ ವಿಶ್ವರಾಷ್ಟ್ರ ಸಂಸ್ಥೆಯ ಮೂಲಕ ಪ್ರಕಟವಾಗುತ್ತಲೇ ಇತ್ತು. ೧೯೭೫ರ ವರ್ಷವನ್ನು ಅದು "ಅಂತಾರಾಷ್ಟ್ರೀಯ ಮಹಿಳಾ ವರ್ಷ" ವೆಂದು ಘೋಷಿಸಿದಾಗ ಅದರ ಕೆಲವು ಸದಸ್ಯ ರಾಷ್ಟ್ರಗಳು ಸ್ತ್ರೀಯರ ಕಡೆಗೆ ವಿಶೇಷ ದೃಷ್ಟಿ ಹರಿಸಿದವು.

ಸ್ವ-ಸಹಾಯ ಸಮೂಹಗಳು : ಸ್ತ್ರೀಯರ ಕುರಿತಾಗಿ ಬದಲಾಗುತ್ತಾ ಹೋದ ದೃಷ್ಟಿಕೋನ: ಭಾರತವನ್ನೊಳಗೊಂಡಂತೆ ಜಗತ್ತಿನ ಬಹುತೇಕ ದೇಶಗಳಲ್ಲಿ ಸ್ತ್ರೀಯರು ಪುರುಷರಿಗೆ ಸರಿಸಮಾನ ಸಂಖ್ಯೆಯಲ್ಲಿದ್ದರೂ ಶ್ರಮ ಹಾಗೂ ದುಡಿಮೆಯ ದೃಷ್ಟಿಯಿಂದ ನೋಡುವುದಾದರೆ, ಪುರುಷರಿಗಿಂತಲೂ ಸ್ತ್ರೀಯರ ಕೊಡುಗೆಯೇ ಹೆಚ್ಚಿನದಾಗಿರುವುದು ಕಂಡುಬಂದಿದೆ. ಆರ್ಥಿಕತೆಯಲ್ಲಿ ಹಿಂದುಳಿದ ಹಾಗೂ ಕೃಷಿ ಪ್ರಧಾನವಾದ ದೇಶಗಳಲ್ಲಂತೂ ಸ್ತ್ರೀಯರ ಶ್ರಮಶಕ್ತಿಯು ಅಂತಹ ದೇಶಗಳಲ್ಲಿನ ಒಟ್ಟು ಶ್ರಮಶಕ್ತಿಯ ೨/೩ ರಷ್ಟಿರುವುದೂ ಕೂಡಾ ಕಂಡುಬಂದಿದೆ. ಸಮಾಜದ ಆರ್ಥಿಕತೆಗೆ ಸ್ತ್ರೀಯರ ಕೊಡುಗೆ ಗಣನೀಯವಾಗಿದ್ದರೂ ಎಷ್ಟೋ ಕಡೆಗಳಲ್ಲಿ ಅವರ ಶೋಷಣೆ ಅವರನ್ನು ತಾರತಮ್ಯಗಳಿಗೆ ಹಲವಾರು ಬಗೆಯ ಅನರ್ಹತೆಗಳಿಗೆ ಒಳಗಾಗಿಸಿರುವುದು ಕಂಡು ಬಂದಿದೆ. ಸ್ತ್ರೀಯರನ್ನು 'ಅಬಲೆಯರು' ಹಾಗೂ 'ದುರ್ಬಲರು' ಎಂದು ಪರಿಗಣಿಸಲ್ಪಟ್ಟಿದ್ದಲ್ಲದೆ 'ದ್ವಿತೀಯ

ದರ್ಜೆಯ ಪ್ರಜೆಗಳು' ಎಂಬಂತೆ ನಡೆಸಿಕೊಂಡಿದ್ದೂ ಇದೆ. ಆದರೆ ಕಾಲಸಂದಂತೆ ಸ್ತ್ರೀಯರ ಬಗೆಗಿನ ಈ ದೃಷ್ಟಿಕೋನ ಬದಲಾಗುತ್ತಾ ಹೋಗಿದೆ.

ಸ್ತ್ರೀಯರನ್ನು, ಅದರಲ್ಲೂ ಗ್ರಾಮೀಣ ಭಾಗದಲ್ಲಿರುವ ಸ್ತ್ರೀಯರನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ 'ಸಶಕ್ತ'ರನ್ನಾಗಿಸಲು 'ಸ್ವ-ಸಹಾಯ ಸಮೂಹ'ಗಳನ್ನು ಸ್ಥಾಪಿಸಿ ಅಂತಹ ಸಮೂಹಗಳಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು ಸೂಕ್ತವೆಂಬ ಪರಿಣಿತರ ಸಲಹೆಯನ್ನು ಭಾರತ ಸರ್ಕಾರವಿಂದು ಒಪ್ಪಿಕೊಂಡಿದೆ. ಸ್ತ್ರೀಶಕ್ತಿ ಸಮೂಹಗಳ ಮೂಲಕ ಸಿಕ್ಕಿದ ಪ್ರೇರಣೆಯಿಂದಾಗಿ ಗ್ರಾಮೀಣ ಭಾಗದ ಸ್ತ್ರೀಯರು ಕೋಳಿ-ಸಾಕಾಣಿಕೆ, ಕುರಿ-ಹಂದಿ ಸಾಕಾಣಿಕೆ, ಕ್ಷೀರೋದ್ಯಮ, ಆಟಿಕೆಗಳ ತಯಾರಿಕೆ, ಸಾಂಬಾರ ಪದಾರ್ಥಗಳ ತಯಾರಿಕೆ, ಮೀನು ಸಂಸ್ಕರಣೆ, ಸಾವಯವ ಗೊಬ್ಬರ ತಯಾರಿಕೆ, ಚಾಪೆ-ಬುಟ್ಟಿ ಹಣೆಯುವಿಕೆ, ಹೊಲಿಗೆ ಕೆಲಸ ಕೈಗೊಳ್ಳುವಿಕೆ ಮುಂತಾದ ಆರ್ಥಿಕ ಚಟುವಟಿಕೆಗಳಲ್ಲಿ ಬಾಹ್ಯ ನೆರವಿಲ್ಲದೆ ಸ್ವಾವಲಂಬಿಗಳಾಗಿ ತೊಡಗಿಕೊಳ್ಳುವುದು ಸಾಧ್ಯವಾಗಿದೆ.

ಭಾರತ ಮಹಿಳಾ ಆಂದೋಲನಗಳು : ಸ್ತ್ರೀ-ಪುರುಷ ಸಮಾನತೆಗಾಗಿ ಆಗ್ರಹಿಸಿ, ಸ್ತ್ರೀಯರ ಶೋಷಣೆಯ ವಿರುದ್ಧ ಬಂಡೆದ್ದು ಸ್ತ್ರೀಯರ ಹಕ್ಕುಗಳನ್ನು ಬಲವಾಗಿ ಪ್ರತಿಪಾದನೆ ಮಾಡುತ್ತಾ ಪಶ್ಚಿಮದ ದೇಶಗಳಲ್ಲಿ ಸಾಕಷ್ಟು ಜನಪ್ರಿಯತೆಯನ್ನು ಗಳಿಸಿದ "ಸ್ತ್ರೀ-ವಿಮೋಚನಾ ಆಂದೋಲನ"ದ ಅಗತ್ಯ ಭಾರತಕ್ಕೂ ಇದೆಯೇ ಎಂಬುದು ಭಾರತದ ಮಹಿಳಾ ಹೋರಾಟಗಾರರ ಎದುರಿರುವ ಪ್ರಶ್ನೆಗಳಲ್ಲೊಂದು.

ಭಾರತದಲ್ಲಿ ಕಾಣಬರುವ ಮಹಿಳಾ ಸಂಘಟನೆಗಳು ಹಾಗೂ ಆಂದೋಲನಗಳಿಗೂ ಮತ್ತು ಪಾಶ್ಚಿಮಾತ್ಯ ಜಗತ್ತಿನ "ಸ್ತ್ರೀ ವಿಮೋಚನಾ ಆಂದೋಲನ"ಗಳಿಗೂ ಅವುಗಳ ಕಾರ್ಯ ರೀತಿಯಲ್ಲಿ ಮತ್ತು ಉದ್ದೇಶಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಸ್ತ್ರೀ-ಪುರುಷ ಸಮಾನತೆಯ ದಾರಿಯಲ್ಲಿ ಪಾಶ್ಚಿಮಾತ್ಯ ಮಹಿಳಾ ಆಂದೋಲನಗಳು ಈಗಾಗಲೇ ಬಹುದೂರ ಸಾಗಿವೆ. ಆದರೆ ಈ ನಿಟ್ಟಿನಲ್ಲಿ ಇಂದಿಗೂ ಬಹಳ ಹಿಂದುಳಿದಿದ್ದು ಸಾಂಪ್ರದಾಯಿಕತೆಯ ಬಿಗಿಯಿಂದ ಹೊರಬರಲಾಗದೆ ಚಡಪಡಿಸುತ್ತಿರುವ ಭಾರತೀಯ ಮಹಿಳಾ ಆಂದೋಲನಗಳು ಪಾಶ್ಚಾತ್ಯ ಮಾದರಿಯಲ್ಲಿ ಕಾರ್ಯಾಚರಣೆ ನಡೆಸುವುದು ಕಷ್ಟ ಸಾಧ್ಯವೆನ್ನಿಸುವುದು.

ಎಂ.ಎನ್. ಶ್ರೀನಿವಾಸ್‌ರವರು ಭಾರತೀಯ ಸನ್ನಿವೇಶದಲ್ಲಿನ ಸ್ತ್ರೀಯರ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ಹೇಳಿರುವ ಹಾಗೆ ಸ್ತ್ರೀಯರು ವಾಸಿಸುವ ಸ್ಥಳ, ಅವರು ಸದಸ್ಯರಾಗಿರುವ ಜಾತಿ, ಅವರ ಶಿಕ್ಷಣ ಮತ್ತು ಆರ್ಥಿಕತೆ ಇವು ಮಹಿಳೆಯರ ಸಮಸ್ಯೆ ಸವಾಲುಗಳ ಸ್ವರೂಪವನ್ನು ಬಹಳಷ್ಟು ನಿರ್ಧರಿಸುತ್ತವೆ. ಸ್ತ್ರೀಯರು ತಮ್ಮ ಹಳೆಯ ಪಾತ್ರಗಳನ್ನು ಕೈಬಿಟ್ಟು ಇಲ್ಲವೇ ಯಥೋಚಿತವಾಗಿ ಬದಲಿಸಿಕೊಂಡು ಹೊಸ ಪಾತ್ರಗಳನ್ನು ನಿರ್ವಹಿಸಲು ಸಿದ್ಧವಾಗುತ್ತಿದ್ದಂತೆ ಅವರು ಎದುರಿಸಬೇಕಾದಸಮಸ್ಯೆಗಳು ಗಣನೀಯವಾಗಿ ತಗ್ಗಬಹುದೆಂದು ಆಶಿಸಬಹುದಾಗಿದೆ.[೧೨]

ಮೀಸಲಾತಿಯ ಅಗತ್ಯತೆ : ಭಾರತದ ಇತಿಹಾಸದುದ್ದಕ್ಕೂ ಸ್ತ್ರೀಯರಿಗೆ ಮನೆಗಳಲ್ಲಿ ಹಾಗೂ ಸಮಾಜದಲ್ಲಿ ಮಹತ್ವದ ಸ್ಥಾನಮಾನ-ಜವಾಬ್ದಾರಿಗಳನ್ನು ನೀಡಲಾಗಿದ್ದರೂ ರಾಜಕೀಯ ಹಾಗೂ ಸಾರ್ವಜನಿಕ ಜೀವನದಲ್ಲಿ ಸ್ತ್ರೀಯರ ಸಹಭಾಗಿತ್ವದ ಪ್ರಾಮುಖ್ಯದ ಬಗ್ಗೆ ವಿಶೇಷ ಒತ್ತು ನೀಡಲಿಲ್ಲವೆಂದೇ ಹೇಳಬಹುದು. ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಬ್ರಿಟಿಷ್ ರಾಜಸತ್ತೆಯ ವಿರುದ್ಧ ನಡೆಸಲಾದ ಸ್ವಾತಂತ್ರ್ಯ ಹೋರಾಟದಲ್ಲಿ ಮೊಟ್ಟ ಮೊದಲ ಬಾರಿಗೆ ಎಂಬಂತೆ ಸ್ತ್ರೀಯರು ಭಾಗವಹಿಸತೊಡಗಿದರು. ಈ ಹಂತದಲ್ಲಿ ಗಾಂಧೀಜಿಯವರು ವಹಿಸಿದ ಪಾತ್ರ ಹಾಗೂ ಸ್ತ್ರೀಯರ ಶಕ್ತಿ ಸಾಮರ್ಥ್ಯ ಮತ್ತು ಅವರ ರಾಜಕೀಯ ಸಹಭಾಗಿತ್ವದ ಬಗ್ಗೆ ಅವರು ನೀಡಿದ ವಿಶೇಷ ಒತ್ತು ಸ್ತ್ರೀಯರಲ್ಲಿ ಆತ್ಮವಿಶ್ವಾಸ ಅಂಕುರಿಸಲು ಕಾರಣವಾಯಿತು. ಆದರೆ ಸ್ವಾತತ್ರ್ಯಾನಂತರದಲ್ಲಿ ಸ್ತ್ರೀಯರ ರಾಜಕೀಯ ಸಹಭಾಗಿತ್ವ ಬಹಳಷ್ಟು ಕುಂಠಿತಗೊಂಡಿತು. ಸ್ತ್ರೀಯರ ರಾಜಕೀಯ ಪಾತ್ರ ಪ್ರಾಮುಖ್ಯದ ಬಗ್ಗೆ ಒತ್ತು ನೀಡದಿದ್ದುದು, ಗಾಂಧೀಜಿಯವರ ಕಾಲಾನಂತರ ಅಷ್ಟೇ ಪ್ರಭಾವಿಯಾದ ಜನನಾಯಕರು ಮಹಿಳೆಯರನ್ನು ರಾಜಕೀಯ ಪ್ರವೇಶಿಸುವಂತೆ ಹುರಿದುಂಬಿಸದೇ ಇದ್ದುದು, ಅಧಿಕಾರಲಾಲಸೆಯ ರಾಜಕಾರಣದಲ್ಲಿ ಸ್ತ್ರೀಯರು ಆಸಕ್ತಿ ತೋರದಿದ್ದುದು, ರಾಜಕೀಯ ಅಪರಾಧೀಕರಣದ ಹೆಚ್ಚಳ ಇವೆಲ್ಲವೂ ಸ್ವಾತಂತ್ರ್ಯಾನಂತರದ ರಾಜಕಾರಣದಲ್ಲಿ ಸ್ತ್ರೀಯರು ಅನಾಸಕ್ತಿ ವಹಿಸಲು ಕಾರಣವಾದವು ಎನ್ನಬಹುದು.

ಭಾರತವು ೧೯೪೭ ರಲ್ಲಿ ಸ್ವತಂತ್ರಗೊಂಡರೂ ಸುಮಾರು ೨೫ ವರ್ಷಗಳವರೆಗೆ ಸ್ತ್ರೀಯರ ಸಮಸ್ಯೆಗಳ ಕುರಿತು ಸರ್ಕಾರ ಅಷ್ಟಾಗಿ ಗಮನ ಹರಿಸಲಿಲ್ಲ ಹಾಗೂ ಅವರನ್ನು ಕಾಡುವ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿ ಅವುಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಿಲ್ಲ. ಆದರೆ, ಮಹಿಳೆಯರ ಅಂತಸ್ತು ಹಾಗೂ ಅವರ ಸಾಮಾಜಿಕ ಸಹಭಾಗಿತ್ವದ ಕುರಿತಾಗಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗಳು ಆರಂಭವಾದಾಗ ಮೊಟ್ಟ ಮೊದಲ ಬಾರಿಗೆ ಎಂಬಂತೆ ಭಾರತ ಸರ್ಕಾರವು ಎಚ್ಚೆತ್ತುಕೊಂಡು ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಯಥೋಚಿತ ವರದಿ ನೀಡಲು "ರಾಷ್ಟ್ರೀಯ ಆಯೋಗ"ವೊಂದನ್ನು ರಚಿಸಿತು. ಈ ಆಯೋಗದ ಸಂಶೋಧನಾಧ್ಯಯನ ಪೂರ್ವಕವಾದ ವರದಿಯು ಭಾರತದಲ್ಲಿನ ಮಹಿಳಾ ಅಧ್ಯಯನದ ಮಹತ್ತರ ಮೈಲಿಗಲ್ಲು ಎನ್ನಿಸಿಕೊಂಡಿತು.

ಹುಟ್ಟುವಾಗ ಸ್ತ್ರೀ-ಪುರುಷರ ನಡುವಿನ ಶಾರೀರಿಕ ವ್ಯತ್ಯಾಸಗಳೇನೇ ಇದ್ದರೂ, ಅವುಗಳ ಕುರಿತಂತೆ ಸಮಾಜದಲ್ಲಿ ಸಂಸ್ಕೃತಿ ನೀಡುತ್ತಾ ಬಂದಿರುವ ವ್ಯಾಖ್ಯಾನದಿಂದಾಗಿ ಮತ್ತು ಸ್ತ್ರೀ-ಪುರುಷರಿಗೆ ವಹಿಸುತ್ತಾ ಬಂದಿರುವ ಪಾತ್ರ ಮತ್ತು ಹೊಣೆಗಾರಿಕೆಯ ಕಾರಣದಿಂದಾಗಿ ಲಿಂಗಭೇದ ಹುಟ್ಟಿಕೊಂಡಿದೆ. ಲಿಂಗಭೇದದ ಮುಂದುವರಿದ ಭಾಗವೇ "ಲಿಂಗ ತಾರತಮ್ಯತೆ". ವ್ಯಕ್ತಿಗಳ ಜೈವಿಕ ಲಿಂಗದ ಕಾರಣದಿಂದಾಗಿ ಅವರ ನಡುವೆ ವ್ಯತ್ಯಾಸ ಕಲ್ಪಿಸಿ ಅವರಿಗೆ ಬೇರೆ ಬೇರೆ ಪಾತ್ರಗಳನ್ನು, ಹೊಣೆಗಾರಿಕೆಗಳನ್ನು, ಅಂತಸ್ತುಗಳನ್ನು ಸಾಮಾಜಿಕ ಸ್ಥಾನಮಾನಗಳನ್ನು, ಅವಕಾಶಗಳನ್ನು ನೀಡುತ್ತಾ ಬಂದಿರುವುದರ ಪರಿಣಾಮವಾಗಿಯೇ "ಲಿಂಗ ತಾರತಮ್ಯ"ವೆಂದು ಕಾಣಬರುತ್ತಿದೆ.

ಶತಮಾನಗಳಿಂದಲೂ ಮನೆಯ ಹೆಣ್ಣುಮಕ್ಕಳ ವಿವಾಹದ ಹೊಣೆಗಾರಿಕೆ ಅವರ ತಾಯ್ತಂದೆಯರಿಗೆ ಸೇರಿದ್ದೆಂಬುದು ಒಂದು ಸ್ವೀಕೃತ ಕಲ್ಪನೆಯಾಗಿದೆ. ಈ ಹೊಣೆಗಾರಿಕೆಯ ನಿಭಾವಣೆಯಲ್ಲಿ ವಿವಾಹವಾಗಲಿರುವ ಹೆಣ್ಣುಮಗಳ ಅಭಿಮತ, ಒಪ್ಪಿಗೆ, ನಿರಾಕರಣೆಗಳಿಗೆ ಬೆಲೆಯಿಲ್ಲ. ಅಂದರೆ, ತನ್ನ ಜೀವನ ಸಂಗಾತಿಯ ಆಯ್ಕೆಯ ವಿಚಾರದಲ್ಲಿ ಆಕೆಗೆ ಸ್ವಾತಂತ್ರ್ಯವಿಲ್ಲ. ಆಕೆಯ ಪರವಾಗಿ ಆಕೆಯ ತಾಯ್ತಂದೆಯರೇ ಆ ತೀರ್ಮಾನ ತೆಗೆದುಕೊಂಡುಬಿಡುತ್ತಾರೆ. ಭಾರತೀಯ ವಿವಾಹ ಸಂದರ್ಭದಲ್ಲಿ ಹಿಂದು, ಮುಸ್ಲಿಂ ಹಾಗೂ ಕ್ರೈಸ್ತ ಸಮುದಾಯಗಳಲ್ಲಿ ಹೆಣ್ಣು ಮಕ್ಕಳಿಗೆ ಆತಂಕಕಾರಿಯಾಗಿ ಬೆಳೆದು ಬಂದಿರುವ ಒಂದು ಸಾಮಾಜಿಕ ಪಿಡುಗು ವರದಕ್ಷಿಣೆ. ಇದೊಂದು ಅಭಿಶಾಪದಂತೆ ಹೆಣ್ಣು ಮಕ್ಕಳನ್ನು ಕಾಡುತ್ತಿದೆ. ಗಂಡಿನ ಶ್ರೇಷ್ಠತೆಯನ್ನು ಸಾರುವ ಹಾಗೂ ಹೆಣ್ಣಿನ ಮೌಲ್ಯವನ್ನು ಹೀನಾಯಗೊಳಿಸುವ ಪ್ರಯತ್ನವೂ ಇದರಲ್ಲಿದೆ.

ಆರ್ಥಿಕ ಕ್ಷೇತ್ರ : ಮಾನವ ಇತಿಹಾಸದ ಆರಂಭದಿಂದ ಇಂದಿನವರೆಗೂ ಸ್ತ್ರೀಯರು ಆರ್ಥಿಕ ಕ್ಷೇತ್ರದಲ್ಲಿ ಪುರುಷರೊಂದಿಗೆ ಜೀವನ ನಿಭಾವಣೆಯ ದೃಷ್ಟಿಯಿಂದ ದುಡಿಮೆ ಮಾಡುತ್ತಲೇ ಬಂದಿದ್ದಾರೆ. ಕೈಗಾರಿಕಾ ಕ್ರಾಂತಿ ಆರಂಭವಾಗಿ ಕೈಗಾರಿಕೆಗಳು, ಕಂಪನಿಗಳು ಹಾಗೂ ಕಾರ್ಖಾನೆಗಳು ಸ್ಥಾಪನೆಯಾಗುವವರೆಗೂ ಸ್ತ್ರೀ-ಪುರುಷರು ಸಮಾನ ನೆಲೆಯಲ್ಲಿಯೇ ದುಡಿಯುತ್ತಿದ್ದರು ಎಂದರೂ ಸಲ್ಲುವುದು. ಆದರೆ, ಆಕೆಯ ಅಂತಹ ದುಡಿಮೆಗೆ ಸರಿಯಾದ ಮಾನ್ಯತೆ ಎಂಬುದೇ ಇರಲಿಲ್ಲ. ಉದ್ಯೋಗ ಸಹಭಾಗಿತ್ವದ ವಿಷಯದಲ್ಲಿ ಸ್ತ್ರೀ ಪುರುಷರ ನಡುವೆ ಹೋಲಿಕೆ ಮಾಡಿದಾಗ ಪುರುಷರಿಗಿಂತಲೂ ಸ್ತ್ರೀಯರು ಬಹಳ ಹಿಂದಿರುವುದು ಗೋಚರಕ್ಕೆ ಬರುವುದು.

ಸ್ತ್ರೀಯರ ಕುರಿತಾದ ಉತ್ಪ್ರೇಕ್ಷಿತ ಹಾಗೂ ವಿಡಂಬನಾತ್ಮಕ ವರದಿಗಳೇ ಅಧಿಕ. ಸಮೂಹ ಮಾಧ್ಯಮಗಳಲ್ಲಿ ಸ್ತ್ರೀ-ಪಾತ್ರಗಳನ್ನು ವಾಸ್ತವಿಕತೆಗೆ ತಕ್ಕಂತೆ ಚಿತ್ರಿಸುವುದು ಅಥವಾ ಪ್ರದರ್ಶಿಸುವುದೇ ತೀರಾ ಅಪರೂಪ. ಕೆಲವೇ ಕೆಲವು ಮಾಧ್ಯಮಗಳು ಅಂತಹ ಪ್ರಯತ್ನ ಮಾಡಬಹುದು ಅಷ್ಟೇ. ಹೆಚ್ಚಿನ ಸಂದರ್ಭಗಳಲ್ಲಿ ಈ ಪಾತ್ರಗಳನ್ನು ಮನೋರಂಜನೆಗೆ ಹೇಗೆ ಬೇಕೋ ಹಾಗೆ ಚಿತ್ರಿಸಲಾಗಿರುವುದು. ಇಂತಹ ಪ್ರಯತ್ನದಲ್ಲಿ ವಾಸ್ತವತೆಯನ್ನು ಅಲಕ್ಷಿಸಿ, ಸಾಮಾಜಿಕ ಜೀವನದ ಕಲ್ಪನಾತೀತವಾದ ಉತ್ಪ್ರೇಕ್ಷಿತ ರೂಪವನ್ನು ಪ್ರಕಟಿಸುವುದರಲ್ಲೇ ಈ ಮಾಧ್ಯಮಗಳು ಧನ್ಯತೆಯನ್ನು ಕಾಣುತ್ತಿವೆ. ಕೆಲವೊಮ್ಮೆ ಮಾಧ್ಯಮಗಳು ಬಿಂಬಿಸುವ ಲಿಂಗ ಪ್ರತಿಮೆಗಳು ನೋಡುಗರ ಅಥವಾ ಪ್ರಾಯೋಜಕರ ಕಲ್ಪನೆಯು ಆದರ್ಶ ವಿಡಂಬನಾ ಚಿತ್ರಗಳಂತೆಯೂ ಕಾಣಬರುತ್ತವೆ.

ಮಾಧ್ಯಮಗಳ ಜಾಹೀರಾತುಗಳು ಸ್ತ್ರೀ ವಿಷಯಗಳಿಗೆ ಎಂತಹ ಅನ್ಯಾಯವನ್ನು ಹಾಗೂ ಅಪಚಾರವನ್ನು ಎಸಗುತ್ತವೆ ಎಂದರೆ ಲೂಸಿಕೊಮಿಸಾರಳ ಆಕ್ರೋಶಭರಿತ ಉದ್ಗಾರಗಳಲ್ಲಿ ಗಮನಿಸಬಹುದು. "ಜಾಹೀರಾತುಗಳು ಸ್ತ್ರೀಯರನ್ನು ಗಂಡಸರಿಗಿಂತಲೂ ಕಡಿಮೆ ಬುದ್ಧಿವಂತರನ್ನಾಗಿ, ಹಾಗೂ ಗಂಡಸರನ್ನು ಅವಲಂಬಿಸಿದವರನ್ನಾಗಿ ತೋರ್ಪಡಿಸುವುದಲ್ಲದೆ, ಸ್ತ್ರೀಯಾದವಳ ಪಾತ್ರವನ್ನು ಆಕೆ ಒಬ್ಬ ಪ್ರಲೋಭಕಳಾಗಿ, ಪತ್ನಿಯಾಗಿ, ತಾಯಿಯಾಗಿ ಮತ್ತು ಲೈಂಗಿಕ ವಸ್ತುವಾಗಿ

ಕಾಣಿಸಿಕೊಳ್ಳುವ ಪಡಿಯಚ್ಚುಗಳಂತಹ ಪಾತ್ರಗಳನ್ನು ಅವೇ ಒಂದು ಆದರ್ಶವೆಂಬಂತೆ ಬಿಂಬಿಸುವುವು. ಇದರಿಂದಾಗಿ, ಸ್ತ್ರೀಯರಿಗೂ ಕೂಡ ತಮ್ಮ ಬಹಳ ಮುಖ್ಯವಾದ ಪಾತ್ರ ಯಾವುದೆಂದರೆ ಗಂಡಸರನ್ನು ಸಂಪ್ರೀತಿಗೊಳಿಸುವುದು ಮತ್ತು ಪತ್ನಿಯರಾಗಿ, ತಾಯಿಯರಾಗಿ ಮತ್ತು ಗೃಹನಿರ್ವಾಹಕಿಯರಾಗಿ ಪಾತ್ರ ನಿರ್ವಹಿಸುವುದರಿಂದ ಧನ್ಯತೆಯನ್ನು ಕಾಣುವಂತಹ ನಂಬಿಕೆ ಉತ್ಪನ್ನವಾಗುವಂತಾಗುವುದು. ಅಲ್ಲದೆ, ಸ್ತ್ರೀಯರಿಗೆ ತಾವು ಸಾಕಷ್ಟು ಸೌಂದರ್ಯವತಿಯರಾಗಿಲ್ಲದೇ ಇದ್ದಲ್ಲಿ ತಾವು ಸ್ತ್ರೀ ಸಹಜವಾದ ಗುಣ ಲಕ್ಷಣವನ್ನು ಹೊಂದಿಲ್ಲವೇನೋ ಎಂಬ ಭ್ರಮೆ ಉತ್ಪನ್ನವಾಗುವುದು.[೧೩]

ಮುದ್ರಣ ಮಾಧ್ಯಮಗಳಿಗಿಂತಲೂ ದೃಶ್ಯ ಮಾಧ್ಯಮದ ಪ್ರಭಾವ ಅಧಿಕವಾದುದು. ಅಕ್ಷರಸ್ಥ–ಅನಕ್ಷರಸ್ಥರನ್ನೊಳಗಂಡಂತೆ ಬಹು ದೊಡ್ಡ ಸಂಖ್ಯೆಯ ಜನರನ್ನು ಅದು ತಲುಪುವುದು. ರಾತ್ರಿ–ಹಗಲುಗಳೆಂಬ ವ್ಯತ್ಯಾಸವಿಲ್ಲದೆ ಅದು ಸುದ್ದಿ ಬಿತ್ತರಣೆ ಮಾಡುತ್ತಲೇ ಇರುವುದು. ಇಲ್ಲಿನ ಸಚಿತ್ರಾತ್ಮಕ ವರದಿ ನಿಜಕ್ಕೂ ಪ್ರಭಾವಶಾಲಿಯಾದುದು. ಹೆಣ್ಣಿನ ದೇಹ ಪ್ರದರ್ಶನ ಮಾಡುವುದರ ಮೂಲಕ ಗಲ್ಲಾಪೆಟ್ಟಿಗೆ ತುಂಬಲು ಹೆಚ್ಚಿನ ಚಲನ ಚಿತ್ರೋದ್ಯಮ ಕಾತುರವಾಗಿರುತ್ತದೆ. ಮಾಧ್ಯಮದ ಸ್ವಾತಂತ್ರ್ಯದ ಹೆಸರಿನಲ್ಲಿ ನೋಡುವವರ ಕಾಮನೆಗಳನ್ನು ಕೆರಳಿಸಿ ಅವರುಗಳಿಗೆ ವಿಲಕ್ಷಣ ಆನಂದವನ್ನು ತರುವ ದೃಶ್ಯಗಳನ್ನೇ ಅವು ಆಗಿಂದಾಗ್ಗೆ ತೋರಿಸುತ್ತಿರುತ್ತವೆ.

ಇಂದು ಮಾರುಕಟ್ಟೆಗೆ ಬರುತ್ತಿರುವ ಬಹುತೇಕ ಚಲನಚಿತ್ರಗಳು ಹಾಗೂ ಟಿ.ವಿ. ಪರದೆ ಮೇಲೆ ತೋರಿಸಲಾಗುತ್ತಿರುವ ಧಾರಾವಾಹಿಗಳು ಸ್ತ್ರೀಯರ ಮಾನಭಂಗ, ಹಿಂಸೆ, ಸಾಮೂಹಿಕ ಅತ್ಯಾಚಾರ, ದ್ವಂದ್ವಾರ್ಥಗಳನ್ನು ನೀಡುವಂತಹ ಸಂಭಾಷಣೆ, ಸ್ತ್ರೀಯರನ್ನು ಲೈಂಗಿಕ ಭೋಗದ ವಸ್ತುವಾಗಿ ಚಿತ್ರಿಸುವುದು– ಇವುಗಳನ್ನೇ ತಮ್ಮ ಯಶಸ್ಸಿನ ಭಾಗವನ್ನಾಗಿ ಮಾಡಿಕೊಂಡಿವೆ. ಈಕೆಯ ಶೋಷಣೆಯ ನಾನಾ ಮುಖಗಳನ್ನು ಅಭಿವ್ಯಕ್ತಗೊಳಿಸುವ ಚಲನಚಿತ್ರಗಳು ಧಾರಾವಾಹಿಗಳು ಇಂದು ಹೇರಳವಾಗಿವೆ. ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ ಹಲವಾರು ಕ್ಷೇತ್ರಗಳಲ್ಲಿ ದುಡಿಯುತ್ತಾ ಸಾಧನೆಗಳ ಮೇಲೆ ಸಾಧನೆಗಳನ್ನು ನಡೆಸುತ್ತಲಿದ್ದರೂ ಅವರನ್ನು ಈ ರೀತಿ ಹೀನಾಯವಾಗಿ ಚಿತ್ರೀಕರಿಸಿರುವುದು ನಿಲ್ಲದಿರುವುದು ಆಶ್ಚರ್ಯವೆನಿಸುವುದು.

ಕುಟುಂಬದ ಹಾಗೂ ಸಮಾಜದ ನಿರ್ಲಕ್ಷಕ್ಕೆ ಅಥವಾ ದೌರ್ಜನ್ಯಕ್ಕೆ ಒಳಗಾಗಿ ಸಂಕಷ್ಟಗಳ ಸರಮಾಲೆಯನ್ನೇ ಕುತ್ತಿಗೆಗೆ ಹಾಕಿಕೊಂಡಿರುವ ಹೆಣ್ಣನ್ನು ಸದಾಕಾಲ ಅಳುತ್ತಾ, ಬೇಡುತ್ತಾ, ಕೋಟಲೆಗಳನ್ನು ಅನುಭವಿಸುತ್ತಾ ಅವಮಾನ–ಅವಹೇಳನೆಗಳಿಗೆ ಗುರಿಯಾಗುತ್ತಿರುವಂತೆ ತೋರಿಸುವುದು ಅಥವಾ ಇತರರಿಗಾಗಿ ತನ್ನ ದೇಹ ಹಾಗೂ ಮನಸ್ಸುಗಳೆರಡನ್ನೂ ಒತ್ತೆಯಿಟ್ಟಂತೆ ಅವಳ ಪಾತ್ರವನ್ನು ಚಿತ್ರೀಕರಿಸುವುದು ದೃಶ್ಯ ಮಾಧ್ಯಮವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವವರಿಗೆ ಹಣಗಳಿಕೆಯ ಪ್ರಮುಖ ಸಾಧನವಾಗಿದೆ. ಮಹಿಳೆಯರ ತ್ಯಾಗ, ಬಲಿದಾನ, ಬದುಕಿನಲ್ಲಿ ಅವರಿಗಾಗುವ ನಿರಾಶೆಗಳು, ಜೀವನದಲ್ಲಿ ಅವರು ಎದುರಿಸುವ ವೈಫಲ್ಯಗಳು, ಅವರಿಗಾಗುವ

ಅನ್ಯಾಯ–ಅವಮಾನಗಳು, ಇಂತಹ ವಿಚಾರಗಳನ್ನೇ ಕೇಂದ್ರವಾಗಿ ಹೊಂದಿರುವಂತಹ ಅನೇಕ ಕಾರ್ಯಕ್ರಮಗಳು ಟಿ.ವಿ ದೂರದರ್ಶನಗಳಲ್ಲೂ ಬಿತ್ತರಿಸಲ್ಪಡುತ್ತವೆ. ಈ ಮೂಲಕ ಜನರ ಮನಸ್ಸಿನಲ್ಲಿ ಬೇರೂರಿರುವ ಲಿಂಗ ಪೂರ್ವಾಗ್ರಹಗಳನ್ನು ದೃಶ್ಯ ಮಾಧ್ಯಮ ಮತ್ತಷ್ಟು ಬಲಗೊಳಿಸುತ್ತದೆ". ಮಾಧ್ಯಮದ ಇಂತಹ ಪ್ರವೃತ್ತಿ ಬದಲಾಗಬೇಕಿರುವುದು ಇಂದಿನ ಅಗತ್ಯತೆಗಳಲ್ಲೊಂದು ಎನ್ನಬಹುದು.[೧೪]

ಭಾರತದ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಸ್ತ್ರೀಯರಿಗೆ ಸಾಂಪ್ರದಾಯಕವಾಗಿ ಹಾಗೂ ತಾತ್ವಿಕವಾಗಿ ಗೌರವದ ಸ್ಥಾನವಿರಬಹುದಾಗಿದ್ದರೂ ಅವರು ಹಲವಾರು ಬಗೆಯ ಪುರುಷ ಕ್ರೌರ್ಯಗಳಿಗೆ ಈಗಲೂ ಒಳಗಾಗುತ್ತಿದ್ದಾರೆ. ಸ್ತ್ರೀಯರ ವಿರುದ್ಧದ ಅಪರಾಧಗಳು ಹಾಗೂ ಹಿಂಸಾಚಾರಗಳು ಸ್ವಾತಂತ್ರ್ಯ ಬಂದು ೬೭ ವರ್ಷಗಳಾದರೂ ಹೇಳಿಕೊಳ್ಳುವಷ್ಟು ಕಡಿಮೆಯಾಗಿದೆ ಎನ್ನುವಂತಿಲ್ಲ. ಸ್ತ್ರೀಯರ ವಿರುದ್ಧದ ಅಪರಾಧಗಳು ಅಥವಾ ಹಿಂಸಾಚಾರಗಳು ಹೀಗೆ ವೈವಿಧ್ಯಮಯವಾಗಿರುವುದಲ್ಲದೆ ಹೊಸ ಹೊಸ ರೂಪಗಳನ್ನು ಕೂಡ ತಳೆಯುತ್ತಿದೆ.

ಸ್ತ್ರೀ–ಪುರುಷ ಸಮಾನತೆಯ ಯುಗದಲ್ಲಿ ಒಂದೊಮ್ಮೆ ಪುರುಷರಿಗೆ ಮಾತ್ರ ಸೀಮಿತವಾಗಿದ್ದ ಹಲವಾರು ಸ್ಥಳಗಳಲ್ಲಿ (ಉದಾ: ಸೈನ್ಯ ಹಾಗೂ ಪೋಲೀಸು ಇಲಾಖೆಗಳು, ಸಾರಿಗೆ ವಾಹನಗಳ ಚಲಾವಣೆ, ಹೋಟೆಲುಗಳಲ್ಲಿ ತಿಂಡಿ–ಕಾಫಿ ವಿತರಣೆ, ಶುಚೀಕರಣ ಇತ್ಯಾದಿ) ಸ್ತ್ರೀಯರೂ ಕೂಡ ಪ್ರವೇಶಿಸಿ ತಮ್ಮ ಸಾಮರ್ಥ್ಯವನ್ನು ತೋರ್ಪಡಿಸುತ್ತಿರುವ ಇಂದಿನ ಕಾಲಘಟ್ಟದಲ್ಲಿಯೂ ಹೆಣ್ಣು ಮಕ್ಕಳ ಜನನವನ್ನೇ ಇಚ್ಛಿಸದೆ ಅಂತಹ ಮಕ್ಕಳನ್ನು ಹುಟ್ಟುವ ಮೊದಲೇ, ಅರ್ಥಾತ್ ಅವು ಭ್ರೂಣದ ಹಂತದಲ್ಲಿರುವಾಗಲೇ ಹೊಸಕಿ ಹಾಕುವ ಬಹಳಷ್ಟು ಮಂದಿ ಭಾರತದಲ್ಲಿದ್ದಾರೆ ಎಂಬುದು ಆಶ್ಚರ್ಯವೆನಿಸಬಹುದಾದರೂ ಅದೊಂದು ವಾಸ್ತವತೆ. ಪಿತೃ ಪ್ರಧಾನ ಸಾಮಾಜಿಕ ವ್ಯವಸ್ಥೆಯನ್ನು ಇಂದಿಗೂ ಮುಂದುವರೆಸಿಕೊಂಡು ಬಂದಿರುವ ಭಾರತದ ಶಿಕ್ಷಿತ ನಗರ ಸಮುದಾಯದಲ್ಲಿ ಅಷ್ಟಾಗಿ ಅಲ್ಲದೇ ಇದ್ದರೂ ಅಶಿಕ್ಷಿತರ ವಲಯದಲ್ಲಿ ಹೆಣ್ಣು ಮಗುವಿನ ಜನನಕ್ಕೆ ಸಂಭ್ರಮದ ಸ್ವಾಗತ ಸಿಗುವುದು ಅಪರೂಪ. ಹೆಣ್ಣು ಮಗುವಿನ ಬಗೆಗಿನ ತಿರಸ್ಕಾರಕ್ಕೆ ಗಂಡು ಮಗುವಿಗೆ ನೀಡುವ ಕೆಲವು ವಿಶೇಷ ಸಾಮಾಜಿಕ ಪ್ರಾಮುಖ್ಯ ಕೂಡ ಕಾರಣವಾಗಿದೆ. ತಮ್ಮ ವ್ಯಕ್ತಿಗತ ಜೀವನದಲ್ಲಿ ತಾವು ಹೆಣ್ಣಾಗಿ ಹುಟ್ಟಿದ್ದಕ್ಕಾಗಿ ಜೀವನದುದ್ದಕ್ಕೂ ಪಡಬಾರದ ಕಷ್ಟಕೋಟಲೆಗಳನ್ನು ಹಾಗೂ ದುಃಖ ಪರಂಪರೆಗಳನ್ನು ಅನುಭವಿಸಿಕೊಂಡವರು ತಮ್ಮ ಹೆಣ್ತನದ ಬಗ್ಗೆಯೇ ಜಿಗುಪ್ಸೆ ಪಟ್ಟುಕೊಂಡಿರಬಹುದಾಗಿರುತ್ತದೆ. ಇಂತಹ ಮಂದಿ ತಾವು ಜೀವನದಲ್ಲಿ ಸಂಕಷ್ಟಗಳನ್ನು ಅನುಭವಿಸಿದ್ದು ಸಾಕು, ತಾವು ಪಟ್ಟ ಇಂತಹ ಕಷ್ಟಕಾರ್ಪಣ್ಯಗಳು ತಮ್ಮ ಹೆಣ್ಣು ಮಕ್ಕಳಿಗೆ ಬಾರದಿರಲಿ ಎಂದು ಮನಸ್ಸಿನಲ್ಲಿಯೇ ನಿರ್ಧರಿಸಿ ಭ್ರೂಣಹತ್ಯೆಗೆ ಒಪ್ಪಿಕೊಳ್ಳುವುದಿದೆ.

ಭ್ರೂಣಹತ್ಯೆ ಶಿಕ್ಷಾರ್ಹ ಅಪರಾಧವೆಂಬುದನ್ನು ಕಾಯ್ದೆ–ಕಾನೂನುಗಳ ಮೂಲಕ ಸಾರಲಾಗಿದ್ದರೂ ಅವುಗಳ ಉಲ್ಲಂಘನೆ ನಡೆಯುತ್ತಲೇ ಇದೆ. ಪುರುಷ ಪ್ರಧಾನ ವ್ಯವಸ್ಥೆಯ ಒಂದು ಭಾಗವಾಗಿದ್ದು ಅದರ ಪ್ರಭಾವದಿಂದ ಹೊರಬರಲಾಗದ ಕಾರಣವೋ ಅಥವಾ ಲಂಚದ ಹಣದ ಪರಿಣಾಮವೋ

ಎಂಬಂತೆ ಈ ಭ್ರೂಣಹತ್ಯೆ ನಿಷೇದದ ಕಾಯ್ದೆಯನ್ನು ಅಷ್ಟೊಂದು ಗಂಭೀರವಾಗಿ ಜಾರಿಗೊಳಿಸಿದಂತೆ ಕಾಣುವುದಿಲ್ಲ.

ಮಹಿಳೆಯರ ಬಗೆಗಿನ ಹೆಣ್ತನ ಹಾಗೂ ತಾಯ್ತನಗಳ ಬಗೆಗಿನ ದೃಷ್ಟಿ ಮಾನವೀಯತೆಯಿಂದ ಕೂಡಿರಬೇಕು ಹಾಗೂ ಸ್ತ್ರೀ-ಪುರುಷ ಸಮಾನತೆಯ ನೆಲೆಯಲ್ಲಿರಬೇಕು. ಭ್ರೂಣಹತ್ಯೆಯ ಸಂಬಂಧವಾಗಿ "ಮಾನವ ಹಕ್ಕುಗಳ ಆಯೋಗ"ವು ಹೇಳುವುದೆಂದರೆ "ತನ್ನ ಬಸಿರಿನ ಮೇಲೆ ಯಾವುದೇ ಅಧಿಕಾರ ಹೊಂದಲು ಸಾಧ್ಯವಾಗದ ಇಂತಹ ವಿಷಯದಲ್ಲಿ ಮಹಿಳೆಯರನ್ನು ಬಲಿಪಶುವೆಂದು ಪರಿಗಣಿಸಬೇಕೇ ಹೊರತು ಅಪರಾಧಿಯನ್ನಾಗಿ ಅಲ್ಲ" ಮಹಿಳೆಯರ ಅಸಹಾಯಕ, ಅವಲಂಬನಾ ಹಾಗೂ ಅನಕ್ಷರತಾ ಪರಿಸ್ಥಿತಿಗಳನ್ನು ನಿವಾರಣೆ ಮಾಡಿದರೆ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಅಷ್ಟೊಂದು ಕಷ್ಟವಾಗದು.

ಭಾರತದ ಸಂವಿಧಾನ ಹಾಗೂ ಅದರಲ್ಲಿರುವ ಹಲವಾರು ವಿಧಿಗಳ ಪ್ರಕಾರ ಭಾರತ ಸರ್ಕಾರವು ಕೈಗೊಂಡಿರುವ ಹೆಚ್ಚಿನ ಎಲ್ಲಾ ಶಾಸನಗಳು ಸ್ತ್ರೀ-ಪುರುಷ ಸಮಾನತೆಯನ್ನು ಎತ್ತಿ ಹಿಡಿಯುತ್ತವೆ. ಸ್ತ್ರೀಯರಿಗೆ ಹೆಚ್ಚಿನ ಎಲ್ಲಾ ರಂಗಗಳಲ್ಲೂ ಪುರುಷರಿಗೆ ಸಮಾನವಾದ ಅವಕಾಶಗಳನ್ನು ಕಲ್ಪಿಸಲಾಗಿದೆ. ಸ್ತ್ರೀಯರು ದುರ್ಬಲರೆಂಬ ಕಾರಣಕ್ಕಾಗಿ ಅವರ ಶೋಷಣೆ ಸಲ್ಲದೆಂದು ಅವರ ಹಿತಸಂರಕ್ಷಣೆಗಾಗಿ ಹತ್ತು ಹಲವಾರು ಕಾರ್ಯಕ್ರಮಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ವಾತಂತ್ರ ಬಂದಲಾಗಾಯ್ತಿನಿಂದಲೂ ನಡಸಿಕೊಂಡು ಬಂದಿವೆ. ಇಂತಹ ಕಾರ್ಯಕ್ರಮಗಳ ಫಲವಾಗಿ ಹಾಗು ಸಾಕ್ಷರತೆಯ ಹೆಚ್ಚಳದಿಂದಾಗಿ ಸ್ತ್ರೀಯರ ಸಂಖ್ಯಾ ಪ್ರಮಾಣದಲ್ಲಿ ಹಾಗೂ ಲಿಂಗಾನುಪಾತದಲ್ಲಿ ಒಂದಿಷ್ಟು ಹೆಚ್ಚಳ ಸಾಧ್ಯವಾಗಿದೆ.

ಶತಮಾನಗಳಿಂದಲೂ ಅವಗಣನೆಗೆ ಒಳಗಾಗಿರುವ ಹಾಗೂ ಸಾಮಾಜಿಕ ಅಸಮಾನತೆಯ ಬಲಿಪಶುಗಳಾಗಿರುವ ಸ್ತ್ರೀಯರನ್ನು ಸಮಾನತೆಯ ದಿಕ್ಕಿನಲ್ಲಿ ಕೊಂಡೊಯ್ಯುವ ಪ್ರಯತ್ನವಾಗಿ ಮಕ್ಕಳ ಹಂತದಲ್ಲಿರುವಾಗಲೇ ಹೆಣ್ಣು ಮಕ್ಕಳ ಅಭಿವೃದ್ಧಿಯ ಬಗ್ಗೆ ಕಾಳಜಿ ಹೊಂದಿದ್ದು ಹಲವಾರು ಕಾರ್ಯಕ್ರಮಗಳು ಜಾರಿಯಲ್ಲಿವೆ. ಹೆಣ್ಣು ಮಗುವಿಗಾಗಿ ಭಾಗ್ಯಲಕ್ಷ್ಮಿ ಯೋಜನೆ-೨೦೦೬-೨೦೦೭ ರಿಂದ ಜಾರಿಯಾಗಿದೆ. ಹೆಣ್ಣು ಮಗುವಿಗೆ ಆರೋಗ್ಯ ವಿಮೆ ಜಾರಿಯಾಗಿದೆ. ಹೆಣ್ಣು ಮಗುವಿಗೆ ಪೋಷಕರಿಗೆ ಜೀವವಿಮಾ ಅನಕೂಲತೆಗಳು, ಜಾಗೃತಿ ಯೋಜನೆ, ಗ್ರಾಮಾಂತರ ಪ್ರದೇಶದ ಬಾಲಕಿಯರಿಗೆ ವಸತಿ ನಿಲಯ ನಡೆಸಲು ಆರ್ಥಿಕ ನೆರವು ನೀಡಿಕೆ, ಹಾಜರಾತಿ ಶಿಷ್ಯವೇತನಕ್ಕೆ ಏರ್ಪಾಡು, ಶಿಶುಪಾಲನಾ ಕೇಂದ್ರಗಳ ಸ್ಥಾಪನೆಗೆ ನೆರವು, ನಿರ್ಗತಿಕ ಮಕ್ಕಳ ಕುಟೀರಗಳನ್ನು ತೆರೆಯಲು ಅನುಮತಿ ಮತ್ತು ನೆರವು, ಸಂಕಷ್ಟ ಪರಿಸ್ಥಿತಿಯಲ್ಲಿರುವ ತಾಯಂದಿರ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ದೊರಕಿದೆ. ಭಾಷೆಯಲ್ಲಿ ಹೆಂಗಸನ್ನು ಪ್ರತಿನಿಧೀಕರಿಸುತ್ತಿರುವ ರೀತಿಯನ್ನು ಗಮನಿಸಿದರೆ, ಆಯಾ ಭಾಷಿಕ ಸಮುದಾಯವು ಹೆಣ್ಣಿನ ಬಗ್ಗೆ ಹೊಂದಿರುವ ನಂಬಿಕೆಗಳು, ತೀರ್ಮಾನಗಳು, ದೃಷ್ಟಿಕೋನಗಳು ತಿಳಿದುಬರುತ್ತವೆ. ಈ ಪ್ರತಿನಿಧೀಕರಣಗಳಿಗೆ

ಯಾರು ಕಾರಣರು ಎಂಬ ಪ್ರಶ್ನೆ ಅಷ್ಟು ಮುಖ್ಯವಲ್ಲ. ಆದರೆ ಅವುಗಳನ್ನು ಬಳಸುವ ಭಾಷಾಸಮುದಾಯವು ಆ ಪ್ರತಿನಿಧೀಕರಣಗಳ ಹಿಂದೆ ಇರುವ ನೆಲೆಗಳಿಗೆ ತನ್ನ ಸಮ್ಮತಿಯನ್ನು ನೀಡುತ್ತಿರುತ್ತದೆ ಎಂಬುದು ಮುಖ್ಯ.

ಭಾಷಾಪರಿಕರಗಳಿಗೆ ಅಂಟಿಕೊಂಡ ಹೆಣ್ಣುತನ, ಇಲ್ಲವೇ ಗಂಡುತನದ ಮಾದರಿಗಳಿಂದಾಗಿ ಒಂದು ಕಥನದ ಸ್ತ್ರೀತ್ವ ಇಲ್ಲವೇ ಪುರುಷತ್ವಗಳನ್ನು ನಿರ್ಧರಿಸುತ್ತದೆ. ಮೆಲ್ಲಗೆ ಮೇಲಿನ ಶೃತಿಯಲ್ಲಿ ಮಾತಾಡಿದರೆ ಅದು ಹೆಣ್ಣುತನ ಮತ್ತು ಸೂಕ್ಷ್ಮತೆಗಳನ್ನು ಮುಂಚೂಣಿಗೆ ತರುತ್ತದೆ. ಒರಟಾದ ಮಾತುಗಳನ್ನು ಬಳಸದೆ, ಸೌಮ್ಯ ಉಕ್ತಿಗಳನ್ನು ಮೊರೆಹೋಗುವ ಮೂಲಕ ಹೆಣ್ಣುತನಕ್ಕೂ, ಔಚಿತ್ಯದ ನೆಲೆಗೂ ಇರುವ ಸಂಬಂಧದ ಬಗ್ಗೆ ನಮ್ಮ ನಂಬಿಕೆಗಳು ಪ್ರಕಟಗೊಳ್ಳುತ್ತವೆ.

ಒಂದೇ ಲಿಂಗಕ್ಕೆ ಸೇರಿದವರು ನಡೆಸುವ ಮಾತುಕತೆಯ ರೀತಿಗಳ ನಿಟ್ಟಿನಿಂದ ನೋಡಿದಾಗ ಹೆಣ್ಣು ಮತ್ತು ಗಂಡುಗಳು ಸ್ವಲ್ಪವಾದರೂ ಭಿನ್ನ ಸಂಸ್ಕೃತಿಯ ನಿಯಮಗಳನ್ನು ಹೊಂದಿರುತ್ತಾರೆಂದು ತಿಳಿಯುವುದು ಸಹಜವಾಗಿದೆ. ಹೆಣ್ಣು ಗಂಡುಗಳ ನಡುವಣ ಸಂವಹನಗಳನ್ನು ಭಿನ್ನ ಸಂಸ್ಕೃತಿಯ ನೆಲೆಯಲ್ಲಿ ನೋಡುವ ಯತ್ನ ಇಲ್ಲಿಗೇ ನಿಲ್ಲುವುದಿಲ್ಲ. ಬೇರೆಬೇರೆ ಲಿಂಗಕ್ಕೆ ಸೇರಿದವರು ಮಾತುಕತೆಯಾಡುವಾಗ ಏನಾಗುತ್ತದೆ ಎಂಬುದನ್ನು ವಿಶ್ಲೇಷಿಸಬೇಕಾಗುತ್ತದೆ. ಅಂದರೆ, ಭಿನ್ನ ಸಂಸ್ಕೃತಿಗಳಿಗೆ ಸೇರಿದ ಸದಸ್ಯರು ಸಮಾನತೆಯ ನೆಲೆಯಲ್ಲಿ ಮಾತುಕತೆಗೆ ತೊಡಗುವುದನ್ನು ಪರಿಶೀಲಿಸಬೇಕಾಗುತ್ತದೆ. ಭಿನ್ನಸಂಸ್ಕೃತಿ ಚೌಕಟ್ಟನ್ನು ಅನ್ವಯಿಸಿದರೆ, ಗಂಡು ಹೆಣ್ಣುಗಳು ಪರಸ್ಪರ ಅರ್ಥಮಾಡಿಕೊಳ್ಳುವಾಗ ತಾವು ಎಳವೆಯಲ್ಲಿ ಕಲಿತ ನಿಯಮಗಳನ್ನೇ ಬಳಸುತ್ತಾರೆಂದು ಹೇಳಬೇಕಾಗುತ್ತದೆ. ಹಾಗಾಗಿ, ಅಪಾರ್ಥಗಳಾದಾಗ ಅದಕ್ಕೆ ಸಂಸ್ಕೃತಿಗಳ ಭಿನ್ನತೆಯೇ ಕಾರಣವೆಂದು ಹೇಳುವುದು ಸಹಜ. ಸಾಮಾಜಿಕವಾಗಿ ಸಮಾನರಾದ ಹೆಂಗಸರು ಮತ್ತು ಗಂಡಸರ ನಡುವೆ ನಡೆಯುವ ಮಾತುಕತೆಯಲ್ಲಿ ಅಧಿಕಾರ ಸಂಬಂಧಕ್ಕೆ ಮಹತ್ವವಿಲ್ಲದಿರುವುದರಿಂದ ಆ ಮಾತುಕತೆಗಳ ವಿಶ್ಲೇಷಣೆಗೆ ಯಜಮಾನಿಕೆ ಆಧಾರಿತ ಮಾದರಿಗಿಂತ ಭಿನ್ನ ಸಂಸ್ಕೃತಿ ಮಾದರಿಯನ್ನು ಬಳಸುವುದೇ ಸರಿ ಎನ್ನಬಹುದು.

ಹಲವು ಸಮಾಜಗಳಲ್ಲಿ ಹೆಣ್ಣಾಗಿರುವುದೆಂದರೆ ಅಧೀನವಾಗಿ, ದುರ್ಬಲವಾಗಿ ಇರುವುದೆಂದೇ ಅರ್ಥ. ನಮ್ಮ ಜಗತ್ತು ಮತ್ತು ನಮ್ಮ ಸಾಮಾಜಿಕ ಜೀವನವನ್ನು ಕಟ್ಟುವಲ್ಲಿ, ಹೆಣ್ಣು ಗಂಡು ಎಂಬ ವಿಭಜನೆಗೆ ಒಳಗಾಗದೆ ಯಾವೊಬ್ಬ ವ್ಯಕ್ತಿಯೂ ಪಾರಾಗುವುದು ಸಾಧ್ಯವೇ ಇಲ್ಲ. ಜಂಡರ್ ಎಂಬುದು ಒಂದು ಸಾಮಾಜಿಕ ರಚನೆಯಾಗಿರುವುದರಿಂದಲೇ ಅದು ಮುಖ್ಯ. ನಮ್ಮ ಸ್ವಭಾವ ಇಲ್ಲವೇ ಜೈವಿಕ ರಚನೆಗೂ ಸಂಬಂಧವಿಲ್ಲ. ಧರ್ಮ, ಕುಲಚಹರೆ, ವಯಸ್ಸು, ವರ್ಗ, ದೃಷ್ಟಿಕೋನ, ಪ್ರದೇಶ ಮುಂತಾದವುಗಳೊಡನೆ ಪರಸ್ಪರ ಕ್ರಿಯಾಶೀಲವಾಗಿರುತ್ತವೆ. ಹಾಗಾಗಿ ಸಂಕಥನಗಳಲ್ಲಿ ಕಂಡು ಬರುವ ಲಿಂಗವ್ಯತ್ಯಾಸಗಳಿಗೆ ಭಿನ್ನಸಂಸ್ಕೃತಿಗಳು ಕಾರಣವೋ ಯಜಮಾನಿಕೆ ಕಾರಣವೋ ಅಥವಾ ಇವೆರಡೂ ಕಾರಣವೋ ಎಂದು ಚಿಂತಿಸುವುದು ಅಷ್ಟು ಮುಖ್ಯವೆನಿಸುವುದಿಲ್ಲ.

"ಲೋಕದಲ್ಲಿರುವ ವಸ್ತುಗಳು ಮತ್ತು ಘಟನೆಗಳು ನಮಗೆ ವರ್ಗೀಕೃತವಾದಂತೆ ತೋರುವುದಿಲ್ಲ. ಅವುಗಳನ್ನು ವರ್ಗೀಕರಿಸಿದಂತೆ ನಾವು ನಮ್ಮ ಗ್ರಹಿಕೆಯನ್ನು ಅವುಗಳ ಮೇಲೆ ಆರೋಪಿಸುತ್ತೇವೆ. ಹಾಗೆ ನೋಡಿದರೆ ವರ್ಗೀಕರಿಸುವವರು ನಾವೇ" ಎಂದು ಜೇಮ್ಸ್‌ಬ್ರಿಟಾನ್ ಹೇಳಿದ್ದಾನೆ.[೧೫] ನಮ್ಮ ಭಾಷೆಯಲ್ಲಿ ಹೀಗೆ ಸಂಕೇತೀಕರಣಗೊಂಡಿರುವ ನಿಯಮಗಳಲ್ಲಿ ಲಿಂಗತಾರತಮ್ಯವೂ ಒಂದಾಗಿದೆ. ನಾವು ನೋಡುವ 'ವಾಸ್ತವ'ದ ಮೇಲೆ ಈ ನಿಯಮದ ಪರಿಣಾಮ ದಟ್ಟವಾಗಿದೆ. ಹಾಗೆಯೇ 'ವಸ್ತುನಿಷ್ಠತೆ' ಎಂಬುದೂ ಕೂಡ ಪರಿಣಾಮ ಬೀರುತ್ತವೆ.

೧೯ನೇ ಶತಮಾನದಲ್ಲಿ ಸ್ತ್ರೀವಾದಿಗಳು ರಾಜಕಾರಣದಿಂದ ಹೆಂಗಸರನ್ನು ಹೊರಗಿಟ್ಟಿರುವ ಬಗ್ಗೆ ಪ್ರಶ್ನಿಸಿದರು. ಜೊತೆಗೆ ರಾಜ್ಯಶಕ್ತಿಯ ವ್ಯಾಪ್ತಿಗೆ ಬರುತ್ತಿದ್ದ ಕೆಲವು ವೃತ್ತಿಗಳಲ್ಲಿ ಹೆಂಗಸರಿಗೆ ಪ್ರವೇಶ ದೊರೆಯಬೇಕೆಂದರು ಉದಾಹರಣೆಗೆ, ವೈದ್ಯಕೀಯ, ಶೈಕ್ಷಣಿಕ, ಕಾನೂನು ಮುಂತಾದ ವಲಯಗಳು, ಏಕೆಂದರೆ, ಇವುಗಳ ವ್ಯಾಪ್ತಿಯಲ್ಲಿ ಹೆಂಗಸರು ಸೇರಿರಲೇ ಇಲ್ಲ. ರಾಜಕೀಯ ಮತ್ತು ಕಾನೂನಿನ ಸಂಸ್ಥೆಗಳಲ್ಲಿ ಮತ್ತು ಕೆಲವು ವೃತ್ತಿಗಳಲ್ಲಿ, ಹೆಂಗೆಸರಿಗೆ ಪ್ರವೇಶವನ್ನು ನಿಷೇಧಿಸುವ ಎಷ್ಟೋ ನ್ಯಾಯಾಲಯ ತೀರ್ಮಾನಗಳು ೧೯ನೇ ಶತಮಾನದ ಉತ್ತರಾರ್ಧದಲ್ಲಿ ಹೊರಬಿದ್ದವು.

ರಾಷ್ಟ್ರಕೂಟರು ಮತ್ತು ಚಾಲುಕ್ಯ ರಾಜರ ಕಾಲದಲ್ಲಿ ಅನೇಕ ಮಹಿಳೆಯರು ಆಡಳಿತದ ಜವಾಬ್ದಾರಿಯನ್ನು ಹೊತ್ತು ನಿರ್ವಹಿಸಿದ ನಿದರ್ಶನಗಳು ದೊರಕುತ್ತವೆ. ಅಮೋಘವರ್ಷನ ಮಗಳು ರೇವಕನಿರ್ಮಡಿ ಎಡತೊರೆ ನಾಡನ್ನು ಆಳುತ್ತಿದ್ದಳೆಂದು ಕ್ರಿಸ್ತಶಕ ೮೩೭ರ ಶಾಸನ ತಿಳಿಸಿದರೆ, ಅಕ್ಕಾದೇವಿ ಅನೇಕ ನಾಡುಗಳನ್ನು ಆಳಿದ, ಯುದ್ಧದಲ್ಲೂ ಭಾಗವಹಿಸಿದ ಸೂಚನೆಗಳನ್ನು ಕ್ರಿಸ್ತಶಕ ೧೦೫೦ರ ಶಾಸನ ನೀಡುತ್ತದೆ. ಮಹಾಸಾಮಂತನೊಬ್ಬನ ಪತ್ನಿ ಚಾಗಲದೇವಿ ಯಾವುದೋ ಊರಿನ ಮೇಲೆ ದಾಳಿ ಮಾಡಿದ ವಿಚಾರವನ್ನು ಕ್ರಿಸ್ತಶಕ ೧೧೦೬ರ ಶಾಸನ ತಿಳಿಸುತ್ತದೆ. ಇದಕ್ಕೂ ಹಿಂದೆ ಕ್ರಿಸ್ತಶಕ ೯೨೦ರಲ್ಲಿ ಬೂತುಗನ ರಾಣಿ ಸರಮಬ್ಬೆ ಕೂರ್ಗಲ್ಲನ್ನು ಆಳುತ್ತಿದ್ದಳೆಂದು ಹೇಳಲಾಗಿದೆ. ನಾಗರಖಂಡದ ನಾಳ್ಗಾವುಂಡ ನಾಗಾರ್ಜುನ ಸತ್ತಾಗ ಅವನ ಪತ್ನಿ ನಾಳ್ಗಾವುಂಡ ಪದವಿ ವಹಿಸಿ ಸಾಮರ್ಥ್ಯದಿಂದ ಆಳಿದಳೆಂಬ ಕ್ರಿಸ್ತಶಕ ೯೧೪ರ ಶಾಸನ ಹೇಳುತ್ತದೆ. ಸ್ತ್ರೀಯರು ಆಡಳಿತದ ಅಧಿಕಾರ ಪಡೆದ ಈ ಅಪರೂಪದ ಸಂದರ್ಭಕ್ಕೆ ಕಾರಣಗಳೇನಿರಬಹುದು ಎಂಬುದರ ಬಗೆಗೆ ಖಚಿತವಾದ ವಿವರಗಳು ದೊರೆಯುವುದಿಲ್ಲ. ಜೈನರು, ಬೌದ್ಧರು ಮಹಿಳೆಯರಿಗೆ ಧಾರ್ಮಿಕ ಕ್ಷೇತ್ರದಲ್ಲಿ ಕಂತಿಯರು, ಸನ್ಯಾಸಿನಿಯರಾಗಲು ಅವಕಾಶ ಕೊಟ್ಟಿದ್ದರೂ ವ್ಯವಹಾರದ ಜಗತ್ತಿನಲ್ಲಿ ಅವರಿಗೆ ಸ್ಥಾನ ಕೊಟ್ಟ ಸಂದರ್ಭಗಳು ಇಲ್ಲವೇ ಇಲ್ಲವೆನ್ನಬಹುದು. ಬಹುಶಃ ರಾಷ್ಟ್ರಕೂಟರು, ಚಾಲುಕ್ಯರು ಶೂದ್ರಮೂಲದಿಂದ ಬಂದವರಾದ್ದರಿಂದ, ಅವರ ದೈನಂದಿನ ಜೀವನದಲ್ಲಿ ಹೇಗೆ ಸ್ತ್ರೀಯರು ಸಹಜವಾಗಿಯೇ ಸಮನಾಗಿ ಪಾಲ್ಗೊಳ್ಳುತ್ತಿದ್ದರೋ ಹಾಗೆಯೇ ಆಡಳಿತದಲ್ಲೂ ಕೆಲವೊಮ್ಮೆ ಪಾಲ್ಗೊಳ್ಳು ಅವಕಾಶ ಮಾಡಿಕೊಟ್ಟಿರಬಹುದೆಂದು ಊಹಿಸಬಹುದು.

ಸ್ತ್ರೀ ವಿದ್ಯಾಭ್ಯಾಸ : ಬ್ರಾಹ್ಮಣರಲ್ಲಿ ವಿದ್ಯಾಭ್ಯಾಸ ಗಂಡಸರಿಗೆ ಮಾತ್ರವೇ ಸೀಮಿತವಾಗಿದ್ದರಿಂದ ಅವರ ಹೆಂಗಸರು ವಿದ್ಯೆಯಿಂದ ದೂರ ಉಳಿದಿದ್ದರು. ಅರಸು ಮನೆತನದ ಕೆಲವು ಮಹಿಳೆಯರಿಗೆ ಮಾತ್ರ ವಿದ್ಯಾಭ್ಯಾಸ ಸಿಕ್ಕುತ್ತಿತ್ತು. ಆದರೆ ಅವರು ಯಾವ ಬಗೆಯ ವಿದ್ಯೆಗಳನ್ನು ಕಲಿಯುತ್ತಿದ್ದರು ಎಂಬ ವಿವರಗಳು ಖಚಿತವಾಗಿ ಸಿಕ್ಕಿಲ್ಲ. ಸಾವಿನಿರ್ಮಡಿ ಎಂಬಾಕೆ ಸರ್ವಾರ್ಥಶಾಸ್ತ್ರ ಪ್ರಸಿದ್ಧಿ ಪಡೆದಿದ್ದಳೆಂದು ಕ್ರಿಸ್ತಶಕ ೯೦೦ರ ಶಾಸನ ಹೇಳುತ್ತದೆ. ಸಾಮಂತ ಶೂದ್ರಕನ ಹೆಂಡತಿ ಜಕ್ಕಿ ಸಹಜ ಸರಸ್ವತಿಯಾಗಿದ್ದಳಂತೆ. ತ್ರಿಭುವನ ಮಲ್ಲನ ಪಟ್ಟದರಾಣಿ ಹಿರಿಯ ವೇತಲದೇವಿ ಅನೇಕ ಭಾಷಾ-ಸಂಗೀತ ವಿದ್ಯಾಧರಿ, ಸಕಲ ಕಳಾಧಾರಿ, ಅಭಿನವ ಸರಸ್ವತಿ ಎಂದು ಕ್ರಿಸ್ತಶಕ ೧೧೯೦ರ ಶಾಸನ ಹೇಳಿದರೆ, ರವಿದೇವ ದಂಡಾಧಿಪತಿಯ ಪತ್ನಿ ರೆಬ್ಬಲಬ್ಬೆ ಪ್ರತಿಭಾ ಸರಸ್ವತಿ ಎಂದು ಕ್ರಿಸ್ತಶಕ ೧೧೯೦ರ ಶಾಸನ ಹೇಳುತ್ತದೆ.

ಹೋರಾಟದ ಚಿಂತನೆಗಳು ಕ್ರಮೇಣವಾಗಿ ಮಹಿಳಾ ಸಮುದಾಯದ ಸಮಸ್ಯೆಗಳಿಗೆ ದೀರ್ಘಕಾಲೀನ ಪರಿಹಾರಗಳನ್ನು ಶೋಧಿಸಲು ತೊಡಗಿದ್ದು, ಅತ್ಯಂತ ಅಗತ್ಯದ ಹಾಗೂ ಸಹಜವಾದ ಗತಿತಾರ್ಕಿಕ ಅಂಶವೇ ಆಗಿತ್ತು. ವರ್ತಮಾನದ ಸಂಗತಿಗಳನ್ನು ಭೂತ ಹಾಗೂ ಭವಿಷ್ಯದ ಕೊಂಡಿಗಳಿಗೆ ಜೋಡಿಸಿಕೊಂಡು ಅಧ್ಯಯನ ಮಾಡಿದ ಹೊರತು ಧೀರ್ಘಕಾಲೀನ ಪರಿಹಾರಗಳನ್ನು ಶೋಧಿಸಲಾಗದು. ಸಮಾಜದಲ್ಲಿ ಇಂದಿಗೂ ಸಮಬಾಳು, ಸುಸಂಗತ ಬದುಕು ಹಾಗೂ ಮುಕ್ತ ಅವಕಾಶಗಳನ್ನು ಪಡೆಯಲು ಮಹಿಳಾ ಸಮುದಾಯವು ಹೋರಾಡಬೇಕಾಗಿದೆ ಎಂಬ ವಾಸ್ತವದಲ್ಲಿ ನಮ್ಮ ಹೋರಾಟಗಳು ಸಮರ್ಥವೂ ಉಪಯುಕ್ತವೂ ಆಗಬೇಕಾದರೆ, ನಮ್ಮ ಪೂರ್ವಸಿದ್ಧತೆಗಳೂ ಅಷ್ಟೇ ನಿಖರವಾಗಿದ್ದಾಗಿ, ಮುಂದಾಲೋಚನೆಯಿಂದ ಕೂಡಿದ್ದಾಗಿರುವುದು ತೀರಾ ಅಗತ್ಯ. ಸ್ತ್ರೀವಾದಿ ಚಿಂತನೆ ಹಾಗೂ ಚಳುವಳಿಗಳು ಸಾಕಷ್ಟು ದೀರ್ಘಕಾಲದಿಂದಲೇ ಕಾರ್ಯಪ್ರವೃತ್ತವಾಗಿವೆ. ಜಾಗತಿಕವಾಗಿ ನೂರೈವತ್ತು ವರ್ಷಗಳಿಗೂ ಮೀರಿದ ಚಾರಿತ್ರಿಕ ಹಿನ್ನಲೆ ಇದಕ್ಕಿದೆಯಾದರೂ, ಭಾರತದ ಸಂದರ್ಭದಲ್ಲಿ ಸುಮಾರು ಐದಾರು ದಶಕಗಳಿಂದ ಈ ದಿಕ್ಕಿನಲ್ಲಿ ಚಟುವಟಿಕೆಗಳು ನಡೆಯುತ್ತಿವೆ. ಸುಧಾರಣಾವಾದಿ ಚಳುವಳಿಗಳು ಮಹಿಳಾ ವಿಷಯಗಳನ್ನು ಕೈಗೆತ್ತಿಕೊಂಡವೆಂಬುದು ನಿಜವಾದರೂ, ಈ ನೆಲೆಯ ಚಿಂತನೆ ಹಾಗೂ ಚಟುವಟಿಕೆಗಳನ್ನು ಸ್ತ್ರೀವಾದಿ ಎಂದು ಹೇಳುವುದು ಸರಿಯಾಗಲಾರದು. ಯಜಮಾನ ನೆಲೆಯ ಸಮುದಾಯವು ಅಧೀನ ನೆಲೆಯ ಸಮುದಾಯದ ಬಗ್ಗೆ ತಳೆದ ಮೃಧುಧೋರಣೆಗಳೆಂದು ಅವನ್ನು ನೋಡಬಹುದಷ್ಟೆ.

ಮಹಿಳೆಯರ ವಿರುದ್ಧ ಹಿಂಸಾಚಾರಗಳು, ಅತ್ಯಚಾರ, ಲಿಂಗ ತಾರತಮ್ಯ ಹಾಗು ಶೋಷಣೆ ಮತ್ತಿತರ ಪ್ರಕರಣಗಳು ಹೆಚ್ಚುತ್ತಾ ಹೋಗುತ್ತಿರುವ ಈ ದಿನಗಳಲ್ಲಿ ಇವೆಲ್ಲವುಗಳ ವಿರುದ್ಧ ಮಹಿಳೆಯರ ಕೆಲವು ಕ್ರಮಗಳನ್ನು ಕೈಗೊಂಡಿದೆ. ಸಾಮಾಜಿಕ ಪಿಡುಗುಗಳ ನಿವಾರಣೆಗೆ ಹಾಗೂ ಅವುಗಳಿಗೆ ಬಲಿಯಾಗದಂತೆ ಸ್ತ್ರೀಯರಲ್ಲಿ ಜಾಗೃತಿ ಮೂಡಿಸಲು ವಿಶೇಷ ಘಟಕ. ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ನಿರ್ಮೂಲನೆಗಾಗಿ ಕ್ರಮ. ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ

ಕಿರುಕುಳ ನೀಡುವಿಕೆಯ ವಿರುದ್ಧ ರಕ್ಷಣೆ ನೀಡುವಲ್ಲಿ ರಾಜ್ಯ ಮಹಿಳಾ ಆಯೋಗದ ನೆರವು, ಬಾಲ್ಯವಿವಾಹವನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಂಡಿದೆ.

ಮಹಿಳಾ ಜಾಗೃತಿ ವಿಧಾನವೆಂದರೆ ಯಾರು ತುಳಿತಕ್ಕೊಳಗಾಗಿದ್ದರೋ ಅವರೇ ತಮ್ಮ ಬಗ್ಗೆ ಅಧ್ಯಯನ ಕೈಗೆತ್ತಿಕೊಳ್ಳಬೇಕು. ಅನ್ಯಯಕ್ಕೊಳಗಾದವರ ಬಗ್ಗೆ ಅಧ್ಯಯನ ಮಾಡಬೇಕು, ಆ ಅಧ್ಯಯನದ ಸಾಧನಗಳನ್ನು ಜನರಿಗೆ ನೀಡಬೇಕು. ಇದುವರೆಗೂ ಇತಿಹಾಸದಲ್ಲಿ ಮಹಿಳೆಯರು ಕೆಲವರು ಚರಿತ್ರೆಯನ್ನು ನಿರ್ಮಿಸಿಲ್ಲ. ಹಾಗೆಂದು ಅವರು ಇತಿಹಾಸದಲ್ಲಿ ಇರಲಿಲ್ಲ ಎಂದು ಅಲ್ಲ. ಇತಿಹಾಸದ ಪುಟಗಳಲ್ಲಿ ಅವರು ದಾಖಲಾಗಿಲ್ಲ ಅಂಥವರ ಚರಿತ್ರೆಯನ್ನು ಐತಿಹಾಸಿಕ ವಿಷಯವನ್ನಾಗಿ ಪರಿಗಣಿಸಿಯೇ ಇಲ್ಲಾ. ಆದುದರಿಂದ ಅವರ ಜೀವನ ರೀತಿ, ನೀತಿ, ಹೋರಾಟ ಮತ್ತು ಧ್ಯೇಯಗಳು ಹೊರಬರಬೇಕು. ದಾಖಲಿಸಬೇಕು. ಮೌಖಿಕ ಚರಿತ್ರೆ, ಸಮಗ್ರ ಅಧ್ಯಯನಗಳು, ಕ್ರಿಯಾತ್ಮಕ ಸಂಶೋಧನೆಗಳು ಆಗಬೇಕು. ಮಹಿಳೆಯರ ನಿಜವಾದ ಸ್ಥಿತಿ, ತಿಳುವಳಿಕೆಯ ಬಗ್ಗೆ ಮಾಹಿತಿ ನೀಡಿದಾಗ ಇತಿಹಾಸಕ್ಕೆ ಮಹತ್ವ ಬರುತ್ತದೆ. ಅನ್ಯ ಧರ್ಮ ಮತ್ತು ಮನುವಾದಿಗಳ ಮತಾಂಧತೆಯಿಂದಾಗಿ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷ ಮಹಿಳೆಯನ್ನು ಶೋಷಣೆಗೆ ಗುರಿ ಮಾಡಿದನು. ಪರಿಣಾಮವಾಗಿ ಭಾರತೀಯ ನಾರಿ ಪುರುಷನ ದೃಷ್ಟಿಯಲ್ಲಿ ಬಲಹೀನಳಾದಳು. ಇದರ ಜೊತೆಗೆ ಮನು ರಚನೆ ಮಾಡಿರುವ ಮಾನವ ವಿರೋಧಿ, ಅದರಲ್ಲಿಯೂ ಸ್ತ್ರೀ ವಿರೋಧಿ ನೆಲೆಗಳಿಂದ ಕೂಡಿದ ಮನು ಸಂಸ್ಕೃತಿಯಂಥಹ ಕಾನೂನು ಪುಸ್ತಕ ರಚಿಸುವುದರ ಮುಖಾಂತರ ಮಹಿಳೆಯನ್ನು ಪ್ರಪಾತಕ್ಕೆ ತಳ್ಳಿದನು. ಹೀಗಾಗಿ ಅಂದಿನ ಕಾಲಘಟ್ಟದಲ್ಲಿ ಮಹಿಳೆ ಪುರುಷನ ದೃಷ್ಟಿಯಲ್ಲಿ ಭೋಗದ ಮತ್ತು ಅಲಂಕಾರದ ವಸ್ತುವಾಗಿ ಪರಿಣಮಿಸಿದಳು. ಶಿವಶರಣರು ಲಿಂಗದ ತಾರತಮ್ಯವನ್ನು ನಿರಾಕರಿಸಿದಂತೆ ಭಾರತೀಯ ಸಂವಿಧಾನದ ಅನುಚ್ಛೇದ ೧೫ ಯಾವುದೇ ಬಣ್ಣ ಜಾತಿ ಮತ್ತು ಪ್ರದೇಶಾಧಾರಿತ ಬೇಧವನ್ನು ನಿರಾಕರಿಸುತ್ತದೆ. ಹಾಗಾಗಿ ಅಂಥಹ ವ್ಯಕ್ತಿಗಳಿಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ತರುವುದಕ್ಕಾಗಿ ಮೀಸಲಾತಿಯಂಥಹ ದೂರದೃಷ್ಟಿಯಂಥಹ ಯೋಜನೆಗಳನ್ನು ಕಲ್ಪಿಸಲಾಗಿದೆ.

ಇತಿಹಾಸದ ಸಂದರ್ಭದಲ್ಲಿ ಮಹಿಳೆಯು ತಕ್ಕಮಟ್ಟಿಗೆ ರಾಜಕೀಯ ಸೂತ್ರದ ಸಮೀಪ ಬಂದಿದ್ದಾಳೆ ಎಂಬುದನ್ನು ದಾಖಲೆಗಳಿಂದ ತಿಳಿಯಬಹುದು. ರಾಣಿಚನ್ನಮ್ಮ, ಝಾನ್ಸಿರಾಣಿ, ಇವರೆಲ್ಲಾ ಜನೋಪಯೋಗಿ ಕೆಲಸಗಳಲ್ಲಿ ತೊಡಗಿ ಮುಂದಿನ ಪೀಳಿಗೆಗೆ ಮಾದರಿಯಾಗಿದ್ದಾರೆ. ಶತಶತಮಾನಗಳ ಇತಿಹಾಸ ಮತ್ತು ಮಾನವ ಜನಾಂಗದ ಚರಿತ್ರೆಯನ್ನು ಅವಲೋಕಿಸುವಾಗ, ಮಹಿಳೆಯ ಸ್ಥಾನಮಾನಗಳು ಬಹಳ ಹಿನ್ನೆಡೆಯನ್ನು ಪಡೆದಿವೆ. ಕಾರ್ಮಿಕ ಮಹಿಳೆಯೇ ಮೇಲ್ವರ್ಗದ ಮಹಿಳೆಗಿಂತಲೂ ಎಷ್ಟೋ ವಾಸಿ ಎಂದು ಹೇಳಬಹುದು. ಯಾವುದೇ ಅಧಿಕಾರ ಅಂತಸ್ತುಗಳನ್ನು ಲೆಕ್ಕಿಸದೇ ಗಂಡನ ಸರಿಸಮಾನವಾಗಿ ಬದುಕುತ್ತಾ ಬಂದವಳೆಂದರೇ ಶೂದ್ರ, ಅತಿ ಶೂದ್ರ ಹೆಣ್ಣು ಎಂಬುದು ಯಾರೂ ಮರೆಯುವಂತಿಲ್ಲ. ಆದರೆ ಅವಳ ಕುರಿತಾದ

ದಾಖಲೆಗಳು ಎಲ್ಲಿಯೂ ಆಗಲಿಲ್ಲವೆಂಬುದು ಒಂದು ರೀತಿಯ ದುರಂತ. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಯಾವುದೇ ಜಾತಿ ವಿಜಾತಿಗಳಿಗೆ ಸೇರಿದವಳಾಗಿರಲಿ, ಅವಳ ಸ್ಥಿತಿಯನ್ನು ನೋಡಿದರೆ ಅವಳು ಪುರುಷನ ಕಪಿಮುಷ್ಟಿಯಿಂದ ಬಿಡಿಸಿಕೊಳ್ಳಲು ಸಾಧ್ಯವೇ ಇಲ್ಲ ಎನಿಸುತ್ತದೆ.

ಭಾರತದ ನಾಗರೀಕತೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದರೂ ದಮನಿತರ, ಮಹಿಳೆಯರ ಧ್ವನಿಗೆ ಕೆಲವೇ ನೂರು ವರ್ಷಗಳ ಇತಿಹಾಸವಿದೆ. ಬರೆದಿಟ್ಟ ಪುರಾಣ, ಕಾವ್ಯ, ಇತಿಹಾಸ ಯಾವುದರಲ್ಲೂ ಮಹಿಳೆ ಮಾತೇ ಆಡಲಿಲ್ಲ. ಸೀತೆಯಾಗಲಿ, ಶೂರ್ಪಣಖಿಯಾಗಲೀ, ಮಮ್ತಾಜ್ ಮಹಲಳಾಗಲೀ, ರಾಣಿ ಪದ್ಮಿನಿಯಾಗಲೀ ತಮ್ಮ ಅಳಲನ್ನು ನೇರವಾಗಿ ಮನಬಿಚ್ಚಿ ಹೇಳಿಕೊಳ್ಳಲು ಸಾಧ್ಯವಾಗಲಿಲ್ಲ. ಮಾತನಾಡಿದವರೂ ಸಂಚಿ ಹೊನ್ನಮ್ಮನಂತೆ ಹದಿಬದೆಯ ಧರ್ಮದ ಕುರಿತೇ ಮಾತನಾಡಿದರು. ಅಥವಾ ಆಧ್ಯಾತ್ಮ ನೆಚ್ಚಿ ಅಕ್ಕ, ಲಲ್ಲೇಶ್ವರಿ, ಮೀರಾಬಾಯಿಯರಂತೇ ಹಾಡಿದರು.

ವೇದ ಕಾಲದಿಂದ ಮಹಿಳೆಗೆ ಓದುವ ಅಧಿಕಾರ ಇರಲಿಲ್ಲ. ಗಾರ್ಗಿ, ಮೈತ್ರೇಯಿ, ಉಭಯ ಭಾರತಿಯಂಥಹ ಕೈ ಬೆರಳೆಣಿಕೆಯಷ್ಟು ಮಹಿಳೆಯರನ್ನು ಹೊರತು ಪಡಿಸಿದರೆ ಜಾತಿ ವರ್ಗ ಭೇಧವಿಲ್ಲದೆ ಕೋಟ್ಯಂತರ ಮಹಿಳೆಯರಿಂದ ಅಕ್ಷರ ಜ್ಞಾನ ದೂರವೇ ಉಳಿದಿತ್ತು. ಹಲವು ನೆಪಗಳನ್ನು ಮುಂದೆ ಮಾಡಿ ಜ್ಞಾನಾರ್ಜನೆಯ ಹಕ್ಕನ್ನು ಅವಳಿಗೆ ನಿರಾಕರಿಸಲಾಯಿತು. ಅವರ ಪಾರಂಪರಿಕ ಜ್ಞಾನವು ಜ್ಞಾನದ ವ್ಯಾಪ್ತಿಯೊಳಗೆ ಬರದಂತೆ ನೋಡಿಕೊಳ್ಳಲಾಯಿತು. ಸಾವಿರಾರು ವರ್ಷಗಳಿಂದ ಮಹಿಳೆಯರ ವಿವೇಕ-ಜ್ಞಾನಗಳು ನಾಲ್ಕು ಗೋಡೆಗಳ ನಡುವೆ ಕುಟುಂಬ ನಿಭಾಯಿಸಲು ಬಳಕೆಯಾಯಿತೇ ಹೊರತು ವಿಶಾಲ ನೆಲಗಟ್ಟಿನಲ್ಲಿ ಸಮಷ್ಟಿಗಾಗಿ ಅವಳು ಚಿಂತಿಸುವುದೇ ಅವಶ್ಯವೆಂದು ಭಾವಿಸಲಾಯಿತು.

ಸಾವಿರಾರು ವರ್ಷಗಳಿಂದ ಸಾವಿರಾರು ಮಹರಾಜರು ಆಳಿದ ಈ ದೇಶದಲ್ಲಿ ಎಷ್ಟು ಜನ ರಾಣಿಯರು ಆಳಿದ್ದಾರೆ? ಆಳಿಸಿಕೊಂಡಿದ್ದೇ ಹೆಚ್ಚು. ಆಳಿದ್ದು ಹೃದಯ ಸಾಮ್ರಾಜ್ಯವನ್ನು ಮಾತ್ರ. ಇಚ್ಚೆಯನರಿತು ನೆಡೆವ ಸತಿಯಾಗಿ, ಇಟ್ಟಾಂಗ ಇರಬೇಕೆಂದುಕೊಂಡು ಕೆರೆಗೆ ಹಾರವಾಗಲಿಕ್ಕೂ ತಯಾರಾಗಬೇಕು. ನಗುನಗುತ್ತಾ ಗಂಡನ ಚಿತೆಗೂ ಸಿದ್ದವಾಗಿರಬೇಕು. ಅವಳು ಮನೆಯಿಂದ ಹೊರಹೋಗಬೇಕಿಲ್ಲ. ಅವಳ ದೇಹ, ಜೀನುಗಳು ಯಾವುವೂ ಇದಕ್ಕೆ ಪೂರಕವಾಗಿಲ್ಲ ಎಂದೆಲ್ಲಾ ನಂಬಿಸಲಾಯಿತು. ದೇಶ ಕಾಲಗಳ ವ್ಯತ್ಯಾಸವಿಲ್ಲದೇ ಹೆಣ್ಣಿನ ಸಮಸ್ತ ಅಧಿಕಾರಗಳನ್ನು ಕಡಿತಗೊಳಿಸಲು ಸಮಾಜ ಸತತವಾಗಿ ಪ್ರಯತ್ನಪಟ್ಟಿದೆ.

ಝಾನ್ಸಿರಾಣಿ ಹಾಗೂ ಕೆಲವು ಪ್ರಖ್ಯಾತ ವೀರ ಮಹಿಳೆಯರನ್ನು ಕುರಿತು 'ಬೆನ್ನಿಗೆ ಮಗುವನ್ನು ಕಟ್ಟಿಕೊಂಡು ಯುದ್ದರಂಗಕ್ಕಿಳಿದಳು' ಎಂಬ ಮಾತು ಕೇಳಿಬರುತ್ತದೆ. ಸಾರ್ವಜೀವನ ಪ್ರವೇಶಿಸುವ ಹೆಣ್ಣುಮಕ್ಕಳ ಕುರಿತ ಅತ್ಯುತ್ತಮ ರೂಪಕವಿದು. ಯುದ್ದರಂಗ ಹೆಣ್ಣಿಗೆ ಹೇಳಿ ಮಾಡಿಸಿದ್ದಲ್ಲ ಎಂಬ ಭಾವನೆಯಿದೆ. ಅಂಥಹದ್ದರಲ್ಲಿ ಅವಳು ವಸ್ತ್ರ ತೊಟ್ಟಿದ್ದಾಳೆ. ಅಷ್ಟೇ ಅಲ್ಲ. ಬೆನ್ನಿಗೆ ಮಗುವನ್ನು ಕಟ್ಟಿಕೊಂಡಿದ್ದಾಳೆ. ಏಕಕಾಲಕ್ಕೆ ವ್ಯವಸ್ಥೆಯನ್ನು ತನ್ನೊಳಗಿನ ಸಿದ್ಧ ಮಾದರಿಯ ಹೆಣ್ತನವನ್ನು

ಮೀರಿ ಯುದ್ಧಕ್ಕಿಳಿದಿದ್ದಾಳೆ. ಸಾಮ್ರಾಜ್ಯವನ್ನು ಕಾಪಾಡಿಕೊಳ್ಳುತ್ತಲೇ ಬೆನ್ನಿಗಿರುವ ಕೂಸನ್ನು ರಕ್ಷಿಸಿಕೊಳ್ಳಬಯಸುತ್ತಾಳೆ. ಇದು ಝಾನ್ಸಿರಾಣಿಯ ಕಾಲದ ಕತೆಯಲ್ಲ. ಈವತ್ತಿಗೂ ಮಹಿಳೆ ತನ್ನ ಕನಸುಗಳನ್ನು ಬೆನ್ನಿಗೆ ಕಟ್ಟಿಕೊಂಡು ಅದನ್ನು ರಕ್ಷಿಸುತ್ತಲೇ ತನ್ನನ್ನೂ ರಕ್ಷಿಸಿಕೊಳ್ಳಬೇಕಾಗಿದೆ. ಇತಿಹಾಸದ ವಿವಿಧ ಹೋರಾಟಗಳಲ್ಲಿ ಮಹಿಳೆಯರು ಭಾಗಿಗಳಾಗಿದ್ದಾರೆ. ಆದರೆ ಆ ಪಾತ್ರಗಳ ಸ್ಮರಣೆಯೇ ಇಲ್ಲದಂತಾಗಿದೆ. ಈ ನಿಟ್ಟಿನಲ್ಲಿ ಓಬವ್ವನ ಪಾತ್ರ ಸ್ಮರಣೀಯ, ಅನುಕರಣೀಯವಾದುದು.

ಅಡಿ ಟಿಪ್ಪಣಿಗಳು

೧. ಡಾ. ಜಿ. ಕೃಷ್ಣಪ್ಪ, ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ, ಕಾಮಧೇನು ಪುಸ್ತಕ ಭವನ. ಶೇಷಾದ್ರಿಪುರ, ಬೆಂಗಳೂರು, ಪುಟ ಸಂಖ್ಯೆ–೦೪

೨. ಅದೇ ಕೃತಿ, ಪುಟ ಸಂಖ್ಯೆ–೦೬

೩. ಅದೇ ಕೃತಿ, ಪುಟ ಸಂಖ್ಯೆ–೧೩

೪. ಅದೇ ಕೃತಿ, ಪುಟಸಂಖ್ಯೆ–೧೩

೫. ಅದೇ ಕೃತಿ, ಪುಟ ಸಂಖ್ಯೆ–೨೦

೬.ಅದೇ ಕೃತಿ, ಪುಟ ಸಂಖ್ಯೆ–೨೧

೭. ಅದೇ ಕೃತಿ, ಪುಟ ಸಂಖ್ಯೆ–೨೩

೮. ಅದೆ ಕೃತಿ, ಪುಟ ಸಂಖ್ಯೆ–೨೪

೯. ಅದೇ ಕೃತಿ, ಪುಟ ಸಂಖ್ಯೆ–೫೪

೧೦. ಡಾ. ಹಿ.ಚಿ.ಬೋರಲಿಂಗಯ್ಯ, ಕುವೆಂಪು ಮಹಿಳಾ ಮಂಥನ, ಪುಟ ಸಂಖ್ಯೆ–೬೧ ಪ್ರಸಾರಾಂಗ ಕನ್ನಡ ವಿ ವಿ ಹಂಪಿ ೨೦೧೦.

೧೧. ಪ್ರೊ. ಕೆ.ಕೆ. ಸೀತಮ್ಮ, ಮಹಿಳಾ ಅಧ್ಯಯನದ ಮಜಲುಗಳು, ಪುಟ ಸಂಖ್ಯೆ–೯೪. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–೨೦೦೮

೧೨. ಚ.ನ ಶಂಕರರಾವ್, ಮಹಿಳಾ ಅಧ್ಯಯನ, ಜೈ ಭಾರತ್ ಪ್ರಕಾಶನ, ಮಂಗಳೂರು, ೨೦೧೨. ಪುಟ ಸಂಖ್ಯೆ–೩೪೯

೧೩. ಅದೇ ಕೃತಿ, ಪುಟ ಸಂಖ್ಯೆ–೩೭೭

೧೪.ಅದೇ ಕೃತಿ, ಪುಟ ಸಂಖ್ಯೆ–೩೮೦

೧೫. ಆಯ್ಕೆ ಅನುವಾದ. ಡಾ. ಹೆಚ್.ಎಸ್. ಶ್ರೀಮತಿ, ಸ್ತ್ರೀವಾದಿ ಭಾಷಾ ಶಾಸ್ತ್ರ ಪ್ರವೇಶಿಕೆ, ಪ್ರಸಾರಾಂಗ ಕನ್ನಡ ವಿವಿಶ್ವವಿದ್ಯಾಲಯ, ಹಂಪಿ, ೨೦೦೯, ಪುಟ ಸಂಖ್ಯೆ–೧೩೨

ಅಧ್ಯಾಯ : ೩

ಜನಪದರ ಚಾರಿತ್ರಿಕ ಪ್ರಜ್ಞೆ ಮತ್ತು ಓಬವ್ವ

ಅಧ್ಯಾಯ : ಮೂರು

ಜನಪದರ ಚಾರಿತ್ರಿಕ ಪ್ರಜ್ಞೆ ಮತ್ತು ಓಬವ್ವ

ನಮ್ಮನ್ನು ಹೊತ್ತು ನಿಂತ ನೆಲ ತಾನೂ ಸ್ಥಿರವಲ್ಲದಿದ್ದರೂ ನಮ್ಮನ್ನು ಸ್ಥಿರವಾಗಿ ಎತ್ತಿ ಹಿಡಿದ ಭೂಮಿತಾಯಿಗೆ ಹೆಣ್ಣನ್ನು ಹೋಲಿಸಲಾಗಿದೆ. ಆ ಹೆಣ್ಣು ಮಕ್ಕಳ ಹಾಡು, ಲಾವಣಿ, ಗಾದೆ, ಒಡಪು ಇವುಗಳೆಲ್ಲಾ ಜನಪದ ಸಾಹಿತ್ಯವೆನಿಸುತ್ತವೆ. ಗತಕಾಲದ ಇತಿಹಾಸವನ್ನು, ಕಾಲಮಾನದ ಸಹಿತ ತಿಳಿಸುವುದೇ ಚರಿತ್ರೆ. ಇತಿಹಾಸಕಾರನ ಚಿತ್ರದಲ್ಲಿ ನಡೆಯುತ್ತಿರುವ ಆಲೋಚನಾ ಕ್ರಿಯೆಯೇ ಚರಿತ್ರೆಯ ವಸ್ತುವಾಗಿರುತ್ತದೆ. ಆ ನಿಟ್ಟಿನಲ್ಲಿ ಇತಿಹಾಸ ನಿರ್ಮಾಣವಾಗುತ್ತದೆ. ಚರಿತ್ರಕಾರನು ಯಾವ ಹೊಸ ವಿಚಾರಗಳನ್ನು ನಿರ್ಮಿಸುವುದಿಲ್ಲ. ಗತಕಾಲದಲ್ಲಿ ನಡೆದ ಯಥಾರ್ಥವನ್ನು ತಿಳಿಸುವುದೇ ಆತನ ಪ್ರಯತ್ನವಾಗಿರುತ್ತದೆ. ಅದನ್ನು ದಾಖಲಿಸುವ ಇರಾದೆಯು ಚರಿತ್ರೆಕಾರನದಾಗಿದೆ. ಚರಿತ್ರೆ ಮಾನವನಷ್ಟೇ ಪುರಾತನವಾದುದು. ಮಾನವನ ಜೀವಿತಾವಧಿಯಲ್ಲಿ ಗತಕಾಲವನ್ನು ಉಲ್ಲೇಖಿಸುವುದು ಸಾರ್ವತ್ರಿಕವಾದುದಾಗಿದೆ. ಇನ್ನು ಚರಿತ್ರೆಯೆಂದರೆ ಗತಕಾಲದ ನಿರ್ದಿಷ್ಟ ಜನಾಂಗವೊಂದರ ಅಧ್ಯಯನ. ಮಾನವನ ಭೌತಿಕ ಬೆಳವಣಿಗೆಯ ಜೊತೆಗೆ ಮಾನಸಿಕ ಬೆಳವಣಿಗೆಯೂ ಬೆಳೆದ ನಂತರ ಆತನ ಜೀವನದ ನಿರ್ವಹಣೆ, ಜೀವನ, ಗುರಿ ಸಾಧಿಸುವಿಕೆ, ಅದರ ಅನುಭವ, ಫಲಿತತೆ ಚರಿತ್ರೆಯಾಗುತ್ತದೆ.

ಚರಿತ್ರೆಯ ಉಗಮಕ್ಕೆ ಕಾರಣ ಮಾನವನ ಕ್ರಿಯಾಶೀಲತೆಯ ಹೆಚ್ಚಳ. ಏಕೆಂದರೆ ಲಿಪಿಗಿಂತ ಮೊದಲು ಲಾವಣಿ, ಪದ್ಯಗಳ ರೂಪದಲ್ಲಿ ಪರಸ್ಪರ ತಮ್ಮ ಅನುಭವಗಳನ್ನು ಹೇಳಿಕೊಳ್ಳುತ್ತಿದ್ದರು. ನಂತರ ಕ್ರಮೇಣ ಗದ್ಯರೂಪ ತಲೆದೋರಿತು. ನಂತರ ಬರಹಗಾರರ ಗುಂಪು ಬೆಳೆಯುತ್ತಾ ದಾಖಲಿಸುವ ವಿಷಯಗಳೇ ಚರಿತ್ರೆಯಾಯಿತು. ನಂತರ ಕಾಲಸಂದಂತೆಲ್ಲಾ ಅದು ಇತಿಹಾಸವೆ ಆಯಿತು. ಹೀಗೆ ಕಾಲಸಂದಂತೆಲ್ಲಾ ಚರಿತ್ರೆಯು ಬೆಳಕಿಗೆ ಬರತೊಡಗಿದೆ. ಮಧ್ಯಯುಗದಲ್ಲಿ ಮುಸ್ಲಿಮರು ಭಾರತದತ್ತ ಬಂದು ಪಾದಾರ್ಪಣೆ ಮಾಡಿ ಇಲ್ಲಿ ನೆಲೆಸಿದ ನಂತರ ಚಾರಿತ್ರಿಕ

ಪ್ರಜ್ಞೆ ಭಾರತದಲ್ಲಿ ಮತ್ತಷ್ಟು ಹೆಚ್ಚಿತು. ಚರಿತ್ರೆಕಾರರ ಸಂಖ್ಯೆ ಹೆಚ್ಚಿತು. ರಾಜರುಗಳ ಆದೇಶಗಳು, ಜೀವನ ಚರಿತ್ರೆಗಳು, ಕೈಪಿಡಿಗಳು, ದೇಶ-ವಿದೇಶಗಳ ವಿಚಾರ ಸಂಕಿರಣಗಳು, ಮಹಾನ್ ಸಂತರ ಉಪದೇಶಗಳು ಇವೆಲ್ಲವು ಚಾರಿತ್ರಿಕ ವಿಷಯಗಳಾದವು. ಜೇಮ್ಸ್‌ಮಿಲ್, ಮೆಕಾಲೆ, ಸರ್ ವಿಲಿಯಂ ಜೋನ್ಸ್, ಕನ್ನಿಂಗ್‌ಹ್ಯಾಂ ವಿಲ್ಕಿನ್ಸ್, ಫರ್ಗೊಸನ್ ಮೊದಲಾದ ಯೂರೋಪಿನ ಪಂಡಿತರು ಭಾರತದ ಆಧುನಿಕ ಕಾಲದ ಚರಿತ್ರೆಯನ್ನು, ಚಾರಿತ್ರಿಕತೆಯನ್ನು ದಾಖಲಿಸಿದರು. ಮಾನವ ಹುಟ್ಟಿನಿಂದ ಬಂದಿರುವ ಕೌತುಕವೇ ಚರಿತ್ರೆಯನ್ನು ರಚಿಸಲು ಮೂಲದ್ರವ್ಯವಾಯಿತು. ಆಲೋಚನೆಯೇ ಚರಿತ್ರೆಯಾಯಿತು. ಚರಿತ್ರೆಯನ್ನು ದಾಖಲಿಸುವುದೇ ಚಾರಿತ್ರಿಕ ಪ್ರಜ್ಞೆಯಾಯಿತು. ಲೋಕದಲ್ಲಿ ನಡೆದ ಪ್ರತಿಯೊಂದು ಕ್ರಿಯೆ, ಮಾನವನ ನಡತೆಗಳಿಗೆ ಚರಿತ್ರೆಯ ಲೇಪನ ಹಚ್ಚುತ್ತಾ ನಮೂದಿಸತೊಡಗಿದಂತೆಲ್ಲಾ ಘಟನೆಗಳ ಮಹತ್ವ ಬೆಳೆಯತೊಡಗಿತು. ಅರಿವಿನ ಹಸಿವಿನ ಬೆಂಕಿಯ ಮೂಸೆಯಲ್ಲಿ ಎಲ್ಲಾ ಇದ್ದರೂ ಜಗತ್ಕಲ್ಯಾಣಕ್ಕಾಗಿ ಭೋಗ ಭಾಗ್ಯಗಳನ್ನು ತ್ಯಜಿಸಿದ ಶಾಕ್ಯಮುನಿ ಗೌತಮಬುದ್ಧನ ನಡೆ, ರಾಜ್ಯದ ಹಿಗ್ಗಲಿಸುವಿಕೆಯಲ್ಲಿ ಮಹಾನ್ ಪಾತ್ರ ವಹಿಸಿ, ಶಾಂತಿಯ ಮೂಲದ ಕಡೆಗೆ ಸಾಗಿದ ಅಶೋಕ ಚಕ್ರವರ್ತಿಯ ನಡೆ ಚರಿತ್ರೆಯಾಯಿತು. ಚಾರಿತ್ರಿಕ ಮನೋಭಾವನೆಯಾಯಿತು. ಇಷ್ಟೇ ಅಲ್ಲದೆ ಚರಿತ್ರೆಯು ವ್ಯಾಪಕವಾಗಿ ತನ್ನ ಶಾಖೆಗಳನ್ನು ವಿಸ್ತರಿಸುತ್ತಾ ಸಾಗಿತು. ವ್ಯಕ್ತಿ, ಘಟನೆಗಳ ಬದುಕು ಚರಿತ್ರೆಯಾದರೆ ಅದನ್ನು ತಿಳಿಯುವ ಸಮಾಜ ಐತಿಹಾಸಿಕ ಪ್ರಜ್ಞೆಯನ್ನು ಬೆಳೆಸಿಕೊಂಡಿತು. ಈ ಚಾರಿತ್ರಿಕ ಪ್ರಜ್ಞೆಯು ಜನರಲ್ಲಿ ಐಕ್ಯತೆ, ಹೆಮ್ಮೆ ಮತ್ತು ಸದಭಿಮಾನಗಳನ್ನು ಹೆಚ್ಚಿಸಿತು. ಇತಿಹಾಸವನ್ನು ದಾಖಲಿಸುವ ವ್ಯಕ್ತಿಯ ದಿಕ್ಕಿನ ಕ್ರಮವೇ ಚರಿತ್ರೆಯಾಯಿತು. ಹಾಗಾಗಿ ಆತನ ಮನಸ್ಸಿನಲ್ಲಿ ನಡೆಯುತ್ತಿರುವ ವಿಚಾರಧಾರೆಯೇ ಚರಿತ್ರೆಯ ವಸ್ತುವೂ ಆಯಿತು. ಹೀಗೆ ಹೊರಬಂದ ಚರಿತ್ರೆಗಳಿಂದ ಚಾರಿತ್ರಿಕ ಪ್ರಜ್ಞೆ ಬೆಳೆಯಿತು. ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸ ಮಾಡುವ ಜನಸಮುದಾಯವನ್ನು ನಮ್ಮ ವಿದ್ವಾಂಸರು ಜನಪದ ಎಂದು ಕರೆದರು. ಜನಪದ ಎಂದರೆ ಒಂದು ಗುಂಪು ಎಂದರ್ಥ. ಆ ಗುಂಪಿನ ಅರಿವೇ ಜನಪದ ಪ್ರಜ್ಞೆಯಾಗುತ್ತದೆ. ನಮ್ಮ ಜನಪದರಲ್ಲಿ ಅಗಾಧವಾದ ಚಾರಿತ್ರಿಕ ಪ್ರಜ್ಞೆಯಿದೆ. ಸಂಗೊಳ್ಳಿರಾಯಣ್ಣ, ವೀರರಾಣಿ ಚನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಗಂಡುಗಲಿ ಕುಮಾರರಾಮ ಮೊದಲಾದ ಹಲವಾರು ಜನಾಂಗಗಳ ವೀರರ ಸಾಹಸಗಾಥೆಗಳನ್ನು ನಮ್ಮ ಜನಪದರು ಪುನರ್‌ಸೃಷ್ಟಿ ಮಾಡಿದ್ದಾರೆ. ಗ್ರಾಮ ಸಾಮ್ರಾಜ್ಯದ ತಲೆಮಾರಿನ ಗಡಿಯಂಚಿನಲ್ಲಿರುವ ಒಬ್ಬ ವ್ಯಕ್ತಿ ಆ ಸಾಹಸಗಾಥೆಯ ವೀರನನ್ನು ಆವಾಹಿಸಿಕೊಳ್ಳುತ್ತಾನೆ. ಅದನ್ನು ಮುಂದಿನ ತಲೆಮಾರಿಗೆ ಸಾಗಿಸುತ್ತಾನೆ. ಚಾರಿತ್ರಿಕತೆಯನ್ನು ಉಳಿಸುತ್ತಾನೆ.

ಶಿಷ್ಟ ಜಗತ್ತು ಮತ್ತು ಸಂಸ್ಕೃತಿ ಏನನ್ನು ನಿರಾಕರಿಸಿದೆಯೋ ಅವುಗಳೇ ಜನಪದರ ಚಾರಿತ್ರಿಕ ಪ್ರಜ್ಞೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಜಗತ್ತಿನಲ್ಲಿ ಇಂದು ಪ್ರತಿಯೊಂದು ಜನಸಮುದಾಯವು ಜ್ಞಾನ ಮತ್ತು ಅರಿವಿನ ಪ್ರಭಾವದಿಂದ ತಮ್ಮ ಪ್ರಾಚೀನತೆ, ಪರಂಪರೆ ಮತ್ತು ಸಂಸ್ಕೃತಿಯನ್ನು

ಚರಿತ್ರೆಯ ಕನ್ನಡಿಯಲ್ಲಿ ನೋಡಲು ಸಾಧ್ಯವಾಗಿದೆ. ಚರಿತ್ರೆಯಲ್ಲಿ ದಾಖಲಾಗದವರು ತಮ್ಮ ತಮ್ಮ ಮೂಲಗಳನ್ನು ನೋಡಿಕೊಳ್ಳುವಲ್ಲಿ, ಹುಡುಕುವಲ್ಲಿ ವಿಫಲರಾದರು. ಅವಮಾನಿತರಾದರು. ತಮ್ಮನ್ನು ತಾವೆ ನಿಂದಿಸಿಕೊಂಡರು. ಏಕೆಂದರೆ ಚರಿತ್ರೆಯಲ್ಲಿ ದಾಖಲಾಗಲು ತಾವು ಅರ್ಹರೋ ಅಲ್ಲವೋ ಎಂಬ ಭಾವನೆಯಿಂದ ಜನಸಾಮಾನ್ಯರು ಚರಿತ್ರೆಯಲ್ಲಿ ದಾಖಲಿಸಲು ಹಿಂದೇಟು ಹಾಕಿದರು. ಆಗಿನ ಪರಿಸ್ಥಿತಿಯಲ್ಲಿ ಕೇವಲ ರಾಜಪ್ರಭುತ್ವವನ್ನು ಹೊಗಳುವುದೇ ಚರಿತ್ರೆ ಎನಿಸಿತ್ತು. ರಾಜ, ರಾಣಿ, ಮಂತ್ರಿ, ದೊರೆ, ಪೂಜಾರಿ ಮುಂತಾದ ಸಾಮ್ರಾಜ್ಯಶಾಹಿ ಪಾತ್ರಗಳೇ ಚರಿತ್ರೆಯ ಮುಖ್ಯ ಕಥಾವಸ್ತುಗಳಾಗಿ ಬಿಟ್ಟವು. ಇಂತಹ ವೇಳೆಯಲ್ಲಿ ಜನಪದ ಸಮುದಾಯಗಳು ಕೇವಲ ಕಾವ್ಯಗಳನ್ನು ಹಾಡುಗಳ ಮುಖಾಂತರ ಹಾಡಬಲ್ಲವಾದವೇ ಹೊರತು ಬೇರೆ ಏನೂ ಮಾಡಲಾರದ ಸ್ಥಿತಿಯಲ್ಲಿ ಉಳಿದವು. ಆದರೆ ಕಾಲಕ್ರಮೇಣ ಕಾಲ ಮುಂದುವರಿದಂತೆಲ್ಲಾ ಭಾರತೀಯ ಮತ್ತು ದೇಶೀ ನೆಲೆಗಳನ್ನು ಗಟ್ಟಿಗೊಳಿಸುವ ಕಾರ್ಯದಲ್ಲಿ ಕ್ರಮೇಣ ಚರಿತ್ರೆಕಾರರು ತೊಡಗಿದರು.ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಜೀವಿಸುತ್ತಿರುವ ಹಲವಾರು ಸಮುದಾಯಗಳು ತಮ್ಮ ಗುರುತಿಗಾಗಿ ಸದಾ ಹೋರಾಡುತ್ತಲೇ ಇದ್ದವು. ಭಾರತದ ರಾಷ್ಟ್ರೀಯತೆ ಬಗ್ಗೆ ನಿಜವಾದ ಕಾಳಜಿ ಹುಟ್ಟಿದ್ದು ಕೆಳಸ್ತರದ ಸಮುದಾಯಗಳಿಂದ. ಅನ್ನ ಆಹಾರದಷ್ಟೇ 'ರಾಷ್ಟ್ರ' ಎಂಬುದು ಅವರಿಗೆ ತಮ್ಮ ಜೀವಿತದಷ್ಟೇ ಅಮೂಲ್ಯದ ಸಂಗತಿಯಾಗಿತ್ತು. ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕದ ಏಕೀಕರಣವೂ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ.

ಭಾರತೀಯ ಭವ್ಯವಾದ ಸಾಂಸ್ಕೃತಿಕ ಪರಂಪರೆಯ ಚರಿತ್ರೆಯ ಪುಟಗಳಲ್ಲಿ ಮರೆಯಾದ ಸಾಂಸ್ಕೃತಿಕ ವೀರರ ಸಂದರ್ಭಗಳೇ ಹೆಚ್ಚಿವೆ. ಚರಿತ್ರೆಯಲ್ಲಿ ಸ್ಥಾನ ಸಿಗದವರನ್ನು ನಮ್ಮ ಜನಪದರು ಅವರಿಗೆ ತಮ್ಮ ಬಾಯ ಮೂಲಕವೇ ಉದಾತ್ತೀಕರಿಸಿದ್ದಾರೆ. "ಜನಪದ ಸಮಾಜ ಮಾಂತ್ರಿಕ ವಿದ್ಯೆಯನ್ನು ತನಗೆ ಬೇಕಾದ ಕಡೆಗಳಲೆಲ್ಲಾ ಬಹಳ ಸೂಕ್ಷ್ಮವಾಗಿ ಒಂದು ಪ್ರತಿರೋಧ ಗುಣವನ್ನಾಗಿ ಅಳವಡಿಸಿಕೊಂಡಿದೆ".[೧] ಎಂಬುದು ವೇದ್ಯ. ದೇಶೀ ಕಥನಗಳಲ್ಲಿ ಸಾಂಸ್ಕೃತಿಕ ವೀರನ ಅಸ್ತಿತ್ವವನ್ನು ತೋರಿಸಿದ್ದಾರೆ. ಇಂಥವರಿಗೆ ನಮ್ಮ ಜನಪದರು ಸ್ಥಾನ ದೊರಕಿಸಿಕೊಟ್ಟು ಅವರ ವಿಚಾರಧಾರೆಯನ್ನು, ನೈತಿಕ ಮೌಲ್ಯಗಳನ್ನು ಕಾಲಕಾಲಕ್ಕೆ ಪ್ರಸ್ತುತ ಪಡಿಸುತ್ತಾ ಬಂದಿದ್ದಾರೆ. ಆದರೆ ನಮ್ಮ ಇತಿಹಾಸಕಾರರಿಗೆ ಅಧಿಕೃತ ದಾಖಲೆಗಳೇ ಇತಿಹಾಸವೆನಿಸಿವೆ. ಅಂತಹ ಸಮಯದಲ್ಲಿ ಜನಪದರ ದಾಖಲೆಗಳು ಇವರ ಬಗೆಗೆ ಬೆಳಕು ಚೆಲ್ಲುತ್ತಿರಲಿಲ್ಲ. ಮೌಖಿಕವಾದ ಸಾಂಸ್ಕೃತಿಕ ಕಥನಗಳು ಸಂಸ್ಕೃತಿಯ ಸಂವಹನಗಳಾಗಲಿಲ್ಲ. ಮೌಖಿಕ ಪರಂಪರೆಯು ತನ್ನ ಸೃಜನಾತ್ಮಕತೆಯಿಂದ ಸ್ಥಳೀಯ ಆತ್ಮಕಥನಗಳನ್ನೇ ತಾನೇ ಕಟ್ಟಿಕೊಂಡಿತು. ಆದರೆ ಭಾಷೆಯ ಅಭಿವ್ಯಕ್ತಿಯಲ್ಲದ ಇಂಥಹವುಗಳಿಗೆ ಅವಕಾಶವಿಲ್ಲದಾಯಿತು. ಲಿಖಿತ ಪರಂಪರೆಗೆ ನಿರ್ದಿಷ್ಟವಾದ ಯಜಮಾನ್ಯತೆಯಿರುತ್ತದೆ. ಆದರೆ ಮೌಖಿಕ ಪರಂಪರೆಗೆ ಇದಾವುದೂ ಇಲ್ಲ. ಇಂತಹ ಪರಂಪರೆಯಲ್ಲಿ ಕಾಣಸಿಗುವವಳೇ ಚಿತ್ರದುರ್ಗದ ಒನಕೆ ಓಬವ್ವ

ಚಿತ್ರದುರ್ಗವೆಂದರೆ ಬೆಟ್ಟಗುಡ್ಡ ಕೋಟೆ-ಕೊತ್ತಲಗಳಿಂದ ಕೂಡಿದ ನಾಡು. ಕರ್ನಾಟಕದ ಮೂಲೆ ಮೂಲೆಗೂ ಜಿಲ್ಲೆಯ ಚರಿತ್ರೆ ಮನೆಮಾತಾಗಿದೆ. ಅಸಾಧಾರಣವಾದ ಸಾಧನೆಗಳ ಕಥೆಗಳು, ಅಪಾರ ಕುತೂಹಲ ಕೆರಳಿಸುವ ಕೋಟೆ, ಸಾಹಸಗಾಥೆಗಳು, ಐತಿಹಾಸಿಕತೆ ತೋರುವ ಚಂದ್ರವಳ್ಳಿ, ದುರ್ಗದ ಜನರ ಜನಪದ ಪ್ರಜ್ಞೆ, ಇಂದಿಗೂ ಚಿತ್ರದುರ್ಗವೆಂದರೆ ಪಾಳೆಯಗಾರರ ಆಳ್ವಿಕೆಯ ನಾಡು, ಗಂಡುಮೆಟ್ಟಿದ ಭೂಮಿ ಎಂದೇ ಗುರುತಿಸಲ್ಪಡುತ್ತಿರುವ ಕುರುಹುಗಳ ಜೊತೆಗೆ ಒನಕೆ ಓಬವ್ವ ಅವಿನಾಭಾವವಾಗಿ ದುರ್ಗದ ಇತಿಹಾಸದುದ್ದಕ್ಕೂ ತಾನು ತನ್ನ ಛಾಪನ್ನು ಮೂಡಿಸಿದ್ದಾಳೆ. ಕದಂಬರ ಕಾಲದಲ್ಲಿ ಸೂಳ್ಗಲ್ಲು ನಾಡು ಎಂದೂ, ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಬೆಮ್ಮತ್ತನ ಕಲ್ಲು ಎಂದೂ, ಬೆಮ್ಮಚ್ಚನೂರು, ಬೆಮ್ಮತ್ತನೂರು ಎಂದೂ; ಆನಂತರ ಊರಿನ ಪಶ್ಚಿಮದಲ್ಲಿರುವ ಧವಳಪ್ಪನ ಗುಡ್ಡವು ಛತ್ರಿಯಾಕಾರದಲ್ಲಿರುವುದರಿಂದ ಇದಕ್ಕೆ ಛತ್ರಕಲ್ ದುರ್ಗ ಎಂದೂ, ಜನಪದ ಕಾವ್ಯಗಳಲ್ಲಿ ಚಿಂತರಕಲ್‌ದುರುಗ, ಸಿತ್ರಕಲ್‌ದುರುಗ, ಚಿತ್ರಕಲ್ಲು, ಚಿಂತರಕಲ್ಲು, ಸಿಂತರಕಲ್ಲು ಎಂದು ಉಲ್ಲೇಖಿತವಾಗಿರುವುದನ್ನು ಕಾಣಬಹುದು.[೨]

ಚಿತ್ರದುರ್ಗವು ಹಿಂದಿನ ಒಂದು ಪುರಾತನ ಪಟ್ಟಣ. ಇದರ ಇತಿಹಾಸ ತುಂಬಾ ರಂಜನೀಯವಾದುದು. ಇದು ಇತರ ಪುರಾತನ ಪಟ್ಟಣಗಳಿಗಿಂತ ವಿಭಿನ್ನವಾದುದುದಾಗಿದೆ. ಇತಿಹಾಸದ ದಾಖಲೆಯಲ್ಲಿ ಅನೇಕ ವಂಶದ ರಾಜ, ಸಾಮಂತರಾಜರಿಗೆ, ಪಾಳೆಯಗಾರರಿಗೆ ಆವಾಸ ಸ್ಥಾನವಾಗಿದೆ

ಈ ನಗರದ ಐತಿಹಾಸಿಕತೆಯನ್ನು ಇಲ್ಲಿ ನಿರ್ಮಿಸಿರುವ ಪ್ರಾಚೀನ ಕಟ್ಟಡಗಳಿಂದ, ಸಿಕ್ಕ ಶಿಲಾಶಾಸನಗಳಿಂದ ಮತ್ತು ನಿರ್ಮಿಸಿರುವ ಕೋಟೆ, ಕೊತ್ತಲಗಳಿಂದಲೂ ಇತಿಹಾಸ ತಿಳಿಯಬಹುದಾಗಿದೆ.

ಈ ನಗರಕ್ಕೆ ಅನೇಕ ಹೆಸರುಗಳಿದ್ದು ಚಿನ್ಮೂಲಾದ್ರಿ, ಹಿಡಿಂಬಪಟ್ಟಣಪುರ, ಬ್ರಹ್ಮಪುರಿ, ಚಿತ್ರದುರ್ಗ, ಫರ್ರಕಾಬಾದ್ ಎಂಬ ಹೆಸರುಗಳಿಂದ ಕರೆಯಲಾಗಿದೆ. ಬಹುಶಃ ಹಿಂದಿನಿಂದಲೂ ಚಿತ್ರದುರ್ಗದಲ್ಲಿ ಆಳ್ವಿಕೆ ನಡೆಸಿದ ಸಂತತಿಗಳು ಸಾಧನೆಗಳನ್ನು ಗಮನಿಸುತ್ತಾ ಬಂದ ನಮಗೆ ವೇದ್ಯವಾಗುವ ಅಂಶವೆಂದರೆ ಮಾನವ ವಾಸಿಸಲು ಅತ್ಯವಶ್ಯಕವಾದ ಹಿತಕರವಾದ ವಾಯುಗುಣ, ಫಲವತ್ತಾದ ಭೂಪ್ರದೇಶ, ನೀರಿನ ಸೌಕರ್ಯ, ಇವೆಲ್ಲಾ ಅನುಕೂಲಗಳಿದ್ದರಿಂದ ಜನವಸತಿ ನೆಲೆಸಲು ಅನುಕೂಲವಾಗಿದೆ. ಜೊತೆಗೆ ಗಿರಿಕಂದರಗಳು, ಗುಹೆಗಳು ಇದ್ದು ಹಿಂದಿನಿಂದಲೂ ಜನ ವಾಸ ಮಾಡಲು ಕಾರಣವಾಗಿದೆ.

ಚಿತ್ರದುರ್ಗದ ಬೆಟ್ಟದ ಪಶ್ಚಿಮ ಭಾಗದಲ್ಲಿ ಗುರುತಿಸಲ್ಪಟ್ಟಿರುವ ಇಪ್ಪತ್ತು ಶತಮಾನಗಳ ಹಿಂದೆ ರಾಜಧಾನಿಯಾಗಿ ವೈಭವದಿಂದ ಮೆರೆದ ಚಂದ್ರವಳ್ಳಿ, ಅಲ್ಲಿನ ಗತಕಾಲವನ್ನು ಸಾರುವ ಹೂತು ಹೋಗಿರುವ ಅರಮನೆಗಳ ಕುರುಹು, ಭೂ ಉತ್ಖನನ ಕಾರ್ಯದಲ್ಲಿ ದೊರೆತಿರುವ ಸೀಸದ ನಾಣ್ಯಗಳು. ವಿಷ್ಣುಸಾಲಿ ಗ್ರಾಮಗಳು ಅಂದರೆ ಶಿವಲಿಂಗಗಳು-ಇವೆಲ್ಲಾ ಮರೆತು ಹೋದ,

ಮರೆಯಲಾಗದ ಸಾಮ್ರಾಜ್ಯದ ಆಳ್ವಿಕೆಯನ್ನು ಅನಾವರಣ ಮಾಡಿವೆ. ಹಾಗಾಗಿ ದುರ್ಗದ ಇತಿಹಾಸವನ್ನು ಸಾರುವಲ್ಲಿ ಚಂದ್ರವಳ್ಳಿ ಬಹುಮುಖ್ಯಪಾತ್ರ ವಹಿಸಿದೆ. ಚಂದ್ರವಳ್ಳಿಯ ನಾಣ್ಯಗಳು, ಆಗಿನ ಆಳುತ್ತಿದ್ದ ರಾಜಪ್ರತಿನಿಧಿಗಳ, ಮಹಾರಥಿಗಳ ನಾಣ್ಯಗಳು ಈ ಕೆಲ ನಾಣ್ಯಗಳಲ್ಲಿ ಅವರ ಹೆಸರುಗಳನ್ನು ಬ್ರಾಹ್ಮಿ ಲಿಪಿಯಲ್ಲಿ ಬರೆದಿದೆ]. ಮೌರ್ಯರ ಕಾಲದ 'ಪುರಾಣ' ಎಂಬ ಚೌಕವಾದ ಮುದ್ರೆಯೊತ್ತಿದ (Punch-Marked) ಬೆಳ್ಳಿಯ ನಾಣ್ಯವೂ ಇದೆ.[೩] ಹೀಗೆ ದುರ್ಗದ ಚರಿತ್ರೆಯನ್ನು ಸಾರುವಲ್ಲಿ ಚಂದ್ರವಳ್ಳಿ ಅಗ್ರಸ್ಥಾನದಲ್ಲಿದೆ. ಹೀಗೆ ದಾಖಲಿತ ದಾಖಲೆಗಳು ಇತಿಹಾಸ ಬೆಳೆದು ಬಂದ ಕಾಲವನ್ನು ಅನುಕ್ರಮವಾಗಿ ದಾಖಲಿಸುತ್ತವೆ.

ಚಿತ್ರದುರ್ಗದ ಕಲ್ಲಿನ ಕೋಟೆಯು ಪಾಳೆಯಗಾರರ ಆಳ್ವಿಕೆಯನ್ನು ಸಾರುವಲ್ಲಿ ಇರುವ ಪ್ರಮುಖ ದಾಖಲೆ. ಇಲ್ಲಿರುವ ಬತೇರಿ, ರಂಗಯ್ಯನ ಬಾಗಿಲು, ಉಚ್ಚಂಗಿ ಹೊಂಡ ಮತ್ತು ಬಾಗಿಲು, ಸಿದ್ದಯ್ಯನ ಬಾಗಿಲು (ಸಂತೆ ಬಾಗಿಲು), ಬೀಸುವ ಕಲ್ಲುಗಳು, ಬೆಟ್ಟದಲ್ಲಿರುವ ದೇವಮಂದಿರಗಳು, ಉಯ್ಯಾಲೆ ಕಂಬ, ಮುರಗೀಮಠ, ಶಾಸನಗಳು ಇವೆಲ್ಲವೂ ಅಧಿಕೃತ ದಾಖಲೆಗಳಾಗಿವೆ. ದುರ್ಗದ ಪಾಳೆಯಗಾರರ ಆಳ್ವಿಕೆಯನ್ನು ದಾಖಲಿಸುತ್ತವೆ. ಹೀಗೆ ಲಿಖಿತ ದಾಖಲೆಗಳನ್ನು, ಶಾಸನಗಳೊಂದಿಗೆ, ದೊರೆತ ಪುರಾತತ್ವ ಉತ್ಖನಗಳ ದಾಖಲೆಗಳೊಂದಿಗೆ ಅಧ್ಯಯನ ನಡೆಸಿದಾಗ ದುರ್ಗದ ಇತಿಹಾಸದ ಸ್ಥೂಲರೂಪ ದೊರೆಯುತ್ತದೆ. ಚಿತ್ರದುರ್ಗ ಜಿಲ್ಲೆಯ ಪ್ರಮುಖ ಮಹಿಳಾ ದೈವಗಳೆಂದರೆ ಬೆಟ್ಟದ ತಪ್ಪಲಲ್ಲಿ ಉಚ್ಚಂಗಿಯಮ್ಮ, ನಗರದ ದಕ್ಷಿಣಕ್ಕಿರುವ ಬೆಟ್ಟದ ತುದಿಯಲ್ಲಿಯ ಬೇಡರ ದೇವತೆ ಓಬಳಾದೇವಿ. ಬೆಟ್ಟದ ಮೇಲಿನ ಏಕನಾಥೇಶ್ವರಿ, ಚಳ್ಳಕೆರೆಯ ಚೆಳ್ಳಿಕೇರಮ್ಮ, ಬಿಡಾರದಮ್ಮ-ಇವರೆಲ್ಲ ಚಿತ್ರದುರ್ಗದ ನವರಕ್ಷಕ ನವದುರ್ಗಿಯರು. ಹಾಗೆಯೇ ಚಿತ್ರದುರ್ಗ ಜಿಲ್ಲೆಯ ಶಕ್ತಿ ದೇವತೆಯೆಂದೇ ಪ್ರಾಂತ್ಯದಲ್ಲಿ ಹೆಸರು ವಾಸಿಯಾಗಿರುವ ಚಳ್ಳಕೆರೆ ತಾಲ್ಲೂಕಿನ ಬೇಡರೆಡ್ಡಿಹಳ್ಳಿ ಗ್ರಾಮದ ಸಮೀಪವಿರುವ ಗೌರಸಮುದ್ರದ ಮಾರಮ್ಮ ದೇವಿ ಹಾಗೂ ಶ್ರೀ ಕ್ಷೇತ್ರ ನಾಯ್ಕನಹಟ್ಟಿ ಶ್ರೀ ಗುರುತಿಪ್ಪೇರುದ್ರ ಸ್ವಾಮಿ ಈ ಸ್ಥಳಗಳು ಪ್ರಸಿದ್ಧ ಪುಣ್ಯ ಕ್ಷೇತ್ರಗಳಾಗಿ ದುರ್ಗದ ಜಿಲ್ಲೆಯ ಜನತೆಯ ಪಾಲಿಗೆ ಪವಿತ್ರ ಸ್ಥಳಗಳಾಗಿವೆ.

ಚಿತ್ರದುರ್ಗದ ಭೂವಿಸ್ತೀರ್ಣ ೧೦,೮೦೨,೬೦ ಕಿ.ಮೀಟರ್. ಈ ಜಿಲ್ಲೆಯ ಮಣ್ಣು ಬಹುತೇಕ ಎರೆಮಣ್ಣಿನಿಂದ ಕೂಡಿದೆ. ಬೆಟ್ಟಪಂಕ್ತಿಗಳಲ್ಲಿ ಗ್ರಾನೈಟ್ ಕಣಶಿಲೆ ಕಂಡುಬರುತ್ತದೆ. ಈ ಜಿಲ್ಲೆಯಲ್ಲಿ ಹಲವಾರು ಉಪಯುಕ್ತ ಖನಿಜಗಳು ಮತ್ತು ಅದಿರುಗಳು ದೊರೆಯುತ್ತವೆ. ಮುಖ್ಯವಾಗಿ ತಾಮ್ರ, ಕಬ್ಬಿಣ, ಮ್ಯಾಂಗನೀಸ್, ಸೀಸ, ಅನ್ನ, ಆಂಟಿಮೊನಿ ಮತ್ತು ಕ್ರೋಮೈಟ್ ಲೋಹದ ಅದಿರುಗಳು, ಅಲೋಹದ ಅದಿರುಗಳಾದ ಬೆರೈಟಿಸ್, ಕಯನೈಟ್, ಸುಣ್ಣಶಿಲೆ, ಬಣ್ಣದ ಮಣ್ಣುಗಳು ಹಾಗೂ ಅಲಂಕಾರಿಕ ಕಟ್ಟಡದ ಶಿಲೆಗಳನ್ನು ಹಲವಾರು ಪ್ರದೇಶಗಳಲ್ಲಿ ಕಾಣಬಹುದು. ಚಿನ್ನದ ಗಣಿಗಳನ್ನು ಕಾಣಬಹುದು. ಉತ್ತಮ ಗುಣಮಟ್ಟದ ತಾಮ್ರದ ಅದಿರು ಈ ಜಿಲ್ಲೆಯ ಇಂಗಳದಾಳು ಮತ್ತು ಕುಂಚಿಗನಾಳು ಪ್ರದೇಶಗಳಲ್ಲಿ ತಾಮ್ರದ ಅದಿರು ಸಿಗುತ್ತದೆ. ಜಿಲ್ಲೆಯ ಹಲವೆಡೆ ಪಚ್ಚೆಯ ಹಸಿರು

ಇಲ್ಲವೇ ಗಿಣಿಹಸಿರು ಬಣ್ಣದ ಕ್ವಾರ್ಡೈಟ್‌ಗಳು ಅಲಂಕಾರಿಕ ಶಿಲೆಗಳು ಜಗಲೂರು, ಕೊನಬೇವು ಮತ್ತು ಬೆಳಗಟ್ಟ ಪ್ರದೇಶಗಳಲ್ಲಿ ತೆಗೆಯುತ್ತಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಚಿತ್ರದುರ್ಗ, ಚಳ್ಳಕೆರೆ, ದಾವಣಗೆರೆ, ಜಗಳೂರು, ಮೊಳಕಾಲ್ಮೂರು, ಹಿರಿಯೂರು ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಜಿಲ್ಲೆಗೆ ಸಂಬಂಧಪಟ್ಟ ಶಾಸನಗಳು ದೊರೆತಿವೆ. ಇದರಿಂದ ಅಲ್ಲಿ ಆಳ್ವಿಕೆ ನಡೆಸಿದ ಅರಸರು ಅವರ ಕೊಡುಗೆಗಳು, ಅವರು ಬರೆಸಿರುವ ಗದ್ಯಶಾಸನಗಳು ದೊರೆತಿವೆ. ಶಾಸನ ಸಂಪಾದಕರು ಅಪಾರ ಪರಿಶ್ರಮದಿಂದ ಶಾಸನಗಳನ್ನು ಪ್ರಕಟಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯು ಆಗೊಮ್ಮೆ ಈಗೊಮ್ಮೆ ಭೀಕರ ಕ್ಷಾಮಕ್ಕೂ ಬಲಿಯಾದದ್ದುಂಟು. ಇಲ್ಲಿ ಬಹುತೇಕ ಕೃಷಿಯೇ ಪ್ರಮುಖ ಆದಾಯದ ಮೂಲ. ಇಲ್ಲಿಯ ಮುಖ್ಯ ಬೆಳೆಗಳೆಂದರೆ ಈರುಳ್ಳಿ, ಶೇಂಗಾ, ಮೆಕ್ಕೆಜೋಳ, ರಾಗಿ ಆಗಿವೆ. ವಿರಳವಾಗಿ ಕಡಲೆಕಾಳು, ಹೆಸರು, ಉದ್ದು, ಅವರೆ, ಜೋಳ, ಸಜ್ಜೆ, ಕುಸುಬೆಯನ್ನು ಬೆಳೆಯುತ್ತಾರೆ. ಈ ಜಿಲ್ಲೆಯಲ್ಲಿ ಮಾನ್ಯರಾದ ನಿಸ್ವಾರ್ಥ ಮುಖ್ಯಮಂತ್ರಿ ಎಂದೇ ಗುರುತಿಸಲ್ಪಟ್ಟಿದ್ದ ನಿಜಲಿಂಗಪ್ಪ ಈ ಜಿಲ್ಲೆಯ ದೊಡ್ಡಸಿದ್ದವ್ವನಹಳ್ಳಿಯವರು. ದಿ. ಎ. ಭೀಮಪ್ಪನಾಯಕರು, ಹೊ.ಚಿ. ಬೋರಯ್ಯ, ಸಹಕಾರಿ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದವರು. ಉತ್ತಮ ವಿದ್ವಾಂಸರನ್ನು ಕಂಡ ನಾಡು. ಸಿರಿಗೆರೆ ಶ್ರೀಕ್ಷೇತ್ರ, ಮುರಿಗೀಮಠ, ನಾಯಕನಹಳ್ಳಿ ಶ್ರೀಕ್ಷೇತ್ರ, ಹೊದ್ದಿಕೆರೆ ಸಿದ್ದಪ್ಪ ಹೀಗೆ ಹಲವಾರು ಧಾರ್ಮಿಕ ಕ್ಷೇತ್ರಗಳಿವೆ. ಅನೇಕ ರಾಜಕೀಯ ಧುರೀಣರು ಇಲ್ಲಿ ಆಗಿಹೋಗಿದ್ದಾರೆ. ಶ್ರೀ ದಿ. ಕೆ.ಹೆಚ್. ರಂಗನಾಥ್‌ರವರು, ಶ್ರೀ ಬಿ.ಎಲ್. ಗೌಡರವರು, ಅಶ್ವತ್ಥರೆಡ್ಡಿ ಜಿ.ಹೆಚ್, ತಿಪ್ಪಾರೆಡ್ಡಿ ಜಿ.ಹೆಚ್, ಹಾಲಿ ಶಾಸಕರು ರಘುಪತಿಯವರು, ಬಸವರಾಜ್ ಮಂಡೀಮಠರವರು ಹಾಗೂ ದಿ.ಮುಲ್ಕಾ ಗೋವಿಂದರೆಡ್ಡಿ ರವರು ರಾಜಕೀಯ ಮುತ್ಸದ್ದಿಗಳಾಗಿದ್ದಾರೆ. ಭೀಮಸಮುದ್ರದ ಶ್ರೀ ಮಲ್ಲಿಕಾರ್ಜುನಪ್ಪರವರು ರಾಜಕೀಯ ಮುಖಂಡರು. ಹಾಲೀ ಶಾಸಕರು ಹಾಗೂ ಸಚಿವರು ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಆದ ಶ್ರೀಯುತ ಹೆಚ್ ಆಂಜನೇಯರವರು ಚಿತ್ರದುರ್ಗ ಜಿಲ್ಲೆಯವರು. ಒಟ್ಟಾರೆ ಚಿತ್ರದುರ್ಗ ಜಿಲ್ಲೆಯು ಚಾರಿತ್ರಿಕವಾಗಿ ರಾಜಕೀಯವಾಗಿ,ಧಾರ್ಮಿಕವಾಗಿ ವಿವಿಧ ಹಂತಗಳಲ್ಲಿ ಬೆಳೆದು ಬಂದಿರುವುದನ್ನು ಗುರುತಿಸಬಹುದು. ಇದಕ್ಕೊಂದು ತಿರುವು ದೊರೆತಿದ್ದು ದುರ್ಗದ ಪಾಳೆಯಗಾರರಿಂದ. ಅವರ ವೈಭವದಿಂದ, ಇವರ ಕಲಾಸ್ಮಾರಕಗಳು, ಯಾತ್ರಾಸ್ಥಳಗಳು, ಧಾರ್ಮಿಕ ಕ್ಷೇತ್ರಗಳು, ಐತಿಹಾಸಿಕ ನೆಲೆಗಳನ್ನು ವೀಕ್ಷಿಸಿದರೆ ಇವರ ಬಗೆಗಿನ ಮಾಹಿತಿ ತಾನಾಗಿಯೇ ತಿಳಿದುಬರುತ್ತದೆ. ದುರ್ಗದ ಇತಿಹಾಸವು ಕರ್ನಾಟಕದ ಮೂಲೆಮೂಲೆಗೂ ಮನೆ ಮಾತಾಗಿದೆ.

ವಿಶೇಷವೆಂದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಬುಡಕಟ್ಟು ಜನರೂ ಇನ್ನೂ ಗ್ರಾಮಗಳಿಗೆ ಬಾರದೆ ಹಟ್ಟಿ, ಕಪಿಲೆ, ತೋಟ ಅಡವಿಗಳಲ್ಲಿ ಜೀವಿಸುತ್ತಿರುವುದು. ಪ್ರತಿಯೊಂದು ಹಟ್ಟಿ, ಕಪಿಲೆಗಳಲ್ಲಿಯೂ ಚರಿತ್ರೆ ಮತ್ತು ಸಂಸ್ಕೃತಿ ನಿರ್ಮಾಣಗೊಂಡಿರುತ್ತದೆ. ಇವರು ಪ್ರಕೃತಿಯ ಆರಾಧಕರು. ಬಹುತೇಕ

ಪ್ರಾಚೀನ ತಮ್ಮ ವಂಶಜರ ಆಚಾರ-ವಿಚಾರಗಳನ್ನು ಕಟ್ಟು-ನಿಟ್ಟಾಗಿ ಪಾಲಿಸಿಕೊಂಡು ಬರುವುದೇ ಇವರ ಸಂಸ್ಕೃತಿಯಾಗಿದೆ. ಅವರಲ್ಲಿನ ತ್ಯಾಗ, ಬಲಿದಾನ, ವೀರತ್ವ ಮೊದಲಾದ ಗುಣಗಳನ್ನು ಜನಪದರು ಹಾಡುತ್ತಾ ತಮ್ಮೊಳಗೇ ಕಟ್ಟಿಕೊಂಡು ಬರುತ್ತಿರುವುದೇ ಚರಿತ್ರೆ, ಹಾಗಾಗಿ ಈ ಜಿಲ್ಲೆಯಲ್ಲಿ ಸಾಂಸ್ಕೃತಿಕ ವೀರರು ಲಿಖಿತವಾಗಿ, ಲಿಖಿತಕ್ಕೆ ಸಿಗದವರು ಮೌಖಿಕವಾಗಿ ಅಂದಿನಿಂದ ಈವರೆಗೂ ಸಾಗುತ್ತಾ ಬಂದಿದ್ದಾರೆ.

ತಮ್ಮ ಸಾಹಸ, ಬಲಿದಾನಗಳಿಂದ, ತ್ಯಾಗಗಳಿಂದ ಹೆಸರಾದ ಜನಸಾಮಾನ್ಯರಿಗೆ ಹತ್ತಿರವಾದ ಪಾಳೆಗಾರರು, ಗುದಗತ್ತಿ, ವೀರಮಾತೆ ಓಬಳವ್ವ ನಾಗತಿ, ಒನಕೆ ಓಬವ್ವ, ಗಾದ್ರಿಪಾಲನಾಯಕ ಮೊದಲಾದವರನ್ನು ಅವರ ಧೈರ್ಯ ಸಾಹಸಗಳನ್ನು ಕೊಂಡಾಡುತ್ತಾ, ಅವರ ಹೆಸರುಗಳನ್ನು ತಮ್ಮ ಮಕ್ಕಳಿಗೆ ಇಡುವುದರ ಮೂಲಕ ಮತ್ತೆ ಅವರನ್ನೆ ತಮ್ಮ ಸಮುದಾಯದ ಜೊತೆ ಗುರುತಿಸುವುದು, ನೆನಪಿಸಿಕೊಳ್ಳುವುದನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಮಾನವ ಎಂದಿನಿಂದ ತನ್ನ ಆಲೋಚನೆಗಳನ್ನು ಹರಿಯಬಿಟ್ಟು ಚರಿತ್ರೆಯನ್ನು ನಿರ್ಮಿಸತೊಡಗಿದನೋ ಅಂದಿನಿಂದಲೇ ಚಾರಿತ್ರಿಕ ಯುಗ ಆರಂಭವಾಯಿತು. ಅಂದಿನ ಚರಿತ್ರೆಯನ್ನು ಓದಿದ ಇಂದಿನ ಜನಾಂಗ ಚಾರಿತ್ರಿಕ ಪ್ರಜ್ಞೆಯನ್ನು ಚಿಹ್ನೆ, ಸಂಕೇತ, ಗುರುತುಗಳ ಮೂಲಕ ಐತಿಹಾಸಿಕ ಅಂಶಗಳನ್ನು ಗುರುತಿಸುತ್ತಾ ಸಮಾಜ, ಸಂಸ್ಕೃತಿಯನ್ನು ಪೋಷಿಸುತ್ತಾ ಬಂದಿದ್ದಾನೆ. ಸ್ಥಳೀಯ ಚರಿತ್ರೆಯನ್ನು ಹೆಣೆಯುವಾಗ ಜನಪದರು ತಮ್ಮ ಪ್ರತಿಷ್ಠೆಯನ್ನು ಮೆರೆಯುತ್ತಾರೆ. ಇನ್ನು ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಹೇಳುವಾಗ ಅವರ ನಂಬಿಕೆ, ಜನರಲ್ಲಿರುವ ಅವರ ಮೇಲಿನ ಭಕ್ತಿ, ಅವರ ಪವಾಡ ಸದೃಶ್ಯವಾದ ಜೀವನವನ್ನು ಹೇಳುತ್ತಾರೆ. ಯುಗಧರ್ಮ ಬೇರೆಯಾದಾಗ ಆ ಯುಗದಲ್ಲಿ ಬದುಕಿದ ಜನರ ಅಭಿರುಚಿಗಳು ಸಹಜವಾಗಿ ಬದಲಾಗುತ್ತವೆ. ಇವುಗಳಿಗನುಗುಣವಾಗಿ ಅಭಿವ್ಯಕ್ತಿ ಮಾಧ್ಯಮ ರೂಪುಗೊಳ್ಳುತ್ತದೆ. ಜನಪದರ ಬದುಕಿನಲ್ಲಿ ಕಂಡ ಇಂತಹ ಘಟನೆ, ಸನ್ನಿವೇಶಗಳನ್ನು ಗುರುತಿಸಿ ಕೊಂಡಾಡುವ ಮೂಲಕ ಅವರ ಅಸ್ತಿತ್ವವನ್ನು ಸಾರುತ್ತಾರೆ.

ಕರ್ನಾಟಕ ಚಾರಿತ್ರಿಕ ಕಥಾಮಂಜರಿಯಲ್ಲಿ ಚಿತ್ರದುರ್ಗದ ಒನಕೆ ಓಬವ್ವೆಗೂ ಮಹತ್ವದ ಸ್ಥಾನ ಕಲ್ಪಿಸಿರುವುದುಂಟು. ಚಾರಿತ್ರಿಕ ಯುಗದ ವೀರವನಿತೆಯರ ಸಾಲಿನಲ್ಲಿ ಈಕೆಯನ್ನು ಗುರುತಿಸಿ ಈಕೆಯ ಧೀರೋದಾತ್ತ ನಿಲುವನ್ನು ಪ್ರಶಂಶಿಸಲಾಗಿದೆ. ಮುಖ್ಯವಾಗಿ ಸ್ವಾಮಿನಿಷ್ಠೆ, ಸಮಯಸ್ಫೂರ್ತಿ, ತ್ಯಾಗ ಈ ಗುಣಗಳನ್ನು ಈಕೆಗೆ ಅನ್ವಯಿಸಿಕೊಂಡಾಡುತ್ತಿರುವ ಗುಣಗಳಾಗಿವೆ. ಚಿತ್ರದುರ್ಗ ನಾಯಕ ಅರಸರ ಚರಿತ್ರೆಯಲ್ಲಿ ಈಕೆ ನಿರ್ವಹಿಸಿದ ಪಾತ್ರದ ಬಗೆಗೆ ಚರಿತ್ರೆಯನ್ನಾಧರಿಸಿದ ಕೆಲವು ಗ್ರಂಥಗಳಲ್ಲಿ, ಪ್ರಬಂಧಗಳಲ್ಲಿ ಪ್ರಸ್ತಾಪಿಸಲಾಗಿದೆ.

ಇದುವರೆಗಿನ ಕೃತಿಗಳನ್ನು ಜಾನಪದ, ಚಾರಿತ್ರಿಕ ಕಾವ್ಯಗಳು ಮತ್ತು ಅಸ್ಪಷ್ಟ ಐತಿಹಾಸಿಕ ಕಾವ್ಯಗಳು ಎಂದು ಮೂರು ರೀತಿಯಾಗಿ ವಿಂಗಡಿಸಿದ್ದಾರೆ. ಕಾವ್ಯಗಳಲ್ಲಿ ಬಹುಪಾಲು ಪೂರ್ಣವಾಗಿ ದೊರಕದೆ ಸುಸ್ಥಿತಿಯಲ್ಲಿರದ ಪದ್ಯ, ಗದ್ಯಗಳ ರೂಪ ಅಸಮಗ್ರ ಐತಿಹಾಸಿಕ ಕಾವ್ಯಗಳ ಸಾಲಿಗೆ

ಬರುತ್ತವೆ. ಕಥಾರೂಪ, ಆಶಯಗಳಲ್ಲಿ ಏಕರೂಪತೆ ಇರುವುದನ್ನು ಎರಡನೆಯ ಗುಂಪಿನ ಕಾವ್ಯಗಳಲ್ಲಿ ಗುರುತಿಸಲ್ಪಡುತ್ತದೆ. "ಸಾಮಾನ್ಯವಾಗಿ ಜನಪದ ಗಾಯಕರ ವೀರ ಕಾವ್ಯಗಳೆಲ್ಲ ರಾಜ ಮಹಾರಾಜರನ್ನು ಕುರಿತು ರಚಿತವಾಗಿರದೆ ಸಾಮಾನ್ಯರೊಡನಿದ್ದು ಸಾಮಾನ್ಯರ ಕಷ್ಟಸುಖಗಳಲ್ಲಿ ಸಮಭಾಗಿಗಳಾಗಿ ಬದುಕಿದ ಸಾಮಂತರನ್ನೋ, ಪಾಳೆಯಗಾರರನ್ನೋ ಕುರಿತವುಗಳಾಗಿವೆ. ಅವರ ನಾಯಕರುಗಳು ರಣಧೀರ ಕಂಠೀರವನಲ್ಲ, ಕೃಷ್ಣದೇವರಾಯನಲ್ಲ, ವಿಷ್ಣುವರ್ಧನನಲ್ಲ, ಪುಲಿಕೇಶಿಯಲ್ಲ, ಸಾಧುಸಂತರುಗಳಲ್ಲ, ಅಲ್ಲಮಪ್ರಭುವಲ್ಲ, ಬಸವೇಶ್ವರನಲ್ಲ, ಅಕ್ಕಮಹಾದೇವಿಯಲ್ಲ, ಕನಕ ಪುರಂದರರಲ್ಲ, ಇವರೆಲ್ಲ ಜನಪದರ ಬದುಕಿಗೆ ಹತ್ತಿರವಾದವರು. ಜನಪದರ ಬದುಕನ್ನು ಎತ್ತಲು ಪ್ರಯತ್ನಿಸಿದವರೆಲ್ಲರೂ ಅವರಿಗೆ ಹತ್ತಿರವಾದರು. ಮಾದೇಶ್ವರ, ಮಂಟೇಸ್ವಾಮಿ, ಪಿರಿಯಾಪಟ್ಟಣದ ವೀರರಾಜ, ಮಾಗಡಿ ಕೆಂಪೇಗೌಡ, ಎಲ್ಲಮ್ಮ, ಸರ್ಜಪ್ಪನಾಯಕ – ಇವರೆಲ್ಲಾ ಸಾಮಾನ್ಯರಿಗಾಗಿ ಬಾಳಿದವರು. ಆದ್ದರಿಂದಲೇ ಅವರು ಲಿಖಿತ ರೂಪದ ಯಾವ ಬಂಧನಕ್ಕೂ ಒಳಗಾಗದೆ ಜನತೆಯ ಹೃದಯಾಂತರಾಳದಲ್ಲೇ ಬೇರೂರಿ ನಿಂತರು. ಅಮರರಾದರು. ಹೀಗೆ ಜನಪದರ ವೀರಮಣಿ ಸರ್ಜಪ್ಪನಾಯಕ ಜನಪದರ ಬಾಯಲ್ಲಿ ಉಳಿದು ಅಪೂರ್ವ ಐತಿಹಾಸಿಕ ಲಾವಣಿಯ ನಾಯಕ ರತ್ನವಾದ.[೪] ಇಲ್ಲಿ ಜನತೆಗೆ ಹತ್ತಿರವಾದ ಸಾಮಾನ್ಯ ವೀರರೇ ಇವರ ಪಾಲಿನ ನಾಯಕ ಮಣಿಗಳಾಗಿದ್ದಾರೆ. ಐತಿಹಾಸಿಕ ವ್ಯಕ್ತಿಗಳಾಗಿದ್ದಾರೆ. ಪರಾಕ್ರಮಿಗಳು, ಸಾಹಸಿಗರನ್ನು ವೀರಕುಲದವರೆಂದರು. ಈಗಾಗಲೇ ಪ್ರಚಾರದಲ್ಲಿರುವ ಓಬವ್ವನ ವೀರ ವೃತ್ತಾಂತವು ಚಿತ್ರದುರ್ಗ ಪಾಳೆಯಗಾರ ಕೊನೆಯ ನಾಯಕ ರಾಜಾ ವೀರ ಮದಕರಿನಾಯಕನ ಆಡಳಿತಾವಧಿಯಲ್ಲಿ (ಕ್ರಿ.ಶ. ೧೭೭೯ರಲ್ಲಿ) ನಡೆಯಿತೆಂದು ತಿಳಿದಿದೆ. ಶ್ರೀರಂಗಪಟ್ಟಣದ ನವಾಬ ಹೈದರಾಲಿಯು ದುರ್ಗವನ್ನು ಮಣಿಸಲಾರದೆ ಅಭೇದ್ಯವಾದ ದುರ್ಗದ ಕೋಟೆಯನ್ನು ಕುಟಿಲೋಪಾಯದಿಂದ ಮಣಿಸಲು ನಿರ್ಧರಿಸಿ ಕೋಟೆಗೆ ಯಾವುದಾದರು ಕಳ್ಳಗಂಡಿಯಿದೆಯೇ ಎಂದು ತಿಳಿಯಲು ತನ್ನ ಗೂಢಾಚಾರರನ್ನು ಅಟ್ಟಿ ಪ್ರಯತ್ನಿಸಿದಾಗ, ಮೊಸರು ಗಡಿಗೆಯೊತ್ತ ಮಹಿಳೆಯೊಬ್ಬಳು ಕೋಟೆಯ ವಾಯುವ್ಯ ದಿಕ್ಕಿನಲ್ಲಿ ಕೋಟೆ ಹತ್ತಿ ಮರೆಯಾದುದನ್ನು ಗಮನಿಸಿದ ಗೂಢಾಚಾರರು ಆಕೆ ಮೇಲೇರಿ ಹೋದ ದಿಕ್ಕಿನಲ್ಲಿ ಬಂದು ಪರಿಶೀಲಿಸಿದಾಗ ಅಲ್ಲಿದ್ದ ಸಣ್ಣ ಕಿಂಡಿಯನ್ನು ಗಮನಿಸಿದರು. ಅಂತೆಯೇ ಹೈದರಾಲಿ ಸೈನಿಕರನ್ನು ಕೋಟೆಯ ಕಳ್ಳಗಂಡಿಯ ಮೂಲಕ ರಹಸ್ಯವಾಗಿ ಒಳನುಗ್ಗಿಸಲು ಪ್ರಯತ್ನಿಸಿದಾಗ ಗಂಡನಿಗೆ ಊಟಕ್ಕಿಟ್ಟು ಕುಡಿಯುವ ನೀರು ತರಲು ಬಂದ ಓಬವ್ವನ ಕಿವಿಗೆ ಬೆಟ್ಟದ ಮೇಲಿನ ನೀರವ ಮೌನದ ಮಧ್ಯೆ ಅಸ್ಪಷ್ಟ ಶಬ್ದಗಳು ಕೇಳಿ ಅಲ್ಲಿಗೆ ಧಾವಿಸಿ ಬಂದ ಓಬವ್ವ ಶತ್ರುಗಳ ಕುಟಿಲವನ್ನು ಅರಿತ ಓಬವ್ವ ತಕ್ಷಣ ಕೈಗೆ ಸಿಕ್ಕ ಒನಕೆಯಿಂದ ಶತ್ರುಗಳನ್ನು ಅವರ ಒಳನುಸುಳುವಿಕೆಯನ್ನು ತಡೆದು ಹಿಮ್ಮೆಟ್ಟಿಸಿ ಆಗಿನ ಸಂದರ್ಭಕ್ಕೆ ದುರ್ಗವನ್ನು ಶತ್ರುಗಳಿಂದ ರಕ್ಷಿಸಿದಳೆಂಬುದು ವೇದ್ಯವಾಗುತ್ತದೆ. ತನ್ನ ಈ ಸಾಹಸದ ಘಟನೆಯಿಂದ ಆಕೆ ಇಡೀ ದುರ್ಗದ ಇತಿಹಾಸದಲ್ಲಿ ಉನ್ನತ ಸ್ಥಾನ ಪಡೆದಳು. ಈ ಹಿನ್ನಲೆಯಲ್ಲಿ ಓಬವ್ವೆಯ ಘಟನೆಯು ಚಿತ್ರದುರ್ಗ

ಚರಿತ್ರೆಯಲ್ಲಿ ಬೇರ್ಪಡಿಸಲಾಗದ ಸಂಬಂಧವನ್ನು ಗಟ್ಟಿಯಾಗಿ ಬೆಸದುಕೊಂಡಿದೆ. ಚಿತ್ರದುರ್ಗದ ಕೋಟೆ, ರಾಜಾವೀರ ಮದಕರಿನಾಯಕ, ಸಾಂಸ್ಕೃತಿಕತೆಯ ಕೇಂದ್ರ ಮುರಿಘಾಮಠ ಇವುಗಳಷ್ಟೇ ಮಹತ್ವದ ಸ್ಥಾನವನ್ನು ಓಬವ್ವ ಪಡೆದಿದ್ದಾಳೆ. ಕರ್ನಾಟಕ ಚರಿತ್ರೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾಳೆ. ಓಬವ್ವೆಯ ಈ ಘಟನೆಯನ್ನು ಚಾರಿತ್ರಿಕವಾಗಿ ಹಲವು ವಿದ್ವಾಂಸರು ಹಲವು ರೀತಿಯಲ್ಲಿ ನಿರೂಪಿಸಿದ್ದಾರೆ. "ಓಬವ್ವ ಅಥವ ಓಬಿಯು ಚಿತ್ರದುರ್ಗದ" ಬಳಿಯ ಅಗಸನ ಕಲ್ಲು ಗ್ರಾಮದವಳು. ಚಿತ್ರದುರ್ಗ ಕೋಟೆಯ ಕಳ್ಳಗಿಂಡಿಯಲ್ಲಿ ನುಗ್ಗಲೆತ್ನಿಸಿದ ಶತ್ರು ಸೈನಿಕರನ್ನು ಹಿಮ್ಮೆಟ್ಟಿಸುವ ತನ್ನ ಸಾಹಸದಲ್ಲಿ ಅವರಿಂದ ಹತ್ಯೆಗೀಡಾದಳು. ಜೊತೆಗೆ ಓಬವ್ವನಿಂದ ಸಾಯಲ್ಪಟ್ಟ ಶತ್ರು ಸೈನಿಕರ ಸಂಖ್ಯೆ ೨೦೦ ರಿಂದ ೩೦೦ ಎಂದು ಬರೆಯುವುದರ ಮೂಲಕ.[೫] ಓಬವ್ವನ ಪರಾಕ್ರಮವನ್ನು ಪರಾಕಾಷ್ಠೆಗೆ ಮುಟ್ಟಿಸಿದ್ದಾರೆ. ಶತ್ರುವಿನ ಒಳನುಸುಳುವಿಕೆಯನ್ನು ತಡೆದು, ಅಲ್ಲಿಗೆ ಬಂದ ತನ್ನ ಗಂಡನಿಗೆ ಕೈ ಸನ್ನೆಯಿಂದಲೇ ರಣಕಹಳೆಯನ್ನು ಊದಲು ತಿಳಿಸಿ ದುರ್ಗದ ಸೈನ್ಯವನ್ನು ಹುರಿದುಂಬಿಸಿ ಶತ್ರು ಸೈನ್ಯವನ್ನು ಹಿಮ್ಮೆಟ್ಟಿಸಿ ದುರ್ಗವನ್ನು ರಕ್ಷಿಸಿದಳು. ಹೀಗಾಗಿ ಇವಳು ಜನಪ್ರಿಯತೆ ಪಡೆದು ಚರಿತ್ರೆಯಲ್ಲಿ ಗಟ್ಟಿಸ್ಥಾನ ಪಡೆದಾಕೆ. ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು, ಶ್ರೀ ಲಕ್ಷ್ಮಣ್ ತೆಲಗಾವಿಯವರು ಇನ್ನು ಹಲವಾರು ಲೇಖಕರು ಈ ಸಾಹಸಗಾಥೆಯನ್ನು ಬರೆದಿದ್ದಾರೆ. ಓಬವ್ವ ತನ್ನ ಸಾಹಸದ ನಂತರವೂ ಬದುಕಿದ್ದಳೆಂದೂ, ದುರ್ಗದ ನಾಯಕರು ಈಕೆಯನ್ನು ಸನ್ಮಾನಿಸಿ ಗೌರವಿಸಿದ್ದನೆಂಬುದನ್ನೂ ತಿಳಿಸಿದ್ದಾರೆ. ಸ್ವಾಮಿನಿಷ್ಠೆ, ಸಾಹಸವನ್ನು ಎತ್ತಿಹಿಡಿದಿದ್ದಾರೆ. ವಿಪರ್ಯಾಸವೆಂದರೆ ಇತಿಹಾಸದ ಛಾಪನ್ನು ಸ್ಪಷ್ಟವಾಗಿ ಮೂಡಿಸುವ ಇತಿಹಾಸಕಾರರಿಗೆ ಆಕೆಯ ಅಸ್ತಿತ್ವ ಅಷ್ಟಾಗಿ ಗೋಚರಿಸಿರಲಿಕ್ಕಿಲ್ಲವೇನೋ ಎಂಬ ಸಂದೇಹ ನಮ್ಮನ್ನು ಆಗ್ಗಾಗ್ಗೆ ಕಾಡುತ್ತದೆ. ಏಕೆಂದರೆ ಆಕೆಯ ಬಗೆಗಿನ ಮಾಹಿತಿಯನ್ನು ಶಿಷ್ಟ ಸಾಹಿತ್ಯದ ಮೂಲಕ ತೆರೆಯಲು ಪ್ರಯತ್ನಿಸಿದಾಗ ಈ ಮೇಲಿನ ಸಂದೇಹ ಕಾಡುತ್ತದೆ. "ಯತ್ರನಾರ್ಯಸ್ತು ಪೂಜ್ಯಂತೇರಮಂತೆ ತತ್ರ ದೇವತಾಃ" ಎಂದು ಹೇಳುವ ನಾಲಿಗೆಯೇ "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದು ಹೇಳುವಂತಹ ಹೇಳಿಕೆಯನ್ನು ನೆನಪಿಸಿತೆ ಎಂಬುದು. ಅಂದರೆ ಇಲ್ಲಿ ಕಾಡುವ ಬಹು ದೊಡ್ಡ ಕಾರಣ ಲಿಂಗ ಬೇಧ. ಚರಿತ್ರೆಯನ್ನು ಜಾಗರೂಕತೆಯಿಂದ ಸ್ತ್ರೀವಾದದ ನೆಲೆಯಲ್ಲಿ ಒಂದು ಕ್ಷಣ ಆಲೋಚಿಸಿ ಪುನರವಲೋಕಿಸಿದಾಗ ಬಹಳಷ್ಟು ಸ್ತ್ರೀ ಚರಿತೆಗಳನ್ನು ಪುರುಷ ಕೇಂದ್ರಿತವಾದ ಪ್ರಜ್ಞೆಯು ಬೇಕಾಗಿಯೇ ಚರಿತ್ರೆಯಲ್ಲಿ ಹೆಣ್ಣಿನ ಹೆಜ್ಜೆಯ ಗುರುತಗಳನ್ನು ಅಳಿಸಿ ಹಾಕಿದೆಯೇನೋ ಎಂಬ ಸಂದೇಹ ಮೂಡುತ್ತದೆ. ಋಗ್ವೇದ ಕಾಲದಲ್ಲಿನ ಸ್ವತಂತ್ರ ಮಹಿಳೆ ಬಹುತೇಕ ಸ್ಮೃತಿಗಳು, ಪುರಾಣಗಳು, ಬ್ರಾಹ್ಮಣಗಳು, ಧರ್ಮಶಾಸ್ತ್ರಗಳ ಕಾಲಗರ್ಭದಲ್ಲಿ ಕಳೆದುಹೋದಳು. ಹಾಗೆಯೇ ಪುರುಷ ಕೇಂದ್ರಿತ ಚರಿತ್ರೆಯು ಇಲ್ಲಿ ಹೆಣ್ಣಿನ ಅಮುಖ್ಯತೆಯನ್ನು ಎತ್ತಿ ಹಿಡಿದು ಪ್ರಧಾನ ಸಂಸ್ಕೃತಿಯಲ್ಲಿ ಅವಳ ಗುರುತುಗಳನ್ನು ಅಳಿಸಿ ಹಾಕಿದೆ. ಪ್ರಧಾನ ಸಂಸ್ಕೃತಿಯಲ್ಲಿ ಕಳೆದು ಹೋಗಿರುವ ಮಹಿಳೆಯ ಚರಿತ್ರೆಯನ್ನು ಕೆಳವರ್ಗದ ಅಧೀನ ಸಂಸ್ಕೃತಿಗಳ ಅಧ್ಯಯನದ

ನೆರವಿನಿಂದ ಹೊರತರಬೇಕಾಗಿದೆ. ಇದಕ್ಕೆ ಕಾರಣವಾದ ವರ್ಗ, ವರ್ಣ, ಲಿಂಗಾಧಾರಿತ, ಆರ್ಥಿಕಾಧಾರಿತ ನೆಲೆಗಳ ಪತ್ತೆ ಮಾಡಬೇಕಾದ ಗಹನಕಾರ್ಯ ನಡೆಯಬೇಕೇನೋ ಎನಿಸುತ್ತದೆ. ಬಹುಶಃ ಗದ್ದುಗೆಯ ಅನಿವಾರ್ಯತೆಯಿಂದ ಇತಿಹಾಸದಲ್ಲಿ ಪ್ರಸ್ತಾಪಿತರಾದ ಝಾನ್ಸಿರಾಣಿ, ಚಾಂದ್‌ಬೇಬಿ, ಮಲ್ಲಮ್ಮ, ರಾಣಿಚನ್ನಮ್ಮ ಹೀಗೆ ಬೆರಳಣಿಕೆಯ ಮಹಿಳೆಯರನ್ನು ಬಿಟ್ಟರೆ ಉಳಿದವರಾರು ಸ್ತ್ರೀಜಗತ್ತಿನ ಅನುಭವಗಳು ಅಷ್ಟಾಗಿ ಹೊರಬರಲಿಲ್ಲ. ಆದರೆ ಇಲ್ಲಿ ನಾವು ಗಮನಿಸಬೇಕಾದದ್ದು ದುರ್ಗದ ಇತಿಹಾಸ ಎಷ್ಟು ಸತ್ಯವೋ ಓಬವ್ವನ ಘಟನೆಯೂ ಅಷ್ಟೇ ಸತ್ಯ ಎನ್ನುವುದನ್ನು. ಇದರಲ್ಲಿಎರಡು ಮಾತಿಲ್ಲ.

ಶತ್ರುಗಳ ಕುಟಿಲ ಆಕ್ರಮಣವನ್ನು ಸಮಯ ಸ್ಫೂರ್ತಿಯಿಂದ ತಪ್ಪಿಸಿದ ಓಬವ್ವೆಯು ನಾಯಕನಿಂದ ಮೊದಲ್ಗೊಂಡು ಎಲ್ಲಾ ವರ್ಗದವರಿಂದಲೂ ಪ್ರಶಂಸೆಗೆ ಒಳಗಾದಳು. ಮದಕರಿನಾಯಕನು ಓಬವ್ವೆಯನ್ನೂ ಈಕೆಯ ಧೈರ್ಯಸಾಹಸಗಳನ್ನು ಹೊಗಳಿ ಆಕೆಯು ದುರ್ಗದ ರಕ್ಷಣೆಗಾಗಿ ಮಾಡಿದ ಸೇವೆಯನ್ನು ಪರಿಗಣಿಸಿ ತನಗೆ ಬೇಕಾದುದನ್ನು ಬೇಡಬಹುದೆಂದು ಈಕೆಗೆ ತಿಳಿಸಿದನು. ಆದರೆ ಆಕೆ ತಮ್ಮ ಆಳ್ವಿಕೆಯಲ್ಲಿ ತಾನೂ ತನ್ನ ಬಳಗದವರು ಸುಖದಿಂದ ನೆಮ್ಮದಿಯಿಂದ ಇರುವುದಾಗಿ ತಿಳಿಸಿದಳು. "ತನ್ನ ಮರಣಾನಂತರ ನನ್ನ ವಂಶದವರಿಗೆ ತಾನು ಕುಲದೇವತೆಯಾಗಿರುವೆನೆಂತಲೂ, ಆ ದೇವತೆಯ ವಾರ್ಷಿಕ ಉತ್ಸವಗಳಿಗೆ ದೊರೆಗಳ ಎಪ್ಪತ್ತೇಳು ಬಿರುದು ಬಹುಮಾನಗಳನ್ನು ಹಿಡಿಯಲು ಅನುಮತಿ ನೀಡಿ ಇಂತಹ ಉತ್ಸವಗಳಿಗಾಗಿ ಮರಪ್ರಮುಖರು ಮತ್ತು ಪ್ರಜೆಗಳು ತಮ್ಮ ಶಕ್ತ್ಯಾನುಸಾರ ಕಾಣಿಕೆಯನ್ನು ಕೊಡಿಸಬೇಕೆಂದು" ಬಿನ್ನವಿಸಿಕೊಂಡಳು[೬] ಇಲ್ಲಿನ ಅಭಿಪ್ರಾಯವನ್ನು ಗ್ರಹಿಸಿದರೆ ಓಬವ್ವನನ್ನು ಅವಳಿಗೆ ಸಂಬಂಧಿಸಿದ ಒಂದು ಸಮುದಾಯವು ತಮ್ಮನ್ನು ಗುರುತಿಸಿಕೊಳ್ಳುವ ನಿಟ್ಟಿನಲ್ಲಿ ಓಬವ್ವನ ಮಾತುಗಳ ಮುಖಾಂತರ ತಮ್ಮ ಅಭಿಪ್ರಾಯವನ್ನು ತಿಳಿಸಿರುವ ಧ್ವನಿಯೇನೋ ಎನ್ನುವಂತಿದೆ. ಇದು ಓಬವ್ವನ ಮುಖಾಂತರ ನಿವೇದಿಸುವುದೂ ಆಗಿದೆ. ಏಕೆಂದರೆ ತಮ್ಮಾಕೆ ಮಾಡಿದ ಸಾಹಸ ಕಳೆದು ಹೋಗಬಾರದೆನ್ನುವ ಕಳಕಳಿಯೂ ಆಗಿರಬಹುದು. ಇದೇ ಸತ್ಯಕ್ಕೆ ಹತ್ತಿರವಾದದ್ದೂ ಅನಿಸುತ್ತದೆ. ಪುರುಷ ಪ್ರಣೀತವಾದ ಧ್ವನಿಯೂ ಆಗಿದೆ. ಬಹುಶಃ ಜನಪದರಿಗೆ ಹತ್ತಿರವಾದ ಓಬವ್ವನಿಗೆ ಈ ಆಸೆ ಆಕಾಂಕ್ಷೆ ಇದ್ದವೋ ಅಥವಾ ಇಲ್ಲವೋ ಎಂಬುದನ್ನು ತಿಳಿಯಲು ನಮಗೆ ಲಭ್ಯ ನಿಖರ ಆಧಾರಗಳಿಲ್ಲ. ಏಕೆಂದರೆ ಚರಿತ್ರೆಕಾರನಿಗೆ ಇಲ್ಲಿ ಓಬವ್ವನ ಉಲ್ಲೇಖವೇ ನಗಣ್ಯ ಎನಿಸಿದಾಗ ಇನ್ನು ಭಾವನೆಗಳ ವಾಸ್ತವಿಕತೆ ಬಹುದೂರ. ಸಂಪೂರ್ಣ ಮಾಹಿತಿ ಕಾಲನ ಮಹಿಮೆಯಲ್ಲಿ ಸಂಪೂರ್ಣವಾಗಿ ಲಭ್ಯವಾಗದಿದ್ದರೂ ಸಿಕ್ಕ ಸ್ವಲ್ಪ ಮಾಹಿತಿಯಿಂದಲೇ ನಾವು ತಿಳಿಯಬಹುದು. ಇಷ್ಟೇ ಅಲ್ಲದೆ ಮದಕರಿನಾಯಕನು ಸ್ವಯಂಪ್ರೇರಿತನಾಗಿ ಚಿತ್ರದುರ್ಗದ ಬರಿಗೆರೆಯ (ಈಗ ಚಿತ್ರದುರ್ಗ ನಗರದಲ್ಲಿ ವಿಲೀನವಾಗಿರುವ ಸ್ಥಳ) ಪಶ್ಚಿಮದಲ್ಲಿರುವ ಅಗಸನಕಲ್ಲು ಗ್ರಾಮವನ್ನು ಈಕೆಯ ವಂಶಜರಿಗೆ ಜಹಗೀರಾಗಿ ನೀಡಿ ಅದನ್ನು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವಂತೆಯೂ ಶಾಸನ ಬರೆಯಿಸಿಕೊಟ್ಟರುವುದಾಗಿ

ಕ್ಷೇತ್ರಕಾರ್ಯದಲ್ಲಿ ತಿಳಿದು ಬಂದಿದೆ. ಹಾಗೆಯೇ ಭಾದ್ರಪದ ಮಾಸದಲ್ಲಿ ಚಿತ್ರದುರ್ಗ ಕೋಟೆಗೆ ಮತ್ತೊಂದು ಸುತ್ತು ಕೋಟೆಯನ್ನೇ ಕಟ್ಟಿಸಿ ಅದರ ಬಾಗಿಲಿಗೆ 'ಒನಕೆ ಕಿಂಡಿ ಬಾಗಿಲು' ಎಂದು ಹೆಸರಿಸಿದನು. ಓಬವ್ವೆಯ ಪ್ರತಿಮೆಯನ್ನು ಕೆತ್ತಿಸಿ ಪೂರ್ವಾಭಿಮುಖವಾಗಿ ಆಕೆಯ ಸಾಹಸದ ಗುರುತಾಗಿ ಆ ಕಳ್ಳಗಿಂಡಿಯ ಬಳಿ ನಿಲ್ಲಿಸಿದ್ದಾಗಿ, ನಂತರ ಹೈದರಾಲಿಯ ದಾಳಿಯ ನಂತರ ಆ ಪ್ರತಿಮೆ ಕಣ್ಮರೆ ಆಗಿದ್ದು, ಅದರ ಪಾದುಕೆಗಳು ಮಾತ್ರ ಉಳಿದಿದ್ದು. ಅವುಗಳನ್ನು ಓಬವ್ವನ ಸಮುದಾಯದವರೆಂದು ಗುರುತಿಸಿಕೊಂಡಿರುವ ಸಮೂಹವು ತಾವೇ ನಿರ್ಮಿಸಿಕೊಂಡಿರುವ ಒನಕೆ ಓಬವ್ವನ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿಕೊಂಡಿರುವುದಾಗಿ ಕ್ಷೇತ್ರ ಕಾರ್ಯಕ್ಕೆ ತೆರಳಿದ ಸಂದರ್ಭದಲ್ಲಿ ಶ್ರೀಯುತ ಹನುಮಂತಪ್ಪ, ವಕ್ತೃ ಇವರು ದೇವಸ್ಥಾನವನ್ನು ತೋರಿಸಿ ಓಬವ್ವನ ಪಾದುಕೆಗಳನ್ನು ತೋರಿಸಿದರು.[೭]

ರಾಜ್ಯ ದಾಹದ ಆಸೆ ಹೈದರನನ್ನು ನಾಯಕನ ಮೇಲಿನ ಸ್ನೇಹವನ್ನು ಮರೆಸಿ ಕುಟಿಲೋಪಾಯದಿಂದ ದುರ್ಗವನ್ನು ವಶಪಡಿಸಿಕೊಳ್ಳಲು ಮುಂದಾದಾಗ ಓಬವ್ವ ತನ್ನ ನಾಡಭಕ್ತಿಯನ್ನು ಮೆರೆದಳು. ಅಂದು ಅವಳಿಗೆ ದೇಶಸೇವೆ, ದೇಶಾಭಿಮಾನದ ಬಗ್ಗೆ ಯಾರು ಉಪದೇಶ ಮಾಡಿರಲಿಲ್ಲ. ಆದರೂ ತನ್ನಿಂದಾದ ಅಳಿಲು ಸೇವೆಯನ್ನು ಮಾಡಿ ತನ್ನ ದೇಶವನ್ನು ರಕ್ಷಿಸಿದಳು. ಇದರಿಂದ ನಮಗೆ ತಿಳಿಯುವ ಬಹುಮುಖ್ಯ ಅಂಶ ಸಾಮಾನ್ಯರು ಅಸಮಾನ್ಯರ ಪಟ್ಟಿಗೆ ಸೇರುವುದು ತಮ್ಮ ನಿಸ್ವಾರ್ಥ ಸೇವೆ, ದೇಶಸೇವೆ ಮತ್ತು ಬಲಿದಾನಗಳಿಂದ ಮಾತ್ರ, ಹಣ ಮತ್ತು ಜಾತಿ ಬಲದಿಂದಲ್ಲ ಎಂಬುದು ವೇದ್ಯವಾಗುತ್ತದೆ.

ಇಂದು ಅತ್ಯಂತ ಪ್ರಸ್ತುತದಲ್ಲಿರುವ ಪದ ಎಂದರೆ 'ಜನಮನ್ನಣೆ' ಅದಕ್ಕಾಗಿ ನಾವು ಏನೆಲ್ಲಾ ಮಾಡುತ್ತೇವೆ, ದಾನ ಮಾಡಿದಾಗ ನಮ್ಮ ಹೆಸರು, ಶಂಕುಸ್ಥಾಪನೆ ಮಾಡಿದಾಗ ನಮ್ಮ ಹೆಸರು ಕಂಡ ಕಂಡಲೆಲ್ಲಾ ಹಸರು ರಾರಾಜಿಸುವುದಕ್ಕೆ ಏನೆಲ್ಲಾ ಮಾಡಬಹುದು ಎಲ್ಲಾ ಮಾಡುತ್ತೇವೆ. ಆದರೆ ಇದನ್ನು ಇಂದಿನ ಮಾನವ ಕೇವಲ ಕ್ಷಣಕ್ಕೆ ಮಾತ್ರ ಪರಿಗಣಿಸಿ ನಂತರ ಕಡೆಗಾಣಿಸುತ್ತಾನೆ. ಅವರಾರು ತಮ್ಮ ಹೆಸರನ್ನ ಕಡೆಯವರೆಗೂ ಉಳಿಸಿಕೊಂಡು ಮನ್ನಣೆ ಪಡೆಯಲು ಸಾಧ್ಯವಾಗದೆ ಅಳಿದು ಹೋಗುತ್ತಾರೆ. ಇಂದು ಸೇವಾಮನೋಭಾವವಿಲ್ಲದ ಸೇವೆ, ದಾನ ಕೇವಲ ಪ್ರಚಾರಕ್ಕೆ ಮಾತ್ರ ನಿಮಿತ್ತ ಅಂದರೆ ದಾನಿಗಳು, ಸೇವೆ ಮಾಡಿದವರು ಇರುವವರೆಗೂ ಮಾತ್ರ, ಅವರಳಿದ ಮೇಲೆ ನಾವೂ ಅಳಿಯುತ್ತೇವೆ. ಅವು ಎಂದೂ ಜನರ ಮನದಲ್ಲಿ ಉಳಿಯುವುದೇ ಇಲ್ಲ. ಸ್ವಾರ್ಥದ ಸೇವೆ ಎಲ್ಲಿಯೂ ಸಲ್ಲುವುದಿಲ್ಲ. ನಿಸ್ವಾರ್ಥ ಸೇವೆ ಎಲ್ಲಿಯೂ ನಿಲ್ಲುವುದಿಲ್ಲ. ನಿಸ್ವಾರ್ಥ ಸೇವೆ ಗಣನೆಗೆ ಬರುತ್ತದೆ. ನಿಸ್ವಾರ್ಥ ಸೇವೆ ಎಂದೆಂದಿಗೂ ಶಾಶ್ವತ ಎನ್ನುವುದಕ್ಕೆ ಒಂದು ಚಿಕ್ಕ ಉದಾಹರಣೆ ಓಬವ್ವನ ಸಾಹಸಗಾಥೆ. ನಿಜವಾದ ಸೇವೆಗೆ ಶಿಲೆಯ ಮೇಲಿನ ಶಾಸನವಾಗಲಿ, ಫ್ಲೆಕ್ಸ್, ಬ್ಯಾನರ್ ಆಗಲಿ ಬೇಕಿಲ್ಲಾ. ಸೇವೆಯು ನಿರಂತರವಾಗಿ ಸಾಗಿ ಬರುವಂತಿರಬೇಕು. ಆಗ ಮಾತ್ರ ಜನಮನ್ನಣೆ. ಸಾಮಾನ್ಯರಲ್ಲಿ ಸಾಮಾನ್ಯಳಾದ ಓಬವ್ವನ ನಾಡಭಕ್ತಿಯನ್ನು ಇತಿಹಾಸ

ಗುರುತಿಸಲಿ, ಬಿಡಲಿ ತಾವು ಮಾತ್ರ ಆಕೆಯನ್ನು ಜ್ವಲಂತ ಸಾಕ್ಷಿಯಾಗಿಸಿದ್ದಾರೆ. ಘಟನೆ ನಡೆದು ಸರಿಸುಮಾರು ೨೫೦ ವರ್ಷಗಳಷ್ಟು ಕಾಲ ಸಂದಿದ್ದರೂ ನಾಡಿನ ಜನಪದರು ಓಬವ್ವನನ್ನು ಜೀವಂತವಾಗಿ ಇಟ್ಟಿದ್ದಾರೆ. ತಮ್ಮ ನಡೆ–ನುಡಿ, ಜೀವನ ಶೈಲಿಯಲ್ಲಿ ಓಬವ್ವನನ್ನು ಪ್ರತಿನಿಧಿಸುತ್ತಿದ್ದಾರೆ. ಇಲ್ಲಿ ಕಾರಂತರ ನುಡಿಯಾದ "ಪ್ರಾಣಿ ಜೀವನ ಮಿತವಾದುದು, ಮನುಷ್ಯ ಜೀವನ ಬಹುಮುಖವಾದುದು" ಎಂಬ ಉಕ್ತಿಯನ್ನು ಓಬವ್ವ ನಿಜವಾಗಿಸಿದ್ದಾಳೆ. ನಡೆದು ತೋರಿಸಿದ್ದಾಳೆ.

ಓಬವ್ವಳ ಚಾರಿತ್ರಿಕತೆಯನ್ನು ಸಾರುವಲ್ಲಿ ಕೈಫಿಯತ್ತು, ಆಕೆಯ ಪೀಳಿಗೆಯವರು ಎಂದು ಕ್ಷೇತ್ರಕಾರ್ಯಕ್ಕೆ ಹೋದಾಗ ಗುರುತಿಸಿಕೊಂಡಿರುವವರು ನೀಡಿರುವ ವಂಶವೃಕ್ಷ, ರಾಜಾ .ಎಸ್ ಪಾಳೇಗಾರ ಅವರು ನೀಡಿರುವ ಮುದ್ರೆಯೊತ್ತಿದ ಛಲವಾದಿ ಕಟ್ಟಿಮನೆಯವರಿಗೆ ನೀಡಿದ ಪತ್ರಗಳು, ಚಿತ್ರದುರ್ಗದ ಕೊನೆ ಅರಸರಾಜವೀರ ಮದಕರಿನಾಯಕನ ಆಳ್ವಿಕೆಯಲ್ಲಿ ಇದ್ದ ಓಬವ್ವನ ಬಗ್ಗೆ ಮತ್ತು ಸಾಹಸಗಾಥೆಯ ಬಗ್ಗೆ ಮಾಹಿತಿ ನೀಡುತ್ತವೆ. ಹಾಗೆಯೇ ಚರಿತ್ರೆಯಲ್ಲಿ ಗುರುತಿಸಲಾಗಿರುವಂತೆ "ಹೈದರ್ ಆಲಿಯು ಒಟ್ಟು ನಾಲ್ಕು ಬಾರಿ ಅಂದರೆ ಕ್ರಿ.ಶ. ೧೭೬೩ ಜನವರಿ, ೧೭೭೪ ಮಾರ್ಚ್, ೧೭೭೭ ಜೂನ್ ಮತ್ತು ೧೭೭೯ ಫೆಬ್ರವರಿ–ಮಾರ್ಚ್‌ಗಳಲ್ಲಿ ಚಿತ್ರದುರ್ಗದ ಮೇಲೆ ದಾಳಿ ನಡೆಸಿ, ತನ್ನ ನಾಲ್ಕನೇ ದಾಳಿಯಲ್ಲಿ ದುರ್ಗವನ್ನು ಹಿಡಿಯುವಲ್ಲಿ ಸಫಲನಾದನು.[೮] ಚಿತ್ರದುರ್ಗದ ಬಖೈರು ಹಾಗೂ ಕೈಫಿಯತ್‌ಗಳನ್ನು ಸಮೀಕರಿಸಿ ಚರಿತ್ರೆಯೊಂದಿಗೆ ಅಭ್ಯಸಿಸಿದಾಗ ಓಬವ್ವೆಯ ಘಟನೆ ಹೈದರ್ ಆಲಿ ಮತ್ತು ರಾಜಾ ವೀರಮದಕರಿ ನಾಯಕರ ನಡುವೆ ಕ್ರಿ.ಶ. ೧೭೭೯ರಲ್ಲಿ ನಡೆದ ಕೊನೆಯ ದಾಳಿಯ ಸಂದರ್ಭದಲ್ಲಿ ಎಂಬುದು ಖಚಿತವಾಗುತ್ತದೆ.

ಬೆಟ್ಟದಲ್ಲಿರುವ ತಣ್ಣೀರು ಚಿಲುಮೆಯ ಪೂರ್ವಕ್ಕಿರುವ ಓಬವ್ವ ಮತ್ತು ಪತಿ ಮದ್ದಹನುಮಪ್ಪನವರು ವಾಸವಿದ್ದ ಮನೆಯಿದು ಎಂದು ತೋರಿಸಲಾದ ಕಲ್ಲಿನ ಗುಹೆಯ ಪಕ್ಕದಲ್ಲಿರುವ ಕೋಟೆ ಆಂಜನೇಯ ವಿಗ್ರಹದ ಅನತಿ ದೂರದಲ್ಲಿಯೇ ಎತ್ತರವಾದ ಸ್ಥಳವಿದ್ದು ಕಲ್ಲು ಮಂಟಪವಿದ್ದು ಹೋದ ಸ್ಥಿತಿಯಲ್ಲಿದ್ದು ಅದು ಓಬವ್ವನ ಸಮಾಧಿ. ಅದನ್ನು ಆಕೆಯ ವಂಶಸ್ಥರೆಂದು ಗುರುತಿಸಿಕೊಂಡು ಬರುತ್ತಿರುವವರು ಅಂದಿನಿಂದಲೂ ಇಂದಿನವರೆಗೂ ಸಮಾಧಿ ಪೂಜೆ ಮಾಡಿಕೊಂಡು ಬರುತ್ತಿರುವುದಾಗಿ ತಿಳಿಸಿದರು.[೯] ಆದರೆ ಚರಿತ್ರೆಯ ಯಾವುದೇ ಅಧಿಕೃತ ಆಧಾರಗಳು ಇದಕ್ಕೆ ಆಧಾರವಾಗಿಲ್ಲ. ಕ್ಷೇತ್ರ ಕಾರ್ಯದಲ್ಲಿ ತಿಳಿದು ಬಂದ ಸಮಾಧಿಯ ಬಗ್ಗೆ ದುರ್ಗದ ಕೈಫಿಯತ್ತಾಗಲಿ, ನಾಯಕ ವಂಶಜರು ಓಬವ್ವೆಯ ವಂಶದವರಿಗೆ ನೀಡಿದ ರಹದಾರಿ ಪತ್ರದಲ್ಲಾಗಲಿ ಇದರ ಬಗ್ಗೆ ಉಲ್ಲೇಖವಿಲ್ಲ. ಆದರೆ ಕ್ಷೇತ್ರ ಕಾರ್ಯದಿಂದ ಸ್ವತಃ ಸ್ಥಳ ಪರಿಶೀಲಿಸಿ ನೋಡಿದಾಗ ಓಬವ್ವ ಮತ್ತು ಪತಿಯಿದ್ದಯಡೆ, ಕಹಳೆ ಬತೇರಿಯಿಂದ ನೇರವಾಗಿ ಕೆಳಗೆ ಬರುವ ದಾರಿಯಿದ್ದು, ಅಲ್ಲಿನ ಕಲ್ಲುಗುಹೆಯು ಕಾವಲುಗಾರನಿಗೆ ನೀಡಿದ್ದ ಮನೆಯೂ ಅದೇ ಎಂಬುದು ವೇದ್ಯವಾಗುತ್ತದೆ. ಅಲ್ಲಿಂದ ಎದುರುಗಡೆ ಇರುವ ತಣ್ಣೀರು ಚಿಲುಮೆ ಬಳಿಯಲ್ಲಿ ಓಬವ್ವೆಯ ಸಾವಿನ ನಂತರ ನಾಯಕನು ಆಕೆಯನ್ನು ಗೌರವಾದಾರಗಳಿಂದ ಚಿಕ್ಕಪೇಟೆ, ದೊಡ್ಡಪೇಟೆ, ಮೇಲ್ದುರ್ಗ ಎಲ್ಲಾ

ಕಡೆಗೂ ಆಕೆಯ ಸಾಹಸವನ್ನು ಕೊಂಡಾಡುತ್ತಾ ಮಂಗಳವಾದ್ಯಗಳ ಸಹಿತ ಸಕಲ ಗೌರವದೊಂದಿಗೆ ಆಕೆಯನ್ನು ಇಲ್ಲಿಯೇ ಸಮಾಧಿ ಮಾಡಲಾಯಿತೆಂದು ಹೇಳುವುದನ್ನು ಕೇಳಿ, ಸ್ಥಳವನ್ನು ನೋಡಿ, ಅಲ್ಲಿ ರಾಜ ಪರಿವಾರದವರ ಮನೆಗಳಾವುವೂ ಅಲ್ಲಿಲ್ಲ. ಓಬವ್ವನ ವಾಸಸ್ಥಳದ ಸಮೀಪದಲ್ಲೇ ಕಲ್ಲುಮಂಟಪ ಕಟ್ಟಿದ್ದು ಅದು ಬಿದ್ದು ಹೋದ ಸ್ಥಿತಿಯಲ್ಲೇ ಕಾಣುತ್ತಿದ್ದು ಮೇಲ್ನೋಟಕ್ಕೆ ಸಮಾಧಿ ಸ್ಥಳವೆಂದು ಕಾಣಿಸಿದರು. ಇದಕ್ಕೆ ಅಗತ್ಯ ದಾಖಲೆಗಳ ಕೊರತೆಯಿದೆ. ಜನಪದರು ಅನೇಕ ನಂಬಿಕೆಗಳನ್ನು ಎಷ್ಟೋ ತಲೆಮಾರುಗಳಿಂದ ಉಳಿಸಿಕೊಂಡು ಬರುತ್ತಿದ್ದಾರೆ. ಆ ನಿಟ್ಟಿನಲ್ಲಿ ಅವು ಸುಳ್ಳಾಗಲಿ, ನಿಜವಾಗಲಿ ಪಾಲಿಸಿಕೊಂಡು ಬರುತ್ತಾರೆ. ತಮ್ಮ ನಡೆ ನುಡಿಗಳಲ್ಲಿ ಅವುಗಳ ಅಸ್ತಿತ್ವವನ್ನು ಕಾಣುತ್ತಾರೆ. ಹಾಗಾಗಿ ಜನಪದರ ಈ ನಂಬಿಕೆಗಳು ಇತಿಹಾಸಕ್ಕೆ ಮೂಲ ಸಾಮಗ್ರಿಯಾಗಿ ಉಪಯುಕ್ತ ನೆರವು ನೀಡುತ್ತವೆ. ಹಾಗಾಗಿ ಓಬವ್ವನ ಸಮುದಾಯದವರೆಂದೇ ತಮ್ಮನ್ನು ಗುರುತಿಸಿಕೊಂಡು ಬಂದಿರುವ ಸಮುದಾಯದವರ ಸಮಾಧಿ ಪೂಜೆಯು ಜನಪದರ ನಂಬಿಕೆಯಲ್ಲಿದೆ. ಇತಿಹಾಸವು ಸಂಪೂರ್ಣವಾಗಿ ಕಾಲದ ಮೇಲೆ ಅವಲಂಬಿತವಾಗಿದ್ದರೆ, ಜನಪದ ಸಾಹಿತ್ಯವು ಸಂಪೂರ್ಣವಾಗಿ ಕಾಲಾತೀತವಾಗಿದ್ದು, ಸಾಂಸ್ಕೃತಿಕ ವೀರರ ಜೀವನದ ಕೆಲವು ನೋಟಗಳನ್ನು ಜನಪದ ಸಾಹಿತ್ಯ ಒದಗಿಸುತ್ತದೆಯೇ ಹೊರತು, ಅವರ ಕಾಲಮಾನ ವಿವರ ಪೂರ್ಣವಾದ ಅವರ ನಡವಳಿಕೆ, ದಿನಾಂಕ ತೇದಿಗಳನ್ನು ವಿವರಿಸುವ ಉದ್ದೇಶ ಜನಪದ ಸಾಹಿತ್ಯಕ್ಕಿಲ್ಲ. ಹಾಗಾಗಿ ಸಮುದಾಯದವರು ಹಿಂದಿನಿಂದಲೂ ತಮ್ಮ ಪೂರ್ವಿಕರು ಈ ಸ್ಥಳಕ್ಕೆ ಬಂದು ಹಾಲೆರೆಯುತ್ತಿದ್ದು ಅದು ಓಬವ್ವನ ಸಮಾಧಿಸ್ಥಳ ಎಂದು ತಮಗೆ ತಿಳಿದಿದ್ದು ಅದನ್ನೇ ವಾರ್ಷಿಕ ಉತ್ಸವವನ್ನಾಗಿ ಆಚರಿಸುತ್ತಿರುತ್ತಿದ್ದಾರೆ.

ಹೈದರನ ಕುಟಿಲೋಪಾಯಕ್ಕೆ ದುರ್ಗವು ಪತನವಾಯಿತು. ದುರ್ಗದ ಸೈನಾಧಿಪತಿಗಳು ಮೈಸೂರು ನವಾಬ ಹೈದರಾಲಿಯ ಸೈನಿಕರೊಡನೆ ಹೋರಾಟ ನಡೆಸಿದರು. ಫಲಪ್ರದವಾಗದೆ ದುರ್ಗದ ಅವನತಿಯಾಯಿತು. ರಾಜ ವೀರಮದಕರಿನಾಯಕರನ್ನು ಕೈ ಸೆರೆಯಾಳಾಗಿ ಶ್ರೀರಂಗಪಟ್ಟಣಕ್ಕೆ ಹೋದರು. ಅರಮನೆಯ ರಾಜಶ್ರೀಯರೆಲ್ಲಾ ಮುಸಲ್ಮಾನರ ದಾಳಿಗೆ ಹೆದರಿ ಗೋಪಾಲಸ್ವಾಮಿ ಹೊಂಡದಲ್ಲಿ ನಗನಾಣ್ಯಗಳ ಸಹಿತ ಪ್ರಾಣತ್ಯಾಗ ಮಾಡಿದರು. ಮೇಲುದುರ್ಗವೂ ಶತ್ರುಗಳಿಂದ ಲೂಟಿಯಾಯಿತು. ಯುದ್ಧಕ್ಕೆ ತೆರಳಿದ ರಾಜಾ ಮದಕರಿ ಹಿಂದಿರುಗಲಿಲ್ಲ. ಅಂದರೆ ಸೆರೆಯಾಳಾಗಿ ಹೈದರನು ಶ್ರೀರಂಗಪಟ್ಟಣಕ್ಕೆ ಕರೆದೊಯ್ದನು. "ಆಗ ಮಹಾರಾಜಾಧಿರಾಜ ವೀರ ಮದಕರಿನಾಯ್ಕರು ಪಟಾ ತೆಗೆದುಕೊಂಡು ಕುದುರೆ ಸವಾರಿಯಾಗಿ ಶತ್ರುಗಳನ್ನು ಹೊಡೆಯುತ್ತಾ ಹೋದರು. ಪರಂತು ಹಿಂದಿರುಗಲಿಲ್ಲ, ಬಹಳವಾಗಿ ಜಖಂ ಆದರೂ ಮನಸ್ಸಿಗೆ ತಾರದೇ ನಿಸ್ಸಂಗ ಹೋದರು".[೧೦] ಹೀಗೆ ಯುದ್ಧಕ್ಕೆ ಹೋಗಿದ್ದ ನಾಯಕ ನಾಪತ್ತೆಯಾಗಿದ್ದ. ಆಕ್ರಮಣಕಾರರು ಮುಸಲ್ಮಾನರು ಪ್ರತೀ ಮನೆಗೂ ನುಗ್ಗಿ ದೋಚಿಕೊಂಡು ಹೋಗುವರೆಂಬ ಭಯದಿಂದ ಪುರಜನರು ತಲ್ಲಣಿಸಿದರು. ಸಿಕ್ಕ ನೆಲೆಗಳನ್ನು ಹುಡುಕಿಕೊಂಡು ಹೊರಟರು. ಹಾಗೆಯೇ ಕಹಳೆಯವರೆಲ್ಲಾ ಒಂದೆಡೆ ಸಾರಿ

ರಾಜನಿಲ್ಲದ ನಾಡಲ್ಲಿ ತಾವು ಜೀವಿಸುವುದು ಅಸಾಧ್ಯ ಎಂದು ಮನಗಂಡು ನಾಯಕನಿಗೆ ನಂಬಿಕಸ್ತರಾಗಿದ್ದ ಛಲವಾದಿಗಳೆಲ್ಲಾ ಒಂದಾಗಿ ದುರ್ಗ ಬಿಟ್ಟು ಹೊರಗಡೆ ಹೋಗಲು ಸಿದ್ಧವಾಗಿ ಹೊರಟೇಬಿಟ್ಟರು.[೧೧] ಓಬವ್ವನ ಪತಿ ಮದ್ದಹನುಮಪ್ಪ ಉಳಿದವರೆಲ್ಲಾ ಒಂದಾಗಿ ಹೊರಟಾಗ ಸಹೋದರ ವರಸೆಯ ಕಹಳೆ ಬಾಲಪ್ಪ ಕಾಣದಾದಾಗ ಹುಡುಕಲು ಹೊರಟಾಗ ಆತ ತನ್ನ ರಕ್ಷಣೆಗಾಗಿ ಹೋದ ಸಂದರ್ಭದಲ್ಲಿ ಕುಂಚಿಗನಾಳು ಕಣಿವೆಯಲ್ಲಿ ಶತ್ರುಗಳಿಂದ ಹತನಾಗಿದ್ದನ್ನು ಕಂಡು ಹೆದರಿದ ಮದ್ದಹನುಮಪ್ಪ ತನ್ನ ಮಗ ಆನೆಪ್ಪ ಮತ್ತು ಹತ್ತಿರದ ಬಂಧುಗಳೊಂದಿಗೆ ಎರೆನಾಡಾದ ದೊಡ್ಡಸಿದ್ದವ್ವನಹಳ್ಳಿಗೆ ಬಂದು ನೆಲೆಸುತ್ತಾರೆ. ಅಂದಿನಿಂದ ಇಂದಿನವರೆಗೂ ಅವರು ತಮ್ಮನ್ನು ಓಬವ್ವನ ವಂಶಸ್ಥರೆಂದೇ ಗುರುತಿಸಿಕೊಂಡು ಬಂದಿದ್ದಾರೆ. ತಮ್ಮ ಮನೆಯ ಮುಂಭಾಗ ಓಬವ್ವನ ವಂಶಸ್ಥರು ಎಂಬ ನಾಮಫಲಕವನ್ನು ಹಾಕಿಕೊಂಡಿದ್ದಾರೆ.

ಹೀಗೆ ರಾಜ ಮಹಾರಾಜರ ಬದುಕುಗಳೇ ಚರಿತ್ರೆ ಎನಿಸಿದ ಕಾಲದಲ್ಲಿ ಊಳಿಗದವನ ಹೆಂಡತಿಯಾಗಿದ್ದ ಓಬವ್ವ ಒನಕೆ ಓಬವ್ವ ಎಂದೇ ತನ್ನ ಛಾಪನ್ನು ದುರ್ಗದ ಇತಿಹಾಸದಲ್ಲಿ ಮೂಡಿಸಿದಳು. ಪುರುಷ ಪ್ರಧಾನ ಸಂಸ್ಕೃತಿ ರೂಪಿಸಿದ 'ಆದರ್ಶ ಗೃಹಿಣಿ' ಪರಿಕಲ್ಪನೆಯಲ್ಲಿ ಓಬವ್ವ ಪತಿಗೆ ಊಟ ನೀಡಿ ಕುಡಿಯುವ ನೀರು ತಂದು ಗೃಹಕೃತ್ಯ ಮಾಡುವ ಸಂದರ್ಭದಲ್ಲಿ ನಾಡು ಕಾಯುವ ಕಾಯಕವನ್ನು ಎಸಗಿದ್ದಾಳೆ. ತಾನು ಸ್ತ್ರೀ ಎನ್ನುವ ಪರಿಕಲ್ಪನೆ ಆಗ ಆಕೆಗೆ ಬಂದಿರಲಿಕ್ಕಿಲ್ಲ. ಪುರುಷ ಪ್ರಭುತ್ವಕ್ಕಿದು ಸವಾಲಾಗಿರುವ ಸಂಗತಿಯೂ ಹೌದು.

ಉಪಸಂಸ್ಕೃತಿಯಲ್ಲಿ 'ಶ್ರಮ' ಪ್ರಧಾನವಾಗಿರುತ್ತದೆ. ಎಲ್ಲಿ ದೈಹಿಕ ಶ್ರಮ ಪ್ರಧಾನವಾಗಿರುತ್ತದೆಯೋ ಅಲ್ಲಿ ಸಮಾನತೆಯ ಅಂಶಗಳು ಅಧಿಕವಾಗಿರುತ್ತವೆ. ದೈಹಿಕ ಶ್ರಮವಿಲ್ಲದ ಬೌದ್ಧಿಕ ಶ್ರಮ ಅಧಿಕವಾಗಿರುವೆಡೆ ಲಿಂಗಭೇದ ಕಾಣುತ್ತದೆ. ಯಾವುದನ್ನು ಸುಸಂಸ್ಕೃತ ಸಮಾಜ ಎಂದುಕೊಂಡಿದ್ದೇವೆಯೋ ಅಲ್ಲಿ ಹೆಣ್ಣು ಗುಲಾಮಳು ಎಂಬ ಭಾವನೆ ತೋರುತ್ತದೆ. ಇಲ್ಲಿ ಓಬವ್ವ ದೈಹಿಕ ಶ್ರಮ ತೋರಿದ ಸಮಾಜದಲ್ಲಿದ್ದವಳು. ಅಲ್ಲಿ ಸಮಾನತೆಯಿತ್ತು ಎಂಬ ಅಂಶವೂ ಸಾಬೀತಾಗಿದೆ. ಅವಳ ಮೂಲಕ ಆ ಸಮದಾಯದವರು ತಮ್ಮನ್ನ ಕಹಳೆಯವರು ಎಂದು ಗುರ್ತಿಸಿಕೊಳ್ಳುವುದಕ್ಕೆ ಕಾರಣವಾಗಿದೆ. ಓಬವ್ವನಿಗೂ, ಕರುನಾಡ ಜನತೆಗೂ ಅವಿನಾಭಾವ ಸಂಬಂಧ ಬೆಳೆದಿದ್ದು, ಚಾರಿತ್ರಿಕ ಪ್ರಜ್ಞೆ ಹರಡಿದೆ. ನಮ್ಮ ವಿದ್ವಾಂಸರು ಆಕೆಯ ಬಗೆಗೆ ತಮ್ಮದೇ ಆದ ವಿಚಾರಧಾರೆಯನ್ನು ವ್ಯಕ್ತಪಡಿಸಿದ್ದಾರೆ. ಆಕೆಯನ್ನು ದಾಖಲಿಸಿದ್ದಾರೆ. ಒಂದು ಸಾಂಸ್ಕೃತಿಕ ಚೌಕಟ್ಟಿಗೆ ಬರಲು ಎಲ್ಲಾ ಅರ್ಹತೆಗಳನ್ನು, ಅಧಿಕಾರವನ್ನು ಹೊಂದಿದ ಓಬವ್ವನನ್ನು ಜನ ತಮ್ಮ ಮನದಲ್ಲಿ ಇಟ್ಟುಕೊಂಡು ಅವಳ ಹೆಸರನ್ನು ಸಾಹಸಗಾಥೆಯನ್ನು ಉಳಿಸಿ ಮುಂದಿನ ಪೀಳಿಗೆಗೆ ಸಾಗಿಸುತ್ತಿರುವರು. ಓಬವ್ವನ ಧೈರ್ಯ, ಸಾಹಸ, ತ್ಯಾಗ ಮನೋಭಾವ, ದೇಶಾಭಿಮಾನ ಸ್ತುತ್ಯರ್ಹ. ಈ ಶೌರ್ಯ ಪರಾಕ್ರಮ ಎಂಬುದು ಯಾರೊಬ್ಬರಿಗೂ ಸೀಮಿತವಾದುದಲ್ಲ. ಅದು ಒಂದು ಸಾಮಾಜಿಕ ಮೌಲ್ಯ, ಎಲ್ಲರೂ ಬೆಳೆಸಿಕೊಳ್ಳುವಂಥದ್ದು. ಪಾಳೇಗಾರರ ಆಸ್ಥಾನಗಳಲ್ಲಿ

ಅಂತರಂಗ ಸೇವಕರಂತಿದ್ದವರ ಪೀಳಿಗೆಯವರು ತಮ್ಮನ್ನು ರಾಜಪರಿವಾರದವರೆಂದು ಅಂದರೆ ತಾವು ಪರಿಚಾರಕರಾಗಿದ್ದರೂ ಅವರ ಪರಿವಾರದವರೆಂದು ಗುರುತಿಸಿಕೊಳ್ಳುತ್ತಾರೆ. ಇಲ್ಲಿ ಸ್ವಾಮಿನಿಷ್ಠೆಯನ್ನು ತೋರಿದ ಓಬವ್ವನ ವಂಶದವರೆಂದು ಗುರುತಿಸಿಕೊಂಡವರು ತಮ್ಮನ್ನು ರಾಜ ಪರಿವಾರದವರೆಂದು ತೋರಿಸಿಕೊಂಡಿಲ್ಲಾ. ನಾಯಕರ ಆಪ್ತ ಸಮುದಾಯದವರು, ಬಲಗೈ ಸಮುದಾಯದವರಾಗಿದ್ದಾರೆ. ಚಿತ್ರದುರ್ಗದ ಕೋಟೆ, ಮದಕರಿನಾಯಕ, ಮರುಘಾಮಠಗಳಷ್ಟೆ ಮಹತ್ವವನ್ನು ದುರ್ಗದ ಇತಿಹಾಸದಲ್ಲಿ ಓಬವ್ವ ಪಡೆದಿದ್ದಾಳೆ. ಜನಪದರ ಬಾಯಲ್ಲಿ ನೆಲೆಯೂರಿದ್ದಾಳೆ. ಓಬವ್ವನ ಚರಿತ್ರೆಯ ಮೂಲವರಿಯಲು ಯಥೇಚ್ಚವಾಗಿ ಸಾಹಿತ್ಯದ ಆಧಾರಗಳು ಲಭ್ಯವಿಲ್ಲದಿದ್ದರೂ ಲಭ್ಯವಾದ ಹಲವಾರು ಕೃತಿಗಳಿಂದಲೇ ಸಂಗ್ರಹಿಸಲಾಗಿದೆ. ಜನಪದ ಸಾಹಿತ್ಯದಲ್ಲಿ ಅವಿದ್ಯಾವಂತರು, ಅನುಭವಸ್ಥರು ಕಟ್ಟುವ ಕಥೆಯಲ್ಲಿ ಗಟ್ಟಿತನದ ಸತ್ಯಗಳನ್ನು ತಿಳಿದುಕೊಳ್ಳಬಹುದು.

ಮೌಖಿಕ ಪರಂಪರೆಯಲ್ಲಿ ಉಳಿದು ಬಂದ ಜನಪದ ಸಂಸ್ಕೃತಿಯ ಕುರುಹುಗಳಲ್ಲಿ ಜನಪದ ಸಾಹಿತ್ಯವೂ ಒಂದಾಗಿದೆ. ಈ ಜನಪದ ಸಾಹಿತ್ಯದಲ್ಲಿ ಐತಿಹ್ಯವು ಒಂದು ಪ್ರಕಾರ. ಐತಿಹ್ಯವು ಮೌಖಿಕ ಪರಂಪರೆಯ ಜನಪದರ ಇತಿಹಾಸ. ಜನಪದವೆಂದಾಕ್ಷಣ ಜನಪದರು ರಚಿಸಿದ ಇತಿಹಾಸ, ಜನಪದರ ಬಗೆಗಿನ ಇತಿಹಾಸ ಇತ್ಯಾದಿ ಅರ್ಥಗಳು ತಲೆದೋರುತ್ತವೆ. ಐತಿಹ್ಯಗಳನ್ನು ಆಧರಿಸಿ ಮೌಖಿಕತೆ ಜನಜನಿತವಾಗಿ ಐತಿಹಾಸಿಕ ಪ್ರಜ್ಞೆಯನ್ನು ಸಾರುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಓಬವ್ವನ ಕಿಂಡಿಯು ಇಂದು ಅದೇ ಕಾರ್ಯವನ್ನು ನಿರ್ವಹಿಸುತ್ತದೆ. ನಾಯಕವಂಶ, ಹೈದರಾಲಿ ಆಕ್ರಮಣ, ಓಬವ್ವನ ಸ್ವಾಮಿನಿಷ್ಠೆ, ಸಮಯಸ್ಪೂರ್ತಿ ದಿಟ್ಟತನವನ್ನು ಪ್ರತಿನಿಧಿಸುತ್ತಿದೆ.. ಕರುನಾಡಿನ ಹೆಂಗೆಳೆಯರ ಧೈರ್ಯವನ್ನು ನೆನಪಿಸುತ್ತಿದೆ. ಹಲವು ರಾಜವಂಶಗಳು, ಕೋಟೆ, ಮಠಗಳು ಮತ್ತು ಕುರುಹುಗಳು ಉಪೇಕ್ಷೆಗೆ ಗುರಿಯಾಗಿವೆ. ಇವನ್ನು ಅಕ್ಷರಗಳಲ್ಲಿ ಹಿಡಿದಿಡುವುದು ತುಂಬಾ ಅವಶ್ಯಕ. ಕೆಲವೊಮ್ಮೆ ಇತಿಹಾಸದ ರಚನೆಯಲ್ಲಿ ಲಿಖಿತ ಆಕರಗಳು, ಮೌನವಾಗಿದ್ದಾಗ ಮೌಖಿಕ ಆಕರಗಳು ಬಹಳ ಮಹತ್ವವನ್ನು ಪಡೆದುಕೊಳ್ಳುತ್ತವೆ. ಮೌಖಿಕ ಇತಿಹಾಸವು ಮನುಷ್ಯನ ಜೀವನದ ನಾನಾ ಮುಖಗಳನ್ನು ಪರಿಚಯಿಸುತ್ತದೆ. ಐತಿಹ್ಯವು ನಿರೂಪಿಸುವ ಘಟನೆ ನೈಜತೆಗೆ ಹತ್ತಿರುವಾಗಿರುತ್ತದೆ. ಓಬವ್ವನ ಕಿಂಡಿಯು ಜನರಿಗೆ ನಾಯಕನ ಆಳ್ವಿಕೆಯಲ್ಲಿ ಆಕ್ರಮಣ ಮಾಡಿದ ಹೈದರಾಲಿಯ ಕಪಟತನ, ಓಬವ್ವನ ದುಸ್ಸಾಹಸವನ್ನು ಇಡಿಯಾಗಿ ಪ್ರವಾಸಿ ಮುಂದಿಡುತ್ತದೆ. ಪ್ರತಿಯೊಬ್ಬ ಪ್ರವಾಸಿಗನೂ ಕೋಟೆಯನ್ನಷ್ಟೇ ವೀಕ್ಷಿಸಿ ತೃಪ್ತಿಯಾಗದೆ ಓಬವ್ವನ ಕಿಂಡಿಯ ಬಳಿ ಬಂದು ಆಕೆಯ ಸಾಹಸಗಾಥೆಯನ್ನು ಪ್ರಾತ್ಯಕ್ಷಿಕವಾಗಿ ತಾವೂ ಅಭಿನಯಿಸಿ ಮನರಂಜನೆಯ ಜೊತೆಗೆ ಇತಿಹಾಸವನ್ನು ಮರುನೆನಪಿಸುವ ಪ್ರಯತ್ನವನ್ನೂ ಮಾಡುತ್ತಾರೆ. ಆಕೆಯ ಸಾಹಸವನ್ನು ಮನಸಾರೆ ನೆನೆಯುತ್ತಾರೆ ನೆನಪಿಸುತ್ತಾರೆ.

"ಕ್ರಿಸ್ತ ಪೂರ್ವ ೨೫೦೦ರಿಂದ ಕ್ರಿ.ಪೂ. ೧೫೦೦ರವರೆಗೆ ಬಾಳಿದ ಸಿಂಧೂ ಸಂಸ್ಕೃತಿಯಲ್ಲಿನ ಸ್ತ್ರೀ ಸೌಂದರ್ಯಾರಾಧಕಳಾಗಿದ್ದಳಲ್ಲದೆ ಬಲಶಾಲಿಯಾಗಿ ಅಗತ್ಯ ಬಿದ್ದರೆ ವೀರಯೋಧನ ಕೆಲಸವನ್ನೂ

ಸಮರ್ಥವಾಗಿ ನಿರ್ವಹಿಸುತ್ತಿದ್ದಳು"[೧೨] ಎಂದಿದ್ದಾರೆ. ಲಭ್ಯ ಮಾಹಿತಿಗಳ ಆಧಾರದ ಮೇಲೆ ಮುಂದೆ ದ್ರಾವಿಡ ಸಂಸ್ಕೃತಿಯೆಂದೇ ಹೆಸರಾದ ಸಿಂಧೂ ಸಂಸ್ಕೃತಿಯಲ್ಲಿ ಮಾತೃಪ್ರಧಾನ ವ್ಯವಸ್ಥೆ ರೂಢಿಯಲ್ಲಿದ್ದುದನ್ನು ಮಾನವಶಾಸ್ತ್ರಜ್ಞರು ಅಭಿಪ್ರಾಯಿಸಿದ್ದಾರೆ. ಆದರೆ ಆಕ್ರಮಣಶೀಲ ಆರ್ಯರ ಆಗಮನವೇ ಸಿಂಧೂ ಸಂಸ್ಕೃತಿಯನ್ನು ನಾಶಪಡಿಸಿತು ಎಂಬುದೇ ಪ್ರಧಾನ ಅಂಶ. ದರ್ಪಿಷ್ಠರೂ, ಕ್ರೂರಿಗಳು, ಆಕ್ರಮಣಶೀಲರೂ ಆದ ಆರ್ಯರ ಸಮಾಜದಲ್ಲಿ ಮಹಿಳೆಗೆ ಸಾಮಾಜಿಕ ನ್ಯಾಯ ದೊರಕಿಲ್ಲ ಎಂಬುದನ್ನು ಮನಗಾಣಬಹುದು.

ನಂತರ ಋಗ್ವೇದದಲ್ಲಿ ಸ್ಥಾನ ಪಡೆದ ಮಹಿಳೆ ಮಹಾಭಾರತದ ಕಾಲದವರೆಗೂ ಗೌರವಸ್ಥಾನ ಪಡೆದಿದ್ದಳು. ವೇದೋಪನಿಷತ್ತುಗಳ ಕಾಲದಲ್ಲಿ ಹೆಣ್ಣಿಗಿದ್ದ ಸ್ವಾತಂತ್ರ್ಯ ಇತಿಹಾಸಗಳ ಕಾಲಕ್ಕೆ ಸೀಮಿತಿಗೊಂಡಿತು. ಕಾರಣ ಸಾಮಾಜಿಕ ಸಂದರ್ಭಗಳು, ಧರ್ಮಶಾಸ್ತ್ರಗಳ ಪ್ರಭಾವ. ಕ್ರಿ.ಪೂ. ೨೦೦ರಿಂದ ಕ್ರಿ.ಶ. ೫೦೦ರವರೆಗಿನ ಸಾಮಾಜಿಕ, ಧಾರ್ಮಿಕ ಸ್ಥಿತ್ಯಂತರಗಳಿಂದಾಗಿ ಮಹಿಳೆಯರ ಸ್ಥಾನಮಾನದಲ್ಲಿಯೂ ಮಹತ್ತರ ಬದಲಾವಣೆಗಳಾದವು. ಎಲ್ಲಾ ಬಗೆಯ ನಿಷೇದಗಳನ್ನು ಹೇರಲಾಯಿತು. ಪುರೋಹಿತಶಾಹಿ ಪ್ರಾಬಲ್ಯ ಹೆಚ್ಚಾಗಿ ಆಚಾರ್ಯ ನಾಯಕರು ಸಮಾಜದ ನಿಯಂತ್ರಕರಾದರು. ಇದರಿಂದ ಮಹಿಳೆಯು ಕಗತ್ತಲಿನಲ್ಲಿ ತೊಳಲಾಡುವಂತಾಯಿತು. ಇದು ಕ್ರಿ.ಶ. ೧೨೦೦ರವರೆಗೆ ಮುಂದುವರೆಯಿತು.

ಪಿತಾರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯವ್ವನೇ
ರಕ್ಷಂತಿ ಸ್ಥವಿರೇ ಪುತ್ರಾನ್‌ನಸ್ತ್ರೀ ಸ್ವಾತಂತ್ರ್ಯಮರ್ಹತೆ(೯.೨. ಮನುಸ್ಮೃತಿ)

ಚಿಕ್ಕವಯಸ್ಸಿನಲ್ಲಿ ತಂದೆಯೂ, ಯೌವನದಲ್ಲಿ ಗಂಡಸು, ಮುಪ್ಪಿನಲ್ಲಿ ಮಗನು ಹೆಣ್ಣನ್ನು ಸಂರಕ್ಷಿಸಬೇಕು. ಯಾವಾಗಲೂ ಗಂಡಸರ ಬಿಗಿ ಕಾವಲಿನಲ್ಲಿರಬೇಕು. ಹೆಣ್ಣು ತನ್ನ ಜೀವಮಾನದುದ್ದಕ್ಕೂ ಪರಾಧೀನತೆಯಲ್ಲಿರುವಂತೆ ಕಾನೂನು ಮಾಡಿದ 'ಮಹಾನುಭಾವ ಮನು' ಹೆಣ್ಣು ನಾಡಿನ ಖಾಸಗಿ ವಸ್ತುವಾಗಿ ಬದುಕುವಂಥಹ ಸ್ಥಿತಿ ಏರ್ಪಡಿಸಿದೆ. ಇನ್ನು ಮನುಷ್ಯ ಚರಿತ್ರೆಯ ಇತಿಹಾಸದ ಉದ್ದಕ್ಕೂ ಮೌಢ್ಯಗಳ ಪೊರೆಯನ್ನು ಕಳಚಲು ಹೊರಟ ಹೆಣ್ಣಿಗೆ ಬಂಧನ ವಿಧಿಸಿ ಅವಿಚಾರದ ಕೂಪಕ್ಕೆ ತಳ್ಳುವ ಪುರುಷನ ದಬ್ಬಾಳಿಕೆಯ ಸಾಕ್ಷಿಗಳನ್ನು ನಾವು ಕಾಣುತ್ತಾ ಬಂದಿದ್ದೇವೆ. ಒಂದು ಹೆಣ್ಣು ತನ್ನ ಮನಸ್ಸಾಕ್ಷಿಗೆ ಅನುಗುಣವಾಗಿ ನಡೆಯಲು ಆಗದಂತೆ ಮತ್ತು ತನ್ನ ಒಳದನಿಗಳಿಗೆ ಸರಿಯಾಗಿ ನಡೆಯಲು ಸಾಧ್ಯವಾಗದಂತೆ ನಮ್ಮ ಸಮಾಜವು ಹೆಣ್ಣಿನ ಮೇಲೆ ಪ್ರತಿಬಂಧಗಳನ್ನು ಹೇರುತ್ತಲೇ ಬಂದಿದೆ. ಮಧ್ಯಕಾಲೀನ ಯುಗವಂತೂ ಮಹಿಳೆಯ ಪಾಲಿಗೆ ಕತ್ತಲಿನ ಯುಗವಾಗಿ ಪರಿಣಮಿಸಿತು. ಕಾರಣ ವಿದೇಶಿ ಆಕ್ರಮಣಗಳು, ಪರಕೀಯರ ದಾಳಿ, ಮಧ್ಯ ಅಭದ್ರತೆಯ ಕಾಡುವಿಕೆ ಇವು ಅವಳನ್ನು ಮತ್ತಷ್ಟು ಕಗ್ಗತ್ತಲಿಗೆ ತಳ್ಳಿತು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೨೦ನೇ ಶತಮಾನದ ಎಂಟರ ದಶಕದಿಂದೀಚೆಗೆ ಇತಿಹಾಸದುದ್ದಕ್ಕೂ ಹೊಸಕಿ ಹಾಕಿದ ಮಹಿಳಾ ಸಂವೇದನೆ ಗಟ್ಟಿದನಿ ಪಡೆದುಕೊಳ್ಳುತ್ತಾ ಬಂದಿರುವುದನ್ನು ಗುರುತಿಸಬಹುದು. ಮೌಖಿಕ ಪರಂಪರೆಯಲ್ಲಿ

ಕಂಡು ಬರುವ ಹೆಣ್ಣು ಕಾಯಕನಿಷ್ಠಳು. ದುಡಿಮೆಯೇ ದೇವರೆಂದು ನಂಬಿದವಳು. ಜನಪದ ಸಾಹಿತ್ಯ, ಸಂಸ್ಕೃತಿ, ಕಲೆ, ನಂಬಿಕೆ, ಆಚರಣೆಗಳಲ್ಲಿ ಸ್ತ್ರೀ ಪ್ರಾಧಾನ್ಯತೆ ಎದ್ದು ಕಾಣುತ್ತದೆ. ಹಾಗೆಯೇ ಸ್ತ್ರೀ ಸಂವೇದನಾ ದೃಷ್ಟಿಕೋನದಲ್ಲಿ ಓಬವ್ವ ಪ್ರಧಾನ ಕಾಯಕ ನಿಷ್ಠಳಾಗಿ ಕಾಣುತ್ತಾಳೆ.

ದೊಡ್ಡ ದೊಡ್ಡ ರಾಜ್ಯಗಳ ಆಳ್ವಿಕೆ, ಚರಿತ್ರೆ ಅವುಗಳನ್ನಾಳಿದ ರಾಜವಂಶ, ಅವರ ವೈಭವ, ಸಾಮಂತ ರಾಜರು, ಇವುಗಳನ್ನೇ ನಮ್ಮ ಚರಿತ್ರೆಯೆಂದು ಕೊಂಡಾಡಿಕೊಂಡಿರುವುದನ್ನೇ ಚರಿತ್ರೆಯೆಂದುಕೊಂಡಿರುವುದನ್ನು ನಾವು ಗಮನಿಸಬಹುದು. ಆ ಆರ್ಭಟದಲ್ಲಿ ಸ್ಥಳೀಯ ಸಂಸ್ಕೃತಿ ಚರಿತ್ರೆಯ ಆಯಾಮಗಳು ಮಾಯವಾಗಿರುವುದನ್ನು ನಾವು ಗಮನಿಸಬಹುದು. ನಮ್ಮಲ್ಲಿ ಒಪ್ಪಿತವಾದ ಚರಿತ್ರೆಯು ಸಾಮ್ರಾಜ್ಯಗಳ ಚಕ್ರವರ್ತಿಗಳ ಮತ್ತು ಪ್ರಭಾವಿ ಸಮುದಾಯಗಳ ಚರಿತ್ರೆಯ ಬರವಣಿಗೆಗೆ ಆದ್ಯತೆಯನ್ನು ನೀಡುತ್ತಿದೆ. ಇದರ ಪರಿಣಾಮ ಕೆಳವರ್ಗದವರ ಹಾಗೂ ಸ್ಥಳೀಯ ಚರಿತ್ರೆಗಳು ಮೂಲೆಗುಂಪಾಗುತ್ತಿವೆ. ಒಮ್ಮೊಮ್ಮೆ ರಾಜಪ್ರಭುತ್ವಕ್ಕೆ, ರಾಜನಿಗೆ, ರಾಜ್ಯಕ್ಕೆ ತೊಂದರೆಯಾದಾಗಿದಾಗ ಅದನ್ನು ನಿವಾರಿಸಲು ಕೆಲವರು ಮಾಡಿದ ಸೇವೆ, ತ್ಯಾಗ, ಬಲಿದಾನಗಳನ್ನು ಮಾಡಿದ ಸಣ್ಣಪುಟ್ಟ ಘಟನೆಗಳು ಮಹತ್ವವಾಗಿದ್ದರೂ ಕಾಲಗರ್ಭದಲ್ಲಿ ಅಡಗಿ ಹೋಗಿವೆ. ಅವುಗಳಿಗೆ ನಿರೀಕ್ಷಿತ ಮಟ್ಟದಲ್ಲಿ ದಾಖಲೆಗಳಿಲ್ಲದಿರುವುದೇ ಆ ಘಟನೆಗಳು ಚರಿತ್ರೆಯ, ವಿದ್ವಾಂಸರ ದೃಷ್ಟಿಯಲ್ಲಿ ಮಸುಕಾಗಿರುವುದಕ್ಕೆ ಕಾರಣವಾಗಿದೆ. ಹಾಗಾಗಿ ಸಾಂಸ್ಕೃತಿಕ, ಜಾನಪದಿಕ ಅಂಶಗಳನ್ನು ಸಂಶೋಧಿಸುವಾಗ ಮೌಖಿಕ ಆಕರಗಳು ಪ್ರಭಾವಿಯಾಗಿ ಪಾತ್ರವಹಿಸುತ್ತವೆ. ಆಗ ಅವುಗಳನ್ನು ಸಮರ್ಥವಾಗಿ ಬಳಸಿಕೊಂಡು ಅಧ್ಯಯನ ಮಾಡಬೇಕಾಗುತ್ತದೆ. ಸ್ಥಳೀಯ ಚರಿತ್ರೆಯನ್ನು ಉಳಿಸಬಹುದು.

ಚಿತ್ರದುರ್ಗ ಸಂಸ್ಥಾನವು ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯನ್ನು ಹೊಂದಿದ್ದು ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಕಲಚೂರಿಗಳು, ನಾಯಕ ವಂಶದವರು ಆಳ್ವಿಕೆ ಮಾಡಿದ ಪ್ರದೇಶವಿದು. ಇಲ್ಲಿ ಅನೇಕ ಶಾಸನಗಳು, ಮಠ ಮಾನ್ಯಗಳ ದೇವಾಲಯಗಳ ಜೊತೆಗೆ ಸಂಸ್ಥಾನಕ್ಕೆ ಸಂಬಂಧಪಟ್ಟವರ ಬಗ್ಗೆ, ಕೋಟೆಯ ಬಗೆಗಿನ ಮೌಖಿಕ ಆಕರಗಳು ಮತ್ತು ಐತಿಹ್ಯಗಳು ಕಂಡುಬರುತ್ತವೆ. ಇಂದು ಸಂಸ್ಕೃತಿ ಅಧ್ಯಯನಕ್ಕೆ ಮೌಖಿಕ ಚರಿತ್ರೆಯ ಆಕರ ಅಗತ್ಯವೆನಿಸಿದೆ. ಒಂದು ನಾಡಿನ ಜೀವಂತ ಸಂಸ್ಕೃತಿಯನ್ನು ಮೈವೆತ್ತಿ ನಿಲ್ಲಿಸಿರುವುದು ಆ ನಾಡಿನ ಜಾನಪದ ಅಂಶಗಳು. ಜನರ ಮೂಲಕ ಅಲ್ಲಿಯ ಸಂಸ್ಕೃತಿಯ ವಿಚಾರಗಳು ಹರಿಯಬರುತ್ತವೆ. ಇವನ್ನು ಅಭ್ಯಸಿಸಬೇಕಾದರೆ ಜನರ ನಾಡು, ನುಡಿ, ಸಾಹಿತ್ಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಅತ್ಯವಶ್ಯಕ. ಪ್ರಾಚೀನ ನಂಬಿಕೆಗಳು, ಆಚರಣೆ, ಪದ್ಧತಿಗಳು ಜಾನಪದದಲ್ಲಿ ಹಾಸುಹೊಕ್ಕಾಗಿವೆ. ಗತಕಾಲದ ಆಗುಹೋಗುಗಳನ್ನು ತನ್ನ ಅಂತರಂಗದಲ್ಲಿ ಅಚ್ಚಳಿಯದಂತೆ ಗರ್ಭೀಕರಿಸಿಕೊಂಡು ಅದನ್ನು ಇಂದಿಗೂ ದಾಖಲು ಮಾಡುವುದು ಜಾನಪದದ ಮಹತ್ವವಾಗಿದೆ. ಒಂದು ದೇಶದ ನಾಡಿನ ಚಾರಿತ್ರಿಕ ರಚನೆಯಲ್ಲಿ ಲಿಖಿತ ಸಾಮಗ್ರಿಗಳಾದ

ಶಾಸನ, ಸಾಹಿತ್ಯ, ವೀರಗಲ್ಲು, ಮಾಸ್ತಿಕಲ್ಲು, ನಾಣ್ಯಗಳು ಮುಂತಾದವು ಪ್ರಮುಖ ಪಾತ್ರ ವಹಿಸಿದಂತೆ ಅಲಿಖಿತ ಸಾಮಗ್ರಿಯಾದ ಜಾನಪದದಲ್ಲಿ ಮೌಖಿಕ ಪರಂಪರೆಯು ಕೂಡ ಮಹತ್ವದ್ದಾಗಿರುತ್ತದೆ.

ಚಾರಿತ್ರಿಕ ರಚನೆಗೆ ಮೌಖಿಕ ಆಕರಗಳು ಮಹತ್ವ ಪಾತ್ರವಹಿಸುತ್ತವೆ ಎಂಬುದನ್ನು ದೇಶಾದ್ಯಂತ ಹೆಸರಾಗಿರುವ ಓಬವ್ವನ ಬಗೆಗೆ ಮೌಖಿಕ ಆಕರಗಳು ನೀಡುತ್ತಿರುವ ಮಾಹಿತಿಯಿಂದ ತಿಳಿದು ಬರುತ್ತದೆ. ಅಂದಿನ ಜನಜೀವನದ ಚರಿತ್ರೆಯನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳಬಹುದಾಗಿದೆ. ಅಂದಿನ ಜೀವನಕ್ಕಿದ್ದ ಮಾನ್ಯತೆಗಳೆಂದರೆ ತ್ಯಾಗ ಬಲಿದಾನ, ಸಹನೆಗಳೆಂದು ತಿಳಿದುಬರುತ್ತದೆ. ಸಹಗಮನದಿಂದ ಹಿಡಿದು ಸವತಿಯರನ್ನು ಮನಃಪೂರ್ವಕವಾಗಿ ಬರಮಾಡಿಕೊಳ್ಳಬೇಕಾದಂತಹ ಪ್ರಭುತ್ವದ ಆಸುಪಾಸಿನಲ್ಲಿ ಓರ್ವ ಕಹಳೆಯವನ ಹೆಂಡತಿ ಮಾಡಿದ ಸಾಹಸವನ್ನು ಮೌಖಿಕ ಆಕರಗಳು ಮೌನದಿಂದ ವಿವರಿಸುತ್ತವೆ. ಚಿತ್ರದುರ್ಗದ ಇತಿಹಾಸದಲ್ಲಿ ಗಟ್ಟಿಸ್ಥಾನ ಪಡೆದವಳನ್ನು ಚಿಕ್ಕ ಮಕ್ಕಳಿಗೂ ಸುಲಭವಾಗಿ ಪರಿಚಯಿಸುತ್ತವೆ. ಚರಿತ್ರೆಯ ಬೆಳವಣಿಗೆಯಲ್ಲಿ ಅಜ್ಞಾತ ಮಾನವನ ಚಟುವಟಿಕೆಗಳ ಕಾಲಾವಧಿ ಲಕ್ಷಾಂತರ ವರ್ಷಗಳಾಗಿದ್ದರೆ ಇತಿಹಾಸದ ಹಿಡಿತಕ್ಕೆ ಸಿಕ್ಕಿರುವ ಮಾನವನ ಕಾಲಾವಧಿ ಸಾವಿರಾರು ವರ್ಷಗಳು ಮಾತ್ರ. ಇದನ್ನೇ ಅಭ್ಯಸಿಸ ಹೊರಟ ನಮ್ಮ ಮುಂದೆ ಒಂದು ಪ್ರಶ್ನೆ ಉದ್ಭವಿಸುತ್ತದೆ. ಚರಿತ್ರೆ ಎಂದರೆ ಏನು? ಯಾವುದು ಚರಿತ್ರೆ ಅಲ್ಲಾ? ಕಣಿ ಬರಹಗಳನ್ನು ಬಿಟ್ಟರೆ ಮಿಕ್ಕ ಎಲ್ಲಾ ನುಡಿ ರಚನೆಗಳೂ ಚರಿತ್ರೆಗಳೆ ಅಲ್ಲವೇ. ಪದ್ಯವಾಗಿ ಜನಿಸಿದ ಎಲ್ಲಾ ನುಡಿ ರಚನೆಗಳೂ ಸಾಮಾಜಿಕ ವಾಸ್ತವವನ್ನು ಸಾಹಿತ್ಯಕ ವಸ್ತುವಾಗಿ ಅರ್ಥಾತ್ ಚರಿತ್ರೆಯಾಗಿ ಕಟ್ಟಿದ ರಚನೆಗಳೇ ಅಲ್ಲವೇ. ಹಾಗೆ ನೋಡಿದರೆ ಕಾವ್ಯ ಎಂದರೆ ಚರಿತ್ರೆಯೆ. ಆ ಚರಿತ್ರೆಯನ್ನು ಕೆಲವರು ಕಟ್ಟುಕತೆ ಎನ್ನಬಹುದು. ಕಲ್ಪನಾ ವಿಲಾಸ ಎನ್ನಬಹುದು. ಆದರೆ ಒಂದು ಮಾತ್ರ ನಿಜ. ಆಂಗ್ಲಶಿಕ್ಷಣ ಪ್ರಣೀತ ಎಂಪರಿಸಿಸ್ಟ್ ಆದ ಪುರಾವೆ ಆಧಾರಿತ ಶಿಸ್ತು ಮಾತ್ರ ಚರಿತ್ರೆ ಎಂಬ ನಂಬಿಕೆ ಇಂದು ಇಲ್ಲವಾಗಿದೆ. ಬ್ರಿಟೀಷರಿಗೂ ಮುನ್ನ ನಮ್ಮಲ್ಲಿ ಚರಿತ್ರೆ ಇರಲಿಲ್ಲವೆ. ಇತ್ತು. ಪುರಾಣಗಳ ಚರಿತ್ರೆಯೇ ನಮ್ಮ ಚರಿತ್ರೆ. ಹಾಗಾಗಿ ನಮ್ಮ ಚರಿತ್ರೆ ಇದ್ದದ್ದೆ. ಲಿಪಿಕ ಮತ್ತು ಮೌಖಿಕ ಎರಡೂ ಬಗೆಯದ್ದು. ಹೀಗೆ ಚಾರಿತ್ರಿಕತೆಗೂ ಹಾಗೂ ಮೌಖಿಕತೆಗೂ ನೇರ ಸಂಬಂಧ. ಅಂದರೆ ಚರಿತ್ರೆಯಲ್ಲಿ ಮೌಖಿಕತೆಗೂ ಸ್ಥಾನ. ಮೌಖಿಕವಾಗಿ ಚರಿತ್ರೆಯನ್ನೇ ಕಟ್ಟಬಹುದು.

ಚಿತ್ರದುರ್ಗದ ಕೋಟೆಯಂದರೆ ಹತ್ತೊಂಭತ್ತು ಮಹಾಬಾಗಿಲುಗಳು, ಮೂವತ್ತೆಂಟು ದಿಡ್ಡಿ ಬಾಗಿಲುಗಳು, ಮೂವತ್ತೈದು ಕೆಳಗಂಡಿಗಳು, ಎಂಟು ಗುಪ್ತದ್ವಾರಗಳು, ನಲವತ್ತರಿಂದ ಐವತ್ತು ಬುರುಜುಗಳಿದ್ದು, ಕೋಟೆಯ ಹೊರಭಾಗದ ಸುತ್ತಲೂ ಅಗಳು, ಕಂದಕಗಳಿದ್ದು, ಶತ್ರುಗಳು ಒಳನುಸುಳಲು ಸಾಧ್ಯವೇ ಇಲ್ಲವಂತೆ, ಕಂದಕದ ತುಂಬಾ ವಿಷದ ಕತ್ತಿಗಳು, ಮೊಸಳೆಗಳನ್ನು ತುಂಬಿದ್ದು ಶತ್ರುಗಳ ಪಾಲಿಗೆ ಇದು ಲಂಕಾಪಟ್ಟಣವಾಗಿತ್ತು. ಇಂಥಹ ಈ ಪಾಟಿ ದೊಡ್ಡ

ಕೋಟೆಯ ಗಡಿ ಕಾವಲು ಕಾಯವವನು ತನ್ನ ಗಂಡ ಮದ್ದಹನುಮಪ್ಪನೇ ಎಂದು ತಿಳಿದ ಓಬವ್ವನಿಗೆ ಇಡೀ ದುರ್ಗದ ಭಾಗವೆಲ್ಲಾ ತನ್ನದೇ ಎನ್ನುವಂತೆ ಅಭಿಮಾನದಿಂದ ಆನಂದ ತುಂಬಿದ ಕಣ್ಣುಗಳಿಂದ ದುರ್ಗವನ್ನು ನೋಡಿದವಳು. ಬೆಟ್ಟದ ಎತ್ತರವಾದ ಕಹಳೆಯ ಬತೇರಿಯನ್ನು ಕಾಯುವ ಮದ್ದಹನುಮಪ್ಪನನ್ನು ವಿವಾಹವಾದ ಬಳಿಕ ದುರ್ಗದ ರಕ್ಷಣೆ ಕಾರ್ಯದ ಬಗ್ಗೆ, ಕಾವಲಿನ ಅಗತ್ಯತೆಯ ಬಗ್ಗೆ ಗಂಡ–ಹೆಂಡಿರಿಬ್ಬರು ಆಗಾಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಹಾಗಾಗಿ ಓಬವ್ವನಿಗೆ ಆಗಿನಿಂದಲೇ ದುರ್ಗದ ಬಗ್ಗೆ. ತನ್ನ ನಾಡಿನ ಜನತೆಯ ಬಗ್ಗೆ ಅಭಿಮಾನ ಬೆಳೆಸಿಕೊಂಡವಳಾಗಿದ್ದಳು.

ದುರ್ಗದ ನಾಯಕರ ಉಪ್ಪಿನ ಋಣವನ್ನು, ದುರ್ಗದ ಗಂಡು ಭೂಮಿಯ ಜಲವನ್ನು ಕುಡಿಯುತ್ತಿರುವ ನೆನಪು ಕಣ್ಮುಂದೆ ಮನದ ಮುಂದೆ ನುಸುಳಿದಾಗ ದುರ್ಗದ ಹೆಣ್ಣುಗಳು ಸಮಯ ಬಂದರೆ ದುರ್ಗದ ರಕ್ಷಣೆಗಾಗಿ ನೆಲಕ್ಕೆ ನೆತ್ತರು ಹರಿಸುವ ರಣದುರ್ಗಿಯರಾಗಬೇಕೆನ್ನುವ ವೀರನುಡಿಗಳನ್ನು ಸ್ತ್ರೀ ಪಡೆಯಲ್ಲಿ ಕೇಳುತ್ತಿದ್ದ ಓಬವ್ವ ತಾನೂ ಈಗ ರಣದುರ್ಗಿಯಾಗಿ ಶತ್ರುಗಳ ನೆತ್ತಿಯ ನೆತ್ತರನ್ನು ಈ ಗುಪ್ತದ್ವಾರದಲ್ಲಿ ನೀರಿನಂತೆ ಹರಸುತ್ತೇನೆ. ಮುಂದೊಂದು ದಿನ ಎನ್ನುವ ಮಾಹೆಯಿರದ ಓಬವ್ವ, ತನ್ನ ಕೈಂಕರ್ಯವನ್ನು ನಿರ್ವಹಿಸಿ ಮೌನವಾಗಿ ಮೌಖಿಕ ಆಕರಗಳ ಮೂಲಕ ತನ್ನ ಇರುವನ್ನು ಚಾರಿತ್ರಿಕವಾಗಿ ಸಾರುತ್ತಿದ್ದಾಳೆ. ಶಿಷ್ಟ ಸಾಹಿತ್ಯಕ್ಕಿಂತಲೂ ಜನಪದ ಸಾಹಿತ್ಯ ಪ್ರಾಚೀನವಾದುದು. ಅದರ ಭಾವ ಮತ್ತು ಭಾಷೆಯೂ ಅತ್ಯಂತ ಸರಳ. ಬದುಕಿನ ಅರಿವಿಗಾಗಿ ಅನಿವಾರ್ಯವಾಗಿ ಇತಿಹಾಸಕಾರನು ಜಾನಪದದ ಅಧ್ಯಯನಕ್ಕೆ ತೊಡಗಬೇಕಾಗುತ್ತದೆ. ಹೀಗಾಗಿ ಜಾನಪದ ಎಂಬುದು ಎಲ್ಲಾ ಕಾಲದಲ್ಲೂ ಇರುವಂಥದ್ದು. ಬದಲಾಗುತ್ತಿರುವ ಸಂದರ್ಭದಲ್ಲಿ ಆಯಾ ಕಾಲಮಾನದಲ್ಲಿ ಹೊಸ ರೂಪ ಅಂಶಗಳನ್ನು ಪಡೆಯುತ್ತಲೇ ಹೊಸ ಹೊಸ ಸ್ವರೂಪಗಳನ್ನು ಪಡೆಯುತ್ತಿರುತ್ತದೆ.

ಓಬವ್ವನ ಈ ಸಾಹಸವನ್ನು ಕಂಡ ವೀರಮದಕರಿ ತನ್ನ ದುರ್ಗದ ಓರ್ವ ಸಾಮಾನ್ಯ ಮಹಿಳೆ ದುರ್ಗದ ಕೋಟೆ ರಕ್ಷಿಸುವಲ್ಲಿ ತಾನು ಸ್ತ್ರೀ ಎಂಬುದನ್ನೇ ಮರೆತು ಅದ್ಭುತ ಸಾಹಸ ಮೆರೆದಿದ್ದಾಳೆಂದು, ಇಂಥಹ ಸ್ಫೂರ್ತಿ ಎಲ್ಲರಿಗೂ ಬರಲೆಂದು ಆಕೆಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಮೇಲುದುರ್ಗ, ಕೆಳದುರ್ಗದ ಓಣಿಓಣಿಗಳಲ್ಲಿ ಮೆರವಣಿಗೆ ಮಾಡಿಸಿ ದುರ್ಗದ ಬೆಟ್ಟ, ಕೋಟೆ ಇರುವವರೆಗೂ ಈಕೆಯ ಹೆಸರು ಮತ್ತು ಸಾಹಸ ದುರ್ಗದ ಇತಿಹಾಸದ ಪುಟಗಳಲ್ಲಿ ಒನಕೆ ಓಬವ್ವ ಎಂದು ಹೆಸರು ಶಾಶ್ವತವಾಗಿರಲೆಂದು ಶುಭ ಹಾರೈಸಿದವರು ಕೊನೆಯ ದೊರೆ ರಾಜವೀರ ಮದಕರಿನಾಯಕ. ಇದು ಪ್ರಭುಗಳ ಔದಾರ್ಯತೆಯನ್ನು ತೋರಿಸುತ್ತದೆ.

ಇಲ್ಲಿ ಓರ್ವ ಸಾಮಾನ್ಯ ಗೃಹಿಣಿ ಅನ್ಯಕಾರ್ಯನಿಮಿತ್ತ ಪರಸ್ಥಳಕ್ಕೆ ಹೋದಾಗ ಬರುವವರೆಗೂ ಮನೆ, ಮಕ್ಕಳು ಮತ್ತು ವ್ಯವಹಾರವನ್ನು ನಿಭಾಯಿಸುತ್ತಾಳೆ. ಅದು ನಿರ್ದಿಷ್ಟ ಸಮಯದವರೆಗೂ ಮಾತ್ರ. ಆದರೆ ಇಲ್ಲಿ ಓಬವ್ವ ಮಾಡಿದ ಕಾರ್ಯ ಇದಕ್ಕೆ ಸೀಮಿತವಾಗಿರದೆ ಜೀವ ಪಣಕ್ಕಿಟ್ಟು

ರಾಜ್ಯ ರಕ್ಷಣೆಗಾಗಿ ಏಕಾಂಗಿಯಾಗಿ ಶತ್ರುಪಡೆಯನ್ನು ಎದುರಿಸಿದ್ದು ತಾನೂ ಏನು ಮಾಡಬಲ್ಲೆ ಎಂಬುದನ್ನು ವಿವೇಚನೆಗೂ ತೆಗೆದುಕೊಳ್ಳದೇ ಕೋಟೆ ರಕ್ಷಣೆಯಲ್ಲಿ ತೊಡಗಿದ ಮಹಿಳೆ ಪತ್ನಿಯಾಗಿ ಪತ್ನಿ ಧರ್ಮವನ್ನು ನಿರ್ವಹಿಸಿದಾಕೆ. ಏಕೆಂದರೆ ದಿನವಿಡೀ ಬತೇರಿಯ ಮೇಲೆ ಶತ್ರುಗಳ ಸುಳಿವನ್ನು ತಿಳಿಸುವ ಕಾವಲುಗಾರನಿಗೆ ನಿರ್ದಿಷ್ಟವಾದ ಸಮಯವಷ್ಟೇ ಊಟಕ್ಕೆ ಸೀಮಿತ. ಆ ವೇಳೆಯಲ್ಲಿ ಬಂದು ಊಟಕ್ಕೆ ಕುಳಿತ ಗಂಡನನ್ನು ಈ ವಿಷಯ ಹೇಳಿ ಅರ್ಧಕ್ಕೆ ಏಳಿಸಲು ಇಚ್ಛಿಸದೆ ತಾನೇ ಇದಿರಿಸುವ ಕಾರ್ಯಕ್ಕೆ ಕೈಹಾಕಿದವಳು. ಅದರ ಅಗಾಧತೆಯ ಅರಿವಿಲ್ಲದೆ ಶತ್ರುಗಳನ್ನು ಕೈಗೆ ಸಿಕ್ಕ ಒನಕೆಯಿಂದಲೇ ಎದುರಿಸಲು ಮುಂದಾದವಳು. ಸಾಹಸ ಚರಿತ್ರೆಯನ್ನೇ ನಿರ್ಮಿಸಿದಳು. ಇಲ್ಲಿ ಇನ್ನೊಂದು ವಿಷಯವೆಂದರೆ ದುರ್ಗದ ಇತಿಹಾಸದಲ್ಲಿ ತನ್ನ ನಾಯಕನನ್ನು ಕಳೆದುಕೊಂಡ ಗಂಡೋಬಳವ್ವನಾಗತಿ ಆಳ್ವಿಕೆಯಲ್ಲಿ ಓಬಳವ್ವ ಎಷ್ಟಾದರೂ ಹೆಣ್ಣಲ್ಲವೇ? ಅವಳೇನು ಮಾಡಿಯಾಳು ಎಂದು ಶತ್ರು ಪಡೆಯವರ ದುರ್ಗದ ದನಗಳನ್ನು ಕದ್ದೊಯ್ದಾಗ, ಇದನ್ನು ಕೇಳಿದ ಗಂಡೋಬಳವ್ವ, ದುರ್ಗದ ಹೆಣ್ಣುಗಳು, ಕೇವಲ ಹೆಣ್ಣುಗಳಲ್ಲ, ಸಮಯ ಬಂದರೆ ರಣಚಂಡಿಯರೂ ಆಗಬಲ್ಲರೆಂದು ಎಂಬುದನ್ನು ಸಾಬೀತಾಗುವಂತೆ ತಾವೇ ಖುದ್ದಾಗಿ ಗಂಡುಗಲಿಯಂತೆ ವೀರಗಚ್ಚೆ ಬಿಗಿದು, ಉಕ್ಕಿನಕವಚನ ಧರಿಸಿ, ಶಿರಸ್ತ್ರಾಣ ತೊಟ್ಟು ಗಂಡುಗೊಡಲಿಯೊಂದಿಗೆ ಸ್ತ್ರೀಪಡೆಯನ್ನು ಮುಂದಿಟ್ಟುಕೊಂಡು ರಣಚಂಡಿಯಾಗಿ ಹೋರಾಡಿ ಗೆದ್ದು ದನಗಳನ್ನು ಬಿಡಿಸಿಕೊಂಡು ಬಂದ ಗಂಡೋಬಳವ್ವನ ಮುಂದೆ ಓಬವ್ವನ ಗಟ್ಟಿಗತನವೇ ಹೆಚ್ಚೆನಿಸಿದಿರಲಾರದು. ಏಕೆಂದರೆ ಆಯುಧಗಳ ರಕ್ಷಣೆ, ದಂಡಿನ ರಕ್ಷಣೆ, ಆನೆ, ಕುದುರೆ ಕಾಲಾಳುಗಳ ಸಹಿತ ಹೋರಾಡಿದ ಗಂಡೋಬಳವ್ವ ಮಾಡಿದ್ದು ದುರ್ಗದ ರಕ್ಷಣೆಯೇ, ಏಕಾಂಗಿಯಾಗಿ ಯಾರಿಗೂ ಗೊತ್ತಾಗದಂತೆ ಕಳ್ಳಗಂಡಿಯಿಂದ ನುಗ್ಗಿ ಬಂದ ಶತ್ರು ಸೈನಿಕರ ತಲೆ ಚೆಂಡಾಡಿ ಏಕಾಂಗಿಯಾಗಿ ಹೋರಾಡಿ ಇತಿಹಾಸದಲ್ಲಿ ಅಮರಳಾದ ಓಬವ್ವ ಮಾಡಿದ್ದು ದುರ್ಗದ ರಕ್ಷಣೆಯೇ. ಚಿತ್ರದುರ್ಗ ಗಂಡುಮೆಟ್ಟಿದ ನಾಡು ಎಂಬುದನ್ನು ತೋರಿಸಿದವಳು. ಇಲ್ಲಿ ಬೇಕಾದಷ್ಟು ಗಂಡುಗಲಿಗಳು ಹೋರಾಡಿದ್ದಾರೆ, ಆಳಿದ್ದಾರೆ. ಆದರೆ ಮಹಿಳೆಯರಲ್ಲಿ ಓಬವ್ವ ಚಾರಿತ್ರಿಕವಾಗಿ ಪ್ರಮುಖ ಸ್ಥಾನ ಪಡೆದಿದ್ದಾಳೆ. ಜನಪದರಲ್ಲಿ ಚಾರಿತ್ರಿಕ ಪ್ರಜ್ಞೆ ಮೂಡಿಸಿದ್ದಾಳೆ. ಹಾಗಾಗಿ ಲಭ್ಯವಿರುವ ಲಿಖಿತ ದಾಖಲೆಗಳೊಂದಿಗೆ ಹಲವಾರು ಕಾರಣಗಳಿಂದ ಲಭ್ಯವಿರದ ದಾಖಲೆ, ತಾಳೆಗರಿ, ಸ್ಮಾರಕ, ಶಾಸನಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಜನ ತಾವೇ ಆಕೆಗೊಂದು ಚಾರಿತ್ರಾತ್ಮಕ ಸ್ಥಾನ ಕೊಡುವಲ್ಲಿ ಪ್ರಜ್ಞಾವಂತರಾಗಿದ್ದಾರೆ. ದುರ್ಗದ ಜನರು ವರ್ಷಕ್ಕೊಮ್ಮೆ ಒನಕೆ ಓಬವ್ವ ಉತ್ಸವವನ್ನು ಮಾಡುತ್ತಾ ಓಬವ್ವೆಯ ಚರಿತ್ರೆಯನ್ನು ಮರು ನೆನಪಿಸುತ್ತಿದ್ದಾರೆ. ಆಕೆಯ ಸಮುದಾಯದವರೆಂದು ಗುರುತಿಸಿಕೊಂಡಿರುವವರು ಆಕೆಯ ಸಮಾಧಿ ಪೂಜೆಯನ್ನು ಎಡಬಿಡದೆ ಆಚರಿಸಿಕೊಂಡು ಬರುತ್ತಿದ್ದಾರೆ. ಓಬವ್ವ ಚೆಲ್ಲಾಡಿದ ರಕ್ತಕ್ಕೆ ನಮ್ಮ ಜಾನಪದರು ನೆಲೆ ಒಗದಿಸಿದ್ದಾರೆ. ಚಾರಿತ್ರಿಕ ಮಹತ್ವ ಒದಗಿಸಿದ್ದಾರೆ.

ಓಬವ್ವೆಯ ಬಗೆಯ ಚಾರಿತ್ರಿಕತೆಯನ್ನು ಗಮನಿಸಿದಾಗ ಚರಿತ್ರೆಯ ಬರವಣಿಗೆಯಲ್ಲಿ ಅವಜ್ಞೆಗೊಳಗಾಗಿದ್ದ ಈ ಚರಿತ್ರೆಗೆ ಸಂಬಂಧಿಸಿದ ವಿವಿಧ ಆಯಾಮಗಳನ್ನು ಚರ್ಚಿಸಿ ವಿಶ್ಲೇಷಿಸಲಾಗಿದೆ. ಲಿಖಿತ ದಾಖಲೆಗಳಿಂದಲೇ ಚರಿತ್ರೆ ನಿರ್ಮಾಣ ಎಂಬ ಮಾತಿನಿಂದ ದೂರವಿದ್ದವರು ದುರ್ಗದ ನಾಯಕರು. ಏಕೆಂದರೆ ಜನಪರವಾದ ಕಾರ್ಯಗಳಿಗೆ ಹತ್ತಿರವಿದ್ದವರು. ಹಾಗಾಗಿ ನಾಯಕರ ಆಳ್ವಿಕೆಯ ಬಗ್ಗೆ ದೇವಾಲಯ, ಕೋಟೆ ಕೊತ್ತಲಗಳ ನಿರ್ಮಾಣದ ಬಗ್ಗೆ, ಶಾಸನಗಳನ್ನು ಬರೆಯಿಸುವುದರಲ್ಲಿ ಅವರ ಆಸಕ್ತಿ ಕಡಿಮೆ. ತಾವು ನಿರ್ಮಾಣ ಮಾಡಿದ ಬಗ್ಗೆ ಶಾಸನ ಕೆತ್ತಿಸುವ ಜನಪ್ರಿಯತೆಯಿಂದ ನಾಯಕರು ಸ್ವಲ್ಪ ದೂರ ಎಂಬುದನ್ನು ದುರ್ಗದ ಇತಿಹಾಸದಿಂದ ನಾವು ತಿಳಿಯುತ್ತೇವೆ. ಕಾರಣ ತಿಳುವಳಿಕೆಯ ಅಭಾವವೇ, ನಿರಾಸಕ್ತಿಯೇ ಅಥವಾ ಇನ್ಯಾವ ಕಾರಣವೋ ಇದಕ್ಕೆ ಕಾರಣವೋ ತಿಳಿದು ಬಂದಿಲ್ಲ. ಆದರೆ ದೇವರ ಹೆಸರು, ಯುದ್ಧ ವಿವರಣೆಗಳಿಂದಲೇ ನಾಯಕರ ಇತಿಹಾಸವನ್ನು, ಸೂಕ್ಷ್ಮವನ್ನು ಅರಿಯಬೇಕಾಗುತ್ತದೆ. ಎಂ.ಎಸ್. ಪುಟ್ಟಣ್ಣನವರು, ಹುಲ್ಲೂರು ಜೋಯಿಸರು ಮೊದಲಾದವರ ಸಂಶೋಧನೆಗಳಿಂದ, ನಾಯಕರಿಗೆ ಸಂಬಂಧಿಸಿದ ಕತ್ತಿ, ಕಠಾರಿ, ವಸ್ತು, ವಸ್ತ್ರ, ನಾಣ್ಯ, ಕಾಗದ ಪತ್ರಗಳಿಂದ ನಾಯಕರ ಇತಿಹಾಸವನ್ನು ಅರಿಯಬೇಕಾಗುತ್ತದೆ.

ಹುಲ್ಲೂರು ಶ್ರೀನಿವಾಸ ಜೋಯಿಸರು ೧೯೨೩ರಲ್ಲಿ ದುರ್ಗದ ಸ್ಥಳೀಯ ಪತ್ರಿಕೆಯಾಗಿದ್ದ ಸುಬೋಧ ಪತ್ರಿಕೆಯಲ್ಲಿ "ವೀರ ವನಿತೆ ಓಬವ್ವ" ಲೇಖನವನ್ನು ಪ್ರಕಟಿಸುವುದರ ಮೂಲಕ ಆಕೆಯ ಚರಿತ್ರೆಯನ್ನು ನಿರ್ಮಿಸಿದ್ದರು. ದುರ್ಗದ ಇತಿಹಾಸದಲ್ಲಿ ಚಾರಿತ್ರಿಕ ಮಹಿಳೆ ಎಂದೇ ಸಂಶೋಧಿಸಿ ತಿಳಿಸಿದ್ದರು.

ಹದಿನೆಂಟನೇ ಶತಮಾನದ ವೇಳೆಗೆ ಚಿತ್ರದುರ್ಗವು ಒಂದು ಬಲಿಷ್ಠ ರಾಜ್ಯವಾಗಿ ಬೆಳೆದಿತ್ತು. ಕರ್ನಾಟಕದ ಆಯಕಟ್ಟಿನ ಸ್ಥಳದಲ್ಲಿದ್ದ ಈ ಸಂಸ್ಥಾನವು ತನ್ನ ಪ್ರಾಬಲ್ಯದಿಂದ ದಕ್ಷಿಣ ಭಾರತದ ಪ್ರಬಲ ಶಕ್ತಿಗಳ ಗಮನವನ್ನು ಸೆಳೆದಿತ್ತು. ಮೈಸೂರಿನ ಸಂಸ್ಥಾನದ ಒಡೆಯರನ್ನೇ ಮಣ್ಣು ಮುಕ್ಕಿಸಿದ ಹೈದರಾಲಿಗೆ ಚಿತ್ರದುರ್ಗದ ಸಂಪತ್ತು ಕಣ್ಣು ಕುಕ್ಕುತೊಡಗಿತು. ವಂಚನೆಯಿಂದ ದುರ್ಗದ ನಾಯಕನನ್ನು ಗೆಲ್ಲಲು ನಿರ್ಧರಿಸಿ ನಾಲ್ಕು ಬಾರಿ ದುರ್ಗದ ಮೇಲೆ ದಾಳಿ ನಡೆಸಿದ್ದಾನೆ. ಚಿತ್ರದುರ್ಗದ ಸೈನ್ಯದಲ್ಲಿದ್ದ ಮುಸ್ಲಿಂ ಯೋಧರಾದ ಕಾಜಿಜಮಾಲ್‌ಖಾನ್, ಕುತುಬುದ್ದೀನ್‌ಖಾನ್ ಮೊದಲಾದವರ ಸಹಾಯದಿಂದ ಅಂದರೆ ನಾಯಕನಿಗೆ ದ್ರೋಹ ಬಗೆದು ಹೈದರಾಲಿಯೆ ಅಮಿಷಗಳಿಗೆ ಬಲಿಯಾಗಿ "ನಾವು ಅಹಲೆ ಇಸಲಾಂಜನ ಇದ್ದು ಹಿಂದೂ ಮುಸಲ್ಮಾನರಿಗೆ ವೈಷಮ್ಯ ಇದ್ದೇ ಇದೆ. ನಮಗೆ ಬೇರೆ ದೇಶವಿಲ್ಲದೆ ಇದೇ ಶೀಮೆ ಇದ್ದದ್ದರಿಂದ ನಿರ್ವಾಹವಿಲ್ಲದೆ ನಾವು ಇವನ ಚಾಕರಿ ಮಾಡುವುದಕ್ಕೆ ಕಬೂಲ್ ಆದೆವು. ಈಗ ಬಫ್ ಜಲೆಯಿಲಾಹಿ ಕಟಾಕ್ಷದಲ್ಲಿ ವನಿಚ ಅವತಾರವಾಗಿ ಪೈಗಂಬರ್ ನವಾಬು ಷಾಯಿನ್ ಷಾ ಆಗಿದ್ದೇವೆ. ಕಿತಾಬಿನಲ್ಲೂ ಬರದು ಇದೆ. ಇದರ ಮೇಲೆ ಗರೀಬ್ ಪಾಳೆಯಗಾರನು ಏನು ಕೊಟ್ಟಾನು. ಈಗ ನವಾಬ್ ಸಾಹೇಬರು

ಜಹಗೀರು ಕೊಡುವ ಮನಸುಬೆ ಮಾಡಿದ್ದಾರೆ. ದಕ್ಷಿಣಕ್ಕೆ ನಮ್ಮ ಸ್ಥಾನ ಠಾಣೆ ಬಿದ್ದರೆ ಮಿಕ್ಕಾ ಮದೀನಾ ಮತ್ತು ಅರಬಸ್ಥಾನ ಕಾಬೂಲ್ ಕಂದಾಹಾರ ವಗೈರೆ ಸೇವೆ ಮುಸಲ್ಮಾನರದು ಆಗುತ್ತೆ. ಹಿಂದೂಜನ ಕಾಫರರಲ್ಲಿ ಮಿಲ್ಲಾ ಆಗುವುದಿದ್ದರೆ ಹಾಗೆ ಮಾಡಬೇಕೆಂದು ಹೇಳಿದ್ದರಿಂದ ಖುತುಬ್‌ದೀನ್‌ಖಾನ್, ಸಲಾಬತ್‌ಖಾನ್, ಮಹಮ್ಮದ್‌ಖಾನ್, ಬಿಜಲೆ ವಗೈರೆಖಾನ್, ಸಾಹೇಬ್‌ಮೊಹದೀನ್‌ಖಾನ್, ಕಲ್ಯಾಣಿ ವಗ್ಯರೆ ದರೋಬಸ್ತು ಮುಸಲ್ಮಾನರು ಒಪ್ಪಿದರು".[೧೩] ಹೀಗೆ ದುರ್ಗದ ಕೆಲವು ಮುಸಲ್ಮಾನರೆಲ್ಲಾ ರಾಜದ್ರೋಹ ಕಾರ್ಯಕ್ಕೆ ಒಪ್ಪಿಕೊಂಡು ಮದಕರಿನಾಯಕನನ್ನು ಹಿಡಿದುಕೊಡುವ ತೀರ್ಮಾನಕ್ಕೆ ಬಂದರು. ರಾಜದ್ರೋಹವನ್ನು ಎಸಗಿದರು. ಹೀಗೆ ಕೊನೆಯ ಯುದ್ಧದಲ್ಲಿ ಕೋಟೆ ಹಿಡಿಯುವಲ್ಲಿ ಹೈದರನು ಯಶಸ್ವಿಯಾದರೂ ಮೊದಲ ದಾಳಿಯಲ್ಲಿ ಅವನ ಅಪಾರ ಶ್ರಮವನ್ನು, ಚಾಣಕ್ಯತೆಯನ್ನು ಮಸುಕುಮಾಡಿ ದುರ್ಗದ ಸೈನ್ಯವನ್ನು ಸಕಾಲದಲ್ಲಿ ಎಚ್ಚರಿಸಿ ಶತ್ರುಗಳಿಂದ ಕೋಟೆಯನ್ನು ಕಾಪಾಡಿದಳು ಓಬವ್ವ ತನ್ನ ಸಾಹಸಗಾಥೆಯಿಂದ ಶತ್ರುವಾದ ಹೈದರನ ಮನಸ್ಸಿನಲ್ಲಿ ಶ್ಲಾಘನೆಯನ್ನು ಗಳಿಸಿದಾಕೆ.

ಪ್ರಸ್ತುತ ಓಬವ್ವನ ಬಗೆಗಿನ ಜಾನಪದರ ಚಾರಿತ್ರಿಕ ಪ್ರಜ್ಞೆಯನ್ನು ಅವಲೋಕಿಸುವಾಗ ಇವರ ಉದ್ದೇಶಕ್ಕೆ ಅನುಗುಣವಾಗಿ, ಜಾನಪದರಲ್ಲಿ ಹುದುಗಿಕೊಂಡಿರುವ ಚಾರಿತ್ರಿಕ ಅಂಶಗಳನ್ನಷ್ಟೇ ಹೆಕ್ಕಿ ತೆಗೆಯಬೇಕಾಗಿರುವುದರಿಂದ ಜಾನಪದರ ಮತ್ತು ಓಬವ್ವನ ನಡುವಣ ಸಂಬಂಧವನ್ನಷ್ಟೇ ಸ್ಥೂಲವಾಗಿ ಗಮನಿಸಬೇಕಾಗುತ್ತದೆ. ಜಾನಪದರಲ್ಲಿ ಅಂತರ್ಗತವಾಗಿರುವ ಚಾರಿತ್ರಿಕ ಸಂಗತಿಗಳನ್ನು ಅಷ್ಟೇ ಹೆಕ್ಕಿ ತೆಗೆಯಬೇಕು.

ಮಾನವನ ಸಾಂಸ್ಕೃತಿಕ ಪರಂಪರೆಯನ್ನು ಗುರುತಿಸುವಲ್ಲಿ ಪುರಾಣ ಚರಿತ್ರೆಗಳೆಂಬ ಗೆರೆಗಳನ್ನೆಳೆದು ಜಾನಪದಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಅಧ್ಯಯನ ಮಾಡಲು ತೊಡಗುವಾಗ ಆಚರಣೆ, ನಂಬಿಕೆ, ಸಂಪ್ರದಾಯಗಳನ್ನು, ಸಾಹಿತ್ಯವನ್ನು ಆಕರವಾಗಿ ಬಳಸಿಕೊಳ್ಳುವಾಗ, ವಿವಿಧ ಸಾಂಸ್ಕೃತಿಕ ಘಟನೆಗಳ ಬಗ್ಗೆ ವೈಶಿಷ್ಟ್ಯತೆಯಾಗಲಿ, ಕಾಲಾವಧಿಯನ್ನಾಗಲೀ ನಿರ್ದಿಷ್ಟವಾಗಿ ಹೇಳಲು ಒಮ್ಮೊಮ್ಮೆ ಅಸಾಧ್ಯ. ಹಾಗೆಯೇ ದುರ್ಗದ ರಣದುರ್ಗಿಯಾಗಿ ಜನಪದರ ಬಾಯಲ್ಲಿ ಅಂದಿನಿಂದ ಇಂದಿನವರೆಗೆ ತನ್ನ ಸ್ಥಾನ ಕಾಪಾಡಿಕೊಂಡು ಬಂದ ಓಬವ್ವ ಪರ–ವಿರೋಧಗಳ ಮಧ್ಯ ಸತ್ಯ–ಶೋಧಗಳ ಸಂಸ್ಕೃತಿಯನ್ನು ಭಿನ್ನವಾಗಿಸಲು ನಾಡಿನೆಲ್ಲೆಡೆಯ ಹಲವಾರು ಸಾಹಿತಿಗಳು, ಸ್ಥಳೀಯರು ಶಿಷ್ಟಸಾಹಿತ್ಯದ ಮೂಲಕ ಆಕೆಯ ಇರುವನ್ನು ಸ್ಪಷ್ಟಪಡಿಸಿದ್ದಾರೆ. ಅವರಲ್ಲಿ ಶ್ರೀ ಎಂ.ಎಸ್. ಪುಟ್ಟಣ್ಣ, ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಮೊದಲಿಗರಾಗಿದ್ದಾರೆ. ಜಾನಪದದಲ್ಲಿ ಮರೆಯಿಸಿಕೊಂಡಿರುವ ಐತಿಹಾಸಿಕತೆಯನ್ನು ಕೆದಕಿ ಬೆದಕಿ ತೆಗೆಯಬೇಕಾಗುತ್ತದೆ. ಚರಿತ್ರೆಯನ್ನಾಗಲಿ, ಇತರ ಜನಪದ ಕಥೆಗಳೆಲ್ಲಾಗಲೀ ದೊರಕದ ಕೆಲವು ಅಪೂರ್ವ ಅಂಶಗಳು ನಮಗೆ ಜನಪದರಿಂದ ದೊರಕುತ್ತವೆ.ಓಬವ್ವೆಯ ಘಟನೆಯು ದುರ್ಗದ ಕೊನೆಯ ದೊರೆ ರಾಜಾವೀರ ಮದಕರಿನಾಯಕನ ಕಾಲದಲ್ಲಿ ಎಂದಿನಂತೆ ಮದ್ದಹನುಮಪ್ಪನು ಮಧ್ಯಾಹ್ನದ ಊಟಕ್ಕೆ ಮನೆಗೆ ಬಂದನು. ಓಬವ್ವ

ತನ್ನ ಪತಿಗೆ ಊಟ ಬಡಿಸಿ ಕುಡಿಯುವ ನೀರನ್ನು ಕೊಡಲು ಬಿಂದಿಗೆ ನೋಡಿದಾಗ ಆಕಸ್ಮಿಕವಾಗಿ ಬರಿದಾಗಿತ್ತು. ಅವಸರದಲ್ಲಿ ಬಿಂದಿಗೆ ತೆಗೆದುಕೊಂಡು ಗುಪ್ತದ್ವಾರಕ್ಕೆ ಕೆಲವೇ ಗಜಗಳ ಅಂತರದಲ್ಲಿಯೇ ಇದ್ದ ಸಿಹಿನೀರಿನ ಕೊಳಕ್ಕೆ ಬಂದಾಗ ಅಸ್ಪಷ್ಟ ಮಾತುಗಳು ಕೇಳಬಂದವು"[೧೪] ಈ ವೇಳೆಯಲ್ಲಿ ಅಂದರೆ ತಿಂಗಳುಗಳೇ ಉರುಳಿದರು ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ಸಮಾಲೋಚಿಸಿ ಹೈದರಾಲಿ ಸೈನಿಕರು ಕಹಳೆಯವನು ಮಧ್ಯಾಹ್ನ ಒಂದು ಘಂಟೆ ಕೋಟೆಯ ಬತೇರಿಯ ಮೇಲಿಲ್ಲದ ಸಮಯದಲ್ಲಿ ಕೋಟೆಯ ಒಳಹೊಕ್ಕು ದಾಳಿ ಮಾಡುತ್ತಾ ಹೆಬ್ಬಾಗಿಲನ್ನು ತೆರೆಯಲು ಸಜ್ಜಾಗಿದ್ದರು ಎಂದು ತಿಳಿಸಲಾಗಿದೆ. ಅಂದರೆ ಓಬವ್ವ ಘಟನೆ ಪ್ರೊ. ಎಂ.ಡಿ. ಕೃಷ್ಣಯ್ಯರವರ ಪ್ರಕಾರ ಮಧ್ಯಾಹ್ನದ ವೇಳೆಯಲ್ಲಿ. ಆದರೆ ಚಿತ್ರದುರ್ಗದ "ಕೈಫಿಯತ್" ಹೇಳುವಂತೆ "ದುರ್ಗವನ್ನಾಕ್ರಮಿಸಲು ಬಂದ ಶತ್ರುಗಳು ಪಶ್ಚಿಮದ ಕಡೆ ಮೊಕ್ಕಾಂ ಮಾಡಿದ್ದರಲ್ಲದೆ, ಸರಿಹೊತ್ತಿನಲ್ಲಿ (ಮಧ್ಯರಾತ್ರಿಯಲ್ಲಿ) ಹುಚ್ಚಂಗಮ್ಮನ ಹೊಂಡ (ಈಗಿನ ಸಿಹಿನೀರು ಹೊಂಡ)ದ ಓಣಿ ಹಿಡಿದು ದಿಡ್ಡಿಯಲ್ಲಿ ಒಬ್ಬೊಬ್ಬರಾಗಿ ನುಸುಳಲು ಪ್ರಯತ್ನಿಸಿದರು" ಕೈಫಿಯತ್‌ನಲ್ಲಿ ನಮೂದಿಸಿರುವಂತೆ ದಿಡ್ಡಿಯ ಬಾಗಿಲು ಅಂದರೆ ಇದು ಕೋಟೆಯ ಬಹು ಮುಖ್ಯ ಸ್ಥಳವಾಗಿತ್ತೆಂದು ನಮಗೆ ತಿಳಿದು ಬರುತ್ತದೆ. ಇದೇ ಓಬವ್ವ ಸಾಹಸವೆಸಗಿದ ವನಕೆಕಿಂಡಿ. ಇದು ಒಬ್ಬ ಮನುಷ್ಯ ಒಳಗೆ ಹೋಗಿ ಬರಬಹುದಾಗಿದಷ್ಟು ಇರುವ ಈ ಪೊಟರೆಯು ಕೋಟೆಯ ಒಳಭಾಗಕ್ಕೆ ಸ್ಪಷ್ಟವಾಗಿ ಕಾಣಿಸದಿದ್ದರೂ ಹೊರಭಾಗದಲ್ಲೂ ಇದಕ್ಕೆ ಅಡ್ಡಲಾಗಿ ಗೋಡೆ ಕಟ್ಟಿರಬಹುದಾದ ಅವಶೇಷಗಳಿವೆ (ಗೋಡೆ ಬಿದ್ದುಹೋಗಿದೆ). ಈ ಎರಡೂ ಹೇಳಿಕೆಗಳನ್ನು ಗಮನಿಸಿದಾಗ ಓಬವ್ವೆಯ ಘಟನೆ ನಡೆದಿದ್ದು ನಟ್ಟಿರುಳಿನಲ್ಲಿ ಎಂಬುದನ್ನು ಅಧಿಕೃತವಾಗಿ ಒಪ್ಪಬಹುದು. ಕೈಫಿಯತ್ತು ಅಧಿಕೃತ ದಾಖಲೆಯು ಹೌದು. ಏಕೆಂದರೆ ತಿಂಗಳುಗಟ್ಟಲೆ ಕಾದಿದ್ದ ಸೈನಿಕರು ಹಗಲಿನಲ್ಲಿ ಅದೂ ದುರ್ಗದ ಕೋಟೆಗೆ ಲಗ್ಗೆ ಹಾಕಲು ಹಗಲೆಂದು ತಿಂಗಳುಗಳಿಂದ ಹೈದರ್ ಸೈನಿಕರು ಹಗಲು ರಾತ್ರಿ ಹೋರಾಟ ಮಾಡಿ ಕೋಟೆ ವಶಪಡಿಸಿಕೊಳ್ಳಲು ಸಿದ್ಧವಿದ್ದರು. ಈ ವೇಳೆಯಲ್ಲಿ ಕೋಟೆಯ ಕಳ್ಳಗಂಡಿಯಿಂದ ದುರ್ಗವನ್ನು ಬೇಧಿಸುವ ಉದ್ದೇಶ ಹೊಂದಿದ ಹೈದರಾಲಿ ಕಪಟತನದಿಂದಲೇ ದುರ್ಗವನ್ನು ವಶಪಡಿಸಿಕೊಳ್ಳಲು ರಾತ್ರಿಯ ವೇಳೆಯನ್ನು ಆರಿಸಿಕೊಂಡಿರುವುದನ್ನು ಖಚಿತಪಡಿಸಬಹುದು. ಈ ಘಟನೆಯು ಸಂದರ್ಭಕ್ಕೆ ತಕ್ಕಂತೆ ಸನ್ನಿವೇಶಗಳ ಪ್ರಯೋಜನಗಳನ್ನು ಪಡೆದುಕೊಳ್ಳಲು ನಿರೂಪಿಸಲ್ಪಟ್ಟಿದ್ದರೂ ಚಾರಿತ್ರಿಕ ಹಿನ್ನಲೆಯಲ್ಲಿ ಓಬವ್ವನ ಸಾಹಸಗಾಥೆಯು ನಡೆದಿರುವುದು ನಟ್ಟಿರುಳಿನಲ್ಲಿ ಎಂಬುದು ಸತ್ಯ.

"ಚಿತ್ರದುರ್ಗದ ನಾಯಕ ಅರಸರಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಒಂದಾದ ಹಾಗೂ ಭಿನ್ನ ಸಂಪ್ರದಾಯದ ದಾಖಲೆಯಲ್ಲಿ (ಇದನ್ನು 'ಕೈಫಿಯತ್' ಎಂದು ಸಂಬೋಧಿಸಿದೆ) ಓಬವ್ವನ ಚಾರಿತ್ರಿಕ ದಾಖಲೆಯನ್ನು ಪ್ರಸ್ತಾಪಿಸಿದ್ದು ಓಬವ್ವೆಯ ಹೆಸರನ್ನು ನೇರವಾಗಿ ಪ್ರಸ್ತಾಪಿಸದೆ ದಿಡ್ಡಿ ಬಾಗಿಲ ಪಹರೆಗೆ ನೇಮಿಸಿದ ಹೊಲೆಯವರನ ಹೆಂಡತಿ ಎಂದಷ್ಟೇ ಗುರುತಿಸಲಾಗಿದೆ.[೧೫] ದಿಡ್ಡಿ ಬಾಗಿಲು ಎನ್ನುವುದು ಇತಿಹಾಸದಲ್ಲಿ ಬತೇರಿ ಎಂದೇ ನಮಗೆ ತಿಳಿದು ಬಂದಿದೆ. ಹಾಗಾಗಿ ಪಹರೆಯವನ ಹೆಂಡತಿ ಓಬಿ, ಓಬವ್ವೆ ಎನ್ನುವುದರಲ್ಲಿ ನಿಸ್ಸಂದೇಹ.

ಬಿ.ಡಿ. ಮದಕರಿನಾಯಕರ ಪುತ್ರರೂ "ಚಿತ್ರದುರ್ಗದ ಸೀಮೆಯ ವಾಲ್ಮೀಕಿ ಮತ ಆಚಾರ ವಿಚಾರಕ್ಕೆ ಪೊಕ್ರೇಸರರೂ "ಆಗಿದ್ದ ರಾಜಾ ಜಿ.ಎಸ್. ಪಾಳೇಗಾರ್ ಪರಶುರಾಮ ನಾಯ್ಕರು ತಾವು ಓಬವ್ವನ ವಂಶಸ್ಥರಿಗೆ ನೀಡಿದ್ದ ರಹದಾರಿ ಲೇಖನ (ನಿರೂಪ ಅಧಿಕಾರ) ಪತ್ರದಲ್ಲಿ ಓಬವ್ವೆಯ ಘಟನೆಯ ಬಗ್ಗೆ ಉಲ್ಲೇಖಿಸಿದ್ದಾರೆ. (ಅಧ್ಯಯನದ ಪೂರಕ ಆಕರಗಳಲ್ಲಿ ಲಗತ್ತಿಸಿದೆ). "ಚಿತ್ರದುರ್ಗವನ್ನು ಶತ್ರುಗಳಿಂದ ಪಾರು ಮಾಡಿದ ಓಬವ್ವೆಯ ಬಗ್ಗೆ ಪ್ರಜೆಗಳೂ, ರಾಜಮನೆತನದವರೂ, ಗುರುಜಂಗಮರೂ ಹೊಗಳಿ ಹರಿಸಿದುದು ಸಹಜವೇ"[೧೬] ಈ ಹಿನ್ನಲೆಯಲ್ಲಿ ಓಬವ್ವೆಯ ಘಟನೆಯು ಚಿತ್ರದುರ್ಗ ಚರಿತ್ರೆಯಲ್ಲಿ ಬೇರ್ಪಡಿಸಲಾಗದಷ್ಟು ಗಟ್ಟಿಯಾಗಿ ಬೆಸದಿದೆ. ಪ್ರಮುಖ ಸ್ಥಾನ ಪಡೆದಿದ್ದಾಳೆ. ಹಾಗಾಗಿ ಪುರಾತನ ಸ್ಮಾರಕಗಳನ್ನು ಹೇಗೆ ಜತನವಾಗಿ ಕಾಪಾಡಿಕೊಂಡು ಬರುತ್ತೇವೆಯೋ ಹಾಗೆಯೇ ದುರ್ಗದ ಕೋಟೆಯಲ್ಲಿರುವ ಕೋಟೆ ಕೊತ್ತಲಗಳ ಐತಿಹಾಸಿಕ ಕುರುಹುಗಳ ಜೊತೆಗೆ ಓಬವ್ವನಿಗೆ ಸಂಬಂಧಿಸಿದ ಕುರುಹುಗಳನ್ನು ಸಂರಕ್ಷಿಸಿ ಮುಂದಿನ ಜನಾಂಗಕ್ಕೆ ಉಳಿಸಿಕೊಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರಭುತ್ವವೂ ಗಮನ ಹರಿಸಬೇಕು.

ವಸ್ತುನಿಷ್ಠತೆ ಮತ್ತು ಸತ್ಯಶೋಧನೆಗಳು ಚರಿತ್ರಕಾರನ ಮುಖ್ಯ ಉದ್ದೇಶಗಳಾಗುತ್ತವೆ. ನಾಡಿನ ರಕ್ಷಣೆಗಾಗಿ, ಊರಿನ ಕ್ಷೇಮಕ್ಕಾಗಿ, ಸ್ತ್ರೀಯರ ಮಾನ ರಕ್ಷಣೆಗಾಗಿ ಪ್ರಾಣ ನೀಗಿದ ವೀರರ ಕಥೆಗಳನ್ನು ನಮ್ಮ ಕನ್ನಡ ನಾಡಿನ ಶಿಲೆಗಳು ಸಾರಿ ಹೇಳುತ್ತಿವೆ. ದೇಶವೇ ದೇವರು ಎಂದು ಭಾವಿಸಿದವರು ಉಂಟು. ನಮ್ಮ ಜನಪದರು ಸಾವನ್ನು ಸಹ ಕೆಚ್ಚೆದೆಯಿಂದ ಸ್ವಾಗತಿಸುವ ಧೀರರೂ ಆಗಿದ್ದರು. ಹುಟ್ಟಿದ್ದು ಸಾಯಲೇಬೇಕೆಂಬ ನಿಯಮವನ್ನವರು ಸದಾ ನೆನಪಿನಲ್ಲಿಟ್ಟುಕೊಂಡು ಅದರಿಂದ ಹತಾಶರಾಗದೆ, ಕರ್ತವ್ಯಚ್ಯುತರಾಗದೆ ಕೊನೆಯುಸಿರುವರೆಗೂ ದುಡಿಯುತ್ತಿದ್ದರು. ಹಣದಾಸೆ, ಕೀರ್ತಿಯ ಬೆನ್ನತ್ತದೆ ತನ್ನವರಿಗಾಗಿ ಕೊನೆಯವರೆಗೆ ನಾಯಕ ವಂಶದವರು ತನಗಾಗಿ, ತನ್ನವರಿಗಾಗಿ ಮರ್ಯಾದೆಯ ಸೂಚಕವಾದ ವೀಳ್ಯವನ್ನು ಬೇಡಿ ಪಡೆದವಳು ಓಬವ್ವ ತಮ್ಮ ಆಡಳಿತದಲ್ಲಿ ತಾನು ತಮ್ಮವರು ಸುಖವಾಗಿ ಇರುವೆವು ಎಂಬುದನ್ನು ಸವಿನಯವಾಗಿ ಮನವರಿಕೆ ಮಾಡಿಕೊಟ್ಟ ಮಹಿಳೆ ಓಬವ್ವ, ಜನ್ಮಭೂಮಿಗಿಂತ ಬೇರೆ ಸ್ವರ್ಗವಿಲ್ಲ, ನಾಡಿನ ಗೌರವ ಕಾಪಾಡುವುದೇ ತನ್ನ ಕರ್ತವ್ಯ, ಕಾಯಕವೇ ಕೈಲಾಸ ಎಂದು ಭಾವಿಸಿದವಳು. ಸದಾಚಾರ ನೀತಿ ನಿಷ್ಠೆಯಿದ್ದರೆ ನಿಜಕ್ಕೂ ಜಗತ್ತಿಗೆ ಬೆಳಕಾಗುತ್ತಾರೆ ಎನ್ನುವುದಕ್ಕೆ ಓಬವ್ವನ ಸಾಹಸಗಾಥೆಯೇ ಜ್ವಲಂತ ನಿದರ್ಶನ.

ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು
ಸಾಕ್ಷಾತ್ ಕಪಿಲಸಿದ್ದ ಮಲ್ಲಿಕಾರ್ಜುನ

– ಸಿದ್ದರಾಮ

ಅಡಿ ಟಿಪ್ಪಣಿಗಳು

೧. ಡಾ. ಮೊಗಳ್ಳಿ ಗಣೇಶ್, ಆದಿಮ (ಸಂಶೋಧನಾ ಗ್ರಂಥ), ೨೦೦೬, ಪುಟ ಸಂಖ್ಯೆ-೧೪

೨. ಕೆ.ವಿ.ಮಂಜುನಾಥರಾವ್, ಪೂರ್ವ ಕರ್ನಾಟಕದ ಪಾಳೇಗಾರರ ಚರಿತೆ, ಪುಟ ಸಂಖ್ಯೆ-೫೯

೩. ಲಕ್ಷ್ಮಣ ತೆಲಗಾವಿ ಮತ್ತು ಡಾ. ಎಂವಿ ಶ್ರೀನಿವಾಸ (ಸಂ), ಚಂದ್ರವಳ್ಳಿ, ೧೯೭೬. ಪುಟ ಸಂಖ್ಯೆ-೧೫

೪. ಜಿ.ಆರ್. ತಿಪ್ಪೇಸ್ವಾಮಿ, ಮೌಖಿಕ ಕಥನ, ಪುಟ ಸಂಖ್ಯೆ-೩೭.

೫. ಎಂ.ಎಸ್. ಪುಟ್ಟಣ್ಣ, ಚಿತ್ರದುರ್ಗದ ಪಾಳೇಗಾರರು, ೧೯೨೪, ಪುಟ ಸಂಖ್ಯೆ-೫೯

೬. ಪ್ರೊ. ಎ.ಡಿ. ಕೃಷ್ಣಯ್ಯ, ಭಾರತದ ಧೀರಮಹಿಳೆ ಓಬವ್ವ, ಪುಟ ಸಂಖ್ಯೆ-೩೨.

೭. ದಿನಾಂಕ: ೪.೧.೨೦ರ ಕ್ಷೇತ್ರ ಕಾರ್ಯದಲ್ಲಿ ವಕ್ತೃಗಳಾದ ಸುರೇಶಪ್ಪರವರು ತಿಳಿಸಿದ ಮಾಹಿತಿ.

೮. ಪ್ರೊ. ಲಕ್ಷ್ಮಣ ತೆಲಗಾವಿ, ಹರಿತಿ ಸಿರಿ, ೧೯೮೭, ಪುಟ ಸಂಖ್ಯೆ-೨೬೧

೯. ವಕ್ತೃಗಳಾದ ಶ್ರೀ ಸೋಮಶೇಖರಪ್ಪರವರು ದಿ.ಎ.ಡಿ.ನರಸಿಂಹಯ್ಯರವರ ಪುತ್ರರು ಹೇಳಿದ್ದು

೧೦. ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು, ಚಿತ್ರದುರ್ಗದ ಬಖೈರು, ೧೯೬೮, ಪುಟ ಸಂಖ್ಯೆ-೮೯

೧೧. ವಕ್ತೃಗಳು; ಶ್ರೀ ಬಾಲಚಂದ್ರರಾವ್‌ರವರ ಪುತ್ರರಾದ ನಾಗೇಂದ್ರರಾವ್‌ರವರು ತಿಳಿಸಿದ್ದು

೧೨. ಡಾ. ಶಶಿಕಲಾ ಶಿವಶಂಕರ್, ವಚನಕಾರ್ತಿಯರು: ಮಹಿಳಾ ಸಂವೇದನೆ, ೨೦೦೮

೧೩. ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು, ಚಿತ್ರದುರ್ಗದ ಬಖೈರು, ೧೯೬೮, ಪುಟ ಸಂಖ್ಯೆ-೮೫

೧೪. ಪ್ರೊ. ಎ.ಡಿ ಕೃಷ್ಣಯ್ಯ, ಭಾರತದ ಧೀರಮಹಿಳೆ ಓಬವ್ವ, ಪುಟ ಸಂಖ್ಯೆ-೨೭.

೧೫. ಪ್ರೊ. ಲಕ್ಷ್ಮಣ ತೆಲಗಾವಿ, ಮೌರ್ಯ ಶಾತವಾಹನ ಯುಗ, ೨೦೦೪, ಪುಟ ಸಂಖ್ಯೆ-೨೫೮.

೧೬. ಡಾ. ಎಂ..ಎನ್. ಶ್ರೀನಿವಾಸ ಮತ್ತು ಡಾ. ಲಕ್ಷ್ಮಣ ತೆಲಗಾವಿ (ಸಂ) ಚಂದ್ರವಳ್ಳಿ, ೧೯೭೬. ಪುಟ ಸಂಖ್ಯೆ-೧೧

ಅಧ್ಯಾಯ : ೪

ಓಬವ್ವನ ಕುರಿತ ಶಿಷ್ಟ ಸಾಹಿತ್ಯ ಮತ್ತು ಬರವಣಿಗೆಗಳು

ಅಧ್ಯಾಯ : ನಾಲ್ಕು

ಓಬವ್ವನ ಕುರಿತ ಶಿಷ್ಟಸಾಹಿತ್ಯ ಮತ್ತು ಬರವಣಿಗೆಗಳು

೪.೧. ಸಾಹಿತ್ಯ, ರಾಜಸತ್ತೆ, ಶಿಷ್ಟಸಾಹಿತ್ಯ : ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯದೊಡನೆ ಸಾಹಿತ್ಯದ ಉದಯವೂ ಆಗುತ್ತದೆ. ಮುದ್ರಣಯಂತ್ರ ಭಾರತೀಯ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ಪ್ರವೇಶವೆನಿಸಿದೆ. ಈ ಪ್ರವೇಶದಿಂದಾಗಿ 'ಹಸ್ತಪ್ರತಿ' ನಿರ್ಮಾಣದ ಮಂದಗತಿಗೆ ಬದಲು 'ಯಂತ್ರಪ್ರತಿ' ನಿರ್ಮಾಣದ ತೀವ್ರಗತಿಯುಂಟಾಗಿ ನಮ್ಮ ಸಾಹಿತ್ಯಕ್ಕೆ ವೇಗ ಮತ್ತು ವಿಸ್ತಾರಗಳು ಪ್ರಾಪ್ತವಾದವು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪಂಪಯುಗ ಮಹತ್ವಪೂರ್ಣವಾದುದು. ಸಾಹಿತ್ಯದ ಉದಯಕ್ಕೆ ಹಲವು ಕಾರಣಗಳಿರಬಹುದು. ಆದರೆ ಮಾನವ ತಾನು ಕಂಡದ್ದನ್ನು, ಉಂಡದ್ದನ್ನು ಮುಂದಿನವರೆಗೂ ದೊರೆಯಲಿ ಎಂಬ ಸಾಮಾಜಿಕ, ಪ್ರೇರಣೆ, ಕೀರ್ತಿಯ ೧. ಹಂಬಲಿಕೆಯಿಂದ ಗ್ರಂಥಸ್ತವಾದ ಸಾಹಿತ್ಯವು ಸಿದ್ಧವಾಗುತ್ತದೆ. ಸಮಾಜದಲ್ಲಿ ಪರಂಪರಾಗತವಾಗಿ ಬಂದ ಪ್ರೀತಿ, ಒಲವುಗಳು ಉದಯವಾದಾಗ ಸಾಹಿತ್ಯೋದಯಕ್ಕೆ ಕಾರಣವಾಗುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯ ಪ್ರಧಾನವಾಗಿ ಪುರುಷರ, ಪುರೋಹಿತರ, ಪಂಡಿತರ ಬರವಣಿಗೆಯಾದುದರಿಂದ ಅದು ಸಾಮಾನ್ಯವಾಗಿ ವ್ಯವಸ್ಥೆಯನ್ನು ಪ್ರತಿಪಾದಿಸುವ ಧ್ವನಿಯಾಗಿದೆ. ಸಾಹಿತ್ಯದಲ್ಲಿ ಹತ್ತನೇ ಶತಮಾನ ರಾಜಸತ್ತೆಯ ಕಾಲವಾದರೆ, ೧೨ನೆಯ ಶತಮಾನ ರಾಜಸತ್ತೆಯ ವಿಘಟನೆಯ ಕಾಲ. ಬಿಎಂ.ಶ್ರೀ ಅವರು ರನ್ನ ಪ್ರಶಸ್ತಿಗೆ ಮುನ್ನುಡಿ ಬರೆಯುತ್ತಾ "ಕನ್ನಡ ಕಾವ್ಯರಾಶಿಯನ್ನು ಹೊರಕ್ಕೆ ತಂದು ಹೆಮ್ಮೆ ಪಟ್ಟದ್ದಾಯಿತು. ಈಗ ಬೇಕಾದುದು ಅದರ ಯೋಗ್ಯತೆಯನ್ನು ಗೊತ್ತು ಮಾಡುವ ವಿಮರ್ಶೆ... ಇದು ಒಬ್ಬಿಬ್ಬರ ಕೆಲಸವಲ್ಲ. ಕನ್ನಡದಲ್ಲಿ ಅಕ್ಕರೆ ಒಂದೇ ಇದಕ್ಕೆ ಸಾಧನವಲ್ಲ. ಒಮ್ಮುಖವಾದ ಸಂಸ್ಕಾರವುಳ್ಳವರಾಗಲೀ, ಜಾತಿಮತಗಳ ವೀರಾವೇಶವುಳ್ಳವರಿಂದಾಗಲೀ ಇದು ನಿರ್ವಹಿಸಬಹುದಾದ ವಿಷಯವಲ್ಲ. ಇದು ಸರ್ವರಿಗೂ ಸೇರಿದ ಸಾಹಿತ್ಯದ ವಿಷಯ. ಎರಡು

ಮೂರು ಸಾಹಿತ್ಯಗಳನ್ನಾದರೂ ಚೆನ್ನಾಗಿ ಬಲ್ಲ, ವಿಶಾಲರುಚಿಗಳಾದ, ಪೂರ್ವದ ಮತ್ತು ನೂತನ ಕಾಲದ ಅಂತಸ್ಸಾರವನ್ನು ಅನುಭವಕ್ಕೆ ತಂದು ಕೊಂಡಿರುವ ಅಖಂಡ ಕರ್ನಾಟಕದ ವಿದ್ವಾಂಸರೆಲ್ಲರೂ ಈ ವಿಮರ್ಶೆಯ ಕಾರ್ಯವನ್ನು... ಕೈಗೊಳ್ಳತಕ್ಕದ್ದು"[೧]-ಎಂದಿದ್ದಾರೆ. ೧೯೨೮ರಲ್ಲಿ ಹೇಳಿದ ಈ ಮಾತುಗಳು ಇಂದಿಗೂ ಆದರ್ಶ ಪ್ರಾಯವಾಗಿವೆ. ಕನ್ನಡ ಸಾಹಿತ್ಯ ಚರಿತ್ರೆಯ ಲಕ್ಷಣಗಳೆನಿಸಿವೆ.

ಕನ್ನಡ ಸಾಹಿತ್ಯ ಚರಿತ್ರೆಯ ಲಕ್ಷಣಗಳು ಪ್ರಮುಖವಾಗಿ ಎರಡು. ಒಂದು ವಿಮರ್ಶೆ, ಎರಡು ಚರಿತ್ರೆ. ವಿಮರ್ಶೆಯು ಚಾರಿತ್ರಿಕವಾಗಿ ಮುನ್ನಡೆಯಬೇಕು. ವಿಮರ್ಶೆ ಹೊಸಗನ್ನಡಕ್ಕೆ ಮಾತ್ರ ಅನ್ವಯ. ಏಕೆಂದರೆ ಹಳೆಗನ್ನಡಕ್ಕೆ ಅದು ಸಂಶೋಧನೆಯಾಗುತ್ತದೆ. ಇನ್ನು ಚರಿತ್ರೆಯ ವಿಷಯಕ್ಕೆ ಬಂದರೆ ಕಥೆಯು ಐತಿಹಾಸಿಕವಾಗಿ, ಭೌಗೋಳಿಕವಾಗಿ ದೂರವಾದಾಗ ಆ ಕಥೆ ಐತಿಹಾಸಿಕವೆನಿಸುತ್ತದೆ. ನಿಜವಾದ ಚರಿತ್ರೆಯೆಂದರೆ ಗಮನಾರ್ಹ ಘಟನೆಗಳನ್ನು ದಾಖಲು ಮಾಡುವುದು. ಇದು ಮಾನವ ಸಮೂಹಕ್ಕೆ ಅವಶ್ಯಕವಾದುದು. ಸಾಹಿತಿಯಾದವನು ತನ್ನ ಬಾಳಿನಲ್ಲಿ ಎಷ್ಟೆಷ್ಟರ ಮಟ್ಟಿಗೆ ವಿಸ್ತಾರವಾದ ವಿಸ್ತಾರವಾದ ಅನುಭವವನ್ನು ಪಡೆದಿರುತ್ತಾನೋ ಅಷ್ಟರಮಟ್ಟಿಗೆ ಅವನು ರಚಿಸುವ ಸಾಹಿತ್ಯವು ಶ್ರೀಮಂತವೂ ವೈವಿಧ್ಯಮಯವೂ ಆಗಿರುತ್ತದೆ. ಅನುಭವ ಕ್ಷೇತ್ರವನ್ನು ವಿಸ್ತಾರ ಮಾಡಿಕೊಂಡಷ್ಟು ಪ್ರೇರಣೆ ನೀಡುವ ಸಂಗತಿಗಳು ಮಹತ್ವ ಪಡೆಯುತ್ತವೆ. ಜನಪದ ಸಾಹಿತ್ಯದಲ್ಲಿ ನಾವು ಕಂಡಂತೆ ಎರಡು ಮಹಾಕಾವ್ಯಗಳಿವೆ. ಏಳು ಮಲೆ ಮಾದಯ್ಯನನ್ನು ಕುರಿತದ್ದು ಒಂದಾದರೆ ಮಂಟೇಸ್ವಾಮಿಯನ್ನು ಕುರಿತದ್ದು ಮತ್ತೊಂದು. ಇಬ್ಬರು ನಾಯಕರು ಕೂಡ ಸಾವಿರಾರು ವರ್ಷಗಳಿಂದ ಮುಟ್ಟಬಾರದವರೆಂದು ದೂರವಿಟ್ಟು ಸಾಮಾಜಿಕವಾಗಿ, ಆರ್ಥಿಕವಾಗಿ ಶಿಷ್ಟ ಸಮಾಜವು ಹಿಂಸಿಸಿದ ಪಂಗಡಗಳಿಂದ ಬಂದವರು[೨] ಕರ್ನಾಟಕದಲ್ಲಿನ ಸಾಂಸ್ಕೃತಿಕ ವೀರರೆಂದೇ ಇವರನ್ನು ಗುರುತಿಸಬಹುದಾಗಿದೆ. ಮೈಸೂರು ಒಡೆಯರ ಕಾಲದಲ್ಲಿನ ಸಾಹಿತ್ಯದಲ್ಲಿ ನೇರವಾದ ಚಾರಿತ್ರಿಕ ಕಾವ್ಯಗಳ ಹೆಚ್ಚಳವನ್ನು ನಾವು ಕಾಣಬಹುದು. ಚರಿತ್ರೆ ಯಾವತ್ತೂ ಏಕರೂಪಿಯಾದುದಲ್ಲ. ಸಮುದಾಯಗಳು ರೂಪಿಸಿಕೊಂಡ ಚರಿತ್ರೆಯ ಪ್ರಜ್ಞೆಯು ಅತ್ಯಂತ ಸಂಕೀರ್ಣವಾದುದು. ಮೇಲ್ನೋಟಕ್ಕೆ ಇತಿಹಾಸದಲ್ಲಿ ವಿಮುಖವಾದಂತೆ ಸಮುದಾಯಗಳು ವರ್ತಿಸಿದರೂ ಚಾರಿತ್ರಿಕ ಎಚ್ಚರವನ್ನು ಅವು ಗೌಪ್ಯವಾಗಿ ಉಳಿಸಿಕೊಂಡು ಬಂದಿವೆ. ಮೌಖಿಕ ನಿರೂಪಣೆಗಳು ಚರಿತ್ರೆಯ ಆಚೆಗಿನ ಚರಿತ್ರೆಯನ್ನು ಮರು ಸೃಷ್ಟಿಸುತ್ತವೆ. ಚರಿತ್ರೆಗೆ ಸಾಕ್ಷಿಯೆ ಮುಖ್ಯ ಎನ್ನುವ ನಿಯಮವಿದೆ. ಸಾಕ್ಷಿ ಇಲ್ಲದ್ದು ಚರಿತ್ರೆಯಾಗಲಾರದು ಎಂಬುದನ್ನು ಆ ನಿಯಮ ಧ್ವನಿಸುತ್ತದೆ.[೩] ಆದರೆ ಚರಿತ್ರೆಯ ಶಿಸ್ತಿನ ನಿಯಮಗಳ ಆಚೆಗು ಹೋದಾಗ ಮಾತ್ರ ಉತ್ತಮ ಚರಿತ್ರೆ ದೊರೆಯುತ್ತದೆ ಎಂದಿದ್ದಾರೆ. ಹಾಗಾಗಿ ವಸ್ತುನಿಷ್ಠತೆಯ ಆಚೆಗಿನ ಭಾವನಾನಿಷ್ಠತೆಯೇ ಚರಿತ್ರೆಯಾಗುತ್ತದೆ. ಗೆದ್ದವರ ದನಿಗಿಂತ ಸೋತವರ ದನಿಯೂ ಚರಿತ್ರೆಗೆ ಬಹಳ ಮುಖ್ಯ. ಸಾಹಿತ್ಯದ ಗುರಿ ಬರೀ ಪುರುಷನಷ್ಟೇ ಅಲ್ಲ. ಇದು ಮಹಿಳೆಯನ್ನು ಅವಲಂಬಿಸಿದೆ. ವರ್ಣ, ಜಾತಿ, ವರ್ಗ ಬೇಧಗಳಿಗಿಂತ ಲಿಂಗ ಬೇಧದ ಕ್ರೌರ್ಯ ನಮ್ಮ ಸಮಾಜದಲ್ಲಿ

ಹೆಚ್ಚು ಕಠಿಣವಾಗಿದೆ. ಉದ್ದಕ್ಕೂ ಜನಸಂಖ್ಯೆಯ ಅರ್ಧದಷ್ಟು ಪ್ರಮಾಣದಲ್ಲಿ ಕಾಣಬರುವ ಹೆಂಗಸರಿಗೆ ಮಾನವೀಯ ಹಕ್ಕುಗಳನ್ನು ಕಾಲಕಾಲಕ್ಕೆ ನಾನಾ ಬಗೆಗಳಲ್ಲಿ ನಿರಾಕರಿಸಲಾಗಿದೆ. ಹನ್ನೆರಡನೇ ಶತಮಾನದಿಂದೀಚೆಗೆ ಇದರ ಬಗ್ಗೆ ಧ್ವನಿಗಳು ಕೇಳಿ ಬಂದಿವೆ. ಬಹುಶಃ ಓಬವ್ವನ ಬಗೆಗಿನ ಲಿಖಿತ ಸಾಹಿತ್ಯವನ್ನು ಗಮನಿಸಿದಾಗ ಈ ಅಂಶವೂ ಈ ಚರಿತ್ರೆಯ ಮೇಲೆ ಪರಿಣಾಮ ಬೀರಿರಬಹುದೆಂಬ ಅಭಿಪ್ರಾಯಕ್ಕೆ ಬರಬಹುದು. ಇತಿಹಾಸದ ಉದ್ದವನ್ನು ನಾವು ಗಮನಿಸಿದರೆ ಅದರ ಉದ್ದಕ್ಕೂ ಅರ್ಧದಷ್ಟು ಹೆಂಗಸರು ಇದ್ದಾರೆ. ಆದರೂ ತತ್ವಜ್ಞಾನ, ಸಾಹಿತ್ಯ, ಕಲೆ, ಸಾಮಾಜಿಕ ಹಾಗೂ ಸಾರ್ವಕಾಲಿಕ ಮೌಲ್ಯಗಳು ಎಲ್ಲವೂ ಗಂಡಸಿನ ಮೇಲುಗೈತನಕ್ಕೆ ಸಾಕ್ಷಿಯಾಗಿವೆ. ಆದರೆ ಅಕ್ಕಮಹಾದೇವಿಯು ಮಾತ್ರ ಇಂತಹ ವಿವೇಕಶೂನ್ಯ ಸಂಗತಿಗಳಿಗೆ ಹೊರತಾದಳು. ಹೆಣ್ಣಾದ ಕಾರಣಕ್ಕೆ ಕಡಿಮೆಯೇನಲ್ಲ. ಗಂಡಾದ ಕಾರಣಕ್ಕೆ ಕೋಡುಗಳೇನು ಮೂಡಿ ನಿಲ್ಲುವುದಿಲ್ಲ ಎನ್ನುವ ದಿಟ್ಟ ಮನೋಭಾವ ಈಕೆಯದು. ಇನ್ನು ಇತಿಹಾಸದ ಉದ್ದಕ್ಕೂ ಒಂದೇ ಸಮನೆ ಮೂಲೆಪಾಲಾದ ಹೆಂಗಸರು ಜಾನಪದದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿರುವುದು ಅತ್ಯಂತ ಮಹತ್ವದ ಸಂಗತಿ. ಆದರೆ ಇವರೆಲ್ಲಾ ಅಕ್ಕನ ರೀತಿ ತಿರುಗಿ ಬೀಳುವ ಅವಕಾಶ ಇವರಿಗೆ ದೊರೆಯಲಿಲ್ಲ ಎಂಬುದನ್ನು ನಾವು ಮರೆಯಬಾರದು. ಆದರೆ ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಒಂದಕ್ಕೊಂದು ಕೊಡುವ ಕೊಳ್ಳುವ ಸಂಬಂಧವನ್ನು ಉಳಿಸಿಕೊಂಡಿವೆ. ಜನಪದ ಸಾಹಿತ್ಯದಲ್ಲಿ ನಿಯಮಗಳ ಬಂಧನ ಇರುವುದಿಲ್ಲ. ಕಾಲದೇಶಗಳನ್ನು ದಾಟುತ್ತದೆ. ಶಿಷ್ಟ ಸಾಹಿತ್ಯದಲ್ಲಿ ಕಂಡು ಬರುವ ಗುಣದೋಷಗಳೆಲ್ಲವೂ ಇಲ್ಲಿ ಕಾಣಿಸಿಕೊಂಡಿವೆ. ಸಾಹಿತ್ಯವನ್ನು ರಚಿಸುವ ಚರಿತ್ರೆಕಾರನಿಗೆ ಕೃತಿಗಳೇ ಪ್ರಧಾನ ಆಕರಗಳಾದರೂ, ಅವುಗಳ ನಿರ್ಮಾಣಕ್ಕೆ ಕಾರಣವಾದ ರಾಜಕೀಯ, ಸಾಮಾಜಿಕ, ಧಾರ್ಮಿಕ ಒತ್ತಡಗಳು ಕವಿಯ ಹಿನ್ನಲೆ ಮತ್ತು ಆಶಯಗಳು ಮುಂತಾದವನ್ನು ಗಮನದಲ್ಲಿರಿಸಿಕೊಂಡು ಕೃತಿಯ ಮತ್ತು ಕವಿಯ ನೆಲೆಬೆಲೆಗಳನ್ನು ನಿರ್ಧರಿಸಬೇಕಾಗುತ್ತದೆ. ಕವಿ ಬಯಸಿದ, ಬಯಸದಿದ್ದರೂ ಅವನನ್ನು ಮೀರಿದ ವಾಸ್ತವಗಳ ಅಡಗುವಿಕೆಯನ್ನು ಎತ್ತಿ ತೋರಿಸುವುದು ಸಾಹಿತ್ಯ ಚರಿತ್ರಕಾರರ ಕರ್ತವ್ಯವಾಗಿದೆ. ಹಾಗಾಗಿ ಶಿಷ್ಟ ಸಾಹಿತ್ಯ ಪ್ರಧಾನವಾದ ಅಭಿವ್ಯಕ್ತಿಯಾಗಿದೆ

ರಾಜಸತ್ತೆಯ ವೈಭವ : ರಾಜಸತ್ತೆಯ ಹುಟ್ಟಿನೊಂದಿಗೆ ಆರಂಭವಾದ ಶಿಷ್ಟ ಸಾಹಿತ್ಯ ನಿರ್ಮಾಣದ ಕೆಲಸ ಬಿಡುವಿದ್ದವರ ಮಾಧ್ಯಮವಾಗುವುದು ಅನಿವಾರ್ಯವಾಯಿತು. ಇದರೊಂದಿಗೆ ಸಮಾಜ ನಿಯಮಗಳನ್ನು ರೂಪಿಸುವ ತತ್ವ ಚಿಂತನೆಯನ್ನು ಹೇಳಲು ಸಾಹಿತ್ಯವನ್ನು ಅವರು ಬಳಸಿಕೊಂಡರು. ಚರಿತ್ರೆಯ ರಚನೆಯಲ್ಲಿ ಐತಿಹಾಸಿಕ ಸಾಮಗ್ರಿಗಳ ಕೊರತೆ ಕರ್ನಾಟಕದ ವಿಚಾರದಲ್ಲಿ ಮತ್ತೂ ಹೆಚ್ಚಾಗಿದೆ. ಕರ್ನಾಟಕದ ಸಾಹಿತ್ಯ ಚರಿತ್ರೆ ಪ್ರಾರಂಭವಾಗುವುದೇ ಕವಿಯ ಅಸ್ತಿತ್ವವನ್ನು ರಾಜ ಕಸಿದುಕೊಳ್ಳುವಂತಾಗಿರುವ ಸಂದರ್ಭದಿಂದ, ಕವಿರಾಜಮಾರ್ಗವನ್ನು ನೃಪತುಂಗ ಬರೆದನೆಂದು ಹೇಳುವಂತಾಗುವಷ್ಟರ ಮಟ್ಟಿಗೆ ಕವಿ, ರಾಜನಿಗೆ ದಾಸಾನುದಾಸನಾದದ್ದು. ಆ

ಯುಗದ ಐತಿಹಾಸಿಕ ವಸ್ತುವಾಗಿದೆ. ನೃಪತುಂಗನ ಆಳ್ವಿಕೆಯ ಕಾಲಕ್ಕೆ ಕರ್ನಾಟಕದ ರಾಜಸತ್ತೆ ತನ್ನೆಲ್ಲಾ ಲಕ್ಷಣಗಳನ್ನೂ ಕೂಡಿಸಿಕೊಂಡು ಪ್ರಬಲ ಶಕ್ತಿಯಾಗಿ ಬೆಳೆದಿತ್ತು. ರಾಜಸತ್ತೆಯ ಪ್ರಾಬಲ್ಯದ ಯುಗದಲ್ಲಿ ಸಮಾಜ ವ್ಯವಸ್ಥೆ ಅರೆಗುಲಾಮಿ ಮತ್ತು ಪೂರ್ಣಗುಲಾಮಿ ಪದ್ಧತಿಗಳೆರಡನ್ನೂ ಹೊಂದಿತ್ತು. ಯುದ್ಧದಲ್ಲಿ ಸೋತ ಸೈನಿಕರು, ನಾನಾ ವೃತ್ತಿಗಳಲ್ಲಿ ನಿರತರಾಗಿದ್ದ ಕೆಲಸಗಾರರೂ, ಭೂ ಸ್ವಾಮಿಗಳ ಜಮೀನುಗಳಲ್ಲಿ ಜೀತದಾಳುಗಳಂತೆ ದುಡಿಯುತ್ತಿದ್ದ ಕೆಲಸಗಾರರೇ ಮುಂತಾದವರು ಈ ವ್ಯವಸ್ಥೆಯ ಮೂಲವಾಗಿದ್ದರು. ಇವರ ಶ್ರಮದಿಂದ ಮೇಲ್ವರ್ಗಗಳೆಲ್ಲವೂ, ರಾಜಪರಿವಾರವೂ ಸೇರಿ ಬದುಕುತ್ತಿದ್ದರು. ಹಾಗಾಗಿ ರಾಜನ ಅನ್ನದ ಋಣವನ್ನು ತಾರಕಕ್ಕೇರಿಸಿ ಕೂಗಲು ಈ ವ್ಯವಸ್ಥೆಯಲ್ಲಿ ಎಲ್ಲಾ ಕಾರಣವೂ ಇತ್ತು. ವೀರ, ತ್ಯಾಗಗಳು ಶ್ರಮಿಕರು ಬಯಸಿದ ಗುಣಗಳಾಗಿರದೆ ಆ ವ್ಯವಸ್ಥೆಯ ಅನಿವಾರ್ಯ ಅಗತ್ಯಗಳಾಗಿದ್ದವು. ಕವಿಗಳು ತಮ್ಮ ಸುತ್ತಮುತ್ತಲಿನವರಿಗೆ ಬೇಕಾದ ವಿಚಾರಗಳನ್ನು ಮಾತ್ರ ಹೇಳದೆ, ತಾವು ಕಂಡ ಬದುಕನ್ನೂ ಹೇಳಿದ ಸಂದರ್ಭದಲ್ಲಿ ಕೃತಿ, ಧರ್ಮ ರಾಜಾಶ್ರಯಗಳ ಮಿತಿಯನ್ನು ದಾಟಿ ಬೆಳೆಯುತ್ತದೆ. ಹೀಗೆ ಬೆಳೆದ ಕೃತಿಗಳೇ ಆ ಯುಗದ ಜೀವನದ ಕನ್ನಡಿಗಳೂ ಆಗಿ ನಮಗೆ ಬೇಕಾದ ಕೃತಿಗಳಾಗುತ್ತವೆ. ಕಳೆದ ಐದು ದಶಕಗಳಲ್ಲಿ ಕನ್ನಡ ಸಾಹಿತ್ಯದ ದಾರಿ ಸಾಮಾಜಿಕ ವಿಷಯಗಳನ್ನು ಕುರಿತದ್ದಾಗಿದೆ. ಜಾತಿ ಪದ್ಧತಿಯ ತಾರತಮ್ಯಗಳಿಂದ ಕಾವ್ಯ ಪ್ರೇರಿತವಾಗಿದೆ. ಸ್ತ್ರೀವಿಮೋಚನಾ ಚಳುವಳಿಗಳು ಸ್ತ್ರೀಕಾವ್ಯ-ಪ್ರಕಾರಕ್ಕೆ ಎಡೆಮಾಡಿಕೊಟ್ಟಿವೆ. ಸಣ್ಣಕಥೆಗಳು ಹಾಗೂ ಭಾವಗೀತೆಗಳು ಸಹ ಇಪ್ಪತ್ತನೆ ಶತಮಾನದಲ್ಲಿ ಜನಪ್ರಿಯವಾದ ಸಾಹಿತ್ಯ ಪ್ರಕಾರಗಳು.

ಶಿಷ್ಟ ಸಾಹಿತ್ಯ : ದೇಸೀ ಸಾಹಿತ್ಯವೇ ಶಿಷ್ಟ ಸಾಹಿತ್ಯ. ಕನ್ನಡ ದೇಸೀ ಸಾಹಿತ್ಯವೂ ಶಿಷ್ಟ ಸಾಹಿತ್ಯಕ್ಕೆ ಸಮೃದ್ಧತೆಯನ್ನು ತರುವುದರ ಮೂಲಕ ಪ್ರಧಾನ ಅಭಿವ್ಯಕ್ತಿಯನ್ನು ಸಾಧ್ಯ ಮಾಡಿದೆ. ಕನ್ನಡ ದೇಸಿಗೆ ಪರಂಪರೆ ಇದೆ. ಕನ್ನಡ ಸಾಹಿತ್ಯ ಭಾಷೆ ರೂಪುಗೊಂಡ ಸಂದರ್ಭದಿಂದ ದೇಸೀಯತೆಯ ಬೇರುಗಳನ್ನು ಗುರುತಿಸಬಹುದು. 'ಗಾಥಾಸಪ್ತಶತಿ'ಯಲ್ಲಿ "ಪೊಟ್ಟ ತೀರ, ತುಪ್ಪಪಳ್ಳಿ" ಮೊದಲಾದ ಹಲವು ಅಚ್ಚಗನ್ನಡ ಪದಗಳು ಕಾಣಿಸಿಕೊಳ್ಳುವುದರಿಂದ ಅಲ್ಲಿ ಹಲವಾರು ದೇಸೀ ಹಾಡುಗಳು, ಕಬ್ಬಗಳು ಉಂಟಾಗಿರಬಹುದೆಂದು ಪಂಡಿತ ಮುಳಿಯೆ ತಿಮ್ಮಪ್ಪಯ್ಯನವರು ಗುರುತಿಸುತ್ತಾರೆ. ನಾಡಿನ ಸಾರ್ವಜನಿಕವಾದ ಸಂಸ್ಕೃತಿಯ ಸಾರವೆಂದರೆ ದೇಸೀ, ಶಿಷ್ಟ ಕಾವ್ಯದ ಉತ್ಕೃಷ್ಟ ಕೃತಿಗಳನ್ನು ದೇಸಿಯ ಶೈಲಿಯಲ್ಲಿ ರಚಿಸಿ ಮಹಾಕವಿ ಪಂಪ ಆ ಮೂಲಕ ದೇಸೀಯ ಮಹತ್ವ ಎತ್ತಿಹಿಡಿದಿರುವುದು ಆ ಕಾಲದ ದೇಸೀ ಸಾಂದರ್ಭಿಕತೆಯನ್ನು ಸ್ಪಷ್ಟಪಡಿಸುತ್ತದೆ. ಬಾದಾಮಿ ಶಾಸನದಲ್ಲಿ (ಕ್ರಿ.ಶ.೭೫೦) ಕಾಣಿಸಿಕೊಂಡ ತ್ರಿಪದಿಗಳು ಕನ್ನಡ ದೇಸೀಯ ಮೊದಲ ಹೆಗ್ಗುರುತುಗಳಾಗಿವೆ. "ಸಾಧುಂಗೆ ಸಾಧು, ಮಾಧುರ್ಯಂಗೆ ಮಾಧುರ್ಯ" ಎನ್ನುವಲ್ಲಿ ಭಾಷೆ ಶಿಷ್ಟವಾದರೂ ವಿಚಾರ ಮಾತ್ರ ಜನಪದವೇ ಆಗಿದೆ. ಬಾದಾಮಿ ಶಾಸನದ ತ್ರಿಪದಿಯಿಂದ ಗರತಿಯರ ಹಾಡಿನ ತ್ರಿಪದಿಯವರೆಗೆ ಕನ್ನಡ ದೇಸೀ ಜನಪದದ ತ್ರಿವಿಕ್ರಮ ಸಾಧನೆ ನಮ್ಮ

ಕಣ್ಣೆದುರಿಗೆ ಇದೆ. ಅದು ನಮ್ಮ ಕಾವ್ಯದಲ್ಲಿ ಬೇರೆ ಬೇರೆ ಸ್ಥಾನಗಳಲ್ಲಿ ಸ್ಥಾನ ಪಡೆದುಕೊಳ್ಳುತ್ತಾ ಗುರುತಿಸಿಕೊಂಡು ಬಂದಿರುವುದು ಅದರ ಹಿರಿಮೆಯನ್ನೇ ಸಾರುತ್ತದೆ. ಮುಂಚಿನಿಂದಲೂ ಪ್ರವಹಿಸಿಕೊಂಡು ಬಂದ ದೇಸೀಯ ಸಂಭ್ರಮ ಸಿದ್ಧಿಗಳು, ವಚನಕಾರರು, ದಾಸರು ಜನಪದರ ಮೂಲಕ ಮುನ್ನಡೆಸುತ್ತಾ ಬಂದು ಕನ್ನಡ ನವೋದಯ ಕಾವ್ಯ ಹುಟ್ಟಿಗೆ ಕಾರಣವಾದದ್ದು ಆಧುನಿಕೋತ್ತರ ಕನ್ನಡ ಕಾವ್ಯ ಚರಿತೆಯ ಮಹತ್ವ ಸಾಧನೆಯಾಗಿದೆ.

ಎಲ್ಲಾ ಭಾಷೆಗಳ ಬೆಳವಣಿಗೆಯಲ್ಲಿ ಇರುವಂತೆ, ಕನ್ನಡ ನಾಡಿನಲ್ಲೂ ಲಿಪಿ ಬಳಕೆಗೆ ಬರುವ ಮುನ್ನವೇ 'ಸಾಹಿತ್ಯ' ಚಟುವಟಿಕೆ ನಡೆಯುತ್ತಿದ್ದುದು ಸಾಮಾನ್ಯ ಸಂಗತಿಯಾಗಿತ್ತು. ಜನ ಬಳಸುವ ಎಷ್ಟೋ ಭಾಷೆಗಳು ಲಿಪಿ ಇಲ್ಲದೆ ಕೇವಲ 'ಬಾಯಿ ಮಾತಿನ'ವಾಗಿ ಈಗಲೂ ಬದುಕಿರುವುದನ್ನೇ ನೋಡಿದರೆ, ಇದೇನು ಆಶ್ಚರ್ಯದ ಸಂಗತಿಯಲ್ಲ. ಜನತೆ ತಮ್ಮ ವಿಶಿಷ್ಟ ಅನುಭವಗಳನ್ನು ಮತ್ತೊಬ್ಬರಿಗೆ ಮುಟ್ಟಿಸಬೇಕೆಂದು ಆಸೆ ಪಟ್ಟ ಸಂದರ್ಭಗಳಲ್ಲಿ, ಅವು ಬೇರೆ ಬೇರೆ ರೂಪಗಳಲ್ಲಿ ಮೈ ತಳೆದಿರುವ ಸಾಧ್ಯತೆಗಳಿವೆ.

ಬರಹಕ್ಕಿಂತ ಪ್ರಾಚೀನವಾದ ಭಾಷೆಯಲ್ಲಿ ಕಾವ್ಯ, ಕಥೆ, ಒಗಟು ಗಾದೆಗಳು ಹುಟ್ಟಿ, ಬಾಯಿಂದ ಬಾಯಿಗೆ ಸಾಗುತ್ತಾ, ತಲೆಮಾರಿನಿಂದ ತಲೆಮಾರಿಗೆ ರವಾನೆಯಾಗುತ್ತಿದ್ದವು. ವೇದಗಳು ಬಾಯಿಂದ ಬಾಯಿಗೆ ಸಾಗಿಯೇ ಉಳಿದು ಬಂದ ಹಿನ್ನೆಲೆಯಲ್ಲಿ ಎಷ್ಟೋ ಶತಮಾನಗಳ ಜನಪದ ಸಾಹಿತ್ಯದ ಪರಂಪರೆ ಇದ್ದೇ ಇದೆ ಎಂಬುದನ್ನು ಗಮನಿಸಬೇಕಾದ ಸಂಗತಿ. ಹನ್ನೊಂದನೇ ಶತಮಾನದ ಕೊನೆಯವರೆಗಿನ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಗಮನಿಸಿದಾಗ ಅದು ಚಾರಿತ್ರಿಕ ಬೆಳವಣಿಗೆಯನ್ನು ಅನುಸರಿಸಿಕೊಂಡೇ ಬೆಳೆದಿರುವುದು ಸ್ಪಷ್ಟವಾಗುತ್ತದೆ.

ಪೂರ್ವ ದಾಖಲೆಗಳು ಲಭ್ಯವಾಗದಿದ್ದಾಗ ಆ ಘಟನೆ ಅಥವ ಆ ವ್ಯಕ್ತಿಯೇ ಇಲ್ಲವೆಂದೇ ತೀರ್ಮಾನಿಸುವುದು ಸತ್ಯಕ್ಕೆ ಚ್ಯುತಿ ಎಸಗಿದಂತಾಗುತ್ತದೆ. ಸಮಾಜದಲ್ಲಿನ ಹಲವಾರು ಅನಿವಾರ್ಯ ನ್ಯೂನ್ಯತೆಗಳಿಂದಾಗಿ ಸರ್ವರೂ ಸರ್ವ ಘಟನೆಗಳಿಗೂ ದಾಖಲೆಗಳನ್ನಿಡುವುದು ದುಸ್ಸಾಧ್ಯ. ಇಂಥಹ ರೋಮಾಂಚಕಾರಿ ಘಟನೆಯೇ ಓಬವ್ವನ ಸಾಹಸಗಾಥೆ. ಈ ಸಾಹಸಗಾಥೆಯನ್ನು ತಿಳಿಸುವಲ್ಲಿ ನಮಗೆ ಶಿಷ್ಟ ಸಾಹಿತ್ಯದಲ್ಲಿ ಬೆರಳಿಕೆಯಷ್ಟು ಬರಹಗಳು ದೊರೆತಿವೆ. ಉಳಿದಂತೆ ಮೌಖಿಕ ಸಾಮ್ರಾಜ್ಯದಲ್ಲಿ ಆದರ್ಶನಾರಿಯಾಗಿ. ಶಕ್ತಿಸಾಮರ್ಥ್ಯದ ಗಣಿಯಾಗಿ ಬೆಳಗಿದ ಅಪೂರ್ವ ವ್ಯಕ್ತಿಯಾಗಿದ್ದಾಳೆ. ಇಂಥಹ ನಾರೀಮಣಿಯನ್ನು ಕುರಿತು ಸಾಹಿತ್ಯವೇನಾದರೂ ಇದೆಯಾ ಎಂದು ಹುಡುಕಾಡಿದರೆ ಬೆರಳೆಣಿಕೆಯಷ್ಟು ಕೃತಿಗಳಲ್ಲಿ ಓಬವ್ವನ ಪ್ರಸ್ತಾಪ ಕಂಡುಬರುತ್ತಿದೆ.

೪.೨. ನಾಟಕಗಳು : ನಾಟಕಗಳು ದೃಶ್ಯ ಮಾಧ್ಯಮದ ಪ್ರಕಾರಗಳಲ್ಲಿ ಪ್ರಮುಖವಾದವು ಆಗಿವೆ. ಇವು ಜನರ ಮನಸ್ಸಿನ ಮೇಲೆ ನೇರವಾಗಿ ಪ್ರಭಾವ ಬೀರುವಂಥಹವು. ಇವು ಪ್ರಬಲ ಸಂವಹನ ಮಾಧ್ಯಮಗಳೂ ಹೌದು. ಸಾಹಿತ್ಯ ಕ್ಷೇತ್ರದಲ್ಲಂತೂ ಇವುಗಳ ಪ್ರಭಾವ ಹೆಚ್ಚು. ಅನಕ್ಷರಸ್ಥರಿಗೆ, ಮುಗ್ಧ ಜನರಿಗೆ ನಾಟಕಗಳು ಬೇಗ ಅರ್ಥವಾಗುತ್ತವೆ.ಹಳ್ಳಿ ಜನರಲ್ಲಿ ನಾಟಕದ ಗೀಳು ಇನ್ನೂ

ಇರುವುದರಿಂದಲೇ ಈ ಮಾಧ್ಯಮ ಇನ್ನೂ ಜೀವಂತವಾಗಿದೆ. ಈ ನಾಟಕಗಳು ಸಾವಿರಾರು ಜನರನ್ನು ಸೇರಿಸುವ ಮತ್ತು ನೈತಿಕ ಪ್ರಜ್ಞೆ, ಸಾಮಾಜಿಕ ಶಿಕ್ಷಣ ನೀಡಬಲ್ಲ ಶಕ್ತಿಯಾಗಿವೆ. ಮನರಂಜನೆಯ ಜೊತೆಗೆ ಆತ್ಮಸ್ಥೈರ್ಯ ತುಂಬುವಂಥಹವು. ಹಾಗೆಯೇ ತಮ್ಮ ನಡುವೆ ಆಗಿ ಹೋದ ವೀರರ, ಜನಪದರ ಜೀವನ ಚರಿತ್ರೆಗಳನ್ನೇ ಮುಖ್ಯ ಭೂಮಿಕೆಯನ್ನಾಗಿ ಆರಿಸಿಕೊಂಡು ರಂಗದ ಮೇಲೆ ಅವರನ್ನು ಮತ್ತೆ ನೆನಪಿಸುತ್ತಾ ತಮ್ಮೊಳಗೆ ಅವರ ಜೀವಂತಿಕೆಯನ್ನು ಉಳಿಸಿ ಬೆಳೆಸುತ್ತಾರೆ. ಕರ್ನಾಟಕದ ಹೆಗ್ಗೋಡಿನಲ್ಲಿರುವ ರಂಗಾಯಣ ಎಂಬ ಸಂಸ್ಥೆ ಕರ್ನಾಟಕದ ಸಾಂಸ್ಕೃತಿಕ ಭೂಪಟದಲ್ಲಿ ಮಹತ್ವದ ಸ್ಥಾನ ಪಡೆದಿದ್ದು ನಾಟಕಗಳ ಪ್ರದರ್ಶನದಿಂದಲೇ. ಕುವೆಂಪು, ಗಿರೀಶ್ ಕಾರ್ನಾಡ್, ಮಾಸ್ತಿ, ಶ್ರೀರಂಗ, ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಸಂಸ ಮತ್ತು ಬೀಚಿ ಮುಂತಾದವರ ಕೃತಿಗಳು ಇಲ್ಲಿ ಪ್ರದರ್ಶಿತವಾಗಿವೆ. ಇಂಥಹ ಪ್ರಮುಖ ಸಮೂಹ ಮಾಧ್ಯಮವಾದನಾಟಕ ಮಾಧ್ಯಮದಲ್ಲಿ ಓಬವ್ವನನ್ನು ಚಿತ್ರಿಸಿದವರು ಶ್ರೀ ವೀರನಾಯ್ಕರು.

ದುರ್ಗದ ಸಿಂಹಿಣಿ ಓಬವ್ವ" : ನಾಟಕವನ್ನು ಶ್ರೀಯುತ ವೀರನಾಯ್ಕರು ೧೯೮೭ ರಲ್ಲಿ ಬರೆದಿದ್ದು ನಾಯಕ ಸಾಮ್ರಾಜ್ಯದಲ್ಲಿ ಸೇವೆಸಲ್ಲಿಸಿದ ಹಲವಾರು ಜನಾಂಗಗಳಲ್ಲಿ ಛಲವಾದಿ ಜನಾಂಗವೂ ಒಂದು. ಈ ಜನಾಂಗದ ಮಹಿಳೆ ಚಿತ್ರದುರ್ಗ ಚರಿತ್ರೆಯಲ್ಲಿ ಹೆಸರು ಮಾಡಿದ ಓಬವ್ವೆಯ ವೃತ್ತಾಂತವನ್ನು, ಚಾರಿತ್ರಾತ್ಮಕವಾದ ಸತ್ಯ ಘಟನೆಯನ್ನೇ ಆಧರಿಸಿ ದುರ್ಗ ಮತ್ತು ಓಬವ್ವ ಜನ್ಮ ತಾಳಿದ ಗುಡೇಕೋಟೆಯ ಸಂಬಂಧವನ್ನು 'ದೃಶ್ಯ ೨' ರಲ್ಲಿ ಓಬವ್ವೆ ಮದ್ದಹನುಮಪ್ಪರ ವಿವಾಹ, ಆಚರಣೆಗಳನ್ನು ನೈಜಕ್ಕೆ ಹತ್ತಿವಾಗಿರುವ ಹಾಗೆ ಬರೆದಿದ್ದಾರೆ. ನಾಟಕದ ಕಥಾವಸ್ತುವಿನ ಪಾತ್ರ ಚಿತ್ರಣ ಮಾತ್ರ ಚಾರಿತ್ರಿಕವಾದುದೇ ಆಗಿದೆ. ಚರಿತ್ರೆಯನ್ನು ಪ್ರೀತಿಸಿ, ಆ ಕ್ಷೇತ್ರದಲ್ಲಿ ಕೃಷಿಗೈದ ಕೀರ್ತಿ ವೀರನಾಯ್ಕರಿಗೆ ಸೇರಬೇಕಾಗಿದೆ. ದುರ್ಗದ ಇತಿಹಾಸವನ್ನು ಪ್ರೀತಿಸಿದ, ದುಡಿದ, ತಮ್ಮ ಅದ್ಭುತ ಬರವಣಿಗೆಯಿಂದ ಇತಿಹಾಸದ ಪುಟಗಳನ್ನು ತೆಗೆದಿಟ್ಟ ವೀರನಾಯಕರಿಗೆ ಅಭಿಮಾನ ಪೂರ್ವಕ ನಮನ. ತಮ್ಮ ದುರ್ಗದ ಇತಿಹಾಸದಲ್ಲಿ ಮಹಿಳೆಯ ಸಾಹಸವನ್ನೇ ಪ್ರಮುಖ ಕಥಾ ವಸ್ತುವನ್ನಾಗಿ ತೆಗೆದುಕೊಡು ಈ ನಾಟಕ ರಚಿಸಿದ್ದಾರೆ ಎಂಬುದು ನಮಗೆ ಜೋಯಿಸರ ಕೃತಿಗಳಿಂದ ಅವರ ಮಾತುಗಳಿಂದ ವೇದ್ಯವಾಗುತ್ತದೆ. ಅವರ ಕೃತಿಗಳಲ್ಲಿ ಈ ಕೃತಿಯ ಪ್ರಸ್ತಾಪವಿದೆ. ನಾಟಕದ ಪ್ರತಿ ಲಭ್ಯವಿಲ್ಲ. ಒಟ್ಟಾರೆ ಹರಿತಿಸಿರಿಯ ಸೆರಗಿನಲ್ಲಿ ಮುಚ್ಚಿಟ್ಟ ಮಾಣಿಕ್ಯದಂತೆ ಓಬವ್ವ ಇತಿಹಾಸದುದ್ದಕ್ಕೂ ಮಿಂಚುತ್ತಾ ಬಂದಿದ್ದಾಳೆ. ದುರ್ಗದ ಸಿಂಹಣಿ ಎಂಬ ಶೀರ್ಷಿಕೆಗೆ ಅನ್ವರ್ಥಳಾಗಿದ್ದಾಳೆ.

೪.೩. ಕಾದಂಬರಿಗಳು : 'ವಿಶ್ವ ಸಿಡಿದೊಡೆಯದಂತೆ ಕಾಪಾಡಬಲ್ಲದು ಮಾನವೀಯತೆಯೊಂದೇ' ಎಂಬ ಕರೆ ನೀಡಿದ ಅನಕೃರವರನ್ನು ನಮ್ಮ ಕನ್ನಡ ಸಾಹಿತ್ಯಲೋಕ ಕಾದಂಬರಿ ಸಾರ್ವಭೌಮನೆಂದೇ ಪರಿಚಯಿಸಿದೆ. ಕಾದಂಬರಿಗಳು ಕಥಾವಸ್ತುವನ್ನು ಇರುವಂತೇಯೇ ಕಣ್ಣ ಮುಂದೆ ತರುತ್ತವೆ. ಕಾದಂಬರಿಗಳು ಪ್ರಸ್ತು ಸಮಾಜದಲ್ಲಿ ನೆಡೆಯುತ್ತಿರುವ ಘಟನೆಗಳನ್ನು ಆಧಾರವಾಗಿಟ್ಟುಕೊಂಡೇ

ರಚಿಸಿರುವುದು ಬಹುತೇಕ ಸಂದರ್ಭಗಳಲ್ಲಿ ಖಚಿತ. ಅವು ಸಾಮಾಜಿಕವಾಗಿರಬಹುದು, ಐತಿಹಾಸಿಕವಾಗಿರಬಹುದು, ಧಾರ್ಮಿಕವಾಗಿರಬಹುದು. ಆದರೆ ಅವು ಆಯಾ ಕಾಲಘಟ್ಟಕ್ಕೆ ಸಂಭಂಧಿಸಿದಂಥಹವು ಆಗಿರುತ್ತವೆ. ಕಥಾ ವಸ್ತು ಏನೇ ಆಗಿದ್ದರೂ ಕಣ್ಣಿಗೆ ಕಟ್ಟುವಂತೆ ಅದು ನಮ್ಮನ್ನು ತನ್ನತ್ತ ಕರೆದೊಯ್ಯುವುದೇ ಕಾದಂಬರಿ ಲೋಕ. ಓಬವ್ವನ್ನಿಗೆ ಸಂಬಂಧಿಸಿದಂತೇ ಹಲವಾರು ಕಾದಂಬರಿಗಳಲ್ಲಿ ಉಲ್ಲೇಖ ಬಂದಿದೆ. ಅವುಗಳಲ್ಲಿ ಪ್ರಮುಖವಾದವನ್ನು ಹೆಸರಿಸಿದೆ.

೧. **ದುರ್ಗಾಸ್ತಮಾನ :** ತ.ರಾ.ಸು ತಮ್ಮ 'ದುರ್ಗಾಸ್ತಮಾನ' ಕಾದಂಬರಿಯಲ್ಲಿ ಓಬವ್ವೆಯ ಬಗ್ಗೆ ಬರೆದಿದ್ದಾರೆ. ಚಿತ್ರದುರ್ಗದ ಜನರಿಗೆ ದುರ್ಗ, ಕೋಟೆ, ಬೆಟ್ಟ ಇವೆಲ್ಲವೂ ಕರುಳಿಗೆ ಹೊಂದಿಕೊಂಡ ವಸ್ತುಗಳೆಂಬುದನ್ನು ಸೂಕ್ಷ್ಮವಾಗಿ ನಿವೇದಿಸಿದ್ದಾರೆ ತಮ್ಮ ಈ ಕೃತಿಯಲ್ಲಿ. ತಮ್ಮ ಕಾದಂಬರಿಯಲ್ಲಿನ ಐತಿಹಾಸಿಕ ಪಾತ್ರ ಚಿತ್ರಣಗಳನ್ನು ಓದಿದ ಯಾರು ಬೇಕಾದರೂ ನಂಬಲರ್ಹವಾದ ಐತಿಹಾಸಿಕ, ಪ್ರಾಮಾಣಿಕ ದಾಖಲೆಗಳನ್ನು ತೋರಿಸಿ 'ತಮ್ಮ ಕಲ್ಪನೆ ತಪ್ಪು' ಎಂದು ಸಾಬೀತು ಮಾಡುವುದಾದರೆ 'ಆ ಮಟ್ಟಿಗೆ ತಾವು ತಪ್ಪಿತಸ್ಥ' ಎಂದು ಒಪ್ಪಿಕೊಳ್ಳಲು ಸದಾ ಸಿದ್ಧವಿರುವುದಾಗಿ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಒಂದು ಐತಿಹಾಸಿಕ ಕಾದಂಬರಿಯನ್ನು ಬರೆಯುವಾಗ ತಲೆ ಬುಡವಿಲ್ಲದ ಕಲ್ಪನಾ ಕುದುರೆಯ ಸವಾರಿ ಮಾಡುವುದು ಐತಿಹಾಸಿಕ ಕಾದಂಬರಿಕಾರನ ಲಕ್ಷಣವಲ್ಲ. ಇಂಥಹ ಕೃತ್ಯ ಇತಿಹಾಸಕ್ಕೆ ಮತ್ತು ಸಮಕಾಲೀನ ಜನತೆಗೆ ಬಗೆವ ದ್ರೋಹ ಎಂಬುದನ್ನು ನೇರವಾಗಿ ಅಲ್ಲದಿದ್ದರೂ ತಮ್ಮ ನಿಲುವನ್ನು ಪರೋಕ್ಷವಾಗಿ ತಿಳಿಸಿದ್ದಾರೆ. ಸತ್ಯಕ್ಕೆ ಹತ್ತಿರವಾದ ಐತಿಹಾಸಿಕ ಕೃತಿ ದುರ್ಗಾಸ್ತಮಾನ ಎಂಬುದನ್ನು ದೃಢಪಡಿಸಿದ್ದಾರೆ. ಇದರಲ್ಲಿ ಹೈದರಾಲಿಯ ದಾಳಿಯಿಂದ ಹೈರಣವಾದ ವೀರ ಮದಕರಿನಾಯಕ ಶಾಂತಿಗಾಗಿ ತನ್ನ ತಾಯಿ ಓಬವ್ವ ನಾಗತಿಯ ಸಮಾದಿ ಬಳಿ ಬಂದು ಆಕೆಯ ಗಂಡಾಳ್ತವನ್ನು ನೆನೆಯುತ್ತಾ ಆಕೆಯ ಸಮಾದಿಯ ಮುಂದೆ ತಾನೂ ಅದರ ಬಳಿ ಹರಿವ ಹುಳುವಿಗಿಂತಲೂಅಲ್ಪನಂತೆ ಕಂಡು, ತಲೆತಗ್ಗಿಸಿ ಕುಳಿತು ಬಿಟ್ಟನು.

ಮೈಯಶಕ್ತಿ ಸೋರಿ ಹೋದಂತೆ ಬರಡಾಗಿ ಕುಳಿತಿರುವಾಗ ತಾನು ಕುಳಿತ ಗುಡ್ಡದ ಕೆಳಭಾಗದಲ್ಲಿ ಹೆಂಗಸೊಬ್ಬಳು ಏರುಧ್ವನಿಯಲ್ಲಿ ಏನನ್ನೋ ಹೇಳುತ್ತಿರುವ ಮಾತು ಕೇಳಿ ರೋಮಾಂಚಿತನಾದ. ಏನೆಂದರೆ ಆ ಹೆಣ್ಣು ಬೇರಾರು ಆಗಿರದೆ ತ.ರಾ.ಸು ಅವರು ಐತಿಹಾಸಿಕ ವ್ಯಕ್ತಿ ಚಿತ್ರಣದಲ್ಲಿ ಕಂಡ ಓಬವ್ವ, ತನ್ನ ಗಂಡ ಮದ್ದಹನುಮಪ್ಪನ ಹತ್ತಿರ ತನ್ನ ಧಣಿಯ ಬಗ್ಗೆ 'ಅದೇನು ಆಕಾಶ ಕಡಕೊಂಡು ಬಿದ್ದ ಸುದ್ದಿ ಹಂಗೆ ಹೇಳ್ತಿಯ–ನವಾಬನಿಗೆ ಹಣ ಕೊಟ್ಟು ಕಳಿಸ್ತಾರೇಂತ, ಏನು ಮೂರು ಲಕ್ಷ ವರಹ ತಗೊಂಡೋದ್ರೆ ನವಾಬ ಏನು ದುರ್ಗಾನ ಕಿತ್ಕೊಂಡು ಹೋದ್ನಾ? ಕೋಟೆಕೊತ್ತಲ ಕಿತ್ತು ಹೆಗಲ ಮೇಲೆ ಹೊತ್ತುಕೊಂಡು ಹೋದ್ನ? ಪುಡಿಗಾಸು ಹೋದ್ರೆ ಹೋಯ್ತು– ಮೈಮೇಲೆ ಬಂದ ಮಾರಮ್ಮ ಮೀಸಲು ಕಾಸು ತಗೊಂಡ್ಹೋದಾಗೆ ಹೋಗ್ಲಿ ಕೋಟೆ ಇದೆ, ಜನ ಇದಾರೆ ಮಾತ್ರ ಸೇನೆ ಕಟ್ಟಿ, ಜಿದ್ದಿನಿಂದ ಗೆದ್ದು, ಸೋತ ನವಾಬನ ಮೀಸೆ ಬೋಳಿಸಿ ದಂಡಿನಾಗೆ ಅವನ ಮೆರವಣಿಗೆ ಮಾಡಿಸ್ತಾರ ನಮ್ಮ ರಾಜರು. ಇಂಥ ಹತ್ತು

ಯುದ್ಧ ಹಾಗೆ ಸೋತ್ರೂ ಹಿಡಿದ ಜಿದ್ದು ಬಿಡೋರಲ್ಲ. ನಮ್ಮ ನಾಯಕರು, ಹೋಗೋ ನಿನ್ನ– ಒಂದು ನಕ್ಷತ್ರ ಬಿದ್ರೆ ಆಕಾಶ ಹಾಳಾಯ್ತಾ, ಒಂದೆಲೆ ಬಿದ್ರೆ ಮರ ಬೋಳಾಯ್ತಾ? ನಮ್ಮ ದುರ್ಗ ಅರಳೀಮರ ಇದ್ದಾಂಗೆ, ಒಂದೆಲೆ ಬಿದ್ರೆ ಹತ್ತೆಲೆ ಚಿಗುರುತ್ತದೆ. ನನ್ನ ಮುಂದೆ ಹೇಳಿದ ಮಾತನ್ನ ಇನ್ಯಾರ ಮುಂದಾದ್ರೂ ಆಡೀಯೆ ದಂಡೀನ ಕಾಳೆ ಊದೋ ಗಂಡಸು, ಇಂಥ ಮಾತು ಆಡೋದು? ಹೋಗ್ಹೋಗು– ಇಂಥಾ ಮಾತೆಲ್ಲಾ ನಾನಂಬಾಕಿಲ್ಲ, ಹೋಗ್ಲಿ–ಅದೇನು ಕಿತ್ಕೊಂಡು ಹೋಗ್ತಾನೋ ನವಾಬ ಇವತ್ತು ತಗೊಂಡೋಗ್ಲಿ, ಇವತ್ತಲ್ಲ ಇನ್ನಾರು ತಿಂಗಳಿಗೆ, ಇನ್ನಾರು ವರ್ಷಕ್ಕಾದ್ರು ದುರ್ಗದ ಕೋಟೆ ಬಾಗಿಲ್ಗೆ, ಇದೇ ನವಾಬನ ಬಾಯ್ಲೇ 'ತೋಬಾ–ತೋಬಾ' ಅಂತ ನಮ್ಮ ನಾಯಕರು ಅನ್ನಿಸದಿದ್ರೆ ಈ ಕೋಟೆ ಬಾಗಿಲ ಹನುಮಪ್ಪನಿಗೆ ನನ್ನ ತಲೆ ಕೊಡ್ತೀನಿ, ದುರ್ಗದಾಗೆ ಗಂಡ್ಸಾಗಿ ಹುಟ್ಟಿ ಇಂಥ ಮಾತಾಡೋಕೆ ನಿಂಗೆ ನಾಚ್ಗೆ ಆಗೋಲ್ವಾ?',–ಎಂದು ರೋಷದಿಂದ ಮಾತನಾಡುತ್ತಿರುತ್ತಾಳೆ.

ಇಂಥಾ ಮಾತುಗಳನ್ನು ಕೇಳಿದ ನಾಯಕನ ಮೈಯ್ಯಲ್ಲಿ ಹೊಸ ಬಿಸಿರಕ್ತ ಸಂಚರಿಸಿದಂತಾಗಿ ಮೈಕೊಡವಿ ಎದೆಸೆಟೆಸಿ ಚಿತ್ರದುರ್ಗ ಅಶ್ವತ್ಥವೃಕ್ಷವಿದ್ದಂತೆ ಎಂಬ ಮಾತಿನ ಸತ್ಯದಿಂದ ಭರವಸೆಯ ದೃಷ್ಟಿಯಿಂದ ಸಮಾಧಿಯತ್ತ ದಿಟ್ಟಿಸಿ ತನ್ನಲ್ಲಿ ಚೈತನ್ಯದ ಸೆಲೆ ತುಂಬಿದ ಹೆಣ್ಣಾರು ಇರಬಹುದೆಂದು ಕಾಣಲು ಗುಡ್ಡವಿಳಿದು ಬಂದವನಿಗೆ ತಾವು ಛಲವಾದಿ ಜನಾಂಗದವರು ಕಾಳೆ ಬತೇರಿ ಚಾಕರಿಯವನು, ತನ್ನ ಹೆಂಡತಿ ಎಂದು ಪರಿಚಯಿಸಿಕೊಂಡು ಹೆಸರು ಓಬಿ ಎಂದು ಹೇಳಿದ ತಕ್ಷಣ ನಾಯಕನಿಗೆ ತನ್ನ ತಾಯಿ ಓಬವ್ವ ನಾಗತಿಯೇ ಈ ಹೆಣ್ಣಿನ ರೂಪದಲ್ಲಿ ಬಂದು ತನ್ನೆದೆಯಲ್ಲಿ ಹೊಸ ಚೈತನ್ಯ ತುಂಬಿದಂತೆ ಅನ್ನಿಸಿತು. ಆಕೆಯ ಹುಟ್ಟೂರು, ಆಕೆ ದೇಶ್‌ಬಾಗ್ ದಂಡಿನಲ್ಲಿದ್ದುದ್ದು, ಮದುವೆಯಾಗಿ ದುರ್ಗಕ್ಕೆ ಬಂದುದು, ಎಲ್ಲಾ ಪರಿಚಯ ಮಾಡಿಕೊಂಡಳು. ನಂತರ ದೊರೆಯ ಕಾಲಿಗೆ ನಮಸ್ಕರಿಸಲು ಹೋದವಳಿಗೆ, ಗಂಡ ದೊರೆಯನ್ನು ಮುಟ್ಟಬಾರದು ಎಂದಾಗ ದೊರೆಯಿಂದ ಬಂದ ಮಾತು, ದೊರೆಗೆ, ದೇವರಿಗೆ, ದಂಡಿಗೆ ಜಾತಿ ಇಲ್ಲಾ ಎಂಬ ಮಾತು ಅಂದಿನ ಕಾಲದ ಒಡೆಯನಿಗೆ ಪ್ರಜೆಗಳ ಮೇಲೆ ಇದ್ದ ಪ್ರೀತಿಯನ್ನು ತರಾಸು ತಮ್ಮದೇ ಆದ ಧಾಟಿಯಲ್ಲಿ ತಿಳಿಸಿದ್ದಾರೆ. ಇಡೀ ದುರ್ಗಾಸ್ತಮಾನದ ಕೃತಿಯಲ್ಲಿ, ನಾಯಕನ ಹೋರಾಟ, ಓಬವ್ವನಾಗತಿಯು ಓಬವ್ವನಿಗೆ ಹೋಲಿಕೆ, ಇದು ಪ್ರಮುಖ ಘಟ್ಟವಾಗಿ ಕಾಣಿಸುತ್ತದೆ. ಊಳಿಗದವಳನ್ನು ರಾಜಮಾತೆಗೆ ಹೋಲಿಸುವಂಥಹ ಮಹಾನ್ ಧೈರ್ಯವನ್ನು ಮೆಚ್ಚುವಂಥಹದ್ದಾಗಿದೆ. ಅದೇ ಓಬಿಯು ಮುಂದೊಮ್ಮೆ ದುರ್ಗಕ್ಕೆ ಒದಗಿದ ಸಂಕಷ್ಟ ಪಾರು ಮಾಡುತ್ತಾಳೆ, ಈ ಐತಿಹಾಸಿಕ ವ್ಯಕ್ತಿ ವರ್ಣರಂಜಿತವಾಗಿ ದುರ್ಗದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದ್ದಾಳೆ. ಆ ಸ್ಥಾನಮಾನವನ್ನು ಗೊತ್ತಿದ್ದೋ, ಅಥವ ಅರಿವಿಗೆ ಬಾರದೆಯೇ ಆಕೆಗೆ ಸಿಕ್ಕಿದೆಯೋ ಗೊತ್ತಿಲ್ಲ. ಒಟ್ಟಿನಲ್ಲಿ ಓಬವ್ವಳಿಗೆ ಐತಿಹಾಸಿಕವಾದ ಮಹತ್ವದ ಸ್ಥಾನವನ್ನು ತ.ರಾ.ಸು. ಅವರು ನೀಡಿದ್ದಾರೆ. ಆಕೆ ಪಡೆದುಕೊಂಡಿದ್ದಾಳೆ.

"ನಿಂತ ನೆಲದಡಿಯಲ್ಲೇ ಕಾಣದ ಬಿಲದಲ್ಲಿ ವಿಶ್ವಾಸದ್ರೋಹದ ಹಾವು ಸಂಚರಿಸುತ್ತಿದೆ– ಎಚ್ಚರದಿಂದಿರಿ" ಎಂದು ನಾಯಕರು ಎಚ್ಚರಿಸಿದ ಮಾತು ದುರ್ಗದ ಎಲ್ಲರ ಹೃದಯದಲ್ಲೂ ಮಿಡಿಯುತ್ತಿದ್ದ ಸಂದರ್ಭದಲ್ಲಿ ಕುಡಿಯುವ ನೀರಿಗಾಗಿ ಹೋದ ಓಬವ್ವ ಕಳ್ಳದಾಳಿಯ ಘಾಟುವಾಸನೆಯ ಜಾಡು ಹಿಡಿದು ಧೀರ ನಿರ್ಧಾರವನ್ನು ಕೈಗೊಂಡು ರಕ್ತಸ್ನಾನ ಮಾಡಿ ಕಾಲದ ಪರಿವೆಯಿಲ್ಲದೆ, ಮನುಷ್ಯತ್ವದ ಅರಿವು–ಎಲ್ಲವೂ ಮರೆತು, ಹೆಣ್ಣು ಓಬವ್ವೆ ಕೆರಳಿದ ಕಾಳಿಯಂತೆ, ಒನಕೆಯನ್ನು ಬೀಸುತ್ತಾ ಬೇಟೆಯ ನಾಯಿಯಂತೆ ಶತ್ರುಪಡೆಯನ್ನು ಚಂಡಾಡಿದಳು ಎಂದು ಬರೆಯುವ ಮೂಲಕ ಓಬವ್ವನಿಗೆ ಐತಿಹಾಸಿಕ ನ್ಯಾಯ ನೀಡಿದ್ದಾರೆ.

ಈ ಕಡೆ ವಿಫಲತೆಯ ವಿಷತೈಲವನ್ನುಂಡ ಹೈದರನ ಪಾಳೆಯದಲ್ಲಿ ನಿರಾಸೆಯ ಉತ್ತುಂಗ ಪರಮಾವಧಿ ಮುಟ್ಟಿತ್ತು. ಹೈದರ್ ತನ್ನ ಪಾಳೆಯದವರಿಗೆ "ಓಬವ್ವನ ಹತ್ತಿರ ಹೋಗಿ ಗಂಡಸುತನದ ತಯಾರಿ ತೆಗೆದುಕೊಳ್ಳಿ, ನಿಮ್ಮಂಥ ನೂರಾರು ಗಂಡಸರ ಬದಲು ಅಂಥ ಒಬ್ಬ ಹೆಂಗಸು ನಮ್ಮ ಸೈನ್ಯದಲ್ಲಿದ್ದರೆ ಚಿತ್ರದುರ್ಗ ಇಷ್ಟು ದಿನ ಉಳಿಯುತ್ತಿರಲಿಲ್ಲ" ಎಂದು ನುಡಿಯುವ ಮೂಲಕ ಓಬವ್ವನ ಗಂಡೆದೆಯನ್ನು ಪರೋಕ್ಷವಾಗಿ ಶ್ಲಾಘಿಸಿರುವುದನ್ನು ಗಮನಿಸಬಹುದು. ಇದನ್ನು ಚಿತ್ರದುರ್ಗದ ಪಾಳೆಯಗಾರರು ಕೃತಿಯಲ್ಲಿ ಪ್ರಾಸ್ತಾಪಿಸಲಾಗಿದೆ. ಹಾಗೂ ತ.ರಾ.ಸುರವರ ಚುರುಕು ಚೂಪು ಶೈಲಿಯನ್ನು ಗಮನಿಸಿದರೆ ಆಗಿ ಹೋದ ಒಂದು ಘಟನೆಯನ್ನು ಮರೆತು ಹೋಗದೆ ಈಗ ಆಗುತ್ತಿರುವಂತೆ ನಿರೂಪಿಸಿರುವ ಶೈಲಿ ಮೆಚ್ಚುವಂಥಹದ್ದು. ಹಾಗೂ ಮರೆತುಹೋದ ಇತಿಹಾಸವನ್ನು ಮರುಕಳಿಸಿ ಜ್ಞಾಪಿಸಿ ಉಳಿಸಿದ ಕೀರ್ತಿ ತ.ರಾ.ಸು ರವರದಾಗಿದೆ.

೨. **"ಗಂಡುಗಲಿ ಮದಕರಿನಾಯಕ"** : ಮೂಲ ಕಾದಂಬರಿ ಬಿ.ಎಲ್.ವೇಣು, ಸಂಗ್ರಹ ಶ್ರೀ.ಕೆ.ವೆಂಕಣ್ಣಾಚಾರ್, ಪ್ರಕಾಶಕರು ದೀಪಕ್‌ಬುಕ್‌ಹೌಸ್, ಚಿತ್ರದುರ್ಗ– ೫೭೭೫೦೧. ೨೦೦೯, ೭೫ನೇ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟವಾದ ಕೃತಿ ಶ್ರೀಯುತ ಬಿ.ಎಲ್.ವೇಣುರವರೇ 'ನಿಮ್ಮೊಂದಿಗೆ' ಮಾತನ್ನು ಬರೆದಿದ್ದಾರೆ.

ಚಿತ್ರದುರ್ಗ ಸಂಸ್ಥಾನದ ದಸರೆಯ ಆಚರಣೆಯೊಂದಿಗೆ ಪ್ರಾರಂಭಿಸಿ ದಸರಾ ಕ್ರೀಡೋತ್ಸವದಲ್ಲಿ ಓಬವ್ವ ಮತ್ತು ಮದ್ದಹನುಮಪ್ಪ ಇಬ್ಬರು ಭಾಗವಹಿಸಿ ನಂತರ ಅವರಿಬ್ಬರಿಗೂ ವಿವಾಹವಾಗಿ ಕೋಟೆ ಪ್ರವೇಶಿಸುವುದು. ನಂತರ ನೆಡೆದ ಓಬವ್ವನ ಸಾಹಸಗಾಥೆಯನ್ನು ವಿವರಿಸಿದ್ದಾರೆ. ಇಲ್ಲಿ ಸಾಹಸ ಪ್ರದರ್ಶಿಸುತ್ತಲೇ ಓಬವ್ವ ಶತ್ರುಗಳಿಗೆ ಬಲಿಯಾಗಿ ಮರಣ ಹೊಂದಿದಳೆಂಬುದಾಗಿ ಉಲ್ಲೇಖಿಸಿದೆ. ಕಾಲಾಂತರದಲ್ಲಿ ಚಿತ್ರದುರ್ಗದ ಕೋಟೆ ೧೭೦೦ನೇ ವಿಳಂಬಿನಾಮ ಸಂವತ್ಸರ (ಕ್ರಿ.ಶ.೧೭೭೯)ದ ಫಾಲ್ಗುಣ ಬಹುಳ ಪಂಚಮಿ ಶುಕ್ರವಾರ ದುರ್ಗದ ಕೋಟೆ ಹೈದರನ ವಶವಾಯಿತು ಎನ್ನಲಾಗಿದೆ. ವೇಣುರವರು ತಮ್ಮ ಪ್ರತಿಯೊಂದು ಕೃತಿಯಲ್ಲಿಯೂ ಓಬವ್ವನ ಸ್ಮರಣೆಯೊಂದಿಗೆ ದುರ್ಗದ ಇತಿಹಾಸವನ್ನು ಸ್ಮರಿಸಿದ್ದಾರೆ. ಇದು ಅವರ ಮತ್ತು ಓಬವ್ವನ ಬಗೆಗೆ ಅವರಿಗಿರುವ ಗೌರವವನ್ನು ಸೂಚಿಸುತ್ತದೆ.

೩. ಗಂಡೋಬಳವ್ವ ನಾಗತಿ : ಶ್ರೀ ಬಿ.ಎಲ್. ವೇಣುರವರು, ದೀಪಕ್ ಬುಕ್‌ಹೌಸ್, ಚಿತ್ರದುರ್ಗ, ಇಲ್ಲಿ ಒನಕೆ ಓಬವ್ವನನ್ನು ಕೊಂಡಾಡುವ ಅಭಿಮಾನಿಸುವ ನಾಡಿನ ಜನತೆಗೆ ಪಾಳೇಗಾರರ ಪತ್ನಿಯರಾದ ನಾಗತಿಯರೆಂದೇ ಗುರುತಿಸಲ್ಪಡುವ ಬಹಳಷ್ಟು ರಾಣಿಯರ ಬಗ್ಗೆ ತಿಳಿದಿಲ್ಲ. ಅದರಲ್ಲೂ ಬಹು ಮುಖ್ಯವಾಗಿ ಹಿರೇಮದಕರಿ ನಾಯಕರ ಪತ್ನಿ "ಗಂಡೋಬಳವ್ವ" ಎಂದೇ ಖ್ಯಾತಳಾದ ವೀರರಾಣಿಯ ಬಗ್ಗೆ ಬರೆಯಲಾಗಿದೆ. ಆಕೆಯ ಮುತ್ಸದೀತನ, ಧೈರ್ಯ, ರಣೋತ್ಸಾಹಗಳನ್ನು ಇಲ್ಲಿ ವರ್ಣಿಸಲಾಗಿದೆ. ನಾಯಕನ ಮರಣಾ ನಂತರ ಹನ್ನೆರೆಡು ವರ್ಷದ ಬಾಲಕ ಮದಕರಿನಾಯಕನಿಗೆ ಪಟ್ಟ ಕಟ್ಟಲು ಅ ಕಾಲಘಟ್ಟದಲ್ಲಿ ಆಕೆ ಎದುರಿಸಿದ ಸವಾಲು ಸಮಸ್ಯೆಗಳು ಹಾಗೂ ಮೂದಲಿಕೆಗಳನ್ನು ಇಲ್ಲಿ ಸದುದ್ದೇಶದ ನೆಲೆಗಟ್ಟಿನಲ್ಲಿ ಚಿತ್ರಿಸಿಕರಿಸಲಾಗಿದೆ. ಆಕೆಯ ಗುಣಗಳು ನಾಡಿನ ಬಗೆಗಿನ ಆಕೆಯ ಕಾಳಜಿಯನ್ನು ಅರ್ಹತೆಯಿರುವ ನಾಯಕನನ್ನು ಸಿಂಹಾಸನದ ಮೇಲೆ ತರಲು ಆಕೆ ಎದುರಿಸಿದ ತೆರೆಯ ಮರೆಯ ಕುಟಿಲತೆಯನ್ನು ಗಮನಿಸಿದಾಗ ಇದು ಸರ್ವಕಾಲದಲ್ಲೂ ಇರುವಂಥಹದ್ದೇ ಎಂಬುದು ತಿಳಿಯುತ್ತದೆ. ಈ ಕಾದಂಬರಿಯ ಪ್ರಾರಂಭದಲ್ಲೇ ವೀರ ನಾರಿ ಓಬವ್ವನನ್ನು ನೆನೆಯುತ್ತಲೇ ತಾವು ಅಧ್ಯಯನ ಮಾಡುತ್ತಾ ಸಂಶಯಗಳು ಹಲವಿದ್ದು ಪರಿಹರಿಸಿಕೊಂಡು ಈ ಕೃತಿಯನ್ನು ಬರೆದಿದ್ದಾಗಿ ತಿಳಿಸಿದ್ದಾರೆ. ಇಲ್ಲಿ ಓಬವ್ವನನ್ನು ಕೊಂಡಾಡುವ ಅಭಿಮಾನಿಗಳ ನಾಡು ಎಂದೇ ಪ್ರಾರಂಭಿದ್ದಾರೆ. ಹಾಗಾಗಿ ಇಲ್ಲಿಯೂ ಓಬವ್ವ ಅಗ್ರ ಸ್ಥಾನ ಕಾಪಾಡಿಕೊಂಡಿದ್ದಾಳೆ. ಚಿತ್ರದುರ್ಗದ ಇತಿಹಾಸದ ಮಧ್ಯೆ ಕೇಂದ್ರ ವ್ಯಕ್ತಿಯಾಗಿದ್ದಾಳೆ. ಯಾರೇ ಚಿತ್ರದುರ್ಗದ ಇತಿಹಾಸವನ್ನು ಕುರಿತು ಬರೆಯುವಾಗ ಅವರನ್ನು ಮೊದಲು ತನ್ನೆಡೆಗೆ ಆಕರ್ಷಿಸುವ ಐತಿಹಾಸಿಕ ವ್ಯಕ್ತಿ ಓಬವ್ವ

೪.೪. ಕೃತಿಗಳು : ಕೃತಿಗಳು ಕವಿಯಬೌದ್ಧಿಕತೆಯನ್ನು ಹೊರಹೊಮ್ಮಿಸುವಂಥಹ ಸಾಧನಗಳು. ವಿಚಾರವಾದವನ್ನು ಚಿಂತನೆಯನ್ನು ತಾತ್ವಿಕ ದೃಷ್ಟಿಕೋನದಿಂದ ತಮ್ಮ ವಿದ್ವತ್ತನ್ನು ಕೃತಿಗಳಲ್ಲಿ ಹರಿಯಬಿಡುತ್ತಾರೆ ವಿದ್ವಾಂಸರು. ಕನ್ನಡ ಭಾಷೆಯ ಉಗಮ,ಅದು ನೆಡೆದು ಬಂದ ದಾರಿ, ಕನ್ನಡಕ್ಕಾಗಿ ಹೋರಾಡಿದವರು, ಹೋರಾಡುತ್ತಿರುವವರು ಕನ್ನಡ ನಾಡನ್ನು ಆಳಿದ ರಾಜ ವಂಶಗಳು, ಈಗ ಇರುವ ಅವರ ವಂಶಸ್ಥರು, ಸ್ಥಳ ಪರಿಚಯ ಇವೆಲ್ಲವೂ ಹೊರಬರುವುದೇ ಕೃತಿಗಳ ಮೂಲಕ. ಅಂತಹ ಕೃತಿಗಳಲ್ಲಿ ಓಬವ್ವನ ಉಲ್ಲೇಖವಿರುವ ಕೃತಿಗಳು ಇವಾಗಿವೆ.

೧. **ಭಾರತದ ಧೀರಮಹಿಳೆ ಚಿತ್ರದುರ್ಗದ ಒನಕೆ ಓಬವ್ವ:** ಲೇಖಕರು ಪ್ರೊ.ಎ.ಡಿ.ಕೃಷ್ಣಯ್ಯ, ಬೆಳಗು ಪ್ರಕಾಶನ, ಬೆಂಗಳೂರು-೭೬, ಪ್ರಥಂ ಮುದ್ರಣ-೧೯೭೬, ಪರಿಷ್ಕೃತ ಮುದ್ರಣ-೨೦೦೭ ಇವರು ನೇರವಾಗಿ ಓಬವ್ವನ ವಂಶಸ್ಥರು ತಾವೆಂದು ತಿಳಿಸುವುದರೊಂದಿಗೆ ಹಲವು ಪೂರ್ವಾಪರಗಳ ವಿಷಯ ಸಂಗ್ರಹಣೆ, ಅವುಗಳನ್ನು ಪ್ರಚಲಿತ ಸತ್ಯಾಂಶಗಳೊಡನೆ ಹೋಲಿಕೆ ಸಂಬಂಧಪಟ್ಟವರೊಡನೆ ಸಂದರ್ಶನ ಮತ್ತು ಅವರ ಪೂರ್ವಜರು ಕೊಡುತ್ತಿದ್ದ ನೈಜ ನಿರೂಪಣೆ, ಸಲಹೆ ದೊರೆತಿರುವ ಹಲವಾರು ದಾಖಲೆ ಮೊದಲಾದವನ್ನು ಪರಿಶೀಲಿಸಿ ಸತ್ಯಾಂಶಗಳಿಂದ ಕೂಡಿದ ಕೃತಿಯಿದು

ಎಂದೇ ಬಿಂಬಿಸಿದ್ದಾರೆ. ಈ ಹೊತ್ತಿಗೆ ಪುಟ್ಟದಾದರೂ ಓಬವ್ವಳ ಕಾಲದಲ್ಲಿದ್ದ ರಾಜಕೀಯ ಪರಿಸ್ಥಿತಿ, ಆಕೆಯ ವಂಶ ಮತ್ತು ಆಕೆಯ ಸಹೋದರರ ವಿವರ, ಓಬವ್ವಳ ವಿವಾಹ, ಆಕೆಯ ಸಾಹಸ ಘಟನೆ, ವಿವರಣೆ, ನಾಯಕರಿಂದಾದ ಪುರಸ್ಕಾರ, ಆಕೆಯ ಅಂತ್ಯಕಾಲ, ಆಕೆಯನ್ನು ವಂಶಸ್ಥರು ತಮ್ಮ ಕುಲದೇವತೆಯನ್ನಾಗಿ ಮಾಡಿಕೊಂಡಿದ್ದು, ಈಗಲೂ ಆಕೆಯ ವಂಶಸ್ಥರು ಇರುವುದಾಗಿ ಈ ಕೃತಿಯಲ್ಲಿ ತಿಳಿಸಿದ್ದಾರೆ. ಇನ್ನೊಂದೆಡೆ ಒನಕೆ ಓಬವ್ವಳ ಶಿಲಾಪ್ರತಿಮೆಯ ಅನ್ವೇಷಣೆ ಅದರ ಸ್ಮಾರಕೋದ್ಧಾರವನ್ನು ವಿವರಿಸಿದ್ದಾರೆ. ಜೊತೆಗೆ ಇದುವರೆಗೂ ಓಬವ್ವನ ಬಗೆಗಿನ ಅನಾದರಣೆಯನ್ನು ಇತಿಹಾಸ ತಳೆದಿರುವುದನ್ನು ಪ್ರಸ್ತಾಪಿಸಿದ್ದಾರೆ. ಜೊತೆಗೆ ಓಬವ್ವಳ ಜೀವಮಾನದ ಈ ಸಾಹಸವನ್ನು ಕುರಿತು ಶ್ರೇಷ್ಠಮಟ್ಟದ ಯಾವ ಸಂಶೋಧನೆಗಳಾಗಲೀ, ಸತ್ಯಾಸತ್ಯಗಳ ನಿರೂಪಣೆಗಳಾಗಲೀ ಹೊರಬರದಿರುವುದಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ. ಜೊತೆಗೆ ಕಾಲಾನಂತರದಲ್ಲಿ ಈಕೆಯ ಸಾಹಸದ ಘಟನೆಯೂ ಮರೆತು ಹೋದರೂ ಆಶ್ಚರ್ಯ ಪಡಬೇಕಾಗಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಎಂ.ಎಸ್. ಸತ್ಯನ್ ರವರು ಚಿತ್ರದುರ್ಗ ಗೆಜೆಟಿಯರ್‌ನಲ್ಲಿ ಒನಕೆ ಓಬವ್ವಳು ಬೇಡರ ಹೆಣ್ಣು ಮಗಳು ಎಂಬುದನ್ನು ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ಕಹಳೆಯವನ ಹೆಂಡತಿಯೆಂದು ಬರೆದು ಪ್ರಚುರಪಡಿಸಿದ್ದಾರೆ. ಆಕೆಯನ್ನು ಬೇಡ ಮಹಿಳೆ ಎಂದು ಬರೆಯಲಾಗಿದೆ.ಇದರ ಬಗ್ಗೆ ಎ.ಡಿ.ಕೃಷ್ಣಯ್ಯರವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಏಕೆಂದರೆ ಓಬವ್ವ ಕಹಳೆಯವನ ಹೆಂಡತಿಯಾಗಿದ್ದು ಸರಿಯಷ್ಟೇ. ಆಕೆ ಛಲವಾದಿ ಮಹಿಳೆಯಾಗಿದ್ದು, ದಾಖಲೆಗಳು ಲಭ್ಯವಿಲ್ಲದ ಕಾಲದಲ್ಲಿ ಬೇಡ ಮಹಿಳೆ ಎಂದು ಬರೆಯಲಾಗಿದೆ. ಆದರೆ ಈಗ ಸಂಬಂಧಿಸಿದ ದಾಖಲೆಗಳು ಲಭ್ಯವಾದ ಮೇಲೆ ಆಕೆಯನ್ನು ಛಲವಾದಿ ಜಾತಿಗೆ ಸೇರಿದವಳೆಂದು ಘೋಷಿಸಲು ತಮ್ಮ ಕೃತಿಗಳಲ್ಲಿ ಆಗ್ರಹಿಸಿದ್ದಾರೆ. ಆದರೆ ಅವರ ಈ ಆಸೆ ಕೈಗೂಡುವ ಮುನ್ನವೇ ಅವರು ಇಹಲೋಕ ತ್ಯಜಿಸಿರುವುದು ಖೇದಕರವಾದುದು. ಆಕೆ ತೋರಿದ ಸ್ವಾಮಿನಿಷ್ಠೆ, ಉಪ್ಪಿಟ್ಟ ಧಣಿಗೆ ತೋರಿದ ಭಕ್ತಿಯ ಉತ್ಕಟತೆಯನ್ನು ಪರಿಗಣಿಸದೆ, ಆಕೆಗೆ, ಆಕೆಯ ಸಾಹಸಕ್ಕೆ ತಕ್ಕ ಗೌರವ ದೊರಕಿಲ್ಲ ಎಂಬುದನ್ನು ವ್ಯಕ್ತಪಡಿಸಿದ್ದಾರೆ. ಎಲ್ಲರೂ ಎಲ್ಲಾ ಘಟನೆಗಳಿಗೂ ದಾಖಲೆಗಳನ್ನಿಡುವುದು ಅಸಾಧ್ಯವಾದ ಮಾತಾಗಿದ್ದು ಈ ರೋಮಾಂಚಕಾರಿ ಘಟನೆಯ ಮಹತ್ವವನ್ನು ಕರ್ನಾಟಕದ ಇತಿಹಾಸಕಾರರು ನಿಷ್ಪಕ್ಷಪಾತದಿಂದ ಪರಿಶೀಲಿಸಿ, ಪ್ರಮಾಣೀಕರಿಸಿಲ್ಲ ಎಂಬ ಸತ್ಯವನ್ನು ವಿಷಾದದಿಂದ ಹೇಳಿದ್ದಾರೆ.

ಇತಿಹಾಸಕಾರರು ಕರ್ನಾಟಕ ಇತಿಹಾಸದಲ್ಲಿ ಸಣ್ಣಪುಟ್ಟ ಹಾಗೂ ಪರಿಗಣಿಸಲರ್ಹವಲ್ಲದ ಘಟನೆಗಳನ್ನು ಮರೆಯದೆ, ಮರೆಮಾಚದೆ ವರ್ಣಿಸಿರುವ ಸನ್ನಿವೇಶಗಳಿವೆ. ಆದರೆ ಇಂಥಹ ಸಾಹಸೀ ಮಹಿಳೆಯ ಈ ಘಟನೆಯನ್ನು ಅಲಕ್ಷಿಸಿ ಉಲ್ಲೇಖಿಸದಿರುವುದು ಆಶ್ಚರ್ಯವಾಗಿದೆ. ಪ್ರಸಿದ್ಧ ರಾಜಮನೆತನಗಳಲ್ಲಿ ಜನಿಸಿ ಶಸ್ತ್ರಾಸ್ತ್ರಗಳ ಬೆಂಬಲದಿಂದ, ಸೈನಿಕರ ಸಹಾಯದಿಂದ ಹೋರಾಡಿದ ವೀರನಾರಿಯರ ಘಟನೆಗಳನ್ನು ರೋಚಕವಾಗಿ ಬರೆಯಲಾಗಿದೆ. ಹಾಗೆಯೇ

ಓಬವ್ವನ ಬಗೆಗೂ ಕೆಲವು ಸೀಮಿತ ಬರವಣಿಗೆಗಳು ಇದ್ದು ಅವು ಆಕೆಯ ಹಿರಿಮೆಯನ್ನು ಅಷ್ಟಾಗಿ ಸಾರುತ್ತಿಲ್ಲವೆಂದು ಹೇಳಿದ್ದಾರೆ. ರಾಜಾ ಮದಕರಿನಾಯಕರು ಓಬವ್ವಳಿಗೆ ಆಕೆಯ ಶೌರ್ಯಕ್ಕೆ ಮೆಚ್ಚಿ ಆಕೆ ನಾಡಿನ ಎಲ್ಲಾ ಮಹಿಳೆಯರಿಗೂ ಮಾದರಿಯಾಗಿರಬೇಕೆಂದು ಬಯಸಿ ಓಬವ್ವಳ ಒಂದು ಪ್ರತಿಮೆಯನ್ನು ಕರಿಯ ಕಲ್ಲಿನಲ್ಲಿ ಕೆತ್ತಿಸಿ ಕಳ್ಳಗಂಡಿಯ ಹತ್ತಿರದಲ್ಲಿ ಪೂರ್ವಾಭಿಮುಖವಾಗಿರುವಂತೆ ಸ್ಥಾಪಿಸಿದರು. ಆದರೆ ಚಿತ್ರದುರ್ಗ ಮುಸ್ಲಿಂರ ಆಳ್ವಿಕೆಗೆ ಒಳಪಟ್ಟಾಗ ಈ ಪ್ರತಿಮೆಗೆ ಜಖಂ ಆಗಿದ್ದು, ಆ ವಿಗ್ರಹದ ಪಾದುಕೆಗಳು ಮಾತ್ರ ಇದ್ದು, ಆಕೆಯ ವಂಶಜರು ಆಕೆಗಾಗಿ ನಿರ್ಮಿಸಿಕೊಂಡ ದೇಗುಲದಲ್ಲಿ ಪಾದುಕೆಗಳನ್ನು ಪ್ರತಿಷ್ಠಾಪಿಸಿಕೊಂಡು ಪೂಜಿಸುತ್ತಿರುವರು. ಇಂಥಹವಳು ನಾಯಕರಿಂದ ಏನನ್ನೂ ಅಪೇಕ್ಷೆ ಪಡದೆ ತಾನು ತನ್ನ ವಂಶಜರಿಗೆ ಕುಲದೇವತೆಯಾಗಿರಬೇಕೆಂದು ಬಯಸಿದಾಗ ನಾಯಕರು ಆಕೆಗಾಗಿ ಕಾಶಿಗೆ ಒಬ್ಬ ವೈದಿಕನನ್ನು ಕಳುಹಿಸಿ ಅಲ್ಲಿಂದ ವಿಧಿವತ್ತಾಗಿ ಒಂದು ಕೇಲವನ್ನು ತರಿಸಿ ಪವಿತ್ರ ಗಂಗಾಜಲದಿಂದ ದೀಕ್ಷಾಭಿಷೇಕಗಳನ್ನು ಮಾಡಿಸಿ, ಶ್ರೀ ವೀರವನಿತೆ ಒನಕೆ ಓಬವ್ವೆಯೆಂಬ ದೇವತೆಯ ನಾಮಾಂಕಿತದಿಂದ ಚಿತ್ರದುರ್ಗಕ್ಕೆ ತರಿಸಲಾಯಿತು. ವಿಧಿವತ್ತಾಗಿ ವಂಶಸ್ಥರಿಗೆ ನೀಡಲಾಯಿತು. ಅಲ್ಲದೇ ಪ್ರತಿವರ್ಷವೂ ಈಕೆಯ ಉತ್ಸವವನ್ನು ಯಥಾವತ್ತಾಗಿ ನೆರವೇರಿಸಿಕೊಂಡು ಬರುತ್ತಿದ್ದಾರೆ. ಓಬವ್ವೆಯ ಜಲಧಿ ಉತ್ಸವ, ವಾರ್ಷಿಕ ಉತ್ಸವಗಳನ್ನು ಸಾಂಗೋಪಸಾಂಗವಾಗಿ ನೆರವೇರಿಸಲು ಸೂಕ್ತ ಮಾರ್ಗದರ್ಶನ ಮತ್ತು ಪ್ರೋತ್ಸಾಹಗಳನ್ನು ದೊರೆಗಳು ಸಹೃದಯಿಗಳಾಗಿ ದಯಪಾಲಿಸಿದರು. ಹೀಗೆ ನಿಸ್ವಾರ್ಥ ಸೇವೆ, ಧೈರ್ಯ, ಸಾಹಸ ತೋರಿದ ಒನಕೆ ಓಬವ್ವ ಚಿತ್ರದುರ್ಗದ ಧೀರಮಹಿಳೆ ಮಾತ್ರವಲ್ಲದೆ ದೇವತೆಯೂ ಆದಳು. ಈಕೆಯ ಸಾಹಸವು ಮನೆಮನಗಳಲ್ಲಿ ನಾಡಿನಾದ್ಯಂತ ಮಾತಾಯಿತು. ಮದಕರಿನಾಯಕರ ಮೂಲ ಪುರುಷರಾದ ಚಿತ್ರದುರ್ಗದ ನಾಯಕರು ತಮ್ಮನ್ನು ಹಿಂಬಾಲಿಸಿ ಬಂದ ಕಹಳೆಯ ಬಾಲಪ್ಪ ಮತ್ತು ರಂಗಪ್ಪನೆಂಬ ಈರ್ವರು ಸಹೋದರರಿಗೆ ಇವರ ಕುಲದೇವರ ಪೆಟ್ಟಿಗೆಯನ್ನು ದಯಪಾಲಿಸಿದ್ದರು. ಅಂದಿನಿಂದ ಇಂದಿನವರೆಗೂ ದುರ್ಗದಲ್ಲಿಯೇ ನೆಲೆಸಿರುವ ವಂಶಸ್ಥರು ಓಬವ್ವಳನ್ನು ಕಂಚಿನ ಪ್ರತಿಮೆಯಲ್ಲಿ ಕಾಣುತ್ತಾ ಉತ್ಸವಗಳನ್ನು ಚಾಚೂ ತಪ್ಪದೇ ನೆರವೇರಿಸಿಕೊಂಡು ಬರುತ್ತಿದ್ದಾರೆ. ವಂಶಸ್ಥರಿಗೆ ಆರಾಧ್ಯ ದೈವವಾಗಿದ್ದಾಳೆ. ಓಬವ್ವನ ವಂಶಸ್ಥರು ನಾಯಕನಲ್ಲಿ ಇಟ್ಟಿದ್ದ ಸ್ವಾಭಿಮಾನ, ಸ್ವಾಮಿಭಕ್ತಿ ಮತ್ತು ರಾಜಸೇವೆಯಲ್ಲಿ ಅನನ್ಯ ನಂಬಿಕೆಯಿಟ್ಟಿದ್ದರಿಂದ ಅವರಿಗೆ ಹದಿಮೂರು ಗಡಿ ಕಹಳೆಯವರೆಂದೇ ಹೆಸರು ಪಡೆದಿದ್ದುದ್ದು ಗೋಚರಿಸುತ್ತದೆ. ಹೈದರ್ ಮತ್ತು ಟಿಪ್ಪುವಿನ ಆಡಳಿತ ಇವರನ್ನು ಸಂಪೂರ್ಣ ಮರೆಯಿತು. ಒಡೆಯನಿಲ್ಲದ ದುರ್ಗ ಬಿಟ್ಟ ಕಹಳೆಯವರು ಓಬವ್ವನ ಏಕೈಕ ಮಗನಾದ ಆನೆಪ್ಪನೊಂದಿಗೆ ಚಿತ್ರದುರ್ಗಕ್ಕೆ ಪೂರ್ವ–ದಕ್ಷಿಣಕ್ಕೆ ಮಧ್ಯೆ ಸುಮಾರು ಐದುಮೈಲಿ ದೂರವಿರುವ ದೊಡ್ಡಸಿದ್ದವ್ವಳ್ಳಿಗೆ ಹೋಗಿ ನೆಲೆಸಿದರು. ಇನ್ನು ಉಳಿದ ಕೆಲವರು ಚಿತ್ರದುರ್ಗ ಸುತ್ತಲಿನ ಹಳ್ಳಿಗಳಾದ ಪಿಳ್ಳೆಕೆರೆನಹಳ್ಳಿ, ತಮಟಕಲ್ಲು, ಕಸವನಹಳ್ಳಿ, ಅತ್ತಿಗೆರೆ, ಸೊಂಡೆಕೆರೆ, ಸಜ್ಜನಕೆರೆ, ಸಾಣೀಕೆರೆ, ದುಮ್ಮಿ ಮುಂತಾದೆಡೆಗಳಲ್ಲಿ ನೆಲೆಸಿದರು. ಇದರೊಡನೆ

ವಂಶಜರಿಗೆ ರಾಜ ವೀರಮದಕರಿನಾಯಕರು ನೀಡಿದ್ದ ಜಹಗೀರುಗಳು ನಿಂತುಹೋದವು. ಹಾಗಾಗಿ ಓಬವ್ವನ ವೃತ್ತಾಂತವನ್ನರುಹಲು ಸಾಕಷ್ಟು ಲಿಖಿತ ಆಧಾರಗಳ ಕೊರತೆಯಿದ್ದರು ಸಿಕ್ಕ ಮೂಲಗಳಿಂದಲೇ ಹಾಗೂ ಮೌಖಿಕತೆಯನ್ನು ಪರಿಗಣಿಸಿ ಆಕೆಗೆ ಇತಿಹಾಸದಲ್ಲಿ ಮಹತ್ವದ ಸ್ಥಾನ ನೀಡಬೇಕೆಂದು ಬರೆದಿದ್ದಾರೆ. ಇತಿಹಾಸವು ಮಡಿವಂತಿಕೆಯಿಂದ ಕೂಡಿದೆಯೇ ಎಂಬ ಸಂದೇಹವನ್ನು ಈ ಹೊತ್ತಿಗೆಯಲ್ಲಿ ಸೂಕ್ಷ್ಮವಾಗಿ ಹರಹಿದ್ದಾರೆ.

ಒಟ್ಟಿನಲ್ಲಿ ಈ ಹೊತ್ತಿಗೆಗೆ ಸಂಬಂಧಿಸಿದಂತೆ ಹೇಳುವುದಾದರೆ ಪೂರ್ವ ಪೀಡಿತ ಅಭಿಪ್ರಾಯಗಳ ಸೋಂಕನ್ನು ಹೊಡೆದೋಡಿಸಿ ಸಿಕ್ಕ ದಾಖಲೆಗಳಲ್ಲಿನ ನಿಜಾಂಶಗಳನ್ನು ಪರಿಗಣಿಸಿ ಓಬವ್ವಳ ಸಾಹಸದ ಮೇಲೆ ಹೊಸ ಬೆಳಕನ್ನು ಚೆಲ್ಲುವಂಥ ಮಹತ್ಸಾಧನೆಯಾಗಬೇಕಾಗಿದೆ ಎಂಬ ಅವರ ಬಯಕೆಯಾಗಿತ್ತು ಎಂಬುದು ಇಲ್ಲಿ ತಿಳಿಯುತ್ತದೆ. ಆಕೆಗೆ ಸಂಬಂಧಿಸಿದ ವಂಶವೃಕ್ಷವನ್ನು ಸವಿವರವಾಗಿ ಸಲ್ಲಿಸಲಾಗಿದೆ.

೨. ಚಂದ್ರವಳ್ಳಿ ಗ್ರಂಥ : ಸಂಪಾದಕರು ಡಾ.ಎಂ.ವಿ.ಶ್ರೀನಿವಾಸ ಲಕ್ಷ್ಮಣ ತೆಲಗಾವಿ, ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ. ೧೯೭೩ರಲ್ಲಿ ಪ್ರಕಟವಾಗಿದೆ. ಇಲ್ಲಿ ಶ್ರೀ.ಪ್ರೊ.ಎ.ಡಿ.ಕೃಷ್ಣಯ್ಯ ವೀರ ವನಿತೆ ಓಬವ್ವೆಯ ಐತಿಹಾಸಿಕತೆ ಎಂಬ ಶೀರ್ಷಿಕೆಯ ಲೇಖನವನ್ನು ಭಾಗ-೮ ರಲ್ಲಿ ಐತಿಹಾಸಿಕ ವ್ಯಕ್ತಿಗಳ ಸರದಿಯಲ್ಲಿ ಓಬವ್ವೆಯ ಈ ಲೇಖನವನ್ನು ಪ್ರಕಟಿಸಲಾಗಿದೆ. ಇಲ್ಲಿ ಓಬವ್ವನ ವಂಶಸ್ಥರು ಕ್ರಿ.ಶ. ೧೭೫೮ರಲ್ಲಿ ಚಿತ್ರದುರ್ಗ ಸಂಸ್ಥಾನವನ್ನು ಸ್ಥಾಪಿಸಿದ ಮೂಲಪುರುಷ ಚಿತ್ರನಾಯಕ ತಿಮ್ಮಣ್ಣ ನಾಯಕರನ್ನು ಹಿಂಬಾಲಿಸಿಕೊಂಡು ಬಂದವರೆಂದೂ, ಮೊದಲಿಗೆ ರಾಮದುರ್ಗದಲ್ಲಿದ್ದವರೆಂದೂ ಪ್ರತೀತಿ ಇದೆ. ಯುದ್ಧ ಸಮಯದಲ್ಲಿ ಇವರು ಅಂಜದೆ, ಅಳುಕದೆ ಸೈನಿಕ ಪೋಷಾಕನ್ನು ಧರಿಸಿ ರಣಕಹಳೆಯೂದುತ್ತಾ ಸೈನ್ಯದ ಮುಂಭಾಗದಲ್ಲಿ ರಣಕಲಿಗಳಾಗಿ ಮುನ್ನುಗ್ಗುತ್ತಿದ್ದರು. ಇವರು ಸ್ವಾತಂತ್ರ್ಯಪ್ರಿಯರೂ, ಕಾರ್ಯನಿಷ್ಠರೂ, ನಂಬಿಕೆಗೆ ಅರ್ಹರಾದವರು ಆಗಿರುತ್ತಿದ್ದರು. ಈ ಕಾರಣದಿಂದಲೇ ಕಹಳೆಯವರನ್ನು ಕೆಲವು ಗುಪ್ತ ರಾಜಕೀಯ ಚರ್ಚೆಯಲ್ಲಿಯೂ ಭಾಗವಹಿಸಲು ಅನುಮತಿಯಿತ್ತಿದ್ದರು. ಹಾಗೆಯೇ ಪಾಳೆಯಗಾರರಲ್ಲಿ, ಭಕ್ತಿ, ವಿಶ್ವಾಸಗಳನ್ನಿರಿಸಿ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ ಬಾಳಿದವರಲ್ಲಿ ಚಲವಾದಿ ವಂಶಸ್ಥರು ಮುಖ್ಯರೆನಿಸಿದ್ದಾರೆ ಎಂಬ ಅಂಶವನ್ನು ಉಲ್ಲೇಖಿಸಿದ್ದಾರೆ. ಓಬವ್ವನ ಜನ್ಮದಾತರನ್ನು ಅವರ ಹಿನ್ನೆಲೆಯನ್ನು ಹೇಳಿದ್ದಾರೆ. ಗುಡೇಕೋಟೆ ಸಂಸ್ಥಾನದ ಸಾಮಂತ ನಾಯಕನ ಬಳಿ ಚಿನ್ನಪ್ಪ ಕಹಳೆಯವನಾಗಿ, ನಾಯಕನ ಅಚ್ಚುಮೆಚ್ಚಿನ ಸೇವಕನಾಗಿದ್ದು ಅವನ ಮಗಳೇ ಓಬವ್ವ ತಂದೆಯಿಂದಲೇ ಸ್ವಾಮಿನಿಷ್ಠೆ ಕಲಿತ ಓಬವ್ವ ದೇಶ್‌ಭಾಗ್ ಪಡೆಯಲ್ಲಿ ಹೆಣ್ಣು ಸೈನಿಕೆಯಾಗಿ ತರಬೇತಿ ಪಡೆದಿದ್ದ ಓಬವ್ವನನ್ನು ದುರ್ಗದ ಕಹಳೆಯವನಾಗಿದ್ದ ಮದ್ದಹನುಮಪ್ಪನಿಗೆ ಧಾರೆ ಎರೆದು ಕೊಟ್ಟು ಓಬವ್ವ ದುರ್ಗದ ಕೋಟೆ ಸೇರಿದಳು. ಓಬವ್ವ ದುರ್ಗದ ಕೋಟೆಗೆ ಬಂದ ರೀತಿ ನಂತರ ನಡೆದದ್ದು ಆಕೆಯ ಸಾಹಸಗಾಥೆ ಮತ್ತು ಆಕೆಯ ವಂಶಸ್ಥರ ವಂಶಾವಳಿಯನ್ನು ವಿವರಿಸಲಾಗಿದೆ. ಈ

ಲೇಖನಕ್ಕೆ ಆಧಾರ ಗ್ರಂಥವಾಗಿ ಓಬವ್ವನ ವಂಶಸ್ಥರೆನಿಸಿಕೊಂಡಿರುವ ಶ್ರೀಮಾನ್ ಎ.ಡಿ.ನರಸಿಂಹಯ್ಯ, ಸ್ಕೂಲ್ ಮಾಸ್ಟರ್, ಹರಿಯಬ್ಬೆ, ಹಿರಿಯೂರು-ತಾ, ಇವರು ಓಬವ್ವೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ರಚಿಸಿರುವ ಗ್ರಂಥದ ಹಸ್ತಪ್ರತಿಯನ್ನು ಆಧಾರವಾಗಿಟ್ಟುಕೊಂಡು ಬರೆದಿದ್ದು ಅವರಿಗೆ ಋಣಿಯಾಗಿರುವುದಾಗಿ ತಿಳಿಸಿರುತ್ತಾರೆ.

ಒಟ್ಟಾರೆ ಇತಿಹಾಸ ಸಂಶೋಧನ ಮಂಡಳಿ ಚಿತ್ರದುರ್ಗವತಿಯಿಂದ ಚಿತ್ರದುರ್ಗ ಜಿಲ್ಲೆಯ ಇತಿಹಾಸ ಕುರಿತ ಲೇಖನಗಳಲ್ಲಿ ಇದೂ ಒಂದಾಗಿದೆ. ಐತಿಹಾಸಿಕ ಈ ಕೃತಿಯಲ್ಲಿ ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ಬರೆದಿರುವುದು ಗಣನೀಯ.

೩. "ಹರಿತಿಸಿರಿ" : ಹೆಚ್.ವಿ. ವೀರನಾಯಕ 'ಹರತಿ' ನೆನಪಿನ ಸಂಪುಟ ಸಂಪಾದಕರು ಲಕ್ಷ್ಮಣ್ ತೆಲಗಾವಿ ಯವರು. ಪ್ರಕಟಣೆ 'ಹರತಿ ಸಿರಿ' ನೆನಪಿನ ಸಂಪುಟ ಪ್ರಕಟಣ ಸಮಿತಿ ಪರವಾಗಿ ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ-೫೭೭೫೪೫ ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. ೧೯೮೭ರ ಈ ಗ್ರಂಥದಲ್ಲಿ ಚಿತ್ರದುರ್ಗ ಜಿಲ್ಲೆಯ ಸ್ಥಳನಾಮಗಳು ಒಂದು ಅವಲೋಕನ, ಪುಟ ಸಂಖ್ಯೆ-೪೨೦, ರಚಿತರು, ವಿ. ಗೋಪಾಲಕೃಷ್ಣ, ಇವರ ವಿಷಯ ಸೂಚಿಕೆಯನ್ನು ಅವಲೋಕಿಸಿದಾಗ ಸ್ತ್ರೀನಾಮ ಸೂಚಕಗಳು ಅಧಿಕ ಸಂಖ್ಯೆಯಲ್ಲಿದ್ದು, ಇದು ಗಮನಿಸಬೇಕಾದ ಸಂಗತಿಯೆಂದಿದ್ದಾರೆ. ಶತ್ರು ಸೈನಿಕರನ್ನು ಒನಕೆಯಿಂದ ಜಜ್ಜಿದ ಓಬವ್ವೆಯ ಪ್ರಭಾವ ಈ ಪ್ರದೇಶದ ಜನರ ಮೇಲೆ ಸಾಕಷ್ಟಾಗಿರಲು ಸಾಧ್ಯವಿದೆ ಎಂದು ಉಲ್ಲೇಖಿಸಲಾಗಿದೆ. ಜೊತೆಗೆ ಶತ್ರು ಪಾಳೆಯವನ್ನು ಗಂಡುಗಚ್ಚೆ ಹಾಕಿ ಕತ್ತಿ ಹಿಡಿದು ಏಕಾಂಗಿಯಾಗಿ ಹೋರಾಡಿ ವಿಜಯ ಸಾಧಿಸಿದ ಗಂಡುಗಲಿ ಓಬವ್ವನಾಗತಿಯಂಥಹವರ ಕಾಲದಲ್ಲಿ ಓಬವ್ವನು ಇದ್ದಳು ಎಂಬ ಸಂಗತಿಯನ್ನು ಅರುಹಿದ್ದಾರೆ. ಇವರೆಲ್ಲಾ ಕಲಾಪ್ರೇಮ, ಜನಪ್ರಿಯತೆ, ಮನೋಸ್ಥೈರ್ಯ, ಸೇವಾಮನೋಭಾವ, ಆಡಳಿತ ಕೌಶಲ ಗುಣಗಳನ್ನು ಹೊಂದಿದ್ದು, ಅಂದಿನ ರಾಜರುಗಳಷ್ಟೇ ಹೆಸರುವಾಸಿಯಾಗಿದ್ದರು. ಇವರು ಚಿತ್ರದುರ್ಗ ಪಾಳೆಯಗಾರರ ವಿರೋಚಿತ ಚರಿತ್ರೆಗೆ ಸೇರಿದವರು ಎಂಬುದಾಗಿ ತಿಳಿಸಿದ್ದು ಇದು ಓಬವ್ವನ ಸಾಹಸಗಾಥೆಯನ್ನು ಸಾರುವಲ್ಲಿ ಪ್ರಮುಖ ಕೃತಿಯಾಗಿದೆ. ಹಾಗೆಯೇ ಇದೇ ಕೃತಿಯಲ್ಲಿ ಡಾ. ಕಮಲಾ ಹಂಪನಾ ಅವರು ಬರೆದಿರುವ ದೇವರು-ಧರ್ಮ-ದೇವದಾಸಿ ಲೇಖನದಲ್ಲಿ ನತದೃಷ್ಟರಾದ ಹರಿಜನ-ಗಿರಿಜನ ಹೆಣ್ಣು ಮಕ್ಕಳಿಗೆ ಆಗಿರುವ ಅನ್ಯಾಯಗಳೇ ಜಾಸ್ತಿ. ಆದರೆ ದಾಖಲೆಗಳು ಸಿಗುವುದು ಆಗ ತುಂಬಾ ಕಡಿಮೆ. ಸಿಕ್ಕಿದರೂ ಮೇಲೂ ನೋಟದ, ತೇಲು ಮಾತುಗಳು ಅಷ್ಟೇ! ಏಕೆಂದರೆ ದಲಿತ ಪರವಾದ ವಾಣಿ ಕೇಳಲು ಸಾಧ್ಯವೇ ಇರುತ್ತಿರಲಿಲ್ಲ ಎಂದ ಮೇಲೆ ಓಬವ್ವನ ಪರ ದಾಖಲೆಗಳು ಸಿಗುವುದು ಕಷ್ಟಸಾಧ್ಯ ಎಂಬ ಅನಿಸಿಕೆ ಇಲ್ಲಿ ವ್ಯಕ್ತವಾಗಿದೆ. ಹಾಗೆಯೇ ಬಯಲು ಸೀಮೆಯಲ್ಲಿ ಸ್ಥಾಪನೆಗೊಂಡ ಸಂಸ್ಥಾನಗಳಲ್ಲಿ ಚಿತ್ರದುರ್ಗ ಸಿರಾ ದೊರೆಗಳನ್ನು ಕುರಿತು ಅಸಂಖ್ಯಾತ ಜನಪದ ಸಾಹಿತ್ಯ ಸಂಗ್ರಹವಾಗಿದೆ. ಆದರೆ ಓಬವ್ವೆ ಅಥವ 'ಒನಕೆ ಓಬವ್ವೆ' ಯೆಂದು ಪ್ರಸಿದ್ಧಳಾದ ಈ ವೀರನಾರಿಯರ ಕುರಿತು ಜನಪದ ಸಾಹಿತ್ಯ

ಅಷ್ಟಾಗಿ ಲಭ್ಯವಿಲ್ಲದಿರುವುದೊಂದು ಆಶ್ಚರ್ಯದ ಸಂಗತಿ. ಪುಟ ಸಂಖ್ಯೆ ೬೨ರಲ್ಲಿ ಈಕೆಗೆ ಸಂಬಂಧಿಸಿದ ಘಟನೆಯನ್ನು ಸಾಮಾನ್ಯವಾಗಿ ಚಿತ್ರದುರ್ಗದ ಚರಿತ್ರೆಯಲ್ಲಿ ಬರುವ ಕಡೆಯ ರಾಜಾ ಮದಕರಿನಾಯಕನ ಕಾಲಕ್ಕೆ ಆರೋಪಿಸಲಾಗುತ್ತಿದ್ದು ಈಕೆಯ ಚಾರಿತ್ರಿಕತೆಯನ್ನು ಸ್ಪಷ್ಟಪಡಿಸುವಲ್ಲಿ ಅಮೂಲಾಗ್ರ ಶೋಧನೆ ನೆಡೆಯುವ ಅಗತ್ಯವಿದೆ. ಹುಲ್ಲೂರು ಶ್ರೀನಿವಾಸ ಜೋಯಿಸರು ಚಿತ್ರದುರ್ಗದ ಪ್ರೌಢಪಾಠಶಾಲೆಯಲ್ಲಿ ಚಿತ್ರಕಲಾ ಅಧ್ಯಾಪಕರೂ ಕೆಲವು ಸಾಹಿತ್ಯ ಕೃತಿಗಳ ಕರ್ತೃಗಳೂ ಆಗಿದ್ದ ಸಿ.ರಂಗಯ್ಯ ಅವರಿಂದ 'ವೀರರಮಣಿ ಓಬವ್ವ'ಎಂಬ ಲಾವಣಿ ಮತ್ತು ಸಾಂಗತ್ಯ ಸರಣಿಯು ರಚನೆಗೊಳ್ಳಲು ಕಾರಣರಾಗಿದ್ದರು ಎಂಬುದು 'ಶರಣ ಸಾಹಿತ್ಯದಲ್ಲಿ' ಪ್ರಕಟಗೊಂಡಿದೆ. "ವೀರ ಓಬವ್ವನ ಸಾಹಸವನ್ನು ಕೇಳಿ ವೀರರಕ್ಕುತವು ವುಕ್ಕೇರಿ ವೀರಾವೇಶದಿ ಬರೆದನು ರಂಗಯ್ಯ ಮೀರಿ ರೋಮಾಂಚನವು ಏರೆ" ಎಂದು ಕವಿಯು ಒಂದೆಡೆ ಹೇಳಿಕೊಂಡಿರುವರು. ರಂಗಯ್ಯ ಅವರು ಇದೇ ಸಂದರ್ಭದಲ್ಲಿ "ಮದಕರಿನಾಯ್ಕನು ಬಂಟರ ನಿರ್ಮಲ ಹೃದಯವನರಿತು ಮುದದಿಂದ ಪದುಳದಿಂ ಉದರ ಪೋಷಣೆಗೆಂದು ಕೈತುಂಬಾ ಹಣಕಾಸು ಹರುಷದಿಂ ಪೋಷಾಕು ಧನಧಾನ್ಯ ಭೋಜನ ಕೊಟ್ಟು ಕಳುಹಿದನಾದರದಿಂದ" ಎಂದು ಗುರುತಿಸಿರುವುದು ಗಮನಾರ್ಹ. ಐತಿಹಾಸಿಕ ಹಿನ್ನೆಲೆಯುಳ್ಳ ಕತೆಗಳನ್ನು ಜನಪದ ವೀರಸಾಹಿತ್ಯದ ಪರಿಶೀಲನೆಯಲ್ಲಿ ವಿವೇಚಿಸುವುದು ಸೂಕ್ತ. ವೀರಸಾಹಿತ್ಯದಿಂದ ಚರಿತ್ರೆಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಬಹುದು. ಆದರೆ ರಂಗಯ್ಯನು ಬರೆದ ಲಾವಣಿ ಲಭ್ಯವಿಲ್ಲ.

ಕುಮಾರರಾಮನೊಂದಿಗೆ, ಕರಿಬಂಟರನ್ನೂ , ಚಾರಿತ್ರಿಕ ವ್ಯಕ್ತಿಗಳೆಂದು ಗ್ರಹಿಸಲಾಗಿದೆ. 'ಕೆಂಡಕೊಂಡ'ವಾದ ಸ್ತ್ರೀಯರ ಕತೆಗಳು ಚರಿತ್ರೆಗೆ ಅತ್ಯಂತ ಹತ್ತಿರದ ಸಂಬಂಧ ಪಡೆದುವು. ಅಂಥಹವರಲ್ಲಿ ಹರಿತಿಸಿರಿ ಯಲ್ಲಿ ಡಾ. ನಂ.ತಪಸ್ವೀ ಕುಮಾರ್ ರವರು ಮಾನ ಪ್ರತಿಷ್ಠೆಗಳಿಗಾಗಿ ಹೋರಾಟ ನೆಡೆಸಿದ ಸ್ತ್ರೀಯರ ಬಗೆಗೆ ಪ್ರಸ್ತಾಪಿಸುವಾಗ ಪಿರಿಯಾ ಪಟ್ಟಣದ ದುರಂತನಾಯಕ ವೀರರಾಜ ದೊರೆಯ ಧರ್ಮಪತ್ನಿಯರ ವೃತ್ತಾಂತವನ್ನು ಉಲ್ಲೇಖಿಸಿರುವರು. ಅಲ್ಲದೆ ಕುಮಾರರಾಮ ಮತ್ತು ತರೀಕೆರೆಯ ಸರ್ಜಪ್ಪ ನಾಯಕರ ಸ್ವಾಭಿಮಾನ ಮತ್ತು ಪರಾಕ್ರಮಗಳನ್ನು ಚಿತ್ರದುರ್ಗದ ಓಬವ್ವೆ ಮತ್ತು ಕಿತ್ತೂರುರಾಣಿ ಚೆನ್ನಮ್ಮ ಇವರೀರ್ವರ ವೀರಧರ್ಮವನ್ನು ಜಾನಪದರ ದೃಷ್ಟಿಯ ಸತೀಪದ್ಧತಿಯನ್ನು ವಿವೇಚಿಸಿ, ಚರಿತ್ರೆಯ ಸಂದರ್ಭದೊಂದಿಗೆ ಪ್ರತ್ಯೇಕ ಅಧ್ಯಯನ ಸೂಕ್ತ ಎಂದಿದ್ದಾರೆ. ಒಟ್ಟಾರೆ 'ಹರತಿ ಸಿರಿ' ನಾಯಕತ್ವ ಸಾರುವ ಕೃತಿಯಾಗಿದ್ದು ಆ ರಣವಿಕ್ರಮರ ಜೊತೆ ಓಬವ್ವ ಮಿನುಗುತ್ತಾ ಇತಿಹಾಸದುದ್ದಕ್ಕೂ ಸಾಗುತ್ತಾ ಬಂದಿರುವುದು, ಉಲ್ಲೇಖಗೊಂಡಿರುವುದು ಸ್ವಾಗತಾರ್ಹವಾದುದು, ಗುರುತಿಸುವಂಥಹದ್ದು. ವೀರನಾಯಕರು ತಾವೇ ಸ್ವತಃ 'ದುರ್ಗದ ಸಿಂಹಿಣಿ ಓಬವ್ವ' ನಾಟಕವನ್ನು ಬರೆದು ಅಖಿಲ ಕರ್ನಾಟಕ ನಾಯಕರ ಮೂರನೆಯ ಸಮ್ಮೇಳನವನ್ನು ಚಳ್ಳಕೆರೆಯಲ್ಲಿ ನೆಡೆಸಲು ತೀರ್ಮಾನವಾದಾಗ, ಅತ್ಯಲ್ಪ ಸಮಯದಲ್ಲಿಯೇ ಅವರು ಹಿರಿಯೂರಿನ ಕಲಾವಿದರನ್ನು ಹುರಿದುಂಬಿಸಿ ಆ ಸಂದರ್ಭದಲ್ಲಿ ಈ ನಾಟಕದ ಪ್ರಥಮ

ಪ್ರದರ್ಶನ ಏರ್ಪಡಲು ಕಾರಣರಾದರು. ಆಗ ನೆಡೆದ ಈ ನಾಟಕ ಓಬವ್ವನ ಸಾಹಸಗಾಥೆ ದಿನೇ ದಿನೇ ಹೆಚ್ಚುತ್ತಾ ಸುತ್ತಮುತ್ತಲಿನ ಗ್ರಾಮಗಳಲ್ಲಿ ಈ ನಾಟಕ ಯಶಸ್ವಿಯಾಗಿ ಪ್ರದರ್ಶನಗೊಳ್ಳತೊಡಗಿತು. ಓಬವ್ವ ನಾಡಿನಾದ್ಯಂತ ಜನಮನ ಸೂರೆಗೊಳ್ಳತೊಡಗಿದಳು. ಓಬವ್ವನ ಸಾಹಸವನ್ನು ಪಾತ್ರದಾರಿಯ ಮೂಲಕ ಕಂಡು ಜನ ಸಂತಸಪಡುತ್ತಿದ್ದರು. ಆಕೆಗೆ ಗೌರವ ಸಲ್ಲಿಸುತ್ತಿದ್ದರು.

೪. ಚಿತ್ರದುರ್ಗದ ಒನಕೆ ಓಬವ್ವ : ಚಾರಿತ್ರಿಕ ವಿವೇಚನೆ. ಪ್ರೊ.ಲಕ್ಷ್ಮಣ್ ತೆಲಗಾವಿ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦ ಈ ಗ್ರಂಥದಲ್ಲಿ ಮಾನ್ಯ ಶ್ರೀಯುತ ಪ್ರೊ.ಲಕ್ಷ್ಮಣ್ ತೆಲಗಾವಿಯವರು ಎಂ.ಎಸ್. ಪುಟ್ಟಣ್ಣರವರು ತಮ್ಮ ಚಿತ್ರದುರ್ಗದ ಪಾಳೆಯಗಾರರು ಕೃತಿಯಲ್ಲಿ ಬರೆದಿರುವ ಓಬವ್ವನ ಸಾವಿನ ಬಗ್ಗೆ ಚರ್ಚಿಸಿದ್ದಾರೆ. ಜೊತೆಗೆ ಓಬವ್ವನ ಚರಿತ್ರಾತ್ಮಕತೆ, ಸಾಹಸ, ಕಳ್ಳಗಂಡಿ, ಮತ್ತು ಓಬವ್ವನ ಅಂತ್ಯದ ಬಗ್ಗೆ ಚರ್ಚಿಸಿದ್ದಾರೆ. ನಾಯಕ ಅರಸರಿಗೆ ಸಂಬಂಧಪಟ್ಟ ಹಲವಾರು ದಾಖಲೆಗಳೊಂದಿಗೆ ಶ್ರುತ ಪಡಿಸಿದ್ದಾರೆ ಓಬವ್ವನ ಚರಿತ್ರೆಯನ್ನು, ಛಲವಾದಿ ಕಟ್ಟೆಯನ್ನು ಪ್ರಸ್ತಾಪಿಸಿದ್ದಾರೆ. ಕೋಟೆಯಲ್ಲಿ ಕಹಳೆಯವರಿಗಾಗಿ ನಾಯಕರು ನಿರ್ಮಿಸಿಕೊಟ್ಟಿರುವ ಕಟ್ಟೆ ಮನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಓಬವ್ವನ ಚರಿತ್ರೆಯನ್ನು ಸಮರ್ಥಿಸಲು ಚಿತ್ರದುರ್ಗದ ನಾಯಕರ ಅರಸರಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಒಂದಾದ ಹಾಗೂ ಭಿನ್ನ ಸಂಪ್ರದಾಯದ ದಾಖಲೆಯಲ್ಲಿ (ಕೈಫಿಯತ್) ಪ್ರಸ್ತಾಪಿಸಲಾದ ಘಟನೆಯ ಕಾಲಮಾನದ ಬಗ್ಗೆ ಮತ್ತು ಪ್ರೊ.ಕೃಷ್ಣಯ್ಯ ಅವರು ಬರೆದಿರುವ ಕಾಲಮಾನದ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಓಬವ್ವೆಗೆ ಸಂಬಂಧಿಸಿದ ಘಟನೆಗಳ ಕಾಲಾನುಕ್ರಮಣಿಕೆ ಮತ್ತು ವಿಮರ್ಶೆ ಕುರಿತು ಕೈಫಿಯತ್ ಪ್ರಕಾರ ಮತ್ತು ನಾಯಕರ ನಿರೂಪ ಅಧಿಕಾರದ ಬಗ್ಗೆ ತುಲನೆ ಮಾಡಿ ಬರೆದಿದ್ದಾರೆ. ಒನಕೆ ಓಬವ್ವಳ ಪೀಳಿಗೆಯವರ ವಿವರವುಳ್ಳ ದಾಖಲೆಯನ್ನು ಗ್ರಂಥದಲ್ಲಿ ಪ್ರಕಟಿಸಿದ್ದಾರೆ. ಒನಕೆ ಓಬವ್ವಳ ನೇರ ವಂಶವೃಕ್ಷವನ್ನು ಕ್ರ.ಶ ೧೩೫೪ರಿಂದ ೧೯೯೨ರವರೆಗೆ ವಿವರವಾಗಿ ನೀಡಿದ್ದಾರೆ. ಓಬವ್ವನ ಘಟನೆ ನೆಡೆದ ಕಾಲವನ್ನು ನಿಖರವಾಗಿ ಸಂದರ್ಭದೊಂದಿಗೆ ಬರೆದಿದ್ದಾರೆ. ಹಾಗೂ ಓಬವ್ವ ಸಾಹಸಿ ಮಹಿಳೆ ಎಂದಿದ್ದಾರೆ. ಬಹುತೇಕ ಚಿತ್ರದುರ್ಗದ ಇತಿಹಾಸವನ್ನು ಶೋಧಿಸಿ ಬರೆದ ವಿದ್ವಾಂಸರ ಸಾಲಿನಲ್ಲಿ ಮುಂಚೋಣಿಯಲ್ಲಿರುವರು ಲಕ್ಷ್ಮಣ ತೆಲಗಾವಿಯವರು.

೫. ಕರ್ನಲ್ ಮೆಕೆಂಝಿ ಮತ್ತು ಕೈಫಿಯತ್ತುಗಳು : ಡಾ. ಬಿ.ಎಸ್. ಪುಟ್ಟಸ್ವಾಮಿ ಎಂ.ಎ.ಪಿ.ಹೆಚ್.ಡಿ. ಪ್ರಕಾಶಕರು, ಮನೋಜ್ ಪಬ್ಲಿಕೇಷನ್, ೧೧, ೧ನೇ ಅಡ್ಡರಸ್ತೆ, ೩ನೇ ಮುಖ್ಯರಸ್ತೆ, ಕನಕ ಲೇಔಟ್, ಪದ್ಮನಾಭನಗರ, ಬೆಂಗಳೂರು-೫೬೦೦೭೦ ೨೦೧೨

ಕೈಫಿಯತ್ತುಗಳು ಸಾಮಾಜಿಕ ಸ್ಥಳ ಪುರಾಣ, ರಾಜಕೀಯ, ಭೌಗೋಳಿಕ, ಸಂಪ್ರದಾಯ, ಜಾತಿ,ಮತ,ಕೋಟೆ,ಕೊತ್ತಳ,ಪ್ರಾಣಿ,ಪಕ್ಷಿ ಹೀಗೆ ಇನ್ನೂ ಅನೇಕ ಪರಿಸರಗಳ ವಿವರಗಳನ್ನು ಒಳಗೊಂಡಿವೆ. ಮೆಕೆಂಝಿ ಕಾಲಕ್ಕೆ ಆದ ಖುದ್ದಾಗಿ ಗ್ರಾಮೀಣ ಪ್ರಬುದ್ಧ ಜನರಿಂದ ಬರೆಯಿಸಿಕೊಂಡ ವೈವಿಧ್ಯದ

ಪತ್ರಾವಳಿಗಳು 'ಕೈಫಿಯತ್' ಎಂದು ಗುರುತಿಸಲ್ಪಟ್ಟಿವೆ. ಹೈದರನ ಏಳಿಗೆಯಿಂದಾಗಿ 'ಪಾಳೇಗಾರರ ಯುಗ' ಅಂತ್ಯ ಕಂಡಿತ್ತು. ಈ ಹೊತ್ತಿಗೆಯಲ್ಲಿ ಭಾಗ-೨ ರಲ್ಲಿ ಕೈಫಿಯತ್ತುಗಳು ಸಂಕಥಿಸಿರುವ ದಕ್ಷಿಣ ಕರ್ನಾಟಕದ ಸಂಕ್ಷಿಪ್ತ ಇತಿಹಾಸದ ಅಡಿಯಲ್ಲಿ ಆರು ಅಧ್ಯಯನಗಳನ್ನು ರಚಿಸಿದ್ದು ನಾಲ್ಕನೇ ಅಧ್ಯಾಯವಾದ ಪಾಳೆಯಗಾರರ ಕಾಲ ಎಂಬುದರಲ್ಲಿ (ಪುಟ ಸಂಖ್ಯೆ ೧೫೮) ಐದನೇ ಮದಕರಿನಾಯಕ-ಕಾಲ ೧೭೫೪-೧೭೭೯ ರವರೆಗೆ ಆಳಿದ ಈತ ನಾಯಕರಲ್ಲಿ ಅತ್ಯಂತ ಪ್ರಬಲ, ಪ್ರಸಿದ್ಧನಾದವ. ಈತನ ಪ್ರಾಬಲ್ಯವಂತ ಹೈದರಾಲಿ ಹಾಗೂ ಮರಾಠರು ಆತನ ಸ್ನೇಹ ಪಡೆಯಲು ನಿರ್ಧರಿಸಿದರು. ಆದರೆ ಹೈದರ್ ಆತನನ್ನು ಮುಗಿಸಲು ನಿರ್ಧರಿಸಿ ಕೋಟೆ ಮುತ್ತಿದನು. ಆದರೆ ಏಳು ಸುತ್ತಿನ ಅಬೇಧ್ಯ ಕೋಟೆಯನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನಂತರ ಬೇಧಿಸಿದ ರಹಸ್ಯ ಮಾರ್ಗದಲ್ಲಿ ಹೈದರಾಲಿಯ ಸೈನಿಕರು ಪ್ರವೇಶಿಸಲು ಪ್ರಯತ್ನಿಸಿದಾಗ ಅಲ್ಲಿಗೆ ಬಂದ ಕಾವಲುಗಾರನ ಹೆಂಡತಿ ಓಬವ್ವ ತನ್ನ ಕೈಯಲ್ಲಿದ್ದ ಒನಕೆಯಿಂದ ಹೊಡೆದು ಅನೇಕ ಶತ್ರುಗಳನ್ನು ಕೊಂದಳು. ಇಂದಿಗೂ ದುರ್ಗದ ಕೋಟೆಯ ಪಶ್ಚಿಮ ಮಾರ್ಗವನ್ನು ಓಬವ್ವನ ಕಿಂಡಿಯೆಂದೇ ಕರೆಯುತ್ತಾರೆ, ಎಂದು ಉಲ್ಲೇಖಿಸಲಾಗಿದೆ. ಮೆಕೆಂಝಿ ಆಂಗ್ಲರಕೈವಶವಾದ ಕೋಟೆಗಳ ಬಗೆಗಿನ ವಿವರವನ್ನು ಚಿತ್ರಗಳ ಸಹಿತ ನಕಾಶೆಯನ್ನು ತಯಾರಿಸಿ ದಾಖಲಿಸುವ ಅಧಿಕಾರಿಯಾಗಿದ್ದ. ನಕಾಶೆಯಲ್ಲಿ ಓಬವ್ವನ ಕಿಂಡಿಯನ್ನು ಚಿತ್ರಿಸಿದ್ದು ಆಕೆಯ ಸಾಹಸವನ್ನು ಉಲ್ಲೇಖಿಸಿದ್ದಾನೆ. ಆತ ಚಿತ್ರದುರ್ಗದ ಕೋಟೆಯ ಓಬವ್ವನ ಸಾಹಸಗಾಥೆಯನ್ನು ಕೈಫಿಯತ್ತಿನಲ್ಲಿ ವಿವರಿಸಿದ್ದಾನೆ. ರಾಜಕೀಯದಲ್ಲಿ ಪುರುಷರಲ್ಲದೆ ಸ್ತ್ರೀಯರು ಪಾತ್ರವಹಿಸಿದ್ದನ್ನು ಕೈಫಿಯತ್ತುಗಳು ತಿಳಿಸುತ್ತವೆ.

೬. ಚಿತ್ರದುರ್ಗದ ಬಖೈರು : ಸಂಗ್ರಹಿಸಿದವರು ಹುಲ್ಲೂರು ಶ್ರೀನಿವಾಸ ಜೋಯಿಸರು. ಕ್ಯೂರೇಟರ್. ಪ್ರಾಚ್ಯ ಸಂಶೋಧನಾ ಮ್ಯುಸಿಯಂ , ಚಿತ್ರದುರ್ಗ, ಪ್ರಕಾಶಕರು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೂರನೆಯ ಹಂತ, ಮೈಸೂರು-೨

ಜೋಯಿಸರು ವೃತ್ತಿಯಲ್ಲಿ ವಕೀಲರಾದರು ಅವರಿಗೆ ಇತಿಹಾಸವೆಂದರೆ ಅತ್ಯಂತ ಪ್ರಿಯವಾದ ವಿಷಯವಾಗಿತ್ತು. ಚಿತ್ರದುರ್ಗದ ಶಾಸನಗಳು, ಇತಿಹಾಸ ಮತ್ತು ಐತಿಹ್ಯಗಳಲ್ಲಿ ಶ್ರೀಯುತರು ವಿಶೇಷವಾದ ಪರಿಶ್ರಮವನ್ನು ಪಡೆದಿದ್ದರು. ಶ್ರೀಯುತರು ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಭಾಗವಹಿಸಿ ಕಷ್ಟನಷ್ಟಗಳನ್ನು ಎದುರಿಸಿದ್ದರು. ಬಖೈರು ಎಂಬ ಶಬ್ಧ ಮುಸಲ್ಮಾನರ ಮೂಲ ಬಳಕೆಗೆ ಬಂದ ಅನ್ಯದೇಶ ಪದವಾಗಿದೆ. ಇದು ಚಿತ್ರದುರ್ಗದ ಕಡೆಯ ಕಾಲದ ಸ್ಥಿತಿಗಳನ್ನು ಪರಿಚಯ ಮಾಡಿಕೊಡುವುದಲ್ಲದೆ ಪ್ರಾಸಂಗಿಕವಾಗಿ ಆ ಊರಿನ ಪಾಳೆಯಗಾರರ ಪೂರ್ವ ಚರಿತ್ರೆಯನ್ನು ತಿಳಿಸುತ್ತದೆ. ಈ ಗ್ರಂಥದ ಪುಟ ಸಂಖ್ಯೆ ೨೨, ೨೩ ರಲ್ಲಿ ಪಾಳೆಯಗಾರರ ವಕೀಲರಾದ ಬಾಳಪ್ಪ, ಸೌರವಭಾಮರಾವ್ ವಕೀಲರ ಬಳಿ ಚಿತ್ರದುರ್ಗವನ್ನು ಆಕ್ರಮಿಸಲು ಬಂದು "ಶೀಮೆ ಎಷ್ಟು ಲಕ್ಷ ವರಹದ್ದು ಅದೆ?" ಎಂದು ಹುಕುಂ ಮಾಡಿ ತನ್ನ ವಕೀಲರೊಡನೆ

ಮಾತನಾಡಿ ದುರ್ಗದ ಬಗ್ಗೆ ವಿವರಗಳನ್ನು ಪಡೆಯುತ್ತಾನೆ. ಅದರಲ್ಲಿನ ಟಿಪ್ಪಣಿಯಲ್ಲಿ ಓಬವ್ವನ ಪ್ರಸ್ತಾಪವನ್ನು ಮಾಡಲಾಗಿದೆ.

"(ಟಿಪ್ಪಣಿ)– ಚಿತ್ರದುರ್ಗವು ಗಂಡುಜಾಗ ಎಂಬುದರಲ್ಲಿ ಸಂದೇಹವಿಲ್ಲ. ಭಾರತದಲ್ಲಿ ಪ್ರಸಿದ್ಧ ಯೋಧನಾದ ಘಟೋದ್ಗಜನ ಜನ್ಮ ಸ್ಥಳ. ಕದಂಬ ಸಾಮ್ರಾಜ್ಯ ಸ್ಥಾಪಕನಾದ ಮಯೂರಶರ್ಮನ ಆಶ್ರಯಸ್ಥಾನ. ರಣಮೂರ್ಖ ಕುಲದರಸರ ನೆಲೆಮನೆ , ಸುರತಾಳ ಭೂಭುಜನಿಂದಲೂ ಮನ್ನಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯದ ಸೇನಾನಿ ಮಲ್ಲಿನಾಥ ನಡುಗೊಂಟೆ, ರಣಧೀರರಾದ ಕಾಮಗೆರೆ ವಂಶ ಲಲಾಮರ ಪಾಳೆಯಗಾರರ ರಾಜಧಾನಿ ಸುತ್ತಲಿನ ಪಾಳೆಯಗಾರರನ್ನು ಮಟ್ಟ ಹಾಕಿದ ಗಂಡುಗಲಿ ಓಬಮ್ಮ ನಾಗತಿ, ಇಪ್ಪತ್ತಕ್ಕೂ ಮೇಲ್ಪಟ್ಟ ಮುಸಲ್ಮಾನ ಯೋಧರನ್ನು ಒನಕೆಯಿಂದ ಸಂಹರಿಸಿ ಕೋಟೆಯನ್ನು ರಕ್ಷಿಸಿದ ಓಬಿ ಎಂಬ ಧೀರರಮಣಿಯರು, ಚಿತ್ರದುರ್ಗದ ಸ್ತ್ರೀಯರು ಅಬಲೆಯರಲ್ಲ, ಪ್ರಬಲೆಯರು ಎಂಬ ಕೀರ್ತಿಯನ್ನು ಚಿತ್ರದುರ್ಗಕ್ಕೆ ತಂದಿರುವರು. ಇವುಗಳಿಂದ ವಕೀಲರ ಮಾತಿನ ಸತ್ಯತೆಯು ವ್ಯಕ್ತವಾಗುವುದು".[೪]

ಈ ರೀತಿಯಾಗಿ ಓಬವ್ವನ ಸಾಹಸವನ್ನು ಜೋಯಿಸರು ತಮ್ಮ ಈ ಕೃತಿಯಲ್ಲಿ ಬರೆದಿದ್ದಾರೆ. ಈ ಕೈಫಿಯತ್ತಿನ ಮೂಲಕ ಪ್ರಕೃತದಲ್ಲಿ ಅಂದು ನೆಡೆದಿರಬಹುದಾದ ಕೆಲವು ಘಟನೆಗಳ ವಿವರಗಳು ನಮಗೆ ಲಭಿಸುತ್ತವೆ. ಇಲ್ಲಿನ ಹಲಕೆಲವು ಸಂಗತಿಗಳು ಇತಿಹಾಸವನ್ನು ಬರೆಯುವವರಿಗೆ ಸ್ವಲ್ಪ ಮಟ್ಟಿಗೆ ನೆರವಾಗಬಲ್ಲದು. ಧೀರ ರಮಣಿ ಓಬವ್ವನ ಬಗ್ಗೆ ಜೋಯಿಸರು ೧೯೩೭ರಲ್ಲಿ ಸುಭೋದ ಪತ್ರಿಕೆಯಲ್ಲಿ ವೀರ ಕನ್ನಡಗಿತ್ತಿ ಓಬವ್ವ ಎಂಬ ಲೇಖನವನ್ನು ಬರೆದಿದ್ದು ಓಬವ್ವನ ಐತಿಹಾಸಿಕತೆಯನ್ನು ಸಾರಿದ್ದಾರೆ. ಅಲ್ಲಿಂದ ಮುಂದೆ ಓಬವ್ವ ಜನಜನಿತವಾದಳು.

೭. ಚಿತ್ರದುರ್ಗದ ಪಾಳಯಗಾರರು : ಎಂ.ಎಸ್.ಪುಟ್ಟಣ್ಣ ಕಾವ್ಯಾಲಯ, ಪ್ರಕಾಶಕರು ಜಯನಗರ, ಮೈಸೂರು–೧೪ ಅಕ್ಟೋಬರ್. ೨೯, ೧೯೨೪. ಚಿತ್ರದುರ್ಗದಲ್ಲಿ ಕೆಲವು ವರುಷಗಳವರೆಗೂ ವಾಸವಿದ್ದ ಇವರು ಅಲ್ಲಿನ ಬೆಟ್ಟದ ಮೇಲೂ ಅದರ ಸುತ್ತಲೂ ನಿರ್ಣಯವಾಗಿ ಕಟ್ಟಿದ ಕೋಟೆ ಕೊತ್ತಲಗಳೂ, ಎಣ್ಣೆ ತುಪ್ಪವನ್ನು ತುಂಬುವ ಬಾವಿಗಳೂ, ಧಾನ್ಯದ ಕಣಜಗಳು, ಮದ್ದು ಗುಂಡು ಫಿರಂಗಿ ಇವುಗಳನ್ನು ತಯಾರು ಮಾಡಲು ಬಂಡೆಗಳನ್ನು ಕೊರೆದು ಮಾಡಿದ್ದ ಏರ್ಪಾಡುಗಳನ್ನು ಮೊದಲಾದವನ್ನು ಇವೇ ಮೊದಲಾದವನ್ನು ಗಮನಿಸಿ ವಿಷಯಗಳನ್ನು ಪಾಳೆಯಗಾರರ ವಂಶಸ್ಥರಾದ ಬಸಪ್ಪ ನಾಯಕರು, ಶ್ಯಾನುಬೋಗರ ಪೂರ್ವಿಕರಿಂದ, ಕಡೇ ಮದಕರಿ ನಾಯಕನ ಚರಿತ್ರೆಯಿಂದ ಮೈಸೂರು ಗೆಜೆಟಿಯರ್ ಮೊದಲಾದವುಗಳಿಂದ ಸಂಗ್ರಹಿಸಿ ಬರೆದಿರುವುದಾಗಿ ತಿಳಿಸಿದ್ದಾರೆ.

ಈ ಗ್ರಂಥದ ಪುಟ ಸಂಖ್ಯೆ ೧೦೩ ರಲ್ಲಿ "ಓಬವ್ವನ ಪರಾಕ್ರಮ" ಎಂದೇ ಶೀರ್ಷಿಕೆ ನೀಡಿ ಆಕೆಯ ಸಾಹಸಗಾಥೆಯನ್ನು ವಿವರಿಸಿದ್ದಾರೆ, ಕೋಟೆಯ ಒಳಗಡೆ ಹೋಗಲು ಹೈದರನ ಕಡೆಯವರಿಗೆ ದಾರಿಸಿಗದೆ, ಕೋಟೆ ಒಡೆಯುವುದು ಅತ್ಯಂತ ಶ್ರಮವಾಗಿದ್ದು, 'ನುಗ್ಗಲು ಸಾಹಸ ಮಾಡಿಯಾರೆ, ಕೋಟೆ ಮೇಲಿನಿಂದ ಬೀಳುವ ಏಳು ಕೋಟೆ. ಗೋಡೆಯ ಸಮೀಪಕ್ಕೆ ಯಾರೂ

ಹೋಗದ ಹಾಗೆ ಮಾಡತಕ್ಕಂಥಾದ್ದು. ಒಂದು ವೇಳೆ ಹೊರ ಕೋಟೆಯನ್ನು ಹಲ್ಲಾ ಮಾಡಿ ತೆಗೆದುಕೊಂಡಾರೆ ಪುನಃ ಮತ್ತೊಂದು ಕೋಟೆ ಬತೇರಿ ಮೊದಲಿಗಿಂತಲೂ ಹೆಚ್ಚಾದ ತೊಂದರೆಯನ್ನು ಕೊಡ ತಕ್ಕಂಥಾದ್ದು."[೫] ಹೀಗೆ ಬೆಟ್ಟದ ಮೇಲೆ ಬೆಟ್ಟ ಕೋಟೆಯ ಮೇಲೆ ಕೋಟೆ ಇರತಕ್ಕದ್ದನ್ನು ಹಿಡಿದು ತೆಗೆದುಕೊಳ್ಳೋಣವೆಂದರೆ ಯಾವ ಕಡೆಯೂ ದಾರಿಯೇ ಸಿಕ್ಕದು. ಇದನ್ನು ಜೈಸುವುದು ಹೇಗೆ?– ಎಂದು ಹೈದರನು ಬೇದೋಪಾಯದಿಂದ ಭೇದಿಸಲು ಶೋಧನೆಗಾಗಿ ಜನಗಳನ್ನು ಬಿಟ್ಟಾಗ ಒಬ್ಬ ಮೊಸರಿನ ಹೆಂಗಸು ನುಸುಳಿ ಹೋದದ್ದನ್ನು ಕಂಡು ಆ ಸುಳುವನ್ನು ತಿಳಿದುಕೊಂಡು ಹೈದರನ ಸೇನೆಯವರು ಆಕಡೆ ಕೋಟೆಗೆ, ಏಣಿ, ಉಡು ಮೊದಲಾದವನ್ನು ಹಾಕಿ ಹಲ್ಲಾ ಹತ್ತಿದರು. ಒಂದು ಸಣ್ಣ ಬಂಡೆಯ ಸಂದು ಕಂಡು ಒಬ್ಬೊಬ್ಬರಾಗಿ ಒಳ ನುಗ್ಗುವ ಪ್ರಯತ್ನ ಮಾಡಿದರು. ಅಲ್ಲಿಯ ಗುಡ್ಡದ ಪಕ್ಕ ಗುಹೆಯನ್ನೇ ಮನೆ ಮಾಡಿಕೊಂಡು ಬದುಕಿದ್ದ ಕಹಳೆಯವನ ಸಂಸಾರವಿತ್ತು. ಚಾಕರಿ ಮುಗಿಸಿ ತರುವಾಯ ಗುಡಿಸಲಿಗೆ ಊಟಕ್ಕೆ ಬಂದಿದ್ದ ಅವನಿಗೆ ಹಿಟ್ಟು ಕೊಟ್ಟು ಅಲ್ಲಿಯೇ ಇದ್ದ ಸಿಹಿನೀರಿನ ಕೊಳಕ್ಕೆ ನೀರು ತರಲು ಬಂದ ಓಬಿಗೆ ಕಿಂಡಿಯ ಚೋರಿಯಲ್ಲಿ ಜನದ ಸಪ್ಪಳ ಕೇಳಿತು. ಕಳ್ಳಗಂಡಿಯ ಹೊರಗಡೆ ಜನದ ಗಲಗಾಯಿತು. ಶತ್ರುಗಳ ವಾಸನೆ ಗ್ರಹಿಸಿದ ಓಬಿ ಓಡಿ ಹೋಗಿ ಒನಕೆ ತಂದು ನುಸುಳಿದ ಸಿಪಾಯಿಯ ತಲೆಗೆ ಹೊಡೆದು ಎಳೆದು ಹಾಕಿದಳು. ಮತ್ತೊಬ್ಬ ಬಂದ, ಮಗದೊಬ್ಬ ಬಂದ, ಹೀಗೆ ೨೦೦–೩೦೦ ಜನದವರೆಗೂ ಒಬ್ಬೊಬ್ಬರಾಗಿ ಬಂದರು. ಹೊಡೆದು ಹೊಡೆದು ಹೆಣದ ರಾಶಿ ಬಿತ್ತು. ರಕ್ತ ಗುಂಡಿ ಕಟ್ಟಿತು. ಆ ಕಡೆ ಗಂಡ ಕೊಂಬಿನವನು ಚಾಕರಿಗೆ ಹೋಗಲು ಹೊತ್ತು ಮೀರಿತು. ಹೆಂಡತಿಯನ್ನು ಅರಸುತ್ತಾ ಬಂದವನಿಗೆ ವೀರಾವೇಶದಿಂದ ಪ್ರಜ್ಞೆ ತಪ್ಪಿ ಓಬಿಯೂ ಗಂಡನನ್ನೇ ಹೊಡೆಯುವುದಕ್ಕೆ ಬಂದಳು. ಅಷ್ಟರೊಳಗೆ ಹೊರಗಡೆಯ ಶತ್ರು ದಂಡಿನವರು ಹಾಗೆಯೇ ಕೋಟೆಯ ಮೇಲಕ್ಕೆ ಹತ್ತುವುದನ್ನು ಕಂಡು ತನ್ನ ಕೊಂಬನ್ನು ಊದಿದನು. ನಂತರ ಬಂದ ದಂಡು ಶತ್ರು ಪಡೆಯನ್ನು ನಾಶಮಾಡಿದರು. ಸ್ಥಳಕ್ಕೆ ಬಂದ ದುರ್ಗದ ದೊರೆ ಓಬಿಯ ಪರಾಕ್ರಮ ಸಾಹಸವನ್ನು ಕೊಂಡಾಡಿದ್ದು ಓಬವ್ವನ ವಂಶೀಕರು ಅಗಸನ ಕಲ್ಲಿನಲ್ಲಿ ಈಗಲೂ ಇದ್ದಾರೆಂದು ತಿಳಿಸಿದ್ದಾರೆ. ಹೀಗೆ ಓಬವ್ವನ ಸಾಹಸಗಾಥೆಯನ್ನು ಸಾರುವಲ್ಲಿ ಎಂ.ಎಸ್.ಪುಟ್ಟಣ್ಣನವರು ಹಿಂದೆ ಬಿದ್ದಿಲ್ಲ ಎನ್ನುವುದಕ್ಕೆ ಇದು ಶ್ರೇಷ್ಠ ಸಾಕ್ಷಿಯಾಗಿದೆ. ಇಲ್ಲಿ ಓಬವ್ವ ದುರ್ಗದ ಇತಿಹಾಸದಲ್ಲಿ ಐತಿಹಾಸಿಕ ವೀರನಾರಿಯಾಗಿದ್ದಾಳೆ.

೮. ಚಿತ್ರದುರ್ಗದ ವೀರ ಪಾಳೆಯಗಾರರ ಕಥೆಗಳು : ಲೇಖಕರು ಬಿ.ಎಲ್.ವೇಣು, ಪ್ರಕಾಶಕರು ಧೃತಿ ಪ್ರಕಾಶನ ಬಿ–೩, ಹಯಗ್ರೀವ ಅಪಾರ್ಟ್‌ಮೆಂಟ್ ನಂ೧–೨, ೧ನೇ ಅಡ್ಡರಸ್ತೆ, ೫ನೇ ಮುಖ್ಯರಸ್ತೆ, ನ.ರಾ ಕಾಲೋನಿ, ಬೆಂಗಳೂರು ೫೬೦೦೧೯. ಮುದ್ರಣ ೨೦೧೦.

ಚಿತ್ರದುರ್ಗ ಬಹುವಾಗಿ ಮೂರು ವಿಷಯಗಳಿಗೆ ಪ್ರಸಿದ್ಧಿಯಾಗಿದೆ ಎಂದೆನಿಸಿದೆ. ಒಂದು ನಾಯಕರು ಕಟ್ಟಿದ ಚಿತ್ರದುರ್ಗದ ಕಲ್ಲಿನ ಕೋಟೆ, ಎರಡು ಕನ್ನಡ ಕಾದಂಬರಿ ಲೋಕ ಕಂಡ

ಅತ್ಯದ್ಭುತ ಕಥಾಶಿಲ್ಪಿ ತ.ರಾ.ಸುರವರು. ಹಾಗೆಯೇ ಮೂರು ತರಾಸು ಕೀರ್ತಿಯನ್ನು ಮುಂದುವರೆಸಿದ ಹೊಸ ತಲೆಮಾರಿನ ಕಾದಂಬರಿಕಾರ ಬಿ.ಎಲ್.ವೇಣುರವರು. ತಮ್ಮ ಕೃತಿಗಳಲ್ಲಿ ತಮ್ಮ ಮೆಚ್ಚಿನ ಚಿತ್ರದುರ್ಗದ ಐತಿಹಾಸಿಕ ಆಗು-ಹೋಗುಗಳನ್ನು ಅವರು ಸ್ವಾರಸ್ಯವಾಗಿ ಸುಂದರವಾಗಿ ದಾಖಲಿಸಿದ್ದಾರೆ. ಅಂಥಹ ಕೃತಿಗಳಲ್ಲಿ ಇದೂ ಒಂದಾಗಿದೆ. ಇಲ್ಲಿ ಹೈದರ್ ದುರ್ಗದ ಕೋಟೆಯನ್ನು ಬೇಧಿಸುವುದು ತಿಳಿಯದೆ ದುರ್ಗದ ಸೇನೆಯಲ್ಲಿದ್ದ ಸುಮಾರು ಮೂರು ಸಾವಿರ ಮುಸಲ್ಮಾನ್ ಯೋಧರಿಗೂ ಅವರ ಮೇಲಾಧಿಕಾರಿಗಳಿಗೂ ಜಹಗೀರುಗಳ ಆಸೆ ಹುಟ್ಟಿಸಲಾಯಿತು. ದುರ್ಗದ ದುರದೃಷ್ಟ ಅವರು ಅಮಿಷಗಳಿಗೆ ಬಲಿಯಾದರು. ಸಂಗ್ರಹಾಲಯದ ಕತ್ತಿ ಕಠಾರಿಗಳು ಬಿದ್ದವು, ಕೋವಿಗಳು ಕೆಟ್ಟವು, ತೋಪುಗಳು ತೂತಾದವು, ಮದ್ದು ಗುಂಡುಗಳಿಗೆ ಸೆಗಣಿ ಬೆರೆಸಿದ್ದರು. ಫಕೀರನ ವೇಷದಲ್ಲಿ ಕಳ್ಳನರಸಪ್ಪ ಮೊಹರಂ ಉತ್ಸವದೊಡನೆ ಕೋಟೆಯಿಂದ ಪಾರಾಗಿ ಹೈದರನ ಪಾಳೆಯ ಸೇರಿದ. ಚಿತ್ರದುರ್ಗದ ಕೋಟೆಯ ಸಮಸ್ತವನ್ನೂ ಬಲ್ಲ ಅವನಿಂದ ಕೋಟೆಯ ವಾಯುವ್ಯದಲ್ಲಿದ್ದ ಕಳ್ಳಗಂಡಿಯ ಬಗ್ಗೆ ಅರಿತ ಹೈದರ್ ತನ್ನವರನ್ನು ಯಾರೂ ಇಲ್ಲದ ರಾತ್ರಿಯಲ್ಲಿ ನುಗ್ಗಿಸಲು ಸನ್ನದ್ದು ಮಾಡಿದ. ಅಲ್ಲಿಯೇ ಬತೇರಿಯ ಕಾವಲುಗಾರನ ಹೆಂಡತಿ ಓಬವ್ವ ಗಂಡ ಬರುವುದರೊಳಗಾಗಿ ಪಕ್ಕದವರ ಒನಕೆ ನೀಡಲು ಹೊರಟಾಗ ಸಿಹಿನೀರಿನ ತೊರೆಯ ಬಳಿ ಪಿಸುಮಾತು ಕೇಳಿ, ಅದು ಅರ್ಥವಾಗದ ಉರ್ದುಭಾಷೆ ಮಾತುಗಳು ಕೇಳಿಬಂದ ಮೋಸದ ವಾಸನೆ ಹತ್ತಿದ ಓಬವ್ವ ಕಿಂಡಿಯಲ್ಲಿ ನೋಡುತ್ತಲೇ ತಲೆಯೊಂದು ಕಾಣಿಸಿತು. ಕೈಯಲ್ಲಿದ್ದ ಒನಕೆ ತಲೆಯ ಮೇಲೆರಗಿತ್ತು, ಇನ್ನೊಂದು ತಲೆ ಅದಕ್ಕೂ ಅದೇ ಗತಿಯಾಯ್ತು, ಕ್ರಮೇಣ ಓಬವ್ವ ರಣಚಂಡಿಯಾದಳು. ಶತ್ರುಗಳ ಮಾರಣ ಯಜ್ಞವೇ ನೆಡೆಯಿತು. ಊಟಕ್ಕೆಂದು ಮನೆಗೆ ಬಂದ ಮದ್ದಹನುಮಪ್ಪನಿಗೆ ಕಳ್ಳಗಂಡಿಯ ಬಳಿಯ ಶಬ್ದ ಕೇಳಿ, ನೋಡಿದ ಕೂಡಲೇ ಕಹಳೆ ತೆಗೆದು ಉಸಿರುಗಟ್ಟಿ ಊದಿದ, ಕ್ಷಣ ಮಾತ್ರದಲ್ಲಿ ಬಂದ ದುರ್ಗದ ದಂಡು ಶತ್ರುಗಳನ್ನು ಧೂಳೀಪಟ ಮಾಡಿದರು. ಓಬವ್ವೆಯ ಸಾಹಸ ಕೇಳಿದ ದೊರೆ ಬಂದು ನೋಡಿ ವಾತ್ಸಲ್ಯದಿಂದ ತಲೆ ಸವರಿ "ಈಕೆ ಸಾಮಾನ್ಯ ಹೆಣ್ಣಲ್ಲ, ದುರ್ಗದ ಕಣ್ಣು" ಎಂದು ನುಡಿದು ತನ್ನ ತೊಡೆಯ ಮೇಲೆ ಆಕೆಯ ತಲೆಯಿರಿಸಿಕೊಂಡಾಗ ಕ್ಷಣ ಕಣ್ಣು ತೆರೆದ ಓಬವ್ವ "ಅಣ್ಣಾ ಅಣ್ಣಾ ನಿನ್ನ ತಲೆ ಯಾರಿಗೂ ದಕ್ಕಬಾರದು, ಅದು ಯಾರಿಗೂ ತಲೆ ಬಾಗಬಾರದು" ಎಂದು ಚಿಟ್ಟನೆ ಚೀರಿ ದೊರೆಯ ತಲೆಯ ಮೇಲೆಯೇ ಗತ ಪ್ರಾಣಳಾದಳು ಎಂದಿದ್ದಾರೆ. ದುರ್ಗದ ಜನ ಆಕೆಯನ್ನು ಕೋಟೆ ಸಲಹಿದ ತಾಯಿಯೆಂದು ಕೊಂಡಾಡಿದರು. ಹೀಗೆ ಶ್ರೀಯುತ. ಬಿ.ಎಲ್.ವೇಣು ರವರು ಓಬವ್ವನ ಸಾಹಸಗಾಥೆಯನ್ನು ತಮ್ಮ ಮನದಾಳದ ಮಾತುಗಳಿಂದ ಅಕ್ಷರಗಳಲ್ಲಿ ಮೂಡಿಸಿದ್ದಾರೆ.

ಹಾಗೆಯೇ ನಂತರ ಎರಡನೇ ಬಾರಿ ಹೈದರ್ ತನ್ನ ಕುತಂತ್ರದಿಂದ ದುರ್ಗದ ಮಹಾದ್ವಾರದಿಂದ ಒಳನುಗ್ಗಿದನು. ಚಿತ್ರದುರ್ಗದ ಪ್ರತೀ ಮಹಿಳೆಯೂ ವೀರವನಿತೆ ಓಬವ್ವೆಯಾದಳು, ಅಷ್ಟು ಹೋರಾಟ ನೆಡೆಸಿದರು ಎಂದಿದ್ದಾರೆ. ಆದರೆ ಆಯುಧ ಪಾಣಿಗಳಾದ ಕಟುಕರ ಎದುರು ಅವರ

ಶಕ್ತಿ ಕ್ಷೀಣಿಸಿತು. ದುರ್ಗದ ಕೋಟೆ ೧೭೦೦ನೇ ವಿಳಂಬಿನಾಮ ಸಂವತ್ಸರ (ಕ್ರಿ.ಶ.೧೭೭೯)ದ ಫಾಲ್ಗುಣ ಬಹುಳ ಪಂಚಮಿ ಶುಕ್ರವಾರ ಹೈದರನ ವಶವಾಯಿತು. ದುರ್ಗದ ಅಂತ್ಯವನ್ನು ನಾಯಕನ ಅಪಹರಣವನ್ನು ಕಲಕುವಂತೆ ಬರೆದಿದ್ದು ಓಬವ್ವೆಯನ್ನು ಶಕ್ತಿ ಸ್ವರೂಪಿಣಿಗೆ ಹೋಲಿಸಲಾಗಿದೆ. ದುರ್ಗದ ಇತಿಹಾಸದಲ್ಲಿ ಓಬವ್ವ ಅಮರಳಾಗಿಸಿದ್ದಾರೆ.

೯. **ಚಿತ್ರದುರ್ಗದ ಕಲ್ಲಿನ ಕೋಟೆ :** ಐತಿಹ್ಯ ಇತಿಹಾಸ ನಾಯಕರ ಆಳ್ವಿಕೆ ಕೋಟೆ ಕೊತ್ತಲಗಳು. ಅಂದು–ಇಂದಿನ ಸಂಕ್ಷಿಪ್ತ ಮಾಹಿತಿ. ಲೇಖಕರು ಡಾ. ಬಿ.ಎಲ್. ವೇಣು. ಪ್ರಕಾಶಕರು ವಸಚಿತ, ಪ್ರಕಾಶನ ನಂ. ೩೬೦, ೧೦ನೇ 'ಬಿ' ಮುಖ್ಯರಸ್ತೆ, ३ನೇ ಬ್ಲಾಕ್, ಜಯನಗರ. ಬೆಂಗಳೂರು– ೫೬೦೦೧೧. ವರ್ಷ. ೨೦೧೪.

ಇಲ್ಲಿ ಲೇಖಕರು ಕೋಟೆ ನೋಡುತ್ತಾ ಹೋಗುವವರಿಗೆ ಅಲ್ಲಿನ ಸ್ಥಳಗಳ ಬಗ್ಗೆ ಒಂದಿಷ್ಟು ಮುಖ್ಯ ಮಾಹಿತಿಯನ್ನು ಈ ಪುಸ್ತಕ ನೀಡುತ್ತದೆಂಬುದನ್ನು ಅರಸರ ಚರಿತ್ರೆಯ ಬಗ್ಗೆ ತಿಳಿಸಿದ್ದಾರೆ. ಓಬವ್ವನ ಕಿಂಡಿ ಎಂದೇ ಅಧಿಕೃತ ಮುದ್ರೆಯೊತ್ತಿಸಿಕೊಂಡ ಈ ಕಳ್ಳಗಂಡಿಯು ಕೋಟೆಯ ಎಲ್ಲಾ ದ್ವಾರಗಳನ್ನು ಮುಚ್ಚಿ ಬಿಟ್ಟರೆ ಹೊರಗಿನಿಂದ ಸಂದೇಶ ತರುವವರು ವಾಯುವ್ಯ ದಿಕ್ಕಿನಲ್ಲಿರುವ ಈ ಪುಟ್ಟ ಕಿಂಡಿಯಿಂದಲೇ ಬರಬೇಕಿತ್ತು. ಅದರ ರಹಸ್ಯವು ದುರ್ಗದ ಪ್ರಮುಖರಿಗೆ ಮಾತ್ರ ತಿಳಿದಿತ್ತು. ಈ ಮಾರ್ಗದ ರಹಸ್ಯವನ್ನು ಹೊರಗೆಡಹಿದವನು ಪ್ರಧಾನಿ ಹುದ್ದೆಯಿಂದ ಪದಚ್ಯುತನಾದ ಕಳ್ಳಿನರಸಪ್ಪ ಎಂಬ ಜನಜನಿತವಾದ ಮಾತಿನಂತೆ ಹೈದರನ ಸೈನಿಕರು ಪಿಸುಗುಟ್ಟುವ ಸದ್ದು ನೀರು ತರಲು ಬಂದ ಓಬವ್ವೆಗೆ ತಿಳಿದು ಅವಳ ಸಮಯಪ್ರಜ್ಞೆ ಜಾಗೃತವಾಗಿ ತನ್ನ ಕೋಟೆಗೆ ಬಂದ ಆಪತ್ತೆಂದು ಕ್ಷಣದಲ್ಲಿ ಗ್ರಹಿಸಿ ಒಳನುಸುಳಿ ಬಂದವರನ್ನೆಲ್ಲಾ ಒನಕೆಯಿಂದ ಬಡಿದು ಎಳೆದು ಬಿಸಾಕಿದ ಗಟ್ಟಿಗಿತ್ತಿ. ಹೀಗೆ ರಣಹುಚ್ಚಿ ಓಬವ್ವೆಯನ್ನು ಕಂಡ ಗಂಡ ಮದ್ದಹನುಮಪ್ಪ ಭೀತನಾಗಿ ಕಹಳೆ ಊದಿದ. ದುರ್ಗದ ಸೈನಿಕರು ದೌಡಾಯಿಸಿ ಬಂದು ಶತ್ರು ಸೈನಿಕರನ್ನು ಬಡಿದು ಹಾಕಿದರು. ಅಂದು ದುರ್ಗಕ್ಕೆ ಜಯ ತಂದು ಕೊಟ್ಟವಳು ಕೋಟೆಯನ್ನು ರಕ್ಷಿಸಿದ ತಾಯಿ ಓಬವ್ವ–ಒನಕೆ ಓಬವ್ವನೆಂದೇ ಇತಿಹಾಸದಲ್ಲಿ ಅಮರಳಾಗಿದ್ದಾಳೆ. ಇಂದಿಗೂ ಅಲ್ಲಿಗೆ ಬಂದ ಪ್ರವಾಸಿಗರು ಓಬವ್ವನಂತೆ ಅನುಕರಿಸುವ ದೃಶ್ಯ ಮನನೀಯ ಎಂದಿದ್ದಾರೆ. ಇದು ಓಬವ್ವನ ಕಿಂಡಿಯ ಸ್ಥಳ ಮಹಿಮೆ. ಹೀಗೆ ಓಬವ್ವ ಈ ಕೃತಿಯಲ್ಲಿ ಚಿತ್ರಿತಳಾಗಿ ತನ್ನ ಸ್ಥಾನವನ್ನಾಕ್ರಮಿಸಿಕೊಂಡಿದ್ದಾಳೆ.ಪ್ರವಾಸಿಗರ ಪ್ರಮುಖ ಆಕರ್ಷಣೆಯಾಗಿ ಓಬವ್ವನ ಕಿಂಡಿ ನಿಂತಿದೆ.

೧೦. **ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನ ವೀರವನಿತೆ ಓಬವ್ವ:** ಮೊದಲನೆಯದಾಗಿ ಕರ್ನಾಟಕದ ಇತಿಹಾಸದ ಸಂಶೋಧನೆ, ಅಧ್ಯಯನಗಳಿಗಾಗಿ ತಮ್ಮ ಜೀವನದ ಬಹುಪಾಲನ್ನು ಮುಡುಪಾಗಿಟ್ಟ ಜೋಯಿಸರು ನಾಡುನುಡಿಯ ಬಗ್ಗೆ ನಿಷ್ಪಕ್ಷಪಾತವಾಗಿ, ವಸ್ತುನಿಷ್ಠವಾಗಿ ಇತಿಹಾಸವನ್ನು ರಚಿಸಲು ತೊಡಗಿದ ಪ್ರಾಮಾಣಿಕ ವಿದ್ವಾಂಸರು ಇತಿಹಾಸದ ತಪ್ಪಿಹೋದ ಕೊಂಡಿಗಳನ್ನು ಬೆಸೆಯುವಲ್ಲಿ ಮೂಲ ಸಾಮಗ್ರಿಯನ್ನು ನೀಡಿದಂಥಹವರು. ದಿನಾಂಕ: ೧೯೩೨

ಮೇ,೧೨ರಂದು ಪತ್ರಿಕೆ/ಸ್ಮರಣ ಸಂಚಿಕೆಯಾದ ಸರಸ್ವತಿಯಲ್ಲಿ "ವೀರ ಕನ್ನಡಗಿತ್ತಿ ಓಬವ್ವ" ಎಂಬ ಲೇಖನವನ್ನು ಪ್ರಕಟಗೊಳಿಸಿ ಓಬವ್ವೆಯ ಇರುವನ್ನು ಸಾರಿದವರು. ನಂತರ ಅದೇ ವರ್ಷದಲ್ಲಿ ದುರ್ಗದ ಕತೆಗಾರ ಸಂಚಿಕೆಯಲ್ಲಿ "ವೀರಮಾತೆಯ ವೀರವಾಣಿ" ಎಂಬ ಶೀರ್ಷಿಕೆಯಡಿ ಓಬವ್ವೆಯ ಸಾಹಸಗಾಥೆಯನ್ನು ಸಾರಿದವರು. ನಂತರ ನವೆಂಬರ್ ೧೯೫೩ರಲ್ಲಿ ದುರ್ಗದಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆ ಸುಬೋಧದಲ್ಲಿ "ವೀರ ರಮಣಿ ಓಬವ್ವ" ಎಂಬ ಶೀರ್ಷಿಕೆಯಿಂದ ಒಂದು ಅಭೂತಪೂರ್ವವಾದ ಲೇಖನವನ್ನು ಪ್ರಕಟಿಸುವುದರೊಂದಿಗೆ ನಾಡಿನ ಜನರಿಗೆ ಓಬವ್ವೆಯ ಇರುವನ್ನು ಓಬವ್ವೆಯ ಸಾಹಸಗಾಥೆಯನ್ನು ಸಾರಿದ್ದಾರೆ.

ಜೋಯಿಸರು ಹೆಚ್ಚು ಕಾಲ ಬದುಕಿದ್ದಿದ್ದರೆ, ಅವರಿಗೆ ಇನ್ನೂ ಸೌಲಭ್ಯ, ಪ್ರೋತ್ಸಾಹವಿದ್ದಿದ್ದರೆ ಇತಿಹಾಸಕ್ಕೆ ಅದರಲ್ಲೂ ನಾಡಿನ ವೀರರಮಣಿ ಓಬವ್ವೆಯ ಇತಿಹಾಸ ಹೊರ ತರುವಲ್ಲಿ ಮಹೋನ್ನತ ಸೇವೆ ಸಲ್ಲಿಸುತ್ತಿದ್ದರೇನೋ, ಜೋಯಿಸರು ಮಾಡಿದ ಮಹೋನ್ನತ ಕಾರ್ಯವೆಂದರೆ ಐತಿಹಾಸಿಕಕತೆ, ಕಾದಂಬರಿಗಳನ್ನು ಬರೆದ ಹಲವಾರು ಸಾಹಿತಿಗಳಂತೆ ಇವರು ಚರಿತ್ರೆಯನ್ನು ಅಮೂಲಾಗ್ರ ಶೋಧಿಸಿದರು. ಇತಿಹಾಸದ ತಿರುಳನ್ನು ಕನ್ನಡಿಗರಿಗೆ ಕೊಟ್ಟು ಆ ವಿಷಯದಲ್ಲಿ ಜನರ ಆಸಕ್ತಿಯನ್ನು ಕೆರಳಿಸಿದರು. ಚಿತ್ರದುರ್ಗದ ಇತಿಹಾಸದ ಸಂಶೋಧನೆಗಾಗಿ ತಮ್ಮ ಜೀವಿತಾವಧಿಯ ಕೊನೆಯ ದಿನದವರೆಗೂ ಹೋರಾಡಿದಂತಹ ವ್ಯಕ್ತಿ. ಇವರು ಕನ್ನಡದಲ್ಲಿ ಪತ್ರಿಕೆಗಳಲ್ಲಿ ಓಬವ್ವೆಯ ಬಗ್ಗೆ ಲೇಖನಗಳನ್ನು ಬರೆದು ತಿಳಿಸಿದರೂ ಸಮಾಧಾನವಾಗದೆ ತೆಲುಗಿನಲ್ಲಿಯೂ ಸಹ ಓಬವ್ವೆಯ ಬಗ್ಗೆ ಪ್ರಕಟಿಸಿದ್ದಾರೆ. ತೆಲುಗು ಭಾಷೆಯಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆ ತೆಲುಗುತಲ್ಲೀ ಎಂಬ ಪತ್ರಿಕೆಯಲ್ಲಿ ಮಾರ್ಚ್ ೧೯೩೮ರಲ್ಲಿ ಕರ್ನಾಟಕ ವೀರವನಿತೆ ಓಬವ್ವ ಎಂಬ ಶೀರ್ಷಿಕೆ ಅಡಿಯಲ್ಲಿ ಓಬವ್ವೆಯ ಸಾಹಸಗಾಥೆ ಪ್ರಕಟಗೊಂಡಿದೆ. ಶ್ರೀಯುತ ಡಿ.ಎನ್.ರಾಮರೆಡ್ಡಿಯವರು ತೆಲುಗಿಗೆ ಅನುವಾದ ಮಾಡಿದ್ದಾರೆ. ಹೀಗೆ ಓಬವ್ವೆಯ ಇರುವನ್ನು, ವೀರಗಾಥೆಯನ್ನು, ಹುಲ್ಲೂರು ಶ್ರೀನಿವಾಸ ಜೋಯಿಸರು ಪ್ರಚುರಪಡಿಸಿದ್ದು ಐತಿಹಾಸಿಕ ಮಹಿಳೆಯನ್ನಾಗಿ ತಮ್ಮ ಲೇಖನಗಳಲ್ಲಿ ಶ್ರುತಪಡಿಸಿದರು. ಓಬವ್ವೆಯೆಂಬ ಧೀರೋದತ್ತ ಹೆಣ್ಣುಮಗಳನ್ನು ನಾಡಿನಾದ್ಯಂತ ಮರೆತ ಇತಿಹಾಸಕಾರರಿಗೆ ಮರು ನೆನಪಿಸಿದರು. ನಾಡಿನ ಬಹುತೇಕ ಪತ್ರಿಕೆಗಳಲ್ಲಿ ಪ್ರಕಟವಾದ ಜೋಯಿಸರ ೫೦ ಐತಿಹಾಸಿಕ ಲೇಖನಗಳಲ್ಲಿ ಓಬವ್ವೆಯ ಇರುವನ್ನು ಸಾರುವ "ವೀರ ರಮಣಿ ಓಬವ್ವೆ"ಯ ಲೇಖನವೂ ಒಂದಾಗಿದೆ.

೪.೫. ಸಣ್ಣ ಕಥೆಗಳು, ಲೇಖನಗಳು ಮತ್ತು ಇತರೆ ಬರವಣಿಗೆಗಳು : ಪ್ರಮುಖ ಜನ ಜೀವನಕ್ಕೆ ಸಂಬಂಧಿಸಿದಂತೆ ಅಗತ್ಯ ಸವಿವರಗಳನ್ನು ಚಿಕ್ಕದಾಗಿ ಬರೆದು ಪ್ರಕಟಿಸುವುದೇ ಲೇಖನಗಳು. ಇವು ಸಂಬಂಧಿಸಿದ ವಿಷಯವನ್ನು ಸೂಕ್ಷ್ಮವಾಗಿ ಓದುಗರಿಗೆ ಅರ್ಥ ಮಾಡಿಸುತ್ತವೆ. ಕುತೂಹಲವನ್ನು ಹುಟ್ಟಿಸುತ್ತವೆ. ದಿನ ನಿತ್ಯದ ಓದುಗರಿಗೆ ಈ ಬರವಣಿಗೆಗಳು ಗಮನ ಸೆಳೆದು ಅವುಗಳ ಬಗ್ಗೆ ಆಸ್ಥೆ ವಹಿಸುವಂತೆ ಮಾಡುತ್ತವೆ. ಅವುಗಳಲ್ಲಿ ಕೆಲವು ಓಬವ್ವನ ಬಗ್ಗೆ ಗಮನ ಸೆಳೆದಿವೆ.

೧. **ಹುಲ್ಲೂರು ಶ್ರೀನಿವಾಸ ಜೋಯಿಸರು :** ಲೇಖಕರು ಡಾ. ಬಿ.ರಾಜಶೇಖರಪ್ಪ, ಪ್ರಕಾಶನ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮. ಈ ಕೃತಿಯಲ್ಲಿ ಶ್ರೀಯುತ ಡಾ. ಬಿ.ರಾಜಶೇಖರಪ್ಪ ಚಿತ್ರದುರ್ಗದ ಸಂಶೊಧಕರೆಂದೇ ಖ್ಯಾತಿವೆತ್ತಿದ್ದ ಇವರು ನಾಡಿನ ಇತಿಹಾಸದ ಬಗ್ಗೆ ಅತೀವ ಆಸ್ಥೆವಹಿಸಿ ಮಾನ್ಯ ಹುಲ್ಲೂರು ಶ್ರೀನಿವಾಸ ಜೋಯಿಸರ ಬಗ್ಗೆ ಕುರಿತು ಅನೇಕ ಸಂಶೋಧನಾ ಪ್ರಬಂಧಗಳನ್ನು ಬರೆದಿದ್ದು ಇತಿಹಾಸ ಶೋಧವನ್ನು ವಸ್ತುನಿಷ್ಠ ನೆಲೆಯಲ್ಲಿ ಇತಿಹಾಸ ರಚನೆ ಮಾಡಿದ್ದಾರೆ. ಇದು ಜೋಯಿಸರನ್ನು ಕುರಿತು ರಚಿಸಿದ ಕೃತಿ. ಇದರಲ್ಲಿ ಜೋಯಿಸರು ಬರೆದ ಕೃತಿ, ನಾಟಕಗಳನ್ನು ಹೆಸರಿಸಿ ಪಟ್ಟಿ ಮಾಡುವಲ್ಲಿ ಪುಟ ಸಂಖ್ಯೆ ೧೬ ರಲ್ಲಿ ಕನ್ನಡನಾಡಿನ ವೀರರನ್ನು ವೀರಮಹಿಳೆಯರನ್ನು ಕುರಿತು ಅನೇಕ ಲೇಖನಗಳನ್ನು ಬರೆದಿದ್ದಾರೆ ಎಂದು ಉಲ್ಲೇಖಿಸಿ "ವೀರರಮಣಿ ಓಬವ್ವ" ಲೇಖನವನ್ನು ರಚಿಸಿದ್ದು ಇದು ಜನಪ್ರಿಯಧಾಟಿಯ ಗಂಭೀರ ವಿಷಯದ ಲೇಖನ ಎಂದೇ ತಿಳಿಸಿದ್ದಾರೆ. ಹಾಗೆಯೇ ಪುಟ ಸಂಖ್ಯೆ ೨೯ ರಲ್ಲಿ ಎರಡನೇ ಪ್ಯಾರಾದಲ್ಲಿ ಒನಕೆಯಿಂದ ಹೈದರಾಲಿಯ ಸೈನಿಕರನ್ನು ಹೊಡೆದು ದುರ್ಗದ ಕೋಟೆಯನ್ನು ರಕ್ಷಿಸಿದುದಾಗಿ ಜನ ಪ್ರಚುರವಾಗಿರುವ ವೀರವನಿತೆ ಓಬವ್ವನ ವೃತ್ತಾಂತದ ಮೇಲೆ ಒಂದು ಜನಪದಗೀತೆ ಬರೆಯಲು ಸಿ.ರಂಗಯ್ಯ ಎಂಬ ಉಪಾಧ್ಯಾಯ ಮಿತ್ರರನ್ನು ಉತ್ತೇಜಿಸಿ ಬರೆಯಿಸಿದರು ಜೋಯಿಸರು ಎಂದಿದ್ದಾರೆ. ನಂತರ ಪುಟ ೩೨ರಲ್ಲಿ ಅಪ್ಪಟ ಗ್ರಾಮೀಣ ಪ್ರತಿಭೆ ಮರಡಿಹಳ್ಳಿ ಪಿ.ಸೀತಾರಾಮರೆಡ್ಡಿಯವರು ಬರೆದ 'ರಾಜಾ ವೀರಮದಕರಿನಾಯಕ' ರಾಜ್ಯಾದಾದ್ಯಂತ ಅಷ್ಟೇ ಅಲ್ಲದೆ ಹೊರರಾಜ್ಯಗಳಲ್ಲೂ ಜಯಬೇರಿ ಬಾರಿಸಿತು (ಇದರಲ್ಲಿ ಓಬವ್ವನ ಸಾಹಸಗಾಥೆಯ ದೃಶ್ಯವಿತ್ತು). ಈ ನಾಟಕದ ನೂರನೇ ಪ್ರದರ್ಶನ ಚಿತ್ರದುರ್ಗದಲ್ಲಿ ಏರ್ಪಟ್ಟಾಗ ಹೊನ್ನಪ್ಪ ಭಾಗವತರ್ ಮತ್ತು ಬಿ.ಸರೋಜದೇವಿ ಮುಖ್ಯ ಅಥಿತಿಗಳಾಗಿದ್ದರು ಎನ್ನಲಾಗಿದೆ.

2. MYSORE STATE GAZETTER:CHITRA DURGA DISTRICT :

By B.n.Sathyan. B.A (Hons). Chief Editor. Mysore Gazetteer. Bangalore, Printed by the dierector of printing – stationery and publications as the government pre ೧೯೬೭. ಈ ಗೆಜೆಟಿಯರ್‌ನಲ್ಲಿ ಪುಟ್ಟ ಸಂಖ್ಯೆ ೩೯೩ ರಲ್ಲಿ ಮೂರನೇ ಪ್ಯಾರಾದಲ್ಲಿ ಓಬವ್ವ ಕಹಳೆಯವನ ಹೆಂಡತಿ ಎಂದೇ ತಿಳಿಸಲಾಗಿದ್ದು, ಆಕೆ BedaWoman ಎಂದೇ ತಿಳಿಸಲಾಗಿದ್ದು,. ಅದರಲ್ಲಿನ ಬರವಣಿಗೆಯ ಯಥಾವತ್ತು ಈ ರೀತಿಯಿದೆ. "No account of the chitradurga hill-fort would be complete withaet the mention of Vanake kindi, a secret entrance, not because of any technical interest attached to it but because of its association with a heroic tale of a Beda woman, Obbava and connected with the famous attack of Haidar Ali on chitradurga. Haidar's forces were unable to effect an entry into the ಜಿಂಡಿಣ,

in spite of a 'Long siege'. Despair was spreading in his camp, when one muslim soldier observed a woman carrying curds to the fortress. Passing through a small crevice in the wall. One of the secret entrances was thus found out and through this Haidar's army decided to march in single file into the fort. It was a very narrow crevice, hardly admitting a human being in a kneeling position. Near by this passage was a fresh-water pond inside the fort-wall half-way up the hill and at the time the soldiers started entering into the fort through the hole. OBBAVA, wife of a bugler, had come to the pond for fetching water. She heard some low noises through the passage. It was getting dark, and suspecting some danger she hid herself by the side of the entrence. The bold and brave woman that she was, she kept herself ready for the occasion with a vanake (pestle) in her hand. In a moment there appeared an enemy head through the hole: obbava hit it with her weapon and dragged the dead body aside. In this way, she killed a large number of soldiers till her husband and others arrived on the scene-

ಈ ರೀತಿ ಓಬವ್ವ ಕೈಗೆ ಸಿಕ್ಕ (pestle) ಒನಕೆಯಿಂದ ಕಿಂಡಿಯೊಳಗಿನಿಂದ ಬಂದ ಶತ್ರುಗಳನ್ನು ಹೊಡೆದು ಎಳೆದು ಹಾಕುತ್ತಿದ್ದಳು. ಗಂಡ ಮತ್ತು ಕೋಟೆಯೊಳಗಿನ ಜನ ಬಂದು ನೆರೆಯುವವರೆಗೂ ಎಂದು ಪ್ರಕಟಿಸಲಾಗಿದೆ. ಹಾಗಾಗಿ ಓಬವ್ವನ ಸಾಹಸಗಾಥೆಯನ್ನು ಪ್ರಚುರ ಪಡಿಸುವಲ್ಲಿ ಈ ಗೆಜೆಟಿಯರ್ ಅಧಿಕೃತ ಸಾಕ್ಷಿಯಾಗಿದೆ.

೭. ಮರೆಯಲಾಗದ ನಾಟಕಕಾರ ಮರಡಿಹಳ್ಳಿ ಸೀತಾರಾಮರೆಡ್ಡಿ (ಜೀವನ ಚರಿತ್ರೆ) : ಲೇಖಕರು ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಪ್ರಕಾಶಕರು ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೭. ತಮ್ಮ ಜಿಲ್ಲೆಯಲ್ಲಿ ತಮ್ಮನ್ನು ಸಂಶೋಧನೆಯಲ್ಲಿಯೆ ತೊಡಗಿಸಿಕೊಂಡು, ಸೃಜನ ಪ್ರತಿಭೆಗಳನ್ನು ಹುಡುಕಿ ಅಲಿಖಿತ ಜಾನಪದ ಪರಂಪರೆಗೆ ಸೇರಿಹೋಗಿದ್ದ ರೆಡ್ಡಿಯವರ ನಾಟಕಗಳನ್ನು ಹುಡುಕಿಕೊಂಡು ಅಪಾರವಾದ ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿ ಕನ್ನಡ ಪುಸ್ತಕ ಪ್ರಾಧಿಕಾರದ 'ಮರೆಯಲ್ಲಿರುವ ಮಹಾನುಭಾವರು ಮಾಲಿಕೆ'ಯಲ್ಲಿ ಈ ಮಹಾನುಭಾವನನ್ನು ಪ್ರಕಟಿಸಲು ಅನುವು ಮಾಡಿಕೊಟ್ಟಿದ್ದಾರೆ. ಹಾಗೆಯೇ ಚಿತ್ರದುರ್ಗದ ಇತಿಹಾಸವನ್ನು ಮರು ನೆನಪಿಸಿದ್ದಾರೆ.

೧೯೭೨-೭೩ರ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯ ಪ್ರಖ್ಯಾತ ಕಾದಂಬರಿಕಾರರಾಗಿದ್ದ ತರಾಸು ಅವರ ನಾಗರಹಾವು ಕಾದಂಬರಿಯನ್ನು ಪುಟ್ಟಣ್ಣ ಕಣಗಾಲರು ಚಿತ್ರದುರ್ಗದಲ್ಲಿಯೇ ವಿಶೇಷವಾಗಿ ಚಿತ್ರಿಸಿಕೊಂಡರು. ಆ ಚಿತ್ರದಲ್ಲಿ ಚಿತ್ರದುರ್ಗ ನೆಲದ ಐತಿಹಾಸಿಕ ವಸ್ತುವಿನ ತುಣುಕನ್ನು ಅದು ವಿಶೇಷವಾಗಿ ಓಬವ್ವನಿಗೆ ಸಂಬಂಧಿಸಿದ ಸಾಹಸಕಥೆಯನ್ನು ಚಿತ್ರೀಕರಿಸಿದರು. ಅದು ಮರಡಿಹಳ್ಳಿ ಸೀತಾರಾಮರೆಡ್ಡಿಯವರು ಬರೆದ ಪುಸ್ತಕ ರಾಜಾ ವೀರ ಮದಕರಿನಾಯಕ ನಾಟಕದ ದೃಶ್ಯವಾಗಿತ್ತು. ನಾಗರಹಾವು ಚಿತ್ರಕ್ಕೆ ಸ್ಥಳೀಯರನ್ನೇ ತೆಗೆದುಕೊಂಡು ಪ್ರೋತ್ಸಾಹಿಸಿದರು. ಓಬವ್ವನ ಪಾತ್ರಧಾರಿಯಾಗಿ ಅಭಿನಯ ಶಾರದೆ ಜಯಂತಿಯವರು ಪಾತ್ರಕ್ಕೆ ಜೀವ ತುಂಬಿ ನಾಡಿನಾದ್ಯಂತ ಓಬವ್ವನ ಸಾಹಸಗಾಥೆಯನ್ನು "ಕನ್ನಡ ನಾಡಿನ ವೀರ ರಮಣಿ" ಹಾಡಿನ ಮೂಲಕ ಸಾರಿದ್ದಾರೆ. ಹಾಗೆಯೇ ಪುಟ್ಟಣ್ಣ ಕಣಗಾಲರು ಗ್ರೀಸ್ ದೇಶದಲ್ಲಿ ಪುರಾತನ ಸ್ಮಾರಕಗಳನ್ನು ರಕ್ಷಿಸಿದಂತೆ, ಐತಿಹಾಸಿಕ ಮಹತ್ವವುಳ್ಳ ಚಿತ್ರದುರ್ಗದ ಕೋಟೆ ಕೊತ್ತಲಗಳನ್ನು ಸರಿಯಾಗಿ ರಕ್ಷಿಸಿ ಮುಂದಿನ ಜನಾಂಗಕ್ಕೆ ಉಳಿಸಿಕೊಡಬೇಕೆಂದು ಭಿನ್ನವಿಸಿದರು. ಸೀತಾರಾಮರೆಡ್ಡಿಯವರ ನಾಟಕವನ್ನು ಮನಸಾರೆ ಮೆಚ್ಚಿ ಓಬವ್ವನ ಸಾಹಸವನ್ನು ನಾಡಿನಾದ್ಯಂತ ಪ್ರಚುರ ಪಡಿಸಿದರು ಕಣಗಾಲರು. ಓಬವ್ವನ ಉಲ್ಲೇಖವಿರುವ ಒಂದು ಲಾವಣಿಯನ್ನು ಕೃತಿಯಲ್ಲಿ ಬರೆಯಲಾಗಿದೆ.

೪. **ದುರ್ಗದ ನಾಗತಿಯರು** : ಲೇಖಕರು ಟಿ. ಗಿರಿಜ, ಪ್ರಕಾಶಕರು ಟಿ. ಗಿರಿಜ, ದೀಕ್ಷಿತ್ ರಸ್ತೆ, ರಾಘವೇಂದ್ರ ದೇವಸ್ಥಾನದ ಎದುರು, ದಾವಣಗೆರೆ- ೫೭೭೦೦೨. ವರ್ಷ. ೨೦೧೩

ಲೇಖಕಿಯರು ರಾಜಾವೀರ ಮದಕರಿನಾಯಕನ ಮತ್ತು ಹೈದರಾಲಿ ದುರ್ಗಕ್ಕೆ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಒಬ್ಬ ಛಲವಾದಿ ದಲಿತ ಮಹಿಳೆ ಒಂದು ದಿನ ಮಾತ್ರ ತನ್ನ ಒನಕೆ ಹಿಡಿದು ಒನಕೆ ಕಿಂಡಿಯಲ್ಲಿ ಶತ್ರುಗಳ ತಲೆ ಒಡೆದು ಕೋಟೆ ರಕ್ಷಿಸಿದವಳು ಓಬವ್ವ, ಚಿತ್ರದುರ್ಗದ ಇತಿಹಾಸದಲ್ಲಿ ಗಟ್ಟಿ ಸ್ಥಾನ ಪಡೆದಾಕೆ, ಒನಕೆ ಓಬವ್ವ ಎಂದರೆ ಚಿತ್ರದುರ್ಗ ಎಂದು ಚಿಕ್ಕ ಮಕ್ಕಳಿಗೂ ಗೊತ್ತಾಗುವ ಮಟ್ಟಕ್ಕೆ ಲೋಕ ಪ್ರಸಿದ್ಧಿಯಾಗಿದ್ದಾಳೆ ಓಬವ್ವ ಎಂದಿದ್ದಾರೆ.

ತಮ್ಮ ಈ ಕೃತಿಯಲ್ಲಿ ಪರಿವಿಡಿ ೧೪ನೇ ಅಧ್ಯಾಯದಲ್ಲಿ ಪುಟ ಸಂಖ್ಯೆ ೮ರಲ್ಲಿ ಒನಕೆ ಓಬವ್ವನ ಬಗ್ಗೆ ಉಲ್ಲೇಖಿಸಿದ್ದಾರೆ. ಗುಡೇಕೋಟೆಯ ತನ್ನ ಹುಟ್ಟಿದ ಮನೆಯಲ್ಲಿ ಅಲ್ಲಿನ ಪಾಳೇಗಾರರ ಬಳಿ ಕಹಳೆಯವನಾಗಿ ಕೆಲಸಕ್ಕಿದ್ದ ತನ್ನ ತಂದೆ ಚಿನ್ನಪ್ಪನ ಬಳಿ ತಾನು ಮದುವೆಯಾಗಿ ಹೋಗುತ್ತಿರುವ ಚಿತ್ರದುರ್ಗದ ಬಗ್ಗೆ ಕೇಳಿ ತಿಳಿಯುತ್ತಾಳೆ. ಜೊತೆಗೆ ಸ್ವಾಮಿ ನಿಷ್ಠೆಯ ಬಗ್ಗೆ ತಿಳಿದು ಕೊಳ್ಳುತ್ತಾಳೆ. ನಂತರ ವಿವಾಹವಾಗಿ ದುರ್ಗದ ಕೋಟೆಗೆ ಬಂದ ನಂತರ ಕಹಳೆ ಬತೇರಿ, ಸೇನೆಯವರಿಗೆ ಎಚ್ಚರಿಕೆ ನೀಡುವ ರಣಕಹಳೆ, ಮತ್ತು ಕಾವಲಿನ ಕಾಯಕದ ನಿಷ್ಠೆ ಇದರ ಬಗ್ಗೆ ತಿಳಿದ ಓಬವ್ವ ತುಂಬಾ ಅಭಿಮಾನದಿಂದ ಗಂಡನನ್ನು ಮತ್ತು ದೂರದವರೆಗೂ ಕಾಣುವ ದುರ್ಗದ ಊರನ್ನು ನೋಡಿದ್ದಳು.

ಇಂಥಹ ಕಾಲದಲ್ಲಿ ಹೈದರನ ದಾಳಿಯ ಸೂಚನೆ, ಮೈಯೆಲ್ಲಾ ಕಣ್ಣಾಗಿ ಕಾವಲಿದ್ದ ವೇಳೆಯಲ್ಲಿ ಗಂಡನಿಗೆ ಊಟಕಿಟ್ಟು ಕುಡಿಯೋ ನೀರು ತರಲು ತಣ್ಣೀರದೋಣೆ ಹತ್ತಿರ ಬಂದಾಗ ಗುಪ್ತ ದ್ವಾರದ ಕಿಂಡಿಯ ಬಳಿ ಕೇಳಿದ ಗುಜುಗುಜು ಸದ್ದು, ಕತ್ತೀ ಗುರಾಣಿಗಳ ಶಬ್ದದಿಂದ ಶತ್ರು ವಾಸನೆ ಆಘ್ರಾಣಿಸಿದ ಓಬವ್ವ ಓಡಿ ಮನೆಗೆ ಬಂದಾಗ ಗಂಡನ ಊಟ ಮುಗಿದಿರಲಿಲ್ಲ. ಅದನ್ನು ಕಂಡ ಓಬವ್ವ ಮೂಲೆಯಲ್ಲಿದ್ದ ಕಬ್ಬಿಣದ ಹಿಡಿಯ ಒನಕೆ ಹಿಡಿದು ಓಡಿ ಕಳ್ಳಗಂಡಿಯ ಬಳಿ ನಿಂತಳು, ತೆವಳಿ ಬರುತ್ತಿರುವ ಸೈನಿಕರ ತಲೆಬುರುಡೆಗಳನ್ನು ಚಚ್ಚಿ ಹಾಕುತ್ತಾ ಎಳೆದು ಹಾಕುತ್ತಾ ಶತ್ರು ಸೈನಿಕರ ಬಲಿಯನ್ನು ಕಲ್ಲಿನ ಕೋಟೆಗೆ ನೀಡಿದಳು. ನಂತರ ಹುಡುಕುತ್ತಾ ಬಂದ ಪತಿ ಕಂಡು ತನ್ನ ಕಹಳೆಯನ್ನೂದಿ ಶತ್ರುಗಳ ಸುಳಿವನ್ನು ನೀಡಿದಾಗ, ದುರ್ಗದ ಸೇನೆ ಬಂದು ಶತ್ರು ಸೈನ್ಯವನ್ನು ಸದೆಬಡಿದು ಓಬವ್ವನನ್ನು ಸಮಾಧಾನ ಪಡಿಸಿ ಸಂತೃಪ್ತನಾದ ನಾಯಕ. ಶತ್ರುಗಳ ತಲೆ ಹೊಡೆದು ಹಾಕಿದ ಆಕಳ್ಳಗಂಡಿಗೆ "ಒನಕೆ ಓಬವ್ವ ಕಿಂಡಿ ಬಾಗಿಲೆಂದು" ನಾಮಕರಣ ಮಾಡಿ, ನಂತರ ಓರ್ವ ದಲಿತ ಮಹಿಳೆ ಸ್ತ್ರೀತನವನ್ನು ಮರೆತು ಮಾಡಿದ ಸಾಹಸ ನಾಡಿನಾದ್ಯಂತ ತಿಳಿಯಲೆಂದು ಆಕೆಯನ್ನು ಪಲ್ಲಕ್ಕಿ ಮೇಲೆ ಕೂರಿಸಿ ಮೇಲುದುರ್ಗ, ಕೆಳದುರ್ಗದಾದ್ಯಂತ ಮೆರವಣಿಗೆ ಮಾಡಿಸಿದನು. ಹೀಗೆ ಓಬವ್ವನ ಸಾಹಸ ದುರ್ಗದ ಇತಿಹಾಸದ ಪುಟಗಳಲ್ಲಿ ಸೇರಿ ಶುಭವಾಗಲೆಂದು ನಾಯಕರು ಹಾರೈಸಿದರು. ಹೀಗೆ ಶ್ರೀಮತಿ ಟಿ. ಗಿರಿಜರವರು ತಮ್ಮ ಕೃತಿಯಲ್ಲಿ ಓಬವ್ವನ ಸಾಹಸ ಮತ್ತು ಓಬವ್ವನ ಕಿಂಡಿಯನ್ನು ಸಹ ಚಿತ್ರದ ಮೂಲಕ ತೋರಿಸಿದ್ದಾರೆ.

5. CHITRADURGA IN THE EARLY 1800S :

Archaeological Interpretations of Colonial Drawings.- Dr. Barry lewis, by Indian Council of Historical Research. South Regional Centre, Banglore, 2006 Published by Member Secretary, ICHR, #35, Ferozeshah Road, New Delhi-110001.

ಈ ಕೃತಿಯಲ್ಲಿ ಚಿತ್ರದುರ್ಗದ ಕೋಟೆಯ ನಕಾಶೆಯನ್ನು ನೀಡಿದ್ದಾರೆ.೧೮೦೦ ಕ್ಕಿಂತ ಪೂರ್ವದಲ್ಲಿ ಬ್ರಿಟೀಷರು ವಶಪಡಿಸಿಕೊಂಡಿದ್ದ ಕೋಟೆಗಳ ನಕಾಶೆ ರಚಿಸುವ ಕಾರ್ಯ ನಿರ್ವಹಿಸುತ್ತಿದ್ದು ಬ್ರಿಟೀಷ್ ಮಿಲಿಟರಿ ಇಂಜನಿಯರ್ಸ್‌ಗಳಿಗೆ ಈ ಕೆಲಸ ಒಪ್ಪಿಸಲಾಗಿತ್ತು. ಆಗ ೧೮೦೦-೧೮೧೦ ರ ಅವಧಿಯಲ್ಲಿದ್ದ ದುರ್ಗದ ಕೋಟೆಯ ಚಿತ್ರಣವನ್ನು ಕೊಲಿನ್ ಮೆಕೆಂಜಿ ಎಂಬ ಅಧಿಕಾರಿಗೆ ನಕಾಶೆ ರಚಿಸುವ ಸೂಚನೆ ನೀಡಿದ್ದು ಆಗ ಸಿಕ್ಕ ಪುರಾತತ್ವಗಳನ್ನು ಬಳಸಿಕೊಂಡು, ದುರ್ಗದಲ್ಲಿನ ಇತಿಹಾಸಕಾರರ ಸಹಾಯದಿಂದ ಈ ನಕಾಶೆ ತಯಾರಿಸಲಾಯಿತು. ಆಗ ರಚಿಸಿದ ಸಂಪೂರ್ಣ ಮಾಹಿತಿಗಳನ್ನು (೧೮೦೦-೧೯೦೦ರ) Oriental and Indian Office Collection of British Library OIOCಯಲ್ಲಿ ಇಡಲಾಗಿತ್ತು. ಆದರೆ Curators Report have been

misssing from the collection, since the OIOC moved to its old Blackfriars location ಎಂದು ಹೇಳಲಾಗಿದೆ. ಆದರೆ ಅವುಗಳಲ್ಲಿ ಒಂದು ಆರು ಕಣ್ಣಾರೆ ನೋಡಿ ರಚಿಸಿದ ಮಾಹಿತಿಗಳು ಮಾತ್ರ ಇದರಲ್ಲಿ ದೊರೆತಿದ್ದು, ಅದರಲ್ಲಿ ಮಿಲಿಟರಿ ಜೂನ್ ೧೮೦೦ ರ ಅವಧಿಯಲ್ಲಿ ಇದ್ದ ಕೋಟೆಯ ಚಿತ್ರಣವನ್ನು ಕೊಲಿನ್ ಮೆಕೆಂಜಿ (Colin Mackenzie) ವಿಶೇಷವಾಗಿ ಕೋಟೆಯನ್ನು ಪ್ರಾಕೃತಿಕ ವೀಕ್ಷಣೆ ಮಾಡಿ ರಚಿಸಿದ್ದನು. ಇದರ ಪ್ರಕಾರ ಕೋಟೆಯ ಸಂಪೂರ್ಣ ಚಿತ್ರಣ ಪಾಳೆಯಗಾರರು ನಿರ್ಮಿಸಿಕೊಂಡಿದ್ದ ಬಲಿಷ್ಟವಾದ ಏಳುಸುತ್ತಿನ ಕೋಟೆಯ ಸಂಪೂರ್ಣ ಮಾಹಿತಿ ನೀಡಿದ್ದಾರೆ.

hy are close to early 1800s snapshots of Chitradurga's major features as we can gel (ಪುಟ ಸಂಖ್ಯೆ- 22,25) – "The remaing fork of the pathway that led past the mint continued down hill to the west, passing through the gates of two fortification lines before existing the forth through what is today called The Hanuman Gate (Shankar, et,al, 1984:11) Mackenzie treated this gate graphically as a minor point of access for the hill fort, while this may have been true from his prespective it is notable in chitradurga's history as the general location of the vanake kindy, a secret entrence that was valianty defended by the heroine Obavva during an attack on the fort (srisatyan, 1967:393)

ಹೀಗೆ ಸತ್ಯನ್‌ರವರ ಚಿತ್ರದುರ್ಗ ಗೆಜೆಟಿಯರ್‌ನ್ನು ಆಧರಿಸಿ ಮತ್ತು ಹಲವಾರು ಇತಿಹಾಸಕಾರರ ಹೇಳಿಕೆಯ ಮೇರೆಗೆ ದಾಖಲಾಗದ ದುರ್ಗದ ಇತಿಹಾಸದ ಕೊಂಡಿಯಾಗಿರುವ ವೀರವನಿತೆ ಓಬವ್ವನ ಬಗ್ಗೆ Colonial ಬ್ರಿಟೀಷ್ ಮಿಲಿಟರಿ ಆಫೀಸರ್ ಹಾಗೂ Collector of historical manuscripts (Mackenzie 1952) ಆಗಿದ್ದ ಇವರು ಮೇಲ್ಕಂಡಂತೆ ಉಲ್ಲೇಖಿಸಿದ್ದಾರೆ.

೧೮೦೦ರಲ್ಲಿ ಬ್ರಿಟೀಷ್ ಸರ್ಕಾರದವರು ಡಾ.ಫ್ರಾನ್ಸಿಸ್ ಬುಕ್ಯಾನನ್ ಎಂಬಾತನಿಗೆ "ಈಗ ಮೈಸೂರು ಒಡೆಯರ ಆಳ್ವಿಕೆಗೆ ಒಳಗಾಗಿರುವ ಮೈಸೂರು ಸಂಸ್ಥಾನ. ಟಿಪ್ಪುವಿನೊಂದಿಗೆ ಯುದ್ದ ಮಾಡಿ ಅವನನ್ನು ಕೊಂದು ಈಸ್ಟ್ ಇಂಡಿಯಾ ಕಂಪನಿಯವರು ಗೆದ್ದ ದೇಶ, ಕಾರನ್ ವಾಲೀಸ್‌ನ ನಾಯಕತ್ವದಲ್ಲಿ ಕಂಪನಿ ಪಡೆದ ಮಲೆಬಾರಿನ ಭಾಗಗಳು, ಇಲ್ಲೆಲ್ಲಾ ಪ್ರವಾಸ ಮಾಡಿ ವರದಿ ಮಾಡತಕ್ಕದ್ದು" ಎಂಬ ಆಜ್ಞೆ ಮಾಡಿದರು ಬುಕ್ಯಾನನ್ ಆಜ್ಞೆ ಪಾಲಿಸಿದ. ೧೮೦೭ ರಲ್ಲಿ ತನ್ನ ವರದಿ ಪ್ರಕಟಿಸಿದ.ತನ್ನ ಹದಿನಾರು ದಿನದ ಪ್ರಯಾಣದಲ್ಲಿ ಆತ ಚಿತ್ರದುರ್ಗವನ್ನು ಸಂದರ್ಶಿಸಿದ್ದುದು ಒಂದು ದಿನ ಮಾತ್ರ, ಏಕೆಂದರೆ ಚಿತ್ರಕಲ್ ಚಿತ್ರದುರ್ಗ ನೀರಿನ ಕೊರತೆಯಿಂದ

ಬಳಲುತ್ತಿದ್ದುದನ್ನು ಹೊಂಡದಲ್ಲಿ ನಿಂತ ನೀರನ್ನೇ ಕುಡಿಯಲು, ದನಕರುಗಳನ್ನು ತೊಳೆಯಲು, ಬಟ್ಟೆ ಒಗೆಯಲು, ಕೊನೆಗೆ ಶೌಚಕ್ಕೂ ಕೂಡ ಅದೇ ನೀರು ಬಳಸುತ್ತಿದ್ದ ಪರಿಸ್ಥಿತಿಯನ್ನು ನೋಡೇ ಒಂದೇ ದಿನಕ್ಕೆ ಅಲ್ಲಿಂದ ಕಾಲು ಕೀಳುತ್ತಾನೆ. ಆದರೆ ಮೆಕೆಂಜಿ ಮಾತ್ರ ತನ್ನ ಕೈಫಿಯತ್ತುಗಳ ಮೂಲಕ ಚಿತ್ರದುರ್ಗದ ಚರಿತ್ರೆಯನ್ನು, ಸರಳ ರೇಖಾತ್ಮಕ ಕಾಲಗತಿಯಲ್ಲಿ ಕಟ್ಟಿಕೊಡುವ ಹಾದಿಯಲ್ಲಿ ಸಾಗಿದ್ದಾನೆ. ನೌಕಾದಳದ ಇಂಜಿನಿಯರ್ ಆಗಿ ಭಾರತಕ್ಕೆ ಬಂದಿದ್ದ ಈತ ಸ್ಥಳೀಯ ವಿದ್ವಾಂಸರ ಬೆಂಬಲ, ಸಹಾಯ ಪಡೆದು ಕಾರ್ಯೋನ್ಮುಖನಾಗಿ ಸಿಕ್ಕ ಬಿಡುವಿನ ವೇಳೆಯಲ್ಲಿ ಹಳ್ಳಿಹಳ್ಳಿಗಳನ್ನೆಲ್ಲಾ ಸುತ್ತಿ ಸಹಸ್ರಾರು ಚಾರಿತ್ರಿಕ ಕುರುಹುಗಳನ್ನು ಪರಿಶೋಧಿಸಿ, ಹಲವು ಮಹತ್ವದ ಸಂಕಥನಗಳ ಬಗೆಗೆ (Discourse) ತಿಳಿದು ಬರೆಯಿಸಿ ಕೈಫಿಯತ್ತುಗಳೆಂದು ಕರೆದು ಚರಿತ್ರೆ ನಿರ್ಮಿಸಿದವನು. ತನ್ನ ಸ್ವಂತ ಹಣದ ವೆಚ್ಚದಲ್ಲಿ ಸಂಗ್ರಹ ಕಾರ್ಯ ನೆಡೆಸಿದ ವ್ಯಕ್ತಿ ಎನಿಸಿದವ ಹೊರತು ವಸಹಾತುಶಾಹಿ ಅಧಿಕಾರಿಯ ಧೋರಣೆಯನ್ನು ಪ್ರದರ್ಶಿಸಿಲ್ಲ.

೬. ಬಹುಳ : (ಕಥಾಗುಚ್ಚ: ಸಂಪುಟ–ಆರು). ಲೇಖಕರು ನಾಡೋಜ ಡಾ. ಕಮಲಾ ಹಂಪನಾ. ಪ್ರಕಾಶಕರು ಸ್ವಪ್ನ ಬುಕ್‌ಹೌಸ್, ೩ನೇ ಮುಖ್ಯರಸ್ತೆ, ಗಾಂಧೀನಗರ, ಬೆಂಗಳೂರು–೫೬೦೦೧೧. ವರ್ಷ.ಸೆಪ್ಟೆಂಬರ್ ೨೦೧೧.

ಈ ಕಥಾಗುಚ್ಚದಲ್ಲಿ ಒಟ್ಟು ನಲವತ್ತು ಕಥೆಗಳಿವೆ. ಇಲ್ಲಿನ ಕಥೆಗಳಲ್ಲಿ ಹೆಚ್ಚಿನ ಸಂಖ್ಯೆಯ ಕಥೆಗಳು ಮಹಿಳಾಕೇಂದ್ರಿತ ನೆಲೆಯಲ್ಲಿ ತೆರೆದುಕೊಳ್ಳುತ್ತವೆ. ಅಂದಿನ ಹೆಣ್ಣಿನ ಸ್ಥಿತಿಗೂ, ಇಂದಿನ ಹೆಣ್ಣಿನ ಸ್ಥಿತಿಗೂ ಹೆಚ್ಚು ಅಂತರವಿಲ್ಲ. ಪುರುಷರ ಪಕ್ಷಪಾತದ ಶೋಷಣೆಯಲ್ಲಿ ನೋಯುತ್ತಾಳೆ, ದಾಳಿ ದಬ್ಬಾಳಿಕೆಗೆ ಸಿಲುಕಿ ನಲಗುತ್ತಾಳೆ. ಅದರಲ್ಲಿ ವ್ಯಕ್ತವಾಗುವ ಅವಳ ಸಾಹಸಗಾಥೆಯನ್ನು ಮೆಚ್ಚುವ ಹಿನ್ನೆಲೆಯಲ್ಲಿ ಆದರ್ಶರಮಣಿಯ ಕಥೆಯನ್ನು ಬಿಂಬಿಸಿದ್ದಾರೆ. ದುರ್ಗದ ರಕ್ಷಣೆಗೆ ಎಲ್ಲರೂ ಒಗ್ಗಟ್ಟಿನಿಂದ ತಮ್ಮ ಕೈಲಾದ ಸೇವೆ ಸಲ್ಲಿಸಬೇಕು. ಹೈದರ್‌ಗೆ ತಕ್ಕ ಶಾಸ್ತಿ ಮಾಡಬೇಕು. ಇದಕ್ಕಾಗಿ ಎಲ್ಲರೂ ಪಣತೊಡಬೇಕು" ಎಂದು ಮದಕರಿನಾಯಕರು ಸಾರಿದ್ದರಿಂದ ಎಲ್ಲರೂ ಸೇರಿ ಸಕಲ ಸಿದ್ಧತೆ ಮಾಡಿಕೊಂಡಿದ್ದರು. ಕಮ್ಮಾರನು ಸಹ ಹೆಚ್ಚು ಆಯುಧಗಳನ್ನು ನೀಡುವುದರೊಂದಿಗೆ ಸಮಯ ಬಂದರೆ ತಾನೂ ಒಂದು ಖಡ್ಗ ಹಿಡಿದು ನಿಲ್ಲುವುದಾಗಿ ಪ್ರತಿಜ್ಞೆ ಮಾಡಿದನು. ಹೀಗೆ ರೈತ, ಬಡಗಿ, ಕೂಲಿ, ಹೆಂಗಸರು ಆದಿಯಾಗಿ ಎಲ್ಲರೂ ಸಂಕಲ್ಪ ಮಾಡಿದರು.ಇಲ್ಲಿ ಓಬವ್ವನ ಗಂಡನ ಹೆಸರು ಕಾಳ ಎಂದಿದೆ. ತನ್ನ ಗಂಡ ಕಾಳನಿಂದ ಕೋಟೆ ಜನತೆಯೆಲ್ಲಾ ಹೇಗೆ ಸಿದ್ಧವಾಗಿದ್ದಾರೆ ಎಂಬುದನ್ನು ತಿಳಿದ ಮೇಲಂತೂ ಓಬವ್ವ ತಾನೇ ಗಂಡುಗಚ್ಚೆ ಹಾಕಿ ಯುದ್ಧರಂಗಕ್ಕೆ ಹೋಗಿ ಖಡ್ಗ ಹಿಡಿದು ಶತ್ರುಗಳ ರುಂಡಗಳನ್ನು ಚೆಂಡಾಡಬೇಕು ಎಂಬ ಕೆಚ್ಚು ಓಬವ್ವನ ಮನದಲ್ಲಿ ಮೂಡಿತ್ತು. ಆ ಸಮಯಕ್ಕೆ ಪೂರಕವಾಗಿ ಹೈದರನ ಸಂಚು, ನೀರು ತರಲು ಹೋದ ಓಬವ್ವನ ಕಿವಿಗೆ ಬಿದ್ದು ಆಲೋಚಿಸದೆ ಓಡೋಡಿ ಬಂದು ಒನಕೆ ತೆಗೆದುಕೊಂಡು ದುರ್ಗದೇವತೆ ಏಕನಾಥೇಶ್ವರಿಯನ್ನು ಮನದಲ್ಲಿ ಪ್ರಾರ್ಥಿಸಿ ತನ್ನ ಸಾಹಸಗಾಥೆಯನ್ನು

ಚಂಡಿಚಾಮುಂಡಿಯಾಗಿ ನಿರ್ವಹಿಸಿದ್ದಾಳೆ. ಹಾಗೆಯೇ ಮದಕರಿಯ ಆಗಮನದ ನಂತರ ಓಬವ್ವೆಯ ಮರಣ. ಚಿತ್ರದುರ್ಗದ ಇತಿಹಾಸದಲ್ಲಿ ಮರೆಯಲಾಗದ ವೀರ ಮಹಿಳೆಯಾಗಿದ್ದಾಳೆ. ಇಲ್ಲಿ ಓಬವ್ವೆಯ ಪತಿಯನ್ನು ಕಾಳನಾಯಕ ಎಂದೇ ಗುರುತಿಸಿದ್ದಾರೆ. ಓಬವ್ವ ನಾಯಕ ಜನಾಂಗಕ್ಕೆ ಸೇರಿದವಳೆಂದು ಬರೆದಿದ್ದಾರೆ. ಕನ್ನಡ ನಾಡಿನ, ಗಂಡುಮೆಟ್ಟಿದ ಚಿತ್ರದುರ್ಗದ ಒನಕೆ ಓಬವ್ವ ಕನ್ನಡ ನಾಡಿನ ಹೆಣ್ಣೆಂಬ ಸ್ವಾಭಿಮಾನವೊಂದೇ ಸಾಕು ನಮಗೆ.

ಇಲ್ಲಿ ಶ್ರೀಮತಿ ನಾಡೋಜ ಡಾ. ಕಮಲಾ ಹಂಪನಾ ರವರು ಮಕ್ಕಳ ಕಥಾ ಗುಚ್ಛದಲ್ಲಿ ಅಪ್ಪನಿಂದ ಕಥೆಕೇಳಿದ ಮಗಳಿಗೆ ಓಬವ್ವ ಕಥೆಯಲ್ಲಿ ಅಂತ್ಯಳಾದಳು ಎನ್ನುವ ವೇಳೆಗೆ ಮಗು ಆರತಿಯ ಕಣ್ಣಿಂದ ನೀರು ಧಾರಕಾರವಾಗಿ ಹರಿಯುತ್ತಿತ್ತು. ಆ ಪುಟ್ಟ ಮನಸ್ಸಿಗೂ ತಾನೂ ವೀರಮಹಿಳೆ ಆಗಬೇಕೆಂಬ ಕೆಚ್ಚು ಮೂಡಿತ್ತು ಎಂದು ತಮ್ಮ ಕಲ್ಪನಾಲಹರಿಯಲ್ಲಿ ತಮ್ಮ ಆಸೆಯ ಸೂಕ್ಷ್ಮತೆಯನ್ನು ಹರಹಿದ್ದಾರೆ. ಇಷ್ಟು ಸಾಕು ಓಬವ್ವೆ ಜೀವಂತವಾಗಿ ನಾಡಿನಲ್ಲಿದ್ದಾಳೆನ್ನುವುದಕ್ಕೆ.

೭. ವೀರ ಮದಕರಿನಾಯಕ : ಲೇಖಕರು ಬ.ಗೋ. ರಮೇಶ್(ಶ್ರೀ ಕೃಷ್ಣದೇವರಾಯ ಪ್ರಶಸ್ತಿ ಪುರಸ್ಕೃತರು) ಪ್ರಕಟಣೆ ಸಾಹಿತ್ಯ ಸಾಧನಾ. ನಂ ೧೧೦, ೧ನೇ ಕ್ರಾಸ್, ಕೆಬ್ಬೇಹಳ್ಳ, ಸುಂಕದಕಟ್ಟೆ, ಬೆಂಗಳೂರು ೫೬೦೦೯೧. ವರ್ಷ ೨೦೧೨.

ಕರ್ನಾಟಕ ಇತಿಹಾಸ ನಿರ್ಮಾಪಕರು ಮಾಲೆಯ ಎಂಟನೆಯ ಕುಸುಮವಾಗಿ ಈ ಕೃತಿಯನ್ನು ಹೊರತರುತ್ತಿರುವುದಾಗಿ ಹೇಳಿದ್ದಾರೆ. ಹಾಗೆಯೇ ಈ ಕೃತಿಯ ಪುಟದ ಸಂಖ್ಯೆ ೪೬ ರಲ್ಲಿ ವೀರ ವನಿತೆ ಓಬವ್ವನ ಸಾಹಸಗಾಥೆಯನ್ನು ವರ್ಣಿಸಿದ್ದಾರೆ. ಶತ್ರು ಸೈನ್ಯದ ಸುಳಿವು ಸಿಕ್ಕ ಓಬವ್ವ ಒಂಟಿಯಾಗಿ, ಕತ್ತಲಿನ ಸಮಯ ಲೆಕ್ಕಿಸದೆ ವೀರಗಚ್ಚೆ ಹಾಕಿ ನಿಂದು ಹೆಣದ ರಾಶಿಯನ್ನು ಪೇರಿಸಿರುವುದನ್ನು ತಿಳಿಸಿದ್ದಾರೆ ಮತ್ತು ಹೈದರಾಲಿ ಸೈನಿಕನೋರ್ವ ಓಬವ್ವೆಯನ್ನು ಕತ್ತಿಯಿಂದ ಇರಿದು ಕೊಂದು ಹಾಕಿದಂತೆ ಚಿತ್ರಿಸಿದ್ದಾರೆ. ಕೋಟೆಯನ್ನು ರಕ್ಷಿಸಿದ ವೀರನಾರಿ ಓಬವ್ವೆ ಅಮರಳಾದಳು. ಓಬವ್ವೆ ತನ್ನ ಪ್ರಾಣ ತೆತ್ತು ದುರ್ಗದ ಸ್ವಾತಂತ್ರ್ಯವನ್ನು ಕಾಪಾಡಿದ್ದಳು. ಹೀಗೆ ಇತಿಹಾಸದಲ್ಲಿ ಸೇರಿಹೋದಳು ಎಂದು ಬರೆದಿದ್ದಾರೆ. ಹೀಗೆ ಇತಿಹಾಸದುದ್ದಕ್ಕೂ ಉದಾತ್ತ ಮಹಿಳೆಯಾಗಿದ್ದಾಳೆ.

ಹೀಗೆ ಇನ್ನೂ ಹಲವಾರು ಕೃತಿಗಳಲ್ಲಿ ಓಬವ್ವ ಜೀವಂತಳಾಗಿ ಚಾರಿತ್ರಿಕವಾಗಿ ದುರ್ಗದ ಇತಿಹಾಸದಲ್ಲಿ ತನ್ನ ಸ್ಥಾನ ಪಡೆದಿದ್ದಾಳೆ. ಹಲವು ಇತಿಹಾಸಕಾರರು, ಸಂಶೋಧಕರ ಪ್ರಕಾರ ಜನಪದರಲ್ಲಿ ಕಂಡುಬರುವ, ಸಾರುತ್ತಿರುವ ಎಲ್ಲಾ ಘಟನೆಗಳಿಗೂ ದಾಖಲೆಗಳನ್ನಿಡುವುದು ದುಸ್ಸಾಹಸದ ಕಾರ್ಯವೇ. ಆದರೆ ಪ್ರಮುಖವಾದ ಲಿಖಿತರೂಪದ ದಾಖಲೆಗಳೇ ಇಲ್ಲಾ ಎಂದಾಗ ಒಂದು ಐತಿಹ್ಯವಾಗಲಿ, ಐತಿಹಾಸಿಕ ವ್ಯಕ್ತಿಯಾಗಲೀ ಕಳೆದುಹೋಗುವುದಿಲ್ಲ. ಅಂದಿನಿಂದ ಇಂದಿನವರೆಗೂ ದುರ್ಗದ ಇತಿಹಾಸದಲ್ಲಿ ತನ್ನ ಛಾಪನ್ನು ಮೂಡಿಸುತ್ತಾ ಬಂದಿದ್ದಾಳೆ. ಜಪದರು ಆಕೆಯನ್ನು ಉಳಿಸಿಕೊಂಡು ಬಂದಿದ್ದಾರೆ. ದಿವಾನ್ ಪೂರ್ಣಯ್ಯರವರಂಥಹ ಮುತ್ಸದ್ಧಿಯ

ಸಹಾಯದಿಂದ ಹೈದರ್ ತನ್ನ ಕೃತ್ರಿಮದಿಂದ ಮೋಸದಿಂದ ಚಿತ್ರದುರ್ಗ ಕೋಟೆಯನ್ನು ವಶಪಡಿಸಿಕೊಂಡು ಮೂರುದಿನಗಳ ಕಾಲ ಲೂಟಿಮಾಡಿ ಸಂಪತ್ತನ್ನು ಶ್ರೀರಂಗಪಟ್ಟಣಕ್ಕೆ ಸಾಗಿಸಿದನು. ಆದರೆ ತನ್ನ ನಾಡಿಗಾಗಿ, ತನ್ನ ಉಪ್ಪಿಟ್ಟ ಧಣಿಗಾಗಿ, ಹೆಣ್ಣು ಅಬಲೆ ಎಂದವರಿಗೆ ತಿರುಗಿ ವೀರಗಚ್ಚೆ ಹಾಕಿ ಹೋರಾಡಿ ಒಮ್ಮೆಯಾದರೂ ಹೈದರನ ದಾಳಿಯನ್ನು ಹಿಮ್ಮೆಟ್ಟಿಸಿದ ಕೀರ್ತಿ ಓಬವ್ವನದಾಗಿದೆ, ಎಂದರೆ ಈಕೆ ದುರ್ಗದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದ್ದಾಳೆ. ಜನಪದರಿಗೆ ಸಾಕ್ಷಾತ್ ದುರ್ಗಿಯಾಗಿ ಇಂದಿಗೂ ದುರ್ಗದ ಜನತೆಗೆ ಜೀವಂತವಾಗಿದ್ದಾಳೆ.

ಅಡಿ ಟಿಪ್ಪಣಿಗಳು

೧. ಡಾ. ಎಂ.ಎಂ.ಕಲಬುರ್ಗಿ, ಮಾರ್ಗ-೧, ೧೯೮೮, ಪುಟ ಸಂಖ್ಯೆ-೫೮೨,೫೮೩

೨. ಡಾ. ಕಾಳೇಗೌಡ ನಾಗವಾರ. ಷಟ್ಪದಿ, ರಗಳೆ ಮತ್ತು ಜನಪದ ಸಾಹಿತ್ಯ, ೧೯೭೫, ಪುಟ ಸಂಖ್ಯೆ-೨೩೩.

೩. ಡಾ. ಮೊಗಳ್ಳಿ ಗಣೇಶ್, ಅವ್ಯಕ್ತ ಚರಿತ್ರೆ, ೨೦೦೯, ಪುಟ ಸಂಖ್ಯೆ-೧೩೪

೪. ಶ್ರೀ. ಹುಲ್ಲೂರು ಶ್ರೀನಿವಾಸ ಜೋಯಿಸರು, ಚಿತ್ರದುರ್ಗದ ಬಖೈರು, ಪುಟ ಸಂಖ್ಯೆ-೪೫

೫. ಎಂ.ಎಸ್. ಪುಟ್ಟಣ್ಣ, ಚಿತ್ರದುರ್ಗದ ಪಾಳೆಗಾರರು, ಪುಟ ಸಂಖ್ಯೆ-೬೭

ಅಧ್ಯಾಯ : ೫

ಓಬವ್ವನ ಕುರಿತ ಜನಪದ ಸಾಹಿತ್ಯ

ಅಧ್ಯಾಯ : ಐದು

ಓಬವ್ವನ ಕುರಿತ ಜನಪದ ಸಾಹಿತ್ಯ

ಜನಪದ ಸಾಹಿತ್ಯ ಸೃಷ್ಟಿಗೂ ಮಾನವನ ಇತಿಹಾಸಕ್ಕೂ ಬಿಡಿಸಲಾಗದ ನಂಟು ಇದ್ದು ಮಾನವನು ಆದಿಮಾನವನಿಂದ, ನೆಲೆ ನಿಂತು ವಾಸಿಸಲು ಯಾವಾಗ ಪ್ರಾರಂಭಿಸಿದನೋ ಆವಾಗಲೇ ಮಾನವನ ನಾಗರೀಕತೆ ವಿಕಾಸಗೊಂಡಂತೆ ಮನುಷ್ಯನ ಬದುಕೂ ವಿಕಾಸಗೊಳ್ಳುತ್ತಾ ಬಂದಿತು. ಸಮುದಾಯವು ತನ್ನ ಜೀವನಾನುಭವಗಳಿಗೆ ಅಭಿವ್ಯಕ್ತಿಯ ರೂಪ ನೀಡಲು ಹವಣಿಸಿದಾಗ ಜನಪದರಲ್ಲಿ ಜನಪದ ಸಾಹಿತ್ಯ, ಕಲೆಗಳು ಹುಟ್ಟಿಕೊಂಡವು. ದೇವರು, ಧರ್ಮ, ಕೃಷಿ, ಕುಟುಂಬ ಇಡೀ ಜನಪದರ ಜೀವನದಲ್ಲಿ ಜನಪದ ಸಾಹಿತ್ಯ ಮೌಖಿಕವಾಗಿ ಬೆಳೆಯುತ್ತ ಅವರ ದಿನನಿತ್ಯದ ಬದುಕಿನ ಕೆಲಸ ಕಾರ್ಯಗಳಲ್ಲಿ ಈ ಜನಪದ ಸಾಹಿತ್ಯ ಒಂದಲ್ಲ ಒಂದು ರೀತಿಯಾಗಿ ಸೃಷ್ಟಿಯಾಗುತ್ತಾ ಬಂದಿತು. ಕಥೆಹಾಡು, ಒಗಟು, ಗಾದೆ, ನಾಣ್ಣುಡಿಗಳು ಆರಂಭದಲ್ಲಿ ಕೃಷಿಯಾಗಿ ನಂತರದಲ್ಲಿ ಅವು ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಸ್ಥಾನ ಪಡೆದುಕೊಂಡವು. ಆಗ ದೇವರುಗಳ ಜಾತ್ರೆ, ಉತ್ಸವ ವಿಶೇಷ ದಿನಗಳಲ್ಲಿ ಜನಪದರಲ್ಲಿ ಕೃಷಿಯಾಗುತ್ತ, ಪ್ರದರ್ಶನಗೊಳ್ಳುತ್ತ ಬಂದು ಇಡೀ ಸಾಹಿತ್ಯ ಕ್ಷೇತ್ರದಲ್ಲಿ ಜನಪದ ಸಾಹಿತ್ಯವು ಶ್ರೀಮಂತ ಸಾಹಿತ್ಯವಾಗಿ ಬೆಳೆದು ಬಂದಿತು. ಮುಂದೆ ಸುಶಿಕ್ಷಿತರಲ್ಲಿ ಬೆಳೆಯುತ್ತ ಬಂದ ಪ್ರಕಾರಗಳು ಇವೆ. ಇಂದು ಆಧುನಿಕ ಸಂದರ್ಭದಲ್ಲಿ ಜಾನಪದ ಸಾಹಿತ್ಯ ಶಿಥಿಲಗೊಳ್ಳಲು ಪ್ರಮುಖ ಕಾರಣ ಜಾಗತೀಕರಣವಾಗಿ ಅಲ್ಲದೆ ಜನಪದರ ಜೀವನ ಶೈಲಿ ಬದಲಾಗಿರುವುದರಿಂದ ಅಂದು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಮೌಖಿಕವಾಗಿ ಸಾಗಿ ಬಂದ ಜನಪದ ಸಾಹಿತ್ಯವು ನಾಶದ ಅಂಚಿಗೆ ಸಾಗುತ್ತಲಿದೆ. ನಮ್ಮ ಮೂಲ ಜನಪದರು ಶಾಲೆಯ ಕಟ್ಟೆ ಏರಿದವರಲ್ಲ, ಶಿಕ್ಷಣ ಕಲಿತವರಲ್ಲ ಆದರೆ ಅವರ ಸಾಹಿತ್ಯದಲ್ಲಿ ಬದುಕಿದ ಲೋಕಜ್ಞಾನ ಶಿಕ್ಷಣವನ್ನು ಅವರು ಪ್ರತಿನಿತ್ಯ ನಿಸರ್ಗದಿಂದ ಪಡೆದುಕೊಂಡು

ತಮ್ಮ ಬದುಕನ್ನು ಸುಂದರವನ್ನಾಗಿ ಮಾಡಿಕೊಂಡಿರುವುದನ್ನು ಅವರ ಸಾಹಿತ್ಯದಲ್ಲಿ ಇಂದಿಗೂ ಕಾಣಬಹುದು.

ಕವಿರಾಜ ಮಾರ್ಗ ಕೃತಿಯನ್ನು ಬರೆದ ಕವಿ ಕನ್ನಡ ಜನಪದರನ್ನು ಕುರಿತು "ಆ ನಾಡವರ್ಗಳ್ ಚದುರರ್, ನಿಜದಿಂಕುರಿತೋಜದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್" ಎಂದು ಹೇಳುತ್ತಾನೆ. ಇಲ್ಲಿನ ಜನಪದರು ಅಕ್ಷರಾಭ್ಯಾಸ ವಿದ್ಯೆ ಕಲಿಯದಿದ್ದರೂ ಕಾವ್ಯ ಸೃಷ್ಟಿಸುವ ಕ್ರಿಯೆಯಲ್ಲಿ ಪರಿಣಿತಮತಿಗಳಾಗಿದ್ದರು ಎಂದರೆ ಅವರು ಬಾಯಿಂದ ಬಾಯಿಗೆ ಪದಗಳನ್ನು ವರ್ಗಾಯಿಸುತ್ತಿದ್ದರು ಎಂದು ಅರ್ಥ ಮಾಡಿಕೊಳ್ಳಬೇಕು. ಅಂದರೆ ಕರ್ನಾಟಕ ಜನಪದದ ಪ್ರಮುಖಲಕ್ಷಣವಾದ 'ಮೌಖಿಕ ಪರಂಪರೆ' ಯನ್ನು ಕವಿರಾಜ ಮಾರ್ಗಕಾರ ಇಲ್ಲಿ ವಿಶ್ಲೇಷಿಸುತ್ತಿದ್ದಾನೆ. ಪರಂಪರೆ ಎಂಬುದು ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿಯೇ ಪ್ರಸಾರವಾಗುವಂಥದ್ದು, ಲಿಪಿಯಿಲ್ಲದ ಭಾಷೆಗಳು, ಅಂಥಹ ಭಾಷೆಗಳಿರುವ ಸಮಾಜಗಳಿಗೆ ಸಂಸ್ಕೃತಿ ಮುಂದುವರಿಕೆಗೆ ಇರುವ ಸಾಧನೆಯೆಂದರೆ 'ಮೌಖಿಕ ಪರಂಪರೆ' ಮಾತ್ರ. ಲಿಖಿತ ಪರಂಪರೆ ಲಿಪಿಯಿರುವ ಭಾಷೆಗಳ ಮೂಲಕ ಮುಂದುವರೆಯುತ್ತಿರುತ್ತದೆ. ಕನ್ನಡ ಜನಪದಕ್ಕೆ ಈ ಎರಡೂ ಪರಂಪರೆಗಳಿದ್ದು ಮುಂದುವರಿದ ಅಕ್ಷರಸ್ಥ ಸಮಾಜಗಳಿಗೆ ಲಿಖಿತ ಪರಂಪರೆಯಿದ್ದರೆ, ಮುಂದುವರಿಯದ ಸಾಮಾಜಿಕ ಕೆಳಸ್ತರದ ಅನಕ್ಷರಸ್ಥ ಸಮಾಜಗಳಿಗೆ ಮೌಖಿಕ ಪರಂಪರೆಯಿದೆ.

ಸಾಹಿತ್ಯ ಕಲೆಗಳಿಗೂ ಜಾನಪದಕ್ಕೂ ಇರುವ ಸಂಬಂಧ ಅತ್ಯಂತ ಗಾಢವಾದದ್ದು, ಅಷ್ಟೇ ಅಲ್ಲ ಜಾನಪದ ಸಾಹಿತ್ಯಕ್ಕೂ ಶಿಷ್ಟ ಸಾಹಿತ್ಯಕ್ಕೂ ನಡುವೆ ಹೊಕ್ಕುಳ ಬಳ್ಳಿ ನಂಟಿದೆಯೆಂಬ ಸಿದ್ಧಾಂತವನ್ನು ಹೊಸದಾಗಿ ಸ್ಥಾಪಿಸಬೇಕಾಗಿಲ್ಲ. ಒಂದಿದ್ದದ್ದು ಎರಡಾಗಿ ಎರಡೂ ಆನಂತರ ಸಮಾನಾಂತರವಾಗಿ ಬೆಳೆಯುತ್ತ, ಪರಸ್ಪರ ಪ್ರಭಾವದಿಂದ ವೃದ್ಧಿ ಹೊಂದುತ್ತವೆಂಬ ಅಂಶ ಯಾವ ಭಾಷೆಯ ಚರಿತ್ರೆಯನ್ನೋದಿದರೂ ಸುಸ್ಪಷ್ಟವಾಗುತ್ತದೆ. ಯಾವ ಸಾಹಿತ್ಯ ಕೃತಿಯನ್ನು ಬಿಚ್ಚಿದರೂ ಅಲ್ಲಿ ಜಾನಪದೀಯಾಂಶಗಳು ಅಲ್ಲಲ್ಲೆ ಮಿನುಗುವುದನ್ನು ಗಮನಿಸಬಹುದು ಶಿಷ್ಟ ಸಾಹಿತ್ಯದಲ್ಲಿ ಕಾಣೆಯಾದ ಸಾಹಿತ್ಯದ ಕೆಲವು ಮುಖಗಳನ್ನು ಜಾನಪದದಲ್ಲಿ ಕಾಣಬಹುದಾಗಿದೆ. ಆದ್ದರಿಂದ ಅವೆರಡೂ ಪರಸ್ಪರ ಪೂರಕವೆಂದು ಹೇಳಬಹುದು ಮಾನವನ ಹುಟ್ಟಿನೊಂದಿಗೆ ಕುಣಿತ ಮೆರೆಯಿತು: ಭಾವವೇ ರಾಗವಾಗಿ ಹರಿಯಿತು, ಜಾನಪದದ ಕುಕ್ಷಿಯೊಳಗೆ ಸೇರಿದ ವಿಷಯವೇ ಇಲ್ಲ. ಅದೇ ಒಂದು ಬ್ರಹ್ಮಾಂಡ.[೧] ಎಂದಿದ್ದಾರೆ. ಜನಪದ ಸಾಹಿತ್ಯದ ಭಾಷೆ ಗ್ರಾಮೀಣವಾದರೂ ಅಶ್ಲೀಲವಲ್ಲ, ಅಶುದ್ಧವಲ್ಲ, ಅನಾಗರೀಕವಲ್ಲ, ಭಾಷೆಯಲ್ಲಿ ಶುದ್ಧಾಶುದ್ದಗಳ ಪ್ರಶ್ನೆಯೇ ಏಳುವುದಿಲ್ಲ. ಅದು ಶಿಷ್ಟ ಮತ್ತು ಜನಪದದ ನಡುವಣ ತಿಕ್ಕಾಟವಷ್ಟೇ, ಅನ್ಯ ಭಾಷೆಯ ಮಾತುಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳುವಾಗ ಗ್ರಾಮೀಣರು ತಮ್ಮತನವನ್ನಾಗಿ ಮಾಡಿಕೊಳ್ಳುವಾಗ ಗ್ರಾಮೀಣರು ಮೆರೆಯುತ್ತಾರೆ. ತಮ್ಮ ನುಡಿಯ ಜಾಯಮಾನಕ್ಕೆ ಹೊಂದಿಕೊಳ್ಳುವಂತೆ ರೂಪಾಂತರಿಸಿಕೊಳ್ಳುತ್ತಾರೆ. ಜನಪದ ಸಾಹಿತ್ಯದಲ್ಲಿರುವುದೆಲ್ಲ, ಗಟ್ಟಿಯಾದದ್ದು, ಅತ್ಯುತ್ತಮವಾದದ್ದು, ಅದರಲ್ಲಿ ಜೊಳ್ಳು

ಪೊಳ್ಳುಗಳಿಲ್ಲವೆಂದು ಹೇಳುವಂತಿಲ್ಲ. ಅಸಾರವಾದದ್ದು, ಅನುಪಯುಕ್ತವಾದದ್ದು, ಆಧುನಿಕಾಭಿರುಚಿಗೆ ಹಿಡಿಸದ್ದು ಬೇಕಾದಷ್ಟಿದೆ. ಜನಪದ ಸಾಹಿತ್ಯದ ಹೆಸರೆತ್ತಿದ್ದರೂ ಮೂಗು ಮುರಿಯುವ ಮಂದಿ ಬಹಳಷ್ಟಿದ್ದಾರೆ.. ಜನಪದ ಸಾಹಿತ್ಯವನ್ನು ಅದುಹುಟ್ಟಿದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಭ್ಯಸಿಸ ಬೇಕಾಗುತ್ತದೆ. ಬರಿಯ ನಿಸ್ಸಾರವೆಂದು ತೋರುವ ಸಾಹಿತ್ಯದಲ್ಲಿಯೂ ಕೆಲವು ಸದ್ಗುಣಗಳನ್ನು ಕಾಣಬಹುದು. ಜೀವನ ಸಮಸ್ತವನ್ನು ವಸ್ತುವಾಗುಳ್ಳ ವಿಸ್ತಾರವಾದ ಜನಪದ ಸಾಹಿತ್ಯದ ವಿಂಗಡಣೆ ಕಠಿಣವಾದ ವಿಷಯ. ಅದರಲ್ಲಿ ಗದ್ಯಪದ್ಯಗಳೆರಡೂ ಇವೆ. ಮಾನವ ಜೀವನದ ಸಕಲ ಮುಖಗಳು ಅಲ್ಲಿ ಪ್ರತಿ ಫಲಿಸಿವೆ. ಪೂರ್ವಕಾಲದ ಜ್ಞಾನ ವಿಜ್ಞಾನಗಳೆಲ್ಲಾ ಅದರಲ್ಲಿ ಅಡಕಗೊಂಡಿವೆ. ಎಲ್ಲಾ ಕಾಲದ ಸಾಮಾನ್ಯ ಜನರ ಕಲ್ಪನೆಗಳು, ನಂಬಿಕೆಗಳು, ಆಶೋತ್ತರಗಳು, ಆಕ್ರೋಶಗಳು ಎಲ್ಲವೂ ಇದರಲ್ಲಿ ಅಡಗಿವೆ. ನಿಜಕ್ಕೂ ಜನಪದ ಸಾಹಿತ್ಯ ಇತಿಹಾಸ ಪೂರ್ವಯುಗದ ಹಾಗೂ ಸಾರ್ವಕಾಲಿಕ ಸಾಮಾನ್ಯರ ವೇದ ಅಲ್ಲದೇ ವಿಶ್ವಕೋಶವಾಗಿದೆ. ಜನಪದ ಗೀತೆ ಒಂದು ರೀತಿಯಲ್ಲಿ ಆಶುಕವಿತೆ, ಯಾವುದೋ ಒಂದು ಕ್ಷಣದಲ್ಲಿ ಆನಂದ ತುಂಬಿ ತುಳುಕಿದಾಗ, ನೋವು ಮನಸ್ಸೆಲ್ಲಾ ಹಿಂಡಿದಾಗ, ಗಾನ ಲಹರಿ ಹರಿಯುತ್ತದೆ. ಅವನ ಪಾಡೇ ಹಾಡಾಗುತ್ತದೆ. ಅದು ಆಕರ್ಷಿಕವಾಗಿದ್ದಲ್ಲಿ ಬೇರೆಯವರು ಅದನ್ನು ಹೇಳಿಕೊಳ್ಳುತ್ತಾರೆ. ಇತರರಿಗೂ ಹೇಳಿಕೊಡುತ್ತಾರೆ. ಬಾಯಿಂದ ಬಾಯಿಗೆ ಹರಿಯುವ ಗುಣ ಈ ಕಾವ್ಯದ ಪ್ರಮುಖ ಲಕ್ಷಣವಾದ್ದರಿಂದ, ಅದು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ರೂಪಾಂತರವಾಗುವುದುಂಟು. ಅಂದ ಮೇಲೆ ಅದು ಆಗಾಗ್ಗೆ ಪುನರ್ ಸೃಷ್ಟಿಗೊಳ್ಳುತ್ತದೆಂತಾಯಿತು. ಹತ್ತಾರು ನೂರಾರು ಸಾವಿರಾರು ಜನರ ಭಾವಕೋಶದಲ್ಲಿ ನೆನೆದು ಬಹುಜನರ ಬುದ್ಧಿಯಲ್ಲಿ ನಾದಿ ಬರುತ್ತದೆಯಾದ್ದರಿಂದ ಅದು ಸಾಮುದಾಯಿಕ ಸೃಷ್ಟಿಯಾಗುತ್ತದೆ. ಜಾನಪದ ಗೀತೆ ಪುನರ್ ಸೃಷ್ಟಿ ಮತ್ತು ಸಾಮುದಾಯಿಕ ಸೃಷ್ಟಿಯ ಮೂಲಕ, ಸಮಾಜದ, ಜನಾಂಗದ ಅಥವ ಜಗತ್ತಿನ ಆಸ್ತಿಯಾಗುತ್ತದೆ. ಜನಪದ ಕಾವ್ಯ ಮೌಖಿಕ ವಿಧಾನದ ಮೂಲಕ ಪ್ರಸಾರವಾಗುತ್ತದಷ್ಟೆ, ಇವು ಹೆಸರಿಗೋಸ್ಕರ ರಚನೆಗೊಳ್ಳದೆ ಅಪ್ರಜ್ಞಾಪೂರ್ವಕವಾಗಿ ಮೂಡಿ ಬಂದದ್ದಾದ್ದರಿಂದ ಕವಿಯ ಹೆಸರು ಅನಾಮಿಕವಾಗಿಯೇ ಉಳಿಯುತ್ತದೆ.

೫.೧. **ಹಾಡುಗಳು** : ಚಿತ್ರದುರ್ಗದ ನಾಯಕ ಅರಸರ ಇತಿಹಾಸದ ಪುಟಗಳಲ್ಲಿ ಮಹತ್ವದ ಪಾತ್ರ ವಹಿಸಿದ ಒನಕೆ ಓಬವ್ವನ ಬಗ್ಗೆ ಎಲ್ಲರಿಗೂ ತಿಳಿದಿರುವ ವಿಚಾರವೇ ಹೈದರಾಲಿಯ ಸೈನ್ಯ ದುರ್ಗದ ಕೋಟೆಯೊಳಗೆ ನುಸುಳುವುದನ್ನು ಕಂಡ ಓಬವ್ವ ತನ್ನ ಜೀವದ ಹಂಗು ತೊರೆದು ಹೋರಾಡಿದ ಸಂಗತಿ ಅವಿಸ್ಮರಣೀಯ. ಅಂತೆಯೇ ಅನುಕರಣೀಯ. ಓಬವ್ವಳ ಕಿಚ್ಚು ನಾಡು ಕಟ್ಟುವ ಕಿಚ್ಚಾಗಿತ್ತು.ಇಂದು ಮನುಷ್ಯ ಒಂದಲ್ಲಾ ಒಂದು ಹುಚ್ಚಿಗೆ ಒಳಗಾಗಿ ಮತೀಯ ಕಿಚ್ಚು ಹಚ್ಚುವತ್ತ ಸಾಗುತ್ತಿದ್ದಾನೆ. ಆದರೆ ಸಾಮಾಜಿಕ ಪ್ರಜ್ಞೆ ಇಟ್ಟುಕೊಂಡು ನಾಡು ಕಟ್ಟುವ ಕೆಲಸಕ್ಕೆ ಜನತೆ ಮುಂದಾಗಬೇಕು ಎಂಬುದರ ಪ್ರತೀಕ ಓಬವ್ವನ ಘಟನೆ.

ಚಿತ್ರದುರ್ಗ ಎಂಬುದೇ ಒಂದು ವಿಚಿತ್ರದುರ್ಗ ಎನ್ನುವುದರಲ್ಲಿ ಸಂಶಯವಿಲ್ಲ ಮೌರ್ಯರ ಆಳ್ವಿಕೆಯಿಂದ ಹಿಡಿದು ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಸೇವುಣರು, ಹೊಯ್ಸಳರು. ವಿಜಯನಗರ ಅರಸರು ಮೊದಲಾದ ಕಲಿಗಳು ಅಳಿದ ಬೀಡಾದ ಚಿತ್ರದುರ್ಗ, ಬೆಮ್ಮತ್ತನಕಲ್ಲು, ಚಿನ್ಮೂಲಾದ್ರಿಯು ದಕ್ಷಿಣ ಕರ್ನಾಟಕದ ಒಂದು ಪ್ರಮುಖ ಜಿಲ್ಲೆಯಾಗಿದ್ದು, ಐತಿಹಾಸಿಕ ಮಹತ್ವದ ಕೇಂದ್ರವಾಗಿದೆ. ಹಾಗೂ ದಕ್ಷಿಣ ಭಾರತದ ಒಂದು ಆಯಕಟ್ಟಿನ ಸ್ಥಳದಲ್ಲಿರುವ ಚಿತ್ರದುರ್ಗ ಜಿಲ್ಲೆಯು ಹಲವಾರು ವಿಶಿಷ್ಟತೆಗಳನ್ನೊಳಗೊಂಡಿದೆ. ಇಂಥಹ ಚಿತ್ರದುರ್ಗವನ್ನು ಓಬವ್ವ ಪ್ರತಿನಿದಿಸುತ್ತಿರುವುದು ಶ್ಲಾಘನೀಯ.

ವೀರವನಿತೆ ಓಬವ್ವಳನ್ನು ಅಜರಾಮರವಾಗಿರುವಂತೆ ಮಾಡುವ ಪ್ರಯತ್ನಗಳಿಂದ ದುರ್ಗದ ಜನತೆ ಹಿಂದೆ ಬಿದ್ದಿಲ್ಲ. ದುರ್ಗದ ಜಿಲ್ಲಾಕ್ರೀಡಾಂಗಣಕ್ಕೆ ಓಬವ್ವಳ ಹೆಸರಿಡಲಾಗಿದೆ. ಜಿಲ್ಲಾಧಿಕಾರಿ ಕಛೇರಿ ಬಳಿ ಓಬವ್ವಳ ಕಂಚಿನ ಪ್ರತಿಮೆ ಸ್ಥಾಪಿಸಲಾಗಿದೆ.ಇಷ್ಟಲ್ಲದೇ ಹೊಳಲ್ಕೆರೆ ರಸ್ತೆಯಲ್ಲಿ ಓಬವ್ವಳ ದೇವಸ್ಥಾನವೂ ಇದೆ. ಚಿತ್ರದುರ್ಗ ಜಿಲ್ಲೆ ಅಷ್ಟೇ ಅಲ್ಲದೇ ಕರ್ನಾಟಕದಲ್ಲಿ ಎಲ್ಲೆಡೆಯೂ ಓಬವ್ವಳಿಗೆ ಸ್ಥಾನ ಮಾನ ದೊರೆತಿದೆ.ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯ ಕ್ರೀಡಾಂಗಣಕ್ಕೆ ಒನಕೆ ಓಬವ್ವ ಕ್ರೀಡಾಂಗಣ ಎಂದು ಹೆಸರಿಸಿರುವುದು ಹೆಮ್ಮೆಯ ಸಂಗತಿ. ಅಂದರೆ ನಾಡಿನ ಮಗಳಾಗಿದ್ದಾಳೆ ಓಬವ್ವ. ಮಧ್ಯ ಕರ್ನಾಟಕ ಅನಾದಿ ಕಾಲದಿಂದಲೂ ಬುಡಕಟ್ಟು ಸಮುದಾಯಗಳಿಗೆ ನೆಲೆ ಒದಗಿಸಿದೆ.ಹಾಗಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಹಿಂದುಳಿದ ಸಮುದಾಯಗಳೇ ಜಾಸ್ತಿ. ಒನಕೆ ಓಬವ್ವ ಪರಿಶಿಷ್ಟರಲ್ಲಿ ಬರುವ ಛಲವಾದಿ (ಹೊಲೆಯರು) ಸಮುದಾಯಕ್ಕೆ ಸೇರಿದವಳೆಂದು ಹೇಳಲಾಗಿದ್ದು ಅದನ್ನು ಸಾಬೀತು ಪಡಿಸಲು ಸಂಭಂದಪಟ್ಟ ಎಲ್ಲಾ ದಾಖಲೆಗಳನ್ನುನೀಡಿದ್ದಾರೆ ಆ ಸಮುದಾಯದವರು. ಓಬವ್ವಳನ್ನು ತಮ್ಮವಳೆಂದು ಹೇಳಲಾಗಿದ್ದು.ಆರಾಧಿಸುತ್ತಿದ್ದಾರೆ. ಹಾಗೂ ಓಬವ್ವಳನ್ನು ತಮ್ಮ ಕುಲದೇವತೆಯನ್ನಾಗಿ ಆರಾಧಿಸಿಕೊಂಡು ಬರುತ್ತಿದ್ದಾರೆ. ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯಲ್ಲಿ ವೀರವನಿತೆ ಓಬವ್ವಳಿಗಾಗಿ ಒಂದು ದೇವಸ್ಥಾನವನ್ನು ನಿರ್ಮಿಸಿ (ಇತ್ತೀಚೆಗೆ) ಪೂಜಾ ಕಾರ್ಯಗಳನ್ನು ನೆಡೆಸಿಕೊಂಡುಬರುತ್ತಿದ್ದಾರೆ.

ಓಬವ್ವನ ಬಗೆಗಿನ ಗ್ರಂಥಸ್ಥ ಸಾಹಿತ್ಯ ನಮಗೆ ಗೋಚರಿಸಿರುವುದು ಬೆರಳೆಣಿಕೆ ಕೃತಿಗಳಲ್ಲಿ ಮಾತ್ರ, ಏಕೆಂದರೆ ಇತಿಹಾಸ ಪ್ರಾರಂಭವಾಗುವುದೇ ಅಲ್ಲಿನ ರಾಜ ವಂಶದಿಂದ ಅವರ ವೃತ್ತಾಂತಗಳಿಂದ. ಪ್ರಸಿದ್ಧರಾದ ರಾಜರು, ರಾಜ್ಯದ ವಿಸ್ತರಣೆ, ಅವನ ದಿಗ್ವಿಜಯ, ಸ್ಮಾರಕಗಳು, ಭಾಷೆ, ಸಾಹಿತ್ಯ, ರಾಜನ ಉತ್ತರಾಧಿಕಾರಿಗಳು, ಅವರ ಪತ್ನಿಯರು, ಅವರ ಸಾಹಸಗಾಥೆಗಳನ್ನು, ಸಿಕ್ಕ ಮೂಲಗಳಿಂದ ನಮಗೆ ಸವಿಸ್ತಾರವಾಗಿ ತಿಳಿಸುತ್ತದೆ. ಆದರೆ ಓಬವ್ವ ಅಂಥಹ ಯಾವುದೇ ರಾಜ ವಂಶಗಳಿಗೆ ಸೇರಿದವಳಲ್ಲ. ಕೋಟೆಯನ್ನು ಕಾಯುವ ಕಾವಲುಗಾರನ ಹೆಂಡತಿ ಅಷ್ಟೇ ಎಂದು ತಿಳಿದು ಓಬವ್ವ ತನ್ನ ಜೀವನ ಸಾಗಿಸಬಹುದಿತ್ತು. ಆದರೆ ತನ್ನ ಸ್ವಾಮಿ ನಿಷ್ಠೆಯನ್ನು ಅಸಂಖ್ಯಾತ ಸೈನಿಕರ ಎದುರು ತೋರಿಸಿ, ತನ್ನ ಜೀವವನ್ನೇ ಪಣಕ್ಕಿಟ್ಟು ಹೋರಾಡಿದ

ಓಬವ್ವನನ್ನು ಅವಳ ಸಾಹಸಗಾಥೆಯನ್ನು ಸೂಕ್ಷ್ಮವಾಗಿ ಅವಲೋಕಿಸಬೇಕಾಗುತ್ತದೆ.ಏಕೆಂದರೆ ಓಬವ್ವ ಗುಡಿ ಕೋಟೆಯ ಸಂಸ್ಥಾನದಲ್ಲಿ ಕಹಳೆ ಚೆನ್ನಪ್ಪನ ಮಗಳಾಗಿದ್ದು ಅಲ್ಲಿನ ಸಂಸ್ಥಾನದಲ್ಲಿನ ಪೆದ್ದಕ್ಕ ನಾಗತಿಯ ಆಪ್ತ ಸೇವಕಿಯಾಗಿದ್ದಳೆಂದು ತಿಳಿದಿದೆ. ಅಂಗರಕ್ಷಕಳಾಗಿದ್ದಳು ಎಂಬುದು ತಿಳಿದು ಬಂದಿದೆ. (ನಾಯಕ ವಂಶಸ್ಥರಾದ ವೀರಭದ್ರ ನಾಯಕರ ಹೇಳಿಕೆ) ಅಂದರೆ ಪೆದ್ದಕ್ಕ ನಾಗತಿಯ ರಹಸ್ಯ ಅಂಗರಕ್ಷಕಿಯೂ ಆಗಿದ್ದಳು ಎಂಬುದುತಿಳಿದುಬಂದಿದೆ. ಹಾಗಾಗಿ ಪೆದ್ದಕ್ಕ ನಾಗತಿಯು ಚಿತ್ರದುರ್ಗದ ಮದಕರಿ ನಾಯಕನನ್ನು ವಿವಾಹವಾಗಿ ಚಿತ್ರದುರ್ಗದ ಕೋಟೆ ಪ್ರವೇಶಿಸಿದ ಮೇಲೆ ಅವಳ ಅಂಗರಕ್ಷಕೆಯಾಗಿದ್ದ ಓಬವ್ವಳನ್ನು ತನ್ನೊಂದಿಗೆ ಕರೆತರುವುದು ಅನಿವಾರ್ಯವಾಗಿತ್ತು. ಆದರೆ ವಯಸ್ಸಿನ ಹೆಣ್ಣನ್ನು ತನ್ನೊಂದಿಗೆ ತನ್ನ ಅಂತಃಪುರದಲ್ಲಿಟ್ಟುಕೊಳ್ಳುವುದು ಹೇಗೆ? ಎಂಬ ಪ್ರಶ್ನೆಗೆ ಉತ್ತರವಾಗಿ ಕೋಟೆ ಕಾಯುವ ನಂಬಿಕಸ್ಥ ಮದ್ದಹನುಪ್ಪನಿಗೆ ಓಬವ್ವನನ್ನು ವಿವಾಹ ಮಾಡುವ ಮೂಲಕ ಓಬವ್ವನನ್ನು ಚಿತ್ರದುರ್ಗದ ಕೋಟೆಗೆ ಕರೆತರುತ್ತಾಳೆ. ಕೋಟೆಯ ರಕ್ಷಣೆ ಮಾಡುವ ಕಹಳೆಯವನ ಹೆಂಡತಿಯಾಗಿ ಚಿತ್ರದುರ್ಗ ಕೋಟೆ ಪ್ರವೇಶಿಸಿದ ಓಬವ್ವ ಪರೋಕ್ಷವಾಗಿ ರಕ್ಷಣಾಪಡೆಯ ಹೆಣ್ಣಾಗಿ ಕೋಟೆ ಪ್ರವೇಶಿಸಿದಳು.[೨] ಕೋಟೆ ಕಾಯುವವನ ಹೆಂಡತಿಯಾದ ಮೇಲೆ ಕೋಟೆ ಕಾಯುವುದು ಅವಳ ಕರ್ತವ್ಯ ಎಂದು ಭಾವಿಸಿದಳು. ಹಾಗೆಯೇ ತನ್ನ ಕರ್ತವ್ಯವನ್ನು ನಿಭಾಯಿಸಿದಳು, ಇಂಥಹ ಓಬವ್ವನ ಸಾಹಸವನ್ನು ಐತಿಹಾಸಿಕವಾಗಿ ಪರಿಶೀಲಿಸಿ, ಪರಿಶೋಧಿಸಿ ನೋಡಿದಾಗ ಹಲವು ದಾಖಲೆಗಳು ಬಿಟ್ಟರೆ ಬೇರೆಲ್ಲಿಯೂ ಮೂಲಧಾರಗಳು ಅಷ್ಟಾಗಿ ಸಿಗುತ್ತಿಲ್ಲ.

ಜನ ಸಾಮಾನ್ಯರ ಅಭಿವ್ಯಕ್ತಿ ಪ್ರಕಾರಗಳಲ್ಲಿ ಜನಪದ ಸಾಹಿತ್ಯ ಪ್ರಮುಖವಾದದ್ದಾಗಿದೆ. ಇದು ಶಿಷ್ಟ ಸಾಹಿತ್ಯಕ್ಕಿಂತಲೂ ಭಿನ್ನವಾಗಿದ್ದು, ಈ ಮೌಖಿಕ ಸಾಹಿತ್ಯದಲ್ಲಿ ಧ್ವನಿ ಇಲ್ಲದವರ ಧ್ವನಿಯ ಆಲಾಪನೆಗಳು ಕೇಳಿಬರುತ್ತವೆ. ಬಹುಪಾಲು ಅನಕ್ಷರಸ್ಥ ಜನರು, ದುಡಿಯುವ ಜನರು ಹೇಳಿಕೊಂಡ ಸಾಹಿತ್ಯವೇ ಮೌಖಿಕ ಸಾಹಿತ್ಯವಾದ್ದರಿಂದ, ಜನಸಾಮಾನ್ಯರ ಬದುಕಿನ ಬಗೆಗೆ ಅಧ್ಯಯನ ಮಾಡಬೇಕಾದ ಸಂದರ್ಭದಲ್ಲಿ ಮೌಖಿಕ ಆಕರಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ.

ಚಿತ್ರದುರ್ಗದ ವ್ಯಾಪ್ತಿಯಲ್ಲಿ ಬರುವ ಜನಪದರು ವೀರ ವನಿತೆ ಓಬವ್ವನನ್ನು ತುಂಬಾ ಆತ್ಮೀಯವಾಗಿ, ಐತಿಹಾಸಿಕವಾಗಿ ತಮ್ಮ ಭಾವನೆಗಳಲ್ಲಿ ಕಂಡಿದ್ದಾರೆ. ತಮ್ಮ ದಿನಿತ್ಯದ ಬಾಳಿನಲ್ಲಿ ಕಂಡುಂಡ ನೋವು, ನಲಿವುಗಳನ್ನು ಆಡು ಮಾತಿನಲ್ಲಿ ಹೃದಯಾಂತರಾಳದಿಂದ ಸುಂದರವಾಗಿ ಮೂಡಿಸಿದ ಛಾಪನ್ನು ದುರ್ಗದ ಜನಪದರ ಮೌಖಿಕ, ಸಾಹಿತ್ಯದಲ್ಲಿ ಕಾಣಬಹುದಾಗಿದೆ.ಓಬವ್ವ ತಮ್ಮವಳು ತಮ್ಮ ನಾಡಿನವಳೂ ಜನ ಸಾಮಾನ್ಯಳು, ಎಂಬುದನ್ನು ಅವರ ಭಾವನೆಯಲ್ಲಿ ಕಾಣಬಹುದಾಗಿದೆ.ಅವರ ಜನಪದ ಆಡು ಮಾತಿನ ಜನಪದ ಹಾಡುಗಳಲ್ಲಿ ಮೌಖಿಕವಾಗಿ ತಮ್ಮ ಹಾಡುಗಳಲ್ಲಿ ಅವಳಿಗೆ ಪ್ರಮುಖ ಸ್ಥಾನ ನೀಡಿದ್ದಾರೆ.

ಒನಕೆ ಹಿಡಿದ ದೊಡ್ಡವಳೆ
ನಿನ್ನ ನೆನೆದಾವೆ ಮಲ್ಲಿಗೆ ಮಲ್ಲಿಗೆಯಮ್ಮಾ
ನೀ ಹೋದ ದಾರಿ ಯಾವುದಮ್ಮಾ
ಓಬವ್ವ ನೀ ದೊಡ್ಡವಳಾದೆಯಮ್ಮಾ
ದೊಡ್ಡವಳೇ ಗ್ಯಾನದೇವಿ
ಎಲ್ಲಿಗೆ ಎಲ್ಲಿಗೆ ಹೋದೆಯಮ್ಮಾ.

ಕಾಲ ಉರುಳಿದರೂ, ಊರು ಬದಲಾದರೂ ಏನೇಬದಲಾವಣೆಯಾದರೂ ತಮ್ಮ ಬದುಕಿನ ಮೇಲೆ ಪ್ರಭಾವ ಬೀರಿದ ವೀರ ಮಹಿಳೆಯನ್ನು ನೆನೆದು ಒಂದು ಕ್ಷಣ ಪ್ರಾರ್ಥನೆ ಕೃತಾರ್ಥರಾಗುವ ಸ್ವಭಾವ ನಮ್ಮ ಜನಪದರದು. ಹಾಗೆಯೇ ತಮ್ಮ ಜೀವನದೊಂದಿಗೆ ಓಬವ್ವನನ್ನು ಅವಿನಾಭಾವದಿಂದ ಸಮೀಕರಿಸುತ್ತಾ ನಡೆದಿದ್ದಾರೆ.

ಕಾಶೀಯ ದಿಬ್ಬಣದಾಗೆ
ಕಾಶೀಯ ನೆನೆದವಳೇ
ಎಲ್ಲಿಂದ ಎಲ್ಲಿಗಮ್ಮಾ ನೀನೋಗುವುದು
ಕಣಿವೆಯಾ ಸಾಲಿನಲ್ಲಿ ಇರುವಳು
ಓಬಕ್ಕನಾ ಕಂಡಿರಾ
ಮೊದಲಾಗ್ಯಾನದೇವಿಯನು ಕಂಡಿರಾ
ಎಲ್ಲಿಂದ ಎಲ್ಲಿಗಮ್ಮಾ ನೀನೋಗುವುದು.

ಹೀಗೆ ಹೈದರಾಲಿಯ ಸೈನಿಕರ ವಿರುದ್ದ ಕಾಳೀಮಾತೆಯಂತೆ ನಿಂತು ಹೋರಾಡಿ ರುಧಿರ ಸ್ನಾನ ಮಾಡಿದ ಓಬವ್ವನಿಗೆ ಮದಕರಿ ನಾಯಕ ಸನ್ಮಾನ ಮಾಡಲು ಕೇಳಿದಾಗ ತನಗೇ ಬೇರೇನೂ ಬೇಡ, ಚಿನ್ನ ಬೆಳ್ಳಿ ಬೇಡ ಎಲ್ಲವೂ ಇದ್ದು ತಮ್ಮ ಆಳ್ವಿಕೆಯಲ್ಲಿ ಸುಖವಾಗಿ ಇರುವುದಾಗಿ ಹೇಳಿದ ಓಬವ್ವ ತನ್ನ ನಂತರ ತನ್ನ ವಂಶದವರು ತನ್ನನ್ನು ಕುಲದೇವತೆಯನ್ನಾಗಿ ಆಚರಿಸುವಂತೆ ವ್ಯವಸ್ಥೆಮಾಡಿಕೊಡಲು ಕೇಳಿದಾಗ, ಮದಕರಿನಾಯಕರು ಕಾಶಿಯಿಂದ ಬೆಳ್ಳಿಯ ವಿಗ್ರಹಗಳನ್ನು ಪವಿತ್ರ ಗಂಗಾಜಲವನ್ನು ತರಿಸಿ ಓಬವ್ವೆಯ ಹೆಸರಿನಲ್ಲಿ ಪೂಜಿಸಲು ತಿಳಿಸಿ ಕೀಲವನ್ನು ನೀಡಿದನು. ಅಂದರೆ ಕಾಶಿಯಿಂದ ಪವಿತ್ರವಾಗಿ ಮಾಡಿಸಿ ತಂದ ಮೂರ್ತಿಗಳನ್ನು ನಾಯಕರಿಂದ ಪಡೆದ ಓಬವ್ವೆ ದೊಡ್ಡವಳಾಗಿದ್ದಾಳೆ. ಜನಪದರ ದೃಷ್ಟಿಯಲ್ಲಿ ಆಕೆ ದುರ್ಗದ ಮಾತೆಯಾಗಿದ್ದಾಳೆ. ಅವರು ತಮ್ಮದೇ ಆಡು ಭಾಷೆಯಲ್ಲಿ ತಮ್ಮ ಹಾಡುಗಳಲ್ಲಿ ದುರ್ಗದ ಸುತ್ತಲೂ ಹರಡಿರುವ ಕಣಿವೆಗಳ ಸಾಲಿನಲ್ಲಿ ಓಬವ್ವನನ್ನು ಪ್ರತಿಬಿಂಬಿಸಿದ್ದಾರೆ. ಕಾಶಿಯಂಥಹ ಪುಣ್ಯಸ್ಥಳದ ಪವಿತ್ರ ಜಲಕ್ಕೆ ಭಾಜನಳಾಗಿದ್ದಾಳೆ. ಯಾವುದೇ ತ್ವರಿತ ಸಾರಿಗೆಯಿಲ್ಲದ ಕಾಲದಲ್ಲಿ ಕಾಶೀ ಎನ್ನುವುದು ದೇವಲೋಕಕ್ಕೆ ಸಮನಾದುದಾಗಿತ್ತು. ಆಗ ನಾಡನ್ನು ಕಾಪಾಡಬೇಕೆಂಬ

ಜ್ಞಾನವನ್ನು ಹೊಂದಿದ ಓಬವ್ವ ಅವರ ದೃಷ್ಟಿಯಲ್ಲಿ ಗ್ಯಾನ ದೇವತೆಯಾಗಿದ್ದಾಳೆ.

ಉಘೇ, ಉಘೇ ಗುಡಿಯಾಗೆ ಓಬಕ್ಕನಾ
ಗುಡಿಯಿಂದೆ ಹೂ ಅರಳಿ ಬಾಯಬಿಡುತಾವೆ
ಸಾಂಬ್ರಾಣಿ ಹಾಕಿ ದೂಪವಾಕಿ
ಆರತಿ ಬೆಳಗ್ಯಾರೆ,
ಓಬವ್ವನ ಗುಡಿಯಲ್ಲಿ
ಸಾಲು ಉಬ್ಬಿದ ಗುಡ್ಡಗಳಲ್ಲಿ ಇರುವ ಓಬವ್ವ
ಎಲ್ಲಿಂದ ಎಲ್ಲಿಗಮ್ಮ
ನೀನೋದೆ ಎಲ್ಲಿಂದ ಎಲ್ಲಿಗಮ್ಮಾ
ಒನಕೆ ದೊಡ್ಡವಳೇ ಎಲ್ಲಿಂದ
ಎಲ್ಲಿಗಮ್ಮಾ, ನೀನೋಗುವುದು,ಎಲ್ಲಿಂದ ಎಲ್ಲಿಗಮ್ಮಾ

ಪುರಾಣಗಳು ಪಂಡಿತರ ಹಿಡಿತಕ್ಕೆ ಒಳಗಾಗಿದ್ದರೆ ಜನಸಾಮಾನ್ಯರು ಬದುಕುಗಳನ್ನು ತಮ್ಮಹಿಡಿತದೊಳಗೆ ಬಂಧಿಸಿಕೊಂಡಿದ್ದಾರೆ. ಈ ಜನಪದ ಸಾಹಿತ್ಯದ ಪ್ರಕಾರವಾದ ಹಾಡುಗಳು ಜನರ ಬಾಯಿಂದ ಬಾಯಿಗೆ ಹರಿದು ಚರಿತ್ರೆಗೆ ಔನತ್ಯ ತರುವಲ್ಲಿ ಪ್ರೇರಕಗಳಾಗಿವೆ. ಈ ಗೀತೆಗಳು ಕೇವಲ ಸಾಹಸ ನಿರೂಪಕಗಳಾಗಿರದೇ ಧ್ಯೇಯ ಮತ್ತು ಅಮರತೆಯನ್ನು ಸಾರುವ ಹಾಡುಗಳಾಗಿವೆ. ಹುಲ್ಲೂರು ಶ್ರೀನಿವಾಸ ಜೋಯಿಸರು ಚಿತ್ರದುರ್ಗದ ಪ್ರೌಢ ಪಾಠ ಶಾಲೆಯಲ್ಲಿ ಚಿತ್ರಕಲಾ ಅಧ್ಯಾಪಕರೂ ಕೆಲವು ಕೃತಿಗಳ ಕರ್ತೃಗಳೂ ಆಗಿದ್ದ ಸಿ.ರಂಗಯ್ಯ ಅವರಿಂದ 'ವೀರರಮಣಿ ಓಬವ್ವ ಎಂಬ ಲಾವಣಿ ಮತ್ತು ಸಾಂಗತ್ಯ ಸರಣಿಯು ರಚನೆಗೊಳ್ಳಲು ಕಾರಣರಾಗಿದ್ದರು. ಇದು ಶರಣ ಸಾಹಿತ್ಯ ದಲ್ಲಿ ಪ್ರಕಟಗೊಂಡಿದೆ "ವೀರ ಓಬವ್ವನ ಸಾಹಸವನು ಕೇಳಿ ವೀರರಕ್ಕುತವುಕ್ಕೇರೆ ಎಂದು ವೀರಾವೇಶದಿಂದ ಬರೆದಿದ್ದಾರೆ ರಂಗಯ್ಯನವರು. ಶ್ರೀನಿವಾಸ ಜೋಯಿಸರು ಈ ಸಾಂಗತ್ಯದ "ಮೊದಲ ಮಾತು" ಬರೆದಿದ್ದು ಅಲ್ಲಿ ಓಬವ್ವೆಯ ಮರಣದ ಬಗ್ಗೆ ಬರೆಯುತ್ತಾ ಹೃದಯಸ್ಪರ್ಶಿ ಮಾತುಗಳನ್ನು ಬರೆದಿದ್ದಾರೆ.[೩] ಆದರೆ ಓಬವ್ವೆಯ ಬಗೆಗಿನ ಜಾನಪದ ಗೀತೆಗಳು ಮಾತ್ರ ಎಲ್ಲಿಯೂ ನಮಗೆ ಕಾಣಸಿಗುವುದಿಲ್ಲ.

ಏಳಮ್ಮ ಏಳು ಏಳಮ್ಮ ಏಳು
ಏಳು ನಾಮಾದವಳೆ ಏಳಮ್ಮ ಏಳು
ಊಟಕ್ಕೆ ಬಂದ ತನ್ನ
ಗಂಡಂಗೆ ಊಟಕ್ಕಿಟ್ಟು ನೀರ್ಗೆಹೋಗವ್ಳೆ ಓಬಿ
ಏಳು ತಾಯೆ ಏಳು ಏಳಮ್ಮ ಏಳು
ಅಲ್ಲಿಂದ ಓಬವ್ವ ಎಲ್ಲೀಗೆ ನಡೆದಾಳೆ

ರಾಶಿ ರಾಶಿ ಹೆಣವ ಹೊಡೆದಾಳೆ
ಏಳು ತಾಯೆ ಏಳು ಏಳಮ್ಮ ಏಳುಏಳು ನಾಮಾದವಳೆ
ರಾಶಿ ರಾಶಿ ಹೆಣಗಳ ಹೊಡೆದಾಳ
ಓಬವ್ವ ಘಳ್ಳನ್ನ ಕೇಕ ಹೊಡೆದಾಳೆ
ಏಳು ತಾಯೆ ಏಳು ಏಳಮ್ಮ ಏಳುಏಳು ನಾಮಾದವಳೆ
ಪಳ್ಳನ್ನ ಕೇಕು ಹೊಡದಾಳ ಓಬವ್ವ
ಬಂದ ಮೆದಕೇರಿ ನೋಡ್ಯಾನ
ಏಳು ತಾಯೆ ಏಳು ಏಳಮ್ಮ ಏಳು ಏಳು ನಾಮಾದವಳೆ
ಬಂದ ಮೇದಕೇರಿ ನೋಡ್ಯಾನ
ಓಬವ್ನ ಸಮ್ಮಾನ ಮಾಡ್ಯಾಲು ಹೇಳ್ಯಾನ
ಏಳು ತಾಯೆ ಏಳು ಏಳಮ್ಮ ಏಳು ಏಳು ನಾಮಾದವಳೆ
ಸಮ್ಮಾನ ಮಾಡ್ಯಾಲು ಮೆದಕೇರಿ
ಅಂದದ್ನ ಓಬವ್ವ ಕೇಳ್ಯಾಳು
ಏಳು ನಾಮಾದವಳೆ ಏಳು ಏಳಮ್ಮತಾಯೆ ಏಳು ನಾಮಾದವಳೆ
ಸಮ್ಮಾನ ಬ್ಯಾಡೆಂದ್ಲು ಓಬವ್ವ
ಭಾಷೆಯ ಬೇಡಿದಳು ಮೆದಕೇರಿನ
ಏಳು ನಾಮಾದವಳೆ ಏಳು ಏಳಮ್ಮ ತಾಯೆ
ಏಳು ತಾಯೆ ಏಳಮ್ಮತಾಯೆ
ಸಾಲು ಸಾಲು ಎನ್ನ ಬಂಗಾರ ತುಂಬ್ಯನ್ನ
ಮೊರದಾಗೆ ಚಿನ್ನ ಕೊಡುತಾರೆ
ಏಳಮ್ಮ ತಾಯೆ ಏಳು ತಾಯೆ
ಏಳಮ್ಮ ಎಡಿಯಾದವೆ
ಹೊನ್ನು ಬಂಗಾರನ್ನ ಕೊಡುವಾಗ
ಓಬವ್ವ ಬ್ಯಾಡೆನ್ನುತ್ತಾಳೆ ಅಣ್ಣಯ್ಯ
ಏಳು ತಾಯೆ ಏಳು ಏಳಮ್ಮ ತಾಯೆ
ಹೊನ್ನು ಬಂಗಾರ ಎಮಗೆ
ಬ್ಯಾಡೆಂದ ಓಬವ್ವ ತನ್ನ
ಹೆಸರೀಲೆ ವೀಳ್ಯವ ಕೊಡಿರೆಂದ್ಲು
ಏಳು ತಾಯೆ ಏಳು

ಏಳಮ್ಮ ತಾಯೆ ಏಳು
ಎಡಿಯಾದವೆ.

ಹೀಗೆ ಓಬವ್ವ ತಾನು ಮಾಡಿದ ಕಾರ್ಯಕ್ಕೆ ಮದರಿನಾಯಕ ಮೆಚ್ಚಿ ಹೊನ್ನು ಬಂಗಾರವನ್ನು ನೀಡಲು ಬಂದಾಗ ಒಲ್ಲೆ ಎಂದು ಓಬವ್ವ ತಾನು ತನ್ನವರೆಗೂ ಕುಲದೇವತೆ ಯಾಗಿರಬೇಕೆಂದು ತನ್ನ ಕುಲದೇವತಾ ಉತ್ಸವ ಜರುಗುವಾಗ ಪುರದ ಪ್ರಮುಖರು, ಎಲ್ಲಾ ಜನಾಂಗದವರು ಎಷ್ಟು ಸಾಧ್ಯವೋ ಅಷ್ಟು ತಮ್ಮ ಕೈಲಾದಷ್ಟು ಧನ ಸಹಾಯ ಮಾಡುವುದರೊಂದಿಗೆ ಉತ್ಸವ ಜರುಗಲು ಅನುವು ಮಾಡಿಕೊಡಲು ಕೇಳಿಕೊಂಡಾಗ, ಮದಕರಿನಾಯಕರು ಒಪ್ಪಿ ಅವಳ ವಂಶೀಕರಿಗೆ ಓಬವ್ವನ ಹೆಸರಿನಲ್ಲಿ ಒಂದು ವೀಳ್ಯಯನ್ನು ಕೊಡಲು ಒಪ್ಪಿ ಅಂತೆಯೇ ಅವರ ಸಂಬಂಧಿಕರಿಗೆ ನೀಡಿದರು. ಮದಕರಿನಾಯಕನು ಆಕೆಯ ಬೇಡಿಕೆಗಳನ್ನು ಈಡೇರಿಸಿ ಕೊಡುವುದಾಗಿ ಭರವಸೆಯನ್ನಿತ್ತುದಲ್ಲದೆ, ಸ್ವಯಂ ಪ್ರೇರಿತನಾಗಿ ಅಗಸನ ಕಲ್ಲು ಗ್ರಾಮವನ್ನು ಜಹಗೀರಾಗಿ ನೀಡಿ ವಂಶಪಾರಂಪರ್ಯವಾಗಿ ಅದನ್ನು ಅನುಭವಿಸಿಕೊಂಡು ಬರುವಂತೆ ಬರೆಯಸಿಕೊಟ್ಟನು.

ನಂತರ ಮರೆಯಲಾಗದ ನಾಟಕಕಾರ ಮರಡಿಹಳ್ಳಿ ಸೀತಾರಾಮ ರೆಡ್ಡಿಯವರು ತಮ್ಮ ರಾಜ ವೀರ ಮದಕರಿನಾಯಕ ನಾಟಕದಲ್ಲಿ ಓಬವ್ವೆಯನ್ನು ಜೀವಂತವಾಗಿ ಚಿತ್ರೀಕರಿಸಿದ್ದರು. ೧೯೫೦ನೇ ಸಾಲಿನಲ್ಲಿ ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರು ಜನಮ್ಮೋಹನ ಪ್ಯಾಲೇಸಿನಲ್ಲಿ ಈ ನಾಟಕ ಆಡಿಸಿದರಂತೆ. ಅದರಲ್ಲಿ ಮದಕರಿನಾಯಕನ ರೋಷ, ಓಬವ್ವನ ಸ್ವಾಮಿನಿಷ್ಠೆಯನ್ನು ಬಹುವಾಗಿ ಮೆಚ್ಚಿದರಂತೆ, ದೊಡ್ಡಮದಕರಿನಾಯಕ ಮತ್ತು ರಾಜಾವೀರ ಮದಕರಿನಾಯಕರನ್ನು ಹೈದರಾಲಿ ಶ್ರೀರಂಗ ಪಟ್ಟಣಕ್ಕೆ ನೆಡೆಸಿಕೊಂಡು ಹೋಗುವ ದೃಶ್ಯವನ್ನು ಮಹಾರಾಜರು ಒಂದೇ ಸಮನೆ ನೋಡ್ತಾ ಇದ್ದು ಕಣ್ಣೀರು ಬರಸಿಕೊಂಡ್ರಂತೆ. ದುರ್ಗದ ಇತಿಹಾಸವನ್ನು ಸಾರುವ ರಾಜಾ ವೀರ ಮದಕರಿನಾಯಕ ನಾಟಕ ತಂದಷ್ಟು ಕೀರ್ತಿ ಹೆಸರನ್ನು ಸೀತಾರಾಮ ರೆಡ್ಡಿಯವರಿಗೆ ಮತ್ತೆ ಯಾವ ನಾಟಕವೂ ತರಲಿಲ್ಲವೆನ್ನಬೇಕು. ಸೀತಾರಾಮರೆಡ್ಡಿ ಯವರು ಚಿತ್ರದುರ್ಗದ ಲಾವಣಿ ಬರೆದಿದ್ದು ಅದರಲ್ಲಿ ವೀರ ಮಹಿಳೆ ಓಬವ್ವೆಯನ್ನು ಸ್ಮರಿಸಿದ್ದಾರೆ.

ಬಾರಣ್ಣ ಬಾರೋ ನೋಡು ಬಾರಣ್ಣ
ನಮ್ಮ ಚಿತ್ರದುರ್ಗದ ಬೆಟ್ಟ ನೋಡು ಬಾರಣ್ಣ !!ಪ!!
ವೀರ ಮದಕರಿ ನಾಯಕನಾ ಏಳು ಸುತ್ತಿನ ಕೋಟೆಯನು
ಬಂದು ನೋಡಿ ಸ್ಫೂರ್ತಿ ಹೊಂದಣ್ಣಾ ತಂದಾನಿ ತಾನಿ
ಬಂದು ನೋಡಿ ಸ್ಫೂರ್ತಿ ಹೊಂದಣ್ಣಾ !!೧!!
ವೀರನಾಗಿ ಧೀರನಾಗಿ ದೇಶಕಾಗಿ ಹೋರಾಡಿ
ಚಿತ್ರದುರ್ಗದ ಕೀರ್ತಿಯ ಉಳಿಸಣ್ಣಾ ತಂದಾನಿತಾನ
ಚಿತ್ರದುರ್ಗದ ಕೀರ್ತಿ ಉಳಿಸಣ್ಣಾ !!೨!!

ಬೆಟ್ಟಕ್ಕೋಗ್ತ ದಾರಿಯಲ್ಲಿ ಹೊಟ್ಟೆಗಣಪ ಕುಳಿತವನಲ್ಲಿ
ಮುಟ್ಟಿ ನಲಿದು ಬಾಗಿ ನಮಿಸಣ್ಣಾ ತಂದಾನಿತಾನ
ಮುಟ್ಟಿ ನಲಿದು ಬಾಗಿ ನಮಿಸಣ್ಣಾ !!೩!!
ಸಾಲು ಸಾಲು ಬಾಗಿಲಲ್ಲಿ ಮೇಲೆ ಹೋಗಿ ನೋಡಲಾಗಿ
ಜೋಲಿಯಾಟ ಕಂಭಗಳೆರಡಣ್ಣಾ ತಂದಾನಿತಾನ
ಜೋಲಿಯಾಟ ಕಂಭಗಳೆರಡಣ್ಣಾ !!೪!!
ಅತ್ತ ಹೊಕ್ಕು ನೋಡಲಾಗಿ ಅಕ್ಕ ತಂಗಿ ಹೊಂಡಗಳೆರೆಡು
ಅಕ್ಕಪಕ್ಕದಲ್ಲಿ ನಿಂತಿವೆ ತಂದಾನಿತಾನ
ಅಕ್ಕ ಪಕ್ಕದಲ್ಲಿ ನಂತಿವೆ !!೫!!
ಮುಂದೆ ಹೋದ್ರೆ ಮುರ್ಗಿ ಮಠಕ್ಕೊಂದಿ ಇರುವ
ಬಂದ ಜನರಿಗೆಲ್ಲ ಸಂಪಿಗೆ ತಂದಾನಿತಾನ
ಬಂದ ಜನರಿಗೆಲ್ಲ ಸಂಪಿಗೆ !!೬!!
ಲೋಕವನ್ನ ರಕ್ಷಿಸುವಂಥಾ ಏಕನಾಥಮ್ಮನನ್ನು
ಬೇಕಾದ್ದೆ ಬೇಡ ಬಹುದಣ್ಣಾ ತಂದಾನಿತಾನಿ
ಬೇಕಾದ್ದೆ ಬೇಡ ಬಹುದಣ್ಣಾ !!೭!!
ವನಕೆ ಕಿಂಡಿ ಕಾಣುತಿದೆ ಮನಕೆ ಸ್ಮರಣೆ ನೀಡುತ್ತಿದೆ
ವೀರಮಹಿಳೆ ನೀನಾಗು ಎನ್ನುತಲಿದೆ ತಂದಾನಿತಾನಿ
ವೀರಮಹಿಳೆ ನೀನಾಗು ಎನ್ನುತಲಿದೆ !!೮!!
ವೀರರಿದ್ದು ನಾಡಿಂದೆಂದು ಶೂರರಿದ್ದ ಬೀಡಿದೆಂದು
ಕಲ್ಲು ಕಥೆಯ ಹೇಳುತಲಿದೆ ತಂದಾನಿತಾನಿ
ಕಲ್ಲು ಕಥೆಯ ಹೇಳುತಲಿದೆ !!೯!!
ಮೂರುತಿಯು ಚಿಕ್ಕದಾಗಿ ಕೀರುತಿಯು ದೊಡ್ಡದಾಗಿ
ನಮ್ಮ ಊರು ಹೆಸರಾಗಿದೆ ತಂದಾನಿತಾನ
ನಮ್ಮ ಊರು ಹೆಸರಾಗಿದೆ !!೧೦!!

ಹೀಗೆ ವನಕೆ ಕಿಂಡಿ ವೀರ ವನಿತೆ ಓಬವ್ವನದು. ಇದನ್ನು ಕಂಡ ಪ್ರತಿಯೊಬ್ಬ ಮಹಿಳೆಯು ವೀರ ಮಹಿಳೆಯಾಗು ಎಂದು ಸಾರುತಿದೆ ಎಂದು ರಚಿಸಿದ್ದಾರೆ. ವೀರ ಮಹಿಳೆಯ ದ್ಯೋತಕವಾಗಿರುವ ಹೈದರಾಲಿಯ ಸೈನಿಕರು ಪ್ರವೇಶಿಸಿದ ಒನಕೆ ಕಿಂಡಿಯು ಇಂದು ಪ್ರಸಿದ್ಧ ತಾಣವಾಗಿದೆ. ದುರ್ಗದ ರಮಣೀಯ ಕೋಟೆಗೆ ಬಂಗಾರದ ಲೇಪನ ನೀಡಿರುವುದೇ ಈ ಒನಕೆ ಕಿಂಡಿ.

ಕನ್ನಡ ನಾಡಿನ ವೀರ ರಮಣಿಯ ಹಾಡು : ದಿವಂಗತ ಪುಟ್ಟಣ್ಣ ಕಣಗಾಲರು ಕತ್ತಿ ಕಠಾರಿಗಳನ್ನು ಹಿಡಿಯದೆ, ಶಸ್ತ್ರಾಸ್ತ್ರಗಳನ್ನು ಬಳಸದೆ, ರಣರಂಗ ಪ್ರವೇಶಿಸದೆ, ಅಸಂಖ್ಯಾತ ಶತ್ರು ಸೈನಿಕರನ್ನು ಕೇವಲ ತನ್ನ ಒನಕೆಯಿಂದಲೇ ಸಂಹರಿಸಿ, ಇತಿಹಾಸ ಪ್ರಸಿದ್ಧವಾದ ಗಂಡುಗಲಿಗಳ ನಾಡಾದ ಚಿತ್ರದುರ್ಗದ ಉಕ್ಕಿನ ಕೋಟೆಯನ್ನು ಹೈದರಾಲಿಯಂಥಹ ಮುತ್ಸದಿಯ ಕಬಂಧ ಬಾಹುಗಳಿಂದ ರಕ್ಷಿಸಿದ ವೀರನಾರಿಯ ಕಥೆಯನ್ನು ಕೇಳಿದ ಪುಟ್ಟಣ್ಣ ಕಣಗಾಲರು ೧೯೭೨-೭೩ರಲ್ಲಿ ಚಿತ್ರದುರ್ಗ ಜಿಲ್ಲೆಯ ಪ್ರಖ್ಯಾತ ಕಾದಂಬರಿಕಾರರಾಗಿದ್ದ ತ.ರಾ.ಸು ಅವರ ನಾಗರಹಾವು ಕಾದಂಬರಿಯನ್ನು ಕಣಗಾಲರು ವಿಶೇಷವಾಗಿ ಚಿತ್ರದುರ್ಗದಲ್ಲಿಯೇ ಚಿತ್ರೀಕರಿಸಿದರು. ನಾಗರಹಾವು ಚಿತ್ರದಲ್ಲಿ ಚಿತ್ರದುರ್ಗ ನೆಲದ ಐತಿಹಾಸಿಕ ವಸ್ತುವಿನ ಒಂದು ತುಣುಕನ್ನು ಚಿತ್ರಿಸಿಕೊಂಡರು. ಅದು ಓಬವ್ವನಿಗೆ ಸಂಬಂಧಿಸಿದ ಸಾಹಸ ಕಥೆ, ಅಂದರೆ ಆ ಸಂದರ್ಭದಲ್ಲಿ ಚಿತ್ರದುರ್ಗದಲ್ಲಿ ಗರಡಿಯ ನವ ಭಾರತ ತರುಣ ಕಲಾವಿದರು ಅಭಿನಯಿಸಿದ ರಾಜ ವೀರ ಮದಕರಿನಾಯಕ ನಾಟಕವನ್ನು ವೀಕ್ಷಿಸಿ ಸ್ಥಳೀಯ ಕಲಾವಿದರನ್ನೆ ತೆಗೆದುಕೊಂಡು ನಾಗರಹಾವು ಚಿತ್ರವನ್ನು ನಿರ್ಮಿಸಿದರಂತೆ. ಅಲ್ಲದೇ ಪುಟ್ಟಣ್ಣ ಕಣಗಾಲರು ಚಿತ್ರದುರ್ಗದ ಜನತೆಯಲ್ಲಿ ಗ್ರೀಸ್ ದೇಶದಲ್ಲಿ ಪುರಾತನ ಸ್ಮಾರಕಗಳನ್ನು ರಕ್ಷಿಸಿದಂತೆ, ಐತಿಹಾಸಿಕ ಮಹತ್ವವುಳ್ಳ ಚಿತ್ರದುರ್ಗದ ಕೋಟೆ ಕೊತ್ತಲಗಳನ್ನು, ಐತಿಹಾಸಿಕ ಕುರುಹುಗಳನ್ನು ಐತಿಹಾಸಿಕ ವ್ಯಕ್ತಿಗಳ ನೆನಪುಗಳನ್ನು ಸರಿಯಾಗಿ ರಕ್ಷಿಸಿ ಮುಂದಿನ ಜನಾಂಗಕ್ಕೆ ಉಳಿಸಿಕೊಡುವಂತೆ ಭಿನ್ನವಿಸಿದರಂತೆ ಹೀಗಾಗಿ ಕಣಗಾಲರ ಮನಸ್ಸಿನಲ್ಲಿ ಮೂಡಿದ ಐತಿಹಾಸಿಕ ಓಬವ್ವ ತೆರೆಯ ಮೇಲೆ ವೀರನಾರಿಯಾಗಿ ಮೂಡಿ ಬಂದಳು ಅಭಿನಯ ಶಾರದೆ ಜಯಂತಿ ಯವರು ಪಾತ್ರದಲ್ಲಿ ತಾವೇ ಓಬವ್ವಳಾಗಿ ಪಾತ್ರಕ್ಕೆ ಜೀವ ತುಂಬುವುದರ ಪಾತ್ರದಲ್ಲಿ ತಾವೇ ಓಬವ್ವಳಾಗಿ ಪಾತ್ರಕ್ಕೆ ಜೀವ ತುಂಬುವುದರ ಮೂಲಕ ಓಬವ್ವನ ಸಾಹಸಗಾಥೆಯನ್ನು ನಾಡಿನ ಉದ್ದಗಲಕ್ಕೂ ಹರಡಿದರು ನಾಡಿನ ಜನತೆ ಅವರಿಗೆ ಕಣಗಾಲರಿಗೆ ಚಿರಋಣಿಗಳಾದರು. ಏಕೆಂದರೆ ಅಕ್ಷರದ ಗಂಧವೇ ಇಲ್ಲದೆ, ಬರೆಯಲು ಕೈಬಾರದ ಕಾಲದಲ್ಲಿನ ಓಬವ್ವನ ಸಾಹಸದ ಕ್ಷಣಗಳನ್ನು ವೈಭವೀಕರಿಸಿ ಮನತುಂಬುವಂತೆ ಕಣ್ಗಳಲ್ಲಿ ತುಂಬಿದರು. ಪುಟ್ಟಣ್ಣ ಕಣಗಾಲರು, ನಾಗರಹಾವು ಸಿನಿಮಾದಲ್ಲಿ ಓಬವ್ವನ ಸಾಹಸದ ಕಥೆಗೆ ಸಮೀಕರಿಸಿ ಸಾಹಿತ್ಯದೊಂದಿಗೆ ಮೂಡಿಬಂದ ಹಾಡು ಅದ್ಭುತವಾದುದು. ನಟ ವಿಷ್ಣುವರ್ಧನರು ಪ್ರವಾಸಿಗರಾಗಿ ಬಂದ ವಿದ್ಯಾರ್ಥಿಗಳಿಗೆ ನಾಡಿನ ರಮಣಿಯ ಕಥೆಯನ್ನು ಹಾಡಿನ ಮೂಲಕ ಹೇಳುತ್ತಾ ಹೇಳುತ್ತಾ ಮಕ್ಕಳ ಕಣ್ಣಲ್ಲಿ ನೀರು ಧಾರಾಕಾರವಾಗಿ ಸುರಿಯುವಂತೆ ಚಿತ್ರಿಸಿರುವುದು ಮನನೀಯ ಹಾಗೆಯೇ ಆ ಹಾಡಿನ ಸಾಲುಗಳು ಈ ರೀತಿಯಿವೆ.

ಕನ್ನಡ ನಾಡಿನ ವೀರ ರಮಣಿಯಾ
ಗಂಡು ಭೂಮಿಯ ವೀರ ನಾರಿಯಾ
ಚರಿತೆಯ ನಾನು ಹಾಡುವೆ !!

ಚಿತ್ರದುರ್ಗದ ಕಲ್ಲಿನ ಕೋಟೆ
ಸಿಡಿಲಿಗು ಬೆಚ್ಚದ ಉಕ್ಕಿನ ಕೋಟೆ
ಮದಿಸಿದ ಕರಿಯ ಮದವಡಗಿಸಿದ
ಮದಕರಿ ನಾಯಕರಾಳಿದ ಕೋಟೆ
ಪುಣ್ಯ ಭೂವಿಯು ಈ ಬೀಡು
ಸಿದ್ದರು ಹರಸಿದ ಸಿರಿನಾಡು !!ಕನ್ನಡ!!
ವೀರ ಮದಕರಿ ಆಳುತಲಿರಲು
ಹೈದರಾಲಿಯು ಯುದ್ಧಕೆ ಬರಲು
ಕೋಟೆ ಜನಗಳ ರಕ್ಷಿಸುತ್ತಿರಲ
ಸತತ ದಾಳಿಯು ವ್ಯರ್ಥವಾಗಲು
ವೈರಿ ಚಿಂತೆಯಲಿ ಬಸವಳಿದ
ದಾರಿ ಕಾಣದೆ ಮಂಕಾದ !!ಕನ್ನಡ!!
ಗೂಢಚಾರರು ಅಲೆದು ಬಂದರು
ಹೈದರಾಲಿಗೆ ವಿಷಯ ತಂದರು
ಚಿತ್ರದುರ್ಗದ ಕೋಟೆಯಲಿ
ವಾಯುವ್ಯ ದಿಕ್ಕಿನೆಡೆ ನೋಡು ಎಂದರು
ಕಳ್ಳಗಂಡಿಯ ತೋರಿದರು
ಲಗ್ಗೆ ಹತ್ತಲು ಹೇಳಿದರು !!ಕನ್ನಡ!!
ಕೈಗೆ ಸಿಕ್ಕಿದ ಒನಕೆ ಹಿಡಿದಳು
ವೀರಗಚ್ಚೆಯ ಹಾಕಿ ನಿಂದಳು
ದುರ್ಗಿಯನ್ನು ಮನದಲ್ಲೆ ನೆನೆದಳು
ಕಾಳಿಯಂತೆ ಬಲಿಗಾಗಿ ಕಾದಳು
ಯಾರವಳು, ಯಾರವಳು
ವೀರವನಿತೆ ಆ ಓಬವ್ವಾದುರ್ಗವು ಮರೆಯದ ಆ ಓಬವ್ವಾ !!ಕನ್ನಡ!!
ತೆವಳುತ ಒಳಗೆ ಬರುತಿರೆ ವೈರಿ
ಒನಕೆಯ ಬೀಸಿ ಕೊಂದಳು ನಾರಿ
ಸತ್ತವನನ್ನು ಎಳೆದು ಹಾಕುತ
ಮತ್ತೆ ನಿಂತಳು ಹಲ್ಲು ಮಸೆಯುತ
ವೈರಿ ರುಂಡ ಚೆಂಡಾಡಿದಳು

ರಕುತದ ಕೋಡಿ ಹರಿಸಿದಳು !!ಕನ್ನಡ!!
ಸತಿಯ ಹುಡುಕುತ ಕಾವಲಿನವನು
ಗುಪ್ತ ದ್ವಾರದ ಬಳಿಗೆ ಬಂದನು
ಮಾತು ಹೊರಡದೆ ಬೆಚ್ಚಿನಿಂತನು
ಹೆಣದ ರಾಶಿಯ ಬಳಿಯ ಕಂಡನು
ರಣಚಂಡಿ ಅವತಾರವನು
ಕೋಟೆ ಸಲಹಿದ ತಾಯಿಯನು
ಹೈದರಾಲಿ ಸೈನ್ಯ ನಮ್ಮ ಕೋಟೆಯನು ಮುತ್ತಿದೆ, ಹೋಗಿ ರಣಕಹಳೆಯನು ಊದಿ,
ರಣಕಹಳೆಯನು ಊದುತಲಿರಲು
ಸಾಗರದಂತೆ ಸೈನ್ಯ ನುಗ್ಗಲು
ವೈರಿ ಪಡೆಯು ನಿಶ್ಶೇಷವಾಗಲು
ಕಾಳಗದಲಿ ಜಯವನು ತರಲು
ಅಮರಳಾದಳು ಓಬವ್ವ
ಚಿತ್ರದುರ್ಗದ ಓಬವ್ವ !!ಕನ್ನಡ!!

ಹೀಗೆ ಪುಟ್ಟಣ್ಣ ಕಣಗಾಲರು ನಾಗರಹಾವು ಚಿತ್ರದಲ್ಲಿ ವಿಷ್ಣುವರ್ಧನರವರನ್ನು ನಾಯಕ ನಟನನ್ನಾಗಿ ಮಾಡಿ, ಓಬವ್ವ ಪಾತ್ರವನ್ನು ಜಯಂತಿಯವರು ಮನೋಜ್ಞವಾಗಿ ನಟಿಸುವಂತೆ ಚಿತ್ರಿಸಿದರು. ಈ ಚಲನಚಿತ್ರ ಚಲನಚಿ ಪಾತ್ರದಲ್ಲಿ ಒಂದು ಮೈಲಿಗಲ್ಲಾಯಿತು. ಚಿತ್ರ ಪ್ರೇಮಿಗಳಿಗೆ ರಸದೌತಣವಾಯಿತು. ಇತಿಹಾಸದ ಮರು ಚಿತ್ರಣ ನೆನಪಿಸುವಂತಾಯಿತು. ಐತಿಹಾಸಿಕತೆಯನ್ನು ಸಾರಿತು.

೫.೨. ಕಥೆಗಳು : ವಿಶ್ವದ ಜಾನಪದ ಅಧ್ಯಯನದಲ್ಲಿ ಜನಪದ ಕಥೆಗಳಿಗೆ ಅಗ್ರಸ್ಥಾನ ದೊರೆತಿದೆ. ಪಾಶ್ಚಾತ್ಯ ದೇಶಗಳಲ್ಲಿ ಮೂಲೆ ಮೂಲೆಯ ಕಥೆಗಳನ್ನೆಲ್ಲಾ ಹುಡುಕಿ ಅವುಗಳ ಮಾದರಿಯನ್ನು ಗೊತ್ತುಪಡಿಸಿ ವರ್ಗೀಕರಣವನ್ನು ಮಾಡಲಾಗಿದೆ. ಯೂರೋಪಿನ ಕಥೆಗಳ ವಿಶೇಷ ಅಧ್ಯಯನವನ್ನೇನಡೆಸಿ ಆರ್ನೇ ಆಂಟಿ ಮತ್ತು ಸ್ಟಿತ್ ಥಾಮ್ಸನರು ಕಥಾವರ್ಗಗಳು ಇಂತಿಷ್ಟೇ ಎಂದು ನಿರ್ಧರಿಸಿ ಒಂದೊಂದಕ್ಕೂ ನಿರ್ದಿಷ್ಟ ಸಂಖ್ಯೆಯನ್ನು ಕೊಟ್ಟಿದಾರೆ. ಜನಪದ ಕಥೆಗಳ ಸಂಗ್ರಹದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿದವರಲ್ಲಿ ಜೀ.ಶಂ.ಪರಮಶಿವಯ್ಯ, ಎಚ್.ಜೆ.ಲಕ್ಕಪ್ಪಗೌಡ, ರಾಗೌಧವಳಶ್ರೀ, ಡಾ.ಎಲ್.ಆರ್.ಹೆಗಡೆ, ಡಿ.ಲಿಂಗಯ್ಯ, ನಾಗವಾರ ಕಾಳೇಗೌಡ ಮುಂತಾದವರನ್ನು ಹೆಸರಿಸಬಹುದು, ಜೀ.ಶಂ.ಪರವರು ಮಂಡ್ಯ ತುಮಕೂರು, ಬೆಂಗಳೂರು, ಚಿತ್ರದುರ್ಗ, ಮೈಸೂರು ಜಿಲ್ಲೆಗಳ ಸುಮಾರು ಇನ್ನೂರಕ್ಕೂ ಹೆಚ್ಚು ಕಥೆಗಳನ್ನು ಸಂಗ್ರಹಿಸಿದ್ದಾರೆ.

ಕಥೆ ಹೇಳುವ ಕಲೆ ಮಾನವ ಜೀವನದಷ್ಟೇ ಹಳೆಯದು ಬದುಕಿನ ಏಕತಾನತೆಯನ್ನು ನೀಗಿಕೊಳ್ಳಲು ಮನೋರಂಜನೆಯ ಮುಖ್ಯ ಸಾಧನವಾಗಿ ಕಥೆಯನ್ನು ಹೇಳುವ ಕೇಳುವ ಹವ್ಯಾಸ ಬೆಳೆದು ಬಂದಿದೆ. ಇತ್ತೀಚಿನ ಒಂದು ಘಟನೆಯ ವರದಿಯೋ, ಪ್ರಾಚೀನವೆನಿಸುವ ಒಂದು ಐತಿಹ್ಯವೋ, ಕಲ್ಪನಾ ರಮ್ಯತೆಯಿಂದ ಕೂಡಿದ ಒಂದು ಕತೆಯೋ, ಯಾವುದೇ ಆದರೂ ಪೂಜಾರಿ, ಪುರೋಹಿತ ರೈತ ಎಂಬ ಭೇದವಿಲ್ಲದೆ ಜನ ಕುತೂಹಲವನ್ನು ತೋರುತ್ತಾ ಬಂದರು. ವಿರಾಮ ವೇಳೆಯನ್ನು ತುಂಬಿಕೊಳ್ಳಲು ಕೆಲಸದ ಬೇಸರವನ್ನು ನಿವಾರಿಸಿಕೊಳ್ಳಲು ದೊಡ್ಡವರಿಗೆ, ಚಿಕ್ಕವರಿಗೆ ಎಲ್ಲರಿಗೂ ಕತೆಗಳು ಬೇಕಾದವು.ಕಂಠಸ್ಥ ಸಾಂಪ್ರದಾಯದ ಕಥೆಗಳು ಇತಿಹಾಸಕ್ಕಿಂತ ಪ್ರಾಚೀನವಾದವು ಅದಕ್ಕೆ ಕಾಲ ದೇಶಗಳ ಮಿತಿಯಿಲ್ಲ ದೇಶದಿಂದ ದೇಶಕ್ಕೆ ಸಂಸ್ಕೃತಿಯಿಂದ ಸಂಸ್ಕೃತಿಗೆ: ಯುಗದಿಂದ ಯುಗಕ್ಕೆ ನಿರರ್ಗಳವಾಗಿ ಅವುಸಾಗುತ್ತವೆ. ಸಾಮಾಜಿಕ ಧಾರ್ಮಿಕ ಹಾಗೂ ವೈಯುಕ್ತಿಕ ಉದ್ದೇಶಗಳಿಗಾಗಿ ಜನಪದ ಕಥೆಗಳು ಬಳಕೆಗೊಂಡಿವೆ ಶಿಷ್ಟಧರ್ಮಗಳು ಜನಪದ ಮೂಲದ ಕಥೆಗಳನ್ನು ಧಾರ್ಮಿಕ ಉದ್ದೇಶಗಳಿಗಾಗಿ ಬಳಸಿಕೊಂಡಿವೆ.

ಕಥೆಗಳು ನಿರೂಪಣೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತವೆ. ಆಶಯಗಳಲ್ಲಾಗಲಿ ವರ್ಗಗಳಲ್ಲಾಗಲಿ ಯಾವುದೇ ರೀತಿಯ ಬದಲಾವಣೆಗಳು ಕಾಣಬಹುದು. ಕಾಣದಿರಬಹುದು. ಆದರೆ ನಿರೂಪಣೆ ವ್ಯಕ್ತಿ ವಿಶಿಷ್ಟವಾದುದು, ಕಥೆಗಾರನ ಮೂಲ ಭಾಷೆಯಲ್ಲಿ ಅವನದೇ ಶೈಲಿಯಲ್ಲಿ ಕಥೆ ಅರಳಿನಿಂತಾಗ ಅದರ ಸೌಂಧರ್ಯ ಇಮ್ಮಡಿಸುತ್ತದೆ. ಕಥೆಯ ಕಲಾತ್ಮಕ ದೃಷ್ಟಿಯಿಂದ ಮೂಲಭಾಷೆ ಹಾಗೂ ನಿರೂಪಣಾ ವೈಖರಿಯನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ, ಕಥೆಗಾರರನ್ನು ಶೋಧಿಸುವುದು, ಸುಲಭವಾದರೂ ಅವರು ಹೇಳುವ ವೇಗದಲ್ಲಿ ಅವರ ಭಾಷೆ, ನಿರೂಪಣೆಗಳು ಕೆಡದಂತೆ ಸಂಗ್ರಹಿಸಿಕೊಳ್ಳುವುದು ಕಷ್ಟ ಸಾಧ್ಯವಾದ ಕಾರ್ಯವೆಂದೇ ಹೇಳಬೇಕು ಕಥೆ ವಿಸ್ತಾರವಾದಷ್ಟು ಇಲ್ಲಿ ಅನುಕೂಲಗಳೂ ಹೆಚ್ಚು, ಕಥೆಯಲ್ಲಿ ಕಥೆ, ಮುಖ್ಯ ಕಥೆಗೆ ಉಪಕಥೆ, ಹಾಡು, ಅಭಿನಯ ಸೇರಿಕೊಳ್ಳುವವು. ಒಂದೇ ಕಥೆಯಹತ್ತಾರು, ನೂರಾರು ರೂಪಗಳು ದೊರೆತಷ್ಟು ಒಂದೇ ಕಥೆಯ ಮೂಲ ಸ್ವರೂಪವನ್ನು ನಿರ್ಧರಿಸಲು ರಚಿಸಲು, ಸಾಧ್ಯವಾಗುತ್ತದೆ. ಇಂಥಹ ಸಂಗ್ರಹ ಕಾರ್ಯ ಹೇರಳವಾಗಿ ನಡೆಯುವುದರು ಮೂಲಕ ಮತ್ತೊಂದು ಪ್ರಯೋಜನವೂ ಇದೆ. ಪ್ರಾದೇಶಿಕ ಭಾಷಾ ವೈವಿದ್ಯವನ್ನು ನಿರೂಪಕನ ಪ್ರತಿಭಾಶ್ರೀಯನ್ನೂ ಒಂದೇ ಕತೆಯ ವಿಶಿಷ್ಟ ರೂಪದ ಬೆಳವಣಿಗೆಗಳ ವೈಖರಿಯನ್ನು ನಿರೂಪಕನ ಪ್ರತಿಭಾಶ್ರೀಯನ್ನು, ಒಂದೇ ಕತೆಯ ವಿಶಿಷ್ಟ ರೂಪಕ ಬೆಳವಣಿಗೆಗಳ ವೈಖರಿಯನ್ನು ಗುರುತಿಸಬಹದು. ಇಲ್ಲಿ ಓಬವ್ವನ ಬಗೆಗಿನ ಕಥೆಗಳನ್ನು ಈ ನಿಟ್ಟಿನಲ್ಲಿ ಗಮನಿಸಬಹುದು.

೧. ಓಬವ್ವ ಹೆಣ್ಣು ಸೈನ್ಯಕಿಯಾಗಿ ಕೋಟೆ ಪ್ರವೇಶ : ಇದು ಈಗ ಹಾಲಿ ನಾಯಕರ ವಂಶದವರೆಂದು ಗುರುತಿಸಿರುವ ವೀರಭದ್ರನಾಯಕರು ಹೇಳುವಂತೆ ಓಬವ್ವ ಕೇವಲ ಕಹಳೆ ಊದುವವನ ಮಡದಿಯಷ್ಟೇ ಅಲ್ಲ, ನಾಡನ್ನು ಕಾಯುವ ಕಾಯಕಕ್ಕೆ ಸೇರಿದವಳೆನ್ನುತ್ತಾರೆ. ಗುಡಿಕೋಟೆಯ ಪೆದಕ್ಕ ನಾಗತಿಯನ್ನು ಮದಕರಿನಾಯಕ ವಿವಾಹವಾದ ನಂತರ ಪೆದ್ದಕ್ಕ

ನಾಗತಿಯ ಹತ್ತಿರ ಆಪ್ತ ಸಹಾಯಕಿಯಾಗಿ ಕೆಲಸಕ್ಕಿದ್ದ ಓಬವ್ವನನ್ನು ತನ್ನ ಹಿಂದೆ ಚಿತ್ರದುರ್ಗಕ್ಕೆ ಕರೆತರುವುದು ಪೆದ್ದಕ್ಕ ನಾಗತಿಯ ಉದ್ದೇಶವಾಗಿತ್ತು. ಹಾಗಾಗಿ ವಯಸ್ಸಿನ ಹೆಣ್ಣಾದ ಓಬವ್ವನನ್ನು ಹಾಗೆಯೇ ತನ್ನ ಅರಮನೆಯಲ್ಲಿರಿಸಿಕೊಳ್ಳುವುದು ಕಷ್ಟ ಎಂದು ಮನಗಂಡ ಪೆದ್ದಕ್ಕ ನಾಗತಿಯು ಕುಲಗೋತ್ರಗಳಲ್ಲಿ ಹಾಗೂ ಸಾಲಾವಳಿಗಳ ಪ್ರಕಾರ ಕೋಟೆ ಕಾವಲುಕಾಯುವ ಕಹಳೆಯವನಾದ ಮದ್ದ ಹನುಮಪ್ಪನಿಗೆ ಮದುವೆ ಮಾಡಿಸುವ ಮೂಲಕ ಈರ್ವರು ದೊರೆಗಳ ಮನ್ನಣೆಯೊಂದಿಗೆ ಅಪಾರ ಬಳಗದವರಸಮ್ಮುಖದಲ್ಲಿ ಚಿತ್ರದುರ್ಗದಲ್ಲಿಯೇ ವಿವಾಹವನ್ನು ನೆರವೇರಿಸಿದಳು.

ಹಾಗೆಯೇ ವಿವಾಹವಾದ ಓಬವ್ವ ಸದ್ಗೃಹಿಣಿಯಾಗಿ ಚಿತ್ರದುರ್ಗದ ಕೋಟೆಯಲ್ಲಿದ್ದ ತನ್ನ ಗಂಡನ ಮನೆ ಸೇರಿ ಅತ್ತೆಮಾವರಿಗೆ ಒಪ್ಪಿದ ಸೊಸೆಯಾಗಿ, ಪ್ರೀತ್ಯಾದರಗಳಿಂದ, ನೆರೆ–ಹೊರೆಯವರೊಡನೆ ಅತೀ ಸಂಯಮದಿಂದಲೂ ಬಾಳುವ ಶಿರೋಮಣಿಯಾದಳು. ನಂತರ ಕಹಳೆಯೂದುವವನಿಗೆ ನೀಡಿದ ಕಲ್ಲುಗುಡ್ಡದಂತೆ ಕಂಡುಬರುವ ಹುನುಮದೇವರ ಎಡಭಾಗದಲ್ಲಿರುವ ಗುಹೆಯಂತಿರುವ ಮನೆಯಲ್ಲಿ ಓಬವ್ವ ತನ್ನ ಗಂಡನೊಡನೆ ದುರ್ಗದ ಬೆಟ್ಟದಲ್ಲಿ ನೆಲೆಸಿದಳು, ಹಾಗೆಯೇ ಪೆದ್ದಕ್ಕ ನಾಗತಿಯ ಅಂಗರಕ್ಷಕಿಯಾಗಿ ಗೋಪ್ಯವಾಗಿ ತನ್ನ ಕಾರ್ಯ ಮುಂದುವರೆಸಿದಳು, ತನ್ನ ನಾಡು, ತನ್ನ ದುರ್ಗ, ತನ್ನ ಪುರಪ್ರಮುಖರು ಸುರಕ್ಷಿತವಾಗಿರಲು ತಾನು ದಿಟ್ಟತನದ ಕಾವಲನ್ನು ಮಾಡಬೇಕಾಗುತ್ತದೆ. ಎಂದು ತನ್ನ ಹಿರಿಯರು ಹೇಳಿ ಕಳುಹಿಸಿದ್ದ ಮಾತನ್ನು ಜ್ಞಾಪಕದಲ್ಲಿಟ್ಟುಕೊಂಡು ಯಜಮಾನರ ವಿರಾಮ ಕಾಲದಲ್ಲಿ ತಾನು ಸೂಕ್ಷ್ಮವಾಗಿ ಕೋಟೆಯನ್ನು ಗಮನಿಸಲು ಪ್ರಾರಂಭಿಸಿದಳು, ಅಂತೆಯೇ ತನ್ನ ಗಂಡ ಊಟಕ್ಕೆ ಕುಳಿತ ಸಮಯದಲ್ಲಿ ನೀರಿಗಾಗಿ ಅಲ್ಲಿಯೇ ಅನತಿದೂರದಲ್ಲಿದ್ದ ತಣ್ಣೀರು ಚಿಲುಮೆಗಾಗಿ ನೀರು ತರಲು ಹೋಗಿದ್ದು, ಹಾಗೇಯೇ ಸುತ್ತಲೂ ಕಣ್ಣಾಯಿಸಿದಾಗ ಪಿಸುಮಾತಿನ ಶಬ್ದ ಕೇಳಿ ಬಂದಿದ್ದು, ಆಯುಧಕ್ಕಾಗಿ ಮನೆಗೆ ಬಂದು ಹುಡುಕಾಡಿದಾಗ ಏನೂ ಸಿಕ್ಕದೇ ಹೋದಾಗ ಗಂಡನನ್ನು ಎಚ್ಚರಿಸಿದರೆ ಊಟ ಅರ್ಧದಲ್ಲಿಯೇ ಬಿಟ್ಟು ಹೋಗಬೇಕಾಗುತ್ತದೆ ಎಂದು ತಿಳಿದ ಓಬವ್ವ ಅಲ್ಲಿಯೇ ಮೂಲೆಯಲ್ಲಿ ದೊರೆತ ಒನಕೆ ಕಟ್ಟಿಗೆಯನ್ನು ಹಿಡಿದು ಸದ್ದು ಬರುವ ಗಡಿಯ ಹತ್ತಿರ ಮರೆಯಲ್ಲಿ ನಿಲ್ಲುತ್ತಾಳೆ. ಅಷ್ಟರಲ್ಲಿ ಕಳ್ಳಗಿಂಡಿಯಲ್ಲಿ ತೆವಳಿ ಬಂದ ಬಂದ ತಲೆಯನ್ನು ಕಂಡ ಓಬವ್ವ ಶಕ್ತಿ ಸ್ವರೂಪಿಣಿ ಯಂತೆ ಆವೇಶಭರಿತಳಾಗಿ ಒಂದೇ ಏಟಿಗೆ ಅವನ ತಲೆಯ ಹೊಡೆದಳು. ಹೀಗೆ ಒಂದಾದನಂತರ ಕಾಣಿಸಿದ ಮತ್ತೊಂದು ಮಗದೊಂದು ಹೀಗೆ ಕಾಣಿಸಿದ ತಲೆಗಳಿಗೆಲ್ಲಾ ಅದೇಗತಿಯಾಯಿತು. ಹೀಗೆ ಸತತವಾಗಿ ಶತ್ರು ಸೈನಿಕರು ಕಿಂಡಿಯಲ್ಲಿ ನುಸುಳಿದ್ದರೂ ಓಬವ್ವ ಅಂಜದೆ ಮೃತ್ಯು ಸ್ವರೂಪಿಣಿಯಾಗಿ ರಕ್ತದಲ್ಲಿ ತಣಿದು ಮೈಮರೆತು ವೀರತನದಿಂದ ಬಿಡುವಿಲ್ಲದೆ ಶತ್ರು ಸೈನಿಕರ ತಲೆ ಒಡೆಯುವುದು, ಅದನ್ನು ಪಕ್ಕಕ್ಕೆಳೆದು ಹಾಕುವುದರಲ್ಲಿಯೇ ನಿರತಳಾದಳು. ಆಕೆಯ ಕೈಯಲ್ಲಿದ್ದ ಒನಕೆಯು ಖಡ್ಗಕ್ಕಿಂತ ತೀಕ್ಷ್ಣವಾಯಿತು. ಸತತವಾಗಿ ಈ ಕಾರ್ಯ ನೆಡೆಯುತ್ತಿದ್ದು ಈ ಕಡೆ ಒಳಹೊಕ್ಕ ಸೈನಿಕರ ಕಡೆಯಿಂದ ಯಾವ ಮುನ್ಸೂಚನೆಯೂ ಸಿಕ್ಕದಿದ್ದಾಗ ಅವರ

ಗತಿ ಏನಾಯಿತೆಂದು ದಂಡ ನಾಯಕನು ಆಲೋಚಿಸಿಸುತ್ತಿದ್ದಾಗ ಕಲ್ಲು ಪೊಟರೆಯ ಸಂದಿಯಿಂದ ರಕ್ತ ನಿಧಾನವಾಗಿ ಹರಿದು ಬರುತ್ತಿರುವುದನ್ನು ಕಂಡು ಹೆದರಿ ಇಣಿಕಿ ನೋಡಿದಾಗ ಯೌವನೆಯೊಬ್ಬಳು ಒನಕೆ ಹಿಡಿದು ಸೈನಿಕರನ್ನು ಚಚ್ಚುತ್ತಿದ್ದ ದೃಶ್ಯವನ್ನು ಕಂಡು ದಿಗ್ಭ್ರಮೆಗೊಂಡು ಮೂರ್ಛೆಹೋದನು. ಇತ್ತ ಊಟ ಮುಗಿಸಿದ ಮದ್ದಹನುಮಪ್ಪನು ಪತ್ನಿ ಬಹುಹೊತ್ತಿನವರೆಗೂ ನೀರು ತಾರದೆ, ಮನೆಗೂ ಬಾರದೆ ಇದ್ದುದ್ದನ್ನು ಕಂಡು ಸಿಹಿ ನೀರಿನ ಹೊಂಡದತ್ತಿರ ಬಂದು ಬಿಂದಿಗೆ ಕಂಡು ಗಾಬರಿಯಾಗಿ ಕಳ್ಳಗಂಡಿಯ ಕಡೆ ನೋಡಿದಾಗ ಓಬವ್ವನ ರೋಮಾಂಚಕಾರಿ, ಭಯಾನಕ ದೃಶ್ಯಕಂಡು ಎಚ್ಚೆತ್ತು ಶತ್ರುಗಳ ಆಗಮನ ಊಹಿಸಿ ರಣಕಹಳೆಯೂದಿದನು. ಆಕ್ಷಣದಲ್ಲಿ ನಾಯಕ, ಸೈನಿಕರೂ ದಾವಿಸಿ ಬಂದು ಆರ್ಭಟಿಸಿದಾಗ ಕೋಟೆಯ ಹೆಬ್ಬಾಗಿಲನ್ನು ತೆರೆಯ ಬೇಕೆಂಬ ಹೆಬ್ಬಯಿಕೆಯಿಂದ ಕಾದಿದ್ದ ಶತ್ರು ಸೈನ್ಯ ನಿರಾಶೆಗೊಂಡು ತಮ್ಮ ಬಿಡಾರಕ್ಕೆ ಹಿಂತಿರುಗಿತು.

ಚಿತ್ರದುರ್ಗದ ಕೋಟೆಯೊಳಗೆ ಸೇರಿದ ಸೈನ್ಯ ಜಯಘೋಷಣೆ ಕೂಗುತ್ತಾ ಭಾರಿನಗಾರಿಗಳ ಶಬ್ದದಿಂದ ತಮ್ಮ ವಿಜಯವನ್ನು ಸಾರಿದರು. ಹೀಗೆ ಚಿನ್ಮೂಲಾದ್ರಿಯ ಮೇಲೆ ಕವಿದುಕೊಂಡ ರಣದ ಕರಾಳಛಾಯೆ ಮಾಯವಾಯಿತು. ಆಳರಸರ ಅರಮನೆಗಳು, ಗುರು ಜಂಗಮರ ಮಠಗಳು, ದೇವ ಮಂದಿರಗಳು, ಧನಿಕರ ಗೃಹಗಳು, ವರ್ತಕರ ಮಳಿಗೆಗಳೂ ಶತ್ರು ಸೈನಿಕರ ದಾಳಿಗೀಡಾಗುತ್ತಿದ್ದುದಲ್ಲದೆ, ಅನಿರೀಕ್ಷಿತವಾಗಿ ಸಂಭವಿಸಬಹುದಾದ ಕೊಲೆ, ಸುಲಿಗೆ, ದರೋಡೆಗಳ ಸಂಕೋಲೆಯಿಂದ ನರಳುವುದನ್ನು ಅನೇಕ ಸೌಂಧರ್ಯಶೀಲವತಿಯರ ಮಾಂಗಲ್ಯಗಳು ಹರಿದು ಅವರ ಪಾತಿವ್ರತ್ಯವು ಹಾಳಾಗುತ್ತಿದ್ದುದನ್ನು ಕಾಪಾಡಿದಳು ಈ ಓಬವ್ವೆ, ಇದು ಭಾರತದ ಇತಿಹಾಸದಲ್ಲಿ ಒಂದು ಶುಭ ದಿನವಾಗಿದೆ.

"ಕಹಳೆ ಬತೇರಿ ಮೇಲೆ ನಿಂತು ನೋಡಿದರೆ ಸುತ್ತಲೂ ಮೂರು ಹರಿದಾರಿ ದೂರದವರೆಗು ಕಾಣಿಸುತ್ತದೆ ದುರ್ಗ. ದೂರೆಲ್ಲಿ ಆದರೂ ಶತ್ರು ಬಂದದ್ದು ಕಂಡಾಗ ಕಹಳೆಯೋರು ತಮ್ಮ ಕಹಳೆಯೂದಿದರೆ, ಕಹಳೆಯ ದನಿ ಸಿಡಿಲಿನಂತೆ ಮೊಳಗ್ತಿತ್ತು. ಅ ಕೆಲಸ ಮಾಡ್ತಿದ್ದು ಓಬವ್ವನ ಗಂಡ ಹನುಮ್ಯ ಅಂತೆ. ಒಮ್ಮೆ ಉಂಬಾಕೆ ಬಂದಾಗ ಅವನ್ಗೆ ಊಟಕ್ಕಿಕ್ಕಿ ನೀರು ತರ್ಲಿಕ್ಕೆ ಹೋದ ಒಬಕ್ಕನ್ಗೆ ಏನೋ ರವವಾದಂಗೆ ಕೇಳಿ ಹಂಗೆಯಾ ಆ ಕಳ್ಳ ದಾರಿಯಾ ಕಂಡು ಹಂಗೆ ಬಗ್ಗಿ ನೋಡ್ದಾಗ ಶತ್ರಗಳೋ ನುಗ್ಗಿ ಬರೋ ಹಂಗೆ ಕಂಡಿದ್ದೇ ತಡ ಓಡು ಬಂದು ಗಂಡನ್ನ ಎಬ್ಸಿದ್ರೆ ಊಟ ಅರ್ಧ ಆಯ್ತದೆ ಅಂದು ಅವಮ್ಮ ತಾನೆ ಕೈಗೆ ಸಿಕ್ಕ ವನಕೆ ತಕ್ಕಂಡು ಹೋಗಿ ಆ ಕಳ್ಗಂಡಿ ಹತ್ರ ಬಂದು ನಿಂತ್ಕೊಂಡು ಶತ್ರುಗೋಳು ಒಬ್ಬೊಬ್ರೆ ಬಂದಂಗೆಲ್ಲಾ ತಲೆ ಹೊಡದಾಕಿ ಅತ್ಲಾಗೆ ಎಳೆದು ಹಾಕ್ತಿದ್ಲಂತೆ. ಹಿಂಗೆ ನೂರಾರು ಜನುಗಳ್ನ ಹೊಡ್ದು ಸಾಯ್ಸಿದ್ಲಂತೆ, ಅಷ್ಟರಾಗೆ ಅಕಿ ಗಂಡ ಬಂದು ಕಹಳೆ ಊದಿದ್ನಂತೆ, ದೊರೆಗೊಳು, ಸೈನಿಕಗೊಳು ಬಂದು ಶತ್ರುಗೋಳ್ನ ಓಡ್ಸಿ ಬುಟ್ರಂತೆ, ಇಂಗೆ ನಮ್ಮ ಓಬಕ್ಕ ಕ್ವಾಟೆಗೆ ನುಗ್ದೋರ್ನ ಹಿಂದು ಮುಂದು ನೋಡ್ದೆ ಸಾಯಿಸಿಬುಟ್ಟಂತೆ, ಆ ಹೊತ್ಗೆ ದುರ್ಗಾನ ಕಾಪಾಡಿಬುಟ್ಟಂತೆ. ಅಂಗಾಗಿ ನಮ್ಮ ದುರ್ಗದಲ್ಲಿ

ಈಗ್ಲೂವೆ ಒನಕೆ ಓಬವ್ವ ಅಂದ್ರೆ ನಮ್ಗೆಲ್ಲಾ ದ್ಯಾವ್ರಿದ್ದಂಗೆ , ದುರ್ಗಕ್ಕೆ ಆಕೆ ಸೇವೆ ಮಾಡಿದವ್ಳೆ, ಆಕೀನೂ ನಮ್ಗೇ ಏಕನಾಥಿ ಇದ್ದಂಗೆ, ಆಕೆ ಉತ್ಸವನೂ ಮಾಡಬೇಕು. ಆಕಿ ಅಂಗೆ ನಮ್ ಹೆಣ್ಮಕ್ಳು ಬೆಳೀಬೇಕು, ಅದೇ ನಮ್ ಆಸೇ"ೆ ಎಂದರು ಪಾಲಯ್ಯನವರು. ಇವರು ಕೆಳಗೋಟೆ ನಿವಾಸಿಗಳು. ವಯಸ್ಸು ಸರಿಸುಮಾರು ಎಂಬತ್ನಾಲ್ಕು ವರ್ಷ ತಮಗೆ ಎಂದು ಹೇಳಿದರು. ಅವರ ದೃಷ್ಟಿಯಲ್ಲಿ ಓಬವ್ವ ದುರ್ಗದ ದೇವತೆಯಾಗಿದ್ದಾಳೆ, ವೀರಮಹಿಳೆಯಾಗಿದ್ದಾಳೆ. ತಮ್ಮ ಹೆಣ್ಣು ಮಕ್ಕಳು ಹೀಗೆ ಆಗಬೇಕು ಎಂದು ಆಶಯ ವ್ಯಕ್ತಪಡಿಸಿದ್ದಾರೆ. ಇದನ್ನು ತಮ್ಮ ಅಪ್ಪ ಅಜ್ಜಂದಿರು ತಮಗೆ ಹೇಳುತ್ತಿದ್ದುದ್ದಾಗಿ ಹೇಳಿದ್ದಾರೆ. ತಮ್ಮ ಅಜ್ಜನವರಿಂದ ಕತೆಗಳನ್ನು ಕೇಳುತ್ತಿದ್ದು ಅದರಲ್ಲಿ ಓಬವ್ವನ ಕತೆಯನ್ನಂತೂ ತುಂಬಾ ಆವೇಶದಿಂದ, ವಾತ್ಸಲ್ಯದಿಂದ ಹೇಳುತ್ತಿದ್ದುದ್ದಾಗಿ ತಿಳಿಸಿದ್ದಾರೆ. ಅಲ್ಲದೆ ಆಗ ಬೆಟ್ಟವನ್ನು ತಾವು ಲೀಲಾಜಾಲವಾಗಿ ಹತ್ತಿ ಇಳಿಯುತ್ತಿದ್ದು, ಕುದುರೆ ಹೆಜ್ಜೆಗಳನ್ನೇರಿ, ಬತೇರಿಯನ್ನೆಲ್ಲಾ ನೋಡಿ ಬರುವಾಗ್ಗೆ ಗೋಪಾಲಸ್ವಾಮಿಹೊಂಡ, ಅಕ್ಕತಂಗಿಹೊಂಡ, ಹಿಡಿಂಬೇಶ್ವರ ದೇವಸ್ಥಾನಗಳನ್ನು ನೋಡಿ ಬರುತ್ತಿರುವಾಗ ಅಲ್ಲಿಯೇ ಇದ್ದ ಓಬವ್ವನ ಕಿಂಡಿಯನ್ನು ನೋಡಿ ನಮಸ್ಕರಿಸುತ್ತಿದ್ದುದ್ದಾಗಿ ತಿಳಿಸಿದರು. "ಮತ್ತೇ ಆಕೆಗೂನು ಒಂದು ದೇವಸ್ಥಾನ ಇಲ್ವಲ್ಲ" ಎಂದು ತನ್ನ ಅಜ್ಜನನ್ನು ಕೇಳ್ದಾಗ ಅಜ್ಜನ ಮೌನವೇ ತಮಗೆ ಉತ್ತರ ಎಂದರು. ಅದೆಲ್ಲಾ ದೊಡ್ಡವರ ವಿಶ್ಯ ಎನ್ನುತ್ತಿದ್ದರಂತೆ. ಹಂಗೂವೆ ಮತ್ತೆ ಓಬಕ್ಕನ ಕಡೇರು, ಮಕ್ಳು, ಮೊಮ್ಮಕ್ಕಳು ಇದ್ದಾರ ಎಂದಾಗ ಇದಾರಂತೆ ಅವರ ವಂಶದೋರು ಎನ್ನುತ್ತಿದ್ದರಂತೆ. ಹೀಗೆ ಓಬವ್ವನ ಬಗ್ಗೆ ಮೆಚ್ಚುಗೆಯಿಂದ ಈ ರೀತಿ ಹೇಳಿದ್ದಾರೆ.

ಅಪೇಕ್ಷೆಯಂತೆ ಆಕೆ ತನ್ನ ಕುಲದವರಿಗೆ ದೇವತೆಯಾಗಬೇಕೆಂಬ ಆಸೆಯನ್ನು ಸೂಕ್ತ ಸಲಹೆಗಳೊಂದಿಗೆ ನೆರವೇರಿಸಿದರಂತೆ. ಅಲ್ಲದೇ ಪ್ರತಿವರ್ಷವೂ ಈಕೆಯ ಉತ್ಸವವನ್ನು ಯಥಾ ವಿಧಿಯಂತೆ ನೆರವೇರಿಸಬೇಕೆಂದು ಆಕೆಯ ವಂಶಸ್ಥರಿಗೆ ಹೇಳಿದರಂತೆ. ಆದೇಶ ಮಾಡಿದರಂತೆ ಹಾಗಾಗಿ ಅಂದಿನಿಂದ ಇಲ್ಲಿಯವರೆಗೂ ದುರ್ಗದ ಜನರ ಸಹಾಯದಿಂದ ತಾವೂ ಆಕೆಯನ್ನು ಪೂಜಿಸುತ್ತಾ ಬರುತ್ತಿರುವುದಾಗಿ ಮತ್ತು ಉತ್ಸವಗಳನ್ನು ಚಾಚೂಬಿಡದೆ ನೆಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿದರು.

ಆಕೆಯ ಕೇಲವನ್ನು (ದೇವರ ಪೆಟ್ಟಿಗೆಯನ್ನು) ಆಕೆಗಾಗಿ ನಿರ್ಮಿಸಿಕೊಂಡಿರುವ ಪುಟ್ಟ ದೇಗುಲದಲ್ಲಿ ಇಟ್ಟು ಪೂಜಿಸುತ್ತಿರುವುದಾಗಿ ತಿಳಿಸಿದರು. ತಮಗೆಲ್ಲಾ ಭಕ್ತಿ ಬೇಡಿದಾಗ ಅವರವರ ಭಾವಕ್ಕೆ ತಕ್ಕಂತೆ ನಮಗೆ ಆಕೆ ದೇವರಾಗಿದ್ದಾಳೆ. ಆಕೆಯನ್ನು ಭಕ್ತಿಯಿಂದ ಪೂಜಿಸುತ್ತಾ ವಂಶದವರೆಲ್ಲಾ ವರ್ಷಕ್ಕೊಮ್ಮೆ ಜಾತ್ರೆಯಂತೆ ನೆರೆದು ದುರ್ಗದ ಬೆಟ್ಟದಲ್ಲಿರುವ ಒನಕೆ ಕಿಂಡಿಯ ಬಳಿ ಸೇರಿ ಉತ್ಸವ ಮಾಡುತ್ತೇವೆ. ತಮ್ಮ ತಾತನವರ ಕಾಲದಿಂದಲೂ ತಮಗೆ ವಂಶಪಾರಂಪರ್ಯವಾಗಿ ತಾತನ ಆಸ್ತಿಯಾಗಿ ತಮಗೆ ಬಳುವಳಿಯಾಗಿ ಬಂದ ಕಹಳೆ ಇದು ಎಂದು ಅಭಿಮಾನದಿಂದ ತೋರಿಸಿ ನುಡಿದರು ತಮ್ಮದು ಎಂದು. ದುರ್ಗದ ಕೋಟೆಯಲ್ಲಿಯ ಚಲವಾದಿಯವರಿಗಾಗಿ

ನಾಯಕರು ಕಟ್ಟಿಸಿ ಕೊಟ್ಟಿರುವ ಕಟ್ಟೆಯ ಬಗ್ಗೆ ಪ್ರಸ್ತಾಪಿಸಿದರು. ಆದರೆ ಇತಿಹಾಸದಲ್ಲಿ ಓಬವ್ವನ ಪ್ರಸ್ತಾಪ ಅಷ್ಟಾಗಿ ಇಲ್ಲದಿರುವ ಬಗ್ಗೆ ಅಸಮಧಾನಗೊಂಡಿದ್ದಾರೆ. ಮತ್ತು ಸಮಾಧಿಯ ಉಲ್ಲೇಖವಂತೂ ಇಲ್ಲವೇ ಇಲ್ಲಾ. ಬಹುಶಃ ತಮ್ಮ ಜಾತಿಯೇ ತಮ್ಮವಳಿಗೆ ಮುಳುವಾಯಿತೇನೋ ಎಂಬ ಸಂದೇಹ ಹೊರಗೆಡಹಿದರು. ಇದನ್ನು ನೋಡಿದಾಗ ಇದು ವಾಸ್ತವಕ್ಕೆ ಹತ್ತಿರವಾದ ಕಟು ಸತ್ಯ ಇರಬಹುದು ಅನ್ನಿಸುತ್ತದೆ.

ಬಿದ್ದಿರುವ ಕಲ್ಲುಗಳು ಮಾತ್ರ ಹಾಗೆಯೇ ಇವೆ. ಅಂದಿನಿಂದ ಇಂದಿನವರೆಗೂ ಓಬವ್ವನನ್ನು ತಮ್ಮವಳೆಂದು ಭಾವಿಸಿದ ಆಕೆಯ ವಂಶದವರು ತಾವೆಂದು ಗುರುತಿಸಿಕೊಂಡಿರುವ ಸಮೂಹವು ಸಮಾದಿ ಪೂಜೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಐತಿಹಾಸಿಕ ಸತ್ಯದ ದ್ಯೋತಕವಾದ ಓಬವ್ವನನ್ನು ಅವಳ ಸಮಾಧಿಯ ಜಾಗವೆಂದು ಹಿಂದಿನಿಂದ ಹಿರಿಯರು ಹೇಳುತ್ತಿದ್ದ, ಪೂಜೆ ಮಾಡುತ್ತಿದ್ದ ಸ್ಥಳವೆಂದು ತೋರುತ್ತಾರೆ. ಸ್ವಾರ್ಥಸಾಧನೆ, ಸ್ವಾಭಿಮಾನ, ವರ್ಣದ್ವೇಷಗಳ ಪರಿಣಾಮವಾಗಿ ದೌರ್ಜನ್ಯಗಳ ಪರಂಪರೆ ನಿಲ್ಲದ ಸಮಾಜದಲ್ಲಿ ಓಬವ್ವ ನಮ್ಮವಳು, ಕನ್ನಡ ನಾಡಿನ ಹಿರಿಮೆಯವಳು ಎನಿಸಿಕೊಂಡಿದ್ದಾಳೆ. ಎಲ್ಲರಲ್ಲೂ ನಾಡಿನ ಆಸ್ತಿಯಾಗಿದ್ದಾಳೆ". ಸಾಮಾನ್ಯವಾಗಿ ಜಾನಪದ ಸಾಹಿತ್ಯ ರಚನೆ ಮುಖ್ಯವಾಗಿ ಅಪ್ರಜ್ಞಾಪೂರ್ವಕವಾಗಿ ನಡೆಯುವ ಕಾರ್ಯ. ಅದು ಬಾಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಬರುವ ಹೊತ್ತಿಗೆ ನಾನಾ ರೂಪಾಂತರಗಳನ್ನು ಪಡೆದು ಒಂದು ಜನಾಂಗದ, ಒಂದು ನಾಡಿನ, ಕೊನಗೆ ಇಡೀ ಜಗತ್ತಿನ ಸ್ವತ್ತಾಗುತ್ತಿದೆ"[೫] ಎಂದಿದ್ದಾರೆ. ಶಿಷ್ಟ ಸಾಹಿತ್ಯದಲಿ ಬೆರಳಣಿಕೆ ಕೃತಿಗಳಲ್ಲಿ ಓಬವ್ವನ ಪ್ರಸ್ತಾಪ ಕಂಡು ಬಂದಿದೆ. ಆದರೆ ಜನಪದರ ಸಾಹಿತ್ಯ ಹಾಡು ಕಥೆಗಳಲ್ಲಿ ಜನರ ಸ್ವತ್ತಾಗಿದ್ದಾಳೆ, ಆಸ್ತಿಯಾಗಿದ್ದಾಳೆ. ಸಂಪ್ರದಾಯ ಆಚರಣೆಗಳು ಮೂಲತಃ ವಾಡಿಕೆಗಳೆಂಬುದು ಸುಸ್ಪಷ್ಟ. ಹೆಸರಾದ ವ್ಯಕ್ತಿಯೊಬ್ಬನ ವಾಡಿಕೆಗಳನ್ನು ಸುತ್ತಮುತ್ತಣ ಜನ ಅನುಕರಿಸುವುದು ಸಹಜ

"ಯದ್ಯದಾಚರತಿ ಶ್ರೇಷ್ಟ ಸ್ತತ್ತದೇವೇತರೋ ಜನಾಃಸಯತ್ತ್ರಮಾಣಂ ಕುರುತೇಮಾಣಂ ಕುರುತೇ ಲೋಕಸ್ತದನು ವರ್ತತೇ" ಎಂದು ಗೀತಾಚಾರ್ಯರೇ ಹೇಳಿದ್ದಾರೆ. ಇದರರ್ಥ ದೊಡ್ಡವರಲ್ಲಿ ಅತೀವ ಶ್ರದ್ಧೆಯುಳ್ಳ ಜನ ಹಿಂದೆ ಮುಂದೆ ವಿಚಾರಿಸಿದರು. ಅವರು ಮಾಡಿದ್ದವೆಲ್ಲಾ ತಾವು ಅಕ್ಷರಶಃ ಆಚರಿಸುತ್ತಾರೆ. ಹೀಗಾಗಿ ಓಬವ್ವನ ಸಮುದಾಯದವರು ಮಾಡುತ್ತಿರುವುದು ಸಾಮೂಹಿಕ ಸ್ವರೂಪದ್ದಾಗಿದೆ. ಇಡೀ ಸಮೂಹವೇ ಓಬವ್ವನ ಪೂಜಾ ಕಾರ್ಯವನ್ನು, ಸಮಾಧಿ ಪೂಜೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಸಮಾಜದ ಮುಖಂಡರಾಗಲೀ, ನಾಡಿನ ಪ್ರಭುತ್ವವಾಗಲೀ ತಮ್ಮನ್ನು ಮಾನ್ಯ ಮಾಡಲಿ ಎಂದು ಅವರು ಆಚರಿಸುತ್ತಿಲ್ಲ. ಅವರ ನಂಬಿಕೆಯಲ್ಲಿ ಅವರ ಸಂಪ್ರದಾಯ ಉಳಿದಿದೆ. ಹೀಗೆ ಆಕೆಯ ವಂಶೀಕರೆಂದು ಗುರುತಿಸಲ್ಪಟ್ಟಿರುವವರು ವಾರ್ಷಿಕ ಪೂಜೆ, ಸಮಾಧಿಪೂಜೆಗಳನ್ನು ಮಾಡುತ್ತಾ ಬಂದಿದ್ದಾರೆ.

೨. ಒನಕೆ ಓಬವ್ವಳ ವಂಶದ ಕಥೆ : ಛಲವಾದಿ ವಂಶದವರು ಹೇಳುವ ಪ್ರಕಾರ ಓಬವ್ವ ವೀರ ರಮಣಿಯರು ಜನಿಸಿದಂಥಹ ರಾಜವಂಶವಲ್ಲ ಓಬವ್ವನದು, ಪುರಾಣಗಳಲ್ಲಿ ಉಲ್ಲೇಖವಾಗಿರುವ ಛಲದಂಕಮಲ್ಲ ಹಾಗೂ ಅವನ ಹೆಂಡತಿಯೂ ಆದ ಬ್ರಹ್ಮಕುಮಾರಿಯೂ ಆದ ಮಾಯದೇಶಿ ಎಂಬುವರಿಂದ ಉದ್ಭವಿಸಿದ ವಂಶವಾದ 'ಛಲವಾದಿ' ಮತಸ್ಥಳು ಎನ್ನುತ್ತಾರೆ.

ಇವರು ಪೌರಾಣಿಕ ಹಿನ್ನೆಲೆಯುಳ್ಳವರು, ಏಕವರ್ಣಾತ್ಮಕ ವೈದಿಕರು ಹರಿಹರರಿಗೆ ಬೇದವೆಣಿಸದೆ ಶೈವ ಮತ್ತು ವೈಷ್ಣವ ಸಾಂಪ್ರದಾಯಗಳನ್ನು ಅನುಸರಿಸುವ ಹಾಗೂ ಕುದುರೆ ನರಸಿಂಹಸ್ವಾಮಿ, ಲಕ್ಷ್ಮೀದೇವರುಗಳ ಆರಾಧಕರಿವರು, ಇವರು ಹಿಂದಿನ ಕಾಲದಿಂದಲೂ ರಾಜ ಮಹಾರಾಜರಿಗೆ ರಣಕಹಳೆಯವರಾಗಿಯೂ ಯುದ್ಧ ಸಮಯದಲ್ಲಿ ಯೋಧರಾಗಿಯೂ ಸೇವೆಸಲ್ಲಿಸುತ್ತಿದ್ದರು. ಹಾಗಾಗಿ ಚಿತ್ರದುರ್ಗ, ಗುಡೇಕೋಟೆ, ನಿಡುಗಲ್ಲು, ರತ್ನಗಿರಿ ಪಾಳೆಯಗಾರರು ಇವರನ್ನು ಕಹಳೆಯವರ ನೇಮಿಸಿಕೊಳ್ಳುತ್ತಿದ್ದರು. ಪ್ರಾಮಾಣಿಕ ಸೇವೆ ಸಲ್ಲಿಸುತ್ತಿದ್ದರೆಂದು ಇತಿಹಾಸದಿಂದ ನಮಗೆ ತಿಳಿಯುತ್ತದೆ. ಇವರು ಅನನ್ಯ ಭಕ್ತಿ, ವಿಶ್ವಾಸ ಮತ್ತು ವಿಧೇಯತೆಗಳಿಂದ ಸೇವೆ ಸಲ್ಲಿಸುವವರಾಗಿದ್ದರು ಈ ಕಹಳೆಯವರು. ಓಬವ್ವನ ತಂದೆಯಾದ ಗುಡೇಕೋಟೆಯ ಸಂಸ್ಥಾನದಲ್ಲಿ ಅಚ್ಚುಮೆಚ್ಚಿನ ಆಪ್ರಸೇವಕನಾಗಿದ್ದ ಚೆನ್ನಪ್ಪನಿಗೆ ಕದರಿಪ್ಪ, ತಿಮ್ಮಣ್ಣ ಮತ್ತು ಓಬವ್ವ ಎಂಬ ಮೂವರು ಮಕ್ಕಳಿದ್ದರು. ಓಬವ್ವ ಚಿತ್ರದುರ್ಗಕ್ಕೆ ಬಂದು ಕೋಟೆ ಕಾಪಾಡಿದಂತೆ. ಈಕೆಯ ಅಣ್ಣನಾದ ಕುದಿರಪ್ಪ ನಿಡಗಲ್ಲು ಸಂಸ್ಥಾನದ ಪಾಳೆಯಗಾರರಲ್ಲಿ ಕಾವಲುಗಾರನಾಗಿ ಸೇವೆಸಲ್ಲಿಸುತ್ತಿದ್ದನು. ಒಮ್ಮೆ ಶತ್ರುಗಳು ಮುತ್ತಿದಾಗ, ಏಕಾಂಗಿಯಾಗಿ ಹೋರಾಡಿ ಹಲವಾರು ಶತ್ರು ಸೈನಿಕರನ್ನು ಕೊಂದು ಆನಂತರ ವೀರ ಮರಣವನ್ನೊಂದಿದನು ಎನ್ನಲಾಗಿದೆ. ಆಗ ಇವನ ಧೈರ್ಯಕ್ಕೆ ಮೆಚ್ಚಿದ ರಾಜ ಇವನ ಹೆಸರಿನಲ್ಲಿ ಅಶ್ವಾರೋಢನಾಗಿ ಕೈಯ್ಯಲ್ಲಿ ಈಟಿಯನ್ನಿಡಿದುಕೊಂಡಿರುವ ಒಂದು ಶಿಲಾ ಪ್ರತಿಮೆಯನ್ನು ಕೆತ್ತಿಸಿನಿಡುಗಲ್ಲು ಬೆಟ್ಟದ ಮಧ್ಯ ಭಾಗದಲ್ಲಿ ಸ್ಥಾಪಿಸಿದರು. (ಈ ವಿಷಯವನ್ನು ಇದೇ ಮನೆತನಕ್ಕೆ ಸೇರಿದ ಯಜಮಾನ್ ಅಗ್ರಹಾರದ ಕುದುರಪ್ಪನಾದ ತಿಳಿದುಬರುತ್ತದೆ ಹೀಗೆ ಓಬವ್ವನ ವಂಶದವರು ನಂಬಿಕಸ್ಥರು ವೀರರು ಎಂದು ತಿಳಿಯುತ್ತದೆ). ಹಾಗಾಗಿ ಓಬವ್ವನ ರಕ್ತದಲ್ಲಿಯೇ ಹರಿದು ಬಂದಿದೆ ಅನನ್ಯವಾದ ಭಕ್ತಿ, ಯೋಧತನ, ನಂಬಿಕೆ ಮತ್ತು ವಿಶ್ವಾಸ ಆದ್ದರಿಂದ. ತನ್ನ ಈ ಕಾಯಕಕ್ಕೆ ಮೆಚ್ಚಿದ ಮದಕರಿನಾಯಕ ಮುತ್ತು ರತ್ನಗಳನ್ನು ನೀಡಿದರು, ಓಬವ್ವೆ ಆಸೆ ಪಡದೆ ಕೇವಲ ತನ್ನ ಹೆಸರಿನಲ್ಲಿ ವೀಳೆಯನೀಡಿ, ತಾನು ತನ್ನ ವಂಶದವರಿಗೆ ಕುಲದೇವತೆಯಾಗಿರಲು ಆಸೆ ಪಟ್ಟಳು, ತನ್ನ ಕುಲದವರನ್ನು ದುರ್ಗದ ಜನತೆ ಮುಂದೆಯೂ ಗುರುತಿಸಿ ತಮ್ಮ ಕೈಲಾದ ಸಹಾಯ ಮಾಡಿ ಉತ್ಸವ ನೆಡೆಸಿಕೊಂಡು ಬರುವಂತೆ ಕೋರಿದಳು. ಹಾಗಾಗಿ ತನ್ನೊಬ್ಬಳ ಸ್ವಾರ್ಥವನ್ನು ಬಯಸದ ಈ ಓಬವ್ವ ತನ್ನ ವಂಶದವರಿಗೆಲ್ಲಾ ಕುಲದೇವತೆಯಾಗಿದ್ದಾಳೆ. ದುರ್ಗದ ಮಗಳಾಗಿದ್ದಾಳೆ.

ಬೆಲ್ಲದ ಅಚ್ಚೆಂದು ದುರ್ಗವನ್ನು ಬಯಸಿಬಂದ ಹೈದರಾಲಿಗೆ ಓಬವ್ವ ಕೆಂಡದ ಅಚ್ಚೆಂದು ಮನವರಿಕೆ ಮಾಡಿಕೊಟ್ಟಳು. ದಿವಾನ್ ಪೂರ್ಣಯ್ಯನಿಗೆ ಚಿಂತೆ ಮಾಡಿಸಿದ್ದಳು, ಇಂಥಹ ಓಬವ್ವಳು ಪ್ರಜೆಗಳ ಅಪಾರ ಗೌರವಗಳನ್ನು ಪಡೆದಳು. ಹಾಗೆಯೇ ಮನಸ್ಸಿನಲ್ಲಿ ತಾನು ಅಪಾರ ಸೈನಿಕರನ್ನು ಕೊಂದವಳು. ಅಪಾರ ಜೀವ ಹಾನಿ ಮಾಡಿದವಳು ತಾನೆಂದು ಅನೇಕ ಮಕ್ಕಳು ಅನಾಥರಾಗಲು ಹೆಣ್ಣು ಮಕ್ಕಳು ವಿಧವೆಯರಾಗಲು ತಾನು ಕಾರಣಳೆಂದು ಮನಸ್ಸಿನಲ್ಲಿಯೇ ನೋವುಂಡು ಓಬವ್ವ ಸ್ವಲ್ಪದಿನಗಳಲ್ಲಿಯೇ ಮರಣವಪ್ಪಿದಳು.[೬] ಎಂದು ಓಬವ್ವನ ಸಾವಿನ ಬಗ್ಗೆ ಉಲ್ಲೇಖಿಸಿದ್ದಾರೆ. ರಾಜವೀರಮದಕರಿ ನಾಯಕನು ಆಕೆಯ ಶವವನ್ನು ದುರ್ಗದಾದ್ಯಂತ ಮೆರವಣಿಗೆ ಮಾಡಿಸಿ ಸಕಲ ರಾಜ ಮರ್ಯಾದೆಗಳೊಂದಿಗೆ ಓಬವ್ವ ವಾಸಿಸುತ್ತಿದ್ದಳು ಎನ್ನಲಾದ ಗವಿಯಂತಿದ್ದ ಮನೆಯ ಪಕ್ಕದಲ್ಲಿಯೇ ಸಿಹಿನೀರು ದೋಣಿ ಎದುರಲ್ಲಿ ಎತ್ತರವಾದ ಜಾಗದಲ್ಲಿ ಸಮಾದಿ ಮಾಡಿಸಿದನು ಎನ್ನಲಾಗಿದೆ. ಸಮಾದಿಯ ಮೇಲೆ ಕಲ್ಲುಮಂಟಪ ನಿರ್ಮಿಸಿದ್ದು ಅದು ಕಾಲಾ ನಂತರದಲ್ಲಿ ಬಿದ್ದು ಹೋಗಿದ್ದು ಕಲ್ಲುಗಳ ಮಾತ್ರ ಹಾಗೆಯೇ ಇವೆ.[೭]

೩. ಓಬವ್ವ ಮತ್ತು ದೇಶ್‌ಭಾಗ್ ಪಡೆ : ದೇಶ್‌ಭಾಗ್ ಎಂದರೆ ಹಿಂದೆ ಹೆಣ್ಣು ಮಕ್ಕಳಿಗೆ ಸೈನ್ಯದ ತರಬೇತಿ ನೀಡುವ ತರಬೇತಿ ಇತ್ತು. ಅಧಿಕೃತವಾಗಿ ನ್ಯಾಯಲಯದಿಂದ ನಾಯಕನ ವಂಶಸ್ಥರೆಂದು ಪರವಾನಗಿ ಪಡೆದಿರುವ ಚಳ್ಳಕೆರೆಯ ಶ್ರೀಯುತ ವೀರಭದ್ರನಾಯಕ್‌ರವರನ್ನು ಕ್ಷೇತ್ರಕಾರ್ಯದಲ್ಲಿ ಭೇಟಿಯಾದಾಗ ಅವರು ಓಬವ್ವನ ಬಗೆಗೆ ಹಲವಾರು ವಿಷಯಗಳನ್ನು ತಿಳಿಸಿದರು. ಅದರಲ್ಲಿ ಓಬವ್ವ ದೇಶ್‌ಭಾಗ್ ಪಡೆಯಲ್ಲಿ ತರಬೇತಿ ಪಡೆದವಳೆಂಬುದನ್ನು ತಮ್ಮ ಹಿರಿಯರಿಂದ ತಿಳಿದುಕೊಂಡಿರುವುದಾಗಿ ತಿಳಿಸಿದರು. ಅಂದರೆ ಹೆಣ್ಣು ಸೈನಿಕೆಯಾಗಿ ತರಬೇತಿ ಪಡೆದಿದ್ದಳೆಂದು ಮೂಲತಃ ಓಬವ್ವ ಗುಡೆಕೋಟೆಯ ಸಂಸ್ಥಾನದಲ್ಲಿ ಅಲ್ಲಿಗೆ ಪಾಳೆಯಗಾರರ ಬಳಿ ಅಪ್ರಸೇವಕನಾಗಿ ಕಾರ್ಯನಿರ್ವಹಿಸುತ್ತಿದ್ದ ಕಹಳೆಯವನಾಗಿದ್ದನು. ಕಾಲಾ ನಂತರದಲ್ಲಿ ರಾಜವೀರ ಮದಕರಿನಾಯಕರಿಗೆ ಗುಡೇಕೋಟೆಯ ಸಂಸ್ಥಾನದ ನಾಯಕ ವಂಶದ ಪೆದ್ದಕ್ಕ ನಾಗತಿಯನ್ನು ಕೊಟ್ಟು ವಿವಾಹ ನಡೆಯುತ್ತದೆ. ಲಗ್ನದ ನಂತರ ಪದ್ದಕ್ಕ (ಪೆದ್ಮಮ್ಮ, ಪೆದ್ದವ್ವ) ನಾಗತಿಯರು ದುರ್ಗದ ಕೋಟೆಗೆ ಬರುವಾಗ ತಮ್ಮ ಜೊತೆ ಓಬವ್ವನನ್ನು ಕರೆತರುವುದು ನಿರ್ಧಾರವಾಗಿತ್ತು. ಏಕೆಂದರೆ ಚೆನ್ನಪ್ಪ ನಾಯಕರ ಬಳಿ ಆಪ್ತನಾಗಿದ್ದಂತೆ, ಓಬವ್ವನಿಗೂ ಅರಮನೆಗೂ ನಂಟಾಗಿತ್ತು. ಜೊತೆಗೆ ತಂದೆಯಿಂದಲೇ ದೇಶಪ್ರೇಮ, ನಾಡರಕ್ಷಣೆ, ಪ್ರಭುವಿಗಾಗಿ ಪ್ರಾಣ ಕೊಡುವ ನಿಷ್ಠೆಯನ್ನು ಕಲಿತಿದ್ದ ಓಬವ್ವನಲ್ಲಿ ಆಗಲೇ ಕೆಚ್ಚು ಮೂಡಿತ್ತು. ಹಾಗಾಗಿ ದೇಶ್‌ಭಾಗ್ ಪಡೆಯಲ್ಲಿ ತರಬೇತಿ ಪಡೆದಿದ್ದಳು. ಹಾಗಾಗಿ ಪೆದ್ದಕ್ಕನಾಗತಿಯರಲ್ಲಿ ಅವರಿಗೆ ಆಪ್ತ ಸೇವಕಿಯಾಗಿ ಕಾರ್ಯ ನಿರ್ವಹಿಸುತಿದ್ದು, ಪೆದ್ದಕ್ಕ ನಾಗತಿಯರ ಜೊತೆ ದುರ್ಗಕ್ಕೆ ಬರುವ ಕಾರ್ಯ ನಿಗದಿಯಾಗಿತ್ತು. ಹಾಗಾಗಿ ಓಬವ್ವ ಬಾಲ್ಯದಿಂದಲೇ ಸಾಮಾನ್ಯ ಬಾಲಕಿಯಾಗಿರದೆ ದೀರೋದತ್ತ ನಿಲುವನ್ನು ಬೆಳೆಸಿಕೊಂಡವಳಾಗಿದ್ದಳು ಎಂಬುದು ವೇದ್ಯವಾಗುತ್ತದೆ.

ಹೀಗೆ ದುರ್ಗದ ಕೋಟೆಯ ಪ್ರವೇಶ ಓಬವ್ವನಿಗೆ ಖಚಿತವಾದಾಗ, ವಯಸ್ಸಿಗೆ ಬಂದ ಹೆಣ್ಣೊಬ್ಬಳನ್ನು ಅಪರಿಚಿತ ಸ್ಥಳಕ್ಕೆ ಕಳುಹಿಸುವುದು ತಂದೆಯ ಕರ್ತವ್ಯಕ್ಕೆ ಚ್ಯುತಿ ತರುವಂಥಹ ಕಾಲವಾಗಿತ್ತು. ಪುರುಷಪ್ರಧಾನ ಸಮಾಜದಲ್ಲಿ ಪಿತೃತ್ವಕ್ಕೆ ಅಧಿಕಾರವಿತ್ತು. ಪಿತೃಪ್ರಧಾನತೆಯೊಂದಿಗೆ ನೇರ ಹಾಗೂ ಆಳವಾದ ಸಂಬಂಧವನ್ನು ಹೊಂದಿತ್ತು. ಆ ಸಮಾಜದ ವ್ಯವಸ್ಥೆಯೇ ಮೂಲಭೂತವಾಗಿ ಪುರುಷ ಪ್ರಧಾನವಾದುದಾಗಿತ್ತು. ಹಾಗಾಗಿ ಪ್ರಾಪ್ತಳಾದ ಅವಿವಾಹಿತಳಾದ ಓಬವ್ವನನ್ನು ದುರ್ಗದ ಕೋಟೆಗೆ ಕಳುಹಿಸುವುದು ದುಃಸಾಧ್ಯವಾದಾಗ ಪರ್ಯಾಯ ಆಲೋಚನೆ ಹುಡುಕತೊಡಗಿದರು. ಆಗ ಅಂಥಹ ಸಂದಿಗ್ದ ಸಮಯಕ್ಕೆ ಆಗಮಿಸಿದವನೇ ದೊಡ್ಡಹನುಮಪ್ಪ. "ಚಿತ್ರದುರ್ಗ ಪಾಳೆಯಗಾರರೂ ತಮ್ಮ ಸಾಮಂತ ರಾಜ್ಯವಾಗಿದ್ದ ಗುಡಿಕೋಟೆ ಸಂಸ್ಥಾನದ ರಾಜಕೀಯ ಸ್ಥಿತಿಯನ್ನರಿಯಲು ಕಳುಹಿಸಿದ್ದ ರಾಜದೂತನೊಬ್ಬ ನಿಗದಿಯಾದ ಸಮಯ ಮೀರಿದರೂ ಬಾರದೆ ಇದ್ದಾಗ, ತಮ್ಮಲ್ಲಿ ಆಪ್ತ ಸೇವಕನಾಗಿ, ಕಹಳೆಯವನಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದ ದೊಡ್ಡಹನುಮಪ್ಪನಿಗೆ ರಾಜ ಓಲೆಯನ್ನಿತ್ತು ಗುಡೇಕೋಟೆಗೆ ಕಳುಹಿಸಿದರು"[೮] ಹೀಗೆ ನಾಯಕರ ಅಣತಿಯನ್ನು ಪಾಲಿಸಲು ಗುಡೇಕೋಟೆಗೆ ಬಂದ ದೊಡ್ಡಹನುಮಪ್ಪನು ರಾಜಕಾರ್ಯವನ್ನು ಪೂರೈಸಿ ನಂತರ ತನ್ನ ದೂರ ಬಂಧುವಾದ ಚಿನ್ನಪ್ಪನ ಮನೆಗೆ ಬಂದು ಅತಿಥಿ ಸತ್ಕಾರ ಸ್ವೀಕರಿಸಿ ಅಲ್ಲಿಂದ ಹೊರಟಾಗ ಆತನ ಮಗಳಾದ ಓಬವ್ವನ ರೂಪ ಸಂಪನ್ನತೆಯನ್ನು ಕಂಡು ತನ್ನ ಮಗ ಮದ್ದಹನುಮಪ್ಪನಿಗೆ ಸರಿಯಾದ ಜೋಡಿಯೆಂದು ನಿರ್ಧರಿಸಿ ಬಂದು ದುರ್ಗದ ನಾಯಕರ ಬಳಿ ಈ ವಿಷಯ ಪ್ರಸ್ತಾಪಿಸಿದಾಗ ದೊರೆಗಳು ಗುಡೇಕೋಟೆಯ ಪಾಳೇಗಾರರು ಮತ್ತು ಕಹಳೆ ಚಿನ್ನಪ್ಪನೊಂದಿಗೆ ಮಾತಾಡಿ ಮದ್ದಹನುಮಪ್ಪ ಮತ್ತು ಓಬವ್ವೆಯ ವಿವಾಹ ನೆರವೇರಿಸಿದರು. ಹೀಗೆ ಓಬವ್ವ ವಿವಾಹವಾಗಿ ತಾನೂ ಕೂಡ ಪೆದ್ದಕ್ಕ ನಾಗತಿಯ ಹಿಂದೆ ದುರ್ಗವನ್ನು ಪ್ರವೇಶಿಸಿದಳು. ದೇಶ್‌ಭಾಗ್ ಪಡೆಯಲ್ಲಿ ತರಬೇತಿ ಪಡೆದಿದ್ದ ಓಬವ್ವ ಸ್ತ್ರೀಶಕ್ತಿಯಾಗಿ, ಮಡದಿಯಾಗಿ ದುರ್ಗ ಪ್ರವೇಶಿಸಿದಳು. ಮುಂದೆ ನೆಡೆದಿದ್ದು ಆಕೆಯ ಸ್ವಭಾವಕ್ಕೆ, ಗುಣಕ್ಕೆ ಮಾದರಿಯಾದ ಘಟನೆ ಎಂದಿದ್ದಾರೆ. ಒಟ್ಟಿನಲ್ಲಿ ಇಲ್ಲಿ ಓಬವ್ವ ಎಂಬ ಸ್ತ್ರೀಯು ತನ್ನ ಕೌಟುಂಬಿಕ ಚೌಕಟ್ಟಿನಲ್ಲಿದ್ದು ಸಮಾಜಮುಖಿಯಾದ ಕಾರ್ಯದಿಂದ ತನ್ನ ವ್ಯಕ್ತಿತ್ವವನ್ನು ವಿಕಸನ ಮಾಡಿಕೊಂಡಿದ್ದಾಳೆ. ಜನಪದರು ತಮ್ಮದೇ ಆದ ಅವರವರ ದೃಷ್ಟಿಕೋನದಲ್ಲಿ ಓಬವ್ವೆಯನ್ನು ಮೆರೆದಿದ್ದಾರೆ. ಮೆರೆಯಿಸಿದ್ದಾರೆ. ತನ್ನ ಬೌದ್ಧಿಕ ಚಿಂತನೆಯಲ್ಲಿ ಪುರುಷನಿಗೆ ಸರಿಸಮನಾಗಿ ತೂಗಿದ್ದಾಳೆ.

ನಾರಿಯರು ಹೊಳೆಹೊಳೆವ ಮನ ಸೆಳೆವ
ಸಂಗಾತಿಯಾಗಿ ನಲಿವೀಯುವರು;
ಹಿರಿಯರಂತೆ ವಿವೇಕಗೂಡಿ, ಕರ್ತವ್ಯದಲಿ
ಗೆದ್ದು, ಧರ್ಮದೊಳವರು ಮಾರ್ಗದರ್ಶಿಗಳಿಹರು(೫)

೫.೩. ಐತಿಹ್ಯಗಳು : ಐತಿಹ್ಯಗಳು ಶುದ್ಧ ಲೌಕಿಕ ಸ್ವರೂಪದ ಕಥೆಗಳು ನಿಸರ್ಗದ ಅದ್ಭುತಗಳಿಗೆ ಐತಿಹಾಸಿಕ ಲೇಪನವನ್ನು ಹಚ್ಚಿ ಕಟ್ಟಿದ ಕಥೆಗಳು. ಸುತ್ತಣ ಅದ್ಭುತಗಳನ್ನು ಕುತೂಹಲದ ಕಣ್ಣು ಕಂಡಾಗ ಅದಕ್ಕೊಂದು ಕಥೆಯನ್ನು ಕಟ್ಟುತ್ತದೆ. ಅದು ಜೀವಂತವಾಗಿ ಸಹಸ್ರಾರು ವರ್ಷ ಉಳಿದು ಬರುವಂತೆ ಮೌಖಿಕ ಸಂಪ್ರದಾಯ ಸಹಾಯ ಮಾಡುತ್ತದೆ ನಿಸರ್ಗದ ಅದ್ಭುತ ಉಳಿದಿರುವವರೆಗೆ ಈ ಐತಿಹ್ಯವು ಉಳಿದಿರುತ್ತದೆ. ಅದು ಮರೆಯಾದರೆ ಅದಕ್ಕೆ ಸಂಬಂಧಿಸಿದ ಐತಿಹ್ಯವೂ ಮರೆಯಾಗುತ್ತದೆ. ಕಟ್ಟಡಗಳು, ಮರಗಳು ಬೆಟ್ಟ-ಗುಡ್ಡಗಳು, ಗುಂಡಿ-ಗೊಟರುಗಳು, ಗುಡಿ-ಗೋಪುರಗಳು, ಕೋಟೆ-ಕೊತ್ತಲಗಳು, ಕೆರೆ-ಕಟ್ಟೆಗಳು, ಬಾವಿ-ಕೊಳಗಳು ಹೀಗೆ ನೂರಾರು ವಸ್ತುವಿಷಯಗಳಿಗೆ ಸ್ಥಳ ಸನ್ನಿವೇಶಗಳಿಗೆ ಸಂಬಂಧಿಸಿದ ಐತಿಹ್ಯಗಳು ಹೆಜ್ಜೆ ಹೆಜ್ಜೆಗೂ ದೊರೆಯುತ್ತವೆ. ಸುತ್ತಣ ಪ್ರಕೃತಿ ಒಂದು ತೆರೆದ ಪುಸ್ತಕವಾಗಿ ಐತಿಹ್ಯಗಳನ್ನು ತುಂಬಿಕೊಂಡಿರುತ್ತದೆ. ಈ ಐತಿಹ್ಯಗಳ ಹಿನ್ನೆಲೆಯಲ್ಲಿ ಎಂದೋ ಒಂದು ಕಾಲದಲ್ಲಿ ನಿಜವಾಗಿ ನೆಡೆದದ್ದು ಎಂಬ ಘಟನೆಯೊಂದು ಅಂಟಿಕೊಂಡಿರುತ್ತದೆ. ಅದು ನಿರ್ದಿಷ್ಟ ಉದ್ದೇಶಕ್ಕಾಗಿ ಹೇಳಲ್ಪಟ್ಟು ಜನರ ಆಸಕ್ತಿಯನ್ನು ಸದಾ ಎಚ್ಚರವಾಗಿಟ್ಟಿರುತ್ತದೆ

ಪ್ರಾಚೀನ ನಿರಕ್ಷರ ಕುಕ್ಷಿಯ ಗಮನಕ್ಕೆ ಬಾರದ ವಸ್ತುವೇ ಇಲ್ಲ ಅವನ್ನು ನೋಡಿದಾಗ ಮೂಡಿದ ಭಾವನೆಗಳು ಅವನ ಶುದ್ಧ ಸ್ವಚ್ಛಂದ ಕಲ್ಪನಾ ಪ್ರತಿಭೆಯ ಮೂಲಕ ಹೊರಬರುವಾಗ ಐತಿಹ್ಯ ಅಥವ ಪುರಾಣಗಳ ರೂಪ ಪಡೆಯುತ್ತವೆ. ಸೃಷ್ಟಿಯ ಬಗ್ಗೆ ಅದರ ಹಿಂದಿರುವ ಶಕ್ತಿಯ ಬಗ್ಗೆ, ಸ್ವರ್ಗ ಮೃತ್ಯ ಪಾತಾಳಗಳ ಬಗ್ಗೆ ಅವನು ಚಿಂತಿಸಿದ, ತನ್ನ ಕಲ್ಪನೆಗೆ ಹೊಳೆದಂತೆ ವಿವರಿಸಿದ ಹಿಂದೆ ನೆಡೆದ ಘಟನೆಗಳನ್ನು ಸಹ ಬಣ್ಣ ಕಟ್ಟಿ ಅಕ್ಕ ಪಕ್ಕದವರಿಗೆ ನಿರೂಪಿಸಿದ. ಅತ್ಯುಕ್ತಿ ಉತ್ಪ್ರೇಕ್ಷೆಗಳಿಂದ ಕೂಡಿದ ಕಾವ್ಯ ಶೈಲಿ ಅವನ ವ್ಯಾಖ್ಯಾನದ ಪ್ರಮುಖ ಲಕ್ಷಣವಾಯಿತು. ಅದೆಲ್ಲಾ ಉದ್ದೇಶ ಪೂರ್ವಕವಾಗಿ ಸಿದ್ಧವಾದದ್ದಲ್ಲ, ಅನೈಚ್ಛಿಕವಾಗಿ, ಲಹರಿ ಲಹರಿಯಾಗಿ ಹೊರ ಹೊಮ್ಮಿದ್ದು ನಡೆಯಿತೆಂದು ಹೇಳಲಾದ ಘಟನೆಗಳ ಮತ್ತು ಪುರಾಣಗಳ ಎಲ್ಲೆಗಟ್ಟನ್ನು ಕರಾರುವಕ್ಕಾಗಿ ನಿರ್ಧರಿಸುವುದು ಕಷ್ಟ. ವ್ಯಕ್ತಿಗಳಿಗೆ, ಸ್ಥಳಗಳಿಗೆ, ಘಟನೆಗಳಿಗೆ ಸಂಬಂಧಿಸಿದಂತೆ ಯಾವುದೋ ನಿರ್ದಿಷ್ಟ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕಥೆಗಳು ಐತಿಹ್ಯಗಳು. ಈ ಐತಿಹ್ಯಗಳಲ್ಲಿ ಎರಡು ಬಗೆ. ೧. ಸ್ಥಳೀಯ ಅಥವಾ ಪ್ರದೇಶಿಕ ಐತಿಹ್ಯ, ೨. ಪ್ರವಾಸೀ ಐತಿಹ್ಯ.

ಸ್ಥಳಿಯ ಐತಿಹ್ಯ ರೂಪದಲ್ಲಿ ಚಿಕ್ಕದು ಆಶಯಗಳು ಕಡಿಮೆ ಅವು ನಿರ್ದಿಷ್ಟ ಪ್ರದೇಶಕ್ಕೆ ನೇಮಿತಗೊಂಡಿರುತ್ತವೆ. ರಚನೆಗೆ ಸಂಬಂಧಿಸಿದಂತೆ ಅದು ಮುಖ್ಯವಾಗಿ ಘಟನಾ ಪ್ರಧಾನವಾದ ಕಥೆ, ಕೆಲವೊಮ್ಮೆ ಬಹಿಷ್ಕೃತರಿಗೆ ಸಂಬಂಧಿಸಿದ ಕಥೆಗಳಲ್ಲಿ ವ್ಯಕ್ತಿ ಚಿತ್ರಕ್ಕವಕಾಶವುಂಟು. ಅವುಗಳಲ್ಲಿ ಭಾವಾತಿರೇಕವಿರಬಹುದಾದರೂ ಅವು ಸುಖದಲ್ಲಿ ಕೊನೆಗೊಳ್ಳಲೇಬೇಕೆಂಬ ಕಡ್ಡಾಯವಿಲ್ಲ. ದುರಂತದ ಐತಿಹ್ಯಗಳೇ ಜಾಸ್ತಿ, ಬಲಿದಾನ ಮತ್ತು ಆಕಸ್ಮಿಕ ಮರಣಗಳು ಸಂಭವಿಸುತ್ತವೆ. ಇವುಗಳಲ್ಲಿ ನೀತಿ ಭೋದೆಗೂ ಸ್ಥಾನವುಂಟು. ಅವು ಆಸುಪಾಸಿನ ಪ್ರದೇಶದಲ್ಲಿ ಪರಂಪರಾಗತವಾಗಿ ಹಬ್ಬುತ್ತವೆ

ಮತ್ತು ಬದುಕುತ್ತವೆ. ತಾವು ಹುಟ್ಟಿಕೊಂಡ ಜಾಗದ ಅಸಾಧಾರಣ ಲಕ್ಷಣವನ್ನು ವಿವರಿಸುವುದೇ ಅವುಗಳ ಗುರಿ ಈ ದೃಷ್ಟಿಯಿಂದ ಅವು ಕಾರ್ಯಕಾರಣ ಸಂಬಂಧಿ ಕಥೆಗಳನ್ನು ಹೋಲುತ್ತವೆಂದಾಯಿತು. ಯಾವುದಾದರೂ ಕಾರಣಕ್ಕಾಗಿ ಆ ಲಕ್ಷಣಗಳು ಮರೆಯಾದರೆ ಆ ಐತಿಹ್ಯ ಅಗೋಚರವಾಗುತ್ತದೆ. ಕಥೆಗಳನ್ನು ಕೆದಕಿ ಬೆದಕಿ ನೋಡಿದಾಗ ಅನೇಕ ಐತಿಹಾಸಿಕಾಂಶಗಳು ಪ್ರಕಾಶಕ್ಕೆ ಬರುತ್ತವೆ. ಅವು ಪ್ರಚ್ಛನ್ನ ಇತಿಹಾಸಗಳೆಂದೂ ಹೇಳುವುದುಂಟು. ನಂದಿ ಅಥವ ಮಡಿಕೇರಿಯ ಟಿಪ್ಪು ಪ್ರಪಾತಗಳು ಚರಿತ್ರೆಕಾಣದ ಅನೇಕ ಸತ್ಯಾಂಶಗಳನ್ನು ಪಿಸುಗುಟ್ಟಬಹುದು. ಆದರೆ ಐತಿಹ್ಯಗಳು ಎಂದೆಂದಿಗೂ ಇತಿಹಾಸದ ಮಟ್ಟಕ್ಕೇರಲಾರವೆಂಬುದನ್ನು ಮರೆಯಲಾಗದು, ಗಣಿಯಲ್ಲಿ ಚಿನ್ನವಿದ್ದಂತೆ ಒಂದು ಐತಿಹ್ಯದಲ್ಲಿ ಚರಿತ್ರಾಂಶ ಮಿಗಿಲಾಗಿದ್ದರೆ, ಮತ್ತೊಂದರಲ್ಲಿ ಬಿಂದುರೂಪದಲ್ಲಿರಬಹುದು.

ಅನೇಕ ಐತಿಹ್ಯಗಳೂ ಇತಿಹಾಸದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಚನ್ನಪಟ್ಟಣ ಮತ್ತು ಮಳೂರುಗಳು ಸಾರಂಗಧರನ ಕಾಲಕ್ಕೆ ಪ್ರಸಿದ್ಧವಾದ ಪಟ್ಟಣಗಳಾಗಿದ್ದವು. ಚೆನ್ನಪಟ್ಟಣದ "ರಾಯಪುರಿ" ಸಕ್ಕರೆ, ಒಂದು ಕಾಲಕ್ಕೆ ಅತ್ಯಂತ ಶ್ರೇಷ್ಟವಾದ ಸಕ್ಕರೆ ಎನಿಸಿತ್ತು, ರಾಜೇಂದ್ರ ಚೋಳ ಶಿವರಾತ್ರೀಶ್ವರ ಮುನಿಯನ್ನು ಹುಡುಕಿಕೊಂಡು ಸುತ್ತಿಕೊಂಡು ಬರಬೇಕಾಗಿ ಬಂದುದರಿಂದ ಸುತ್ತೂರಾಯಿತು ರೇಣುಕರನ್ನು ನೋಡಲು ಅವನು ರಾಮನಗರದ ಬಳಿಯ ರೇವಣಸಿದ್ದೇಶ್ವರ ಗಿರಿಯನ್ನು ಕುದುರೆಯ ಮೇಲೆ ಕುಳಿತೇ ಹತ್ತಿದುದರಿಂದ ಕುದುರೆಯ ಗೊರಸಿನ ಗುರುತುಗಳು ಅಲ್ಲಾದುವು. ಮೇಕೆ ದಾಟಿನಲ್ಲಿ ಕಾವೇರಿ ಆಚೆಯ ಈಚೆಯ ಇಬ್ಬರು ಪಾಳೆಯಗಾರ ಮಕ್ಕಳು ಪ್ರಣಯ ಸಂಬಂಧವನ್ನಿಟ್ಟುಕೊಂಡು ಮೇಕೆದಾಟುವಷ್ಟು ಕಿರಿದಾದ ಪ್ರದೇಶದಲ್ಲಿ ಹರಿಯುವ ಕಾವೇರಿಯನ್ನು ದಾಟಿ ಹೋಗಿ ಮೇಕೆಯೊಂದು ಅವರ ಪ್ರೇಮ ಪತ್ರವನ್ನು ತಲುಪಿಸುತ್ತಿದುದರಿಂದ "ಮೇಕೆ ದಾಟು" ಎಂದು ಅಲ್ಲಿಗೆ ಹೆಸರಾಯಿತು. ಮಾಲಂಗಿ ಮಡುವಿನಲ್ಲಿ ಅಲವೇಲಮ್ಮ ಬೀಳುವಾಗ "ಮಾಲಂಗಿ ಮಡುವಾಗಿ, ತಲಕಾಡು ಮರುಳಾಗಿ ಮೈಸೂರು ಅರಸರಿಗೆ ಮಕ್ಕಳಾಗದಿರಲಿ" ಎಂದು ಶಪಿಸಿದುದರಿಂದ 'ಮಾಲಂಗಿ' ಮಡು, ಹಾಗೂ ತಲಕಾಡು ಮರಳುಗಳು ಜನರನ್ನು ಈಗಲೂ ಬೆರಗುಗೊಳಿಸುತ್ತಿವೆ. ಹೀಗೆ ಇತಿಹಾಸಜ್ಞರು ಕುತೂಹಲದಿಂದ ನೋಡಬೇಕಾದ ಸಾವಿರಾರು ಐತಿಹ್ಯಗಳು ಹೆಜ್ಜೆ ಹೆಜ್ಜೆಗೂ ಸಿಕ್ಕುತ್ತವೆ. ಕೋಲಾಟದ ಪದಗಳು, ಲಾವಣಿಗಳು ಅನೇಕ ಐತಿಹಾಸಿಕ ಪ್ರಸಂಗಗಳ ಮೇಲೆ ಬೆಳಕು ಚಲ್ಲುತ್ತವೆ.

ವಿವರಣಾತ್ಮಕ ಕಥೆಗಳು ಈ ದೃಷ್ಟಿಯಿಂದ ಐತಿಹ್ಯಗಳೇ. ನಿಸರ್ಗದ ವರ್ಣಮಯ ಶರೀರವೇ ಅವುಗಳ ಉಗಮ ಸ್ಥಾನವೂ ಆಗಿದೆ ಆದರೆ ಐತಿಹಾಸಿಕವೆನ್ನಬಹುದಾದ ಯಾವ ಅಂಶವೂ ಅವುಗಳಲ್ಲಿರುವುದಿಲ್ಲ. ಪಕ್ಷಿ, ಪ್ರಾಣಿ, ಆಕಾಶ, ನಕ್ಷತ್ರ, ಮಾನವ, ಮಳೆ, ಗಾಳಿ, ಹೀಗೆ ಚರಾಚರ ವಸ್ತುಗಳ ಗುಣ ಸ್ವಭಾವಗಳತ್ತ ನಮ್ಮ ದೃಷ್ಟಿಯನ್ನು ಸೆಳೆದು ಅದಕ್ಕೊಂದು ವಿವರಣೆಯನ್ನು ಒದಗಿಸುವುದು ಈ ವಿವರಣಾತ್ಮಕ ಕಥೆಯ ಉದ್ದೇಶ. ಒಮ್ಮೆ ಒಂದು ಕೋಗಿಲೆ ಸೋರೆಯ

ಹೂವನ್ನು ಸಂಗ್ರಹಿಸಿ ತನ್ನ ಚಿಕ್ಕವ್ವನ ಬಳಿ ಇಡುತ್ತಿತ್ತು. ಹೂವು ಕಡಿಮೆ ಯಾದಂತೆ ಅದಕ್ಕೆ ಭಾಸವಾಗುತ್ತಿತ್ತು. ಒಂದು ದಿನ ಹೂವನ್ನು ಅಳೆದುಕೊಟ್ಟು ಅನಂತರ ಪರೀಕ್ಷಿಸಿತ್ತು ಹೂವು ಕಡಿಮೆಯಾಗಿತ್ತು. ಚಿಕ್ಕವ್ವನ ಮೇಲೆ ಸಂಶಯ ಬಂದು ಉಪಾಯದಿಂದ ಬಾವಿಯ ಬಳಿಗೆ ಕರೆದೊಯ್ದು ತಳ್ಳಿ ಬಂದಿತು. ತಾನೇ ಹೂವನ್ನು ಸಂಗ್ರಹಿಸ ತೊಡಗಿದಾಗ ಮತ್ತೆ ಹೂವು ಕಡಿಮೆಯಾಗ ತೊಡಗಿತು. ಹೂವು ಬಾಡುವುದರಿಂದ ಹೀಗಾಗುತ್ತದೆ ಎಂದು ಬಗೆದ ಕೋಗಿಲೆ ಚಿಕ್ಕವ್ವನನ್ನು ಕಳೆದುಕೊಂಡು ದಃಖಿಸತೊಡಗಿತು, ಇಂದಿಗೂ "ಚಿಕವ್ವೋ... ಚಿಕವ್ವೋ..." ಎಂದೇ ಅದು ಕೂಗುತ್ತದೆ. ಚಿಕ್ಕವ್ವನಿಗಾಗಿ ಹಂಬಲಿಸುತ್ತದೆ. ಹೀಗೆ ಐತಿಹ್ಯದ ಧಾಟಿಯನ್ನು ದಾಟಿ ಕಟ್ಟುಕಥೆಯ ರಮ್ಯ ಚೌಕಟ್ಟಿನಲ್ಲಿ ಈ ಕಥೆ ಬೆಳೆದುನಿಂತಿದೆ, ಆದರೆ ಚಿಕ್ಕವ್ವನನ್ನು ಕಳೆದುಕೊಂಡ ದುಃಖದ ಛಾಯೆ ದುರುಂತದ ಗಾಂಭೀರ್ಯವನ್ನು ಕಥೆಗೆ ತಂದುಕೊಡುತ್ತದೆ. ಕಟ್ಟುಕಥೆ ಸುಖಾಂತವಾದದು. ದುರಂತ ಚಿತ್ರಗಳು ವಿಶೇಷವಾಗಿ ಇಲ್ಲಿ ತೋರುಬರುತ್ತವೆ ಹೀಗೆ ಐತಿಹ್ಯ ಮುಪ್ಪುರಿಗೊಂಡಿದೆ. ಕೋಲಾಟದ ಪದಗಳು, ಲಾವಣಿಗಳು ಅನೇಕ ಐತಿಹಾಸಿಕ ಪ್ರಸಂಗಗಳ ಮೇಲೆ ಬೆಳಕು ಚಲ್ಲುತ್ತಿವೆ. ಕನ್ನಡದಲ್ಲಿ ತರೀಕೆರೆಯ ಸರ್ಜಪ್ಪನಾಯಕ, ಸಿರಾರಂಗಪ್ಪನಾಯಕ, ಚಿತ್ರದುರ್ಗದ ಮದರಿನಾಯಕ, ಸಂಗೊಳ್ಳಿರಾಯಣ್ಣ, ಕಿತ್ತೂರು ಚನ್ನಮ್ಮ, ಬೂದಾಳು ಕುಮಾರಮಲ್ಲಿ, ಕೊಡಗಿನ ಲಿಂಗರಾಜಮ್ಮ ಇಂಥಹ ಲಾವಣಿಗಳು ಐತಿಹ್ಯಗಳಾಗಿವೆ. ಓಬವ್ವನಿಗೆ ಸಂಭಂದಿಸಿದ ಹಲವಾರು ಐತಿಹ್ಯಗಳಿದ್ದು ಅವುಗಳಲ್ಲಿ ಕೆಲವನ್ನು ಸಂಗ್ರಹಿಸಿ ಬರೆಯಲಾಗಿದೆ.

೧. ಓಬವ್ವನ ಕಿಂಡಿ : ರಂಜನೆ ನೀಡುವುದು ಐತಿಹ್ಯಗಳ ಲಕ್ಷಣವಲ್ಲ. "ಪ್ರವಾಸಿ ಹಾಗೂ ಸ್ಥಳೀಯ ಐತಿಹ್ಯಗಳ ನಡುವಣ ಭೇದ ತೀರಾ ತೆಳುವಾದದ್ದು. ಕೆಲವು ವೇಳೆ ಸ್ಥಳೀಯ ಐತಿಹ್ಯಗಳು ಪ್ರವಾಸ ಕೈಗೊಳ್ಳಬಹುದು. ಪ್ರವಾಸೀ ಐತಿಹ್ಯಗಳು ಸ್ಥಳೀಯ ಐತಿಹ್ಯಗಳಾಗಿ ಮಾರ್ಪಡಬಹುದು". ಇಲ್ಲಿ ಐತಿಹ್ಯಗಳು ಕೇವಲ ಪ್ರಸರಣ ಮಾಧ್ಯಮಗಳಲ್ಲ. ಸ್ಥಳೀಯವಾಗಿ ಇರುವ ಪ್ರತಿಭೆಗಳನ್ನು, ಅಲ್ಲಿನ ಕಥೆಗಳನ್ನು ಅನಾವರಣ ಮಾಡುತ್ತದೆ. ನಿಸರ್ಗದಲ್ಲಿ ನಡೆಯುವ ಮಾರ್ಪಾಡುಗಳಿಗೆಲ್ಲಾ ಮೂಲವನ್ನು ಹುಡುಕುವುದೇ ಮಾನವನ ಗುಣ. ಈ ಅನ್ವೇಷಣೆಯತ್ತ ಮುಖ ಮಾಡಿದಾಗ ಅದನ್ನು ತಣಿಸುವುದೇ ಐತಿಹ್ಯಗಳು. ಈ ಐತಿಹ್ಯಗಳ ಮಾಹಿತಿ ದೇಶದಿಂದ ದೇಶಕ್ಕೆ ಹೋಗುತ್ತವೆ. ಹಾಗೆಯೇ ವಲಸೆಯೂ ಬರುತ್ತವೆ. ಆಗ ಅವುಗಳ ಮಹತ್ವ ಹೆಚ್ಚಾಗುತ್ತದೆ. ಸ್ಥಳನಾಮಗಳಿಗೆ ಸಂಬಂಧಿಸಿದ ಐತಿಹ್ಯಗಳು ಯತಾರ್ಥವಲ್ಲದೆ, ಚಾರಿತ್ರಾಂಶಗಳನ್ನು ಒಳಗೊಂಡಿರುತ್ತವೆ. ಇದಕ್ಕೆ ನಿದರ್ಶನ "ಓಬವ್ವನ ಕಿಂಡಿ". ಐತಿಹ್ಯವಿದ್ದರೂ, ಶಿಷ್ಟಸಾಹಿತ್ಯದಲ್ಲಿ ಅಲ್ಪಸ್ವಲ್ಪವಾಗಿ ಕಂಡುಬರುವ ಓಬವ್ವನ ಬಗೆಗಿನ ಸಾಹಿತ್ಯದ ಉಲ್ಲೇಖಗಳನ್ನು ಕಂಡಾಗ ಸಹಸ್ರಾರು ವರ್ಷಗಳ ನಾಗರೀಕತೆಯುಳ್ಳ ನಮ್ಮ ಭಾರತ ದೇಶಕ್ಕೆ ಪರ್ಶಿಯನ್ನರೂ, ಗ್ರೀಕರು, ಕುಷಾಣರು, ಹೂಣರು, ಅರಬ್ಬರು, ಆಫ್ಘನ್ನರು, ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಆಂಗ್ಲರು ಮುಂತಾದವರು ಒಬ್ಬರಾದ ನಂತರ ಒಬ್ಬರು ದಾಳಿ ಮಾಡಿ ಅಧಿಪತ್ಯಗಳನ್ನು ಮಾಡಿ ಅವರ ದೃಷ್ಟಿಯಲ್ಲಿ ನಮ್ಮ

ದೇಶಕ್ಕೆ ನೈಜವಾದ ಚರಿತ್ರೆಯೇ ಇಲ್ಲದಾಯಿತು. ಏಕೆಂದರೆ ವಿದೇಶಿ ಜನಾಂಗಗಳು ಜನಾಂಗದ ಮಹಾನ್ ಚರಿತ್ರೆ ಕಣ್ಮುಂದೆಯಿದ್ದರು ಅದನ್ನು ಒಪ್ಪಿಕೊಳ್ಳುವ ಮನೋಭಾವನೆಯಿಲ್ಲದೇ ಕೀಳರಿಮೆಯಲ್ಲಿ ಸುಳ್ಳುಗಳ ಇತಿಹಾಸ ರಚಿಸಿದರು. ಅದನ್ನೇ ನಮ್ಮ ಇತಿಹಾಸಕಾರರು ನೈಜ ಚರಿತ್ರೆಯೆಂದೇ ಬಿಂಬಿಸುತ್ತಿರುವುದು ಎಷ್ಟರಮಟ್ಟಿಗೆ ಸತ್ಯ. ಚೋದ್ಯವೂ ಹೌದು. ಹಾಗಾಗಿ ವಿದೇಶಿ ವಿದ್ವಾಂಸರಿಂದ ಪ್ರಭಾವಿತರಾದ ಹಲವಾರು ವಿದ್ವಾಂಸರಿಗೆ ಅವರ ಉಲ್ಲೇಖಗಳೇ ಪ್ರಮುಖವಾದವು. ಹಾಗಾಗಿ ಸ್ಥಳೀಯ ಚರಿತ್ರೆಗಳು ಅವನತಿಯತ್ತ ಸಾಗತೊಡಗಿದವು. ಆದರೆ ಜಾಗೃತರಾದ ನಮ್ಮ ಜನಪದರು ಅವುಗಳ ಅವಸಾನವನ್ನು ತಡೆದರು. ನಮ್ಮ ಸೊಗಡಿನಲ್ಲಿ ಅವುಗಳನ್ನು ಸೃಷ್ಟಿಸ ರಚಿಸಿದರು. ಮೌಖಿಕವಾಗಿ ಒಬ್ಬರಿಂದ ಒಬ್ಬರಿಗೆ ಹರಡುತ್ತಾ ಸಾಗತೊಡಗಿದವು. ಅವೇ ಸ್ಥಳೀಯ ಐತಿಹ್ಯಗಳಾಗಿ, ಐತಿಹಾಸವನ್ನು ಸಾರತೊಡಗಿದವು. ಯಾರ ಮಾನ್ಯತೆಯ ಹಂಗಿಲ್ಲದೇ ಅಂದಿನಿಂದ ಇಂದಿನವರೆಗೂ ಸಾಂಸ್ಕೃತಿಕ ಕೊಂಡಿಯಾಗಿ ಓಬವ್ವನ ಇರುವನ್ನು ಸಾರುತ್ತಾ "ಓಬವ್ವನ ಕಿಂಡಿ" ನಿಂತಿದೆ. ದುರ್ಗದ ಕೋಟೆಯ ಪ್ರವಾಸಿಗರ ದೃಷ್ಟಿಗೆ ಮೊದಲು ದುರ್ಗದ ಇತಿಹಾಸವನ್ನು ಸೃಷ್ಟಿಸುವುದೇ ಈ ಕಿಂಡಿ.

ಒಬ್ಬನು ಮಾತ್ರವೇ ತೆವಳಿ ಕೋಟೆಯೊಳಗೆ ನುಸುಳುವಷ್ಟು ಇರುವ ತಾವು, ಕಳ್ಳಗಂಡಿ ಇಂದು ಜಗದ್ವಿಖ್ಯಾತವಾಗಿ ಓಬವ್ವನ ಕಿಂಡಿ ಎಂದೇ ಮುಜರಾಯಿ ಇಲಾಖೆಯಿಂದ ಮುದ್ರೆಯೊತ್ತಿಸಿಕೊಂಡಿದೆ. ಚಿತ್ರದುರ್ಗವನ್ನು ಶತ್ರುಗಳಿಂದ ಪಾರು ಮಾಡಿದ ಓಬವ್ವೆಯ ಬಗ್ಗೆ ಪ್ರಜೆಗಳೂ ರಾಜ ಮನೆತನದವರೂ, ಗುರುಜಂಗಮರೂ ಹೊಗಳಿ ಹರಸಿದುದು ಸಹಜವೇ. ರಾಜ ವೀರ ಮದಕರಿನಾಯಕನು ಧರ್ಮಾಧಿ ಪತಿಗಳಿಂದಲೂ ಪುರಪ್ರಮುಖರಿಂದಲೂ ಕೂಡಿದ ರಾಜಸಭೆಯಲ್ಲಿ ಓಬವ್ವೆಯ ಶೌರ್ಯ ಸಾಹಸಗಳನ್ನು ಕೊಂಡಾಡಿ, ಅತ್ಯಂತ ಸಂತೋಷದಿಂದ 'ಏನುಬೇಕು ಕೇಳು' ಎನ್ನಲು, 'ತನಗೆ ಸಂಸ್ಥಾನದ ದೊರೆಗಳು ಕೊಟ್ಟ ಸಮಸ್ಥವೂ ಇದೆ. ಏನೂ ಬೇಡ ತನ್ನವರಿಗಾಗಿ ಗೌರವದಿಂದ ವೀಳ್ಯ ಬೇಡಿದ ಹಿನ್ನೆಲೆಯಲ್ಲಿ ಸಂತೃಪ್ತನಾದ ನಾಯಕ ಆಕೆಯ ಹೆಸರು ಶಾಶ್ವತವಾಗಿ ಉಳಿಯಲೆಂದು ಶಖ ೧೬೯೧ನೇ ವ್ಯಯ ಸಂ೧ ಭಾದ್ರಪದ ಮಾಸದಲ್ಲಿ ಈಕೆಯ ಹೆಸರಿನಲ್ಲಿ ವನಿತೆ ಕಿಂಡಿ ಬಾಗಿಲಸುತ್ತ ಕೋಟೆ ಕೊತ್ತಲ ಸಹಹೊಸದಾಗಿ ಕಟ್ಟಿಸಿದರು. ಈ ಓಬವ್ವ ಪ್ರತಿಮೆಯನ್ನು ಕಲ್ಲಿನಲ್ಲಿ ಕೆತ್ತಿಸಿ ಆ ಕಿಂಡಿಯ ಹತ್ತಿರ ಕೋಟೆಯಲ್ಲಿ ಇರಿಸಲು ಅಪ್ಪಣೆ ಮಾಡಿರುತ್ತಾರೆ..

ಆದರೆ ಈ ವನಕೆ ಕಿಂಡಿ ಬಾಗಿಲು, ಸುತ್ತಿನ ಕೋಟೆ ಎಂದರೆ ಒನಕೆ ಕಿಂಡಿ ಬಾಗಿಲನ್ನು ಹೊಂದಿರುವ ಹನುಮನ ಸುತ್ತಿನ ಕೋಟೆ ಅಥವ ಒನಕೆ ಕಿಂಡಿ ಎಂಬುದು ಪಾಳೆಯಗಾರರು ಅನುಸರಿಸುತ್ತಿದ್ದ ಸಂಪ್ರದಾಯವೂ ಇರಬಹುದು. ಹಾಗೂ ಓಬವ್ವೆಯ ಶಿಲಾವಿಗ್ರಹವು ಆ ಸ್ಥಳದಲ್ಲಿ ಇಲ್ಲದೆ ಕೇವಲ ಪಾದುಕೆಗಳು ಮಾತ್ರ ದೊರೆತಿದ್ದು ಅವು ಪ್ರಸ್ತುತ ಆಕೆಗಾಗಿ ನಿರ್ಮಿಸಿರುವ ದೇವಾಲಯದಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದಾರೆ. ದಾಳಿಯ ಸಂದರ್ಭದಲ್ಲಿ ಮುಸಲ್ಮಾನರಿಗೆ ಹೆದರಿ

ಓಬವ್ವನ ಪ್ರತಿಮೆಯನ್ನು ಮುಚ್ಚಿಡಲಾಗಿದ್ದು ಕಾಲಾ ನಂತರದಲ್ಲಿ ಅದು ಲಭ್ಯವಿಲ್ಲದಂತಾಗಿದೆ ಎಂದು ತಮ್ಮ ಪೂರ್ವಜರು ಹೇಳುತ್ತಿದ್ದುದಾಗಿ ವಂಶಸ್ಥರೆಂದು ಗುರುತಿಸಿಕೊಡಿರುವ ಸೋಮಶೇಖರವರು ಹೇಳಿದರು. ಅವರ ವಂಶಿಕರು ಚಿತ್ರದುರ್ಗದ ಓಬವ್ವನ ಘಟನೆಯನ್ನು ತಿಳಿಸುವಲ್ಲಿ ಅಧಿಕೃತದಾಖಲೆಯೆನಿಸಿರುವ 'ಚಿತ್ರದುರ್ಗದ ಬಖೈರು" ದಾಖಲಿಸಿರುವಂತೆ ಹೈದರಾಲಿಯ ದಂಡು ಚಿತ್ರದುರ್ಗದ ಮೇಲೆ ಆಕ್ರಮಣಕ್ಕೆ ಬಂದಾಗ ಪರಿಸರದ ಹೆಬ್ಬುಲಿ ಕಲ್ಲು, ಚೋಳ ಘಟ್ಟದ ಮುರುಗೇಮಠ ಮತ್ತು ತಮಟಕಲ್ಲು ಹಿಡಿದು ದಕ್ಷಿಣಕ್ಕೆ ಬುದ್ಧಿವಂತನ ಮರಡಿ ಮತ್ತು ಮಳಲಿಗುಡ್ಡದವರೆಗೂ ಆವರಿಸಿ ದುರ್ಗವನ್ನು ಆವರಸಿತ್ತು. ಆವರಿಸಿದ್ದರೂ ಅವರಿಗೆ ಕಳ್ಳಗಿಂಡಿಯು ಅವರಿಗೆ ಕಾಣದೆ, ಆಕ್ರಮಣಕ್ಕೆ ಹೊರಸುತ್ತಿನಂತೆ ಕಾಣದೆ ಕೇವಲ ಗೊತ್ತಿರುವವರು ಮಾತ್ರ ಹೋಗುವಂಥಹ ಕಿಂಡಿಯಾಗಿತ್ತು. ಈ ಒನಕೆ ಕಿಂಡಿ ಬಾಗಿಲು ಕಲ್ಲು ಪೊಟರೆಯಾಗಿದೆ. ಪ್ರವಾಸಿಗರನ್ನು ತನ್ನೆಡೆಗೆ ಸೆಳೆಯುವ ಸೂಜಿಗಲ್ಲಾಗಿದೆ. ಈಕೆಯ ಪೀಳಿಗೆಯವರು 'ಒನಕೆ ಕಿಂಡಿ'ಯನ್ನು ಎಡೆಬಿಡದೆ ತಮ್ಮ ಆರಾಧನಾ ನೆಲೆಯಾಗಿ ಮಾಡಿಕೊಂಡಿದ್ದಾರೆ. ಜನರು, ಪ್ರವಾಸಿಗರು ಈ ಎಡೆಯನ್ನು ಪ್ರೀತಿ ಗೌರವ ಪೂರ್ವಕದಿಂದ ಒಪ್ಪಿ ಅಭಿಮಾನದಿಂದ ವೀಕ್ಷಿಸುತ್ತಾರೆ.ಆದರೆ ಸಾಹಸ ತೋರುವ ಅವಳ ಒನಕೆ ಕಿಂಡಿ ಐತಿಹ್ಯ ಮರೆಯಾದ ವೀರನಾರಿ ಓಬವ್ವನನ್ನು ನಾಡ ಜನತೆಗೆ ಸದಾ ನೆನಪಿಸುತ್ತಿದೆ.

೨. **ಓಬವ್ವನ ಸಮಾಧಿ** : ಚಾರಿತ್ರಿಕ ಸತ್ಯವನ್ನು ಹಲವಾರು ಭೌಗೋಳಿಕ ಸಾಕ್ಷಿಗಳು ಸಮರ್ಥಿಸುತ್ತವೆಂಬುದಕ್ಕೆ ಈ ಸಮಾಧಿಗಳು ಉದಾಹರಣೆಯಾಗುತ್ತಿವೆ. ಪಿತೃಪೂಜೆಗೆ ಪ್ರಮುಖ ತಾಣಗಳು ಸಮಾದಿಗಳು. ಸಮಾಧಿಪೂಜೆಯು ಮನುಷ್ಯನ ಮನಸ್ಸಿನ ಸ್ವಭಾವ ಕ್ರಿಯೆಯೂ ಹೌದು. ಅದು ಸಂಸ್ಕೃತಿಯ ಹಾಗೂ ಬುದುಕಿನ ತಿರುಳಾದ ನಂಬಿಕೆಯೂ ಇವರದು. ಮೃತರ ಆತ್ಮ ಮರದಲ್ಲಿ ನೆಲಸಲಿ, ಅದು ಆರೂಪದಲ್ಲಿ ಸದಾ ಕಾಣಿಸುತ್ತಿರಲೆಂಬ ದೃಷ್ಟಿಯಿಂದ ನಮ್ಮ ದೇಶದಲ್ಲಿ ಸಮಾಧಿಯ ಬಳಿ ಮರ ನೆಡುವುದುಂಟು. ಪ್ರೇತಗಳು ಸ್ಮಶಾನ ಬಿಟ್ಟು ಬರದಿರಲೆಂಬ ಕಾರಣಕ್ಕಾಗಿ ಅಲ್ಲಿಯೇ ತೋಪು ಬೆಳೆಸುವುದೂ ಉಂಟು. ಆತ್ಮಗಳಲ್ಲಿ ನಂಬಿಕೆಯಿಟ್ಟು ಮಾನವ ಸತ್ತವರ ನೆನಪಿಗೆ ಪಿತೃಪೂಜೆ ಮತ್ತು ಸಮಾಧಿ ಪೂಜೆಗಳನ್ನು ಮಾಡತೊಡಗಿದ. ಇದರಿಂದ ಸತ್ತವರನ್ನು ಮರೆಯದಂತೆ ವಾರ್ಷಿಕ ಪೂಜೆಗಳನ್ನೂ ಮಾಡುತ್ತಾ ಬಂದ. ಅಂತೆಯೇ ಅಂದಿನಿಂದ ಇಂದಿನವರೆಗೂ ಓಬವ್ವನ ವಂಶೀಕರೆಂದುಕೊಂಡವರು ವರ್ಷದ ಶಾಲಿವಾಹನ ಶಕೆಗೆ ಅನುಗುಣವಾಗಿ ನವಂಬರ್ ೧೧ ರಂದು ಸಮಾಧಿ ಪೂಜೆಯನ್ನು ಬಂದು ಬಳಗದವರೆಲ್ಲರೂ ಸೇರಿಕೊಂಡು ಮಾಡುತ್ತಾ ಬಂದಿದ್ದಾರೆ.

ರಾಜಪುರಸ್ಕಾರ ಪ್ರಜೆಗಳ ಅಪಾರ ಗೌರವಗಳನ್ನು ಪಡೆದು ಕೆಲವು ದಿವಸಗಳ ನಂತರ ಓಬವ್ವೆಯ ದೈನಂದಿನ ಜೀವನದಲ್ಲಿ ಹಲವಾರು ಮಾರ್ಪಾಡುಗಳಾಗುತ್ತವೆ. ಬಹುಶಃ ತನ್ನ ಸ್ವಂತ ಕೈಯಿಂದಲೇ ಅಸಂಖ್ಯಾತ ಸೈನಿಕರು ಮರಣ ಹೊಂದಿದ್ದು, ಆದೃಶ್ಯ ಆಕೆಯ ಮೇಲೆ ಬಹಳ

ಪರಿಣಾಮ ಬೀರಿರಬಹುದು. ಅಸಂಖ್ಯಾತ ವಿಧವೆಯರ ಮುಖ, ಅನಾಥರಾದ ಮಕ್ಕಳ ಕಲ್ಪನೆಯಿಂದ ಸಾಧ್ವಿ ಓಬವ್ವ ಮಂಕಾದಳು, ಮೌನಿಯಾದಳು ನಿರುತ್ಸಾಹಿಯಾದಳು, ಆ ಅವಧಿಯಲ್ಲಿಯೇ ಒಬ್ಬ ಮಗನನ್ನು ಪಡೆದಳು. ಅವನಿಗೆ ಆನೆಪ್ಪ ಎಂಬ ನಾಮಧೇಯವನ್ನು ಇಡಲಾಗಿರುತ್ತದೆ.

ತನ್ನ ಸಾಹಸಕ್ಕಾಗಿ ದುರ್ಗದ ಅರಸನಿಂದ ಪುರಸ್ಕೃತಳಾದ ಓಬವ್ವೆಯ ಸಾವಿನ ತರುವಾಯ ಆಕೆಯನ್ನು ತಣ್ಣೀರು ದೋಣಿಯ ಎದುರು ಅಂದರೆ ಮದ್ದಹನುಮಪ್ಪನನ್ನು ವಿವಾಹವಾದ ಬಳಿಕ ಓಬವ್ವಳ ದಾಂಪತ್ಯ ಜೀವನ ಪ್ರಾರಂಭಿಸಿದ ಮನೆಯೆಂದು ತೋರಿಸಲ್ಪಡುವ ಕಲ್ಲಿನ ಗುಹೆಯಂತಿರುವ ಸ್ಥಳದ ಪಕ್ಕದಲ್ಲಿಯೇ ಸ್ವಲ್ಪ ಎತ್ತರವಾದ ಸ್ಥಳವಿದ್ದು ಇಲ್ಲಿ ಸಮಾದಿ ಮಾಡಲಾಗಿದೆ ಎನ್ನಲಾಗಿದ್ದು, ಕೈಫಿಯತ್‌ನಲ್ಲಿ ಇದರ ಬಗ್ಗೆ ಉಲ್ಲೇಖವಿಲ್ಲ. ಸಮಾದಿಯನ್ನು ನಿರ್ಮಿಸಿ ಅದರ ಮೇಲೆ ಕಲ್ಲು ಮಂಟಪವನ್ನು ನಿರ್ಮಿಸಲಾಗಿತ್ತು ಎಂದು ಆಕೆಯ ವಂಶಜರು ಹೇಳಿರುವುದಕ್ಕೆ ಪೂರಕವಾಗಿ ಕಲ್ಲು ಮಂಟಪ ಕುಸಿದಿದ್ದು ಕಲ್ಲುಗಳು ಅದೇ ಆಕಾರದಲ್ಲಿಯೇ ಅಲ್ಲಿಯೇ ಬಿದ್ದಿವೆ. ಈಕೆಯ ವಂಶಜರು ಪ್ರತೀ ವರ್ಷ ಶಾಲಿವಾಹನ ಶಕೆಗೆ ಅನುಗುಣವಾಗಿ ನವಂಬರ್ ೧೧ರಂದು ಸಮಾದಿ ಪೂಜೆಯನ್ನು ಯಥಾವಿಧಿಯಂತೆ ನೆರವೇರಿಸುತ್ತಾರೆ. ಆಚರಿಸಿಕೊಂಡು ಬರುತ್ತಿದ್ದಾರೆ. ಅಂದಿನ ದಿನ ಓಬವ್ವನ ಸಂಬಂಧಿಕರೆಂದೇ ಗುರುತಿಸಿಕೊಂಡಿರುವವರ ಸಂಬಂಧಿಕರಲ್ಲಾ ಚಿತ್ರದುರ್ಗ ಜಿಲ್ಲೆಯಾದ್ಯಂತ ಸೊಂಡೆಕೆರೆ, ದುಮ್ಮಿ, ತಮಟಕಲ್ಲು, ಪಿಳ್ಳೆಕೆರೆನಹಳ್ಳಿ, ಕಸವನಹಳ್ಳಿ, ಅತ್ತಿಗೆರೆ, ಸಜ್ಜನಕೆರೆ, ಸಾಣಿಕೆರೆ ಮೊದಲಾದ ಗ್ರಾಮಗಳಲ್ಲಿರುವ ಕಹಳೆಯವರೆಲ್ಲಾ ಒಂದುಗೂಡಿ ಮನೆಯಿಂದಲೇ ಬರುತ್ತಾ ಸಿಹಿಖಾದ್ಯಗಳು ಮತ್ತು ಹಬ್ಬದ ಅಡುಗೆಯನ್ನು ಮಾಡಿಕೊಂಡು ಪೂಜಾ ಸಾಮಗ್ರಿಗಳೊಂದಿಗೆ ಎಲ್ಲರೂ ಒಂದೆಡೆ ಸೇರಿ ಅಲ್ಲಿಂದ ಬೆಟ್ಟದಲ್ಲಿರುವ ಓಬವ್ವನ ಸಮಾದಿಯ ಬಳಿ ಸೇರುತ್ತಾರೆ. ಚಿತ್ರದುರ್ಗದ ಛಲವಾದಿ ಪೀಠದ ಬಸವನಾಗಿ ದೇವ ಅವರು ದುರ್ಗದ ಜಿಲ್ಲಾಡಳಿತಕ್ಕೆ ಮೊದಲೇ ಓಬವ್ವನ ಸಮಾದಿ ಪೂಜೆ ಕಾರ್ಯಕ್ರಮದ ಬಗೆ ಮನವಿ ನೀಡಿರುತ್ತಾರೆ. ಹಾಗಾಗಿ ಅಂದು ಜಿಲಾಡಳಿತವು ಸಜ್ಜಾಗಿ ಕೋಟೆಯಬಳಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿದ್ದು ಓಬವ್ವನ ಸಮಾದಿ ಪೂಜೆಯ ಬ್ಯಾನರನ್ನು ಕೋಟೆಯ ಮುಂಬಾಗದಲ್ಲಿ ಕಟ್ಟಿರುತ್ತಾರೆ. ನಂತರ ನೆರೆದ ಬಂಧು-ಬಾಂಧವರು ಸಮಾದಿಯ ಬಳಿ ಯಥಾ ರೀತಿಯ ಪೂಜಾ ವಿಧಾನಗಳನ್ನು ನೆರವೇರಿಸಿ ಪರಸ್ಪರ ಸಿಹಿ ಹಂಚಿಕೊಂಡು ಸಂಭ್ರಮಪಡುತ್ತಾರೆ. ಅಂದ ಹಾಗೆ ಸಮಾದಿಯನ್ನು ಓಬವ್ವನ ಐತಿಹ್ಯವಾಗಿ ಆಕೆಯ ವಂಶಜರೆನಿಸಿಕೊಂಡವರು ಗುರುತಿಸಿಕೊಂಡಿದ್ದು ಈ ಪೂಜೆಯನ್ನು ಮನೆಯಲ್ಲಿ ನೆಡೆಸುವ ಸಮಾರಂಭದಂತೆ ಆಚರಿಸುತ್ತಾರೆ. ಈ ಸಮಾದಿಯನ್ನು ಯಾರೂ ಅಧಿಕೃತವಾಗಿ ಗುರುತಿಸಿಲ್ಲದಿದ್ದರೂ ತಮ್ಮ ಪೂರ್ವಜರು ಬಂದು ಓಬವ್ವನ ಹೆಸರಿನಲ್ಲಿ ಹಾಲೆರೆಯುತ್ತಿದ್ದ ಸ್ಥಳ ಇದಾಗಿದ್ದುದರಿಂದ ಆಕೆಯ ವಂಶಸ್ಥರು ಇಂದಿಗೂ ಪೂಜಿಸುತ್ತಿರುವುದಾಗಿ ತಿಳಿಸಿದರು.

೩. ಓಬವ್ವನ ದೇವಸ್ಥಾನ : ಕರ್ನಾಟಕ ಇತಿಹಾಸದಲ್ಲಿ ಚಿತ್ರದುರ್ಗ ಜಿಲ್ಲೆಗೆ ವಿಶೇಷವಾದ ಸ್ಥಾನವಿದೆ. ಐತಿಹಾಸಿಕವಾಗಿ ರಾಷ್ಟ್ರಕೂಟರಿಂದ ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ಮೌರ್ಯರು,

ಶಾತವಾಹನರು, ವಿಜಯನಗರದ ಅರಸರು, ಚಿತ್ರದುರ್ಗದ ಪಾಳೇಗಾರರು, ಇತಿಹಾಸದಿಂದ ಶ್ರೀಮಂತವಾಗಿರುವ ಪ್ರಸ್ತುತ ಪ್ರದೇಶದಲ್ಲಿ ಈವರೆಗೆ ಅನೇಕ ಹಿರಿಯ ಸಂಶೋಧಕರು, ವಿದ್ವಾಂಸರು, ಪುರಾತತ್ವ ಶಾಸ್ತ್ರಜ್ಞರು, ಇತಿಹಾಸ ಆಸಕ್ತರು, ಯುವಸಂಶೋಧಕರು, ಹೆಚ್ಚಿನ ಅಧ್ಯಯನ ನಡೆಸಿ, ಈ ಭಾಗದ ಐತಿಹಾಸಿಕ ಮಹತ್ವವನ್ನು ತಿಳಿಯಪಡಿಸಿದ್ದಾರೆ. ಇವರುಗಳ ಅವಿರತ ಪ್ರಯತ್ನದ ಫಲವಾಗಿ ಪ್ರಸ್ತುತ ಪ್ರದೇಶವು ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲದೆ ಭಾರತದ ಇತಿಹಾಸದಲ್ಲೇ ವಿಭಿನ್ನವಾಗಿ ಗುರುತಿಸಿಕೊಂಡಿದೆ. ಆದರೂ ಪ್ರಸ್ತುತ ಪ್ರದೇಶದ ದೇವಾಲಯಗಳನ್ನು ಕುರಿತ ಅಧ್ಯಯನ ಕಡಿಮೆ ಎನ್ನಬಹುದು ಇತ್ತೀಚಿನ ಸಂಶೋಧಕರುಗಳು ಕೆಲವು ದೇವಾಲಯಗಳನ್ನು ಕುರಿತು ಅಧ್ಯಯನ ಮಾಡಿ ಲೇಖನಗಳಲ್ಲಿ ಕೃತಿಗಳಲ್ಲಿ ಪ್ರಕಟಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ವಿವೇಚಿಸಿದಾಗ ಓಬವ್ವನ ದೇವಸ್ಥಾನ ಯಾವ ಐತಿಹಾಸಿಕ ಮಹತ್ವ ಪಡೆದಿರುವುದಿಲ್ಲ. ಬಹುಶಃ ಓಬವ್ವೆಯ ಸಾಹಸಗಾಥೆಯನ್ನು ತಿಳಿದ ರಾಜಾಮದಕರಿನಾಯಕರವರು ಓಬವ್ವ ಕೇಳಿದ ಎಲ್ಲಾ ಬೇಡಿಕೆಯನ್ನು ಈಡೇರಿಸಿದುದಲ್ಲದೆ ಆಕೆಯ ಪ್ರತಿಮೆಯನ್ನು ನಿಲ್ಲಿಸಿರುವುದು ಅವಳ ವಂಶಜರ ಹೇಳಿಕೆಯ ಪ್ರಕಾರ ತಿಳಿದಿದೆ. ಹಾಗೆಯೇ ಪಾದುಕೆಗಳೆಂದು ದೇವಸ್ಥಾನದಲ್ಲಿ ಕಲ್ಲಿನಿಂದ ಕೊರೆದಂಥಹ ಪಾದುಕೆಗಳನ್ನು ಓಬವ್ವೆಯ ವಿಗ್ರಹದ ಮುಂಭಾಗದಲ್ಲಿ ಪ್ರತಿಷ್ಠಾಪಿಸಿದ್ದಾರೆ. ವಿಗ್ರಹವನ್ನು ಕೆತ್ತಿಸಿದ ರಾಜಾ ಮದಕರಿನಾಯಕ ತಾನೇ ಸ್ವಪ್ರೇರಿತನಾಗಿ ದೇವಸ್ಥಾನವನ್ನು ನಿರ್ಮಾಣ ಮಾಡುತ್ತಿದ್ದನೋ ಏನೋ, ದುರದೃಷ್ಟವಶಾತ್ ಚಿತ್ರದುರ್ಗವು ಹೈದರನ ಪಾಲಾಗಿ ಓಬವ್ವನಿಗೆ ಒಂದು ದೇವಸ್ಥಾನವು ಇಲ್ಲದೇ ಹೋಯಿತು. ಆದರೆ ಆಕೆ ತಾನು ಕುಲದೇವತೆಯಾಗಿ ತನ್ನ ಮಂದಲ ವಂಶದವರಿಗೆ (ಓಬವ್ವನ ವಂಶಸ್ಥರು) ನಾಯಕರು ಶುಭ ವೀಳ್ಯೆ ನೀಡಬೇಕೆಂದು ಕೋರಿ ಅದರಂತೆ ಮಂದಲ ವಂಶದವರಿಗೆ ವೀಳ್ಯೆ ಸಲ್ಲುತ್ತಿದ್ದು, ವಂಶದವರೆಲ್ಲಾ ಸೇರಿ ವೀರವನಿತೆ ಒನಕೆ ಓಬವ್ವನ ದೇವಸ್ಥಾನವನ್ನು ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದಾರೆ. ಇದು ಮುಂದಿನ ಪೀಳಿಗೆಗೆ ಓಬವ್ವನ ಐತಿಹ್ಯವಾಗಬಹುದು ಎಂಬುದೇ ಅವರ ಆಶಯ. ವಂಶೀಕರೆಲ್ಲಾ ಆಕೆಯನ್ನೇ ತಮ್ಮ ಕುಲದೇವತೆಯನ್ನಾಗಿ ಆರಾಧಿಸುತ್ತಿದ್ದಾರೆ. ಆಕೆಯ ಉತ್ಸವಗಳನ್ನು ದುರ್ಗದ ಜನತೆಯ ಸಹಯೋಗದಲ್ಲಿ ನೆಡೆಸುತ್ತಿದ್ದಾರೆ. ದೇವಸ್ಥಾನದಲ್ಲಿ ಓಬವ್ವನ ಸಹೋದರಿ ವರಸೆಯವರು ಮೊದಲು ಪೂಜೆ ಸಲ್ಲಿಸುತ್ತಿದ್ದು ನಂತರ ವಂಶೀಕರು ಪೂಜೆ ನಡೆಸುತ್ತಿದ್ದಾರೆ. ಓಬವ್ವನನ್ನು ಕೇವಲ ವೀರಮಹಿಳೆಯಾಗಿ ಕಾಣದೆ ಆಕೆಯನ್ನು ತಮ್ಮ ಜಾತಿಯ ವಂಶದ ಮನೆದೇವರ ಸ್ಥಾನದಲ್ಲಿಟ್ಟು ಪೂಜಿಸುತ್ತಿದ್ದಾರೆ. ತಮ್ಮೆಲ್ಲಾ ಹರಕೆ, ಕೋರಿಕೆಗಳ ಆದ್ಯ ತಾಣವನ್ನಾಗಿಸಿಕೊಂಡಿದ್ದಾರೆ. ತಮ್ಮ ಕೈಲಾದ ಮಟ್ಟಿಗೆ, ಸ್ಥಳೀಯ ಶಾಸಕರ, ಜನಪ್ರತಿನಿಧಿಗಳ ಸಹಕಾರದೊಂದಿಗೆ ಪುಟ್ಟ ದೇವಾಲಯವನ್ನು ನಿರ್ಮಿಸಿಕೊಂಡಿದ್ದಾರೆ. ಅದು ಇಂದು ಯಾವುದೇ ಐತಿಹಾಸಿಕ ದೇವಾಲಯಗಳ ಸಾಲಿಗೆ ಸೇರದಿದ್ದರೂ, ಮುಂದಿನ ಪೀಳಿಗೆಗೆ, ಇತಿಹಾಸಕಾರರಿಗೆ ಮುಂದೊಂದು ದಿನ ಇದೇ ಐತಿಹಾಸಿಕತೆ ಅನಿಸಬಹುದು. ಇತಿಹಾಸದ ಚೌಕಟ್ಟಿನಲ್ಲಿ ಬರದಿದ್ದರೇನಂತೆ.

ಜನಪದರ ಜೀವನದಲ್ಲಿ ಹಾಸುಹೊಕ್ಕಿರುವ ಓಬವ್ವ ಅವರ ಭಾವನೆಗಳಲ್ಲಿ ಆರಾಧ್ಯ ದೈವವಾಗಿದ್ದಾಳೆ. "ಚರಿತ್ರೆ ಎಂದರೆ ಗೋರಿಗಳ ದಿಬ್ಬ ಅಲ್ಲ. ರಾಜರೂ, ರಾಜವಂಶಗಳೂ ಹುಟ್ಟಿಸತ್ತ ತಾರೀಖುಗಳ ಪಟ್ಟಿ ಅಲ್ಲ. ಯುದ್ದಗಳು, ಆಘಾತಗಳು, ಕಡಿದುಬಿದ್ದ ತಲೆಗಳ ಲೆಕ್ಕವನ್ನು ಕಂಠಪಾಠ ಮಾಡಿ ಹೇಳುವ ಪೋಸ್ಟ್‌ಮಾರ್ಟ್ ವರದಿ ಅಲ್ಲ. ಚರಿತ್ರೆ ಎನ್ನುವುದು ವಿದ್ಯಾರ್ಥಿಗಳ ಅಂಕಗಳಿಗಾಗಿ, ರ್‍ಯಾಂಕ್‌ಗಳಿಗಾಗಿ ಓದಬೇಕಾದ ಸಬ್ಜೆಕ್ಟ್ ಅಲ್ಲ. ಎಲ್ಲಾ ಪ್ರಜೆಗಳಿಗೂ ಸಂಬಂಧಿಸಿರುವ, ಜೀವನದುದ್ದಕ್ಕೂ ಪ್ರತಿಯೊಬ್ಬರೂ ಗುರುತಿಟ್ಟುಕೊಳ್ಳಬೇಕಾದ ಸಂಗತಿ. ಚರಿತ್ರೆಯನ್ನು ತಿಳಿದುಕೊಳ್ಳುವುದೆಂದರೆ ನಮ್ಮ ಪೂರ್ವಜರನ್ನು ಕುರಿತು, ಅವರನ್ನು ರೂಪಿಸಿದ ಆಶಯಗಳನ್ನು, ಅವರನ್ನು ಪ್ರೇರೇಪಿಸಿದ ಪ್ರಭಾವಗಳನ್ನು, ಅವರು ಪಟ್ಟ ಕಷ್ಟಕೋಟಲೆಗಳನ್ನು, ಸಾಧಿಸಿದ ಗೆಲುವು, ಅನುಭವಿಸಿದ ಸೋಲುಗಳು, ಪ್ರತಿಕೂಲ ಪರಿಸ್ಥಿತಿಯಲ್ಲಿ ನಡೆಸಿದ ಹೋರಾಟಗಳನ್ನು ಕುರಿತು ಕನಿಷ್ಠ ಜ್ಞಾನವನ್ನು ಪಡೆಯುವುದೇ ಆಗಿದೆ"[೫] ಅಡಿಗಡಿಗೆ ದುರಾಕ್ರಮಗಳಿಗೆ, ಆಡಳಿತಗಾರರ ನಿರಾದರಣೆಗೆ, ದಾಳಿಗಳಿಗೆ ನಮ್ಮವರು ಬಲಿಯಾಗುತ್ತಿದ್ದರೂ ನಮ್ಮ ಪೂರ್ವಜರು ತಮ್ಮ ರಕ್ತಧಾರೆ ಎರೆಯುತ್ತಾ, ಕಷ್ಟನಷ್ಟಗಳನ್ನು ಭರಿಸುತ್ತಾ ನಮ್ಮ ಈ ಸಂಸ್ಕೃತಿಯನ್ನು, ಅಸ್ತಿತ್ವವನ್ನು ಕಾಪಾಡಿಕೊಂಡು ಬಂದ ನಮ್ಮ ಹಿರಿಯರನ್ನು ನೆನೆಸಿಕೊಂಡರೆ ಕೃತಜ್ಞತೆಯಿಂದ ಹೃದಯ ಬಾಗುತ್ತದೆ. ಹೀಗೆ ಪರಕೀಯರ ದಾಳಿಗೆ ತನ್ನ ಕೋಟೆ ಬಲಿಯಾಗಲು ಬಿಡದೆ ತನ್ನ ರಕ್ತವನ್ನು ಸೋರಿಸುತ್ತಾ ಅವರ ರಕ್ತಪಾತವನ್ನು ಹರಿಸಿದ ಓಬವ್ವೆಗೆ ಇತಿಹಾಸಕಾರರು ತನ್ನನ್ನು ಇತಿಹಾಸದ ಪುಟಗಳಲ್ಲಿ ತೋರಿಸಬೇಕೆನ್ನುವ ಇರಾದೆಯಿತ್ತೇ ಎಂದು ಒಮ್ಮೆ ಯೋಚಿಸಿದಾಗ, ನಮ್ಮ ಚರಿತ್ರೆಯನ್ನು ಲೂಟಿ ಮಾಡಲು ಬಂದ ದಾಳಿಕೋರರು ಭ್ರಷ್ಟಗೊಳಿಸಿ ಬರೆದ ಚರಿತ್ರೆಯನ್ನೇ ನಮ್ಮವರು ಅಧಿಕೃತ ಚರಿತ್ರೆ ಎಂದು ಹಾಡಿ ಕೊಂಡಾಡುತ್ತಿರುವಾಗ, ಆ ಚರಿತ್ರೆಯಲ್ಲಿ ನಿಜವಾಗಿಯೂ ಸಾಹಸಗೈದ ವೀರರಮಣಿ ಓಬವ್ವೆಯಂಥವರು ಖಂಡಿತಾ ಸೇರಬಾರದು ಸೇರಿಲ್ಲ. ಏಕೆಂದರೆ ಸನಾತನ ಪರಂಪರೆಯ ನಮ್ಮ ನಿಜವಾದ ಚರಿತ್ರೆಯನ್ನು ಬಚ್ಚಿಟ್ಟು, ಉಜ್ವಲ ಸಂಸ್ಕೃತಿಯನ್ನು ಹೊರಗೆಡಹಿದರೆ ತುಳಿತಕ್ಕೆ ಒಳಗಾದ ಭಾರತೀಯರು ತಿರುಗಿ ಬೀಳಬಹುದೆಂಬ ಭಯ ವಿದೇಶಿಯರಿಗಿದ್ದು, ಸ್ಥಳೀಯ ವೀರ ಚರಿತ್ರೆಗಳನ್ನೇ ಮುಚ್ಚಿಡುವ ಸಾಹಸ ಮಾಡಿದ್ದಾರೆ. ಅಂಥಹ ಪರಿಸ್ಥಿತಿಯಲ್ಲಿ ಒಬ್ಬ ಸಾಮಾನ್ಯ ಹೆಣ್ಣು ಧೀರೋದತ್ತಳು ಎಂದು ಬಿಂಬಿಸಿದರೆ, ಅದನ್ನು ಅರಗಿಸಿಕೊಳ್ಳುವ ಶಕ್ತಿ ಆಂಗ್ಲರಿಗೆ ಇರಲಿಲ್ಲವೇನೋ. ಬಹುಶಃ ಈ ಮೂಸೆಯಲ್ಲಿ ಒಂದರೆಕ್ಷಣ ನಾವು ಆಲೋಚಿಸಿದಾಗ ಇಂಥಹ ಸಹಸ್ರಾರು ಚರಿತ್ರೆಗಳು ಕಾಲಘಟ್ಟದಲ್ಲಿ ಮಾಸಿಹೋಗಿರಬಹುದು. ಆದರೆ ಅದನ್ನು ನಮ್ಮ ಜನಪದರು ಜತನವಾಗಿ ಕಾಪಾಡಿಕೊಳ್ಳುತ್ತಾ ಬಂದಿದ್ದು, ತಲೆತಲೆಮಾರಿಗೆ ದಾಟಿಸುವ ಕಾರ್ಯ ಮಾಡಿದ್ದಾರೆ. ಕೃತಿಯಲ್ಲಿ ತನ್ನ ಸ್ಥಾನವನ್ನು ಪಡೆಯದಿದ್ದರೂ ಓಬವ್ವೆ ಜನಪದರ ಮನಸ್ಸನ್ನು ಕ್ರಮಿಸಿದ್ದಾಳೆ. ದುರ್ಗೆಯಾಗಿದ್ದಾಳೆ. ಅಷ್ಟು ಸಾಕಲ್ಲವೆ ಅವಳ ಇತಿಹಾಸ ಉಳಿಯಲು.

೪. ಓಬವ್ವನ ಪ್ರತಿಮೆ : ತನ್ನ ನಾಡನ್ನು ಪ್ರೀತಿಸುವುದಾಗಲಿ, ಅದರ ಬಗ್ಗೆ ಅಭಿಮಾನಪಡುವುದಾಗಲಿ ಸಣ್ಣ ಮಾತಲ್ಲ. ಆದರೆ ಅದು ಅಷ್ಟಕ್ಕೆ ನಿಂತರೆ ಕಾರ್ಯ ಸಫಲತೆ ಪೂರ್ಣವಾಗಲಾರದು.

ಸಫಲವಾಗಲು ಆ ನಾಡಿನ ಋಣ ತೀರಿಸುವ ಕಾರ್ಯವಾಗಬೇಕು. ನಾಡಿನ ಅಭಿಮಾನವನ್ನು ಬಿತ್ತರಿಸುವ ಕಾರ್ಯ ನಡೆಯಬೇಕು. ವೀರಗಲ್ಲುಗಳು, ಮಾಸ್ತಿಕಲ್ಲುಗಳು ಈ ನಿಟ್ಟಿನಲ್ಲಿ ಕಣ್ಣಮುಂದೆ ಕಂಗೊಳಿಸುತ್ತವೆ. ಇಚ್ಛಾ ಪೂರ್ವಕ ತ್ಯಾಗ ಅಸಮಬಲ, ಸ್ಥಳೀಯ ಘಟನೆಗಳಿಗೆ ಪ್ರಾದೇಶಿಕವಾದ ಐತಿಹ್ಯಗಳಿವೆ. ಅದರಲ್ಲೂ ನಾಡಿನ ಪ್ರೇಮ ಅಪ್ರತಿಮವಾದದ್ದು. ತ್ಯಾಗಮಯವಾದದ್ದು. ಅವರ ಮೈಮೆಯನ್ನು ಕೊಂಡಾಡಿ ಅವರ ಸ್ಮರಣೆಯಿಂದ ಸ್ಥಾಪಿಸುವ ಯಾವುದೇ ಸ್ಮಾರಕಗಳು ಐತಿಹ್ಯಗಳ ಸಾಲಿಗೆ ಸೇರುತ್ತವೆ. ಇದೇ ಸೀತೆಯ ಸೆರಗು, ಇದು ಭೀಮನ ಗುದ್ದು, ಇದು ಆಂಜನೇಯನು ಎಸೆದ ಸಂಜೀವಿನಿ ಪರ್ವತ ಎಂದು ಇಂದು ತೋರಿಸುವ ಕುರುಹುಗಳಿವೆ. ಅದೇ ನಿಟ್ಟಿನಲ್ಲಿ ಸಾಗಿದರೆ ಮಾನವ ನಿರ್ಮಿತ ಕುರುಹುಗಳಿಗೇನೂ ಕಡಿಮೆಯಿಲ್ಲ. ಈ ನಿಟ್ಟಿನಲ್ಲಿ ಓಬವ್ವನ ವಂಶೀಕರು ತಾವೆಂದು ಗುರುತಿಸಿಕೊಂಡಿರುವ ಸಮುದಾಯದವರು ತಮ್ಮವಳಿಗಾಗಿ ಒಂದು ಸ್ಮಾರಕ ಸ್ಥಾಪಿಸುವಂತೆ ಜಿಲ್ಲಾಡಳಿತದ ಮೇಲೆ ಪಟ್ಟಣದ ನಾಗರೀಕರೊಂದಿಗೆ ಒತ್ತಡವೇರಿ ಜಿಲ್ಲಾಧಿಕಾರಿಗಳವರ ಕಛೇರಿ ಮುಂದೆ ನಿಲ್ಲಿಸಿರುವ ಓಬವ್ವನ ಕಂಚಿನ ಪ್ರತಿಮೆ. ತನ್ನ ನಾಡಿಗಾಗಿ ವೀರಾಗ್ರಣಿಯಾಗಿ, ಒಬ್ಬಂಟಿಗಳಾಗಿ ಪುರುಷ ಸೈನಿಕರನ್ನು ಎದುರಿಸಿ ಕೆಚ್ಚೆದೆಯಿಂದ ಹೋರಾಟ ನಡೆಸಿದ ಮಹಿಳೆಗೆ ಜಿಲ್ಲಾಡಳಿತ ಆಕೆಯ ಪ್ರತಿಮೆಯನ್ನು ಆಡಳಿತ ಕೇಂದ್ರ ಕಛೇರಿಯ ಮುಂದೆ ನಿಲ್ಲಿಸುವ ಮೂಲಕ ಆಕೆಯ ನಾಡಿನ ಋಣಕ್ಕೆ ಗೌರವ ನೀಡಿದ್ದಾರೆ. ಆಕೆಗೆ ತಮ್ಮ ನಾಡಿನ ಮನ್ನಣೆ ನೀಡಿದ್ದಾರೆ. ಚಿತ್ರದುರ್ಗದ ಹೆಸರು ಬಂದರೆ ಓಬವ್ವನ ನಾಡು ಎಂದು ಗುರುತಿಸುವ ನಿಟ್ಟಿನಲ್ಲಿ ಈ ಕಾರ್ಯ ಕೈಗೊಂಡಿದ್ದಾರೆ. ಇಷ್ಟೇ ಅಲ್ಲದೆ ಆಕೆಗಾಗಿ ಐದು ಎಕರೆ ಜಮೀನಿನಲ್ಲಿ ಒಂದು ಸ್ಮಾರಕ ನಿಲ್ಲಿಸಿ ಶಾಶ್ವತವಾದ ಕಲ್ಯಾಣ ಕಾರ್ಯಗಳಿಗೆ ಆ ಸ್ಮಾರಕದ ಸ್ಥಳವನ್ನು ಉಪಯೋಗಿಸಿಕೊಳ್ಳಲು ಆಲೋಚಿಸಿದ್ದಾರೆ. ಹಾಗಾಗಿ ಈ ಸ್ಮಾರಕ ಮುಂದೆ ಐತಿಹ್ಯವಾಗುವುದರಲ್ಲಿ ಸಂಶಯವಿಲ್ಲ.

೫. ಕಹಳೆಗಳು : ಸ್ವಾಭಿಮಾನ, ಸ್ವಾಮಿಭಕ್ತಿ ಮತ್ತು ರಾಜಸೇವೆಯಲ್ಲಿ ಅನನ್ಯ ನಂಬಿಕೆಯುಳ್ಳ ಹಾಗೂ ನಮ್ರಕಿಂಕರರಾಗಿ ಸೇವೆಸಲ್ಲಿಸುತ್ತಿದ್ದು. ಹದಿಮೂರು ಗಡಿ ಕಹಳೆಯವರು, ಎಂಬ ಹೆಸರು ಪಡೆದ ಓಬವ್ವನ ವಂಶಜರಿಗೆ ಅಂದರೆ ಕಹಳೆಯವರಿಗೆ ದೊರೆಗಳ ಸೆರೆಯ ನಂತರ ದೊರೆಗಳಿಲ್ಲದ ಚಿತ್ರದುರ್ಗದಲ್ಲಿ ಜೀವಿಸುವುದು ತುಂಬಾ ವ್ಯಥೆಯನ್ನಲ್ಲದೆ, ನಿಸ್ಸಹಾಯಕ ಸ್ಥಿತಿಯನ್ನೊದಗಿಸಿತು. ಹೈದರ್ ಮತ್ತು ಟಿಪ್ಪುವಿನ ಆಡಳಿತ ಇವರನ್ನು ಸಂಪೂರ್ಣವಾಗಿ ಮರೆಯಿತು. ಓಬವ್ವೆಯ ಏಕಮಾತ್ರ ಪುತ್ರ ಆನೆಪ್ಪನೊಂದಿಗೆ, ತಂದೆ ಮದ್ದಹನುಮಪ್ಪ ಮತ್ತು ಉಳಿದ ಕಹಳೆಯವರು ಚಿತ್ರದುರ್ಗವನ್ನು ತೊರೆದರು.

ದೊಡ್ಡಸಿದ್ದವ್ವನಹಳ್ಳಿ, ತಮಟಕಲ್ಲು, ಸೊಂಡೆಕೆರೆ, ಸಾಣಿಕೆರೆ, ಸಜ್ಜನಕೆರೆ, ಪಿಳ್ಳೆಕೇರನಹಳ್ಳಿ ಹೀಗೆ ಮೊದಲಾದೆಡೆ ಜೀವನೋಪಾಯ ಮಾಡಿಕೊಂಡು ನೆಲೆಸಿದರು. ಇದರೊಡನೆ ಈ ವಂಶಜರಿಗೆ ರಾಜವೀರ ಮದಕರಿನಾಯಕರು ದಯಪಾಲಿಸಿದ್ದ ಜಹಗೀರುಗಳು ನಿಂತುಹೋದವು. ಹಾಗೆಯೇ

ವಂಶಾಭಿವೃದ್ಧಿಯಾಗಿ, ಈ ಮಧ್ಯ ಸರ್ಕಾರಿ ಕೆಲಸಗಳನ್ನು ಮಾಡುತ್ತಾ ದೂರ ದೂರುಗಳಲ್ಲಿ ವಂಶೀಕರೆಲ್ಲಾ ಛಿದ್ರರಾಗಿದ್ದರು. ಆದರೆ ಇತ್ತೀಚೆಗೆ ಅವರನ್ನು ಭೇಟಿಯಾದಾಗ ಇನ್ನೂರುವರುಷಗಳಷ್ಟು ಹಳೆಯದಾದ, ಮುರಿದ ಎರಡು ಕಹಳೆಗಳನ್ನು ತೋರಿಸಿದ್ದು, ಅವು ತುಂಬಾ ಹಳೆಯದಾಗಿದ್ದು, ಸರಿ ಸುಮಾರು ಎರಡುನೂರು ವರುಷಗಳಷ್ಟೇ ಹಳೆಯವಿರಬಹುದಾಗಿವೆ ಎನಿಸಿವೆ.[೧೦] ಅವು ಮಧ್ಯದಲ್ಲಿ ಮುರಿದಿದ್ದು ಇಲ್ಲಿ ಎಲ್ಲಿಯೂ ರಿಪೇರಿಯಾಗುವುದಿಲ್ಲ. ಮಾಡಲು ಬರುವುದಿಲ್ಲಾ ಎಂದು ತಿಳಿದಿದ್ದು, ಬೆಳಗಾವಿ ಸಮೀಪ ಹುಕ್ಕೇರಿಯಲ್ಲಿ ಮಾತ್ರ ಒಂದೆಡೆ (ಟಿಂಕರಿಂಗ್) ಲೋಹ ಬೆಸುಗೆ ಹಾಕುವರೆಂದು ತಿಳಿದಿದ್ದು, ಅಲ್ಲಿ ದುರಸ್ತಿ ಮಾಡಿಸುವ ಬಗ್ಗೆ ಆಲೋಚಿಸುತ್ತಾ ವಿವರ ತಿಳಿಸಿದರು. ನಿವೃತ್ತ ಪಿ.ಎಸ್.ಐ.ಹನುಮಂತಪ್ಪನವರು ಪೂರ್ವಿಕರಿಂದ ಆಸ್ತಿಗಳಾಗಿ ಪಾಲು ವಿಭಾಗ ಮಾಡಿಕೊಂಡಾಗ ಇವರಿಗೆ ಬಂದ ಆಸ್ತಿ ಈ ಕಹಳೆ, ತಾತ, ಮುತ್ತಾತರ ಕಾಲದಿಂದಲೂ ಇದ್ದದ್ದು ಎಂದು ಹೇಳಿದರು, ಓಬವ್ವೆಯ ಘಟನೆ ಸುಮಾರು ಎರಡು ನೂರು ಐವತ್ತು ವರ್ಷಗಳ ಆಸುಪಾಸಿನಲ್ಲಿಯೇ ನಡೆದಿದ್ದು ಆ ಕಹಳೆಗಳನ್ನು ಪರೀಕ್ಷಿಸಿ ಪರಿಶೀಲಿಸಲಾಗಿ ಅವು ೨೦೦ ವರ್ಷಗಳಷ್ಟು ಹಳೆಯವಿರಬಹುದು. ಓಬವ್ವನ ಕಾಲದಲ್ಲಿದ್ದ ಹಳೆಯ ಕಹಳೆಗಳಿಗೆ ಬಹಳ ಹತ್ತಿರದ ಸಾಮ್ಯತೆಯಿದ್ದು ಇವು ಸಹ ಆ ಘಟನೆಯನ್ನು ನೆನಪಿಸುವ ಪಳೆಯುಳಿಕೆಗಳಾಗಿವೆ. ಅವರು ಅಭಿಮಾನದಿಂದ, ಆವೇಶದಿಂದ ತೋರಿಸಿದ ಕಹಳೆಗಳಲ್ಲಿ ಅವರಲ್ಲಿನ ತಮ್ಮಾಕೆಯ ಬಗೆಗಿನ ಉತ್ಕಟತೆಯನ್ನು ಕಂಡೆನು. ಅವರು ಚರಿತ್ರೆಯಲ್ಲಿ ಗೌಣವಾದ ಓಬವ್ವನ ವೀರಗಾಥೆಯನ್ನು ಕಹಳೆಯವನ ಹೆಂಡತಿಯಾಗಿಯೂ ತನ್ನ ನಾಡನ್ನು ಕಾಪಾಡಿದ ಆಕೆಯ ಅಗಣಿತವಾದ ನಾಡ ಪ್ರೇಮವನ್ನು ಚರಿತ್ರೆ ಕಣ್ಣಿಗೆ ಕಟ್ಟುವಂತೆ ತಮ್ಮ ಪೂರ್ವಜರಿಂದ ತಿಳಿದ ವಿಷಯವನ್ನು ಚಾಚೂ ತಪ್ಪದೆ ತಿಳಿಸಿದರು. ಚರಿತ್ರೆಯಲ್ಲಿ ಘಟಿಸಿದ ಕ್ರಿಯೆಗಳು, ಪುರಾಣ ವ್ಯಕ್ತಿಗಳ ನಡವಳಿಕೆಗಳು, ಪ್ರಸಂಗಗಳನ್ನು ಕುರಿತು ಬರೆಯುವಾಗ ಅವು ಚರಿತ್ರೆಯಾಗುತ್ತವೆ. ಮಹಾತ್ಮರು, ಹುತಾತ್ಮರು, ಮಹಾನ್ ವ್ಯಕ್ತಿಗಳು ಆಗುತ್ತಾರೆ. ಪರಶುರಾಮ ಬಳಸಿದ ಗಂಡುಗೊಡಲಿಯ ಉಲ್ಲೇಖವಂತೂ ವರ್ಣಿಸಲಸದಳ. ಅಂದರೆ ಇತಿಹಾಸ ಹಳೆಯದಾದಂತೆಲ್ಲಾ ಅದು ಪುರಾಣವೆನಿಸುತ್ತದೆ. ಇಲ್ಲಿ ಯಾರು ಬದುಕುವುದರ ಸಲುವಾಗಿ ಯಾರು ಹೋರಾಡಿದರೋ, ಹೋರಾಡಿ ಮಾಡಿದರೋ ಅವರ ವಿಷಯಗಳಲ್ಲಿಯೇ ಉಪೇಕ್ಷೆ ಕಂಡುಬರುವುದು ಸಾಮಾನ್ಯ. ಏಕೆಂದರೆ ಹೋರಾಡಿ ಮಡಿದವೀರರ ಸಾಲನ್ನು ಅವಲೋಕಿಸಿದಾಗ ಬಹುಶಃ ತಳಸಮುದಾಯದವರೇ ಮುಂಚೋಣಿಯಲ್ಲಿರುವುದು ವೇದ್ಯವಾಗುತ್ತದೆ. ಅವರ ಸ್ಮಾರಕ, ಕುರುಹುಗಳೇ ಅವರ ವೀರತ್ವವನ್ನು ಸಾರುತ್ತವೆ. ಇನ್ನು ನಿಕೃಷ್ಟವೆಂದರೆ ಎಷ್ಟೋ ದಾಖಲೆಗಳಿಲ್ಲದ ವೀರರು ಇತಿಹಾಸದಲ್ಲಿ ಗತವಾಗಿದ್ದಾರೆ. ಕಾರಣ ಸಮಾಜದ ಶ್ರೇಣಿಯ ಹಿಂದಿನ ತರತಮ ಭಾವವು ಹಾಗಾಗಿ ಓಬವ್ವನ ಕಾಲಕ್ಕೆ ಸಂಬಂಧಿಸಿದ ಕಹಳೆಗಳಿವು ಎನ್ನುವುದಕ್ಕೆ ಯಾವ ಪುರಾವೆಯೂ ಇಲ್ಲದಿದ್ದರೇನಂತೆ. ಅವು ಆ ಕಾಲಕ್ಕೆ ಸಂಬಂಧಪಟ್ಟವು ಎಂದು ಹಿರಿಯರಿಂದ ಸಾಗಿ ಬಂದ ತಿಳುವಳಿಕೆಯಿಂದ ಅವರ

ವಂಶೀಕರು ಹೇಳುವ ವಿವರವೇ ಇಂದು ನಮಗೆ ದಾಖಲೆ. ಮುಂದೊಂದುದಿನ ಇದು ಇತಿಹಾಸ ಆಗಬೇಕು.

೬. **ನಿರೂಪ ಪತ್ರ :** ನಾಯಕನಿಲ್ಲದ ದುರ್ಗದಲ್ಲಿ ತಾವು ಜೀವಿಸುವುದು ಅಸಾಧ್ಯ ಎಂದು ತಿಳಿದು ದುರ್ಗ ಬಿಟ್ಟು ಜಿಲ್ಲೆಯಾದ್ಯಂತ ಹೊಟ್ಟೆಪಾಡಿಗಾಗಿ ಚದುರಿ ಹೋಗಿದ್ದ ಕಹಳೆಯವರೆಲ್ಲ ಮರಳಿ ಗೂಡಿಗೆ ಎಂಬಂತೆ ತಮ್ಮ ಕಾಲಾನಂತರದಲ್ಲಿ ಮತ್ತೆ ದುರ್ಗವನ್ನರಿಸಿ ಬಂದಿದ್ದು, ದುರ್ಗ ಸೇರಿಕೊಂಡಿದ್ದು ಆಯಿತು. ಆಗ ಅಲ್ಲಿದ್ದ ಪಾಳೆಯಗಾರ ವಂಶದವರಾದ ರಾಜಾ ಎಸ್. ಪಾಳೇಗಾರರು ದಿನಾಂಕ: ೨೧.೦೬.೧೯೫೪ರಲ್ಲಿ ಬರೆದ ಪತ್ರದಲ್ಲಿ ದುರ್ಗದ ನಾಯಕರ ಮೊಹರನ್ನು ಹಾಕಿ ಕಹಳೆಯವರು ಅನಾದಿ ಕಾಲದಿಂದಲೂ ಸಂಸ್ಥಾನದ ನಾಯಕರನ್ನು ಆಶ್ರಯಿಸಿಕೊಂಡು, ಸೇವೆ ಸಲ್ಲಿಸಿಕೊಂಡು ಬಂದಿದ್ದು ಅವರಿಗೆ ಎಲ್ಲಾ ಸವಲತ್ತುಗಳನ್ನು ನೀಡಿರುವುದಾಗಿ ಅದರಲ್ಲಿ ಸ್ಪಷ್ಟಪಡಿಸಿದ್ದಾರೆ. "ರಾಜ್ಯಭಾರದಲ್ಲಿ ರಾಜ ಬಿಚ್ಚುಕತ್ತಿ ಮದಕರಿನಾಯ್ಕರವರ ಕಾಲದಲ್ಲಿ ನಿಮ್ಮ ವಂಶದ ಮದ್ದಲೆಹನುಮಯ್ಯನ ಹೆಂಡತಿ ಓಬವ್ವೆಯು, ಶತ್ರುಗಳು ದುರ್ಗದ ಕೋಟೆಯೊಳಗೆ ಪ್ರವೇಶಿಸಲು ಅವಕಾಶ ಕೊಡದೆ ತನ್ನ "ವನಕೆ" ಕಟ್ಟಿಗೆಯಿಂದ ಸಾವಿರಾರು ಶತೃ ತಲೆಗಳನ್ನು ಸಂಹಾರ ಮಾಡಿ ಮೆಹನತ್ತು, ಧೈರ್ಯ, ಸಾಹಸ ಕೃತ್ಯಕ್ಕಾಗಿ ದುರ್ಗದ ದೊರೆಗಳು ೧೬೮೮ ರ ವ್ಯಯ ಸಂವತ್ಸರ ಭಾದ್ರಪದ ಮಾಸದಲ್ಲಿ ಆಕೆಯ ಹೆಸರಿನಲ್ಲಿ ವನಕೆ ಕಿಂಡಿ ಬಾಗಿಲು ಸುತ್ತಿನ ಕೋಟೆ ಕಟ್ಟಿಸಿ, ಆಕೆ ಪ್ರತಿಮೆಯನ್ನು ಆ ಕೋಟೆಕಲ್ಲಿನಲ್ಲಿ ಕೆತ್ತಿಸಿದ್ದರಿಂದ ಅದೇ ಸಂವತ್ಸರದ ಭಾದ್ರಪದ ಬಹುಳ ಪಂಚಮಿ ದಿವಸ ಚಿತ್ರದುರ್ಗದ ಕಟ್ಟೆಮನೆ ಯಜಮಾನ ದೊಡ್ಡಹನುಮಪ್ಪನ ಮಗ ಏಕನಾಥಪ್ಪ-ವಗೈರೆ ಅಣ್ಣತಮ್ಮಂದಿರು ಮೊದಲಾದವರು ಶ್ರೀ ಕುದುರೆ ನರಸಿಂಹಸ್ವಾಮಿ ದೇವರು ಶ್ರೀ ಲಕ್ಷ್ಮೀದೇವರು ಶ್ರೀವನಕೆ ಕಿಂಡಿ ಓಬವ್ವೆ, ಇವರುಗಳಿಗೆ ಜಲಧಿ ಉತ್ಸವ ವಗೈರೆ ಮಾಡಿರುವಂತೆ ಈ ಸಂಸ್ಥಾನದಲ್ಲಿರುವ ದಾಖಲೆಗಳಿಂದ ಕಂಡುಬರುತ್ತದೆ" (ಕ್ಷೇತ್ರಕಾಯಕ್ಕೆ ತೆರಳಿದ್ದಾಗ ಚಿತ್ರದುರ್ಗದಲ್ಲಿರುವ ಓಬವ್ವನ ವಂಶೀಕರೆಂದು ನಾಯಕರಿಂದಲೇ ಗುರುತಿಸಲ್ಪಟ್ಟಿರುವ ಶ್ರೀ ಸೋಮಶೇಖರಪ್ಪನವರು ನಿವೃತ್ತ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ ನೀಡಿದ್ದು) ಈ ಪತ್ರದ ಒಕ್ಕಣೆಯಲ್ಲೇ ಇದೆ. ಓಬವ್ವನ ವೃತ್ತಾಂತ ಚಲವಾದಿ ಜನಾಂಗದವರಿಗೂ ತಮ್ಮ ಹಕ್ಕು-ಫಿರ್ಯಾದಿಗಳನ್ನು ಪೈಸಲ್ ಮಾಡಿಕೊಳ್ಳುವ ಕಟ್ಟೇಮನಿ ಕೋಟೆಯಲ್ಲಿದೆಯೆಂದು ಬರೆದಿದೆ. ೧೭೦೦ರ ವಿಳಂಬಿ ಸಂವತ್ಸರ ಫಾಲ್ಗುಣ ಶುದ್ದಮಾಸದಿಂದ ನಮ್ಮ ಹಿರಿಯರು ಇಲ್ಲವಾಗಿ ಛಲವಾದಿಗಳು ಚಿದ್ರರಾಗಿದ್ದಾರೆ. ಹಾಗಾಗಿ ೧೯೫೨ರವರೆಗೂ ಓಬವ್ವ ವಂಶಿಕರಾರು ಹೆಡ್‌ಕ್ವಾರ್ಟರ್ಸ್‌ನಲ್ಲಿ ಇಲ್ಲದ್ದರಿಂದ ಕ್ಷೀಣವಾದ ಚಲವಾದಿ ದೇವರಕಟ್ಟೆ ಮನೆಯನ್ನು ಜೀರ್ಣೋದ್ಧಾರ ಮಾಡಿಕೊಂಡು ದೇವತಾ ಕಾರ್ಯಗಳೊಂದಿಗೆ ಮಾಮೂಲು ಕಾರ್ಯಗಳನ್ನು ಅನುಸರಿಸಿಕೊಂಡು ಹೋಗಲು ನಿರೂಪ ನೀಡಿರುತ್ತೇವೆಂದು ಈ ಪತ್ರದಲ್ಲಿ ತಿಳಿಸಿರುತ್ತಾರೆ. ಚಿತ್ರದುರ್ಗ ಸೀಮೆಯ ವಾಲ್ಮೀಕಿ ಮತ ಆಚಾರ-ವಿಚಾರ ಬೊಕ್ತೇಸರರು, ಚಿತ್ರದುರ್ಗ ಸಂಸ್ಥಾನಂ-ಮೊಕ್ಕಾಂ-ಭರಮಸಾಗರ ಎಂದೇ ಮೊಹರಿನಲ್ಲಿ

ವಿಳಾಸವಿದೆ. ಹಾಗಾಗಿ ಓಬವ್ವನ ವಂಶೀಕರ ಬಗ್ಗೆ ನಿರೂಪ ಪತ್ರದಲ್ಲಿ ನಿಖರವಾಗಿ ತಿಳಿಸಿದ್ದು. ಈ ನಿರೂಪ ಪತ್ರ ಇರುವ ಐತಿಹ್ಯಗಳಿಗೆ ಪೂರಕವಾಗಿದೆ. ಪ್ರಮುಖ ಐತಿಹ್ಯವಾಗಿದೆ. ಚರಿತ್ರೆಯ ಐತಿಹಾಸಿಕ ಬೆಳವಣಿಗೆಯಲ್ಲಿ ಓಬವ್ವಳ ಕೊಡುಗೆ ಮಹತ್ವದ್ದು. ಇಲ್ಲಿ ಗಮನೀಯ ಸಾಮ್ಯತೆಯೆಂದರೆ "ವಿಜಯನಗರದ ಸ್ಥಾಪನೆಗೆ ಮುಂಚೆ ಬದುಕಿ ಬಾಳಿದ ಕುಮಾರರಾಮನ ಸಾಹಸ ಗುಣಗಳನ್ನು ನಮ್ಮ ಚರಿತ್ರೆಕಾರರು ಗಮನಿಸದೆ ಹೋದರೂ" ಆತನ ಹೆಸರನ್ನು ಅಜರಾಮರವಾಗಿ ಉಳಿಸಿದ ಕೀರ್ತಿ ನಮ್ಮ ಕನ್ನಡ ಕವಿಗಳು ಮಾಡಿದ್ದಾರೆ. ಕುಮಾರರಾಮನು ಜಾತಿ ವೀರನಾಗಿದ್ದಾನೆ. "ಪುತ್ರ ನೀನಳಿಯಲು ಧಾತ್ರಿಯು ಉಳ್ಳನಕ ಕೀರ್ತಿ ಮೆರೆಯದೆ ಕಾವ್ಯದಲಿ"[೧೧] ಅಂದರೆ ಇಲ್ಲಿ ಐತಿಹ್ಯಗಳ ಮರೆಯಾಗುವಿಕೆಯಲ್ಲಿ ಕಣ್ಮರೆಯಾಗುತ್ತಿರುವ ಕುಮಾರರಾಮ ಎಂಬ ಇತಿಹಾಸದ ಕಿಡಿಯನ್ನು ಆರಿಹೋಗದಂತೆ ನಮ್ಮ ಕವಿಗಳು ಚರಿತ್ರೆಕಾರರ ಮುಂದೆ ಆತನನ್ನು ತಂದು ನಿಲ್ಲಿಸಿದ್ದಾರೆ. ಮೌನವಾಗಿದ್ದ ಕುಮಾರರಾಮ ಇಂದ ಬೇಡರ ಆರಾಧ್ಯ ದೈವವಾಗಿದ್ದಾನೆ. ಹಾಗೆಯೇ ಒನಕೆ ಓಬವ್ವನೂ ತನ್ನ ಕುಲದವರಿಗೆ ಆರಾಧ್ಯ ದೈವವಾಗಿದ್ದಾಳೆ. ಕುಲದೇವತೆಯಾಗಿದ್ದಾಳೆ, ಆಗಬೇಕು. ತನಗಾಗಿ ಪುಟ್ಟ ದೇವಸ್ಥಾನವನ್ನು ನಿರ್ಮಾಣ ಮಾಡಿಸಿಕೊಂಡಿದ್ದಾಳೆ. ದುರ್ಗದ ಜನತೆಯ ಮನಸ್ಸಿನಾಳದಲ್ಲಿ ಆಳವಾಗಿ ಬೇರೂರಿದ್ದಾಳೆ. ಜನಸಾಮಾನ್ಯರಲ್ಲಿಯೂ ವೀರರು, ವೀರತ್ವ ಗುಣಗಳೂ ಇದ್ದು, ಸಮಯಸ್ಫೂರ್ತಿಯಿಂದ ಹೋರಾಡಬಲ್ಲವರೂ ಆಗಿದ್ದರು ಎಂಬುದಕ್ಕೆ ಈ ಘಟನೆಗಳು ಕಾರಣವಾಗುತ್ತವೆ. ಹೀಗೆ ನೈಜ ಘಟನೆಯ ಸನ್ನಿವೇಶಗಳನ್ನು ಗುರುತಿಸುವುದರ ಮೂಲಕ ಸಾಮಾನ್ಯ ಜನತೆಯ ಗ್ರಾಮೀಣ ಸಂಸ್ಕೃತಿಯನ್ನು ಸ್ಥಳೀಯ ಇತಿಹಾಸವನ್ನು ಅಧ್ಯಯನ ಮಾಡಲು ತೊಡಗದೆ, ಭವ್ಯ ಸಂಸ್ಕೃತಿಯ ಜಾಡನ್ನು, ನೆರಳನ್ನು ಗುರುತಿಸಲು ಹೊರಟವರೇ ನಮ್ಮಲ್ಲಿ ಅನೇಕ ಮಂದಿ. ಆಗ ಸ್ಥಳೀಯ ಐತಿಹ್ಯಗಳು ಭವ್ಯ ಸಂಸ್ಕೃತಿಯ ಮುಂದೆ ಕಳಾಹೀನವಾಗುತ್ತವೆ. ಮುಂದೊಮ್ಮೆ ಅವು ಐತಿಹ್ಯಗಳೇ ಅಲ್ಲ. ಆ ಜನಸಾಮಾನ್ಯರು ಸುಮ್ಮನೇ ಸೃಷ್ಠಿ ಮಾಡಿದ ಸ್ಮಾರಕಗಳೆನಿಸುತ್ತವೆ. ಹಾಗೆಯೇ ಬಿಂಬಿಸಲಾಗುತ್ತದೆ. ಕಾಲಾನಂತರದಲ್ಲಿ ಅವು ನಶಿಸುತ್ತಾ ಆ ಸ್ಥಳೀಯ ಚರಿತ್ರೆಯೇ ಇಲ್ಲವಾಗಬಹುದು. ಆದರೆ ಎಷ್ಟೇ ತಲೆಮಾರುಗಳು ಉರುಳಿದರು ಜನಮನದಲ್ಲಿ ಉಳಿಯಲು ಅರ್ಹತೆ ಹೊಂದಿದವಳು ಓಬವ್ವ, ಅದು ತನ್ನ ಸಾಹಸ ಕಾರ್ಯದಿಂದ. ಯಾರೋ ಇತಿಹಾಸ ತಿಳಿದಿದ್ದು ತಿಳಿಯದಂತೆ ನಟಿಸುವವರಿದ್ದರೆ ಓಬವ್ವ ಇಲ್ಲಾ ಎಂದರೆ, ಅದು ಹೇಗಿರುತ್ತದೆ ಎಂದರೆ ಭೂಪಟದಲ್ಲಿ, ಚರಿತ್ರೆಯಲ್ಲಿ ವಿಚಿತ್ರದುರ್ಗ ಎಂದೆ ಹೆಸರಾದ ಆಂಗ್ಲರ ಬಾಯಲ್ಲಿ ಚಿಟಲ್‌ಡ್ರೂಗ್ ಎಂದು ಕರೆಯಲ್ಪಟ್ಟ ನಗರ ಚಿತ್ರದುರ್ಗ ಎಂಬ ಪಟ್ಟಣವೇ ಇರಲಿಲ್ಲ. ಅದು ಸುಮ್ಮನೇ ಸೃಷ್ಟಿಯಾಗಿದೆ ಎಂಬರ್ಥದಲ್ಲೇ ಅನರ್ಥವೆನಿಸುತ್ತದೆ. ಓಬವ್ವನ ಚರಿತ್ರೆ. ಹಾಗೆಯೇ ಚದುರಿಹೋಗಿದ್ದ ವಂಶೀಕರೆಲ್ಲಾ ಮತ್ತೆ ಒಂದು ಗೂಡಿದ್ದು ಮತ್ತೆ ಪಾಳೇಗಾರರಿಂದ ತಮ್ಮ ಪೂರ್ವಜರಿಗೆ ನೀಡಲಾಗಿದ್ದ ಛಲವಾದಿ ಕಟ್ಟೆ, ಸ್ವಾಮ್ಯತೆ, ತಮ್ಮ ಕೆಲಸ ಕಾರ್ಯಗಳನ್ನು ನೆಡೆಸಿಕೊಂಡು ಹೋಗಲು ಕೋರಿದ್ದು ರಾಜ.ಜಿ.ಎಸ್. ಪಾಳೇಗಾರರು ತಮ್ಮ ಸ್ವಯಾಕ್ಷರದಲ್ಲಿ

ಪತ್ರ ಬರೆದಿದ್ದು ನಾಯಕರ ವಂಶದ ಮುದ್ರೆ ಯೊತ್ರಿ ನೀಡಿರುವ ಪತ್ರವನ್ನು ತೋರಿಸಿರುತ್ತಾರೆ. (ಪತ್ರದ ನಕಲನ್ನು ಲಗತ್ತಿಸಿದೆ.) ಒಟ್ಟಿನಲ್ಲಿ ಇತಿಹಾಸದಲ್ಲಿ ಮೌಖಿಕವಾಗಿ, ಮೌನವಾಗಿ ಸ್ಥಾನ ಪಡೆದ ಓಬವ್ವನ ಈ ಐತಿಹ್ಯಗಳನ್ನು ಪ್ರಾಚ್ಯಸಂಶೋಧನ ಇಲಾಖೆ, ರಕ್ಷಣೆ ಇಲ್ಲದ ಕೋಟೆಯಲ್ಲಿನ ಐತಿಹ್ಯಗಳು, ಮೇಲ್ಕಾಣಿಸಿದ ನಿರ್ಮಿತ ಐತಿಹ್ಯಗಳ ಬಗ್ಗೆಯು ತೀವ್ರ ಗಮನ ಹರಿಸಿ ಸಂರಕ್ಷಿಸುವ ಅವಶ್ಯಕತೆಯಿದೆ .

೫.೪. ಲಾವಣಿಗಳು : ಕನ್ನಡ ಜಾನಪದ ಮಹಾಚಕ್ರದ ಒಂದು ಪ್ರಮುಖ ಪುಟಿಲಾವಣಿ ಸಾಹಿತ್ಯ. ಪಾಶ್ಚಾತ್ಯರಲ್ಲಿ ನೆಡೆದಂತೆ ನಮ್ಮಲ್ಲಿ ಹಾಡುಗಳ ಮತ್ತು ಲಾವಣಿಗಳ ಪ್ರತ್ಯೇಕ ಹಾಗೂ ಕ್ರಮಬದ್ಧ ಅಧ್ಯಯನ ನೆಡೆಯಲಿಲ್ಲ. ಜಾನಪದವನ್ನು ಅರ್ಥಮಾಡಿಕೊಳ್ಳುವುದೆಂದರೆ ಜನತೆಯನ್ನು ಅರ್ಥಮಾಡಿಕೊಳ್ಳುವ ಕ್ರಿಯೆಯೇ ಆಗಿರುತ್ತದೆ. ಜಾನಪದ ಎನ್ನುವುದು ಎಲ್ಲಿಯೋ ದೂರದ ಮತ್ತು ಪ್ರಾಚೀನವಾದ ವಸ್ತುವಲ್ಲ. ಅದು ನಮ್ಮ ನಡುವಿನ ನೈಜ ಹಾಗೂ ಜೀವಂತ ಜ್ಞಾನವೆಂಬುದು ವಿದ್ವಾಂಸರ ಮತ ಇಂದು ಈ ಲೋಕದಲ್ಲಿ ಉಸಿರಾಡುತ್ತಿರುವ ನಾವೆಲ್ಲರೂ ಜಾನಪದಕ್ಕೆ ಮೂಲ ಮತ್ತು ಜಾನಪದ ಸಂವಾಹಕರು ಆಗಿದ್ದೇವೆ. ನಮ್ಮ ನಿತ್ಯದ ಮಾತುಗಳೆಲ್ಲಿ ಜಾನಪದ ಬಳಸಲ್ಪಡುತ್ತದೆ. ನಮ್ಮ ಬಾಯಿ, ಬರಹಗಳೆರಡರಲ್ಲೂ ಜಾನಪದೀಯ ಭೂತ ಮತ್ತು ವರ್ತಮಾನಗಳೆರಡೂ ಬೆಸೆದುಕೊಂಡಿರುತ್ತದೆ. ವರ್ತಮಾನದಲ್ಲಿ ವ್ಯವಹರಿಸುವಾಗ ಭೂತದ ನೆನಪಾದರೆ; ಭೂತಕಾಲದ ಬಗ್ಗೆ ಪ್ರಸ್ತಾಪಿಸಿದಾಗೆಲ್ಲಾ ವರ್ತಮಾನದ ಹೊಸ ಸಾಧ್ಯತೆಗಳು ತೆರೆದುಕೊಳ್ಳುತ್ತವೆ.

ಲಾವಣಿ ಜನಪದರಲ್ಲಿ ವಿಶೇಷ ಪರಂಪರೆಯಲ್ಲಿ ಬೆಳೆದು ಬಂದ ಗೀತ ಪ್ರಕಾರವಾಗಿದ್ದು, ಇದು ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಅತಿ ಹೆಚ್ಚು ಪ್ರಚಲಿತವಿರುವ ಜನಪದ ಗೀತ ಪ್ರಕಾರ. ಲವಣ ಶಬ್ದದಿಂದ 'ಲಾವಣಿ' ಉತ್ಪತ್ತಿಗೊಂಡಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಲವಣ ಎಂದರೆ ಉಪ್ಪು, 'ಲಾವಣ್ಯ'ದಿಂದ ಲಾವಣಿ ಉತ್ಪತ್ತಿಗೊಂಡಿರಬಹುದೆಂದು ಮತ್ತೊಂದು ಊಹೆಯಾಗಿದೆ. ಕ್ರಿಯೆ, ಸಂಭಾಷಣೆ ಹಾಗೂ ಘಟನೆಗಳ ಮೂಲಕ ಅಂತ್ಯವನ್ನು ತೀವ್ರಗತಿಯಲ್ಲಿ ತಲುಪುವಂಥಹದ್ದು, ಲಾವಣಿಯು ನಮ್ಮ ಪರಂಪರೆ ಇತಿಹಾಸ, ಸಂಸ್ಕೃತಿಗಳನ್ನು ಉಳಿಸಿಕೊಡುವಲ್ಲಿ ಹಾಡಿನ ರೂಪದಲ್ಲಿ ಬೆಳೆದು ಬಂದ ಒಂದು ರೂಪವಾಗಿದೆ. ಅನಾದಿ ಕಾಲದಿಂದಲೂ ಸಮಾಜದ ಒಳಿತು-ಕೆಡುಕು ಅಲ್ಲದೆ ಚರಿತ್ರೆಯ ನಾಯಕರು ಸತ್ಪುರುಷರು ಇತಿಹಾಸವನ್ನೇ ಇವು ನಮ್ಮ ಮುಂದೆ ತೆರೆದಿಡುತ್ತವೆ. ಮೊದ ಮೊದಲು ಯುದ್ಧದಲ್ಲಿ ಯೋಧರನ್ನು ಹುರಿದುಂಬಿಸುವ ಕಾರ್ಯಮಾಡಿದ ಈ ಕಲಾ ಮೇಳವು ನಂತರದ ದಿನಮಾನಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮ ವೀರಮಹಿಳೆಯರ ಸಾಮಾಜಿಕ ಮೌಲ್ಯಗಳನ್ನು ಎತ್ತಿಹಿಡಿದಿವೆ. ಲಾವಣಿಯು ದೇಶಿ ಪ್ರಕಾರಗಳಲ್ಲೊಂದಾಗಿದ್ದ, ಲೌಕಿಕ-ಅಲೌಕಿಕ ಭಾವನೆಗಳಿಗೂ, ವಾಸ್ತವಿಕಾಂಶಗಳಿಗೂ ಗೊತ್ತು ಹಚ್ಚಲ್ಪಟ್ಟಿವೆ. ಲಾವಣಿಯ ಹರಹು ಬಹುವಿಸ್ತಾರವಾದುದು, ಅದರಲ್ಲಿ ಘಟನೆ ಬರುತ್ತದೆ. ಕಥೆ

ಇರುತ್ತದೆ. ಸನ್ನಿವೇಶದ ವರ್ಣನೆ, ವ್ಯಕ್ತಿ ಪರಿಚಯ ಇರುತ್ತದೆ. ಹಾಗೆಯೇ ಸರಸ ಸಂಭಾಷಣೆಯು ನೆಡೆಯುತ್ತದೆ. ಪ್ರೀತಿ, ಪ್ರೇಮ, ಭಕ್ತಿ, ಸಾಮಾಜಿಕ, ಕೌಟುಂಬಿಕ, ಚಿತ್ರಣ, ಪಾರಮಾರ್ಥಗಳು, ದೈವದ ಕಲ್ಪನೆ, ತ್ಯಾಗ, ಸಾಹಸ, ಛಲ, ದ್ವೇಷ, ನೋವು, ನಲಿವು ಮುಂತಾದ ವಿಷಯಗಳ ನೆಲೆಯಾಗಿ ಹೊರಹೊಮ್ಮಿದ ಜನಪದ ಸಾಹಿತ್ಯದ ಪ್ರಕಾರಗಳಲ್ಲಿ ಬಂದಾಗಿದೆ.

ಯುಗ ಧರ್ಮ ಬೇರೆಯಾದಾಗ ಆಯುಗದಲ್ಲಿ ಬದುಕಿನ ಜನರ ಅಭಿರುಚಿಗಳು ಸಹಜವಾಗಿ ಬದಲಾಗುತ್ತವೆ. ಇವುಗಳಿಗನುಗುಣವಾಗಿ ಅಭಿವ್ಯಕ್ತಿ ಮಾಧ್ಯಮ ರೂಪಗೊಳ್ಳುತ್ತದೆ. ಒಟ್ಟಿನಲ್ಲಿ ಮೌಖಿಕ ಪರಾಂಪರೆಯಲ್ಲಿ ಪರಂಪರಾಗತವಾಗಿ ಸಾಗಿ ಬಂದ ಹಾಡಿನಲ್ಲಿ ನಿರೂಪಿಸಲಾದ ಕಥೆಯನ್ನು 'ಲಾವಣಿ' ಎನ್ನಬಹುದು. ಲಾವಣಿಗಳ ಕ್ರಮಬದ್ಧ ಅಧ್ಯಯನ ಬೇರೆ ಬೇರೆ ದೇಶಗಳಲ್ಲಿ ನೆಡೆದಂತೆ ನಮ್ಮಲ್ಲಿಯೂ ನಡೆಯದಿದ್ದುದ್ದು ಒಂದು ಶೋಚನೀಯ ಸಂಗತಿ. ಭಾರತದಲ್ಲಿ 'ಬಂಗಾಳ' ಲಾವಣಿಗಳ ಅಧ್ಯಯನ ಶುರುಮಾಡಿದ್ದು ಮೊದಲು. ೧೯೨೩ರ ಹೊತ್ತಿಗೆ ಲಾವಣಿಗಳ ಕುರಿತ ಸಂಶೋಧನೆಗಳು ಶುರುವಾದವು. ಜಗತ್ತಿನ ಪ್ರಮುಖ ಸಾಹಿತ್ಯ ಪ್ರಕಾರಗಳಲ್ಲಿ ಲಾವಣಿಯು ಪ್ರಮುಖ ಪ್ರಕಾರ, ಅದರ ಹುಟ್ಟೂ ಸ್ವಾಭಾವಿಕವಾದುದು.

ಲಾವಣಿಗಳಲ್ಲಿ ಎರಡು ಪ್ರಭೇದಗಳಿವೆ. ಒಂಟಿಲಾವಣಿ ಮತ್ತು ಮೇಳ ಲಾವಣಿಯೆಂದು ಎರಡು ವಿಧ. ಒಂಟಿ ಲಾವಣಿಯಲ್ಲಿ ಒಬ್ಬನೇ ಹಾಡುತ್ತಾನೆ. ಮೇಳಲಾವಣಿಗಳಲ್ಲಿ ಗುಂಪಾಗಿ ಹಾಡುತ್ತಾರೆ. ಲಾವಣಿಗಳ ಮೂಲವಸ್ತು ಧೈರ್ಯ, ತ್ಯಾಗ, ವೀರತ್ವ, ಶೃಂಗಾರ ಪ್ರಸಂಗಗಳು, ಒಡನಾಟಗಳೇ ಆಗಿವೆ. ಆದರೆ ಇಲ್ಲಿಯೂ ಸ್ತ್ರೀ ಸಮುದಾಯದ ಪಕ್ಷಪಾತವನ್ನು ಗಮನಿಸಬಹುದಾಗಿದೆ. ಐತಿಹಾಸಿಕವಾಗಿ ಒಂದು ಘಟನೆ ನಡೆದ ಹತ್ತಿರದ ಅವಧಿಯಲ್ಲಿಯೇ ಲಾವಣಿಯೊಂದು ಹುಟ್ಟಿಕೊಂಡು ಜನಪ್ರಿಯವಾಗಿ ಜನರ ಬಾಯಲ್ಲಿ ಉಳಿದುಕೊಂಡು ಬರುವುದು ಸಹಜ.

ಚಿತ್ರದುರ್ಗದ ಪಾಳೇಗಾರರಿಗೆ ಸಂಬಂಧಿಸಿದಂತೆ ಕಸ್ತೂರಿರಂಗಪ್ಪನ ಕಾಲದ ಲಾವಣಿಗಳಿವೆ. ಕರಾಕೃ ಅವರು ಸಂಗ್ರಹಿಸಿರುವ "ಧೀರ ಮದಕರಿ ಸೆರೆಹೋದ" ಲಾವಣಿ ಇದಾಗಿದೆ. ಆದರೆ ದುರ್ಗದ ಇತಿಹಾಸದ ಹಲವಾರು ಘಟನೆಗಳಿಗೆ ಸಂಬಂಧಪಟ್ಟಂತ ಲಾವಣಿಗಳು ಕಂಡುಬರುವುದಿಲ್ಲ. ಕರ್ನಾಟಕ ಚರಿತ್ರೆಯಲ್ಲಿ ಚಿತ್ರದುರ್ಗದ ಒನಕೆ ಓಬವ್ವನಿಗೆ ತನ್ನದೇ ಆದ ಒಂದು ಐತಿಹಾಸಿಕ ಸ್ಥಾನಮಾನವಿದೆ. ಚಾರಿತ್ರಿಕ ಯುಗದ ವೀರ ವನಿತೆಯರ ಸಾಲಿನಲ್ಲಿ ಓಬವ್ವನನ್ನು ನಿಲ್ಲಿಸಿ ಆಕೆಯ ಧೀರೋಧತ್ತ ನಿಲುವನ್ನು ಪ್ರಶಂಶಿಸಲಾಗಿದೆ. ಓಬವ್ವೆಯ ಘಟನೆಯನ್ನು ಕುರಿತು ಅನೇಕ ವಿದ್ವಾಂಸರು ವಿವಿಧ ರೀತಿಯಲ್ಲಿ ನಿರೂಪಿಸಿರುವುದುಂಟು. ಎಂ.ಎಸ್. ಪುಟ್ಟಣ್ಣರವರು ಬರೆದಿರುವಂತೆ ಓಬವ್ವ ಅಥವ ಓಬಿಯು ಅಗಸನಕಲ್ಲು ಗ್ರಾಮದವಳು,ಚಿತ್ರದುರ್ಗ ಕೋಟೆಯ ಕಳ್ಳ ಗಿಂಡಿಯಲ್ಲಿ ನುಗ್ಗಲೆತ್ನಿಸಿದ ಶತ್ರು ಸೈನಿಕರನ್ನು ಹಿಮ್ಮೆಟ್ಟಿಸಿದಳು. ಆಕೆಯಿಂದ ನೂರಾರು ಸೈನಿಕರು ಹತರಾದರು ಪ್ರಸಿದ್ಧ ಇತಿಹಾಸ ಸಂಶೋಧಕರಾದ ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಒಳಗೊಂಡಂತೆ ಹಲವಾರು ಲೇಖಕರು ಇದೆ ಸಂಗತಿಯನ್ನು ನಾನಾ ರೀತಿಯಲ್ಲಿ ಬರೆದು ಪ್ರಕಟಿಸಿದ್ದಾರೆ.

ಚಿತ್ರದುರ್ಗದ ಸ್ಥಳನಾಮಗಳಲ್ಲಿ ಪ್ರತ್ಯೇಕವಾಗಿ ವ್ಯಕಿಸಿದ್ದ ನಾಮಗಳತ್ತ ಗಮನಹರಿಸಿದಾಗ ಸ್ತ್ರೀನಾಮ ಸೂಚಕಗಳು ಅಧಿಕ ಸಂಖ್ಯೆಯಲ್ಲಿರುವುದು ಗಮನಕ್ಕೆ ಬರುತ್ತದೆ. ಇದೊಂದು ಗಮನಾರ್ಹವಾದ ವಿಚಾರ ಶತ್ರುಸೈನಿಕರನ್ನು ಒನಕೆಯಿಂದ ಜಜ್ಜಿದ ಓಬವ್ವೆಯ ಪ್ರಭಾವ ಈ ಪ್ರದೇಶದ ಜನರ ಮೇಲೆ ಸಾಕಷ್ಟಾಗಿರಲು ಸಾಧ್ಯವಿದೆ ಹಾಗೆಯೇ ಸುತ್ತಲಿನ ಪಾಳೆಯಗಾರರನ್ನು ಮಟ್ಟಹಾಕಿದ ಗಂಡುಗಲಿ ಓಬವ್ವನಾಗತಿಯರಂತಹ ರಾಣಿಯರೂ ಆ ಕಾಲದಲ್ಲಿದ್ದರು ಇವರೆಲ್ಲರ ಕಲಾಪ್ರೇಮ, ಜನಪ್ರಿಯತೆ, ಮನೋಸ್ಥೈರ್ಯ, ಸೇವಾ ಮನೋಭಾವ, ಆಡಳಿತ ಕೌಶಲ್ಯ ಮುಂತಾದ ಗುಣಗಳನ್ನು ಹೊಂದಿದ್ದು ಅಂದಿನ ರಾಜರುಗಳಷ್ಟೇ ಹೆಸರುವಾಸಿಯಾಗಿದ್ದರೆಂಬ ಅಂಶವು ಚಿತ್ರದುರ್ಗ ಪಾಳೇಗಾರರ ವಿರೋಚಿತ ಚರಿತ್ರೆಯನ್ನು ಓದಿದಾಗ ಮನವರಿಕೆಯಾಗುವುದು. ಹಾಗೆಯೇ ಪಾಳೆಯಗಾರರು ಪ್ರಿಯ ಮಡದಿಯರ ಮೇಲಿನ ಪ್ರೀತಿಗಾಗಿ, ದಂಡನಾಯಕರ, ತ್ಯಾಗ ಮಾಡಿದವರ ಹೆಸರುಗಳನ್ನು ಊರುಗಳಿಗೆ ಕೊಡುವ ಸಾಂಪ್ರದಾಯ ಸರ್ವೇಸಾಧಾರಣವಾದದ್ದು, ಜಿಲ್ಲೆಯಲ್ಲಿರುವ ಹೆಸರುಗಳಿಂದ ತಿಳಿದು ಬರುತ್ತದೆ. ಸಾಮಾನ್ಯವಾಗಿ ಜನಪದರ ವೀರಕಾವ್ಯಗಳೆಲ್ಲ ಅವರ ಬದುಕನ್ನು ಎತ್ತಲು ಪ್ರಯತ್ನಿಸಿದವರಿಗಾಗಿಯೇ ರಚಿತವಾಗಿವೆ. ಲಿಖಿತರೂಪದ ಯಾವ ಬಂಧನಕ್ಕೂ ಒಳಗಾಗದೆ ಅವರೆಲ್ಲಾ ಜನತೆಯ ಹೃದಯಾಂತರಾಳದಲ್ಲಿ ಮೌಖಿಕವಾಗಿ ಬೇರೂರಿ ನಿಂತರು, ಅಮರರಾದರು ಎಂದು ಬರೆದು ಪ್ರಕಟಿಸಿದ್ದಾರೆ. ಚಿತ್ರದುರ್ಗದ ಇತಿಹಾಸ ಹಾಗೂ ಕೋಟೆ ಸಾಕಷ್ಟು ಪ್ರೇಕ್ಷಕರನ್ನು, ಇತಿಹಾಸಕಾರರನ್ನು ತನ್ನೆಡೆಗೆ ಹೇಗೆ ಆಕರ್ಷಿಸಿದೆಯೋ ಹಾಗೆಯೇ ಓಬವ್ವನ ಸಾಹಸಗಾಥೆ ಕೋಟೆಯ ವೀಕ್ಷಣೆಯಲ್ಲಿ ಮಿಳಿತವಾಗಿದ್ದು ಅಸಂಖ್ಯಾತ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಹಾಗಾಗಿ ಶ್ರೀಸಾಮಾನ್ಯರ ಬಾಯಲ್ಲಿ ಈ ಸಾಹಸ ಘಟನೆ ಮೆರೆಯುತ್ತಿದ್ದು ಲಾವಣಿಗಳ ರಚನೆಯಲ್ಲಿ ಹಿಂದಿದ್ದಾಳೆ. ಕಾಲಲಿಖಿತದ ನಿರಾಕರಣೆಯೇ ಅಥವಾ ಸ್ತ್ರೀ ಪುರುಷರ ತರತಮವೇ, ಸಮಾಜದ ಶ್ರೇಣಿಯ ಬೇಧಭಾವವೇ, ಶ್ರೀ ಸಾಮಾನ್ಯನ ಬಾಯಲ್ಲಿ ರಾರಾಜಿಸುತ್ತಿರುವ ವೀರರಮಣಿ ಓಬವ್ವ ಇಲ್ಲಿ ಮೌನವಾಗಿದ್ದಾಳೆ. ಜನಪದರ ದೃಷ್ಟಿಯಲ್ಲಿ ಅನರ್ಘ್ಯ ಸ್ತ್ರೀರತ್ನವಾಗಿದ್ದರು ಲಾವಣಿಗಳಲ್ಲಿ ಹಿಂದಿದ್ದಾಳೆ. ಉಲ್ಲೇಖಗಳ ಪ್ರಕಾರ ಬೆರಳಣಿಕೆ ಲಾವಣಿಗಳಿವೆ. ಶ್ರೀರಂಗಯ್ಯ ಬರೆದಿದ್ದಾರೆ ಎಂಬುದು ತಿಳಿದುಬಂದಿದೆ. (ಅವು ಇತ್ತೀಚೆನವು) ಆದರೆ ಲಭ್ಯವಾಗಿಲ್ಲ. ಅವುಗಳಲ್ಲಿ ದಿ. ಸೀತಾರಾಮರೆಡ್ಡಿಯವರು ದುರ್ಗದ ಮದಕರಿಯ ಬಗ್ಗೆ ವಿವರಿಸಿದ ಲಾವಣಿಯಲ್ಲಿ ಓಬವ್ವನ ಉಲ್ಲೇಖವಿದೆ. ಈ ಲಾವಣಿ ಮಾತ್ರ ಲಭ್ಯವಿದೆ.

ಬಾರಣ್ಣ ಬಾರೋ ನೋಡು ಬಾರಣ್ಣ
ನಮ್ಮ ಚಿತ್ರದುರ್ಗದ ಬೆಟ್ಟ ನೋಡು ಬಾರಣ್ಣ !!ಪ!!
ವೀರ ಮದಕರಿ ನಾಯಕನಾ ಏಳು ಸುತ್ತಿನ ಕೋಟೆಯನು
ಬಂದು ನೋಡಿ ಸ್ಫೂರ್ತಿ ಹೊಂದಣ್ಣಾ ತಂದಾನಿ ತಾನಿ
ಬಂದು ನೋಡಿ ಸ್ಫೂರ್ತಿ ಹೊಮದಣ್ಣಾ !!೧!!

ವೀರನಾಗಿ ಧೀರನಾಗಿ ದೇಶಕ್ಕಾಗಿ ಹೋರಾಡಿ
ಚಿತ್ರದುರ್ಗದ ಕೀರ್ತಿಯ ಉಳಿಸಣ್ಣಾ ತಂದಾನಿತಾನ
ಚಿತ್ರದುರ್ಗದ ಕೀರ್ತಿ ಉಳಿಸಣ್ಣಾ !!೨!!

ಬೆಟ್ಟಕ್ಕೋಗ್ತ ದಾರಿಯಲ್ಲಿ ಹೊಟ್ಟೆಗಣಪ ಕುಳಿತವನಲ್ಲಿ
ಮುಟ್ಟಿ ನಲಿದು ಬಾಗಿ ನಮಿಸಣ್ಣಾ ತಂದಾನಿತಾನ
ಮುಟ್ಟಿ ನಲಿದು ಬಾಗಿ ನಮಿಸಣ್ಣಾ !!೩!!

ಸಾಲು ಸಾಲು ಬಾಗಿಲಲ್ಲಿ ಮೇಲೆ ಹೋಗಿ ನೋಡಲಾಗಿ
ಜೋಲಿಯಾಟ ಕಂಭಗಳೆರಡಣ್ಣಾ ತಂದಾನಿತಾನ
ಜೋಲಿಯಾಟ ಕಂಭಗಳೆರಡಣ್ಣಾ !!೪!!

ಅತ್ತ ಹೊಕ್ಕು ನೋಡಲಾಗಿ ಅಕ್ಕ ತಂಗಿ ಹೊಂಡಗಳೆರೆಡು
ಅಕ್ಕಪಕ್ಕದಲ್ಲಿ ನಿಂತಿವೆ ತಂದಾನಿತಾನ
ಅಕ್ಕ ಪಕ್ಕದಲ್ಲಿ ನಂತಿವೆ !!೫!!

ಮುಂದೆ ಹೋದ್ರೆ ಮುರ್ಗಿ ಮಠಕ್ಕೊಂದಿ ಇರುವ
ಬಂದ ಜನರಿಗೆಲ್ಲ ಸಂಪಿಗೆ ತಂದಾನಿತಾನ
ಬಂದ ಜನರಿಗೆಲ್ಲ ಸಂಪಿಗೆ !!೬!!

ಲೋಕವನ್ನ ರಕ್ಷಿಸುವಂಥಾ ಏಕನಾಥಮ್ಮನನ್ನು
ಬೇಕಾದ್ದೆ ಬೇಡ ಬಹುದಣ್ಣಾ ತಂದಾನಿ ತಾನಿ
ಬೇಕಾದ್ದೆ ಬೇಡ ಬಹುದಣ್ಣಾ !!೭!!

ವನಕೆ ಕಿಂಡಿ ಕಾಣುತಿದೆ ಮನಕೆ ಸ್ಮರಣೆ ನೀಡುತ್ತಿದೆ
ವೀರಮಹಿಳೆ ನೀನಾಗು ಎನ್ನುತಲಿದೆ ತಂದಾನಿತಾನಿ
ವೀರಮಹಿಳೆ ನೀನಾಗು ಎನ್ನುತಲಿದೆ !!೮!!

ವೀರರಿದ್ದು ನಾಡಿಂದೆಂದು ಶೂರರಿದ್ದ ಬೀಡಿದೆಂದು
ಕಲ್ಲು ಕಥೆಯ ಹೇಳುತಲಿದೆ ತಂದಾನಿತಾನಿ
ಕಲ್ಲು ಕಥೆಯ ಹೇಳುತಲಿದೆ !!೯!!

ಮೂರುತಿಯು ಚಿಕ್ಕದಾಗಿ ಕೀರುತಿಯು ದೊಡ್ಡದಾಗಿ
ನಮ್ಮ ಊರು ಹೆಸರಾಗಿದೆ ತಂದಾನಿತಾನ
ನಮ್ಮ ಊರು ಹೆಸರಾಗಿದೆ !!೧೦!!

೫.೫. ಓಬವ್ವನ ಸಂಬಂಧಿಕರ ಕಥನಗಳು : ಕಥನ ಗೀತೆಗಳಲ್ಲಿ ಹಾಡಿದವರ ಹೆಸರು ಊರುಗಳ ಉಲ್ಲೇಖ ಕೂಡಿರುತ್ತದೆ.ಇದು ರೂಪಾಂತರವು ಆಗಬಹುದು.ಒನಕೆಯಿಂದ ಹೈದರಾಲಿಯ ಸೈನಿಕರನ್ನು

ಹೊಡೆದು ದುರ್ಗವನ್ನು ಕೋಟೆಯನ್ನು ರಕ್ಷಿಸಿದ ಓಬವ್ವನ ಇತಿಹಾಸದ ಬಗ್ಗೆ ಅವರ ವಂಶೀಕರೆನಿಸಿದ ನಾಗೇಂದ್ರರಾವ್ ರವರು, ಹನುಮಂತಪ್ಪ, ಸೋಮಶೇಖರ ರವರು ಉಪಯುಕ್ತ ಮಾಹಿತಿಗಳನ್ನು ನೀಡಿದರು. ಅಲ್ಲಿಗೆ ತಮ್ಮಲ್ಲಿದ್ದ ವಂಶ ವೃಕ್ಷವನ್ನು ನೀಡುವುದರೊಂದಿಗೆ ತಮ್ಮನ್ನು ಗುರುತಿಸಲು ಅನುವು ಮಾಡಿದ್ದಾರೆ. ಈಕೆಯ ರೋಮಾಂಚಕಾರಿ ಘಟನೆಯು ಚಿತ್ರದುರ್ಗ ಇತಿಹಾಸದಲ್ಲಿ ಒಂದು ಅಪೂರ್ವ ಘಟನೆ ಎಂಬುದನ್ನು ಎಲ್ಲರೂ ಒಪ್ಪಿಕೊಂಡಿರುವುದೇ ಆಗಿದೆ. ಚಿತ್ರದುರ್ಗದ ಕೋಟೆಯನ್ನು ವೀಕ್ಷಿಸಲು ಬರುವ ಪ್ರೇಕ್ಷಕರು ಕೇವಲ ಆಕೋಟೆ ಮತ್ತು ಅದರ ಆಳ್ವಿಕೆಯ ಮಹತ್ವವನ್ನು ಮಾತ್ರ ಅರಿತು ಸಂತೃಪ್ತರಾಗದೆ, ಉತ್ತರ ದಿಕ್ಕಿನ ಕೋಟೆಯಲ್ಲಿನ ಒನಕೆ ಓಬವ್ವನ ಕಿಂಡಿಯನ್ನು ಅತೀ ಕುತೂಹಲದಿಂದ ವೀಕ್ಷಿಸಿ, ಪರೀಕ್ಷಿಸಿ ಓಬವ್ವೆಯ ದಿಟ್ಟ ಸಾಹಸವನ್ನು ಸ್ಮರಿಸದೆ, ಆಶ್ಚರ್ಯಪಡದೇ ಹಿಂದಿರುಗುವುದಿಲ್ಲ. ಇಂಥಹ ತಮ್ಮ ಕುಲದೇವತೆಯಾಗಿ ನೆಲೆಸಿರುವ ಓಬವ್ವಳನ್ನು ಅವಳ ವಂಶೀಕರು ದೇವತೆಯಾಗಿ ಪೂಜಿಸುತ್ತೀದ್ದಾರೆ. ಓಬವ್ವಳಿಗಾಗಿ ಒಂದು ದೇವಸ್ಥಾನವನ್ನು ನಿರ್ಮಿಸಿಕೊಂಡಿದ್ದು ಅಂದಿನಿಂದ ಇಂದಿನವರೆಗೂ ಎಡಬಿಡದೆ ಪೂಜಿಸಿಕೊಂಡು ಬರುತ್ತಿದ್ದಾರೆ. ಹಾಗೆಯೇ ತಮ್ಮದೇ ಆದ ಕಥೆ, ಕಥನಗಳನ್ನು ನಿರ್ಮಿಸಿಕೊಂಡಿದ್ದಾರೆ.

ಸಾಮಾನ್ಯ ಛಲವಾದಿಗರಾದ ಇವರಿಗೆ ಕುಲದೇವತೆಯಾದ ಓಬವ್ವಳು ಸಾಮಾನ್ಯಳಾಗಿ ತೋರದೆ ಭೂಲೋಕದಲ್ಲಿ ತಮ್ಮ ವಂಶಕ್ಕಾಗಿ ಅವತರಿಸಿದವಳೆಂದೇ ನಂಬಿದ್ದಾರೆ. ಗಂಡು ಮೆಟ್ಟಿದ ನಾಡಾದ ದುರ್ಗದ ಮಗಳು ತಮ್ಮ ದೇವತೆ ಎಂಬುದೇ ಅವರ ಹೆಗ್ಗಳಿಕೆಯಾಗಿದೆ. ಹಾಗಾಗಿ ತಮ್ಮದೇ ಕಥನಗಳಲ್ಲಿ ಓಬವ್ವನನ್ನು ಸೃಷ್ಟಿಸಿ ಕೊಂಡಿದ್ದಾರೆ. ಐತಿಹಾಸಿಕ ಮಹಿಳೆಯೆನಿಸಿದ್ದಾರೆ. ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಕಥನ ಕಾವ್ಯಕ್ಕೆ ಪ್ರಧಾನ ಸ್ಥಾನಮಾನವಿದೆ. ಏಕೆಂದರೆ ಇಲ್ಲಿ ಕಥೆಯೇ ಪ್ರಧಾನವಾಗಿರುತ್ತದೆ. ನಂಬಿಕೆಯ ಬುನಾದಿಯ ಮೇಲೆ ತಮ್ಮಾಕೆಯ ಗುರುತಿಗಾಗಿ ಪೂರ್ವಜರ ಕಾಲದಿಂದ ಆಚರಿಸುತ್ತಾ ಬಂದಿರುವ ನಡೆ, ನುಡಿ, ರೀತಿ, ಆಚಾರ, ವಿಚಾರಗಳನ್ನೆಲ್ಲಾ ಪಾಲಿಸುತ್ತಾ ಬಂದಿರುವ ಇವರ ನಡೆ ಅನನ್ಯ. ಓಬವ್ವನನ್ನು ತಮ್ಮ ಹಿರಿಯಳು, ಓಬಜ್ಜಿ ಎಂದೇ ಸಂಬೋಧಿಸುತ್ತಾ ತಮ್ಮಗಳ ಸಮೂಹದೊಡನೆ ಆಕೆಯನ್ನು ಮೇಳೈಸಿಕೊಂಡು ಎಡಬಿಡದೆ ಪೂಜಿಸುತ್ತಾ ಬಂದಿದ್ದಾರೆ. ತಮ್ಮ ಕಷ್ಟ ಸುಖಕ್ಕೆಲ್ಲಾ ಸ್ಪಂದಿಸುವ, ನಮ್ಮ ನಡುವೆ ಬಾಳಿ ಹೋದ ನಾಡಪ್ರೇಮಿಯನ್ನು ದಾಖಲಿಸುತ್ತಾ ಬಂದಿದ್ದಾರೆ. ಈ ನಂಬಿಕೆಯಲ್ಲಿ ಚರಿತ್ರೆಗೂ ಮೌಖಿಕತೆಗೂ ಮಧ್ಯದ ತಿಕ್ಕಾಟದಲ್ಲಿ ಅಂತಿಮವಾಗಿ ಮೌಖಿಕತೆಯೇ ಇತಿಹಾಸವನ್ನಾಕ್ರಮಿಸಿದೆ. ಕನ್ನಡ ನಾಡಿನಲ್ಲಿ ಹುಟ್ಟಿದವರು ನಾಡಿನ ಋಣ ತೀರಿಸಲೇಬೇಕು. ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರಬಹುದು. "ಸಾವು ಅನಿವಾರ್ಯವಿರಬಹುದು, ಆದರೂ ಅದಕ್ಕೆ ಹೆದರುವವರೇ ಹೆಚ್ಚು ಮಂದಿ. ಆದರೆ ಸಾವು ಎಂದಾದರೂ ಬರಲಿ! ಅದು ಯಾರ ಕೈಯಲ್ಲೂ ಇಲ್ಲ. ಬದುಕಿಯೂ ಸತ್ತಂತ ವರ್ತನೆ ಮಾತ್ರ ನಮಗೆ ಬರದಿರಲಿ"[೨] ಇಲ್ಲಿ ಓಬವ್ವನ ನಡೆಯೂ ಅದೇ ಆಗಿದೆ. ಹೆಣ್ಣು ಅಬಲೆಯಲ್ಲ. ಗಂಡಸಿನಂತೆ ಸಮಾನ ದೇಹಬಲ ಮನೋಬಲವುಳ್ಳವಳು. ಲಿಂಗಭೇದ ಹೊರತಾಗಿ ಸ್ತ್ರೀಪುರುಷರು

ಸರ್ವ ಸಮಾನರು ಎಂಬ ತತ್ವವನ್ನು ನಿಜ ಮಾಡಿ ತೋರಿಸಿದವಳು. ಅವಳ ದಿಟ್ಟತನದಿಂದ ಮಹಿಳಾ ಲೋಕಕ್ಕೆ ಆದರ್ಶಳಾಗಿದ್ದಾಳೆ. ಸ್ತ್ರೀಶಕ್ತಿ ಒಂದು ನೈಸರ್ಗಿಕ ಶಕ್ತಿ. ಸಂರಕ್ಷಣೆಯ ಘಟಕ.[೧೩] ಇಲ್ಲಿ ಕುವೆಂಪುರವರು ಪ್ರಕೃತಿಯೊಂದಿಗೆ ಹೆಣ್ಣನ್ನು ಸಮೀಕರಿಸುವ ಪ್ರಯತ್ನ ಮಾಡಿದ್ದಾರೆ. ಅವಳಿಗೆ ಮನುಕುಲವನ್ನು ಬೆಳೆಸುವ, ಸಂರಕ್ಷಿಸುವ ಶಕ್ತಿಯೂ ಇದೆ. ಆ ಕೆಲಸವನ್ನು ಓಬವ್ವ ಇಲ್ಲಿ ಸಕ್ರಮವಾಗಿ ನಿರ್ವಹಿಸಿದ್ದಾಳೆ. ಬದುಕಿದ್ದಾಗ ವೀರನಾರಿಯಾಗಿ ನಾಡಪ್ರೇಮ ತೋರಿಸಿದ ಹೆಣ್ಣು. ಸಾವಿನ ನಂತರ ತನ್ನವರಿಗೆ ಆರಾಧ್ಯದೈವವಾಗಿದ್ದಾಳೆ. ಮುಂಜಾನೆಯ ಮೊದಲ ಪೂಜೆ ಓಬಜ್ಜಿಗೆ ಸಲ್ಲಿಸುತ್ತಾರೆ ವಂಶೀಕರು.

೧. **ಓಬಜ್ಜಿಯಾದದ್ದು** : ಗುಡೇಕೋಟೆಯ ಪೆದ್ದಕ್ಕನಾಗತಿಗೆ ಆಪ್ತ ಸಹಾಯಕಳಾಗಿದ್ದ, ಪರೋಕ್ಷವಾಗಿ ಅಂಗರಕ್ಷಕಿಯಾಗಿದ್ದ ಓಬವ್ವವನ್ನು ನಾಗತಿಯವರು ಮದುವೆ ಮಾಡಿಸಿದ್ದು ನೆಪಮಾತ್ರ ಏಕೆಂದರೆ ಓಬವ್ವ ನಂಬಿಕಸ್ಥರು ಪ್ರಮಾಣಿಕರು ಆಗಿದ್ದ ಛಲವಾದಿ ಮನೆತನಕ್ಕೆ ಸೇರಿದವಳಾಗಿದ್ದು ಸೇವೆಯೇ ತಮ್ಮ ಪರಮಗುರಿ ಎಂದು ತಿಳಿದ ಸೇವಾಮನೋಭಾವನೆಯುಳ್ಳ ಜಾತಿಯಲ್ಲಿ ಜನಿಸಿದವಳು.ಇವಳು ದುರ್ಗದ ಕೋಟೆಯನ್ನುವಿವಾಹದ ಮೂಲಕ ಪ್ರವೇಶಿದಳು ಆದರೆ ಅವಳಮನಸ್ಸಿನಲ್ಲಿ ತನ್ನ ಹಿರಿಯರು ಹೇಳುತ್ತಿದ್ದ ತನ್ನನಾಡು, ತನ್ನದುರ್ಗ ತನ್ನ ಪುರಪ್ರಮುಖರು ಸುರಕ್ಷಿತವಾಗಲು ತನ್ನ ದಿಟ್ಟತನದ ಕಾವಲಿನ ರಕ್ಷಣೆಯ ಅಗತ್ಯವೆಷ್ಟು ಎಂದು ಹೇಳುತ್ತಿದ್ದುದನ್ನು ಜ್ಞಾಪಿಸಿಕೊಳ್ಳುತ್ತಿದ್ದಳು. ಹಾಗೆಯೇ ತನ್ನ ಯಜಮಾನರ ವಿರಾಮದಲ್ಲಿ ತಾನೇ ಅವರ ಕರ್ತವ್ಯವನ್ನು ಮಾಡಿ ಮುಗಿಸಿದಳು, ಕೆಚ್ಚದೆಯ ಪರಾಕ್ರಮವನ್ನು ತೋರಿಸಿದಳು, ಪಿಸುಮಾತಿನರವವನ್ನು ಆಲಿಸಿದ ಓಬವ್ವ ಕ್ಷಣ ಮಾತ್ರವೂ ತಡಮಾಡದೆ ಗೊಂದಲಕ್ಕೀಡು ಮಾಡದೇ ಗುಪ್ತದ್ವಾರದೆಡೆಗೆ ಧಾವಿಸಿ ದುರ್ಗಕ್ಕೊದಗಿದ ಕಂಟಕವನ್ನು ಕ್ಷಣಾರ್ಧದಲ್ಲಿ ಪರಿಹರಿಸಿದ್ದಳು. ಇಂಥಹ ಓಬವ್ವನನ್ನು ಇವರು ಅಂದಿನಿಂದ ಇಂದಿನವರೆಗೂ ಅವಳ ಇಚ್ಛೆಯಂತೆ ಕುಲದೇವತೆಯಾಗಿ ಆರಾಧಿಸುತ್ತಾ ಬಂದಿದ್ದಾರೆ. ಹಾಗೆಯೇ ತಮ್ಮೆಲ್ಲಾ ಕಷ್ಟಗಳನ್ನು ಪಾರುಮಾಡುತ್ತಾಳೆ ಎಂಬ ಮುಗ್ಧ ನಂಬಿಕೆಯಿಟ್ಟಿದ್ದಾರೆ. ಹಾಗೆಯೇ ತಮ್ಮ ಕುಟುಂಬಕ್ಕೆ ಯಾವುದೇ ಕಷ್ಟಗಳು ಬಂದರೂ ತಾವೇ ನಿರ್ಮಿಸಿಕೊಂಡಿರುವ ಓಬವ್ವನನ್ನು ಪ್ರತಿಷ್ಠಾಪಿಸಿಕೊಂಡಿರುವ ಆಲಯಕ್ಕೆ ಹೋಗಿ ಭಕ್ತಿಯಿಂದ ನಮಸ್ಕರಿಸಿ, ಹರಕೆ ಕಟ್ಟಿಕೊಂಡು ಕಷ್ಟ ಪರಿಹರಿಸುವಂತೆ ಬೇಡಿಕೊಂಡಾಗ ಸ್ವಲ್ಪ ಕಾಲದಲ್ಲಿಯೇ ಎಲ್ಲಾ ಕಷ್ಟಗಳು ಪರಿಹಾರವಾಗುತ್ತವೆ ಎನ್ನುತ್ತಾರೆ. ಇದು ಇವರು ಹೆಮ್ಮೆಯಿಂದ ಹೇಳಿಕೊಳ್ಳುವ ಮಾತುಗಳು.

ಹಾಗೆಯೇ ಓಬವ್ವನನ್ನು ಓಬಜ್ಜಿಯೆಂದೇ ಸಂಬೋಧಿಸುತ್ತಾ ಅನನ್ಯ ಭಕ್ತಿಯನ್ನು ಅರ್ಪಿಸುತ್ತಿದ್ದಾರೆ. ಹಾಗೆಯೇ ದೇವತೆಗೆ ಹರಕೆಯ ರೂಪದಲ್ಲಿ ಬೆಳ್ಳಿ ಚಾಮರ, ಮುಖವಾಡ, ಮಕ್ಕಳಾಗದೆ ಇರುವವರು ಬೆಳ್ಳಿಯ ತೊಟ್ಟಿಲು, ಕಣ್ಣು, ಹುಬ್ಬುಗಳು, ಬೆಳ್ಳಿಯ ಸರಗಳು, ಹಾಗೆಯೇ ಸೀರೆ, ಕುಬುಸಗಳು, ಮೊದಲಾದವನ್ನು ಹರಕೆ ಹೊತ್ತು ಅವುಗಳನ್ನೆಲ್ಲಾ ಸೇರಿಸಿ ದೇವಸ್ಥಾನದಲ್ಲಿಯೇ ಒಂದು ಪೆಟ್ಟಿಗೆಯಲ್ಲಿ ಜತನವಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಆ ಎಲ್ಲಾ ಹರಕೆಯ

ರೂಪದಲ್ಲಿ ನೀಡಿರುವ ಬೆಳ್ಳಿಯ ವಸ್ತುಗಳನ್ನು ಮುಂದೊಂದು ದಿನ ಓಬವ್ವನ ಇರುವಿಕೆಯನ್ನು ಶೃತಪಡಿಸುವ ಪ್ರಯತ್ನಗಳಲ್ಲಿ ಒಂದಾಗಬಹುದೆಂಬ ಆಶಾಭಾವನೆಯು ಇವರದಾಗಿದೆ. ಹಾಗೆಯೇ ಈ ನಂಬಿಕೆಗಳು, ಪದ್ಧತಿಗಳು ಮಾನವೀಯ ಮೌಲ್ಯಗಳನ್ನು ಸಂರಕ್ಷಿಸುವ ಸಾಂಸ್ಕೃತಿಕ ವಿಧಿಗಳಾಗಿವೆ.

೨. ಓಬವ್ವನ ವೀಳ್ಯ : ಓಬವ್ವನ ವಂಶೀಕರು ತಾವೆಂದು ಹೇಳಿರುವ ಜಯಮ್ಮನವರು ಚಿತ್ರದುರ್ಗ ನಿವಾಸಿಗಳು. ಅವರು ಹೇಳಿದ್ದು, ಓಬವ್ವನಿಗೆ ಮದಕರಿನಾಯಕರು ಆಕೆಯ ಆಸೆಯಂತೆ ನೀಡಿದ ಮಾತನ್ನು ನಾಯಕ ವಂಶದವರು ಪರಿಪಾಲಿಸುತ್ತಾ ಬಂದಿದ್ದು ಶುಭಕಾರ್ಯಗಳಲ್ಲಿ ಓಬವ್ವನ ಸಂಬಂಧಿಕರನ್ನೇ ಆಹ್ವಾನಿಸಿ ವೀಳ್ಯ ಕೊಡುವ ಮೂಲಕ ಮರ್ಯಾದೆ ನೀಡುತ್ತಿರುವುದಾಗಿ ತಿಳಿಸಿದರು. ನಾಯಕ ವಂಶದ ರಾಜಾ ಎಸ್. ಪಾಳೆಯಗಾರರ ನಿರೂಪ ಪತ್ರದಲ್ಲಿಯ ಒಕ್ಕಣೆಯಂತೆ ಚದುರಿ ಹೋಗಿದ್ದ ತಾವೆಲ್ಲಾ ಮತ್ತೆ ಒಂದಾಗಿ ಸ್ವಸ್ಥಾನವಾದ ಚಿತ್ರದುರ್ಗ ಜಿಲ್ಲೆಗೆ ಬಂದು ನೆಲೆಸಿದ್ದು ನಾಯಕ ವಂಶದವರು ತಮ್ಮನ್ನು ಗುರುತಿಸಿ, ಗೌರವ ನೀಡುತ್ತಿದ್ದಾರೆ. ಏಕೆಂದರೆ ತಮ್ಮಲ್ಲಿಯೂ ಮಂದಲೋರು ಎಂಬ ಬೆಡಗಿದೆ. ವೀಳ್ಯ ಎತ್ತುವ ಕಾರ್ಯವನ್ನು ನಾಯಕ ವಂಶದ ಮಂದಲೋರೆ ಎತ್ತುತ್ತಿರುವುದರಿಂದ ಆ ಹೆಸರಿನಿಂದಲೇ ತಮ್ಮನ್ನು ಗುರುತಿಸಿ ಅವರ ಮದುವೆ, ನಾಮಕರಣ, ಉತ್ಸವಗಳಲ್ಲಿ ತಮ್ಮಗಳನ್ನೇ ಕರೆದು ಕೂರಿಸಿ ವೀಳ್ಯ ನೀಡುತ್ತಾರೆ. ಇದು ತಮಗೆ ಸಲ್ಲುತ್ತಿರುವ ಮಹತ್ತರ ಮರ್ಯಾದೆ, ಅದು ತಮ್ಮಾಕೆಯ ಓಬವ್ವನನ್ನೇ ನೆನೆದು ಮಾಡುತ್ತಿರುವ ಮರ್ಯಾದೆ ಎಂದರು. ಹಾಗೆಯೆ ಕೋಟೆಯಲ್ಲಿ ಕಹಳೆಯವರಿಗಾಗಿಯೇ ನಿರ್ಮಿಸಿರುವ ಕಟ್ಟೆಮನೆ ಅಂದರೆ ನಮ್ಮಗಳ ಮಧ್ಯದ ಫಿರ್ಯಾದು ನ್ಯಾಯವನ್ನು ಬರೆಹರಿಸಿಕೊಳ್ಳುವ ಕಟ್ಟೆಯಿದ್ದು ಅಲ್ಲಿಯೂ ತಮಗೆ ಸ್ಥಾನಮಾನಯಿದೆ. ಪ್ರತೀವರ್ಷದ ವಿಜಯದಶಮೀ ದಿನ ಶ್ರೀ ಮುರುಘಾಮಠದ ವತಿಯಿಂದ ಆಚರಿಸುವ ದಸರಾಹಬ್ಬದ ದಿನ ಅಂಬು ಎಸೆಯುವ ಕಾರ್ಯಕ್ರಮ ನಡೆಯುತ್ತಿದ್ದು, ಅಂದು ಅಧಿಕೃತವಾಗಿ ಪ್ರಭುತ್ವದಿಂದಲೇ ಗುರುತಿಸಲ್ಪಟ್ಟ ನಾಯಕ ವಂಶದವರಿಂದಲೇ ಈ ಕಾರ್ಯಕ್ರಮ ನಡೆಯುತ್ತಿದ್ದು ಅಂದಿನ ದಸರೆಯ ದಿನ ಕಹಳೆಯವರನ್ನು ಕರೆದು ಓಬವ್ವನ ವೀಳ್ಯ ನೀಡುತ್ತಿದ್ದು, ಇದು ಓಬವ್ವನಿಗೆ ಆಕೆಯ ಸಾಹಸಕ್ಕೆ ಕೊಡುವ ಮರ್ಯಾದೆ. ಇದರಿಂದ ಗತ ಇತಿಹಾಸವನ್ನು ನೆನಪಿಸುವ, ಆಚಾರ ವಿಚಾರಗಳನ್ನು ಮುಂದುವರೆಸಿಕೊಂಡು ಬರುತ್ತಿರುವ ಪಾಳೆಗಾರ ವಂಶದವರಿಗೆ ತಾವು ಋಣಿಗಳಾಗಿ ಇರುವುದಾಗಿ ಭಾವೋದ್ವೇಗದಿಂದ ನುಡಿದರು. ಗತವನ್ನು ನೆನಪು ಮಾಡಿಕೊಳ್ಳದಿರುವುದೇ ಆರೋಗ್ಯಕ್ಕೆ ಒಳ್ಳೆಯದೆಂದು ಅಂದುಕೊಳ್ಳುವ ಜನಾಂಗಗಳ ಮಧ್ಯ ದುರ್ಗದ ನಾಯಕ ವಂಶದವರು ಹಿರಿಮೆಯುಳ್ಳವರು ಎಂದೆನಿಸುತ್ತದೆ. ಇಲ್ಲಿ ಸಾಕ್ಷ್ಯಗಳೂ, ಆಧಾರಗಳು ಕಡಿಮೆಯಿರುವ ಪರಿಸ್ಥಿತಿಯಲ್ಲಿ ಕಣ್ಣು ತೆರೆದು ವಾಸ್ತವನ್ನು ಅರ್ಥಮಾಡಿಕೊಂಡು ಪೂರ್ವಿಕರಿಂದ ಕೇಳಿ ತಿಳಿದ ಸಂಸ್ಕಾರವನ್ನು ಆಚರಿಸುತ್ತಾ ಬರುತ್ತಿರುವ ನಾಯಕ ಪೀಳಿಗೆಗೆ ಜೋಹಾರು. ಮತ ಮೌಢ್ಯದಿಂದ ಬರೆದ ಬರವಣಿಗೆಗಳನ್ನೇ ಶಾಶ್ವತ ಸತ್ಯಗಳೆಂದು ನಂಬುತ್ತಿರುವವರ ಮಧ್ಯ ಓಬವ್ವನ ಚರಿತ್ರೆ ನಿಜವಾದ ಚರಿತ್ರೆಯಾಗಿದೆ. ವೀಳ್ಯ ಎಂಬುದು ಸಾಂಕೇತಿಕ ಗೌರವ

ಚಿಹ್ನೆಯಾದರೂ ಅದರ ಹಿಂದಿನ ಇತಿಹಾಸ, ಅದಕ್ಕೆ ನೀಡುವ ಮರ್ಯಾದೆ ಇದು ನಮ್ಮ ಶ್ರೇಷ್ಠವಾದ ಸಂಸ್ಕೃತಿಯನ್ನು ನೆನಪಿಸುವಂಥಹದ್ದಾಗಿದೆ.

ಇನ್ನು ಓಬವ್ವನು ತನ್ನ ವಂಶೀಕರು ತನ್ನನ್ನು ಕುಲದೇವತೆಯನ್ನಾಗಿ ಆರಾಧಿಸಬೇಕೆಂದು ಮದಕರಿನಾಯಕನಲ್ಲಿ ವಿಜ್ಞಾಪಿಸಿಕೊಂಡು, ವೀಳೆಯನ್ನು ಮಾತ್ರ ಬೇಡಿ ಪಡೆದಳು.ಆ ವೀಳೆಯ ಪದ್ಧತಿ ಈಗಲೂ ಹಾಗೆಯೇ ಮುಂದುವರಿದಿದ್ದು ನಾಯಕರ ವಂಶಿಕರ ಮನೆಯ ಶುಭ ಸಮಾರಂಭದಲ್ಲಿ ನಮಗೆ ಸಲ್ಲುವ ಗೌರವ ಸಲ್ಲುತ್ತಿದೆ ಎಂದಿರುವ ಜಯ್ಯಮ್ಮ (ನಾಗೇಂದ್ರರಾವ್ ರವರ ಪತ್ನಿ) ಪೂಜೆಯನ್ನು ಓಬವ್ವನ ಅಕ್ಕ ತಂಗಿಯರಿಂದಲೇ ಸಲ್ಲಿತ್ತಿರುವುದಾಗಿ ತಿಳಿಸಿದರು. ಓಬವ್ವನ ವಂಶೀಕರಾದ ಬಾಲಪ್ಪ ಓಬವ್ವನ ಮೂರ್ತಿಯನ್ನು ತಾವು ತಂದು ಮನೆಯ ಹತ್ತಿರ ಪ್ರತಿಷ್ಠಾಪಿಸಿಕೊಂಡು ಪೂಜಾ ಕಾರ್ಯಸಲ್ಲಿಸಿದ ನಂತರ ಮೂರು ತಿಂಗಳ ಒಳಗಾಗಿ ಮರಣ ಹೊಂದಿದರಂತೆ. ಇದಕ್ಕೆ ಹೆದರಿದ ಮಕ್ಕಳು ಯಥಾ ಪ್ರಕಾರ ಓಬವ್ವನ ಅಕ್ಕತಂಗಿಯರು ವಾಸಿಸುತ್ತಿರುವ ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯಲ್ಲಿರುವ ಅವರ ಮನೆಯ ಹತ್ತಿರ ಇದ್ದ ಮಾಮೂಲು ಜಾಗದಲ್ಲಿ ತಂದು ಇಟ್ಟರು ಹಾಗಾಗಿ ಮೊದಲು ಓಬವ್ವನ ಅಕ್ಕ ತಂಗಿಯರ ಮಕ್ಕಳು ಮೊಮ್ಮಕ್ಕಳಿಂದಲೇ ಪೂಜೆ ದಿನನಿತ್ಯ ಸಲ್ಲುತ್ತಿದ್ದು, ನಂತರ ವಂಶೀಕರಿಂದ ಸಲ್ಲುತ್ತಿದೆ ಎಂದರು.

೩. ಓಬವ್ವನ ಆರಾಧನೆ : ಓಬವ್ವನಿಗಾಗಿ ಕಹಳೆಯವರೆಲ್ಲಾ ಸೇರಿಕೊಂಡು ಹೊಳಲ್ಕೆರೆಯ ರಸ್ತೆಯಲ್ಲಿ ಒಂದು ಪುಟ್ಟ ದೇವಸ್ಥಾನ ನಿರ್ಮಿಸಿಕೊಂಡಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಓಬವ್ವನಿಗೆ ತಂಗಿಯ ವರಸೆಯಾದ ಪುಟ್ಟಮ್ಮನ ಮಗ ಸುರೇಶಪ್ಪ ಹೇಳಿದಂತೆ ಓಬವ್ವನಿಗೆ ಪೂಜೆ ಅಕ್ಕತಂಗಿಯರ ಮಕ್ಕಳಿಂದಲೇ ಮೊದಲು ಸಲ್ಲುತ್ತಿರುವುದಾಗಿ ತಿಳಿಸಿದರು. ಇದಕ್ಕೆ ಹೊರತಾಗಿ ಓಬವ್ವನ ವಂಶೀಕರೆಂದು ಗುರುತಿಸಲ್ಪಟ್ಟವರಲ್ಲಿ ಬಾಲಪ್ಪ ಎಂಬುವವರು ದೇವಸ್ಥಾನದಲ್ಲಿದ್ದ ಮೂರ್ತಿಯನ್ನು ತಾವು ವಾಸವಾಗಿದ್ದ ಮನೆಯ ಹತ್ತಿರ ತೆಗೆದುಕೊಂಡು ಹೋಗಿ ತಮ್ಮವರ ಮನೆಗಳ ಸಮೀಪದಲ್ಲಿಯೇ ಪ್ರತಿಷ್ಠಾಪಿಸಿಕೊಂಡು ಪೂಜೆ ಮಾಡುತ್ತಾ ಬಂದರು. ತದನಂತರ ಮೂರು ತಿಂಗಳೊಳಗೆ ಬಾಲಪ್ಪನವರು ಮರಣ ಹೊಂದಿದರು. ಇದಕ್ಕೆ ಹೆದರಿದ ಮಕ್ಕಳು ಆ ಮೂರ್ತಿಯನ್ನು ಯಥಾಸ್ಥಾನಕ್ಕೆ ತಂದಿಟ್ಟರು. ನಂತರ ಮೊದಲು ತಾವೇ ಅಂದರೆ ಓಬವ್ವನ ಅಕ್ಕ–ತಂಗಿಯ ವರಸೆಯವರು ಪೂಜೆಸಲ್ಲಿಸುತ್ತಿರುವುದಾಗಿ ತಿಳಿಸಿದರು. ನಂತರ ವಂಶೀಕರೆಂದು ಹಾಲಿ ಈಗ ದುರ್ಗದಲ್ಲಿರುವ ನೆಲೆಸಿರುವ ನಾಗೇಂದ್ರರಾವ್, ಹನುಮಂತಪ್ಪ, ಸೋಮಶೇಖರ್‌ರವರ ಕುಟುಂಬ ವರ್ಗದಿಂದ, ಉಳಿದ ದುರ್ಗದೆಲ್ಲೆಡೆ ಹರಡಿರುವ ಬಂಧು ಬಾಂಧವರಿಂದ ಉತ್ಸವಗಳಲ್ಲಿ, ಪೂಜೆ ಸಲ್ಲುತ್ತಿದೆ. ತಮ್ಮ ತಮ್ಮ ಶಕ್ತ್ಯಾನುಸಾರ ಕಾಣಿಕೆಗಳನ್ನು ಸಮರ್ಪಿಸುತ್ತಾ ಕಾಲಕಾಲಕ್ಕೆ ಆಕೆಗೆ ಆರಾಧನೆಯನ್ನು ನೆರವೇರಿಸುತ್ತಿದ್ದಾರೆ. ಭಗವಂತನ ಕಲ್ಪನೆ ಎನ್ನುವುದು ಕುಂಬಾರನ ಮಣ್ಣಿನ ಹಾಗೆ. ಮಾಡುವವನ ಮನೋಧರ್ಮಕ್ಕೆ ಅನುಗುಣವಾಗಿ ಮಣ್ಣು ಬೇರೆ ಬೇರೆ

ಆಕೃತಿಯನ್ನು ಪಡೆಯುತ್ತದೆ. ಭಕ್ತರೂ ಸಹ ಸಂಸ್ಕಾರಕ್ಕೆ ಅನುಗುಣವಾಗಿ ಭಗವಂತನನ್ನು ಕಲ್ಪಿಸಿಕೊಳ್ಳುತ್ತಾರೆ. ಹಾಗೆಯೇ ಓಬವ್ವನ ಸಂಬಂಧಿಕರು ಅವರ ಸಂಸ್ಕಾರಕ್ಕೆ ತಕ್ಕಂತೆ ತಮ್ಮ ಮುಗ್ಧತೆಯಲ್ಲಿ ಆಕೆಯನ್ನು ಆರಾಧಿಸುತ್ತಾ ಬಂದಿದ್ದಾರೆ. ಸಹಜವಾಗಿಯೇ ಆಕೆಗೆ ಸಲ್ಲಬೇಕಾದ ಉತ್ಸವ ವಗೈರೆಗಳನ್ನು ನಿರ್ವಹಿಸುತ್ತಿದ್ದಾರೆ. ಕಾಲಘಟ್ಟದಲ್ಲಿ ಮರೆಯಾಗುವವು ಹಲವಾರು ಘಟನೆಗಳು. ಆದರೆ ಓಬವ್ವನ ವೀರಗಾಥೆ ಮಾತ್ರ ಜನಪದರ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ. ವರ್ತಮಾನದಲ್ಲಿಯೂ ಆಕೆಯನ್ನು ನೆನಪಿಸುವ ಕಾರ್ಯ ಮುಂದುವರೆಯುತ್ತಾ ಸಾಗಿದೆ. ದೇಶದಲ್ಲಿನ ಪಟ್ಟಭದ್ರ ಧರ್ಮಗಳು ಬಹಳವಾಗಿ ಮಹಿಳೆಯನ್ನು ಸತಿ ಹೋಗುವಂತೆ ಮಾಡಿದವು. ಅವಿದ್ಯೆಯಲ್ಲಿಟ್ಟರು. ದೇವದಾಸಿಯನ್ನಾಗಿ ಮಾಡಿದರು. ಅಡಿಗೆ ಮನೆಯಲ್ಲಿ ಕೊಳೆಸಿದರು. ಇಷ್ಟೆಲ್ಲಾ ವ್ಯವಸ್ಥೆಯ ಕುತಂತ್ರದ ಮಧ್ಯೆಯೂ ಮಹಿಳೆ ಚರಿತ್ರೆಯಲ್ಲಿ ಹೆಸರುಗಳಿಸಿದ್ದಾಳೆ. ಅವರ ಸಾಲಿನಲ್ಲಿ ಬರುವವಳು ಓಬವ್ವ. ಜನಪದರು ಅಂಥಹ ಮಹತ್ತರ ಪಾತ್ರ ವಹಿಸಿದ್ದಾರೆ. ಕನ್ನಡಿಗರಾದ ನಾವು ಒಮ್ಮೆ ಯೋಚಿಸಿದಾಗ ಮನಸ್ಸಿನ ಮುಂದೆ ಬಂದು ನಿಲ್ಲುವ ಪ್ರಶ್ನೆ "ಕನ್ನಡಿಗರಾದ ನಮ್ಮ ಹಿಂದಿನವರು ಏನು ಮಾಡಿದರು. ಇಂದಿನವರೇನು ಮಾಡಿದರು. ಮುಂದಿನವರೇನು ಮಾಡಬೇಕಾಗುತ್ತದೆ" ಎಂಬುದು. ಈ ನಿಟ್ಟಿನಲ್ಲಿ ಹಿಂತಿರುಗಿ ನೋಡಿದರೆ ಚರಿತ್ರೆಯ ನೂರಾರು ಘಟನೆಗಳು, ಆ ಘಟನೆಗಳ ಹಿಂದಿನ ಉದ್ದೇಶ, ಚರಿತ್ರೆ ಎಲ್ಲವೂ ಕಾಣುತ್ತವೆ. ಆಗ ನಮ್ಮ ಮುಂದಿನ ಹಾದಿ ನಿಚ್ಚಳವಾಗಿ ಕಾಣುತ್ತದೆ.

ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದಾಗ ಹೈದರ್‌ನಂಥಹ ವೀರನನ್ನು ಹತಾಶನನ್ನಾಗಿ ಮಾಡಿದ ಓಬವ್ವೆಯ ವೀರಪರಂಪರೆ ಆರಾಧನೆಗೆ ಅರ್ಹವಾದುದು. ದುರ್ಗದ ರೌದ್ರವತೆಯನ್ನು ತನ್ನ ರೌದ್ರವತಾರದಿಂದಲೇ ಶತ್ರುಗಳಿಗೆ ಸಾರಿದ ಇವಳ ಈ ದಿಟ್ಟತೆ ಆರಾಧಿಸುವಂಥಹದ್ದು. ಹಾಗಾಗಿ ಅವಳಿಗಾಗಿ ಪುಟ್ಟ ದೇಗುಲ ನಿರ್ಮಿಸಿಕೊಂಡು ಅಂದಿನಿಂದ ಇಂದಿನವರೆಗೂ ಎಡಬಿಡದೆ ಆರಾಧಿಸಿಕೊಂಡು ಬಂದಿರುವ ಆಕೆಯ ಸಂಬಂಧಿಕರಿಗೆ ಆಕೆ ಆರಾಧ್ಯ ದೇವತೆಯಾಗಿದ್ದಾಳೆ. ಓಬವ್ವೆ ಕನ್ನಡನಾಡಿಗೆ ಮಕುಟಪ್ರಾಯವಾಗಿದ್ದಾಳೆ.

ಅಡಿ ಟಿಪ್ಪಣಿಗಳು

೧. ದೇ.ಜ.ಗೌ. ಸಮಗ್ರ ಮುನ್ನುಡಿಗಳು, ಸಂಪುಟ-೩, ೨೦೧೦, ಪುಟ ಸಂಖ್ಯೆ-೩೧-೬೬

೨. ವಕ್ತೃಗಳು. ನಾಯಕ ವಂಶದವರೆಂದು ಪ್ರಭುತ್ವದಿಂದ ಅಧಿಕೃತವಾಗಿ ಗುರುತಿಸಲ್ಪಟ್ಟಿರುವ ಶ್ರೀವೀರಭದ್ರನಾಯಕರು ಚಳ್ಳಕೆರೆ ಇವರು ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ನೀಡಿದ ಮಾಹಿತಿ.

೩. ಡಾ. ಬಿ. ರಾಜಶೇಖರಪ್ಪ. ಹುಲ್ಲೂರು ಶ್ರೀನಿವಾಸ ಜೋಯಿಸರು, ೨೦೦೮ ಪುಸಂ-೧೧೩

೪. ವಕ್ತೃಗಳು, ಪಾಲಯ್ಯನವರು, ಕೆಳಗೋಟೆ ನಿವಾಸಿಗಳು, ಚಿತ್ರದುರ್ಗ

೫. ಡಾ. ದೇ.ಜ.ಗೌ., ಜನಪದ ಮಹಾ ಸಂಪುಟ, ೨೦೧೦, ಪುಟ ಸಂಖ್ಯೆ-೭೬,೧೯೦,೧೯೨,೨೫೮.

೬. ಪ್ರೊ. ಎ.ಡಿ.ಕೃಷ್ಣಯ್ಯ, ಭಾರತದ ಧೀರಮಹಿಳೆ ಚಿತ್ರದುರ್ಗದ ಒನಕೆ ಓಬವ್ವ, ೧೯೭೯ ಪುಟ ಸಂಖ್ಯೆ-೧೯,೨೦,೨೧,೩೩,೩೪

೭. ಪ್ರೊ.ಲಕ್ಷ್ಮಣ ತೆಲಗಾವಿ, ಇತಿಹಾಸ ದರ್ಶನ ಸಂಪುಟ ೬, ೧೯೯೧, ಪುಟ ಸಂಖ್ಯೆ-೭೬

೮. ಶ್ರೀಕಂಠ ಕೊಡಿಗೆ, ಕನ್ನಡ ಲಾವಣಿಗಳು, ೧೯೯೯, ಪುಟ ಸಂಖ್ಯೆ-೩೮

೯. ಎ.ವಿ.ಆರ್ ಶಾಸ್ತ್ರಿ (ಕನ್ನಡಕ್ಕೆ) ಬಾಬು ಕೃಷ್ಣಮೂರ್ತಿ, ಯಾವುದು ಚರಿತ್ರೆ (ತೆಲುಗು ಮೂಲ) ೨೦೧೩, ಪುಟ ಸಂಖ್ಯೆ-೩೬೪,೩೬೫.

೧೦. ವಕ್ತೃಗಳು ಶ್ರೀ ಸೋಮಶೇಖರಪ್ಪರವರು. ಚಿತ್ರದುರ್ಗ.

೧೧. ಲಕ್ಷ್ಮಣ ತೆಲಗಾವಿ (ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ೧೯೭೬ ಪುಟ ಸಂಖ್ಯೆ-೧೫೫,೧೬೯.

೧೨. ದೇ.ಜ.ಗೌ., ಸಂಪುಟ.೨. ಪುಟ ಸಂಖ್ಯೆ-೫೬೯.

೧೩. ಡಾ. ಹೀ.ಚಿ. ಬೋರಲಿಂಗಯ್ಯ (ಸಂ), ಕುವೆಂಪು: ಮಹಿಳಾ ಮಂಥನ, ೨೦೧೦, ಪುಟ ಸಂಖ್ಯೆ-೫೭

ಅಧ್ಯಾಯ : ೬

ಓಬವ್ವನ ಕುರಿತ ಆಚರಣಾ ಲೋಕ

ಅಧ್ಯಾಯ : ಆರು

ಓಬವ್ವನ ಕುರಿತ ಆಚರಣಾ ಲೋಕ

ಅದಕ್ಕೆ ತಳಹದಿಯಾಗಿ ಅದರ ಉಗಮದಲ್ಲಿ ಒಂದು ಭೌತಿಕಾವಶ್ಯಕತೆಯಿತ್ತು ಎಂಬ ನಿಲುವು ಹೆಚ್ಚು ಪ್ರಚಲಿತಗೊಂಡಂತೆಲ್ಲಾ ಅದರ ಬಗೆಗಿನ ಅಧ್ಯಯನಕ್ಕೆ ತುಂಬಾ ಮಹತ್ವ ಒದಗಿದೆ.

ಮತ ಧರ್ಮಗಳಿಗೆ ಸಂಬಂಧಿಸಿದಂತೆ, ಅಗೋಚರ ದೈವ ಶಕ್ತಿಗಳ ಪ್ರೀತ್ಯಾರ್ಥವಾಗಿ ಮಾನವ ನೆಡೆಯುತ್ತಾ ಬಂದಿರುವ ಮತಾಚಾರಗಳಿಗೆ, ಕರ್ಮವಿಧಿಗಳಿಗೆ ಆಚರಣೆಗಳೆನ್ನುವರು. ಅದಿಮ ಜನಪದ ಗುಂಪು ನಿಸರ್ಗದಲ್ಲಿ ಜೀವಿಸುತ್ತಿದ್ದುದರಿಂದ, ನಿಸರ್ಗದ ವ್ಯಾಪಾರಗಳನ್ನು ವಿಸ್ಮಯ, ಭಯದಿಂದ ನೋಡಿ, ನಿಸರ್ಗವನ್ನು ತನ್ನದೇ ರೀತಿಯಲ್ಲಿ ಅರಿಯುವ ಪ್ರಯತ್ನ ಮಾಡಿತು. ಪ್ರತಿನಿತ್ಯ ಉದಯಿಸುವ ಮತ್ತು ಮುಳುಗುವ ಸೂರ್ಯ, ಬೀಸುವ ಗಾಳಿ, ಉರಿಯುವ ಬೆಂಕಿ, ಸುರಿಯುವ ಮಳೆಯ ಬಗ್ಗೆ ಜನಪದ ಗುಂಪು ಭಯ, ವಿಸ್ಮಯವನ್ನು ತೋರಿ ಅವುಗಳಲ್ಲಿ ಅತಿ ಮಾನುಷ ಶಕ್ತಿ ಇದೆ ಎಂದು, ಅವುಗಳನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿತು. ಇಂಥಹ ಅನುಭವಗಳನ್ನು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಒಂದೇ ಆದುದರಿಂದ ಇಡೀ ಜನಪದ ವೃಂದ ತನ್ನ ರಕ್ಷಣೆಗಾಗಿ, ಒಳಿತಿಗಾಗಿ, ಅಗೋಚರ ಶಕ್ತಿಯನ್ನು ಗಾಢವಾಗಿ ನಂಬಿ, ದೈವೀಕರಣಗೊಳಿಸಿ ಪೂಜಿಸುವ, ಆರಾಧಿಸುವ ಪರಂಪರೆ ಜಗತ್ತಿನ ಅನೇಕ ಜನಪದ ಗುಂಪುಗಳಲ್ಲಿ ರೂಢಿಗೆ ಬಂದಿತು. ಈ ನಂಬಿಕೆಗಳು ಕ್ರಿಯೆಯ ಮೂಲಕ ಆಚರಣೆಗಳಾಗಿ ಜನಪದ ಸಮುದಾಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡವು.

'ಆಚರಣೆ ಎಂಬುವುದು ಅದಿಮ ಧಾರ್ಮಿಕ ಕ್ರಿಯೆಯ ಮುಂದುವರಿದ ರೂಪ, ಅತೀಂದ್ರಿಯ ಶಕ್ತಿ ಅಥವಾ ಶಕ್ತಿಗಳಿಂದ ಅನುಗ್ರಹ ಪಡೆಯಲು ಕೈಗೊಂಡ ಕ್ರಿಯೆ ಇದಾಗಿದೆ'. ಎಂದು ಮೋನಿಕಾ ವಿಲ್ಸನ್ ಹೇಳುತ್ತಾರೆ.[೧] ಕ್ರಮವತ್ತಾದ, ವಿಧಿ ಪೂರ್ವಕವಾದ, ಪರಂಪರಾಗತವಾಗಿ ನೆಡೆದು ಬಂದ ರೀತಿಯಲ್ಲಿ ನೆಡೆಸುವ ಇಂಥ ಕ್ರಿಯೆಗಳ ಹಿನ್ನೆಲೆಯಲ್ಲಿ ನಂಬಿಕೆ ಆವಾಗಿ ಬೇರು

ಬಿಟ್ಟಿರುತ್ತದೆ. ಧರ್ಮ ಇದರ ಅಡಿಗಲ್ಲು.ಧಾರ್ಮಿಕ ವಿಧಿಗಳಿಂದ ತಾನು ನಂಬಿದ ಪವಿತ್ರ ವಸ್ತುಗಳ ಪ್ರೀತಿಯನ್ನು ಸಂಪಾದಿಸಬಹುದೆಂದು ಮನುಷ್ಯ ಎಣಿಸುತ್ತಾನೆ. ಇದು ವಿಧಿವತ್ತಾದ ಆಚರಣಾ ಕ್ರಮವೂ ಹೌದು. ಲೌಕಿಕ ಹಿನ್ನೆಲೆಗಳಲ್ಲಿ ಸಂಪ್ರದಾಯ ನಿಷ್ಠ ರೀತಿಯಲ್ಲಿ ನೆಡೆಸುವ ಒಂದು ಕ್ರಿಯೆಯೂ ಹೌದು.

ಧಾರ್ಮಿಕ ಪಾವಿತ್ರ್ಯದ ಜೊತೆಗೆ ಅತಿಮಾನುಷ ಶಕ್ತಿಗಳ ಭಯವೂ ಮಿಗಿಲಾದುದೆ ಆದುದರಿಂದ ಆಚರಣೆಗಳನ್ನು ಅತ್ಯಂತ ಶ್ರದ್ಧೆಯಿಂದ ನೆಡೆಸಲಾಗುತ್ತದೆ. ನುಡಿಯಲ್ಲಿ ಸಣ್ಣ ತಪ್ಪಾದರೂ ಅನರ್ಥವಾದೀತೆಂಬ ಅಂಜಿಕೆ ಪ್ರತಿಯೊಂದು ಆಚರಣೆಯ ಹಿನ್ನೆಲೆಯಲ್ಲಿ ಇದ್ದೇ ಇರುತ್ತದೆ. ಉಪವಾಸವಿರುವುದು, ಮೀಸಲು ವಸ್ತುಗಳನ್ನು ತೆಗೆದಿಡುವುದು ಹಿಂದಿನಿಂದ ನೆಡೆದು ಬಂದ ಪದ್ಧತಿಯಲ್ಲಿ ಸ್ವಲ್ಪವೂ ಲೋಪ ಬರದಂತೆ ಎಚ್ಚರ ವಹಿಸುವುದು, ಸಂಬಂಧ ಪಟ್ಟ ವ್ಯಕ್ತಿಯಿಂದಲೇ ಕ್ರಿಯೆಗಳನ್ನು ನಡೆಸುವುದು ಈ ಮುಂತಾದ ಕ್ರಮಗಳನ್ನು ಗಮನಿಸಿದಾಗ ಮತದ ಬಾಹ್ಯಾಚರಣೆಗಳು ಇವು ಬದುಕಿನಲ್ಲಿ ಎಷ್ಟು ಪ್ರಮುಖ ಪಾತ್ರ ವಹಿಸುತ್ತವೆ ಎಂಬುದು ವೇದ್ಯವಾಗುತ್ತದೆ.

ಆಚರಣೆಯ ಸಂದರ್ಭದಲ್ಲಿ ಕತ್ತಿ, ಭಲ್ಲೆ, ಬೆತ್ತ, ತ್ರಿಶೂಲ ಮುಂತಾದ ಗೊತ್ತಾದ ವಸ್ತುಗಳು ಆಯುಧ ವಿಶೇಷಗಳೂ ಹೌದು, ಆಚರಣೆಯ ಸಾಧನಗಳೂ ಹೌದು. ಆಚರಣೆಗಳು ಮಾನವನ ಜೀವನದಲ್ಲಿ ಬಹು ಮುಖ್ಯ ಮಹತ್ವವನ್ನು ಪಡೆದಿವೆ. ಮನುಷ್ಯ ಪ್ರಕೃತಿಯನ್ನು ಆರಾಧಿಸುವುದರಿಂದ ಪ್ರಾರಂಭವಾದ ಮನುಷ್ಯನ ಆರಾಧನೆಯ ಕಾರ್ಯ ಮುಂದೆ ಹಲವು ದೇವಾನು ದೇವತೆಗಳ ಸೃಷ್ಟಿಗೆ ಕಾರಣವಾಗಿ ಆರಾಧನೆಯ ಜೊತೆ ಆಚರಣೆಗಳು ಬೆಳೆದು ಬಂದಿರುವುದನ್ನು ಕಾಣಬಹುದು. ಆಚರಣೆಗಳು ಒಂದು ಸಮೂಹವನ್ನು ಒಗ್ಗೂಡಿಸುವ ಕಾರ್ಯ, ಭಾವನಾತ್ಮಕವಾಗಿ ಬೆಸೆಯುವ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತವೆ. ಜೀವನಾವರ್ತನದ ಆಚರಣೆಗಳು ಒಂದು ಕುಟುಂಬದ ಒಂದು ಸಮುದಾಯದಲ್ಲಿ ವಿಶಿಷ್ಟ ಮಹತ್ವ, ಆ ಸಮುದಾಯದ ಅನನ್ಯತೆಯನ್ನು ಪ್ರದರ್ಶಿಸಿದರೆ ವಾರ್ಷಿಕಾವರ್ತನದ ಆಚರಣೆಗಳು ಒಂದು ಸಮಾಜದ ಪ್ರತಿಬಿಂಬವಾಗಿ ಕಂಗೊಳಿಸುತ್ತವೆ. ಹೀಗೆ ಸಮಾಜದಲ್ಲಿ ವಿವಿಧ ವರ್ಗಗಳೊಡನೆ ಏಕರೂಪತೆಯನ್ನು ಎತ್ತಿ ಹಿಡಿಯುವ ಈ ವಾರ್ಷಿಕಾವರ್ತನದ ಆಚರಣೆಗಳು ತನ್ನದೇ ಆದ ಮಹತ್ವವನ್ನು ಪಡೆದಿವೆ.

ಜೀವನಾವರ್ತಕ ಸಂಸ್ಕಾರಗಳು ಮತ್ತು ಸಮುದಾಯಗಳ ಆಚರಣೆಗಳು ಸಾಂಪ್ರದಾಯಿಕವಾಗಿ ಮುಂದುವರಿಯುವುದರಿಂದ ಸಮಾಜದ ಗತಕಾಲದ ಸಾಂಸ್ಕೃತಿಗೆ ಭಂಗ ಬರುವುದಿಲ್ಲ. ಹಲವಾರು ಸಮುದಾಯಗಳು ಅಭಿವೃದ್ಧಿ ಪರ ಚಿಂತನೆ ನಡೆಸಿ ಹೊಸ ಸಂಪ್ರದಾಯ ಮತ್ತು ಆಚರಣೆಗಳನ್ನು ರೂಢಿಸಿಕೊಂಡಿರುವರು. ಅವು ಇಂದು ಸಮಾಜದ ಮುಖ್ಯವಾಹಿನಿಯಲ್ಲಿ ಕಾಣಸಿಗುವವು. ಬುಡಕಟ್ಟುಗಳು ಸರಳವಾಗಿ ಹಳೆಯ ನಂಬಿಕೆ, ಆಚರಣೆಗಳನ್ನು ಪೂರ್ವಜರ ಕುರುಹುಗಳೆಂದು ನಂಬಿ ಮುಂದುವರಿಸಿದರು. ಈ ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳಿಗೆ ಭಂಗ ಬರದಂತೆ ಎಚ್ಚರವಹಿಸುವರು. ಪ್ರತಿಯೊಂದು ಜನಾಂಗಗಳಲ್ಲಿ ಆಚರಣೆ, ಸಂಪ್ರದಾಯ, ಸಂಸ್ಕಾರವಿಲ್ಲದೇ

ಯಾವುದೇ ರೀತಿಯಲ್ಲಿ ಮುಂದುವರಿದಿರುವುದು. ಅದು ಅದರ ಪ್ರಾದೇಶಿಕಕ್ಕನುಗುಣವಾಗಿ ಭಿನ್ನವಾಗಿರಬಹುದು. ಯಾಕೆಂದರೆ ಆಯಾ ಪ್ರದೇಶದ ಪರಿಸರಕ್ಕೆ ಆಚರಣೆಗಳಲ್ಲಿ ವ್ಯತ್ಯಾಸಗಳನ್ನು ಅದರಲ್ಲೂ ಜೀವನಾವರ್ತನದ ಆಚರಣೆಗಳನ್ನು ಕಂಡುಕೊಳ್ಳುತ್ತಾ ಹೋಗುತ್ತೇವೆ. ಇಲ್ಲಿ ಜೀವನಾವರ್ತನದ ಆಚರಣೆಗಳನ್ನು ಕಂಡುಕೊಳ್ಳುತ್ತಾ ಹೋದಾಗ ನಮ್ಮ ಹಿರಿಯರು ಮಾಡಿದ್ದನ್ನೇ ನಾವು ಮುಂದುವರಿಸಿದ್ದೇವೆ ಎಂದು ಹೇಳುವುದರ ಅರ್ಥದಿಂದ ಗೊತ್ತಾಗುತ್ತದೆ. ಮನುಷ್ಯನ ಆಚರಣೆಯೇ ಯವುದೇ ಅರ್ಥವಿಲ್ಲದೇ ಆಗಿರುವುದಿಲ್ಲ.

ಓಬವ್ವನ ಬಗೆಗಿನ ಆಚರಣೆಗಳು ಇದರಿಂದ ಹೊರತಾಗಿಲ್ಲ. ಇವು ಜೀವನಾವರ್ತನ ಆಚರಣೆಗಳಾಗಿ ತಲೆತಲಾಂತರದಿಂದ ಬಂದವುಗಳಾಗಿವೆ.ನಾವು ಭಾರತದ ಯಾವುದೇ ಸಮುದಾಯದ ಮಹಿಳೆಯನ್ನು ಕುರಿತು ಚರ್ಚಿಸಲು ಪಾರಂಭಿಸಿದರೆ ಪ್ರಾಚೀನ ಕಾಲ, ಬೌದ್ಧರ ಕಾಲ ಮತ್ತು ಆಧುನಿಕ ಮಹಿಳೆಯರ ಸ್ಥಿತಿಗತಿಯನ್ನು ಅರಿತಿರುವುದು ಸೂಕ್ತ ಎನಿಸುತ್ತದೆ. ಏಕೆಂದರೆ ತನ್ನ ದನಿಯನ್ನು ಇತಿಹಾಸದುದ್ದಕ್ಕೂ ತಾನೇ ನುಂಗಿಕೊಂಡು ಬಂದ ಓಬವ್ವ ದುರ್ಗದ ಜನಪದರಿಗೆ ಸಾಕ್ಷಾತ್ ದುರ್ಗಿಯೇ ಆಗಿದ್ದಾಳೆ. ಚರಿತ್ರೆಗೆ ಸಾಕ್ಷಿಯೇ ಮುಖ್ಯವಾದದ್ದು ಅರಮನೆ, ತಾಳೆಗರಿ, ವಾಸ್ತುಶಿಲ್ಪ, ಸಾಹಿತ್ಯ ಕೇಂದ್ರಗಳು, ಆ ಕಾಲದಲ್ಲಿ ರಚಿತವಾದ ಕೃತಿಗಳು, ರಾಣಿಯ ಸೌಂದರ್ಯ, ಇವೆಲ್ಲವೂ ಇತಿಹಾಸವಾದರೆ, ಅರಮನೆಯನ್ನು ಕಟ್ಟಿದ ಶ್ರಮಜೀವಿ, ಯುದ್ಧದಲ್ಲಿ ಹೋರಾಡಿ ಸಾವನಪ್ಪಿದ ಸೈನಿಕ, ಅತಂತ್ರವಾದ ಅವನ ಕುಟುಂಬ ಚರಿತ್ರೆ ಅಲ್ಲವೇನೋ ಎಂಬ ಅನಿಸಿಕೆಗಳ ಮಧ್ಯೆ ಓಬವ್ವ ಒಂದು ಜೀವಂತ ಶ್ರೇಷ್ಠ ಉದಾಹರಣೆಯಾಗಿದ್ದಾಳೆ. ಇತಿಹಾಸದಲ್ಲಿ ಹುಡುಕಿ ಹೆಕ್ಕಿದರೆ ಒಂದೆರಡು ಕೃತಿಗಳಲ್ಲಿ ಮಾತ್ರ ಓಬವ್ವನ ಪ್ರಸ್ತಾಪ ಕಾಣಸಿಗುತ್ತದೆ. ಬಹುಶಃ ಓಬವ್ವನ ಈ ಸಾಹಸಗಾಥೆ ಪ್ರಚುರಪಡಿಸುವಂಥಹ ಮಹತ್ವದಲ್ಲ ಎಂದೆನಿಸಿರಬಹುದು ನಮ್ಮ ಇತಿಹಾಸಜ್ಞರಿಗೆ ನಮ್ಮ ವಿದ್ವಾಂಸರು ಜನಪದ ಸಾಹಿತ್ಯದ ಮೂಲ ಚೇತನವೆ ಮಹಿಳೆ ಎಂದು ಗುರುತಿಸಿದರೂ ಶಿಷ್ಟ ಸಾಹಿತ್ಯ ಚರಿತ್ರೆಗಳಲ್ಲಿ ಮಾತ್ರ ಸ್ತ್ರೀ ಮಾಯವಾಗುತ್ತಾಳೆ. ಭಾರತದ ಸಾಂಸ್ಕೃತಿಕ ಪರಂಪರೆಯುದ್ದಕ್ಕೂ ಕಾಣ ಬಂದ ಸ್ತ್ರೀತ್ವ ಹಾಗೂ ಮಾತೃತ್ವದ ಬಗೆಗಿನ ಶ್ರದ್ಧೆ ಮತ್ತು ಗೌರವ ಇದ್ದರೂ ಸ್ತ್ರೀಯರ ಸ್ಥಾನಮಾನಗಳು ಮಾತ್ರ ವೇದೋತ್ತರ ಕಾಲದಲ್ಲಿ ನಿರಂತರವಾಗಿ ಅವನತಿಯತ್ತ ಸಾಗುತ್ತಲೇ ಹೋದುದು ಬಹಳ ಆಶ್ಚರ್ಯವೆನಿಸುತ್ತದೆ. ಹೆಚ್ಚು ಕಡಿಮೆ ಕ್ರಿ.ಪೂ. ೩೦೦ ರಿಂದ ಸುಮಾರು ೨೦೦೦ ವರ್ಷಗಳವರೆಗೆ ಭಾರತದಲ್ಲಿ ಸ್ತ್ರೀ ಶಿಕ್ಷಣವನ್ನು ಅಲಕ್ಷಿಸುತ್ತಲೇ ಹೋಗಲಾಯಿತು. ಸ್ತ್ರೀಯರು ಪುರುಷರ ಅಧೀನವಾಗಿರುವುದೇ ಭಾರತೀಯ ಮರ್ಯಾದೆ ಎಂದು ನಿರೂಪಿಸುತ್ತಾ, ಸ್ವಾತಂತ್ರ್ಯದ ವಿಚಾರವೆತ್ತಿದರೆ ಅದು ಸ್ವೇಚ್ಛಾಚಾರವೆಂದು ಟೀಕಿಸಲಾಯಿತು. ಚರಿತ್ರೆಗಳ ಉದ್ದಕ್ಕೂ ಪುರುಷ ಜಗತ್ತಿನ ಅನುಭವಗಳೇ ಸಾರ್ವತ್ರಿಕ ಎಂದು ಬಿಂಬಿಸಲಾಗಿದೆ. ಪುರುಷಪ್ರಧಾನ ಯಜಮಾನ ಸಂಸ್ಕೃತಿ ಕರಾಳಮುಖವಾದದ್ದು. ಪುರುಷರ ಅನುಭವ, ಅನಿಸಿಕೆಗಳು ಅವರ ಮೂಗಿನ ನೇರಕ್ಕೆ ರೂಪುಗೊಂಡಿದ್ದು, ಸಾಹಿತ್ಯಾಭಿವ್ಯ ಗೆ ಮೂಲ ಅಗತ್ಯಗಳಾದ ಅಕ್ಷರ ಹಾಗೂ

ವಿದ್ವತ್ತಿನ ಕದಗಳು ಹೆಣ್ಣಿನ ಪಾಲಿಗೆ ಮುಚ್ಚಿಹೋಗಿದ್ದವು. "ಕೆಲವು ಲಭ್ಯ ಮಾಹಿತಿಗಳ ಆಧಾರದ ಮೇಲೆ ಮುಂದೆ ದ್ರಾವಿಡ ಸಂಸ್ಕೃತಿ ಎಂದೇ ಹೆಸರಾದ ಸಿಂಧೂ ಸಂಸ್ಕೃತಿಯಲ್ಲಿ ಮಾತೃ ಪ್ರಧಾನ ವ್ಯವಸ್ಥೆ ರೂಢಿಯಲ್ಲಿತ್ತೆಂಬ ಅಭಿಪ್ರಾಯಕ್ಕೆ ಮಾನವ ಶಾಸ್ತ್ರಜ್ಞರು ಬಂದಿದ್ದಾರೆ. ಆದರೆ ಮಹಿಳೆಯರ ಸ್ಥಾನಮಾನಗಳಿಗೆ ಅತೀವವಾದ ಗೌರವವನ್ನು ತಳೆದಿದ್ದ ಸಿಂಧೂ ಸಂಸ್ಕೃತಿ ಸುಮಾರು ಕ್ರಿಸ್ತಪೂರ್ವ ೧೫೦೦ರ ವೇಳೆಗೆ ಹೇಳಹೆಸರಿಲ್ಲದಂತೆ ನಾಶವಾಗಿ ಹೋಯಿತು. ಇನ್ನು ವೇದಗಳ ಕಾಲಕ್ಕೆ ಬಂದರೆ ಈ ಯುಗ ಮಹಿಳೆಯರ ಪಾಲಿಗೆ ಸುವರ್ಣಯುಗವಾಗಿ ಸ್ವಾತಂತ್ರ್ಯಯುಗವಾಗಿತ್ತು.

ವೇದಕಾಲದಲ್ಲಿ ಮಹಿಳೆಯನ್ನು ಜಯ, ಜನಿ ಮತ್ತು ಪತ್ನಿ ಎಂದೇ ಪರಿಗಣಿಸಲಾಗಿತ್ತು. ಪತಿಯ ಪ್ರೇಮದ ಪಾಲುಗಾರ್ತಿ ಜಯ, ಅವನ ಮಕ್ಕಳ ತಾಯಿ ಜನಿ, ಯಜ್ಞಗಳನ್ನು ಮಾಡುವಲ್ಲಿ ಪತ್ನಿ ಎಂದೇ ಅರ್ಥೈಸಲಾಗಿತ್ತು. ಋಗ್ವೇದದ ಮೊದಲ ವಾಕ್ಯವೇ "ಮಾತೃದೇವೋಭವ" ಎಂದೇಳುತ್ತದೆ. "ನಾನು ಬಯಸಿದವನನ್ನು ಉಗ್ರನನ್ನಾಗಿ, ಬ್ರಹ್ಮನನ್ನಾಗಿ, ಋಷಿಯನ್ನಾಗಿ, ಮೇಧಾವಿಯನ್ನಾಗಿ ಮಾಡಬಲ್ಲೆ" ಎಂದವಳು ವೇದಕಾಲದ ಮಂತ್ರದ್ರಷ್ಟಾರ ಮಹಿಳೆ ಅಂಬ್ರಾಣಿ"[೨] ಇಲ್ಲಿ ದಿಟ್ಟ ಹೆಣ್ಣು ಕಾಣಸಿಗುವಳು. ಆದರೆ ಕೊನೆಯ ವೇದ ಅಥರ್ವಣ ವೇದದ ಉಗಮದ ಕಾಲಕ್ಕೆ ಮಹಿಳೆಯರ ಸ್ಥಾನಮಾನಗಳು ಅವನತಿಯತ್ತ ಸಾಗತೊಡಗಿದ್ದವು. ಕಾರಣ ಅಥರ್ವಣ, ಪುರಾಣ, ಬ್ರಾಹ್ಮಣಗಳು, ಧರ್ಮಸೂತ್ರಗಳು. ಸ್ತ್ರೀ ಕಾರ್ಯಕ್ಷೇತ್ರ ಗೃಹಕೃತ್ಯದಷ್ಟೇ ಸೀಮಿತವಾಗತೊಡಗಿತು. ಹೆಣ್ಣು ತನ್ನ ಬದುಕಿನುದ್ದಕ್ಕೂ ಪರಾಧೀನದಲ್ಲಿರುವಂತೆ ಕಾನೂನು ಮಾಡಿದ 'ಮನು' ಮನುವಿನ ಕರಾಳ ಧರ್ಮ ಶಾಸನಗಳಿಂದ ಹೆಣ್ಣಿನ ಆಧ್ಯಾತ್ಮ ಸಾಧನೆಯ ಅವಕಾಶಗಳು, ಶಿಕ್ಷಣದ ಹಕ್ಕುಗಳನ್ನು ಕಸಿದುಕೊಂಡು ಸ್ತ್ರೀ ಸಂಪೂರ್ಣವಾಗಿ ಕತ್ತಲೆಯಲ್ಲಿ ಇರುವಂತೆ ಮಾಡಿದ. ಮುಸಲ್ಮಾನರ ದಾಳಿ ಭಾರತದ ಮೇಲೆ ಆರಂಭವಾಗುತ್ತಿದ್ದಂತೆ ಹೆಣ್ಣಿನ ಮೇಲಿನ ನಿರ್ಬಂಧ ಮತ್ತಷ್ಟು ಬಿಗಿಯಾಯಿತು. ಮೊಗಲರ ಕಾಲಾವಧಿಯಲ್ಲಿ ಭಾರತಕ್ಕೆ ಬಂದ ಬ್ರಿಟೀಷರು ಇಲ್ಲಿಯೇ ಸಾಮ್ರಾಜ್ಯಶಾಹಿ ಆರಂಭಿಸಿ ಚುಕ್ಕಾಣಿ ಹಿಡಿದರು. ಅಲ್ಲಿಂದ ಮುಂದೆ ಸ್ತ್ರೀಯರು ಪ್ರಶ್ನಿಸುವ, ನಂಬಿಕೆಗಳನ್ನು ನಿರಾಕರಿಸುವ, ಕರ್ತವ್ಯ ಮತ್ತು ಹಕ್ಕುಗಳ ಬಗ್ಗೆ ಸಮಾನ ಮಾನ್ಯತೆಯ ನಿಲುವು ಬೆಳೆಯುತೊಡಗಿತು. ಸತಿ ನಿಶೇದಕಾಯ್ದೆ, ವಿಧವಾ ಪುನರ್ವಿವಾಹ ಕಾಯ್ದೆ, ನಾಗರೀಕ ವಿವಾಹ ಕಾಯ್ದೆ, ಬಾಲ್ಯವಿವಾಹ ನಿಶೇಧ ಕಾಯ್ದೆ, ಆಸ್ತಿ ಹಾಗೂ ಉದ್ಯೋಗ ಸಂಬಂಧಿತ ಶಾಸನಗಳು, ವಿವಾಹಿತ ಸ್ತ್ರೀಯರ ಆಸ್ತಿಯ ಕಾಯ್ದೆ, ಹಿಂದೂ ಮಹಿಳೆಯರ ಆಸ್ತಿ ಹಕ್ಕಿನ ಶಾಸನ, ಈ ಎಲ್ಲವೂ ಸ್ತ್ರೀಯರನ್ನು ಪುರುಷರ ಅಂತಸ್ತಿಗೆ ಸಮಾನವಾಗಿ ತಂದು ನಿಲ್ಲಿಸಿದವು ಎಂದರೂ ಸರಿಯಾದ ನ್ಯಾಯ ಒದಗಿಸಲಿಲ್ಲ. ಸ್ವಾತಂತ್ರ್ಯ ಮುಕ್ತರೂ ಆಗಲಿಲ್ಲ. ಬಸವ ಪೂರ್ವ ಯುಗದಲ್ಲಿ ಮಹಿಳೆಯ ಸ್ಥಾನಮಾನ ಹಿಡಿಯುವಲ್ಲಿ ವೀರಶೈವ ಧರ್ಮದ ಶಾಖೆಗಳೂ ಸಹ ಶಕ್ತ್ಯಾನುಸಾರ ಕೊಡುಗೆ ನೀಡಿವೆ. ಸಾಮಾಜಿಕವಾಗಿ ಉಚ್ಚಶ್ರೇಣಿಗೆ ಸೇರಿದ ಮಹಿಳೆಯರಿಗೆ ಧರ್ಮವು ಸಮಾಜದಲ್ಲಿ ಪ್ರಾತಿನಿಧ್ಯವಾಗಲಿ, ಸ್ಥಾನಮಾನವನ್ನಾಗಲಿ, ದನಿಯನ್ನಾಗಿ ನೀಡಿರಲಿಲ್ಲ. ಆದರೆ ಕೆಳವರ್ಗದ

ಗ್ರಾಮೀಣ ಸಂಸ್ಕೃತಿಯಲ್ಲಿ ಕೌಟುಂಬಿಕ ಮಟ್ಟದಲ್ಲಿ ಮಹಿಳೆಯ ಸ್ಥಾನ ಮೇಲುಸ್ತರದಲ್ಲಿತ್ತು. ಈ ಸಂಸ್ಕೃತಿಯಲ್ಲಿ ಧಾರ್ಮಿಕವಾಗಿ ಆಯ್ಕೆಯ ಸ್ವಾತಂತ್ರ್ಯವಿದ್ದುದು ಕಂಡುಬಂದಿದೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಶೋಷಿತಳಾಗಿ ಬಾಯಿಗೆ ಸೆರಗುತುಂಬಿ ಬದುಕುತ್ತಿದ್ದ ಕಾಲ ಬಹುಶಃ ಆಗಿನ ಕಾಲದಲ್ಲಿ ಸ್ತ್ರೀಗೆ ಇದ್ದ ನಿಕೃಷ್ಟತೆ ಇನ್ನು ಆಚರಣೆಗಳಂತೂ ಬಹುದೂರ. ಬಹುಶಃ ಆಗಿನ ಕಾಲದಲ್ಲಿ ಸ್ತ್ರೀಗೆ ಇದ್ದ ನಿಕೃಷ್ಟತೆ, ಅಸಡ್ಡೆ, ಗೃಹಬಂಧನ, ಅನಕ್ಷರತೆ ಇವು ಬಹು ದೊಡ್ಡ ಸಮಸ್ಯೆಗಳಾಗಿದ್ದವು ಎನಿಸಿವೆ. ಅಂಥಹ ಸಮಾಜದಲ್ಲಿ ಓರ್ವ ಮಹಿಳೆ ಓಬವ್ವ ಮಾಡಿದ ಸಾಹಸ, ಉಲ್ಲೇಖಾರ್ಹವಾದುದೇನು ಅಲ್ಲ ಎನಿಸಿರಬಹುದು ನಮ್ಮ ಇತಿಹಾಸಕಾರರಿಗೆ ಕಾರಣ ಹಲವಾರಿರಬಹುದು. ಓರ್ವ ಕಹಳೆಯವನ ಹೆಂಡತಿ ಮಹಿಳೆ ಚಿತ್ರದುರ್ಗದ ಇತಿಹಾಸದ ಪುಟಗಳಲ್ಲಿ ಬಹು ದೊಡ್ಡ ಘಟನೆಯ ಸಾಕ್ಷಿಯಾಗಿರುವುದು ಆಗಿನ ಚರಿತ್ರೆಯ ಅಗ್ರಮಾನ್ಯಕ್ಕೆ ಧಕ್ಕೆ ತರುವಂಥದ್ದು ಎಂದು ನಮ್ಮ ಇತಿಹಾಸಕಾರರು ಗ್ರಹಿಸಿರಬಹುದು.

ಚರಿತ್ರೆ ಪುರಾಣಗಳ ಹೆಣ್ಣುಗಳಿಗೆ ನಿಜವಾಗಿಯೂ ಅವರ ಅಂತರಂಗದಲ್ಲಿ ಏನೆಲ್ಲಾ ಇತ್ತು ಎಂಬುದು ಅನ್ಯರಿಗೆ ಗೊತ್ತಿಲ್ಲದ ಲೋಕ. ಒಂದೊಂದು ಹೆಣ್ಣು ಒಂದೊಂದು ದನಿಯಿಲ್ಲದ ಗೋರಿ. ಗಂಡಸರ ಪ್ರತಿಷ್ಠೆ, ಮಾನ, ಕುಟುಂಬ ಮನೆತನಗಳ ಮಾನ ಮರ್ಯಾದೆ ಇತ್ಯಾದಿಗಳನ್ನು ಕಾಯುವ ಬಾಯಿಬೀಗ ಹಾಕಲ್ಪಟ್ಟ ಗೋರಿ. ಸ್ತ್ರೀ ಚರಿತ್ರೆಗಳನ್ನು ಬಹುತೇಕ ನೋಡಿಕೊಂಡು ಬಂದರೆ ಹೆಣ್ಣನ್ನು ಜೀವಂತ ಶೋಷಿಸಿರುವ, ಸತ್ತ ಮೇಲೂ ಶೋಷಿಸಿರುವ ಕತೆಗಳೇ ತುಂಬಿವೆ. ಇಂತಹ ವಾತಾವರಣವಿದ್ದರೂ ಮಹಿಳೆ ಓಬವ್ವ, ಪತಿಯ ಒಡೆಯನ ಸಲುವಾಗಿ ಹೋರಾಡಿದ್ದಾಳೆ. ಸ್ವಾಮಿಯ ಸಲುವಾಗಿಯೂ ಮನುಷ್ಯ ತನ್ನ ಪ್ರಾಣವನ್ನು ಕೊಡಬೇಕೆಂಬ ಮಾತು ಒಂದು ಕಾಲಕ್ಕೆ ಈ ನಾಡಿನಲ್ಲಿ ಸಾಮಾನ್ಯರೆಂದು ತೋರುವವರಲ್ಲಿಯೂ ಆಳವಾಗಿ ಬೇರೂರಿಕೊಂಡಿತ್ತು ಎಂಬುದು ಓಬವ್ವನ ಘಟನೆಯಿಂದ ತಿಳಿದು ಬರುತ್ತದೆ. ಅತ್ಯಂತ ಸಾಮಾನ್ಯ ಛಲವಾದಿಗರ ಹೆಣ್ಣೊಬ್ಬಳು ತನ್ನ ದೊರೆಗಾಗಿ ಇಂಥಹ ತ್ಯಾಗ ಭಾವವನ್ನು ಪ್ರದರ್ಶಿಸಿದ್ದು ಇತಿಹಾಸದಲ್ಲಿ ಮಹತ್ವದ ಸಂಗತಿ. ಇದನ್ನು ವಿಶ್ಲೇಷಿಸ ಹೊರಟರೆ ದೊರೆಯಾದವನು ತನ್ನ ಪ್ರಜೆಗಳನ್ನು ಅದರಲ್ಲೂ ತೀರ ಕೆಳವರ್ಗದ ಪ್ರಜೆಗಳನ್ನು ಅದೆಷ್ಟು ಸಮಾನ ಗೌರವ ಪ್ರೀತ್ಯಾದರಗಳಿಂದ ಕಾಣುತ್ತಿದ್ದರು ಎಂಬ ಅಂಶ ಗಮನಾರ್ಹ. ದೊರೆಯ ಬಗ್ಗೆ ಒಬ್ಬ ತೀರಾ ಸಾಮಾನ್ಯ ಮಹಿಳೆಗೆ ಇಂಥಹ ಉತ್ಕಟ ಭಕ್ತಿ, ಗೌರವ ಮೂಡಬೇಕಾದರೆ ದೊರೆಗಾಗಿ ಪ್ರಾಣತ್ಯಾಗಕ್ಕೂ ಸಿದ್ಧರಾಗುತ್ತಿದ್ದರೆಂದರೆ ಆ ಕಾಲದ ದೊರೆಗಳು ಅಂತ್ಯಜರನ್ನು ನೆಡೆಸಿಕೊಳ್ಳುತ್ತಿದ್ದ ರೀತಿ, ಒದಗಿಸಿದ ಸವಲತ್ತುಗಳು, ತೋರಿದ ಅಭಿಮಾನ, ನೀಡಿದ್ದ ರಕ್ಷಣೆ, ಪೋಷಣೆ ಪ್ರೋತ್ಸಾಹದ ಪ್ರಭಾವವೂ ಜನ ಸಾಮಾನ್ಯರಲ್ಲಿ ತನ್ನ ಕೋಟೆ, ಇದು ತನ್ನದೇ ಕೋಟೆ, ತಾನು ಉಳಿಸಲೇಬೇಕೆಂಬ ಕೆಚ್ಚು ಉಂಟಾಗಲೂ ದೊರೆಗಳ ಔದಾರ್ಯತೆ ಇಷ್ಟು ಕಾಣುತ್ತದೆ. ಆಗಿನ ದೊರೆಗಳಿಗೆ ಧನಿಕ ದರಿದ್ರ ಮೇಲು-ಕೀಳೆಂಬ ಬೇಧಭಾವ ನಾಯಕರ ಆಳ್ವಿಕೆಯಲ್ಲಿ ಅಷ್ಟಾಗಿ ಇರಲಿಲ್ಲವೆಂಬುದನ್ನು ದುರ್ಗದ ಇತಿಹಾಸವನ್ನೋದಿ ತಿಳಿದುಕೊಳ್ಳಬಹುದು.

ಇಂಥಹ ನಾಯಕರ ಆಳ್ವಿಕೆಯಲ್ಲಿ ಹೋರಾಡಿ ಮೆರೆದ ಈ ವೀರ ಮಹಿಳೆ ಓಬವ್ವನ ಆಸೆಯಂತೆ ತನ್ನ ಮರಣದ ತರುವಾಯ ತಾನು ತನ್ನ ಕುಲಕ್ಕೆ ಕುಲದೇವತೆಯಾಗಿರಬೇಕೆಂದು ದೊರೆಗಳಲ್ಲಿ ಬಯಸಿದಾಗ ದೊರೆಗಳು ಹಾಗೆಯೇ ಆಕೆಯ ಆಸೆಯಂತೆ ಆಕೆಯನ್ನು ಅವಳ ವಂಶಸ್ಥರಿಗೆ ಕುಲದೇವತೆಯನ್ನಾಗಿ ಮಾಡಿ ವಾರ್ಷಿಕ ಉತ್ಸವಗಳ ಸಂದರ್ಭದಲ್ಲಿ ದೊರೆಗಳ ಎಪ್ಪತ್ತೇಳು ಬಿರುದು ಬಹುಮಾನಗಳನ್ನು ಹಿಡಿಯುವ ಕೈಂಕರ್ಯವನ್ನು ಆಕೆಯ ವಂಶದವರಿಗೆ ನೀಡಿದ್ದಾರೆ. ಹಾಗೆಯೇ ನಾಯಕರ ಯಾವುದೇ ಶುಭ ಸಮಾರಂಭ ನೆಡೆದರೂ ಓಬವ್ವನ ಹೆಸರಿನಿಂದ ಅವಳ ವಂಶಸ್ಥರು ಸಂಬಂಧಿಕರೆಲ್ಲರಿಗೂ ವೀಳ್ಯ ನೀಡುವ ಪದ್ದತಿಯನ್ನು ಮುಂದುವರಿಸಿದರು. ಅಂದರೆ ಇಲ್ಲಿ ಓಬವ್ವನ ಜ್ಞಾನದ ಆಳವನ್ನು ನಾವು ಅರಿಯಬೇಕಾಗುತ್ತದೆ. ಕೇವಲ ತಾನೊಬ್ಬಳು ಸುಖದಿಂದ ನೆಮ್ಮದಿಯಿಂದ ಬಾಳುವುದನ್ನು ಬಿಟ್ಟು ದೊರೆಗಾಗಿ ತನ್ನ ಪ್ರಾಣವನ್ನೇ ಪಣವಿಟ್ಟು ಹೋರಾಡಿದಳು. ತನ್ನ ವಂಶಕ್ಕಾಗಿ, ಸಂಬಂಧಿಕರಿಗಾಗಿ ಚಿನ್ನ, ಆಭರಣಗಳನ್ನು ಕೇಳದೆ, ಬೆಲೆ ಕಟ್ಟಲಾರದ ವೀಳ್ಯವನ್ನು, ಗೌರವ ಪೂರ್ವಕವಾಗಿ ನೀಡಲು ಕೋರಿದಳು. ದೊರೆಗಳ ವೈಭವೋಪೇತ ಸಮಾರಂಭಗಳಲ್ಲಿ ಅವರ ಎಪ್ಪತ್ತೇಳು ಬಿರುದು ಬಹುಮಾನಗಳನ್ನು ಹಿಡಿಯುವ ಮಹತ್ವದ ಕಾಯಕವನ್ನು ತನ್ನವರಿಗೆ ನೀಡಿಸಿದಳು. ಇಂಥಹ ವೀರ ಮಹಿಳೆ ಇಂದು ಇತಿಹಾಸದಲ್ಲಿ ಅಲೊಮ್ಮೆ ಇಲ್ಲೊಮ್ಮೆ ಮಿನುಗುತ್ತಾ ಒಂದು ಮೌಖಿಕ ದಂತ ಕಥೆಯಾಗಿ ಉಳಿದು ಬಿಟ್ಟಿದ್ದಾಳೆ. ಹಳ್ಳಿಯ ಹೆಣ್ಣಿನ ಹೃದಯದಲ್ಲಿ ತನ್ನ ಅನಂತಶಕ್ತಿಯನ್ನು ತುಂಬಿದ ಶಕ್ತಿಯಾಗಿದ್ದಾಳೆ ಓಬವ್ವ

ಆಕೆಯ ನಾಡಿ ನಾಡಿಯಲ್ಲಿ ತುಂಬಿ ಮಿಡಿಯುವ ಪರಂಪರಾನುಗತ ಸಂಸ್ಕೃತಿಯ ಸಿರಿ, ತಾಯ ಎದೆ ಹಾಲಿನಂತೆ ಹರಿದು ಬಂದ ಅವಳ ಚೈತನ್ಯದ ಸೆಲೆ, ಕಳ್ಳಗಂಡಿಯಿಂದ ನುಗ್ಗಿ ಬಂದ ವೈರಿ ಪಡೆಯನ್ನು ಚೆಂಡಾಡುವಂತೆ ಮಾಡಿತು. ರಕುತದ ಕೋಡಿಯನ್ನು ಹರಿಸಿದಳು. ದೊರೆಯನ್ನು ಸಕಾಲದಲ್ಲಿ ಎಚ್ಚರಿಸುವಂತೆ ತನ್ನ ಗಂಡನಿಗೆ ಕೈಸನ್ನೆಯಿಂದಲೇ ತಿಳಿಸಿ ತನ್ನ ದುರ್ಗವನ್ನು ಕಾಪಾಡಿದಳು. ಇನ್ನೇನು ದುರ್ಗವನ್ನು ಗೆದ್ದೇಬಿಟ್ಟೆ ಎಂಬ ಹುಂಬುತನದಿಂದ ಬಂದ ಹೈದರಾಲಿಗೆ, ದುರ್ಗ ಕೆಂಡದ ಉಂಡೆ ಎಂಬುದನ್ನು ತೋರಿಸಿದಳು. ಇಂಥಹ ಓಬವ್ವ ಯಾವ ವಿದ್ಯಾಲಯದಲ್ಲೂ ಅಭ್ಯಾಸ ಮಾಡಿರಲಿಲ್ಲ. ಯಾವ ಗ್ರಂಥ ಸಮುದಾಯಕ್ಕೂ ಭೇಟಿ ಕೊಟ್ಟಿರಲಿಲ್ಲ. ಅವಳು ಅನಕ್ಷರಸ್ಥೆ, ಅನಾಗರೀಕೆ, ಜಾಗತಿಕ ವಿಷಯಕ್ಕೆ ಹೋಲಿಸಿದರೆ ತನ್ನ ಮಟ್ಟಿಗೆ ಅಜ್ಞಾನಿ; ಆದರೆ ತನ್ನ ಬದುಕನ್ನು ಸಾರ್ಥಕಪಡಿಸಿಕೊಂಡ ಶ್ರಮಜೀವಿ. ತನ್ನ ನೋವಿನಲ್ಲೂ ನಲಿವನ್ನು ತಂದುಕೊಟ್ಟ ಸುಜ್ಞಾನಿ. ನಾಗರೀಕತೆ ಅವಳಲ್ಲಿಲ್ಲದಿದ್ದರೂ, ಸದ್ಗುಣಗಳ, ಸುಸಂಸ್ಕೃತಿಯ ಪ್ರತೀಕವೇ ತಾನಾಗಿದ್ದಾಳೆ. ನಾಯಕನ ಮೇಲಿನ ಉತ್ಕಟ ಸ್ವಾಮಿನಿಷ್ಠೆಯನ್ನು ಆರಾಧಿಸಿ ಅದರ ಆಳಕ್ಕೆ ಮಿಂದೆದ್ದಿದ್ದಾಳೆ. ಎಳ್ಳು ಜೀರಿಗೆಯನ್ನು ಬೆಳೆಯುವ ತಾಯಿ ಭೂಮಿ ತಾಯಿ. ಇಲ್ಲಿ ದುರ್ಗದ ಜನತೆ ಸಾಕ್ಷಾತ್ ದುರ್ಗಿಯೇ ಆದ ಓಬವ್ವ ದುರ್ಗದ ತಾಯಿಯಾದಳು, ಅಮರಳಾದಳು

ಓಬವ್ವ, ಪರೋಪಕಾರಕ್ಕಾಗಿ, ಲೋಕೋದ್ಧಾರಾರ್ಥಕವಾಗಿ ತನುವನ್ನರ್ಪಿಸಿದವರ ಸಾಲಿಗೆ ಸೇರಿದವಳು ಓಬವ್ವ

ಅಣಜಿಯ ಹೊನ್ನಮ್ಮ, ಹುಳಿಯಾರು ಕೆಂಚಮ್ಮ ತಮ್ಮ ಬಲಿದಾನದಿಂದಲೇ ದೇವತೆಗಳಾದರು. ಆದರೆ ಓಬವ್ವ ಇಲ್ಲಿ ಅಂದರೆ ಇತಿಹಾಸದಲ್ಲಿ ಓರ್ವ ಐತಿಹಾಸಿಕ ಮಹಿಳೆಯ ಸ್ಥಾನ ಪಡೆಯುವಲ್ಲಿ ವಿಮುಖಳಾಗಿದ್ದಾಳೆ. ಜನಪದರ ದೃಷ್ಟಿಯಲ್ಲಿ ಅವಳಿಗೆ ವಿಶೇಷ ಸ್ಥಾನಮಾನ ಸಿಕ್ಕಿದೆ. ದುರ್ಗದ ಸುತ್ತಲೂ ಸುತ್ತುವರಿದಿರುವ ಬೆಟ್ಟಗಳ ಸಾಲಿನಲ್ಲಿ ಓಬವ್ವನನ್ನು ಹುಡುಕಿದ್ದಾರೆ ತಮ್ಮ ಜನಪದ ಹಾಡುಗಳಲ್ಲಿ

ಈಟೀಟು ಹುಡುಗರು
ಚೀಟಿ ಚೆಲ್ಲಣದೋರು
ಕೋಟಿ ಕೊಟ್ಟೆನೆಂದಾರು
ಕೋಟೆ ಕೊಡೆನೆಂದಾರು

ಈ ಹಾಡಿನ ಸಾಲುಗಳಲ್ಲಿ ದುರ್ಗದವರಿಗೆ ತಮ್ಮ ಇತಿಹಾಸ, ಪಾಳೇಗಾರರ ಪೌರುಷದ ಬಗೆಗೆ ಅದೆಷ್ಟು ಅಭಿಮಾನವೆಂಬುದಕ್ಕೆ ಈ ಪುಟ್ಟ ಜಾನಪದ ಗೀತೆ ಸಾಲುಗಳೇ ಸಾಕಲ್ಲವೇ.ನಮಗೆ ಲಭ್ಯವಾದ ಮಾಹಿತಿಗಳ ಪ್ರಕಾರ ಯುದ್ಧಕ್ಕೂ ಮೊದಲು ಹೈದರಾಲಿ ಮತ್ತು ಮದಕರಿನಾಯಕರಿಬ್ಬರ ನಡುವೆ ಒಪ್ಪಂದವೇರ್ಪಟ್ಟು ನಾಯ್ಕಕರು ಹೈದರಾಲಿಗೆ ಪೊಗದಿ ಕೊಡಲು ಒಪ್ಪಿಕೊಂಡರು.

ಅಂದರೆ ಹೈದರಾಲಿಯ ಸಾಮಂತರಾಗಲು ಹಲವಾರು ರಾಜಕೀಯ ಪಿತೂರಿಗಳಿಂದ ಮದಕರಿನಾಯಕರು ಒಪ್ಪಿಕೊಳ್ಳುವ ಅನಿವಾರ್ಯತೆ ಸೃಷ್ಟಿಯಾಗಿ ಒಪ್ಪಿಕೊಂಡರು ಎನ್ನಲಾಗಿದೆ. ಈ ಪೊಗದಿ ಕೊಡುವ ವಿಷಯ ದುರ್ಗದ ಎಲ್ಲೆಡೆ ಹರಿದಾಡಿತು. ಕೊನೆಗೆ ಆರ್ಥಿಕವಾಗಿ ಬಳಲಿದ್ದ ನಾಯಕರು ಪೊಗದಿ ಕೊಡಲು ಆಗದೆ, ಅಸಮರ್ಥರಾಗಿ ಮನೋವ್ಯಾಕುಲರಾಗಿ, ತನ್ನ ತಾಯಿ ಓಬವ್ವ ನಾಗತಿಯವರ ಸಮಾಧಿಯ ಬಳಿ ಏಕಾಂಗಿಯಾಗಿ ಕೂರುತ್ತಾರೆ ಹಾಗೆಯೇ "ಅವ್ವ ನಾನು ಹರಿವ ಹುಳುವಿಗಿಂತಲೂ ಅಲ್ಪನಾದೆನವ್ವಾ" ಎಂದು ತಮ್ಮ ದುಃಖವನ್ನು ತೋಡಿಕೊಳ್ಳುತ್ತಾರೆ ಪರಿಸ್ಥಿತಿಯ ಒತ್ತಡವನ್ನು ನೆನೆಸುತ್ತಾ ದುಃಖಿಸುತ್ತಾ ಕುಳಿತ ಆ ಸಮಯದಲ್ಲಿ ಗಾಳಿಯಲ್ಲಿ ಕೆಲವು ಮಾತುಗಳು ಕೇಳಿ ಬರಲಾಗಿ ದೊರೆಗಳು ಆಲಿಸಿದಾಗ ಅಲ್ಲಿಯೇ ಇದ್ದ ಸಿಹಿ ನೀರಿನ ದೋಣಿಯ ಸಮೀಪ ಗಂಡು-ಹೆಣ್ಣು ಇಬ್ಬರೂ ಮಾತನಾಡುವ ಧ್ವನಿಗಳು ಕೇಳಿಬರುತ್ತವೆ. ನಾಯಕರು ಆಲಿಸಲಾಗಿ ಹೆಣ್ಣೊಬ್ಬಳು ರೋಷದಿಂದ ಮಾತನಾಡಿದ್ದು ಕೇಳಿಸುತ್ತದೆ. "ಈ ದುರ್ಗದ ನಾಯಕ ಅಶ್ವತ್ಥವೃಕ್ಷವಿದ್ದ ಹಾಗೆ, ಒಂದೆಲೆ ಬಿದ್ದರೆ ಹತ್ತೆಲೆ ಚಿಗುರುತ್ತವೆ. ಅಂದರೆ ಆ ನವಾಬ ಪೊಗದಿ ಹಣ ಪಡೆಯಬಹುದು ಅಷ್ಟೇ, ದುರ್ಗವನ್ನಲ್ಲ. ಇನ್ನಾರು ವರ್ಷಕ್ಕೆ ಅದೇ ನವಾಬ ನಮ್ಮ ನಾಯಕರ ಬಳಿ ಬಂದು ತೋಬಾ ತೋಬಾ ಎಂದೆನ್ನುತ್ತಾನೆ. ನೋಡು ಅಂಥ ಧೀರ ನಮ್ಮ ನಾಯಕ. ಇದು ನೆಡೆಯಲಿಲ್ಲ ಅಂದಾಗ ತನ್ನ ತಲೆಯನ್ನು ಕೋಟೆ

ಬಾಗಿಲು ಹನುಮಪ್ಪನಿಗೆ ಬಲಿ ಕೊಡುವುದಾಗಿ ರೋಷದಿಂದ ನುಡಿದ ಮಾತನ್ನು ಕೇಳಿದ ನಾಯಕನ ಮೈಯಲ್ಲಿ ಆತ್ಮವಿಶ್ವಾಸ ಚಿಗುರುತ್ತದೆ. ಸೋತು ಹೋದ ದೇಹದಲ್ಲಿ ಒಮ್ಮೆಲೆ ಬಿಸಿ ರಕ್ತ ಸಂಚರಿಸಿ ಎದೆ ಸೆಟೆಸಿ ನಿಲ್ಲುತ್ತಾನೆ ತನ್ನ ಮೇಲೆ ಆ ಹೆಣ್ಣಿಗಿರುವ ಗೌರವ ಕಂಡು ತನ್ನ ಆಲೋಚನೆಗೆ ತಾನೇ ನಾಚಿಕೆ ಪಡುತ್ತಾನೆ. ತನ್ನ ತಾಯಿಯ ಸಮಾಧಿಗೆ ನಮಸ್ಕರಿಸಿ ಮೇಲೆದ್ದು ತಾನು ನಾಯಕನೆಂಬುದನ್ನು ಮರು ಜ್ಞಾಪಿಸಿದ, ಜಯದ ಭರವಸೆ, ಚೈತನ್ಯ ತುಂಬಿದ ಆ ಹೆಣ್ಣು ಮಗಳು ಯಾರೆಂಬುದನ್ನು ನೋಡಲು ಬಂದಾಗ ಅವಳು ಬೇರಾರು ಆಗಿರದೆ ಬತೇರಿಯ ಮೇಲೆ ಶತ್ರುಗಳ ಸುಳಿವನ್ನು ನೀಡುವ ರಣಕಹಳೆಯನ್ನು ಮೊಳಗಿಸುವ ಮದ್ದಹನುಮಪ್ಪನ ಹೆಂಡತಿ ಓಬಿಯಾಗಿರುತ್ತಾಳೆ.

ಆ ಹೆಸರು ಕೇಳಿದ ನಾಯಕನಿಗೆ ತನ್ನ ತಾಯಿ ಓಬವ್ವ ನಾಗತಿಯವರೇ ಕಂಡಂತೆ ಭಾಸವಾಗಿ ತನ್ನ ಕತ್ತಿನಲ್ಲಿದ್ದ ಮುತ್ತಿನ ಹಾರವನ್ನೇ ದಾನವಾಗಿ ಆ ಓಬಿಗೆ ನೀಡುತ್ತಾನೆ. ಅದೇ ಓಬವ್ವನೇ ಮುಂದೊಂದು ದಿನ ದುರ್ಗಕ್ಕೆ ಒದಗಿದ ಸಂಕಷ್ಟವನ್ನು ಪಾರು ಮಾಡಿದ ತಾಯಿಯಾಗುತ್ತಾಳೆ. 'ದೇಶ್‌ಬಾಗ್' ಪಡೆಯಲ್ಲಿ ತರಬೇತಿ ಪಡೆದಿದ್ದ ಓಬವ್ವ ಶತ್ರು ಸುಳಿವನ್ನು ಕಂಡುಹಿಡಿದು ನವಾಬನ ಚಿತ್ರದುರ್ಗವನ್ನು ವಶಪಡಿಸಿಕೊಳ್ಳುತ್ತೇನೆ ಎಂಬ ಅದಮ್ಯ ಆಸೆಗೆ ತಣ್ಣೀರೆರಚುತ್ತಾಳೆ, ಅವನ ಹುಟ್ಟಡಗಿಸುತ್ತಾಳೆ. ಹಾಗೆಯೇ ಸೋತು ಹಿಂದಿರುಗಿದ ಹೈದರಾಲಿ ತನ್ನ ಶಿಬಿರದಲ್ಲಿ ಕುಳಿತು ಓಬವ್ವನನ್ನು ಪ್ರಶಂಶಿಸಿದ ಸಂಗತಿ ತಡವಾಗಿ ತಿಳಿಯುತ್ತದೆ. ಚಿತ್ರದುರ್ಗವು ಗಂಡು ಜಾಗ ಎಂಬುದರಲ್ಲಿ ಸಂದೇಹವಿಲ್ಲ ಎಂದುಕೊಳ್ಳುತ್ತಾನೆ.

ಏಕೆಂದರೆ ಚಿತ್ರದುರ್ಗವು ಭಾರತದಲ್ಲಿ ಪ್ರಸಿದ್ಧ ಯೋಧನಾದ ಘಟೋದ್ಗಜನ ಜನ್ಮಸ್ಥಳ. ಕದಂಬ ಸಾಮ್ರಾಜ್ಯ ಸ್ಥಾಪಕನಾದ ಮಯೂರಶರ್ಮನ ಆಶ್ರಯಸ್ಥಾನ. ರಣ ಮೂರ್ಖ ಕುಲದರಸರ ನೆಲೆಮನೆಯಾಗಿತ್ತು. ಸುರತಾಳ ಭೂಭುಜನಿಂದಲೂ ಮನ್ನಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯದ ಸೇನಾನಿ ಮಲ್ಲಿನಾಥ ನಡುಗೊಂಟೆ ರಣಧೀರರಾದ ಕಾಮಗೆರೆ ವಂಶ ಲಲಾಮರ ಪಾಳೆಯಗಾರರ ರಾಜಧಾನಿ. ಸುತ್ತಲಿನ ಪುಂಡು ಪಾಳೆಯಗಾರರನ್ನು ಮಟ್ಟು ಹಾಕಿದ ಗಂಡುಗಲಿ ಓಬವ್ವನಾಗತಿಯಿಂದ ಹಾಗೂ ಒನಕೆ ಓಬವ್ವಳಿಂದ ಸ್ತ್ರೀಯರು ಅಬಲೆಯರಲ್ಲ, ಪ್ರಬಲೆಯರು ಎಂಬ ಕೀರ್ತಿಯನ್ನು ಚಿತ್ರದುರ್ಗಕ್ಕೆ ತಂದಿದ್ದಾರೆ. ಹೈದರನ ಭೇದೋಪಾಯದ ಸಂಚನ್ನು, ಸ್ವಾಧೀನ ಮಾಡಿಕೊಳ್ಳುವ ಆಸೆಯನ್ನು ಛಿದ್ರ ಮಾಡಿದವಳು ಓಬವ್ವ. ನಂತರ ಚಿತ್ರದುರ್ಗವನ್ನು ಹೈದರಾಲಿ ತನ್ನ ಕುಟಿಲತನದಿಂದ, ಮರಳು ಮಾತುಗಳಿಂದ ಮದಕರಿನಾಯಕನನ್ನು ಸೆರೆ ಹಿಡಿದು ವಶಪಡಿಸಿಕೊಳ್ಳುತ್ತಾನೆ.

ಚಿತ್ರದುರ್ಗ ಸಂಸ್ಥಾನ ಹೈದರನ ರಾಜ್ಯದ ಅಂಗವಾಗಿ ವಿಲೀನಗೊಂಡು ಹೈದರನ ಆಡಳಿತಕ್ಕೆ ಒಳಪಡುತ್ತದೆ. ಇಲ್ಲಿಂದ ಕಹಳೆಯವರು ವೃತ್ತಿ ಇಲ್ಲದೇ ನಿಸ್ಸಹಾಯಕರಾಗುತ್ತಾರೆ. ಹೈದರ್ ಮತ್ತು ಟಿಪ್ಪುವಿನ ಆಡಳಿತ ಇವರನ್ನು ಸಂಪೂರ್ಣ ಮರೆಯುತ್ತದೆ. ಹಾಗಾಗಿ ಓಬವ್ವನ ವಂಶಸ್ಥರೆನಿಸಿಕೊಂಡವರೆಲ್ಲಾ ನಿರಾಶ್ರಿತರಾಗಿ ಚಿತ್ರದುರ್ಗ ಜಿಲ್ಲೆಯಾದ್ಯಂತ ನೆಲೆಸುತ್ತಾರೆ ಪಿಳ್ಳೆಕೆರನಹಳ್ಳಿ,

ಸೊಂಡೆಕೆರೆ, ತಮಟಕಲ್ಲು, ಕಸುವನಹಳ್ಳಿ, ಅತ್ತಿಗೆರೆ, ಸಜ್ಜನಕೆರೆ, ಸಾಣಿಕೆರೆ, ದುಮ್ಮಿ ಮೊದಲಾದೆಡೆ ನೆಲೆಸುತ್ತಾರೆ. ಹಾಗಾಗಿ ಇದರೊಡನೆ ಕಾಲಾನಂತರದಲ್ಲಿ ಓಬವ್ವನಿಗೆ ಜಹಗೀರಾಗಿ ನೀಡಿದ್ದ ಅಗಸನ ಕಲ್ಲು ಚಿತ್ರದುರ್ಗಕ್ಕೆ ವಿಲೀನವಾಗಿ ಎಲ್ಲಾ ಜಹಗೀರುಗಳು ನಿಂತು ಹೋಗುತ್ತವೆ. ನಂತರ ದುರ್ಗವು ಮೈಸೂರು ಒಡೆಯರ ಆಳ್ವಿಕೆಗೆ ಸೇರುತ್ತದೆ. ಅರಸರು ಸಹ ಓಬವ್ವೆಯ ಸಾಹಸಗಾಥೆಯನ್ನು ಕೇಳಿದ ಅವಳ ವಂಶಜರಿಗೆ ನೀಡಿದ ಜಹಗೀರುಗಳನ್ನು ಹಿಂದಿರುಗಿಸಲು ತಿಳಿಸುತ್ತಾರೆ. ಆದರೆ ಅಧಿಕಾರಿಗಳಿಗೆ ಮಧ್ಯವರ್ತಿಗಳಿಂದ ತಪ್ಪು ಮಾಹಿತಿ ಹೋಗಿ ಅದು ಕೈಗೂಡದೆ ಅವಳ ವಂಶಜರಿಗೆ ಯಾವ ಅನುಕೂಲಗಳು ಸಿಗುವುದಿಲ್ಲ. ಆದರೂ ವಂಶಸ್ಥರೆನಿಸಿಕೊಂಡವರು ಮತ್ತೆ ಎಲ್ಲರೂ ಒಂದುಗೂಡಿ ಆಕೆಗೊಂದು ದೇವಸ್ಥಾನವನ್ನು ತಾವೇ ನಿರ್ಮಿಸಿಕೊಂಡು ಕುಲದೇವತೆಯಾಗಿ ತಾನು ತನ್ನ ವಂಶೀಕರಿಗೆ ಇರಬೇಕೆಂಬ ಓಬವ್ವನ ಆಸೆಯನ್ನು ನೆರವೇರಿಸಿದ್ದಾರೆ.

ಚಿತ್ರದುರ್ಗ ನಗರದ ಹೊಳಲ್ಕೆರೆ ರಸ್ತೆಯಲ್ಲಿಯ ತಮ್ಮ ಕಾಲೋನಿಯಲ್ಲಿ ಒನಕೆ ಓಬವ್ವನ ಹೆಸರಿನಲ್ಲಿಯೇ "ವೀರವನಿತೆ ಒನಕೆ ಓಬವ್ವನ ದೇವಸ್ಥಾನ" ಎಂದೇ ನಿರ್ಮಿಸಿಕೊಂಡಿದ್ದಾರೆ. ಹಾಗೆಯೇ ದಿನಂಪ್ರತಿ ಪೂಜೆಯನ್ನು ಸಲ್ಲಿಸುತ್ತಿದ್ದಾರೆ. ವಾರ್ಷಿಕ ಆಚರಣೆಗಳನ್ನೆಲ್ಲಾ ಆಚರಿಸುತ್ತಿದ್ದಾರೆ. ತಮ್ಮ ಮುಗ್ಧತೆಯಲ್ಲಿ ತಾವೇ ತಮ್ಮ ಕುಲದೇವತೆಯನ್ನು ಸೃಜಿಸಿಕೊಂಡು ಮುಂದಿನ ಪೀಳಿಗೆಗೆ ಓಬವ್ವನ ಇರುವಿಕೆಯ ಜೀವಂತಿಕೆಯನ್ನು ಉಳಿಸುವ ನಿಟ್ಟಿನಲ್ಲಿ ಮುನ್ನೆಡೆದಿದ್ದಾರೆ. ಕೆಲವು ಆಚರಣೆಗಳನ್ನು ತಪ್ಪದೇ ಆಚರಿಸಿಕೊಂಡು ಬರುತ್ತಿದ್ದಾರೆ.

೬.೧. ಕುಲದೇವತೆಯಾಗಿ ಓಬವ್ವನ ಪೂಜೆ : ಭಾರತೀಯ ಸಮಾಜದಲ್ಲಿ ಹೆಣ್ಣಿಗೆ ಅತ್ಯಂತ ಹಿರಿದಾದ ಸ್ಥಾನವಿದೆ. ಭಾರತೀಯರು ಹೆಣ್ಣನ್ನು ನೋಡುವ ದೃಷ್ಟಿಯೇ ಬೇರೆ. ಜನಾಂಗದವರು ನೋಡುವ ದೃಷ್ಟಿಯೇ ಬೇರೆ. ಇವರ ದೃಷ್ಟಿಯಲ್ಲಿ ಪರಮಾತ್ಮನ ಚಿತ್‌ಶಕ್ತಿಯ ಮತ್ತೊಂದು ರೂಪವೇ ಆದಿಶಕ್ತಿ. ಸ್ತ್ರೀಶಕ್ತಿ ಎಂಬುದು ನೈಸರ್ಗಿಕ ಶಕ್ತಿ. ಉತ್ಪಾದನೆ ಮತ್ತು ಸಂರಕ್ಷಣೆಯ ಘಟಕ. "ನನ್ನ ದೃಷ್ಟಿಯಲ್ಲಿ ಹೆಣ್ಣು ಕೇವಲ ಮಾನುಷಿಯಲ್ಲ; ಅಬಲೆಯೂ ಅಲ್ಲಾ; ಅವಳೊಂದು ಮಹಾಶಕ್ತಿ"– ಎನ್ನುತ್ತಾರೆ ಕುವೆಂಪು.[೩] ಕುವೆಂಪುರವರ ದೃಷ್ಟಿಕೋನದಲ್ಲಿ ಮಹಿಳೆಯರೆಂದರೆ ಅನೇಕ ಮುಖಗಳಿಂದ ಮಹಾಶಕ್ತಿಗೆ ಹೋಲಿಸಿದ್ದಾರೆ. ಹೆಣ್ಣು ಬೇರೆ ಅಲ್ಲಾ ಮೂಲಧಾತು, ಚೈತನ್ಯ, ಸ್ಫೂರ್ತಿ ಎಲ್ಲಾ. ನಿಸರ್ಗ, ಭೂಮಿ, ನದಿ, ಭಾಷೆ, ಶಾರದಾದೇವಿ, ಭಾರತಾಂಬೆ ಎಲ್ಲದರಲ್ಲೂ ಹೆಣ್ಣನ್ನು ಕಂಡಿದ್ದಾರೆ. ತಳಿರು, ಹೂ, ಹಣ್ಣು ಎಲ್ಲವೂ ತಾಯಿಯ ಪ್ರತೀಕಗಳೇ. ಸ್ತ್ರೀಯರ ಬಗ್ಗೆ ಮನುಸ್ಮೃತಿಯ ಅಭಿಪ್ರಾಯಗಳನ್ನು ಕ್ರೋಢೀಕರಿಸಿಕೊಂಡರೆ ಅದು ಆ ಯುಗದ ಸ್ತ್ರೀಸಮಾಜದ ಕೈಗನ್ನಡಿಯೇ ಆಗುತ್ತದೆ. ಆ ಯುಗದಲ್ಲಿ ಸ್ತ್ರೀಯರಿಗೆ ಉಪನಯನವೆಂಬ ವಿಧಿ ಇದ್ದಿತು. ಗುರುಗಳನ್ನು ಆಶ್ರಯಿಸಿ ಅವರು ವೇದಗಳನ್ನು ಓದುತ್ತಿದ್ದರು. ಗಾಯಿತ್ರಿಜಪ ಮತ್ತು ಅಗ್ನಿಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ವಿವಾಹವಾಗುವ, ಬ್ರಹ್ಮವಾದಿನಿಯರಾಗಿಯೇ ತಮ್ಮ ಬದುಕನ್ನು ಸಾಗಿಸುವ ಅವಕಾಶವನ್ನೆ ಅವರು ಪಡೆದಿದ್ದರು. ಅಂದರೆ ಸಮಾಜದ ಸ್ಥಿರತೆ ಮತ್ತು

ಪಾವಿತ್ರ್ಯಗಳು ಸ್ತ್ರೀಯನ್ನೆ ಅವಲಂಬಿಸಿವೆ ಆಗ ಮನೆಯೆಂದರೆ ಕಟ್ಟಡವಲ್ಲ. ಗೃಹಿಣಿಯೇ ಮನೆ 'ನ ಗೃಹಾ ಗೃಹಮಿಧಾಹುಃ ಗೃಹಿಣೀ ಗೃಹಮುಚ್ಯತೇ" ಎನ್ನುವಷ್ಟರ ಮಟ್ಟಿಗೆ ಸ್ತ್ರೀಯರ ಹೊಣೆಗಾರಿಕೆಗಳು ಹೆಚ್ಚಿದ್ದವು" ಗೃಹಿಣಿಯೆಂದರೆ ಅವಳು ಭಾಗ್ಯದೇವತೆಯಾದ ಲಕ್ಷ್ಮೀ ಎಂದೇ ಭಾವಿಸಲ್ಪಡುತ್ತಿದ್ದಳು. ಸ್ತ್ರೀಯರಿಗೆ ಪೂಜ್ಯತೆ ಇಲ್ಲದ ಸ್ಥಾನದಲ್ಲಿ ಯಾವ ಕಾರ್ಯವೂ ಫಲಕಾರಿಯಾಗದು ಎಂದು ಮನು ಘೋಷಿಸಿದನು. ರಾಮಾಯಣ ಕಾಲದಲ್ಲಿ ಪುಣ್ಯಗಳಿಸಲು ಅಥವಾ ಆತ್ಮವಿಶ್ವಾಸ ಮಾಡಿಕೊಳ್ಳಲು ಪತಿಯು ಮಾಡುತ್ತಿದ್ದ ಎಲ್ಲಾ ಕರ್ಮಾನುಷ್ಠಾನಗಳಲ್ಲೂ ಹೆಂಡತಿಗೆ ಸಮಾನವಾದ ಪಾಲುಗಾರಿಕೆ ಇತ್ತು. ಹೆಣ್ಣು ಅಂದು ಗಂಡಿಗೆ ಸಮಾನಸ್ಕಂದಳಾಗಿದ್ದಳು. ಸ್ತ್ರೀಯರ ವಿಚಾರವಾಗಿ ಬುದ್ಧನ ವಿಚಾರಧಾರೆ ಅತ್ಯಂತ ಮರ್ಮಸ್ಪರ್ಶಿಯಾಗಿದೆ. ವೈದಿಕ ಧರ್ಮದಲ್ಲಿ ಬಂಜೆಯರನ್ನಾಗಲಿ, ವಿಧವೆಯರನ್ನಾಗಲಿ ಅಮಂಗಳಕಾರಿಗಳೆಂದು ಪರಿಗಣಿಸುತ್ತಿದ್ದ ಭಾವವನ್ನು ಬುದ್ಧದೇವನು ಸಂಪೂರ್ಣವಾಗಿ ತಿರಸ್ಕರಿಸಿದನು. ತನ್ನ ಮೋಕ್ಷ ಸಾಧನೆಗೆ ಸ್ತ್ರೀಯಾದವಳು ತನ್ನ ನಡತೆಯನ್ನೇ ಅವಲಂಬಿಸಬೇಕು ಎಂದು ಬುದ್ದನು ಒತ್ತಿ ಹೇಳಿದನು. ಜೈನಧರ್ಮದಲ್ಲಿ ವ್ರತ, ಉಪವಾಸ, ನೇಮ, ನಿಷ್ಠೆ, ದಾನ ಮುಂತಾದ ಎಲ್ಲಾ ಸತ್ಕಾರ್ಯದಲ್ಲೂ ಸ್ತ್ರೀಯರದೇ ಪ್ರಧಾನ ಪಾತ್ರ. ಭೂಮಿಯ ಮೇಲೆ ಪ್ರಾಣಿಯಾಗಿ ಹುಟ್ಟಿದ ಜೀವವನ್ನು ಮಾನವನನ್ನಾಗಿ ಮಾಡಿದ ಶಕ್ತಿ ತಾಯಿ. ಬೇಟೆ ಹಾಗೂ ಕ್ರೌರ್ಯದ ಗಂಡಸು ಪ್ರಾಣಿಯನ್ನು – ಗೃಹಸ್ಥನನ್ನಾಗಿ ಮಾಡಿದವಳು ತಾಯಿ. ತಾಯಿರೂಪ ಇಂದಿಗೂ ಉತ್ತಮಿಕೆಯನ್ನು ಸಾಧಿಸುತ್ತಾ ಮಾನವರನ್ನು ತಿದ್ದುತ್ತಲೇ ಸಾಗಿದ್ದಾಳೆ. ಪುರುಷ ಮತ್ತು ಸ್ತ್ರೀಭೇದ ನಿಸರ್ಗನಿರ್ಮಿತ. ಹೆಣ್ಣು ಸಂತಾನ ಫಲ ಕೊಡುವವಳಾಗಿದ್ದರಿಂದ ಅವಳು ಗಂಡಿಗಿಂತ ಯಾವಾಗಲೂ ಶ್ರೇಷ್ಠಳೇ. ಒಳಿತು ಮತ್ತು ಕೆಡುಕು ಎಂಬ ಸಮಸ್ಯೆ ಯಾವಾಗ ಕಾಲದಲ್ಲಿಯೂ ಇದ್ದದ್ದೇ. ವೇದ, ಉಪನಿಷತ್ತು, ಸ್ಮೃತಿ, ಪುರಾಣ, ಇತಿಹಾಸಗಳಲ್ಲಿ ಶ್ರೇಷ್ಠ ಸ್ತ್ರೀ ಸಮೂಹದ ಬಗೆಗಿನ ಆದರ ಭಾವನೆಯನ್ನು ಕಾಣಬಹುದಾಗಿದೆ.

'ನಿನ್ನ ರಕ್ತ ಮಾಂಸದಲ್ಲಿ ಮೈಯ್ಯಮನೆ ಕಟ್ಟಲು
ಆದನು ನಾನು ಮುಟ್ಟಲು
ನಿನ್ನ ಉಸಿರಲುಸಿರಾಡಿಸಿ ಬಸುರಿನಲ್ಲಿ ಬೆಳೆದನು
ಒಂದು ರೂಪ ತಳೆದೆನು' –

ಎಂದು ಬೇಂದ್ರೆಯವರು ಆಧ್ಯಾತ್ಮಿಕ ಅನುಭಾವಕ್ಕೂ ಭೌತಶಾಸ್ತ್ರಾನ್ವಯದ ಸೃಷ್ಟಿಗೂ ಸಂಬಂಧವಿದೆಯೆಂದು ನುಡಿದಿದ್ದಾರೆ. ಆ ತಾಯಿಯ ಎದೆ ಹಾಲಿನೊಂದಿಗೆ ಪ್ರೇಮರಸವನ್ನು ಕುಡಿಸಿ ಬೆಳೆಸಲು ಬೇಂದ್ರೆ ಆ ತಾಯಿ ಜೀವವನ್ನೆ ನಂಬಿ ಬೆಳೆಯಿತು ಎಂದಿದ್ದಾರೆ. ಹೀಗೆ ಅಸಂಖ್ಯಾತ ಅಜ್ಞಾತ ಮಹಾವ್ರತೆಯರ ಜೀವನ ದರ್ಶನವನ್ನು ಪಡೆದ ಈ ನಾಡಿನಲ್ಲಿ ಓಬವ್ವನ ಘಟನೆ, ಆಕೆಯ ವೃತ್ತಾಂತವು ಸಹ ಈ ನಿಟ್ಟಿನಲ್ಲಿ ಪ್ರತಿಬಿಂಬಿತವಾಗಿದೆ. ಆಕೆಯನ್ನು ತಮ್ಮ ಕುಲದೇವತೆಯಾಗಿ ಆರಾಧಿಸಿಕೊಂಡು ಬರುತ್ತಿರುವುದು ಅನುಕರಣೀಯವಾದುದು.

ಓಬವ್ವನ ವಂಶಿಕರು ತಾವೆಂದು ಗುರುತಿಸಿಕೊಂಡಿರುವ ಈಗ ಹಾಲೀ ಇರುವ ಬಾಲಚಂದ್ರರಾವ್‌ರವರ ಮಗ ನಾಗೇಂದ್ರರಾವ್‌ರವರು ಹೇಳುವ ಪ್ರಕಾರ ಓಬವ್ವನ ಪೂಜಾ ಸಂಸ್ಕಾರ ಕಾರ್ಯಗಳು ಈಗಲೂ ಚಾಚೂ ತಪ್ಪದೆ ನಡೆಯುತ್ತಿದ್ದು ಆ ವಂಶದ ಹೆಣ್ಣು ಮಕ್ಕಳು ಮತ್ತು ಅವರ ಮಕ್ಕಳಿಂದ ನಡೆಯುತ್ತದೆ. ಏಕೆಂದರೆ ನಾಗೇಂದ್ರರಾವ್‌ರವರ ಪತ್ನಿ ಜಯಮ್ಮನವರು ಹೇಳುವ ಪ್ರಕಾರ ಓಬವ್ವನ ವಂಶಿಕರಿಗೆ ಪ್ರಾರಂಭದಲ್ಲಿ ಸಂತತಿ ಇಲ್ಲದೆ ಇದ್ದಾಗ ಅವರ ಹೆಣ್ಣು ಮಕ್ಕಳ ಮಕ್ಕಳನ್ನೆ ದತ್ತು ಪಡೆದಿದ್ದು ಅವರಲ್ಲಿ ಜನಿಸಿದ ಮಕ್ಕಳಿಂದ ಪೂಜಾ ಕಾರ್ಯಗಳನ್ನು ನೆರವೇರಿಸುತ್ತಿದ್ದರಂತೆ. ಹಾಗಾಗಿ ಅದು ನಂತರ ಸಂತತಿಯಾಗಿ ಮಕ್ಕಳಾದರೂ ಸಹ ವಾಡಿಕೆಯಾಗಿ ಹೆಣ್ಣು ಮಕ್ಕಳ ಮಕ್ಕಳೇ ನೆಡೆಸಿಕೊಂಡು ಬಂದಿದ್ದಾರೆ. ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯಲ್ಲಿ ಈ ಸಮುದಾಯದವರು ವಾಸಿಸುತ್ತಿದ್ದು ಅಲ್ಲಿಯೇ ಓಬವ್ವನಿಗಾಗಿ ಒಂದು ದೇವಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ. ತಮ್ಮ ಕುಲದೇವತೆಯಾಗಿ ಪೂಜಿಸುತ್ತಿದ್ದಾರೆ. ಹಿಂದೆ ನಾಯಕ ವಂಶದವರು ಚಿತ್ರದುರ್ಗದಲ್ಲಿ ಇರುವವರೆಗೂ ಪ್ರತಿವರ್ಷದ ವಿಜಯದಶಮಿಯ ಸಮಯದಲ್ಲಿ ಓಬವ್ವನ ಪ್ರತಿಮೆಯನ್ನು ದೇವಸ್ಥಾನದಿಂದ ತಮ್ಮ ಮನೆಯೊಳಗೆ ತೆಗೆದುಕೊಂಡು ಹೋಗಿ ಅಭ್ಯಂಜನಾದಿಗಳನ್ನು ನೆಡೆಸಿ ಹೊಸ ಸೀರೆಯನ್ನು ಉಡಿಸಿ, ಮಡಿಲಕ್ಕಿಯನ್ನು ಹಾಕಿ ಪ್ರತಿಮೆಯ ಜೊತೆಗೆ ಹಾಜರಿದ್ದ ಓಬವ್ವನ ಸಂಬಂಧಿಕರಿಗೆ ಎಲ್ಲರಿಗೂ ಹಬ್ಬದ ಅಡಿಗೆಯನ್ನು ಮಾಡಿ ವೀಳ್ಯವನ್ನು ಕಾಣಿಕೆಯಾಗಿ ನೀಡಿ ಕಳುಹಿಸುತ್ತಿದ್ದರಂತೆ. ಆದರೆ ಕಾಲ ಸರಿದಂತೆಲ್ಲ ನಾಯಕನ ವಂಶಸ್ಥರು ಸರ್ಕಾರಿ ಕೆಲಸಗಳಲ್ಲಿ ತೊಡಗಿ ಸೇವೆಗಾಗಿ ಸರ್ಕಾರ ನಿಯೋಜಿಸಿದ ಸ್ಥಳಗಳಿಗೆ ಚಿತ್ರದುರ್ಗವನ್ನು ಬಿಟ್ಟು ಬೇರೆ ಊರಿನಲ್ಲಿ ನೆಲೆಸಬೇಕಾಯಿತು. ಹಾಗಾಗಿ ಕಾಲ ಕ್ರಮೇಣ ಈ ಪದ್ಧತಿ ಮಸುಕಾಗತೊಡಗಿತು. ಆದರೆ ನಾಯಕರ ಕಡೆಯವರ ಮನೆಗಳಲ್ಲಿ ಮದುವೆ, ಶುಭ-ಸಮಾರಂಭಗಳು ಎಲ್ಲೇ ನಡೆದರೂ ಓಬವ್ವನ ಸಂಬಂಧಿಕರನ್ನು ಕರೆದು ವೀಳ್ಯ ಕೊಡುವ ಪದ್ಧತಿಯನ್ನು ಈಗಲೂ ನೆಡೆಸಿಕೊಂಡು ಬರುತ್ತಿದ್ದಾರೆ. ಹಾಗೆಯೇ ಕಾಲ ಕ್ರಮೇಣ ಉದ್ಯೋಗಗಳನ್ನರಸುತ್ತಾ ಓಬವ್ವನ ವಂಶಸ್ಥರೂ ಸಹ ಛಿದ್ರವಾದರು. ಏಕೆಂದರೆ ದುರ್ಗವು ಹೈದರಾಲಿಯ ಕೈಸೇರುತ್ತಿದ್ದಂತೆ ಮುಸಲ್ಮಾನರು ಪ್ರತಿ ಮನೆಗೆ ನುಗ್ಗಿ ದೋಚಿಕೊಂಡು ಹೋಗುವರೆಂಬ ಭೀತಿಯಿಂದ ಕಂಗಾಲಾಗಿ ಕಹಳೆಯವರೆಲ್ಲಾ ಸೇರಿ ಗುಪ್ತಾಲೋಚನೆ ಮಾಡಿ ದುರ್ಗ ಬಿಟ್ಟು ಬೇರೆ ಹಳ್ಳಿಗಳಲ್ಲಿ ವಾಸಿಸಲು ನಿರ್ಧರಿಸಿ ಮುನ್ನೂರಕ್ಕೂ ಹೆಚ್ಚು ಛಲವಾದಿಗಳು ದುರ್ಗ ಬಿಟ್ಟು ಪಿಳ್ಳೇಕೆರೆನಹಳ್ಳಿ, ದೊಡ್ಡಸಿದ್ದವ್ವನಹಳ್ಳಿ, ಚಿಕ್ಕಬೆನ್ನೂರು, ಸೊಂಡೆಕೆರೆ, ಕುಂಚಿಗನಾಳು, ಸಜ್ಜನಕೆರೆ, ಸಾಣಿಕೆರೆ, ತಮಟಕಲ್ಲು, ಜಾನಕೊಂಡ ಮೊದಲಾದ ಊರುಗಳಲ್ಲಿ ನೆಲೆಸಿದರು. ಹಾಗೆಯೇ ತಮ್ಮ ವಂಶ ಬೆಳೆದಂತೆಲ್ಲಾ ತಮ್ಮ ತಮ್ಮ ಮಕ್ಕಳಿಗೆ ಒಳ್ಳೆಯ ವಿಧ್ಯಾಭ್ಯಾಸ ಕೊಡಿಸಿ ಮಕ್ಕಳು ನೆಲೆಸಿದೆಡೆ ಪೋಷಕರು ಇರಬೇಕಾಯಿತು. ಹಾಗಾಗಿ ಕಾಲ ಸರಿದಂತೆಲ್ಲಾ ಓಬವ್ವನ ವಂಶಸ್ಥರು ಸಹ ತಮ್ಮ ಮೂಲ ಸ್ಥಳಗಳನ್ನು ಬಿಟ್ಟು ಮಕ್ಕಳಿದ್ದೆಡೆಗೆ ಹೋಗಬೇಕಾಯಿತು. ಹಾಗಾಗಿ ಓಬವ್ವನ ವಂಶೀಕರು ನಾಯಕರು ನೀಡಿದ್ದ ಕಟ್ಟೆಮನೆಯಿರುವ

ಮೂಲ ಸ್ಥಳ ಚಿತ್ರದುರ್ಗವನ್ನು ಬಿಟ್ಟು ಹೋದರು. ಕಾಲ ಸರಿದಂತೆಲ್ಲಾ ಎಲ್ಲಾ ಆಚರಣೆಗಳು ಮಸುಕಾಗತೊಡಗಿದವು. ಏಕೆಂದರೆ ಹೊಟ್ಟೆಪಾಡಿನ ಯೋಚನೆಯ ಮೂಟೆಯನ್ನೇ ತಲೆಯ ಮೇಲೆ ಹೊತ್ತುಕೊಂಡ ಜೀವಗಳು ಮನಸ್ಸಿನ ತಳಮಳವನ್ನು ಬದಿಗೊತ್ತಿ ನಾಯಕನಿಲ್ಲದ ಕೋಟೆಯನ್ನು ಬಿಟ್ಟು ಬಹುದೂರ ಹೋಗಬೇಕಾಯಿತು. ಕಹಳೆಯವರು ಹೊಟ್ಟೆಪಾಡಿಗಾಗಿ, ಜೀವನೋಪಾಯಕ್ಕಾಗಿ ಒಂದು ವ್ಯವಸ್ಥೆ ಮಾಡಿಕೊಳ್ಳುವುದು ಅವಶ್ಯಕವಾಗಿತ್ತು. ಬಹುಶಃ ಓಬವ್ವನಿಗೆ ಜಹಗೀರಾಗಿ ಬಂದಿದ್ದ ಅಗಸನ ಕಲ್ಲುಗ್ರಾಮವಾದರೂ ಅವರಿಗೆ ದಕ್ಕಿದ್ದರೆ ಸಾಗುವಳಿ ಮಾಡಿಕೊಂಡು ಬೇರೆ ಜೀವನ ಮಾರ್ಗವನ್ನಾದರೂ ಕಲ್ಪಿಸಿಕೊಳ್ಳುತ್ತಿದ್ದರೇನೋ. ಆದರೆ ಅದೂ ಕೈಗೂಡದೆ ಕೊನೆಗೆ ಮಕ್ಕಳೊಂದಿಗೆ ಕೈಬೀಸಿ ಕರೆದ ವೃತ್ತಿಗಳನ್ನು ಅರಸುತ್ತಾ ದಕ್ಷಿಣಭಾರತದಲ್ಲೇ ದುರ್ಗಮ ದುರ್ಗವೆಂಬ ಪ್ರಖ್ಯಾತಿ ಮುಡಿಗೇರಿಸಿಕೊಂಡಿದ್ದ, ಶೌರ್ಯ ಉಕ್ಕಿಸುವ ಗಂಡುಗಲಿಗಳ ವೀರಪ್ರತಾಪಿಗಳ ನಾಡನ್ನು ತೊರೆದು ಹೋಗಬೇಕಾಯಿತು ಹೋದರು. ಹಾಗಾಗಿ ಎಲ್ಲಾ ಆಚರಣೆಗಳೂ ಮಸುಕಾದವು. ಪ್ರತಿ ವರ್ಷವೂ ವಿಜಯದಶಮಿಯಂದು ನಾಯಕ ವಂಶದವರನ್ನು ಅಧಿಕೃತವಾಗಿ ಸರ್ಕಾರದಿಂದಲೇ ಗುರುತಿಸಲ್ಪಟ್ಟಿರುವ ನಾಯಕ ವಂಶದವರಾದ ಶ್ರೀ ವೀರಭದ್ರನಾಯಕರಿಂದ ಚಿತ್ರದುರ್ಗದಲ್ಲಿ ದಸರಾ ಹಬ್ಬದಂದು, ಶ್ರೀ ಮುರುಘಾಶ್ರೀ ಅವರ ನೇತೃತ್ವದಲ್ಲಿ ಅಂಬು ಹಾಕುವ ಕಾರ್ಯಕ್ರಮ ನಡೆಯುತ್ತದೆ. ಆ ದಸರಾ ಕಾರ್ಯಕ್ರಮದ ಸಮಯದಲ್ಲಿ ಮಾತ್ರ ಓಬವ್ವನ ವಂಶಸ್ಥರು ಎಲ್ಲರೂ ಹಾಜರಿರುತ್ತಿದ್ದರು. ವಂಶೀಕರಾದ ನಿವೃತ್ತ ಬ್ಯಾಂಕ್ ಉದ್ಯೋಗಿಯಾಗಿರುವ ಶ್ರೀ ಸೋಮಶೇಖರಪ್ಪನವರು ಹೇಳುವ ಪ್ರಕಾರ ಆ ಪೂಜಾ ಸಮಯದಲ್ಲಿ ನಾಯಕರ ಎಪ್ಪತ್ತೇಳು ಬಿರುದು ಬಾವಲಿಗಳನ್ನು ಆಗಿನ ನಾಯಕರಾಗಿದ್ದ ವೀರಮದಕರಿನಾಯಕರು ಓಬವ್ವನ ವಂಶೀಕರಿಗೆ ಒಪ್ಪಿಸಿದ್ದು, ಅಂತೆಯೇ ದಸರಾ ಹಬ್ಬದ ಸಮಯದಲ್ಲಿ ಆ ಶುಭ ಸಂದರ್ಭದಲ್ಲಿ ನಾಯಕ ವಂಶದವರಿಗೆ ಸೇವೆ ಸಲ್ಲಿಸಲು ತಾವೆಲ್ಲಾ ಅಂದು ಬರುತ್ತಿದ್ದುದ್ದಾಗಿಯೂ, ಹಾಗೆಯೇ ವೀರಭದ್ರ ನಾಯಕರು ಅವರು ವಂಶೀಕರು ಆ ಶುಭ ಸಂದರ್ಭದಲ್ಲಿ ಓಬವ್ವನ ವಂಶದವರನ್ನು ಗುರುತಿಸಿ ವೀಳ್ಯ ನೀಡುತ್ತಿದ್ದುದನ್ನು ಸ್ಮರಿಸಿದರು. ಕಾಲಾನಂತರದಲ್ಲಿ ವೃತ್ತಿಗಳನ್ನರಸುತ್ತಾ ಹೋದವರು ಮತ್ತೆ ತಮ್ಮ ಮೂಲಸ್ಥಾನವನ್ನರಸುತ್ತಾ ದುರ್ಗದ ಕಡೇ ಬಂದು ನೆಲೆಸತೊಡಗಿದರು.

ಎಲ್ಲರೂ ಒಂದಾಗಿ ದುರ್ಗದ ಪುರಜನರ ಸಹಯೋಗದಿಂದ ಹೊಳಲ್ಕೆರೆ ರಸ್ತೆಯಲ್ಲಿ ಛಲವಾದಿಗರೇ ವಾಸವಾಗಿರುವ ಕಾಲೋನಿಯಲ್ಲಿ ಓಬವ್ವನ ದೇವಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ. ಆಗಿನ ಚಿತ್ರದುರ್ಗ ಜಿಲ್ಲೆಯ ಶಾಸಕರಾಗಿದ್ದ ಮಾನ್ಯ ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿಯವರ ಘನ ಅಧ್ಯಕ್ಷತೆಯಲ್ಲಿ ದೇವಸ್ಥಾನದ ಉದ್ಘಾಟನೆ ಕಾರ್ಯಕ್ರಮವನ್ನು ಮಾಡಿಸಿ, ದೇವಸ್ಥಾನದ ಉಸ್ತುವಾರಿಯನ್ನು ಓಬವ್ವನ ವಂಶಸ್ಥರು ವಹಿಸಿಕೊಂಡಿದ್ದಾರೆ. ಹಾಗೆಯೇ ಚಾಚೂ ತಪ್ಪದೇ ಪೂಜಾ ಕಾರ್ಯಗಳನ್ನು ನೆಡೆಸಿಕೊಂಡು ಬರುತ್ತಿದ್ದಾರೆ. ಮುಖ್ಯವಾಗಿ ಓಬವ್ವನ ಸಂಬಂಧಿಕರಲ್ಲಿ ಅಕ್ಕತಂಗಿಯರು ಎನಿಸಿಕೊಂಡಿರುವವರ ಮಕ್ಕಳಿಂದಲೇ ಪ್ರಥಮ ಪೂಜೆ ಸಲ್ಲುತ್ತಿದೆ. ನಿವೃತ್ತ

ಎ.ಎಸ್.ಐ. ಹನುಮಂತಪ್ಪನವರು ಹಿರಿಯರಾದ ಸುರೇಶಪ್ಪರವರು ಹೇಳಿದಂತೆ ತಮ್ಮ ತಾತನವರಾದ ಬಾಲಪ್ಪರವರು ದೇವಸ್ಥಾನದ ನಿರ್ಮಿತಿಗಿಂತ ಮೊದಲು ಓಬವ್ವನ ಪ್ರತಿಮೆಯನ್ನು ತಂದು ತಮ್ಮಗಳ ಮನೆಯ ಹತ್ತಿರವೇ ಪ್ರತಿಷ್ಠಾಪಿಸಿಕೊಂಡು ಪೂಜಾ ಕಾರ್ಯಗಳನ್ನು ಯಥಾಪ್ರಕಾರ ನಿರ್ವಹಿಸಿದರಂತೆ. ಆದರೆ ಈ ಕಾರ್ಯ ನೆಡೆದ ಮೂರು ತಿಂಗಳ ಅವಧಿಯಲ್ಲಿ ಬಾಲಪ್ಪನವರು ಸಾವನ್ನಪ್ಪಿದರಂತೆ. ಇದರಿಂದ ಹೆದರಿದ ಓಬವ್ವನ ವಂಶಸ್ಥರು ಓಬವ್ವನ ಪ್ರತಿಮೆಯನ್ನು ಯಥಾಪ್ರಕಾರ ಹೊಳಲ್ಕೆರೆ ರಸ್ತೆಯಲ್ಲಿದ್ದ ಮೂಲಸ್ಥಾನಕ್ಕೆ ಸೇರಿಸಿದರಂತೆ. ಹಾಗಾಗಿ ಓಬವ್ವನ ಮೊದಲ ಪೂಜೆ ವರಸೆಯಲ್ಲಿ ಅಕ್ಕ-ತಂಗಿಯರ ಸಂಬಂಧಿಕರಿಂದಲೇ ಮೊದಲ ಪೂಜೆ ಪ್ರಾರಂಭವಾಯಿತು. ಮೊದಲಿಗೆ ಅಷ್ಟೇನೂ ಸುಸಜ್ಜಿತವಲ್ಲದ ಹುಲ್ಲಿನಿಂದ ಮಾಡಿದ ಗುಡಿಸಲಾಗಿತ್ತು ಓಬವ್ವನ ದೇವಸ್ಥಾನ. ಕಾಲಾನಂತರದಲ್ಲಿ ಪುಟ್ಟ ದೇವಸ್ಥಾನವಾಗಿ ಮಾರ್ಪಾಡಾಗಿದೆ.

ಓಬವ್ವನ ಹುಲ್ಲಿನ ದೇವಸ್ಥಾನಕ್ಕೆ ಹಿಂದೊಮ್ಮೆ ಬೆಂಕಿ ಬಿದ್ದು ಅಲ್ಲಿನ ಬಹುತೇಕ ವಸ್ತುಗಳು ಸುಟ್ಟು ಹೋಗಿದ್ದು ಮೂಲ ಮರದ ಮೂರ್ತಿ ಸುಟ್ಟು ಹೋಗಿದ್ದು ಹೊಸ ಕಪ್ಪು ಶಿಲಾಮೂರ್ತಿಯನ್ನು ಪುಣ್ಯೋಜನದೊಂದಿಗೆ ವಂಶಸ್ಥರು ಎಂದು ಗುರುತಿಸಿಕೊಂಡವರು ಪ್ರತಿಷ್ಠಾಪಿಸಿಕೊಂಡಿದ್ದಾರೆ.

ಮದಕರಿ ನಾಯಕರು ಸ್ವತಃ ತಾವೇ ಮಾಡಿಸಿಕೊಟ್ಟಿದ್ದರು ಎನ್ನಲಾದ ಮರದ ಮೂರು ಪ್ರತಿಮೆಗಳು ಮಾತ್ರ ಇಂದಿಗೂ ಓಬವ್ವನ ದೇವಸ್ಥಾನದಲ್ಲಿ ಕೇಲದಲ್ಲಿ (ಬುಟ್ಟಿ) ಭದ್ರಪಡಿಸಿ ಇಟ್ಟಿದ್ದಾರೆ. ಈ ಮೂರೂ ಮರದ ಮೂರ್ತಿಗಳನ್ನು ರಕ್ತ ಬೂತಾಳೆ, ಹಾಲಬೂತಾಳೆ ಮತ್ತು ಬಿಳೀ ಎಕ್ಕದ ಗಿಡಗಳಿಂದ ಮಾಡಿರುವುದು ಎನ್ನಲಾಗಿದೆ. ಅವುಗಳನ್ನು ಪರಿಶೀಲಿಸಿ ನೋಡಿದಾಗ ಅವು ತುಂಬಾ ಹಳೆಯವು ಹಿಂದಿನವು ಅನಿಸುತ್ತದೆ. ಅದರಲ್ಲಿ ಒಂದು ಮೂರ್ತಿ ಭಗ್ನವಾಗಿದ್ದು ಎರಡು ಸುಸ್ಥಿತಿಯಲ್ಲಿವೆ. ಓಬವ್ವನ ದೇವಸ್ಥಾನದ ವಿಚಾರಕ್ಕೆ ಬಂದಾಗ ಓಬವ್ವನ ದೇವಸ್ಥಾನ ಪಾರಂಪರಿಕವಾಗಿ ನಿರ್ಮಾಣ ಆಗಿರದಿದ್ದರೂ ಓಬವ್ವನ ಛಾಪನ್ನು ಉಳಿಸುವ ಪ್ರತೀಕವಾಗಿದೆ. ಕಹಳೆಯವನ ಹೆಂಡತಿ, ಆಕೆಗಾಗಿ ದೇಗುಲವೇ? ಎನ್ನುವ, ತಳಸಮುದಾಯಕ್ಕೆ ಸೇರಿದ ಮಹಿಳೆಯ ವೀರಗಾಥೆಯನ್ನು ಸಾರಬೇಕೆ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲು ದನಿಯಿಲ್ಲ. ಓಬವ್ವನ ಕಾರ್ಯಕ್ಕೆ ಮೆಚ್ಚಿದ್ದ ಮದಕರಿನಾಯಕ ಕಪ್ಪು ಶಿಲೆಯ ವಿಗ್ರಹವನ್ನು ಮಾಡಿಸಿ ಕಳ್ಳಗಿಂಡಿಯ ಹತ್ತಿರದಲ್ಲಿ ಪೂರ್ವಾಭಿಮುಖವಿರುವಂತೆ ಸ್ಥಾಪಿಸಿದ್ದು ಆದರೆ ಮುಸ್ಲಿಂ ಆಳ್ವಿಕೆಗೆ ಚಿತ್ರದುರ್ಗವು ಒಳಪಟ್ಟ ಮೇಲೆ ಆ ವಿಗ್ರಹ ಜಖಂಗೊಂಡು ಕೇವಲ ವಿಗ್ರಹದ ಪಾದಗಳು ಮಾತ್ರ ಉಳಿದಿದ್ದು ಆ ಪಾದುಕೆಗಳನ್ನು ಗುರುತಿಸಿದ ಆಕೆಯ ವಂಶಸ್ಥರು ಓಬವ್ವನ ದೇವಸ್ಥಾನದಲ್ಲಿ ವಿಗ್ರಹದ ಮುಂದೆ ಪ್ರತಿಷ್ಠಾಪಿಸಿದ್ದು ಪೂಜಿಸುತ್ತಿದ್ದಾರೆ. ಆದರೂ ಕೆಲವು ಪೂರ್ವಾಗ್ರಹ ಪೀಡಿತ ಅಭಿಪ್ರಾಯಗಳ ಸೋಂಕು ಓಬವ್ವನ ಚರಿತ್ರೆಗೆ ತಗಲಿದ್ದು, ಆಕೆಯ ವೀರತ್ವ ಕೇವಲ ಒಂದು ದಂತಕಥೆಯಾಗಿ ಉಳಿದುಬಿಟ್ಟಿದೆ. ಏಕೆಂದರೆ ಹೆಣ್ಣೆಂದರೆ ಒಂದು ಕಾಲದಲ್ಲಿ ಉಪನಯನ ಸಂಸ್ಕಾರದಿಂದಾಗಿ ದ್ವಿಜ ಸ್ಥಿತಿಯನ್ನು ಹೊಂದಿದ ಹೆಣ್ಣು, ಆ ಸಂಸ್ಕಾರದಿಂದ ವಂಚಿತಳಾಗಿ ಶೂದ್ರಳೆಂದು ಪರಿಗಣಿತಳಾಗಿದ್ದಳು

ಎಂಬುದನ್ನು ನಾವು ಸಂಹಿತೆಗಳು, ಬ್ರಾಹ್ಮಣರುಗಳು, ಉಪನಿಷತ್ತುಗಳು, ಧರ್ಮಸೂತ್ರಗಳು ಮತ್ತು ಉಪನಿಷತ್ತುಗಳಿಂದ ತಿಳಿದುಕೊಳ್ಳಬಹುದು. ಹೆಣ್ಣೆ ಶೂದ್ರಳು ಎನಿಸಿದಾಗ ಸ್ವಲ್ಪ ಮುಂದೆ ಬಂದಂತೆಲ್ಲಾ ದಲಿತಹೆಣ್ಣು ಓಬವ್ವ, ಅವಳಿಗೆ ಚರಿತ್ರೆಯೇ ಎಂಬುದು ಇಲ್ಲಿ ಉತ್ಪ್ರೇಕ್ಷೆಯಲ್ಲ ಭಗವದ್ಗೀತೆಯಲ್ಲಿ "ಪಾಪಿಗಳಾಗಿ ಹುಟ್ಟಿದ್ದಾಗ್ಯೂ.... ಮಹಿಳೆಯಂತೆ..." ಎಂದು ಹೇಳಿಸುವಲ್ಲಿ ಹೆಣ್ಣಿನ ಸ್ಥಿತಿ ಅವನತಿಯ ಹಂತಕ್ಕೆ ತಲುಪಿರುವುದನ್ನು ಕಾಣಬಹುದಾಗಿದೆ.

ಮನುವಿನ ಚಿಂತನೆಯಲ್ಲೇ ವಿಪರ್ಯಾಸ 'ಮೊದಲೊಮ್ಮೆ' 'ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ", ಎಂದು ಹೇಳಿ ತರುವಾಯ ಇಂಥ ವಿಪರ್ಯಾಸದ ಹೇಳಿಕೆಯನ್ನು ನೀಡಿರುವುದಲ್ಲದೆ, ಪುರುಷ ಪ್ರಧಾನತೆಯನ್ನು ಸಾರುವುದರ ಜೊತೆಯಲ್ಲಿ ಮಹಿಳೆಯರನ್ನು ಹೀನಾಯವಾಗಿ ಜರೆದಿದ್ದಾನೆ. ತರುವಾಯದ ಕಾಲದಲ್ಲೇ ಮಹಿಳೆಯ ಸ್ಥಾನಮಾನ ಸ್ಥಿತಿಗತಿಗಳಲ್ಲಿ ಏರಿಳಿತಗಳನ್ನು ಕಾಣಬಹುದಾಗಿದೆ. ಅಂದರೆ ಇಲ್ಲಿ ಗಮನಿಸಬಹುದಾದ ಬಹುಮುಖ್ಯ ಅಂಶವೆಂದರೆ ಶೋಷಣೆಗೊಳಗಾಗಿಯೇ ಇರಬೇಕಾದಂಥ ಸ್ಥಿತಿಯಿಂದ ಆಕೆಗೆ ವಿಮೋಚನೆಯ ಹಾದಿ ತೋರಿದವರು ಕೆಲವು ಉದಾತ್ತ ಮನೋಭಾವನೆಯ ಪುರುಷರು ಎಂಬುದನ್ನು ಮರೆಯಬಾರದು. ಅಕ್ಕಮಹಾದೇವಿಯ ಧೈರ್ಯವನ್ನು ಮೆಚ್ಚತಕ್ಕದ್ದು. ಆಕೆಯ ಧೈರ್ಯ ಹೀಗಿತ್ತು ಎಂಬುದನ್ನು ಕಾಣಬಹುದು.

ಹಸಿವಾದೊಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆಹಳ್ಳಿ ಬಾವಿಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಆತ್ಮ ಸಂಗಾತಕ್ಕೆ ನೀನೆಗುಂಟು

ಇಂತಹ ಧೈರ್ಯ, ಸ್ವಂತಿಕೆಗೆ ಇಂಬುಗೊಟ್ಟವರು ಬಸವಣ್ಣನವರು. ಬಸವಣ್ಣನವರು "ಪರವಧುವನು ಮಹಾದೇವಿಯೆಂಬೆ" ಎಂದು ಗೌರವಿಸಿದರೆ, ಸಿದ್ಧರಾಮ ಹೆಣ್ಣು ಮಾಯೆಯಲ್ಲ, ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧ ಚೆನ್ನಮಲ್ಲಿಕಾರ್ಜುನ ಎಂದು ಸಾರಿದ್ದಾನೆ. ಹೀಗಿತ್ತು ೧೨ನೇ ಶತಮಾನದಿಂದೀಚೆಗೆ.

ಆದರೆ ಕ್ರಿ.ಶ ೧೭ನೇ ಶತಮಾನದ ಕೊನೆಯಲ್ಲಿ 'ಹದಿಬದೆಯ ಧರ್ಮ'ವನ್ನು ಬರೆದ ಹೊನ್ನಮ್ಮನ ಕಾಲದಲ್ಲಿ ಮಹಿಳೆಯ ಸ್ಥಿತಿ ಕಷ್ಟಕರವಾಗಿಯೇ ಇತ್ತು. ಗಂಡು ಹೆಣ್ಣುಗಳಲ್ಲಿ ಮತ್ತೆ ಭೇದ ಭಾವನೆ ತಲೆದೋರಿತ್ತು. ಹೆಣ್ಣು ಹುಟ್ಟಿದರೆ ದುಃಖ, ಗಂಡಾದರೆ ಸಂತೋಷ ಎಂಬ ಭಾವನೆ ಬಂದಿತ್ತು. ಅಂದರೆ ಹೊನ್ನಮ್ಮನ ಕಾಲದಲ್ಲಿ ಹೆಣ್ಣಿಗೆ ಗೌರವ ಸ್ಥಾನ ಇದ್ದರೂ ಕಟ್ಟುನಿಟ್ಟು ತುಂಬಾ ಇದ್ದಿತೆಂದು ಕಾಣಬರುತ್ತದೆ. ಆಂಗ್ಲರು ಕಾಲಿಡುವ ಮೊದಲು ಮಹಿಳೆಯರ ಸ್ಥಿತಿ ಹೀನ ಸ್ಥಿತಿಗೆ ತಲುಪಿತ್ತು. ಮಹಿಳೆಯರಿಗೆ ಶಿಕ್ಷಣ ಎಂದರೆ ಅವರನ್ನು ಅನುಮಾನದ ದೃಷ್ಟಿಯಿಂದ ನೋಡಲಾಗುತ್ತಿತ್ತು. ಏಕೆಂದರೆ ವೇಶ್ಯಾ ಸಂಪ್ರದಾಯದವರಲ್ಲಿ ನೃತ್ಯ, ಸಂಗೀತದ ಜತೆಯಲ್ಲಿ ವಿದ್ಯಾಭ್ಯಾಸ ನೀಡಲಾಗುತ್ತಿತ್ತು. ಸಮಾಜದಲ್ಲಿ ಬಹುಪತ್ನೀ ವ್ರತ ಜಾರಿಯಲ್ಲಿತ್ತು. ವೇಶ್ಯಾವೃತ್ತಿಯಂತೂ

ಬೃಹತ್ ರೂಪ ತಾಳಿತ್ತು. ದೇವದಾಸಿ ಪದ್ಧತಿ ಜಾರಿಯಲ್ಲಿತ್ತು. ಒಟ್ಟಿನಲ್ಲಿ ಎಲ್ಲಾ ರೀತಿಯಿಂದಲೂ ಮಹಿಳೆಯ ಸ್ಥಿತಿ ಅತ್ಯಂತ ಹೀನಾಯವಾಗಿತ್ತು. ಸ್ವಾತಂತ್ರ್ಯಪೂರ್ವದ ಈ ಹೇಯಸ್ಥಿತಿಯನ್ನು ಬದಲಾಯಿಸಿದ ಶ್ರೇಯಸ್ಸು ಆಂಗ್ಲರಿಗೂ ಸಲ್ಲುತ್ತದೆ. ಜತೆಯಲ್ಲಿ ನಮ್ಮ ದೇಶದ ಸಮಾಜ ಸುಧಾರಕರೂ, ಮಾನವತಾವಾದಿಗಳು, ಸಾಮಾಜಿಕ ಕಾರ್ಯಕರ್ತರಿಗೆ ಸಲ್ಲುತ್ತದೆ. ಬಹುಶಃ ಈ ಬದಲಾವಣೆಯ ಸಮಯದಲ್ಲಿ ಜನಿಸಿದ ಓಬವ್ವ ದೇಶ್‌ಭಾಗ್ ಹೆಣ್ಣು ಮಕ್ಕಳ ತರಬೇತಿಯಲ್ಲಿ ಭಾಗವಹಿಸಿ ತರಬೇತಿ ಪಡೆದುದು ಇಲ್ಲಿ ಉಲ್ಲೇಖಾರ್ಹ. ಏಕೆಂದರೆ ನಾಯಕ ವಂಶದವರ ಅಧಿಕೃತ ಕೊಂಡಿಯಂತಿರುವ ಶ್ರೀಯುತ ವೀರಭದ್ರ ನಾಯಕರು ಹೇಳುವ ಪ್ರಕಾರ ಓಬವ್ವ ಸಾಮಾನ್ಯ ಸ್ತ್ರೀಯಾಗಿರದೆ ದೇಶ್‌ಭಾಗ್ ಹೆಣ್ಣು ಮಕ್ಕಳ ಪಡೆಯಲ್ಲಿ ತರಬೇತಿ ಪಡೆದಿದ್ದು ಪೆದ್ದಕ್ಕ ನಾಗತಿಯವರಿಗೆ ಅಂಗರಕ್ಷಕಿಯೂ ಆಗಿದ್ದಳೂ, ಸ್ತ್ರೀ ಸೈನಿಕೆಯಾಗಿ, ವಿವಾಹ ಬಂಧನದ ಮೂಲಕ ಚಿತ್ರದುರ್ಗದ ಕೋಟೆ ಪ್ರವೇಶಿಸಿದವಳು ಎಂಬ ಮಾತನ್ನು ಇಲ್ಲಿ ಉಲ್ಲೇಖಿಸಬಹುದು. ಬದುಕಿನ ವೈರುಧ್ಯಗಳು ಯಾರನ್ನು ಎಲ್ಲಿಗೆ ಕರೆದುಕೊಂಡು ಬರುತ್ತವೆಯೋ ಅವೆಲ್ಲವೂ ಕಾಲದ ಲೀಲೆ. ಏಕೆಂದರೆ ಸಿಡಿಲಿಗೂ ಬೆಚ್ಚದ ಉಕ್ಕಿನ ಕೋಟೆ ಬಲವಾಗಿತ್ತು. ಅದೆಷ್ಟು ಬಲವಾಗಿತ್ತೆಂದರೆ ಕೋಟೆಯ ಸುತ್ತಲೂ ಭಾರಿ ಕಂದಕಗಳಿದ್ದವು. ಎಲ್ಲೆಲ್ಲೂ ಫಿರಂಗಿಗಳನ್ನು ಕೋಟೆಯ ಮೇಲೆ ಇರಿಸಿರಲಾಗಿತ್ತು. ಬತೇರಿಗಳ ಮೇಲೆ ಧ್ವಜಗಳು ಹಾರಾಡುತ್ತಿದ್ದವು. ದುರ್ಗ ಜಯಿಸುವುದು ಅಷ್ಟು ಸುಲಭವಾಗಿರಲಿಲ್ಲ. ಹೈದರ್ ಎಷ್ಟೆಷ್ಟು ಪ್ರಯತ್ನಿಸಿದರೂ ಕೋಟೆ ಜಗ್ಗಲಿಲ್ಲ. ಎರಡು ತಿಂಗಳು ಹೋರಾಟ ನಡೆಯಿತು. ಕೋಟೆ ಮಾತ್ರ ಚೂರೂ ಅಲ್ಲಾಡಲಿಲ್ಲ, ಅಬ್ಬ! ಇದೆಷ್ಟು ಬಲಿಷ್ಟ ಕೋಟೆ ಎಂದು ಹೈದರ್ ದಿಗ್ಭ್ರಾಂತನಾದ, ಲಗ್ಗೆ ಹತ್ತಲು ನೋಡಿದ. ಆದರೆ ಮದಕರಿನಾಯಕನ ಸೇನೆ ಕೋಟೆಯ ಮೇಲಿಂದ ಅಂಬಲಿ ಸುರಿಸಿ ಹೈದರಾಲಿಯ ಸೈನಿಕರು ಜಾರುವಂತೆ ಮಾಡಿದರು. ಕೋಟೆಯ ಮೇಲಿಂದ ಕಲ್ಲು ಗುಂಡುಗಳನ್ನು ಉರುಳಿಸಲಾಯಿತು. ಇಂಥಹ ಸಮಯದಲ್ಲಿ ಸೋಲುಂಡ ಹೈದರಾಲಿ ಕಳ್ಳಗಿಂಡಿಯ ಸುದ್ದಿ ತಿಳಿದು ಲಗ್ಗೆ ಹಾಕಲು ಬಂದಾಗ ಕನ್ನಡ ನಾಡಿನ ವೀರರಮಣಿ ಗಂಡು ಭೂಮಿಯ ವೀರನಾರಿ ಓಬವ್ವ ತನ್ನ ಪ್ರಾಣದ ಹಂಗು ತೊರೆದು ಸೈನಿಕರ ರುಂಡವನ್ನು ಚೆಂಡಾಡಿದಳು. ಹೆಣಗಳನ್ನು ಎಳೆದು ಹಾಕಿದಳು. ತನ್ನ ಪ್ರಾಣವನ್ನು ಪಣಕ್ಕೊಡ್ಡಿ ದುರ್ಗದ ಸ್ವಾತಂತ್ರ್ಯವನ್ನು ಕಾಪಾಡಿದ್ದಳು. ಇತಿಹಾಸದಲ್ಲಿ ಸೇರಿ ಹೋದಳು. ಇಂಥಹ ಓಬವ್ವನ ಸಾಹಸದ ಪ್ರತೀಕವಾಗಿ ಓಬವ್ವನ ಕಿಂಡಿ ಪುರಾತತ್ವ ಇಲಾಖೆಯಿಂದ ಓಬವ್ವನ ಕಿಂಡಿಯೆಂದು ಅಧಿಕೃತವಾಗಿ ಮುದ್ರೆಯೊತ್ತಿಸಿಕೊಂಡು ಗತದ ಸಾಕ್ಷಿಯಾಗಿ ಮೌನವಾಗಿ ನಿಂತಿದೆ. ಕೋಟೆಯನ್ನು ವೀಕ್ಷಿಸಲು ಬರುವ ಪ್ರೇಕ್ಷಕರು ಕೇವಲ ಆ ಕೋಟೆಯನ್ನು ಮತ್ತು ಅದನ್ನಾಳಿದ ನಾಯಕರ ಗತ ವೈಭವವನ್ನು, ಕುರುಹುಗಳನ್ನು ಮಾತ್ರ ವೀಕ್ಷಿಸಿ ಸಂತೃಪ್ತರಾಗದೆ, ಉತ್ತರ ದಿಕ್ಕಿನ ಕೋಟೆಯಲ್ಲಿನ ಒನಕೆ ಓಬವ್ವನ ಕಿಂಡಿಯನ್ನು ಅತೀ ಕುತೂಹಲದಿಂದ ವೀಕ್ಷಿಸಿ, ಜಗಜ್ಜಾಹೀರಾಗಿರುವ ಓಬವ್ವನ ಸಾಹಸವನ್ನು ಸ್ಮರಿಸಿ ಒಂದು ಕ್ಷಣ ರೊಮಾಂಚನಪಟ್ಟು, ಮತ್ತೆ ಆ ಕಿಂಡಿಯಲ್ಲಿ ತಾವೂ ಹೊಕ್ಕು

ಓಬವ್ವೆಯಂತೆ ತಾವೂ ನಟಿಸಿ, ಆನಂದ ಪಡುತ್ತಾ, ನಂತರ ಹೊರಗಿನ ದುರ್ಗದ ವಿಸ್ತಾರವನ್ನು ಗಮನಿಸಿ ಆನಂದಪಟ್ಟು ಒನಕೆ ಓಬವ್ವನ ಸಾಹಸವನ್ನು ಮನಸಾರೆ ಸ್ಮರಿಸುತ್ತಾ ಮನದಲ್ಲೇ ಕನ್ನಡನಾಡಿನ ವೀರರಮಣಿಗೆ ಅಭಿನಂದಿಸುತ್ತಾ ಹಿಂದಿರುಗುವರು.

ಇಂಥಹ ಓಬವ್ವನ ಪೂಜೆಯು ಅಂದಿನಿಂದಲೂ ಸರಿಸುಮಾರು ವರ್ಷಗಳಿಂದಲೂ ಆಕೆಯ ವಂಶಸ್ಥರು ನಡೆಸಿಕೊಂಡು ಬರುತ್ತಿದ್ದಾರೆ. ಅವರ ಮುಗ್ಧತೆ ಎಷ್ಟಿದೆಯೆಂದರೆ ತಮ್ಮದೇ ಪ್ರಪಂಚದಲ್ಲಿ ಮುಗ್ಧ ರೂಪದಲ್ಲಿ ಕಪ್ಪು ಶಿಲೆಯಲ್ಲಿ ತಮ್ಮ ಕುಲದೇವತೆಯನ್ನು ಸೃಜಿಸಿಕೊಂಡು ಹರಕೆಯ ರೂಪದಲ್ಲಿ ಅನೇಕ ಬೆಳ್ಳಿ ಸಾಮಾನುಗಳನ್ನು ದೇವಿಗೆ ಸಮರ್ಪಿಸಿಕೊಂಡು ಅವುಗಳನ್ನು ಭದ್ರವಾಗಿ ಹೊಸ ರೇಷ್ಮೆ ವಸ್ತ್ರದಲ್ಲಿ ಭದ್ರವಾಗಿ ಇಟ್ಟಿದ್ದಾರೆ. ಅವುಗಳಲ್ಲಿ ಬೆಳ್ಳಿಯ ತೊಟ್ಟಿಲು, ದೇವಿಯ ಮುಖವಾಡಗಳು, ಕಣ್ಣುಗಳು, ಛತ್ರಿ–ಚಾಮರಗಳು ಮುಖ್ಯವಾಗಿವೆ. ಅಂದರೆ ತಮ್ಮಲ್ಲಿ ಯಾರಿಗಾದರೂ ಮಕ್ಕಳಾಗಲಿಲ್ಲ ಎಂದಾಗ ತೊಟ್ಟಿಲಿನ ಕಾಣಿಕೆಯನ್ನು ತಮ್ಮ ಕುಲದೇವತೆಗೆ ಸಮರ್ಪಿಸಿದರೆ ಮಕ್ಕಳಾಗುತ್ತವೆ ಎಂಬ ಮುಗ್ಧ ನಂಬಿಕೆ ಇವರದು. ಹಾಗೆಯೇ ಕುಲದೇವತೆ ಓಬವ್ವನನ್ನು ಬಹು ಎತ್ತರಕ್ಕೇರಿಸಿ ಶಕ್ತಿಸ್ವರೂಪಿಣಿಯಾಗಿ ತಮ್ಮಲ್ಲೇ ಮೂಡಿಸಿಕೊಂಡು ಛತ್ರಿ–ಚಾಮರಗಳನ್ನು ಸಮರ್ಪಿಸುತ್ತಾರೆ. ಹಾಗೆಯೇ ತಮ್ಮ ಕಷ್ಟ ಕಾರ್ಪಣ್ಯಗಳನ್ನು ಪರಿಹರಿಸಿಕೊಳ್ಳುತ್ತಾರೆ. ಇದು ಇವರ ಮುಗ್ಧತೆ. ಅದೇ ಮುಗ್ಧತೆಯಿಂದ ಯಾವ ಪೂರ್ವಾಗ್ರಹಗಳ ಅನುಮತಿಗೂ, ಅನುಕಂಪಕ್ಕೂ ಕಾಯದೇ ತಮ್ಮದೇ ಲೋಕದಲ್ಲಿ ಓಬವ್ವನನ್ನು ಆರಾಧಿಸುತ್ತಿದ್ದಾರೆ. "ಓಬವ್ವನನ್ನು ಆರಾಧಿಸುತ್ತಿದ್ದಾರೆ. ಕುಲದೇವತೆಯಾಗಿ ಕಹಳೆಯವರು ಮಾತೃದೇವತೆಯ ರೂಪದಲ್ಲಿ ಪೂಜಿಸಿಕೊಳ್ಳುತ್ತಿದ್ದಾರೆ. ತಮ್ಮ ಕುಲದೇವರಿಗೆ ಮಾತೃಸ್ಥಾನ ನೀಡಿ ಪೂಜಿಸುತ್ತಿದ್ದಾರೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮಾನ–ಸನ್ಮಾನಗಳೆಲ್ಲಾ ಗಂಡಿಗೆ ಸಿಕ್ಕುತ್ತಾ ಬಂದಿದೆ. ಚರಿತ್ರೆಯಲ್ಲಿ ಲೆಕ್ಕಕ್ಕೆ ಸಿಗದ ಸ್ತ್ರೀಯನ್ನು ಮಾತೃದೇವೋಭವ ಹಿನ್ನೆಲೆಯಲ್ಲಿ ಓಬವ್ವನನ್ನು ಸಮೀಕರಿಸಿಕೊಂಡು ಆಚರಣೆ ಮಾಡುತ್ತಿದ್ದಾರೆ."[೫] ತಮ್ಮ ಬಳಗದಲ್ಲಿ ಯಾರೇ ಹೆಣ್ಣು ಮಗಳು ಸಾವನ್ನಪ್ಪಿದರೆ ಆಕೆಯ ಕಾರ್ಯಗಳೆಲ್ಲಾ ಮುಗಿದ ನಂತರ ಪುಣ್ಯತಿಥಿಯ ಸಂದರ್ಭವಂತೂ ತಮ್ಮ ಕುಲದೇವತೆಗೆ (ಓಬವ್ವನಿಗೆ) ಮೀಸಲಾಗಿಡುತ್ತೇವೆ. ಆ ಸಂದರ್ಭದಲ್ಲಿ ಆಗಮಿಸಿದ ಪ್ರತಿಯೊಬ್ಬರಿಗೂ ತಮ್ಮಾಕೆಯ ವೀರಸಾಹಸವನ್ನು ನೆನಪಿಸುತ್ತಾ ಬಂದವರಿಗೆಲ್ಲಾ ತಿಳಿಸುತ್ತಾ ಓಬವ್ವನ ಹೆಸರಿನಲ್ಲಿ ಕಟ್ಟಿರುವ ಪ್ರಗತಿಪರ ವೇದಿಕೆಯ ಮುಖಾಂತರ ನೋವು ನಲಿವುಗಳ ಹಂಚಿಕೆಯನ್ನು ಮಾಡಿಸುತ್ತಾರೆ. ಸತ್ತ ಮಹಿಳೆಯ ತಿಥಿಯಂದು, ಶುಭ್ರಗೊಳಿಸಿದ ಶುಭ್ರನೀರನ್ನು ತುಂಬಿದ ಬಿಂದಿಗೆಯನ್ನು ಕಲಶವನ್ನಾಗಿ ಪ್ರತಿಷ್ಠಾಪಿಸಿ ವೀಳ್ಯದೆಲೆ ಹೂಗಳಿಂದ ಅಲಂಕರಿಸಿ, ಪೂಜೆಯನ್ನು ಪ್ರಾರಂಭಿಸಲಾಗುವುದು. ನಂತರ 'ಅಲ್ಲಿ ಆಗಮಿಸಿರುವ ಮಹಿಳೆಯರಿಗೆಲ್ಲಾ ರವಿಕೆ ಖಣವನ್ನು ಅಡಿಕೆ, ಎಲೆ, ಹೂಗಳಿಂದ ತುಂಬಿ ನೆರೆದ ಮಹಿಳೆಯರಿಗೆ ನೀಡುತ್ತಾರೆ. ನಂತರ ಅವರಲ್ಲಿನ ಯಾವುದೇ ಸಮಸ್ಯೆಗಳಿದ್ದಲ್ಲಿ ಅವನ್ನು ಅಲ್ಲೇ ಪರಿಹರಿಸುವ ಕಾರ್ಯವನ್ನು ಮಾಡಲಾಗುತ್ತದೆ. ಜೊತೆಗೆ ಗಂಡಸು ಕೌಟುಂಬಿಕವಾಗಿ ದುರ್ವ್ಯಸನ, ದುರಭ್ಯಾಸಗಳಿಗೆ ಒಳಗಾಗಿ ಅವನತಿ

ಹೊಂದಿದ್ದಾಗ್ಯೂ, ಆ ಕುಟುಂಬವನ್ನು, ತನ್ನೆಲ್ಲಾ ಘಾಸಿಯನ್ನು ನುಂಗಿಕೊಂಡು ಆತ್ಮ ಪಾವಿತ್ರ್ಯದಿಂದ, ಘನ ಆತ್ಮಸ್ಥೈರ್ಯದಿಂದ ಬಾಳಿದ ಸಂಸಾರ ನೊಗವನ್ನು ಸಾಗಿಸಿಕೊಂಡು ಬಂದ ಹೆಣ್ಣುಮಗಳಿಗೆ ಇಲ್ಲಿ ಸತ್ಕಾರ ಮಾಡಲಾಗುವುದು. ಅವರ ಕಷ್ಟಗಳನ್ನು ಅರಿತುಕೊಂಡು ಎಲ್ಲರೂ ಆರ್ಥಿಕವಾಗಿ ಅಲ್ಲದಿದ್ದರೂ ಮಾನಸಿಕವಾಗಿ ಸ್ಥೈರ್ಯವನ್ನು ಕೊಡುವ ಕಾರ್ಯವನ್ನು ಮಾಡುತ್ತಾರೆ. ತಿಳಿವನ್ನು ಹೇಳಿ ಯಜಮಾನನನ್ನು ಸರಿದಾರಿಗೆ ತರಲು ಅಂದು ಆ ಕಾರ್ಯದಲ್ಲಿ ಮಾಡಲಾಗುವುದು. ಅಂದು ಸ್ಥಳೀಯ ಮುಖಂಡರನ್ನು ಕರೆದುಕೊಂಡು ಆ ಕುಟುಂಬಕ್ಕೆ ಸಾಂತ್ವನ ಹೇಳುತ್ತಾರೆ. ಓಬವ್ವನ ಇಚ್ಛಾಶಕ್ತಿಯನ್ನು ಆಕೆಯನ್ನು ಆರಾಧಿಸುವುದರಿಂದ ಆ ಕುಟುಂಬದವರಿಗೆ ಲಭ್ಯವಾಗುವುದಾಗಿ ಹೇಳಿ ವರ್ತಮಾನದ ಬದುಕಿನಿಂದ ಹೈರಾಣಾದವರಿಗೆ ಚಾರತ್ರಿಕ ಚೇತನವನ್ನು ಬಿತ್ತುವ ಕಾರ್ಯವನ್ನು ಅಂದು ಮಾಡಲಾಗುವುದು. ಬದುಕಿನ ಜಂಜಾಟದಲ್ಲಿ ದುರ್ಬಲ ಮನಸ್ಥಿತಿಕರಾಗದಂತೆ, ಆತ್ಮಹತ್ಯೆ ಇನ್ನಾವುದೇ ಕಾರ್ಯಕ್ಕೆ ಮುಂದಾಗದಂತೆ ಪ್ರಬಲ ಮನಸ್ಸನ್ನು ಹೊಂದುವಂತೆ ತಿಳಿಹೇಳಲಾಗುವುದು. ನಂತರ ಕಲಶ ಪೂಜೆಯ ನಂತರ ಮಾಡಿದ ಸಿಹಿ ಅಡುಗೆಯ ನೈವೇದ್ಯವನ್ನು ತಮ್ಮ ಕುಲದೇವತೆ ಓಬವ್ವನಿಗೆ ಮೊದಲು ಸಮರ್ಪಿಸಿ ಆಕೆಯ ಹೆಸರಿನಲ್ಲಿ ತಾವೆಲ್ಲರೂ ಆಕೆಯಂತೆ ವೀರಸಾಹಸ, ನಾಡಪ್ರೇಮ, ತ್ಯಾಗಗಳನ್ನು ಒಡಗೂಡಿಸಿಕೊಳ್ಳೋಣ ಎಂದು ದೃಢನಿರ್ಧಾರಗೈದು ನಂತರ ಎಲ್ಲರೂ ಊಟ ಮಾಡಿ ಆಕೆಯನ್ನು ನೆನಪಿಸಿಕೊಳ್ಳುತ್ತಾ ಮನೆಗಳಿಗೆ ತೆರಳುತ್ತಾರೆ. ಹಾಗೆಯೇ ಸರ್ಕಾರಿ ನೌಕರಿಯಿಂದ ನಿವೃತ್ತರಾದ ನೌಕರರನ್ನು ಕರೆಯಿಸಿ ವಿಶ್ರಾಂತಿ ಜೀವನ, ಧೈರ್ಯ, ಆಧ್ಯಾತ್ಮಿಕ ಜೀವನದ ಮಹತ್ವವನ್ನು ಈ ಪ್ರಗತಿಪರವೇದಿಕೆಯ ಮುಖಾಂತರ ತಿಳಿಸಲಾಗುವುದು. ಇವರು ವಾರದಲ್ಲಿನ ಎರಡು ದಿನಗಳನ್ನು ಮಂಗಳವಾರ, ಶುಕ್ರವಾರಗಳಂದು ಶುಭ್ರಮನಸ್ಸಿನಿಂದ ತಮ್ಮ ಕುಲದೇವತೆಯನ್ನು ಆರಾಧಿಸುತ್ತಾರೆ. ಅಂದು ಕಳಶ ಪ್ರತಿಷ್ಠಾಪನೆ ಮಾಡಿಕೊಂಡು, ತಮ್ಮ ಶಕ್ತ್ಯಾನುಸಾರ, ದೇವರು ಆ ಹೊತ್ತಿಗೆ ನೀಡಿದ್ದನ್ನೇ ಪ್ರಸಾದವನ್ನಾಗಿ ತಯಾರಿಸಿಕೊಂಡು ಪೂಜಾ ಕಾರ್ಯಗಳನ್ನ ನಿರ್ವಹಿಸಿಕೊಳ್ಳುತ್ತಾರೆ. ಓಬವ್ವನನ್ನೇ ಶಕ್ತಿದೇವತೆಯನ್ನಾಗಿ ಪೂಜಿಸುತ್ತಿದ್ದಾರೆ. ಪ್ರತಿಯೊಬ್ಬ ಹಳ್ಳಿಗನು ಕನಿಷ್ಟ ಮೂರು ಬಗೆಯ ಶಕ್ತಿಗಳನ್ನು ಪೂಜಿಸುತ್ತಾನೆ. ಮನೆದೇವರು, ಜತೆಗೊಂದು ಭೂತ, ಹನುಮಗಣಪತಿಯರನ್ನ, ವಿದ್ಯಾವಂತರಾದ ಶಿಷ್ಟಜನರು ರಾಮಹೆಚ್ಚು, ಶಿವಹೆಚ್ಚು ಇವನು ಮ್ಲೇಚ್ಛರ ದೇವರು, ಅಸ್ಪೃಶ್ಯ ಎಂದು ಭಗವಂತನ ಅಸ್ತಿತ್ವವನ್ನೇ ಅಲುಗಾಡಿಸುತ್ತಿದ್ದಾರೆ. ಸಾಮಾನ್ಯ ಜನ ಹರಿಯೋ, ಹರನೋ, ಯೇಸುವೋ, ಅಲ್ಲನೋ, ಮಾರಿಯೋ, ಭೂತವೋ ಎಲ್ಲರಲ್ಲಿಯೂ ಸರ್ವೇಶ್ವರನನ್ನು ಕಾಣುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಶಕ್ತಿದೇವತೆಯ ಆರಾಧನೆ ನಡೆದು ಬಂದಿದೆ. ಈ ಸೃಷ್ಟಿಯ ಮೂಲದಲ್ಲಿ ಪುರುಷನಿಗಿಂತ ಪ್ರಕೃತಿಯ ಪಾತ್ರವೇ ದೊಡ್ಡದೆಂದು ಭಾವಿಸಿ ಶಕ್ತಿಯನ್ನು ಆರಾಧಿಸುವ ಉದ್ದೇಶವಾಗಿದೆ. ಆ ಉದ್ದೇಶವನ್ನು ತಾವು ಪಾಲಿಸುತ್ತಿದ್ದು ತಮ್ಮಾಕೆಯನ್ನು ಸಾರ್ಥಕ ಮನೋಭಾವನೆಯಿಂದ ಆರಾಧಿಸುತ್ತಿದ್ದಾರೆ.

೬.೨. ಜಲಧಿ ಉತ್ಸವ : ಜನಜೀವನದಲ್ಲಿ ಸಂಪ್ರದಾಯಗಳ ಪಾತ್ರ ಪ್ರಮುಖವಾದುದು. ಇವು ಜನರ ಬದುಕಿನೊಂದಿಗೆ ಅವಿಭಾಜ್ಯ ಸಂಬಂಧವನ್ನು ಸ್ಥಾಪಿಸಿಕೊಂಡಿರುತ್ತವೆ. ಆಚಾರ, ಸಂಸ್ಕಾರ, ವಿಧಿ, ಕುಲಾಚಾರ, ವಾಡಿಕೆ, ಪದ್ಧತಿ ಇತ್ಯಾದಿಗಳನ್ನು 'ಸಂಪ್ರದಾಯ' ಪದಕ್ಕೆ ಬದಲಾಗಿ ಬಳಸಲಾಗಿದೆ. ಎಲ್ಲಾ ಸಂಪ್ರದಾಯ ಆಚರಣೆಗಳ ಹಿಂದೆಯೂ ಧಾರ್ಮಿಕ ಆಶಯಗಳಿವೆ. ಯಾವುದಾದರೂ ಒಂದು ಕಾರ್ಯವನ್ನು ನಿರ್ವಹಿಸಬೇಕಾದರೆ ಅದನ್ನು ಯಾವಾಗ ಮಾಡಬೇಕು ಎಂಬುದು 'ಸಂಪ್ರದಾಯ'ವಾದರೆ ಯಾವ ರೀತಿಯಲ್ಲಿ ಮಾಡಬೇಕೆಂಬುದು 'ಆಚರಣೆ' ಎನಿಸುತ್ತದೆ. ಪ್ರಪಂಚದ ಎಲ್ಲಾ ಪರಿಸರದ ಜನರಲ್ಲಿಯೂ ಆಚರಣೆಗಳಿವೆ. ಅವು ವೈಯುಕ್ತಿಕವೂ, ಸಾಮಾಜಿಕವೂ ಆಗಿರುತ್ತವೆ. ಪಾವಿತ್ರತೆಯನ್ನು ಕಾಪಾಡಿಕೊಂಡು ಬರುವ ಸಲುವಾಗಿ ಶ್ರದ್ದೆಯಿಂದ ಉತ್ಸವಗಳನ್ನು ಆಚರಿಸುತ್ತಾರೆ. ಜನಪದ ಎಂದರೆ ಜನಸಮುದಾಯವೇ ಆಗಿದೆ. ನಮ್ಮ ಭಾರತವೇ ಒಂದು ಜನಪದವಾಗಿದೆ. ಜನಪದ ಸಂಸ್ಕೃತಿಯಲ್ಲಿ ಉತ್ಸವಗಳೂ, ಜಾತ್ರೆಗಳು ಸೇರುತ್ತವೆ. ಅಲೆಮಾರಿಯಾದ ಮಾನವ ಅಲೆಮಾರಿತನ ಬಿಟ್ಟು ಒಂದೆಡೆ ನೆಲೆಯಾಗಿ ನಿಂತು ವಾಸಿಸಲು ಪ್ರಾರಂಭಿಸಿದಾಗಲೇ ಪ್ರಕೃತಿಯಲ್ಲಿನ ಮಳೆ, ಗುಡುಗು, ಸಿಡಿಲು, ಬೆಂಕಿ, ಬಿಸಿಲು, ಬಿರುಗಾಳಿ ಮುಂತಾದವುಗಳು ತನಗೆ ಅಪಾಯಕಾರಿಯೆಂದು ಅರಿತುಕೊಂಡ ಮನುಷ್ಯ ತಾನು ಧೈರ್ಯವಾಗಿ ಬಾಳಬೇಕಾದರೆ ಅಲ್ಲಿ ಇರುವ ಪ್ರಕೃತಿವಿಕೋಪಗಳಿಗೆ ಹೆದರಿದನು. ಅಂದಿನಿಂದ ಹೆದರಿ ಅವುಗಳನ್ನು ಪೂಜಿಸತೊಡಗಿದನು. ಆ ಭಯವೇ ಮುಂದೆ ಭಕ್ತಿಯಾಗಿ ಅದು ಹೆಮ್ಮರವಾಗಿ ಪರಿಸರದಲ್ಲಿರುವ ಪಶುಪಕ್ಷಿಗಳನ್ನೆಲ್ಲಾ ಪೂಜಿಸುತ್ತಾ ಬಂದನು. ನಂತರ ಈ ಹಿನ್ನಲೆಯಲ್ಲಿಯೇ ಜಾತ್ರೆ–ಹಬ್ಬ–ಉತ್ಸವಗಳು ಹುಟ್ಟಿಕೊಂಡವು. ಈ ರೀತಿಯಾದ ಭಯ–ಭಕ್ತಿಗಳಿಂದ ಹುಟ್ಟಿಕೊಂಡಂಥಹ ಹಬ್ಬ ಹಾಗೂ ಉತ್ಸವಗಳು ತಮ್ಮದೆಯಾದ ಸಾಂಸ್ಕೃತಿಕವಾದ ಆಯಾಮಗಳನ್ನು ಪಡೆದುಕೊಂಡವು. ಕಾಲ ಬದಲಾದಂತೆ ಮನುಷ್ಯನು ಬದಲಾವಣೆಗೆ ಒಳಗಾದನು. ಆಗ ಉತ್ಸವಗಳು ಸಹ ಸಮಕಾಲೀನ ಸಂವೇದನೆಗಳನ್ನು ಒಳಗೊಂಡವು.

ಉತ್ಸವಗಳಿಗೆ ಪರಂಪರೆ, ಮಹತ್ವಗಳು ಹಾಗೇ ಇರಬೇಕೆಂದೇನೂ ಇಲ್ಲ. ಅವು ಮಾರ್ಪಾಡು ಹೊಂದಬಹುದು. ಕ್ರಿಯಾಶೀಲವೂ ಆಗಿರುತ್ತವೆ. ಜನಪದರಲ್ಲಿ ದೈವದ ಕಲ್ಪನೆ ಅಗಾಧವಾದುದು. ಮುಗ್ಧವಾದುದು. ಸಮಾಜದ ಸಮಷ್ಟಿಯ ಒಳಿತಿಗಾಗಿ ಶ್ರಮಿಸಿದವರ ಆರಾಧನೆಯನ್ನು ಮಾಡತೊಡಗಿದರು. ಇದಕ್ಕೆ ಆರೋಪವಾಗಿ ನದೀ ದಡದಲ್ಲಿ ನೇಣುದಂಡನೆಗೆ ಗುರಿಯಾದ ಸಂಗೊಳ್ಳಿರಾಯಣ್ಣನ ಆಸೆಯಂತೆ ಅಲ್ಲಿಯೇ ರಸ್ತೆ ಬದಿಯಲ್ಲಿ ಅವನನ್ನು ಹೂಳಲಾಯಿತು. ಅಲ್ಲಿಯೇ ಒಂದು ಆಲದ ಮರ ಬೆಳೆದಿದೆ. ಅದರ ನೆರಳಿನಲ್ಲಿ ಒಂದು ಚಿಕ್ಕ ಗುಡಿಯೂ ಎದ್ದಿದೆ. ಮಕ್ಕಳ ಸಂಪತ್ತು, ಆರೋಗ್ಯಕ್ಕಾಗಿ ದೂರದಿಂದ ಜನ ಅಲ್ಲಿಗೆ ಬಂದು ಕೈ ಮುಗಿಯುತ್ತಾರೆ. ಅಲ್ಲಿನ ಸಂತೆಯಲ್ಲಿ ವಸ್ತುಗಳಿಗೆ ಒಳ್ಳೆ ಬೆಳೆ ಬಂದಾಗ ಗುಡಿಯ ಹತ್ತಿರ ಬಂದ ಜನ ರಾಯಣ್ಣನ ಹೆಸರಿನಲ್ಲಿ ಹರಕೆ ಸಲ್ಲಿಸುತ್ತಾರೆ. ರಾಯಣ್ಣನಿಗೆ ಆರೋಪಿತವಾದ ದೈವತ್ವ ಅವನ ಚರಿತ್ರೆಯಲ್ಲಿಯೇ ಇನ್ನೊಂದು ಪಾತ್ರವಾಗಿದೆ. ಇದು ಅಲ್ಲಿನ ಪದ್ಧತಿಯಲ್ಲಿ ಸೇರಿಕೆಯಾಗಿದೆ. ಆತ ಅಲ್ಲಿಯ ಜನರ

ಆರಾಧನೆಗೆ ಪಾತ್ರನಾಗಿದ್ದಾನೆ ಅಥವಾ ಬಡಜನತೆಯ ನಾಯಕನಾಗಿ ಗಳಿಸಿದ ಜನಪ್ರಿಯತೆಯೇ ದೈವೀಕತೆಗೆ ಕಾರಣವೂ ಆಗಿರಬಹುದು. ಈ ಹಿನ್ನೆಲೆಯಲ್ಲಿ ಗಮನಿಸಿದರೆ ಇಲ್ಲಿ ಓಬವ್ವನು ಆ ಭಾವನೆಗೆ ಹತ್ತಿರದವಳಾಗಿದ್ದಾಳೆ. ಆಕೆ ದುರ್ಗದ ಜನರಿಗೆ ದುರ್ಗದ ತಾಯಾಗಿ ಜಯಂತಿಯನ್ನು ಆಚರಿಸುತ್ತಾರೆ. ಆಕೆಯ ವಂಶಸ್ಥರೆನಿಸಿಕೊಂಡವರು ಆಕೆಯನ್ನು ಹಿಂದಿನಿಂದಲೂ ಎಡಬಿಡದೆ ಪೂಜಿಸಿಕೊಂಡು ಬಂದವರು. ಇವರು ವರ್ಷದ ಕಾರ್ತೀಕ ಮಾಸದ ಎರಡನೇ ಮಂಗಳವಾರದಂದು ಒನಕೆ ಓಬವ್ವನ ಜಲಧಿ ಉತ್ಸವವನ್ನು ಆಚರಣೆ ಮಾಡುತ್ತಾರೆ. ಅಂದು ಎಲ್ಲಾ ಸಂಬಂಧಿಕರು ದೇವಸ್ಥಾನಕ್ಕೆ ಆಗಮಿಸುವರು. ಶುಭ್ರವಾಗಿ, ಭಕ್ತಿಯಿಂದ ಆಗಮಿಸಿದ ಸಂಬಂಧಿಕರೆಲ್ಲರೂ ಕೂಡಿ ಆಕೆಯ ಅಕ್ಕ-ತಂಗಿಯರ ವರಸೆಯ ಗಂಡು ಮಕ್ಕಳಿಂದ ಅದರಲ್ಲಿ ಶುಚಿರ್ಭೂತನಾದ ಗಂಡು ಮಗನಿಂದ ಗರ್ಭಗುಡಿಯಲ್ಲಿ ಜಲಧಿ ಉತ್ಸವಕ್ಕಾಗಿಯೇ ಪಂಚಲೋಹದ ವಿಗ್ರಹವಿದ್ದು ಅದಕ್ಕೆ ವಿಧಿವತ್ತಾಗಿ ಜೀವಕಳೆ ತುಂಬಿದ ಕಾರ್ಯವನ್ನು ಪ್ರಥಮವಾಗಿ ತಂದಾಗಲೇ ನಡೆಸಿದ್ದು ಆ ವಿಗ್ರಹವನ್ನು ಸಾಲಂಕೃತಗೊಳಿಸಿ ಮಂಗಳ ವಸ್ತುಗಳಾದ, ಅವರ ದೃಷ್ಟಿಯಲ್ಲಿ ಆಕೆ ಶಕ್ತಿದೇವತೆಯಾಗಿದ್ದು, ಹಸಿರು ಮತ್ತು ಕಪ್ಪುಗಾಜಿನ ಬಳೆಗಳು, ಹೊಸ ಸೀರೆ, ರವಿಕೆ, ತಾಂಬೂಲ, ಮೂರು ವಿಧದ ಹೂಗಳು, ಜೊತೆಗೆ ಶಕ್ತಿದೇವತೆಗೆ ಜೊತೆಯಾಗಿ ಐದು ಸಾಲಿಗ್ರಾಮಗಳು, ಜಲಧಿ ಉತ್ಸವಕ್ಕೆ ಬೇಕಾದ ಅಕ್ಕಿಹಿಟ್ಟಿನ ತಂಬಿಟ್ಟು, ಬೆಳಗಿದ ತಾಮ್ರದ ಚೊಂಬಿನ ತುಂಬಾ ತುಂಬಿದ ನೀರು, ಬೆಳಗಿದ ದೀಪವನ್ನು ಹೊಸದಾಗಿ ಬಿದಿರುಪಟ್ಟಿಯನ್ನು ಕೊಂಡುತಂದು ಅದರಲ್ಲಿ ವಿಗ್ರಹದೊಂದಿಗೆ, ಈ ಎಲ್ಲಾ ವಸ್ತುಗಳನ್ನು ಅಲಂಕಾರವಾಗಿ ಜೋಡಿಸಿಕೊಂಡು ಬಂದು ಬಳಗದವರೆಲ್ಲರೂ ವಾಹನದ ಸೌಕರ್ಯ ಮಾಡಿಕೊಂಡು ನಗರಕ್ಕೆ ೩ ಕಿ.ಮೀ. ದೂರದಲ್ಲಿರುವ ಚಂದವಳ್ಳಿ ಕೆರೆಗೆ ತೆರಳುವರು. ಜೊತೆಗೆ ಪೂಜೆಯ ನಂತರ ಹಂಚುವ ರೆವೆ ಪದಾರ್ಥವನ್ನು ಮಾಡಿಕೊಂಡು ಜೊತೆಗೆ ತೆಗೆದುಕೊಂಡು ಹೋಗುವರು. ಅಲ್ಲಿಗೆ ಹೋಗಿ ಮೊದಲು ಪ್ರಸಕ್ತವಾದ ಸ್ಥಳ ಆರಿಸಿ ಆ ಸ್ಥಳವನ್ನು ಶುಭ್ರಗೊಳಿಸಿ ಶುದ್ದವಾದ ನೀರಿನಿಂದ ಸ್ಥಳವನ್ನು ತೊಳೆದು ರಂಗೋಲಿ ಹಾಕಿ ದೇವಸ್ಥಾನದಿಂದ ತೆಗೆದುಕೊಂಡು ಹೋಗಿದ್ದ ಪುಟ್ಟಿಯ ವ್ಯಕ್ತಿಯನ್ನು ಮಟ್ಟಿ ಸಹಿತ ಇಳಿಸಿ ಅಲ್ಲಿ ಕೂರಿಸುತ್ತಾರೆ. ನಂತರ "ಐದು ಜನ ಮುತ್ತೈದೆಯರು ಪುಟ್ಟಿಯೊಳಗಿನ ಪಂಚಲೋಹದ ವಿಗ್ರಹಾನ ತಕ್ಕೊಂಡು ಹೊಳೆಯ ದಡದಲ್ಲಿ ಕೂತು ಅದನ್ನು ಶುಭ್ರವಾಗಿ ಬೆಳಗ್ತಾರೆ. ಹಾಗೇನೇ ಜೊತೆಗೆ ತಕ್ಕೊಂಡು ಹೋದ ಸಾಲಿಗ್ರಾಮಗಳನ್ನು ಶುಭ್ರಗೊಳಿಸುತ್ತಾರೆ. ಆಮೇಲೆ ರಂಗೋಲಿ ಹಾಕಿದ ಜಾಗದ ಮುಂದೆ ಕರೀ ಕಂಬಳಿ ಹಾಸಿ ಅದರ ಮ್ಯಾಲೆ ಅಕ್ಕಿಯನ್ನು ಹರವಿ ನಂತ್ರ ವಿಗ್ರಹವನ್ನು ಪ್ರತಿಷ್ಠಾಪಿಸುತ್ತಾರೆ"[೬] ವಿಗ್ರಹದ ಮುಂಭಾಗದಲ್ಲಿ ಸಾಲಿಗ್ರಾಮಗಳು ಉಳಿದ ವಿಗ್ರಹಗಳನ್ನು ಪ್ರತಿಷ್ಠಾಪಿಸುತ್ತಾರೆ. ಹೂಗಳಿಂದ ಅಲಂಕರಿಸಿ ಅಂದಿನ ಈ ದಿನದ ಪೂಜೆಗಾಗಿಯೇ ಪುಟ್ಟಿ ಹೊತ್ತುಕೊಂಡು ಬಂದವರು ಪೂಜಾಕಾರ್ಯಗಳೆಲ್ಲಾ ಮುಗಿಯುವವರೆಗೂ ಉಪವಾಸ ವ್ರತ ಕೈಗೊಂಡಿರುತ್ತಾರೆ. ಅವರೇ ಈ ವಿಧಿ-ವಿಧಾನಗಳನ್ನು ನೆರವೇರಿಸುತ್ತಾರೆ. ಹಾಗಾಗಿ ವಿಗ್ರಹದೊಂದಿಗಿನ

ಎಲ್ಲಾ ವಿಗ್ರಹ ಸಾಲಿಗ್ರಾಮಗಳಿಗೆ ಪೂಜೆ ಸಲ್ಲಿಸಿ ನೆರೆದವರಲ್ಲಿ ಐದು ಅಥವಾ ಒಂಬತ್ತು ಜನ ಮುತ್ತೈದೆಯರನ್ನು ಕೂರಿಸಿ ಅವರಿಗೆ ತಾಂಬೂಲದೊಂದಿಗೆ ಪೂಜೆಗೆ ಬಳಸಿದ ತಂಬಿಟ್ಟು, ಬಾಳೆಹಣ್ಣು, ರವಿಕೆ ಖಣವನ್ನು ಇಟ್ಟು ಉಡಿ ತುಂಬಿಸಿ ನಂತರ ನೆರೆದ ಎಲ್ಲರಿಗೂ ಓಬವ್ವನ ಹೆಸರಿನಲ್ಲಿ ವೀಳ್ಯದ ಜೊತೆ ಬಾಳೆಹಣ್ಣನ್ನು ಹಂಚಿ, ನಂತರ ಮತ್ತೊಮ್ಮೆ ವಂದಿಸಿ ಮೂರ್ತಿಗಳನ್ನು ಪುಟ್ಟಿಯಲ್ಲಿ ಜೋಡಿಸಿ ಶುಚಿರ್ಭೂತನಾದ ಆ ವ್ಯಕ್ತಿಯ ಕೈಲಿ ತಲೆಯ ಮೇಲೆ ಹೊರಿಸಿಕೊಂಡು ಮತ್ತೆ ದೇವಸ್ಥಾನಕ್ಕೆ ಬರಲಾಗುವುದು. ಈ ಹಿಂದೆ ಈ ಉತ್ಸವದ ಪೂಜೆಗೆಂದೇ ಕಾರವಾಡೆದ ಸ್ವಾಮಿಗಳು ಸಜ್ಜನಕೆರೆಯಲ್ಲಿ ಇದ್ದು ಉತ್ಸವದ ದಿನ ಅವರೇ ಸ್ವತಃ ಬಂದು ದೇವಸ್ಥಾನಕ್ಕೆ ಜಲದೀ ಪೂಜೆಯನ್ನು ಮುಗಿಸಿಕೊಂಡು ಬಂದು ಓಬವ್ವನ ಪ್ರತಿಮೆಯನ್ನು ಪುನಃ ಯಥಾ ಪ್ರಕಾರ ಪೂಜೆ ಸಲ್ಲಿಸಿ ದೇವರಗುಡಿಗೆ ತುಂಬಿಸಿಕೊಳ್ಳುವ ಶಾಸ್ತ್ರಗಳನ್ನು ನಿರ್ವಹಿಸಿ ಗರ್ಭಗುಡಿಯಲ್ಲಿ ಆಸೀನಗೊಳಿಸುತ್ತಿದ್ದರು. ಆದರೆ ಈಗ ಅವರು ದೈವಾಧೀನರಾಗಿದ್ದು, ಅವರ ಮಕ್ಕಳು ವ್ಯಾಪಾರ, ವ್ಯವಹಾರಗಳಲ್ಲಿ ತೊಡಗಿದ್ದು, ಪುರೋಹಿತರ ಕೊರತೆಯಿಂದ, ಅಂದಿನ ಪೂಜೆಗೆ ಒಬ್ಬ ವ್ಯಕ್ತಿಯನ್ನು ವರ್ಷವೂ ಸರದಿಯಂತೆ ನಿಮಿಸಲಾಗುತ್ತಿದ್ದು, ಅಂದು ಆತ ಉಪವಾಸವ್ರತವನ್ನು ಕೈಗೊಂಡು ತಾನೇ ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ. ಹಾಗಾಗಿ ವಿಗ್ರಹ, ಸಾಲಿಗ್ರಾಮ, ಉಳಿದೆಲ್ಲಾ ಮೂರ್ತಿಗಳನ್ನು ಸಾಲಂಕೃತಗೊಳಿಸಿ ಪ್ರಾರ್ಥನೆಯೊಂದಿಗೆ ಗರ್ಭಗುಡಿಯಲ್ಲಿ ಯಥಾಸ್ಥಾನದಲ್ಲಿರಿಸಲಾಗುವುದು. ನಂತರ ಆ ದಿನಕ್ಕೆ ಒಂದೆಡೆ ಹಬ್ಬದ ಅಡಿಗೆಯನ್ನು ಎಲ್ಲರೂ ಸೇರಿ ವ್ಯವಸ್ಥಿತಗೊಳಿಸಿದ್ದು, ಎಲ್ಲರೂ ಊಟ ಮಾಡಿದ ನಂತರ ಪರಸ್ಪರ ಕಷ್ಟ-ಸುಖಗಳನ್ನು ಹಂಚಿಕೊಳ್ಳುತ್ತಾ ತಮ್ಮ ಪೂರ್ವಿಕರ ಬಗ್ಗೆ, ಪ್ರಭುಗಳ ಬಗ್ಗೆ, ನಾಡಿನ ಬಗ್ಗೆ ಪ್ರಸ್ತುತ ವಿದ್ಯಾಮಾನಗಳನ್ನು ಚರ್ಚಿಸಿ ಮುಂದಿನ ಕಾರ್ಯಗಳ ಬಗ್ಗೆ ಮಾತನಾಡಿ, ಕೊನೆಯಲ್ಲಿ ತಮ್ಮ ಹರಕೆಗಳನ್ನು ತೀರಿಸಲು ಮುಂದಾಗುತ್ತಾರೆ. ತಾವು ತಮ್ಮ ತಮ್ಮ ಮನೆಗಳಲ್ಲಿನ ಸಂಕಷ್ಟಗಳ ಸಂದರ್ಭದಲ್ಲಿ ತಮ್ಮ ಕುಲದೇವತೆಗೆ ಹರಸಿಕೊಂಡು ತಾವು ಬಂದು ಆಕೆಗೆ ದೇವಸ್ಥಾನಕ್ಕೆ ನೀಡುವುದಾಗಿ ಹರಸಿಕೊಂಡಿರುವ ವಸ್ತುಗಳನ್ನು ನಿಯುಕ್ತಿಗೊಂಡ ವ್ಯಕ್ತಿಯ ಕೈಗೆ ನೀಡಲಾಗುವುದು. ತಮ್ಮ ಮನದ ನೋವನ್ನು ಕಳೆದು ಆನಂದವನ್ನು ನೀಡುವ ತಾಯಿಯೇ ತಮ್ಮ ಕುಲದೇವತೆ. ಹಾಗಾಗಿ ಜನಪದರು ಈಕೆಯ ಬಗೆಗೆ ಅಪಾರ ಪ್ರೇಮ, ಭಕ್ತಿ, ಗೌರವಾಧಾರಗಳನ್ನು ಉಳ್ಳವರಾಗಿದ್ದಾರೆ. ಉದಾಹರಣೆಗೆ ಮಕ್ಕಳಾಗದವರು, ತಮಗೆ ಮಕ್ಕಳಾದರೆ ತೊಟ್ಟಿಲು ನೀಡುವುದಾಗಿ, ಕಾಲು, ಕೈ ನೋವಿಗೆ ಕೈಕಾಲುಗಳ ಆಕಾರದ ಬೆಳ್ಳಿಯ, ಹಿತ್ತಾಳೆಯ ವಸ್ತುಗಳು, ಕಣ್ಣುಗಳು, ತ್ರಿಶೂಲ ಹೀಗೆ ಮೊದಲಾದ ವಸ್ತುಗಳು ಅಂದು ಅಲ್ಲಿ ಸೇರಿಕೆಯಾಗಿ, ಓಬವ್ವನ ಪೆಟ್ಟಿಗೆಯಲ್ಲಿ (ಕೇಲ) ಭದ್ರವಾಗಿ ಸಂಗ್ರಹಿಸಲಾಗುವುದು. ಅವುಗಳನ್ನು ಏನು ಮಾಡಲಾಗುವುದು ಎಂದಾಗ ಮುಂದೆ ಆಕೆಯ ಉತ್ಸವಕ್ಕಾಗಿ ಅವುಗಳನ್ನು ವಿನಿಯೋಗಿಸುವುದಾಗಿ ತಿಳಿಸಿದರು.

ಓಬವ್ವನನ್ನು ತಮ್ಮ ಆರಾಧ್ಯದೈವವಾಗಿ ಅಷ್ಟೇ ಅಲ್ಲದೆ ಜೀವಂತವಾಗಿಯೂ ಆಕೆಯನ್ನು ಮೂರ್ತಿಯಲ್ಲಿ ಕಾಣುವಷ್ಟು ಮುಗ್ಧರಾಗಿದ್ದಾರೆ ಈ ಜನ. ತಮ್ಮ ವಂಶದ ಹೆಣ್ಣು ಮಗಳು

ಹೆರಿಗೆಬೇನೆಯಲ್ಲಿ ಸಾವು ಬದುಕಿನ ಮಧ್ಯೆ ಹೋರಾಟ ಮಾಡುತ್ತಿದ್ದಾಗ ಆಕೆಯಿರುವೆಡೆಗೆ ತಮ್ಮ ಕುಲದೇವತೆಯಾದ ಓಬವ್ವನ ಮೂರ್ತಿಯನ್ನು ತೆಗೆದುಕೊಂಡು ಹೋಗಿ ಪೂಜೆ ಸಲ್ಲಿಸಿ ಸುಗಮವಾಗಿ ಹೆರಿಗೆಯಾಗುವಂತೆ ಪ್ರಾರ್ಥಿಸಿದಾಗ ಆ ಹೆಣ್ಣು ಮಗಳು ಪ್ರಸವ ವೇದನೆಯಿಂದ ಹೊರ ಬಂದು ಸುಖವಾಗಿ ಹೆರಿಗೆಯಾಯಿತಂತೆ. ಹೀಗೆಂದು ಆ ಹೆಣ್ಣು ಮಗಳ ಮೊಮ್ಮಗನಾದ ಸುರೇಶರವರು ತಿಳಿಸಿದರು. ತಮ್ಮ ಅಜ್ಜಿ ಈ ರೀತಿ ತಮಗೆ ಓಬವ್ವನ ಮಹಿಮೆಯನ್ನು ಕುರಿತು ಹೇಳಿದ್ದರೆಂದು. ಅಂದರೆ ಬಲಗೈ ಸಮುದಾಯದವರಾದ ಇವರು ನಂಬಿಕೆಗಳಿಗೆ ಅರ್ಹರಷ್ಟೇ ಅಲ್ಲದೇಭಾವನೆಗಳನ್ನು ಗೌರವಿಸುವ, ಅವುಗಳಲ್ಲಿಯೇ ತಮ್ಮ ಜೀವನದ ಪ್ರತಿಬಿಂಬವನ್ನು ಕಾಣುವಷ್ಟು ಮುಗ್ಧ ಜನರಿವರು. ಇತ್ತೀಚೆಗೆ ಚಿತ್ರದುರ್ಗದಲ್ಲಿ ಭಾರಿ ಮಳೆ ಸುರಿದಿದ್ದು ಸಿಡಿಲು ಮಿಂಚಿನ ಸಹಿತ, ಬಿರುಗಾಳಿಯೊಂದಿಗೆ ಸಿಡಿಲು ಓಬವ್ವನ ದೇವಸ್ಥಾನದ ಪಕ್ಕದಲ್ಲಿ ಹೊಡೆದಿದ್ದು ದೇವಸ್ಥಾನಕ್ಕೆ ಮಾತ್ರ ಯಾವ ಹಾನಿಯೂ ಜರುಗಿಲ್ಲ ಎನ್ನುತ್ತಾರೆ. ಇದು ದುರ್ಗವನ್ನು ಕಾಯ್ದ ದುರ್ಗಿ ಓಬವ್ವನ ಮಹಾತ್ಮೆ ಎಂದು ಮುಗ್ಧವಾಗಿ ನುಡಿಯುತ್ತಾರೆ. ಅಂದರೆ ತಮ್ಮ ಕುಲದೇವತೆ ತುಂಬಾ ಶಕ್ತಿಶಾಲಿ ಎಂದೇ ಅವರ ನಂಬಿಕೆ. ತಮ್ಮನ್ನು ಒನಕೆ ಓಬವ್ವನ ವಂಶಸ್ಥರೆಂದು ಹೆಮ್ಮೆಯಿಂದ ಹೇಳುತ್ತಾರೆಯೆ ಹೊರತು ಆಕೆಯ ಹೆಸರಿನಲ್ಲಿ ಯಾವುದೇ ಸವಲತ್ತುಗಳನ್ನು ಬೇಡಿ ಪಡೆಯುವವರು ತಾವಲ್ಲವೆಂದು ಸ್ವಾಭಿಮಾನದಿಂದ ನುಡಿಯುತ್ತಾರೆ.

ಓಬವ್ವನ ಈ ಜಲಧಿ ಉತ್ಸವದ ಆಚರಣೆಯಲ್ಲಿ ಸುಮಾರು ಚಿತ್ರದುರ್ಗ ಜಿಲ್ಲೆಯಾದ್ಯಂತ ಸರಿಸುಮಾರು ಎರಡುಸಾವಿರದಷ್ಟು ಸಂಬಂಧಿಕರಿದ್ದು ಎಲ್ಲರೂ ಈ ಆಚರಣೆಯಲ್ಲಿ ಭಾಗವಹಿಸಿ ತಮ್ಮ ಅನನ್ಯತೆಯನ್ನು ವ್ಯಕ್ತಪಡಿಸುತ್ತಾರೆ. ಹಾಗೆಯೇ ತಮ್ಮ ಕುಟುಂಬದಲ್ಲಿ ಯಾವುದೇ ಕಷ್ಟ ಕೋಟಲೆಗಳು ಎದುರಾದಾಗ, ಮಕ್ಕಳು ಮರಿಗೆ ಆರೋಗ್ಯ ಸುಧಾರಿಸಲು ಅನೇಕ ಹರಕೆಗಳನ್ನು ಹರಸಿಕೊಂಡು ಬೆಳ್ಳಿ ಚಾಮರ, ಮುಖವಾಡಗಳು, ತೊಟ್ಟಿಲುಗಳು, ತ್ರಿಶೂಲಗಳು ಮೊದಲಾದವನ್ನು ಹರಕೆಯ ರೂಪದಲ್ಲಿ ಅರ್ಪಿಸುತ್ತಾರೆ, ಹಾಗೆಯೇ ರವಿಕೆ, ಸೀರೆ ಮೊದಲಾದವನ್ನು ಸಹ ಆಕೆಗೆ ಸಮರ್ಪಿಸುತ್ತಾರೆ. ಹಾಗೆ ಸೇರಿದ ಕಾಣಿಕೆಗಳನ್ನು ಹೊಸ ವಸ್ತ್ರದಲ್ಲಿ ಗಂಟು ಕಟ್ಟಿ ದೇವಸ್ಥಾನದಲ್ಲಿ ನಿರ್ಮಿಸಿರುವ ಸಜ್ಜೆಕಟ್ಟೆಯ ಮೇಲೆ ಇಟ್ಟಿದ್ದಾರೆ. ಮದಕರಿನಾಯಕರಿಂದ ಓಬವ್ವನಿಗೆ ಕಾಣಿಕೆಯಾಗಿ ಬಂದ ವಾರದ ವಿಗ್ರಹಗಳನ್ನು ರೇಶಿಮೆಯ ವಸ್ತ್ರದಲ್ಲಿ ಸುತ್ತಿ ಇಟ್ಟಿದ್ದಾರೆ.

ಓಬವ್ವನ ಮೂರ್ತಿಯನ್ನು (ತಾವೇ ನಿರ್ಮಿಸಿಕೊಂಡ ಕಪ್ಪು ಶಿಲಾವಿಗ್ರಹ) ಎತ್ತರವಾದ ಜಗುಲಿಯನ್ನು ನಿರ್ಮಿಸಿಕೊಂಡು ಜಗುಲಿಯ ಮೇಲೆ ಪ್ರತಿಷ್ಠಾಪಿಸಿದ್ದಾರೆ. ವಿಗ್ರಹದ ಮುಂಭಾಗದಲ್ಲಿ ಕೆತ್ತನೆ ಮಾಡಿದ ಮೂರು ಕಲ್ಲಿನ ಕಂಬಗಳನ್ನು ಆಕಡೆ ಈಕಡೆ ಎರಡನ್ನು ನಿಲ್ಲಿಸಿ ಅವುಗಳ ಮೇಲೆ ಒಂದನ್ನು ಉದ್ದುದ್ದವಾಗಿ ಇಟ್ಟಿದ್ದು ಗರ್ಭಗುಡಿಯ ಹಾಗೆ ಮಾಡಿದ್ದಾರೆ. ಹಾಗೂ ಕೆತ್ತನೆ ಮಾಡಿದ ನಾಗರಕಲ್ಲುಗಳನ್ನು ಎಡಭಾಗದಲ್ಲಿ ಪ್ರತಿಷ್ಠಾಪಿಸಿದ್ದು ನಿತ್ಯಪೂಜೆಯನ್ನು ಮಾಡುತ್ತಿದ್ದಾರೆ. ಬಲಭಾಗದಲ್ಲಿ ಶಕ್ತಿ ಸ್ವರೂಪಿಣಿಯಾದ ಮಹಿಷಾಸುರ ಮರ್ಧಿನಿಯ ಫೋಟೋ ಜೊತೆಗೆ

ಲಕ್ಷ್ಮೀಯ ಫೋಟೋ ಹಾಗೂ ಲಕ್ಷ್ಮೀಯ ಮುಖವಾಡಗಳನ್ನು ಇಟ್ಟಿದ್ದು ಸಾಲಂಕೃತವಾಗಿ ಪೂಜಿಸುತ್ತಿದ್ದಾರೆ. ಓಬವ್ವನ ವಿಗ್ರಹದ ಬಲಭಾಗದಲ್ಲಿ ತ್ರಿಶೂಲವನ್ನು ಇಟ್ಟಿದ್ದಾರೆ. ಓಬವ್ವನ ಸಂಬಂಧಿಕರು ಓಬವ್ವನನ್ನು ಶಕ್ತಿದೇವತೆಗೆ ಹೋಲಿಸಿಕೊಂಡಿದ್ದಾರೆ ಎಂಬ ಅಂಶ ತಿಳಿದುಬರುತ್ತದೆ. ಓಬವ್ವನನ್ನು ಕುಲದೇವತೆಯಾಗಿಯಲ್ಲದೆ, ಶಕ್ತಿ ಸ್ವರೂಪಿಣಿಯಂತೆ ಪೂಜಿಸುತ್ತಿದ್ದಾರೆ. ಮುಸ್ಲಿಂರ ದಾಳಿಯಿಂದ ಕೋಟೆಯಲ್ಲಿ ನಿರ್ಮಿಸಲಾಗಿದ್ದ ಓಬವ್ವನ ಪ್ರತಿಮೆ ನಾಶವಾಗಿದ್ದು, ಕೇವಲ ಆಕೆಯ ಪಾದುಕೆಗಳು ಮಾತ್ರ ಉಳಿದಿದ್ದು ಅವುಗಳನ್ನು ತಂದು ಓಬವ್ವನ ವಿಗ್ರಹದ ಮುಂದೆ ಇಡಲಾಗಿದೆ. ಇಟ್ಟು ಅವುಗಳಿಗೆ ಪೂಜೆ ಸಲ್ಲಿಸುತ್ತಿದ್ದಾರೆ. ಓಬವ್ವನ ಪಾದುಕೆಗಳು ಬಂಡೆಯಲ್ಲಿ ಕೊರೆದಂತಿವೆ, ಬಹುಶಃ ನಾವು ಕರ್ನಾಟಕದ ಇತಿಹಾಸದಲ್ಲಿ ಗಮನಿಸಿದಾಗ ಬಹುತೇಕ ಆಳಿಹೋದ ಹಿಂದೂ ಸಾಮ್ರಾಜ್ಯಗಳ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡ ಮುಸ್ಲಿಂ ದೊರೆಗಳ ಆಳ್ವಿಕೆಯಲ್ಲಿ ಮೊದಲು ನಮಗೆ ಕಂಡುಬರುವುದು ವಿಗ್ರಹಗಳ ಭಗ್ನತೆ. ಹಂಪಿ ಸುತ್ತಮುತ್ತಲಿನ ವೈಭವೋಪೇತ ವಿಜಯನಗರದ ಆಳ್ವಿಕೆಯಲ್ಲಿ ನಿರ್ಮಿತವಾಗಿದ್ದ ನೂರಾರು ವಿಗ್ರಹಗಳನ್ನು ಬಹುಮನಿ ಸುಲ್ತಾನರ ಆಕ್ರಮಣದ ನಂತರ ನಾಶಪಡಿಸಿರುವುದನ್ನು ಇಂದಿಗೂ ಪ್ರತ್ಯಕ್ಷವಾಗಿ ನಾವು ಕಾಣಬಹುದಾಗಿದೆ. ಇಂತಹ ಭಗ್ನಗೊಂಡ ವಿಗ್ರಹಗಳ ಸಾಲಿಗೆ ಓಬವ್ವನ ವಿಗ್ರಹವು ಕಾಲಗರ್ಭದಲ್ಲಿ ಸೇರಿತೇನೋ, ಒಟ್ಟಾರೆ ಓಬವ್ವನ ಪಾದುಕೆಗಳೆಂದೇ ಸಂಬಂಧಿಕರು ಖಚಿತವಾಗಿ ಹೇಳುತ್ತಾರೆ, ಪೂಜಿಸುತ್ತಿದ್ದಾರೆ. ದೇವಸ್ಥಾನದಲ್ಲಿ ನಾವು ಕಾಣಬಹುದಾಗಿದೆ.

೬.೩. ಒನಕೆ ಓಬವ್ವ ಜಯಂತಿ : ಜಯಂತಿಗಳೆಂದರೆ ಯಾವುದೋ ಒಬ್ಬ ವೀರನ, ಒಬ್ಬ ಮಹಾಪುರುಷನ, ಒಬ್ಬ ಆದರ್ಶವ್ಯಕ್ತಿಯ ಸಾಧನೆಯನ್ನು ಗುರುತಿಸಿ ಅವರ ನೆನಪು ನಿತ್ಯ ನೂತನವಾಗಿ ಚಿರಂತನವಾಗಿ ನಿಲ್ಲುವಂತೆ ಮಾಡುತ್ತವೆ. ಈ ವಾರ್ಷಿಕ ಜಯಂತಿಗಳು ಇಂತಹ ಜಯಂತಿಗಳ ಆಚರಣೆಗಳನ್ನು ಹಲವಾರು ನಂಬಬಹುದು, ಬಿಡಬಹುದು. ಆ ಕಥಾ ನಾಯಕರ ಉದಾತ್ತ ವ್ಯಕ್ತಿತ್ವಕ್ಕೆ ತಲೆಬಾಗಬೇಕಾಗುತ್ತದೆ. ಬದುಕಿಗೆ ಬೇಕಾದ ನೀತಿ, ನಡತೆ ಮುಂತಾದವನ್ನು ಈ ಜಯಂತಿಗಳು ನೀಡುತ್ತವೆ, ಇವು ಜೀವನದ ಮೌಲ್ಯಗಳ ಮೇಲೆ ಬೆಳಕು ಬೀರುವಂತಹವಾಗಿವೆ. ಈ ಜಯಂತಿಗಳು ರಾಷ್ಟ್ರದ ಬಹುಸಂಖ್ಯಾತ ಬಹುವರ್ಗವೆನಿಸುವ ಜನಪದರಲ್ಲಿ ಅವರ ಮನಸ್ಸಿನಲ್ಲಿಉಳಿದ ಬದುಕನ್ನು ಮೌಲ್ಯಯುತವಾಗಿಬೆಳೆಸುತ್ತವೆ.

ಸಂದಿಗ್ಧ ಸಮಾಜದಲ್ಲಿರುವ ನಾವು ಜಾತಿ ಜಾತಿಗಳ ಹೆಸರಿನಲ್ಲಿ ಮನುಷ್ಯರ ನಡುವೆ ಅಂತರ ಕಾಯ್ದುಕೊಂಡು ಅನಾರೋಗ್ಯಕರ ವಾತಾವರಣಕ್ಕೆ ನಾಂದಿ ಹಾಡುತ್ತಿದ್ದೇವೆ. ಈ ಜಯಂತಿಗಳ ಮೂಲಕ ಸಂಸ್ಕೃತಿಯ ದೃಷ್ಟಿಯಿಂದ ಇವು ಬಹಳ ಗಣ್ಯವಾದವು. ಮಹಾಪುರುಷರ ಮಹಾತ್ಮತನವನ್ನು ಮರಣದಲ್ಲಿ ಕಾಣು ಎಂಬೊಂದು ನಾಣ್ಣುಡಿಯುಂಟು. "ಬದುಕಿದ್ದಾಗ ಅವರ ಸಾಹಸ ಸಿದ್ಧಿ, ಸಾಮರ್ಥ್ಯಗಳು ಅವರ ಜೀವನ ವ್ಯವಹಾರಗಳಿಗೆ ಹಾಗೂ ಇಂದ್ರಿಯ ಶಕ್ತಿಗಳಿಗೆ ಮಾತ್ರ ಸೀಮಿತಗೊಂಡಿರುತ್ತವೆ. ಅವಸಾನಾ ನಂತರ ಅವರ ಅಂತಶ್ಚೈತನ್ಯ ಬಂಧನ ಮುಕ್ತವಾಗಿ,

ಆಕಾಶವನ್ನೆಲ್ಲಾ ಆಕ್ರಮಿಸಿಕೊಳ್ಳುತ್ತದೆ. ಜನಮಾನಸ ಗರ್ಭವನ್ನು ಹೊಕ್ಕ ವಿಕಾಸ ಹೊಂದುತ್ತದೆ". ಯಾವುದೇ ಆಚರಣೆ ಆ ದಿನ ಮಾತ್ರ ಸ್ಮರಿಸುವ ಬದಲು ಅವರ ಸಿದ್ಧಾಂತಗಳನ್ನು ಅನುಷ್ಠಾನಗೊಳಿಸಬೇಕು. ಅಂಬೇಡ್ಕರ್‌ರವರ ಜಯಂತಿಯನ್ನು ವರ್ಷಕ್ಕೊಮ್ಮೆ ನೆನಪಿಸಿಕೊಳ್ಳುವ ಬದಲು ಸಂವಿಧಾನ ರೂಪಿಸಿ ಹಕ್ಕುಗಳನ್ನು ಕಲ್ಪಿಸಿ, ಶಾಸನಬದ್ಧ ವಿಚಾರಗಳನ್ನು ಲಿಖಿತ ರೂಪದಲ್ಲಿ ನೀಡಿದ ಮಹಾನುಭಾವನ ಆದರ್ಶಗಳನ್ನು ಮೈಗೂಡಿಸಿಕೊಳ್ಳುವುದೇ ಜಯಂತಿಯ ಉದ್ದೇಶ ಆಗಬೇಕು. ಹಾಗೆಯೇ ಬಾಬುಜಗಜೀವನರಾಂ ಅವರು ಕೇವಲ ದಲಿತ ಸಮುದಾಯಕ್ಕಷ್ಟೇ ಸೀಮಿತವಲ್ಲ. ಅವರು ದೇಶದ ಆಸ್ತಿಯಾಗಿದ್ದರು. ಹಸಿರುಕ್ರಾಂತಿಯ ಹರಿಕಾರರಾಗಿ ದೇಶದ ಆಹಾರಕೊರತೆ ನೀಗಿಸುವ ನಿಟ್ಟಿನಲ್ಲಿ ಮಹಾನ್ ನಾಯಕರು. ಅವರ ಆದರ್ಶಗಳು ಜಯಂತಿಗೆ ಸೀಮಿತವಾಗಬಾರದು. ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಸಾಧನೆಗೈದ ಮಹಿಳೆಯರಿಗೆ ಪುರಸ್ಕರಿಸುತ್ತಾ ಬಂದಿರುವುದು ಅನುಕರಣೀಯ. ಸ್ತ್ರೀ ಅಬಲೆಯೆಂದೇ ಸಮಾಜದಲ್ಲಿ ಗುರುತಿಸಲ್ಪಟ್ಟಿದ್ದರು. ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಒನಕೆ ಓಬವ್ವರಂಥವರು, ಸಮಾಜಕ್ಕೆ ಸ್ತ್ರೀಕುಲಕ್ಕೆ ಆದರ್ಶಪ್ರಾಯರಾಗಿದ್ದಾರೆ. ಧೈರ್ಯ ಎಲ್ಲದಕ್ಕೂ ಮೂಲ. ನಾವು ಅಂಜಿಕೆ ಭಾವನೆಯಿಂದ ಹಿಂದೆ ಸರಿಯದೆ ಮನಸ್ಸಿನಿಂದ ಕೆಲಸ ಕಾರ್ಯಗಳನ್ನು ಕೈಗೊಂಡಾಗ ಅವು ತೃಪ್ತಿ ನೀಡುತ್ತವೆ. ಇಲ್ಲಿ ನಾಯಕರ ಜೀವನಕ್ಕಿಂತ ಅವರ ಜೀವನತತ್ವಗಳ ಪ್ರತಿಪಾದನೆಗೆ ಒತ್ತು ನೀಡಬೇಕು. ಜಗತ್ತನ್ನಾಳುವ ಸಮಸ್ತ ಜೀವನಾತ್ಮಕವಾದ ನಂಬಿಕೆಗಳೇ ಆಚರಣೆಗಳಾಗಿ ರೂಢಿಗೆ ಬಂದಿವೆ. ಇವು ರೂಪಾಂತರ ಹೊಂದಿ ಮತೀಯ ಹಾಗೂ ಸಾಮಾಜಿಕ ಪದ್ಧತಿಗಳಾಗಿ ರೂಪು ಹೊಂದುತ್ತವೆ.

ಸಂಪ್ರದಾಯ ಮತ್ತು ಆಚರಣೆಗಳು ಪರಸ್ಪರ ಸಂಬಂಧವುಳ್ಳ ಎರಡು ಜಾನಪದ ಬಗೆಗಳು. ಬಹುಮಟ್ಟಿಗೆ ಧಾರ್ಮಿಕ ಚೌಕಟ್ಟಿನಲ್ಲಿಯೇ ಬರುವ ಆಚರಣೆಗಳನ್ನು, **"ಧಾರ್ಮಿಕ ವಿಧಿಗಳು"** ಎಂದು ಕರೆಯಬಹುದು. ಸಂಪ್ರದಾಯಗಳು ಕೇವಲ ಗೊಡ್ಡುಕಂದಾಚಾರಗಳಲ್ಲಿ ಸಾಮಾಜಿಕ ಜೀವನದೊಡನೆ ಅವು ಜೀವಂತವಾದ ಸಂಬಂಧವನ್ನು ಇಟ್ಟುಕೊಂಟಿರುತ್ತವೆ, ಒಂದೊಂದು ಆಚರಣೆಯ ಆಳಕ್ಕೆ ಇಳಿದಂತೆಲ್ಲ ಆಯಾ ಸಂಸ್ಕೃತಿಗೆ ಹೊಸ ಅರ್ಥವನ್ನು ತಂದು ಕೊಡುವಲ್ಲಿ ಸಂಪ್ರದಾಯಗಳು ಸಹಕಾರಿಯಾಗುತ್ತವೆ. ಇಂಥಹ ಆಚರಣೆಗಳು ಜನಮನದಲ್ಲಿ ಹಚ್ಚಹಸಿರಾಗಿ ನಿಲ್ಲುತ್ತವೆ.

ಎಚ್ಚೆತ್ತುಕೊಂಡಿರುವ ಛಲವಾದ ಜನಾಂಗದವರು ತಮ್ಮ ಜಾತಿಯ ಸಮುದಾಯಕ್ಕೆ ತನ್ನದೇ ಆದ ಇತಿಹಾಸ ಪರಂಪರೆಯಿದೆ ಎಂಬುದನ್ನು ಮನಗಂಡಿದ್ದಾರೆ. ಈ ಜನಾಂಗದಲ್ಲಿ ಅನೇಕ ಪುಣ್ಯ ಪುರುಷ–ಮಹಿಳೆಯರು ಹುಟ್ಟಿ ಬೆಳೆದು ಮಾನವ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ, ಇವರು ಶಿಸ್ತಿನ ಸಿಪಾಯಿಗಳು, ಸ್ವಾಭಿಮಾನಿಗಳು ಮತ್ತು ಕಾಯಕನಿಷ್ಠರು, ತಾವೆಂದು ಹೇಳಿ ಮಾಡಿ ತೋರಿಸಿದ್ದಾರೆ. ಈ ಸಮುದಾಯದ ಓರ್ವ ಸಾಮಾನ್ಯ ಮಹಿಳೆ

ತನ್ನ ಮನೆಯಲ್ಲಿನ ಒನಕೆ ಕಟ್ಟಿಗೆಯಿಂದಲೇ ಶತ್ರು ಸೈನ್ಯವನ್ನು ಬಡೆದು, ಕೋಟೆಯನ್ನು ರಕ್ಷಿಸಿ, ಸ್ವಾಮಿನಿಷ್ಠೆಯನ್ನು ಮರೆತು **"ವೀರವನಿತೆ ಒನಕೆ ಓಬವ್ವ"** ಎಂದು ಇತಿಹಾಸದಲ್ಲಿ ಅಮರಳಾಗಿದ್ದಾಳೆ.

ಇಂಥಹ ವೀರಮಹಿಳೆಯನ್ನು ಈ ಜನಾಂಗದವರು ತಮ್ಮ ಜನಾಂಗದ ಮಹಿಳೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈ ಜನಾಂಗದವರು ಜಾತಿಯಲ್ಲಿ ಛಲವಾದಿಗಳಾಗಿದ್ದರೂ ರಾಜ–ಮಹಾರಾಜರ, ಮಂತ್ರಿ–ಮಹೋದಯರ, ಗಣ್ಯರ ನಂಬಿಕೆಗೆ, ಪ್ರೀತಿ–ವಿಶ್ವಾಸಕ್ಕೆ, ಭಾಜನರಾದವರು ಛಲವಾದಿ ಜನಾಂಗದಲ್ಲಿ ಜನಿಸಿ ಈ ರಾಷ್ಟ್ರಕ್ಕೆ, ಈ ನಾಡಿಗೆ ಅಪಾರ ಸೇವೆಯನ್ನು ಸಲ್ಲಿಸಿ ಆದರ್ಶವಾಗಿ ಬದುಕಿ ಅಮರರಾಗಿರುವ ಶಿವಭಕ್ತ ನಾಗಮಯ್ಯ, ಧೀರಮಹಿಳೆ ಒನಕೆ ಓಬವ್ವ, ಪತಿವ್ರತಾ ಶಿರೋಮಣಿ ವೀರಹನುಮಕ್ಕ, ದೇಶದ ಸ್ವಾತಂತ್ರ್ಯಕ್ಕಾಗಿ ವೀರಾವೇಶದಿಂದ ಹೋರಾಡಿ, ಹುತಾತ್ಮರಾದ ಮಹರ್ ಸೈನಿಕರು, ಸಮಾನತೆಯ ಹರಿಕಾರ, ಸಂವಿಧಾನದ ಶಿಲ್ಪಿ, ಭಾರತರತ್ನ ಡಾ॥ಬಾಬಾ ಸಾಹೆಬ್ ಅಂಬೇಡ್ಕರ್, ಅನುಭಾವಿ ಕವಿ, ಛಲವಾದಿ ಚಂದಪ್ಪ ಮೊದಲಾದ ಮಹಾನ್ ಪರಾಕ್ರಮಿ ಮತ್ತು ದಾರ್ಶನಿಕರ ವಾರಸುದಾರರು ತಾವೆಂದು ಎದೆ ತಟ್ಟಿ ಹೇಳುತ್ತಾರೆ.

ಓಬವ್ವನ ಧೀರತೆ, ನಡೆನುಡಿ, ಆಚಾರ–ವಿಚಾರ ನಿಸ್ಸೀಮ ತ್ಯಾಗ ಅಚಲವಾದ ನಾಡಭಕ್ತಿ, ಆತ್ಮಾರ್ಪಣೆ ಅವಿಸ್ಮರಣೀಯವಾದುದು. ಓಬವ್ವ ವ್ಯಕ್ತಿಯಲ್ಲ. ಆ ಮಾತೆಯೊಂದು ಆತ್ಮಪುಂಜ. ಓಬವ್ವ ನಿಷ್ಕಲ್ಮಷ ನಾಡಭಕ್ತಿಯ ದ್ಯೋತಕ. ಈಕೆಯ ಸಾಹಸಮಯ ಜೀವನದ ಆದರ್ಶವನ್ನು ಪ್ರಚುರ ಪಡಿಸುವ ಕಾರ್ಯಕ್ರಮವೇ ಒನಕೆ ಓಬವ್ವ ಜಯಂತಿ. ಈ ಉತ್ಸವಕ್ಕಾಗಿ ಊರ ಜನರು ತಮ್ಮ ಯೋಗ್ಯತಾನುಸಾರ ಕಾಣಿಕೆ ಕೊಟ್ಟು ಸಮಾರಂಭ ನೆಡೆಸಲು ಅನುವು ಮಾಡಿಕೊಡುತ್ತಾರೆ. ಹಾಗೆಯೇ ನಾಯಕ ವಂಶಸ್ಥರು ಸಹ ಕಾರ್ಯಕ್ರಮಕ್ಕೆ ಆಗಮಿಸಿ ತಮ್ಮ ಯಥಾಶಕ್ತಿ ಸಹಾಯ ಹಸ್ತ ನೀಡಿ ಯಶಸ್ವಿಯಾಗಲು ಕಾರಣರಾಗುತ್ತಾರೆ. ಹಾಗೆಯೇ ಶುಭ ಸಮಾರಂಭದ ವೀಳ್ಯೆಯವನ್ನು ಈಗಲೂ ನೆಡೆಸಿಕೊಂಡು ಬರುತ್ತಿದ್ದಾರೆ. ಓಬವ್ವನ ಸಂಬಂಧಿಕರು ತಪ್ಪದೇ ಒನಕೆ ಓಬವ್ವ ಜಯಂತಿಯನ್ನು ಪುರ ಜನರ ಸಹಕಾರದೊಂದಿಗೆ ನೆಡೆಸಿಕೊಂಡು ಬರುತ್ತಿದ್ದಾರೆ. ಛಲವಾದಿ ಮಹಾಸಂಸ್ಥಾನದ ಮಠವನ್ನು ಸ್ಥಾಪಿಸಿ ಪೀಠಾದೀಶರನ್ನಾಗಿ ಬಸವನಾಗಿ ದೇವ ಶರಣರನ್ನು ಶಿವಮೂರ್ತಿ ಮುರುಘಾ ಶರಣರು ಪಟ್ಟ ಮಾಡಿದ್ದು, ಬಸವನಾಗಿ ದೇವ ಶರಣರ ನೇತೃತ್ವದಲ್ಲಿ ಓಬವ್ವ ಜಯಂತಿಯನ್ನು ಆಚರಿಸುತ್ತಿದ್ದಾರೆ. ಓಬವ್ವ ಜಯಂತಿಯನ್ನು ಪ್ರತೀವರ್ಷ ಚಿತ್ರದುರ್ಗದ ಉತ್ಸವವಾಗಿ ದುರ್ಗದ ಜನತೆ ಆಚರಿಸುತ್ತಿದೆ. ಅದ್ದೂರಿಯಿಂದ ಕಾರ್ಯಕ್ರಮವನ್ನು ಆಚರಿಸುತ್ತಾರೆ. ನಗರದ ಪ್ರಮುಖ ರಸ್ತೆಗಳಲ್ಲಿ ವೀರ ವನಿತೆ ಒನಕೆ ಓಬವ್ವನ ಭಾವಚಿತ್ರದೊಂದಿಗೆ ಜಾನಪದ ಕಲಾಮೇಳ ನೆಡೆಯಿಸಿ, ಆನೆ, ಕುದುರೆ, ಕೀಲುಕುದುರೆ, ಖಾಸಾ ಬೇಡರ ಪಡೆ, ಉರಿಮೆ ವಾದ್ಯಗಳು, ಕಹಳೆಗಳು, ಡೊಳ್ಳುಕುಣಿತ, ಗೊರವರು, ಭಜನೆ ತಂಡಗಳು, ಮರಗಾಲು ಕುಣಿತ, ನಾಸಿಕಡೋಲು, ಮೊದಲಾದ ತಂಡಗಳನ್ನು ಕರೆಯಿಸಿ ಅದ್ದೂರಿಯಿಂದ ಆಚರಿಸುತ್ತಿದ್ದಾರೆ. ಅಂದು ಶ್ರೀಪುಟ್ಟಣ್ಣ ಕಣಗಾಲರು ಓಬವ್ವನ ಸಾಹಸವನ್ನು ಆಲಿಸಿ ಅದನ್ನು ನಾಗರಹಾವು

ಚಲನಚಿತ್ರದ ಮೂಲಕ ಪರದೆಯ ಮೇಲೆ ತೋರಿಸಿ ಪುನರ್‌ಜ್ಜೀವ ನೀಡಿದ್ದು ಅದರಲ್ಲಿ ಓಬವ್ವನ ಪಾತ್ರದಲ್ಲಿ ತನ್ನನ್ನು ತಾನೇ ಮರೆತು ಅಭಿನಯಿಸಿದ ಅಭಿನಯ ಶಾರದೆ ಜಯಂತಿಯನ್ನು, ೨೦೦೭ ರಲ್ಲಿ ಆಚರಿಸಿದ ಈ ಸಮಾರಂಭಕ್ಕೆ ತಪ್ಪದೇ ಕರೆದು ಸನ್ಮಾನಿಸಿದ್ದರು ದುರ್ಗದ ಜನತೆ. ಹಾಗೆಯೇ ಜಿಲ್ಲಾ ಉಸ್ತುವಾರಿ ಸಚಿವರುಗಳು, ಚಿತ್ರದುರ್ಗ ಜಿಲ್ಲೆಯ ರಾಜಕೀಯ ವ್ಯಕ್ತಿಗಳು, ಸಾಹಿತಿಗಳು, ಜನ ಪ್ರತಿನಿಧಿಗಳು ಎಲ್ಲರೂ ಸೌಹಾರ್ದತೆಯಿಂದ ಭಾಗವಹಿಸುವರು. ಹಾಗೆಯೇ ನಗರದ ಪ್ರಮುಖ ರಸ್ತೆಗಳಲ್ಲಿ ವೀರವನಿತೆ ಒನಕೆ ಓಬವ್ವನ ಭಾವಚಿತ್ರದೊಂದಿಗೆ ಮೆರವಣಿಗೆ ಮಾಡುತ್ತಾರೆ, ಜಾನಪದ ಕಲಾಮೇಳಗಳು, ಆನೆ, ಕುದುರೆ, ಕೀಲುಕುದುರೆ, ಖಾಸಾ ಬೇಡರ ಪಡೆ, ಉರಿಮೆ ವಾದ್ಯಗಳು, ಕಹಳೆಗಳು, ಡೊಳ್ಳುಕುಣಿತ, ಗೊರವರು, ಭಜನೆ ತಂಡಗಳು, ಮರಗಾಲು ಕುಣಿತ, ನಾಸಿಕಡೋಲು, ಮೊದಲಾದ ತಂಡಗಳನ್ನು ಕರೆಯಿಸಿ ಅದ್ದೂರಿಯಿಂದ ಆಚರಿಸುವರು. ಈ ಹಿಂದೆ ವಿಧಾನ ಪರಿಷತ್ ಸದಸ್ಯ ಡಿ.ಎಸ್. ವೀರಯ್ಯನವರು ಸಹ ೨೦೦೭ರ ಮೇಲ್ಮನೆ ಅಧಿವೇಶನದಲ್ಲಿ ವಿಧಾನಸೌಧದಲ್ಲಿ ವೀರರಮಣಿ ಓಬವ್ವನನ್ನು ಸ್ಮರಿಸಿ, ಆಕೆಯ ತ್ಯಾಗ ಮನೋಭಾವವನ್ನು ವರ್ಣಿಸಿ ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಛಲವಾದಿ ಸಮುದಾಯಕ್ಕೆ ಸೇರಿದ ಮಹಿಳೆಯ ಪ್ರಾಮಾಣೀಕತೆಯನ್ನು ಅಭಿನಂದಿಸಿದ್ದನ್ನು ನಾವು ಸ್ಮರಿಸಬಹುದಾಗಿದೆ. ಹಾಗೆಯೇ ನಿರಂತರ ಶೋಷಣೆ, ದೌರ್ಜನ್ಯಕ್ಕೆ ಒಳಗಾಗುತ್ತಿರುವ ಮಹಿಳೆಯರು ಓಬವ್ವನನ್ನು ಆದರ್ಶವಾಗಿಟ್ಟುಕೊಂಡು ಸಮಸ್ಯೆಗಳನ್ನು ಎದುರಿಸಬೇಕು ಎಂಬ ಸಲಹೆಯನ್ನು ನೀಡಿದ್ದಾರೆ. ೨೦೧೦ ರಲ್ಲಿ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಮಾನ್ಯ ಬಸವರಾಜ ಹೊರಟ್ಟಿಯವರು **'ವೀರವನಿತೆ ಒನಕೆ ಓಬವ್ವನ'** ಹೆಸರಿನಲ್ಲಿ ಜಿಲ್ಲಾಮಟ್ಟದ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ತಿಳಿಸಿದ್ದಾರೆ. ಹಾಗೆಯೇ ರಾಜ್ಯಮಟ್ಟದಲ್ಲಿ ಓಬವ್ವ ಜಯಂತಿಯನ್ನು ಆಚರಿಸುವ ಕುರಿತು ಮುಖ್ಯಮಂತ್ರಿಯ ಗಮನ ಸೆಳೆಯುವುದಾಗಿ ತಿಳಿಸಿದ್ದು, ಛಲವಾದಿ ಜನಾಂಗಕ್ಕೆ ಸಮುದಾಯ ಭವನ ನಿರ್ಮಿಸುವ ಕುರಿತು ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಿ ಸಕಾರಾತ್ಮಕ ತೀರ್ಮಾನ ಕೈಗೊಳ್ಳುವುದಾಗಿ ಅಂದು ಭರವಸೆ ನೀಡಿದರು. ಆದರೆ ಅವು ಕಾರ್ಯಗತವಾಗಬೇಕಷ್ಟೇ ಎಂದು ಅವರ ಮೊಮ್ಮಗ ಸುರೇಶಪ್ಪನವರು ತಿಳಿಸಿದರು.

ಇನ್ನು ವೀರ ವನಿತೆ ಒನಕೆ ಓಬವ್ವನ ಸ್ಮಾರಕ ನಿರ್ಮಾಣಕ್ಕೆ ಪ್ರಯತ್ನಗಳು ಸದ್ದಿಲ್ಲದೆ ಸಾಗಿದ್ದು ರಾಜ್ಯ ಸರ್ಕಾರದ ಅನುಮತಿ ದೊರೆತಿದೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ವೇಳೆಯಲ್ಲಿ ಡಿ.ಎಸ್.ವೀರಯ್ಯನವರು ಓಬವ್ವನ ಸ್ಮಾರಕ ನಿರ್ಮಿಸಲು ಕೋರಿ ಪತ್ರ ಬರೆದಿದ್ದು ಅದಕ್ಕೆ ಮುಖ್ಯಮಂತ್ರಿಗಳು ಪ್ರತಿಕ್ರಿಯಿಸಿ ಸ್ಮಾರಕಕ್ಕಾಗಿ ಐದು ಕೋಟಿ ಕಾಯ್ದಿರಿಸುವ ಭರವಸೆಯೂ ನೀಡಿದ್ದರು. ಆದರೆ ರಾಜ್ಯಸರ್ಕಾರ ಓಬವ್ವಳ ಸ್ಮಾರಕ ಮಾಡಲು ಅಸ್ತು ಎಂದಿದ್ದರೂ ಕನಿಷ್ಟ ಐದರಿಂದ ಹತ್ತು ಎಕರೆಗಳಷ್ಟು ಪ್ರಮಾಣದ ಭೂಮಿ ದುರ್ಗದ ಹೊರವಲಯದಲ್ಲಿ ಎಲ್ಲಿಯೂ ಲಭ್ಯವಾಗುವುದು ಕಷ್ಟ ಸಾಧ್ಯವಾದ್ದರಿಂದ ಮುಂದುವರಿಯದೇ ಹಾಗೆಯೇ ಸ್ಥಗಿತವಾಗಿದೆ.

ದುರ್ಗದ ಜಿಲ್ಲಾ ಕ್ರೀಡಾಂಗಣಕ್ಕೆ ಒನಕೆ ಓಬವ್ವನ ಹೆಸರಿಡಲಾಗಿದೆ. ಜಿಲಾಧಿಕಾರಿಗಳ ಕಛೇರಿ ಬಳಿ ಓಬವ್ವನ ಕಂಚಿನ ಪ್ರತಿಮೆಯನ್ನು ನಿರ್ಮಿಸುವಲ್ಲಿ ಪ್ರಭುತ್ವ ಕೈಗೊಂಡ ನಿರ್ಧಾರ ಶ್ಲಾಘನೀಯ. ಇವೆಲ್ಲದರ ಜೊತೆಗೆ ಓಬವ್ವಳ ಸ್ಮಾರಕ ನಿರ್ಮಾಣ ಕಾರ್ಯ ಕೈಗೊಂಡು ಪೂರ್ಣಗೊಂಡರೆ ಮಾತ್ರ ಚಿತ್ರದುರ್ಗ ನಿಜವಾಗಿ ಓಬವ್ವನ ನಾಡಾಗಿ ರೂಪಾಂತರಗೊಳ್ಳುತ್ತದೆ.ಸ್ತ್ರೀ ಕುಲಕ್ಕೆ ಸಾಂಕೇತಿಕವಾದ ಓಬವ್ವ ಇಡೀ ನಾಡಿಗೆ ಆದರ್ಶ ಮಹಿಳೆಯಾಗಿ ಹೊರಹೊಮ್ಮುತ್ತಾಳೆ.

ನಮ್ಮ ಭಾರತೀಯ ಇತಿಹಾಸಗಳನ್ನಾಗಲೀ ಪುರಾಣಗಳನ್ನಾಗಲೀ ಅವಲೋಕಿಸಿದಾಗ ಈ ಎಲ್ಲವುಗಳಿಗೂ ಜಾತಿ, ವರ್ಗ, ಲಿಂಗದ ವಾಸನೆಗಳು ಬಹುತೇಕ ಅಂಟಿಕೊಂಡಿರುವುದನ್ನು ನಾವು ಅಲ್ಲಲ್ಲಿ ಕಾಣಬಹುದು. ಈ ವಾಸನೆಗಳನ್ನು ಮೀರಿದಾಗ ಮಾತ್ರ ಉತ್ತಮ ಸಂಕಥನವನ್ನು ಕಾಣಬಹುದು. ಹೆಣ್ಣು ಯಕಶ್ಚಿತ್ ಎಂಬ ಮಾತನ್ನು ಬಿಟ್ಟು ಹಾಕಿದಾಗ ಚರಿತ್ರೆಯಲ್ಲಿ ಮಾನ–ಸನ್ಮಾನಗಳು ಅವಳಿಗೆ ಸಿಗುತ್ತವೆ. ಅಂಥ ಮಾನ ಸನ್ಮಾನಗಳು ವೀರ ರಮಣಿ ಓಬವ್ವನಿಗೆ ದೊರಕಲಿ. ಜಾನಪದ ಸಾಹಿತ್ಯ ಕೂಡ ಹುಟ್ಟಿರುವುದು ಈ ಪುರುಷ ಪ್ರಧಾನ ಸಮಾಜದಲ್ಲಿಯೇ, ಆದರೆ ಅದು ಸ್ತ್ರೀ ಪರವಾಗಿಯೂ ನಿಲ್ಲುತ್ತದೆ, ನಿಂತಿದೆ ಎನ್ನುವುದಕ್ಕೆ ಸಾಕ್ಷಿ ಇಲ್ಲಿ ಓಬವ್ವ

ಜನಪದರ ದೃಷ್ಟಿಯಲ್ಲಿ ಓಬವ್ವ ಚಿತ್ರದುರ್ಗದಲ್ಲಿ ದುರ್ಗಿಯೇ ಆಗಿದ್ದಾಳೆ. ಮರಣವೇ ಮಹಾನವಮಿ ಎಂದು ಬಗೆದು ತನ್ನ ಜೀವದ ಹಂಗನ್ನು ತೊರೆದು ಕಾದಿದ ಮಹಿಳೆ ಓಬವ್ವ ಅಮರಳಾಗಿದ್ದಾಳೆ. ದುರ್ಗದ ಜನಪದರ ನಡೆನುಡಿ, ವರ್ತನೆಯಲ್ಲಿ ತುಂಬಿದ್ದಾಳೆ, ಜೀವನಾಡಿಯಾಗಿದ್ದಾಳೆ. ಕೋಟೆಯನ್ನು ಸಾಕಿ ಸಲಹಿದ ತಾಯಿ ಎಂದು ಭಾವಿಸಿದ್ದಾರೆ, ದುರ್ಗದ ಕಣ್ಣಾಗಿದ್ದಾಳೆ.ಶಿಷ್ಟ ಸಾಹಿತ್ಯದಲ್ಲಿ ಸಂಪೂರ್ಣವಾಗಿ ತನ್ನನ್ನು ತನ್ನ ಇರವನ್ನು ಶ್ರುತಪಡಿಸಲು ಹಿಂದೆ ಬಿದ್ದಿರುವ ಓಬವ್ವ ದುರ್ಗದ ಜನಪದರಲ್ಲಿ ಮನೆ ಮಾಡಿದ್ದಾಳೆ. ದುರ್ಗದ ಜನತೆ ಓಬವ್ವನನ್ನು ತಮ್ಮ ಮನೆ ಮಗಳಾಗಿ ಕಂಡಿದ್ದಾರೆ. ಕಾಣುತ್ತಿದ್ದಾರೆ. (ಕ್ಷೇತ್ರ ಕಾರ್ಯದ ಅನುಭವ.)

೬.೪. ಸಮಾಧಿ ಪೂಜೆ : ಹುಟ್ಟು ಮದುವೆ ಸಾವುಗಳು ಮಾನವ ಜೀವನದ ಪ್ರಮುಖ ಸೋಪಾನಗಳು. ಅವನು ಸತ್ತ ನಂತರ ಪ್ರೇತವಾಗಿ ಉಳಿಯುತ್ತಾನೆ ಅಥವಾ ಹುಟ್ಟಿಬರುತ್ತಾನೆ. ಇಲ್ಲವೆ ಸ್ವರ್ಗದಲ್ಲಿದ್ದುಕೊಂಡು ಎಲ್ಲರ ಯೋಗಕ್ಷೇಮಗಳನ್ನು ವಿಚಾರಿಸಿಕೊಳ್ಳುತ್ತಾನೆ ಎಂಬ ನಂಬಿಕೆ ಅನೇಕರ ಸಾವಿನ ನಂತರದ ಕ್ರಿಯೆಗಳಿಗೆ ಪ್ರೇರಕವಾಗಿದೆ. ಹಳಬರಾಗಲಿ, ಹೊಸಬರಾಗಲಿ ನಂಬಿಕೆ ಮತ್ತು ಸಂಪ್ರದಾಯಗಳಿಂದ ಸಂಪೂರ್ಣವಾಗಿ ವಿಮುಕ್ತರಾದುದಿಲ್ಲ. ಅನೇಕ ವೈಜ್ಞಾನಿಕ ವಿಷಯಗಳೂ ನಂಬಿಕೆಗಳಾಗಿ ಬೇರೂರುವುದುಂಟು. ಶಿಕ್ಷಣ ವ್ಯವಸ್ಥೆಯೂ ಸಾಂಪ್ರದಾಯವಾಗಿ ಪರಿಣಮಿಸುವುದುಂಟು.

ಆಧುನಿಕ ಲೋಕದಲ್ಲಿ ರೂಢಿಯಲ್ಲಿರುವ ಅನೇಕ ಸಾಂಪ್ರದಾಯಗಳಿಗೆ ಅವಿಚ್ಛಿನ್ನವಾದ ಚರಿತ್ರೆಯಿದೆ. ಅವು ಆದಿಮಾನವರಿಂದ ಹಿಡಿದು ನಮ್ಮ ತನಕ ಹರಿದು ಬಂದಿವೆ. ನಾಗರೀಕತೆಯಿಂದ ದೂರ ಉಳಿದ ಹಲವು ಜನಾಂಗಗಳು ಪ್ರಾಚೀನ ಪದ್ಧತಿಗಳನ್ನು ಇನ್ನೂ ಬಲವಾಗಿ ತಬ್ಬಿ

ಹಿಡಿದಿವೆ. ಒಂದು ಕುಟುಂಬ ಅಥವಾ ಸಮಾಜ ಆಚರಿಸುವ ಹತ್ತಾರು ಹಬ್ಬಗಳಲ್ಲಿ ಒಂದೊಂದು ವಿಭಿನ್ನವಾಗಿರುತ್ತವೆ. ಒಟ್ಟಿನಲ್ಲಿ ನಂಬಿಕೆಗಳು ಪದ್ಧತಿಗಳು, ನಿಯಮಗಳ ಮತ್ತು ಸಂಸ್ಥೆಗಳ ರೂಪದಲ್ಲಿ ಮಾನವೀಯ ಮೌಲ್ಯಗಳನ್ನು ಸಂರಕ್ಷಿಸುವ ಸಾಂಸ್ಕೃತಿಕ ವಿಧಿಗಳೆಂದೇ ಹೇಳಬಹುದು. ಹೀಗೆ ಪಿತೃಪೂಜೆಯು ಸಮಾಜದಲ್ಲಿ ಪ್ರಧಾನಸ್ಥಾನ ಪಡೆದಿದೆ. ಈ ಹಿನ್ನಲೆಯಲ್ಲಿ ಓಬವ್ವನ ಸಮಾಧಿಪೂಜೆಯನ್ನು ಆಕೆಯ ಸಂಬಂಧಿಕರು ಮಾಡುತ್ತಾ ಬಂದಿದ್ದಾರೆ.

ಛಲವಾದಿ ಮಹಾಸಂಸ್ಥಾನದ ಬಸವನಾಗಿ ದೇವಶರಣರ ನೇತೃತ್ವದಲ್ಲಿ ಇತ್ತೀಚೆಗೆ ಒನಕೆ ಓಬವ್ವನ ಸಮಾಧಿ ಪೂಜೆಯನ್ನು ದುರ್ಗದ ಕಾರ್ಯಕ್ರಮಗಳಲ್ಲಿ ಇದು ಒಂದಂತೆ ಇಂದು ಪ್ರತೀವರ್ಷ ನೆಡೆಸಿಕೊಂಡು ಬರುತ್ತಿದ್ದಾರೆ. ಅಂದರೆ ಇದಕ್ಕೂ ಮುಂಚಿನಿಂದಲೂ ಓಬವ್ವನ ವಂಶೀಕರಾದ ನಾಗೇಂದ್ರರಾವ್, ಸೋಮಶೇಖರಪ್ಪ ಮತ್ತು ಹನುಮಂತಪ್ಪರವರ ಕುಟುಂಬ ವರ್ಗದವರು ಹೇಳುವ ಹಾಗೆ ಇವರು ಚಿಕ್ಕವರಿದ್ದಾಗಿನಿಂದಲೂ ಇವರ ತಾತನವರು ವರ್ಷಕ್ಕೊಮ್ಮೆ ಅಂದರೆ ಕಾರ್ತಿಕಮಾಸದ ಎರಡನೇ ವಾರದಲ್ಲಿ ನವೆಂಬರ್ ಹನ್ನೊಂದರ(೧೧)ರ ಆಸುಪಾಸಿನಲ್ಲಿ ಈಗ ಓಬವ್ವನ ಸಮಾಧಿ ಎಂದೇ ಗುರುತಿಸಲ್ಪಟ್ಟಿರುವ ಕಲ್ಲುಮಂಟಪವೆಲ್ಲಾ ಬಿದ್ದು ಹೋಗಿರುವ ಸ್ಥಳದಲ್ಲಿ ಹಾಲು ಹಾಕಿ ಹೋಗುತ್ತಿದ್ದರಂತೆ, ಅದು ಇಂದಿಗೂ ತಾವು ಜೀವಂತವಾಗಿ ಉಳಿಸಿಕೊಂಡು ಬರುತ್ತಿರುವುದಾಗಿ ತಿಳಿಸಿದರು. ಹಾಗೆಯೇ ಕುಂಚಿಗನಾಳು ಗುಡ್ಡಗಳ ಮಧ್ಯದಲ್ಲಿ ಕಹಳೆಯವನೊಬ್ಬನ ಸಮಾಧಿಯಿದ್ದು ಅದಕ್ಕೂ ನವೆಂಬರ್ ತಿಂಗಳಲ್ಲಿ ಪ್ರತೀವರ್ಷ ಹಾಲು ನೈವೇದ್ಯ ಮಾಡಿಕೊಂಡು ಬರುವುದಾಗಿ ತಿಳಿಸಿದರು. ವೀರಮದಕರಿ ನಾಯಕರು ಹೈದರನ ಸಂಚಿನ ದಾಳಿಗೆ ಬಲಿಯಾದರು ಎಂಬ ಸುದ್ದಿ ಹರಡುತ್ತಿದ್ದಂತೆ ಕರ್ನಾಟಕದ ಎಲ್ಲಾ ಸಂಸ್ಥಾನಿಕರನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಚಿತ್ರದುರ್ಗದ ಕೋಟೆಯನ್ನು ತನ್ನ ಕೈವಶ ಮಾಡಿಕೊಂಡ ಎಂಬ ಸುದ್ದಿ ಕೆಳದುರ್ಗದಿಂದ ಮೇಲುದುರ್ಗದವರೆಗೂ ಹರಡುತ್ತಿದ್ದಂತೆ ಅರಮನೆಯಲ್ಲಿದ್ದ ರಾಣೀ ವಾಸದವರೆಲ್ಲರೂ ಗೋಪಾಲಸ್ವಾಮಿ ಹೊಂಡದಲ್ಲಿ ಧುಮುಕಿ ಆತ್ಮಾರ್ಪಣೆ ಮಾಡಿಕೊಂಡರು. ಚಿನ್ಮೂಲಾದ್ರಿ ಗಿರಿಶಿಖರದ ಮೇಲೆ ಮೈಸೂರು ಸಂಸ್ಥಾನದ ಗಂಡಬೇರುಂಡ ಧ್ವಜವು ಹಾರಾಡಿತು. ನಾಯಕನ ಹನುಮ ಗರುಡಧ್ವಜವು ಸ್ಥಾನ ಕಳೆದುಕೊಂಡಿತು.[೭]

ಪ್ರಧಾನಿ ಕಳ್ಳಿನರಸಪ್ಪ, ಜಂಪಣ್ಣನಾಯಕ, ಕುತಬುದ್ದಿನ್‌ಖಾನ್, ಕುಂಭಿಪಾಲನಾಯಕ ಮೊದಲಾದವರ ಕುತಂತ್ರದಿಂದ ದುರ್ಗ ಹೈದರ್‌ನ ಪಾಲಾಯಿತು. ದುರ್ಗದ ಮಹಾದ್ವಾರಗಳಿಂದ ನುಗ್ಗಿದ ಶತ್ರುಗಳಿಗೆ ದುರ್ಗದ ಜನತೆ ಎದುರಾಗಿ ಕೈಗೆ ಸಿಕ್ಕ ದೊಣ್ಣೆ, ಕುಡುಗೋಲು, ಪೊರಕೆಗಳ ಸಹಿತ ಹೊಂಕರಿಸುತ್ತಾ ಹೋರಾಡಿದರು. ಚಿತ್ರದುರ್ಗದ ಪ್ರತೀ ಮಹಿಳೆಯೂ ವೀರವನಿತೆ ಓಬವ್ವೆಯಾದಳು. ದೊಡ್ಡಪೇಟೆ, ಚಿಕ್ಕಪೇಟೆ, ತ್ಯಾಗರಾಜ ಬೀದಿ, ಕರುವಿನಕಟ್ಟೆ, ಲಕ್ಷ್ಮೀಪೇಟೆಗಳಲ್ಲಿನ ದುರ್ಗದ ವನಿತೆಯರು ದುರ್ಗಾವತಾರ ತಾಳಿದರು. ಒನಕೆಯಿಂದಲೇ ಶತ್ರುಗಳನ್ನು ಹಣಿದರು. ಆದರೆ ಆಯುಧಪಾಣಿಗಳಾಗಿ ಸಹಸ್ರಾರು ಸಂಖ್ಯೆಯಲ್ಲಿ ಮುನ್ನುಗ್ಗುವ ಕಟುಕರ ಎದುರು ಅವರ ಶಕ್ತಿ

ಕ್ಷೀಣಿಸಿತು. ಹಾಗಾಗಿ ದುರ್ಗ ಸಂಪೂರ್ಣವಾಗಿ ತುರುಕರ ವಶವಾಯಿತು. ಇನ್ನು ಬತೇರಿ ಕಾಯುವ, ನಾಯಕನ ಬಲಗೈಯಂತಿದ್ದ ಹದಿಮೂರು ಗಡಿ ಕಹಳೆಯವರೆಂದೇ ಬಿರುದು ಪಡೆದಿದ್ದ ಕಹಳೆಯವರು ಸಹ ಹೈದರಾಲಿ ಸೈನಿಕರಿಗೆ ಹೆದರಿದರು. ಏಕೆಂದರೆ ತುರುಕರು ಮನೆಗೆ ನುಗ್ಗಿ ದೋಚಿ ಸಾಯಿಸಿ ಹೋಗುತ್ತಾರೆ ಎಂಬ ವದಂತಿಗೆ ಹೆದರಿ ಎಲ್ಲರೂ ಒಂದುಗೂಡಿ ಅಲ್ಲಿಂದ ಪಲಾಯನ ಮಾಡುವಾಗ ಕುಂಚಿಗನಾಳು ಬೆಟ್ಟಗಳ ಮರೆಯಲ್ಲಿ ಎಲ್ಲರೂ ಒಂದುಗೂಡಿ ಮತ್ತೆಲ್ಲಿಗೆ ಪ್ರಯಾಣ ಬೆಳೆಸುವುದೆಂದು ತೀರ್ಮಾನಿಸಲು ಅಲ್ಲಿಗೆ ಹೋದರು.

ಹಾಗೆಯೇ ಒಬ್ಬೊಬ್ಬರಾಗಿ ಬಂದು ಅವಿತು ಕುಳಿತು ಇನ್ನು ಮೂರುನಾಲ್ಕು ಕಹಳೆಯವರ ಬರುವಿಕೆಗಾಗಿ ಕಾದು ಕುಳಿತಿದ್ದಾಗ ಇವರ ರಹಸ್ಯ ಸೇರುವಿಕೆಯನ್ನು ಪತ್ತೆ ಹಚ್ಚಿದ ಹೈದರಾಲಿ ಸೈನಿಕರು ಹಿಂಬಾಲಿಸಿಕೊಂಡು ಬಂದು ಮೇಲೆರಗಿದಾಗ ಕಹಳೆಯವರು ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಬಾಲಪ್ಪ ಎಂಬುವವರು ಅಲ್ಲಿಯೇ ಮರಣಿಸಿದ್ದು, ಅವರ ಸಮಾದಿ ಈಗಲೂ ಅಲ್ಲಿಯೇ ಇರುವುದಾಗಿ, ಆ ಸಮಾಧಿಗೂ ಸಹ ಪ್ರತೀವರ್ಷ ಹಾಲಿನ ನೈವೇದ್ಯ ಮಾಡಿಕೊಂಡು ಬರುತ್ತಿದ್ದುದ್ದಾಗಿ ತಿಳಿಸಿದ್ದಾರೆ. (ಕ್ಷೇತ್ರಕಾರ್ಯದಲ್ಲಿ ಆ ಸ್ಥಳಕ್ಕೆ ಭೇಟಿನೀಡಲಾಗಿದೆ)

ಹೀಗೆ ಕಹಳೆಯವರೆಲ್ಲಾ ದಿಕ್ಕು ಪಾಲಾಗಿ ಬದುಕನ್ನು ಸಾಗಿಸಲು ಚಿತ್ರದುರ್ಗ ಜಿಲ್ಲೆಯಾದ್ಯಂತ ಚದುರಿ ಹೋಗಿದ್ದಾರೆ. ತಪ್ಪಿಸಿಕೊಂಡು ಹೋಗುವ ಸಮಯದಲ್ಲಿ ಅರಮನೆಯಲ್ಲಿ ತಾವು ಬಳಸುತ್ತಿದ್ದ ಕಹಳೆಗಳು ಇನಾಮಾಗಿ ಬಂದ ನಾಣ್ಯಗಳು, ನಾಯಕ ಓಬವ್ವನಿಗಾಗಿ ನೀಡಿದ್ದ ಜಹಗೀರು ಪತ್ರಗಳು ಹಾಗೂ ನಾಯಕ ಓಬವ್ವನಿಗಾಗಿ ನೀಡಿದ್ದ ಕಾಣಿಕೆ ಅದರೊಳಗಿನ ಮೂರ್ತಿಗಳು, ಹೀಗೆ ಹಲವಾರು ವಸ್ತುಗಳನ್ನು ತೆಗೆದುಕೊಂಡು ಹೋದರು ಎನ್ನಲಾಗಿದೆ.

ಹಾಗೆಯೇ ವಂಶಪಾರಂಪರ್ಯವಾಗಿ ಉಳಿಸಿಕೊಂಡಿರುವ ಹಿರಿಯರ ಆಸ್ತಿಯಾಗಿ ಉಳಿಸಿಕೊಂಡ ಕಹಳೆಗಳನ್ನು, ನಾಯಕ ವಂಶದವರು ನೀಡಿದ ಪತ್ರವನ್ನು ತೋರಿಸಿದರು. (ಕ್ಷೇತ್ರ ಕಾರ್ಯದಲ್ಲಿ) ಒನಕೆ ಓಬವ್ವನ ದೇವಸ್ಥಾನದಲ್ಲಿ ಕೆಲವಾರು ಮೂರ್ತಿಗಳು ಕೇಲ ಮೊದಲಾದವನ್ನು ಜತನವಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಹೀಗೆ ನೆಡೆಸಿಕೊಂಡು ಹೋದ ಬದುಕಿನ ಜೊತೆ ಸಾಗುತ್ತಾ ಬಂದಿರುವ ಕಹಳೆಯರು ತಮ್ಮ ಕುಲದೇವತೆಯ ಸಮಾಧಿ ಪೂಜೆಗೆ ತಪ್ಪದೇ ತಾವು ಎಲ್ಲರೂ ಭಾಗವಹಿಸಿ ತಮ್ಮ ಭಕ್ತಿಯನ್ನು, ಐಕ್ಯತೆಯನ್ನು ತಮ್ಮ ಪಾಲ್ಗೊಳ್ಳುವಿಕೆಯ ಮೂಲಕ ವ್ಯಕ್ತಪಡಿಸುತ್ತಾರೆ. ಕೋಟೆಯನ್ನು ಅದರ ವಿಸ್ತಾರವನ್ನು ವೀಕ್ಷಿಸುತ್ತಾ ಬಂದಾಗ ಬತೇರಿ ಕಾಣಿಸುತ್ತದೆ.ಕಹಳೆ ಊದುತ್ತಿದ್ದ ಎತ್ತರವಾದ ಸ್ಥಳಬತೇರಿ, ಅದರ ಹಿಂಭಾಗದಲ್ಲಿ ಇಳಿಜಾರಾದ ಸ್ಥಳವಿದ್ದು ಅಲ್ಲಿಯೇ ಗವಿಯಾಕಾರದಲ್ಲಿ ಓಬವ್ವ ಮದ್ದಹನುಮಪ್ಪರ ಮನೆಯಿದ್ದು, ಪಕ್ಕದಲ್ಲಿ ಕಲ್ಲಿನಲ್ಲಿ ಕೆತ್ತಿದ್ದ ಹನುಮದೇವರ ಮೂರ್ತಿಯು ಇದ್ದು, ಎದುರುಗಡೆ ತಣ್ಣೀರು ದೋಣಿಯಿದೆ. ಇಲ್ಲಿ ಸದಾಕಾಲ ತಂಪಾದ ನೀರು ಹರಿಯುತ್ತಿದೆ.ಅದ್ದರಿಂದ ಇದಕ್ಕೆ ತಣ್ಣೀರು ದೋಣಿಯೆಂದೇ ಹೆಸರಿದೆ. ಓಬವ್ವನ ಗವಿಯಾಕಾರದ ಬೃಹತ್ ಬಂಡೆಗಳ ಮನೆಯ ಪಕ್ಕದಲ್ಲಿಯೇ ಎತ್ತರವಾದ ಸ್ಥಳವಿದ್ದು ಅಲ್ಲಿ ಓಬವ್ವನ ಸಮಾಧಿಯಿದೆ.[೮]

ಕಲ್ಲಿನ ಮಂಟಪ ಬಿದ್ದು ಹೋದ ಸ್ಥಿತಿಯಲ್ಲಿದ್ದು ಸಮಾಧಿಯ ಸುತ್ತಗಿಡ ಮರಗಳು ಬೆಳೆದು ಗುರುತು ಸಿಗದ ಹಾಗೆ ಇರುವ ಈ ಸ್ಥಳವನ್ನು ಹೇಗೆ ಇದೆಯೋ ಹಾಗೆ ಅದನ್ನು ಸ್ವಚ್ಚಗೊಳಿಸಿ ಪ್ರತೀವರ್ಷವೂ ತಪ್ಪದೆ ಪೂಜಿಸಿಕೊಂಡು ಬರುತ್ತಿದ್ದಾರೆ ವಂಶೀಕರು ಮತ್ತುಸಂಬಂಧಿಕರು.

ಈ ನಂಬಿಕೆಗಳು, ಪದ್ಧತಿಗಳು, ನಿಯಮಗಳು ಮತ್ತು ಸಂಸ್ಥೆಗಳ ರೂಪದಲ್ಲಿ ಮಾನವೀಯ ಮೌಲ್ಯಗಳನ್ನು ಸಂರಕ್ಷಿಸುವ ಸಾಂಸ್ಕೃತಿಕ ವಿಧಿಗಳೆಂದೇ ಹೇಳಬೇಕು ತಮ್ಮದೇ ಆದ ಸಾಂಸ್ಕೃತಿಕ ಪರಂಪರೆಯನ್ನು ತಮ್ಮ ಬೆನ್ನ ಹಿಂದೆಯೇ ಉಳಿಸಿಕೊಂಡು ಬಂದಿದ್ದಾರೆ ಓಬವ್ವನ ವಂಶಸ್ಥರು. ತಲತಲಾಂತರದಿಂದ ತಮ್ಮ ಜೀವನದಲ್ಲಿ ಬೇರುಬಿಟ್ಟು ಅವರ ಬದುಕಿನ ಅನಿವಾರ್ಯ ಅಂಗವಾಗಿ ಈ ಪೂಜಾ ಸಮಾರಾಧನೆಗಳು ಉಳಿದುಕೊಂಡು ಬಂದಿವೆ. ಒಂದೊಂದು ಆಚರಣೆಯು ಓಬವ್ವನ ಜೀವನಗಾಥೆಯನ್ನು ಹೇಳುತ್ತವೆ ಸಂಸ್ಕೃತಿಯ ನೆಲೆಯನ್ನು ತಿಳಿಸುತ್ತವೆ.ಆಕೆಯ ವೀರಗಾಥೆಯನ್ನು ಸಾರುತ್ತವೆ.

ಹಿರಿಯರು ಬದುಕಿದ ರೀತಿಯನ್ನು, ಅವರ ಬದುಕಿನ ಜೀವನವನ್ನು ತಿಳಿಸುತ್ತವೆ ಈ ಆಚರಣೆಗಳು. ಅವರ ಬದುಕಿನ ಹೆಜ್ಜೆಗುರುತುಗಳಾಗಿವೆ. ಪ್ರತೀವರ್ಷವೂ ಸಮಾಧಿ ಪೂಜೆಯನ್ನು ಆಕೆಯನ್ನು ನೆನಪಿಸಿಕೊಂಡು ಆಕೆ ತಮ್ಮವಳು ಎಂಬ ಸದ್ಭಾವನೆಯಿಂದ ಸಡಗರದಿಂದ ಅಚರಿಸುತ್ತಾರೆ. ಛಲವಾದಿ ಮಹಾಸಂಸ್ಥಾನದ ಬಸವನಾಗಿ ದೇವಶರಣರು ಬಂದ ಮೇಲೆ ಸಮುದಾಯದವರು ತಮ್ಮ ಕುಲದೇವತೆಯನ್ನು ಇತಿಹಾಸದ ಪುಟಗಳಲ್ಲಿ ತರಲು ಪ್ರಯತ್ನಿಸುತ್ತಿದ್ದಾರೆ. ಹಾಗೆಯೇ ಪ್ರಭುತ್ವದ ಮೊರೆಯೂ ಹೋಗುತ್ತಿದ್ದಾರೆ. ಚಿತ್ರದುರ್ಗದ ಐತಿಹಾಸಿಕ ಮಹಿಳೆಯರ ಕ್ಷ-ಕಿರಣದೊಳಗೆ ಓಬವ್ವೆಯ ಸೇರ್ಪಡೆಗೆ ಕಂಕಣಬದ್ದರಾಗಿದ್ದಾರೆ. ಚಿತ್ರದುರ್ಗದ ಇತಿಹಾಸದಲ್ಲಿ ಗಟ್ಟಿ ಸ್ಥಾನ ಪಡೆದಾಕೆ, ಓಬವ್ವ ಎಂದರೆ ಚಿತ್ರದುರ್ಗ ಎಂದು ಚಿಕ್ಕ ಮಕ್ಕಳಿಗೂ ಗೊತ್ತಾಗಿ ಬಿಡುತ್ತದೆ ಎನ್ನುತ್ತಾರೆ ಶ್ರೀಮತಿ ಟಿ. ಗಿರಿಜಾರವರು. ಆದರೆ ಅವರು ಈಗ ಇಲ್ಲ.

ಸಮಾಧಿ ಪೂಜೆಯಂದು ವಂಶೀಕರೆಲ್ಲಾ ತಮ್ಮ ತಮ್ಮ ಮನೆಗಳಿಂದಲೇ ಸಿಹಿ ಅಡುಗೆಯನ್ನು ಮಾಡಿಕೊಂಡು ಪೂಜಾ ಸಾಮಾನುಗಳನ್ನು ತೆಗೆದುಕೊಂಡು ಬಂದು ಸಮಾಧಿಯ ಮುಂಭಾಗದಲ್ಲಿ ಅನತಿದೂರದಲ್ಲಿರುವ ತಣ್ಣೀರು ಚಿಲುಮೆಯ ಬಳಿ ಹರಿಯುತ್ತಿರುವ ನೀರಿಗೆ ಗಂಗಾಪೂಜೆಯನ್ನು ಮಾಡುವರು. ಅಕ್ಕಿಯ ತಂಬಿಟ್ಟನ್ನು ಮಾಡಿಕೊಂಡು ಬಂದಿದ್ದು, ಗಂಗಾಪೂಜೆಗೆ ಬೇಕಾದ ಕಂಕಣ, ಕುಬುಸ, ಬಾಳೆಹಣ್ಣು, ನೈವೇದ್ಯ, ಬಳೆ ಮೊದಲಾದ ಮಂಗಳ ವಸ್ತುಗಳನ್ನು ತಮ್ಮ ತಮ್ಮ ಮನೆಗಳಿಂದಲೇ ತಂದಿದ್ದು, ಮೂರು ಕಲ್ಲಿನ ಬೆನಪ್ಪಗಳನ್ನು ಮಾಡಿ, ಮಂಗಳ ಪದಾರ್ಥಗಳನ್ನು ಬಳಸಿಕೊಂಡು ಗಂಗಾಪೂಜೆಯನ್ನು ಮಾಡಿ ತಮ್ಮಲ್ಲಿಯ ಮನೆತನಕ್ಕೆ ಸೇರಿದ ಹಿರೀ ಸೊಸೆಗೆ ಮೊದಲು ಅರಿಶಿಣ ಕುಂಕುಮದೊಂದಿಗೆ ಪೂಜೆಯ ಮೊದಲ ಕಂಕಣವನ್ನು ಆಕೆಯ ಕೈಗೆ ಕಟ್ಟಿದ ನಂತರ ಉಳಿದವರು ಎಲ್ಲರೂ ಪರಸ್ಪರ ಕಂಕಣ ಕಟ್ಟಿಕೊಂಡು ಹಣ್ಣು, ಎಲೆ-ಅಡಿಕೆಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ನಂತರ ಸಮಾಧಿಯ ಬಳಿ ಬಂದು ಪೂಜಾ

ಕಾರ್ಯವನ್ನು ನಿರ್ವಹಿಸಿ ನೈವೇದ್ಯ ಅರ್ಪಿಸುತ್ತಾರೆ. ಪೂಜಾ ಕಾರ್ಯಕ್ಕೆ ಛಲವಾದಿ ಸಮುದಾಯದ ಗುರುಸ್ಥಾನದಲ್ಲಿರುವ ಬಸವನಾಗಿ ದೇವರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುವರು. ನಂತರ ಅಲ್ಲಿಯೇ ಕುಳಿತು ವಿಶ್ರಮಿಸಿ ತಮ್ಮ ಹಿರಿಯರ ನಿಷ್ಠೆಯನ್ನು, ನಾಯಕರ ಉದಾತ್ತ ಗುಣವನ್ನು ಮನದಲ್ಲೇ ಶ್ಲಾಘಿಸುತ್ತಾ ಇತಿಹಾಸದ ಪುಟಗಳಲ್ಲಿ ಮರೆತುಹೋದ ಮಾಣಿಕ್ಯದಂತಿರುವ ತಮ್ಮ ಕುಲದೇವತೆಯಾದ ವೀರ ವನಿತೆ ಓಬವ್ವನನ್ನು ನೆನೆದು ನಂತರ ತಾವು ಮನೆಯಿಂದ ಮಾಡಿಕೊಂಡು ಬಂದಿರುವ ಸಿಹಿ ಅಡುಗೆಯನ್ನು ಎಲ್ಲರೂ ಸಂತಸದಿಂದ, ಧನ್ಯತೆಯ ಭಾವನೆಯಿಂದ ಹಂಚಿಕೊಂಡು ತಿಂದು ತಮ್ಮ ತಮ್ಮ ಮನೆಗಳಿಗೆ ಹೊರಡುವರು. ಒಟ್ಟಿನಲ್ಲಿ ತಮ್ಮ ಕುಲದೇವತೆಯ ಸಮಾದಿಪೂಜೆಯನ್ನು ಆ ಸಮುದಾಯದವರು ತಪ್ಪದೇ ಆಚರಿಸಿಕೊಂಡು ಬರುತ್ತಿರುವುದು ಸಂತಸದ ಸಂಗತಿ.

ಪ್ರತೀವರ್ಷ ಕಾರ್ತೀಕಮಾಸದಲ್ಲಿ ನವಂಬರ್ ೧೧ರಂದು ತಮ್ಮ ಕುಲದೇವತೆಯ ಸಮಾಧಿಪೂಜೆಯನ್ನು ಮಾಡುವರು. ಪರಿಶಿಷ್ಟ ಜಾತಿಯಲ್ಲಿ ಒಂದಾದ ಛಲವಾದಿ ಜನಾಂಗಕ್ಕೆ ಸೇರಿದ ಓರ್ವ ಮಹಿಳೆಯ ಸ್ವಾಮಿಭಕ್ತಿ, ಸ್ವಾಭಿಮಾನ ಮತ್ತು ದೇಶಾಭಿಮಾನ ಬಹುಶಃ ವಿವರಿಸಲಸದಳವಾದುದು. ಕರ್ನಾಟಕ ಚರಿತ್ರೆಯಲ್ಲಿ ಸವಿವರವಾಗಿ ಚಿತ್ರಿಸಲು ನಮ್ಮ ಪ್ರಾಜ್ಞರು ಜಿಜ್ಞಾಸೆಗೊಳಪಟ್ಟಿರಬೇಕು. ಓಬವ್ವನ ಸ್ಥಿತಪ್ರಜ್ಞತೆ ಎಷ್ಟು ಜನರಿಗಿದೆಯೆಂಬುದು ಎಣಿಕೆಗೆ ಬಿಟ್ಟದ್ದು. ನಾಡಿನ ಸೇವೆಯೆಂದರೆ ಏನು ಎಂಬುದನ್ನು ಮೌನವಾಗಿ ತೋರಿಸಿದವಳು. ಆದರೆ ಆಕೆಗೆ ಸೂಕ್ತ ಸ್ಥಾನ ಮಾನಗಳು ಸಿಗದೇ ಹೋಗಿರುವುದು ಖೇದಕರವಾದುದು.

ಹರಿತಿಯ ವೀರ ನಾಯಕರು **'ದುರ್ಗದ ಸಿಂಹಿಣಿ ಓಬವ್ವ'** ಎಂಬ ನಾಟಕ ಕೃತಿಯನ್ನು ೧೯೮೨ ರಲ್ಲಿ ರಚಿಸಿದ್ದಾರೆ. ಅಲ್ಲಿ ನಾಯಕ ಸಾಮ್ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದ ವಿವಿಧ ಜನಾಂಗಗಳು, ಅವರ ನಂಬಿಕೆ, ಬಂಟತನ, ಸೈನ್ಯದ ಮುಂಚೂಣಿಯಲ್ಲಿರುತ್ತಿದ್ದ ರಣಕಹಳೆಯವರ ಬಗ್ಗೆ ಬರೆದಿದ್ದು, ಚಿತ್ರದುರ್ಗದ ಇತಿಹಾಸದಲ್ಲಿ ಹೆಸರು ಮಾಡಿದ ಒನಕೆ ಓಬವ್ವನನ್ನು ಕುರಿತು ಈ ಕೃತಿಯನ್ನು ರಚಿಸಿ ಚಿತ್ರದುರ್ಗದ ಇತಿಹಾಸದಲ್ಲಿ ಗಟ್ಟಿಗ ಸ್ಥಾನ ಪಡೆದ ಓಬವ್ವಳಿಗೆ ಸಮ್ಮಾನ ಸಲ್ಲಿದೆ ಇದರಿಂದ ಎನ್ನಬಹುದು.

ಕರ್ನಾಟಕ ದೇಶದಲ್ಲಿ ತನ್ನ ಪರಂಪರೆಯನ್ನು ನೀಡಿದ ಐತಿಹಾಸಿಕ ತಾಣಗಳು ಮತ್ತು ಪ್ರಕೃತಿದತ್ತವಾದ ಸುಂದರ ತಾಣಗಳು ಈ ನಾಡಿನ ಆಸ್ತಿಯಾಗಿ, ಹತ್ತು ಹಲವಾರು ನೂರಾರು ಕಥೆಗಳಲ್ಲಿ ಪ್ರವಾಸಿ ಕೇಂದ್ರಗಳಾಗಿ ಜನಸಾಮಾನ್ಯರನ್ನು, ಸಂಸ್ಕೃತಿ–ಅಧ್ಯಯನಕಾರರನ್ನು, ಪ್ರವಾಸಿಗರನ್ನು ಎತ್ತಣಿಂದಲೂ ಆಕರ್ಷಿಸುತ್ತಾ ಬಂದಿದೆ. ಇಂಥಹ ಇತಿಹಾಸದಲ್ಲಿ ತನ್ನ ಕೆಂಪುರಕ್ತವನ್ನು ಸುರಿಸಿದ ಚಿತ್ರದುರ್ಗದ ಕೋಟೆಯ ವೀರರಮಣಿ ಓಬವ್ವ, ಚಿತ್ರದುರ್ಗದ ಇತಿಹಾಸದಲ್ಲಿ ತನ್ನದೇ ಛಾಪು ಮೂಡಿಸಿದ್ದಾಳೆ.

ಪ್ರಭುತ್ವ ವರ್ಗದವರ ಮಹಿಳೆಯರು ಸ್ವತಂತ್ರ ರಾಜ್ಯಾಡಳಿತ ನೆಡೆಸುವಲ್ಲಿ ತಮ್ಮ ಅಮೂಲ್ಯ ಅಗ್ಗಳಿಕೆಯನ್ನು, ಮೆರೆದಿರುವುದುಂಟು. ನೃತ್ಯ, ಲಲಿತಕಲೆಗಳಂತಹ ಕಲೆಗಳ ಕಲಾವಿದರಾಗಿ, ಕಲಾಭಿವೃದ್ಧಿ, ಲಲಿತಕಲೆಗಳ ಉದ್ಧಾರಕ್ಕಾಗಿ ಶ್ರಮಿಸಿದವರು ಇನ್ನು ಕೆಲವರು. ಹಾಗೆಯೇ ದೇವಸ್ಥಾನ, ಅಗ್ರಹಾರ ಕೆರೆ, ಘಟಿಕಾ ಸ್ನಾನಗಳ ಮೂಲಕ ಶ್ರಮಿಸಿ, ಸಾಮಾಜಿಕ ಕಾರ್ಯಕರ್ತೆಯಾಗಿರುವವರು ಕೆಲವರು, ಇನ್ನು ಕೆಲ ಮಹಿಳೆಯರು ಆಳುವ ಸಾಮ್ರಾಜ್ಯಗಳ ಅಳಿವು ಉಳಿವಿನ ಶಕ್ತಿಗಳಾಗಿ, ರಾಜ್ಯದ ಸೂತ್ರವನ್ನು ಕೈಲಿಡಿದು, ಸಂದರ್ಭ ಬಂದಾಗ ತಾವೇ ಕೈಯ್ಯಲ್ಲಿ ಖಡ್ಗ ಹಿಡಿದು, ಶತ್ರುವಿನ ರುಂಡ ಚೆಂಡಾಡಿದ ವೀರ ಮಹಿಳಾಮಣಿಗಳು ಕಂಡು ಬಂದಿದ್ದಾರೆ.ಆದರೆ ಓಬವ್ವನ ವಂಶಸ್ಥರು ಎಂದೆ ಗುರುತಿಸಿಕೊಡಿರುವ ಶ್ರೀಯುತ ಹನುಮಂತಪ್ಪ ನಿವೃತ್ತ ದೆಫೇದಾರ್‌ರವರು ಹೇಳುವಂತೆ ಸಂಪೂರ್ಣ ಸೈನ್ಯದ ಬಲದಿಂದ ಹೋರಾಡಿ ಗೆದ್ದು ಇತಿಹಾಸದಲ್ಲಿ ಹೆಸರು ಬರೆಯಿಸಿಕೊಂಡ ವೀರರ ಮುಂದೆ ತಮ್ಮ ಕುಲದೇವತೆ ಓಬವ್ವ ಒಂದು ಪರ್ವತವಿದ್ದಂತೆ ಎಂದಿದ್ದಾರೆ

ನಾಯಕ ಪ್ರಭುತ್ವದಲ್ಲಿ ತಮ್ಮವರು ಸಲ್ಲಿಸುತ್ತಿದ್ದ ವೀರ ಕಹಳೆಯವರ ಕಾರ್ಯವನ್ನು ನೆನೆಯುತ್ತಾ ಹಿರಿಯರಿಂದಲೇ ಬಳುವಳಿಯಾಗಿ, ಆಸ್ತಿಯಾಗಿ ಬಂದಿರುವ ಹಳೆಯ ಕಹಳೆಯೊಂದನ್ನು ತೋರಿಸಿ ಇದನ್ನು ಇಂದಿಗೂ ತಮ್ಮ ಹಿರಿಯರ ಕುಲದೈವವಾದ ಕಹಳೆಯನ್ನು ಓಬವ್ವನ ಉತ್ಸವಗಳಲ್ಲಿ ತಾವು ಊದುವುದಾಗಿ ತೋರಿಸಿದರು. ಆದರೆ ಅದು ಸುಮಾರು ವರ್ಷಗಳಷ್ಟು ಹಳೆಯದಾಗಿದ್ದು ಕಹಳೆಯ ಮಧ್ಯಭಾಗದಲ್ಲಿ ಬಿರುಕು ಬಿಟ್ಟಿದ್ದು ಅದು ಈ ಕಡೆ ಎಲ್ಲಿಯೂ ರಿಪೇರಿ ಮಾಡಲು ಬರದ ಕಾರಣ ಬೆಳಗಾವಿ ಹತ್ತಿರದ ಕಿತ್ತಲ್ಲಿ ಎಂಬ ಗ್ರಾಮದಲ್ಲಿ ಲೋಹದ ಬೆಸುಗೆ ಹಾಕಿಸಿಕೊಂಡು ಬಂದಿರುವುದಾಗಿ ತಿಳಿಸಿದರು. ಏಕೆಂದರೆ ಆಗಿನ ಕಂಚಿಗು ಈಗಿನ ಕಂಚಿಗೂ ಅಜಗಜಾಂತರ ವ್ಯತ್ಯಾಸ ಇರುವುದು ಇಲ್ಲಿ ಗಮನಾರ್ಹ. ಟಿಂಕರಿಂಗ್(ಲೋಹದ ಬೆಸುಗೆ) ಮಾಡಲು ಈಗಿನ ಲೋಹ ಅನುಪಯುಕ್ತ ಎಂಬುದು ವೇದ್ಯವಾಗುತ್ತದೆ. ಅಲ್ಲದೇ ಆ ಕಹಳೆ ಆಗಿನ ಕಾಲಕ್ಕೆ ಸಂಬಂಧಿಸಿದುದು ಎನ್ನುವುದರಲ್ಲಿ ಸಂದೇಹವಿಲ್ಲ. ಅಗಲಿದ ಜೀವಿಗಳಿಗೆ ಭಕ್ತಿ ಗೌರವವನ್ನು ವ್ಯಕ್ತಪಡಿಸುವುದು ವಿಶೇಷವೇನೂ ಅಲ್ಲ. ಆದರೆ ಸಮಾಧಿ ಪೂಜೆಯು ಮಾತ್ರ ಶರೀರಗಳ ಅವಶೇಷಗಳ ಆವಾಸವಾಗಿದ್ದು, ಪಿತೃಗಳ ಪೂಜೆಯಲ್ಲಿ ಈ ಪೂಜೆಗೆ ಅಗ್ರ ಸ್ಥಾನವಿರುತ್ತದೆ. ಗತದ ಚರಿತ್ರೆಯ ಈ ದನಿಗಳು ನಮಗೆ ಅನುಕರಣೀಯ ಶಾಪಗ್ರಸ್ಥ ಅಹಲ್ಯೆಯ ತುಣುಕಿನಂತೆ ಓಬವ್ವನ ಸಮಾಧಿಯು ಶಾಪ ವಿಮೋಚನೆಗಾಗಿ ಕಾಯುತ್ತಿದೆಯೇನೋ ಅನಿಸುತ್ತಿದೆ. ಏಕೆಂದರೆ ಅದಕ್ಕೆ ಯಾವುದೇ ಅಧಿಕೃತ ಮುದ್ರೆಯಿಲ್ಲ. (ಕ್ಷೇತ್ರ ಕಾರ್ಯದಲ್ಲಿ ತಿಳಿದುಬಂದಿದ್ದು) ಮೌಲ್ಯವು ಬದಲಾದಂತೆಲ್ಲಾ ಸಂಪ್ರದಾಯದ ಆಚರಣೆಗಳಲ್ಲಿ ವ್ಯತ್ಯಾಸವುಂಟಾಗಬಹುದಷ್ಟೇ ಅವು ಬದಲಾದರೂ ಅಸ್ತಿತ್ವದಲ್ಲಿರುತ್ತವೆ. ಅದನ್ನು ರಕ್ಷಿಸುವ ಹಿತಾಸಕ್ತಿಗಳು ಅವುಗಳ ರಕ್ಷಣೆಗೆ ನಿಲ್ಲುತ್ತವೆ. ಹಾಗೆಯೇ ಓಬವ್ವನ ಸಂಬಂಧಿಕರು, ನೆಂಟರಿಷ್ಟರು ಅಂದು ಒಂದೆಡೆ ಸೇರಿ ಹೆಮ್ಮೆಯಿಂದ ಸಮಾಧಿ ಪೂಜೆ

ಮಾಡುತ್ತಾರೆ. ನೆಂಟರಿಷ್ಟರು, ಬಂಧು-ಬಳಗದವರು ಒಂದೆಡ ಸೇರಿದಾಗ ಮೈತ್ರಿ ಹಿಗ್ಗುತ್ತದೆ. ಭಾವನಾತ್ಮಕತೆ ಕುಸುಮಿಸುತ್ತದೆ. ವಿಚಾರ ವಿನಿಮಯ ಸುಲಭವಾಗುತ್ತದೆ. "ಬಂಧುಗಳ ದರ್ಶನ ಫಲವಲಾ ಸಂಸಾರ ತರುವಿಂಗೆ" ಎಂಬ ಸುಭಾಷಿತವಿದೆ. ಇಂತಹ ನೆರೆಯುವ ಸಮೂಹ ವಿಚಾರ ಗೋಷ್ಠಿಗಳಿಗೆ ಕಾರಣವಾಗುತ್ತವೆ. ಜನಜೀವನಕ್ಕೆ ಸಂಬಂಧಿಸಿದ ಸಮಸ್ತ ವಿಚಾರಗಳ ಚರ್ಚೆ ಅಲ್ಲಿ ನಡೆಯುತ್ತದೆ.

ಸಾಂಸ್ಕೃತಿಕ ಸಂವರ್ಧನೆ ಹಾಗೂ ಸಂರಕ್ಷಣೆಗಳು ಅಲ್ಲಿ ಒತ್ತು ಪಡೆಯುತ್ತವೆ. ಸಂಬಂಧಗಳ ನಿಕಟತೆ ಬೆಳೆಯುತ್ತದೆ. ಇವು ಜನತಾ ಮಾಧ್ಯಮಗಳೂ ಆಗುತ್ತವೆ. ಇಲ್ಲಿ ನಾಡಭಕ್ತಿ ಕೊನರುತ್ತದೆ. ಐಕ್ಯತಾ ಭಾವನೆ ಹೆಚ್ಚಿಸುವ ಸಮಾಗಮವೂ ಹೌದು.

ಅಡಿ ಟಿಪ್ಪಣಿಗಳು

೧. ದೇ.ಜ.ಗೌ., ಜನಪದ ಮಹಾ ಸಂಪುಟ, ಪುಟ ಸಂಖ್ಯೆ-೬೫, ೧೧೫, ೩೬೪

೨. ಡಾ. ಶಶಿಕಲಾ ಶಿವಶಂಕರ್, ವಚನಕಾರ್ತಿಯರು: ಮಹಿಳಾ ಸಂವೇದನೆ, ೧೯೭೯,ಪುಟ ಸಂಖ್ಯೆ-೧೨, ೧೬

೩. ಡಾ. ಹಿ.ಚಿ. ಬೋರಲಿಂಗಯ್ಯ, ಕುವೆಂಪು: ಮಹಿಳಾ ಮಂಥನ, ೨೦೧೦, ಪುಟ ಸಂಖ್ಯೆ-೬೧.

೪. ಡಾ. ಜಿ. ಕೃಷ್ಣಪ್ಪ, ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ, ೨೦೧೦, ಪುಟ ಸಂಖ್ಯೆ-೧೨, ೧೭, ೬೯

೫. ವಕ್ತೃಗಳು, ಬಸವ ನಾಗೀದೇವರು, ಛಲವಾದಿ ಮಹಾ ಸಂಸ್ಥಾನ ಚಿತ್ರದುರ್ಗ

೬. ವಕ್ತೃಗಳು, ನಾಗೇಂದ್ರರಾವ್‌ರವರ ಪತ್ನಿ ಜಯ್ಯಮ್ಮ ನವರು, ದೊಡ್ಡಸಿದ್ದವ್ವನಹಳ್ಳಿ

೭. ತ.ರಾ.ಸು., ದುರ್ಗಾಸ್ತಮಾನ, ಪುಟ ಸಂಖ್ಯೆ-೨೭೫

೮. ವಕ್ತೃಗಳು, ನರಸಿಂಹಪ್ಪರವರು, ಸೊಂಡೇಕೆರೆ, ಹಿರಿಯೂರು ತಾಲೂಕ

೯. ಟಿ. ಗಿರಿಜಾ, ಚಿತ್ರದುರ್ಗದ ಇತಿಹಾಸದಲ್ಲಿ ಮಹಿಳೆಯರು: ದುರ್ಗದ ಮಹಿಳೆಯರು, ೨೦೧೩, ಪುಟ ಸಂಖ್ಯೆ-೬೫.

ಅಧ್ಯಾಯ : ೭

ವಿದ್ವಾಂಸರ ದೃಷ್ಟಿಕೋನ ಮತ್ತು ಓಬವ್ವ

ಅಧ್ಯಾಯ : ಏಳು

ವಿದ್ವಾಂಸರ ದೃಷ್ಟಿಕೋನ ಮತ್ತು ಓಬವ್ವ

ಚರಿತ್ರೆಗೆ ಸಾಕ್ಷಿಯೇ ಮುಖ್ಯ ಎನ್ನುವ ನಿಯಮವಿದೆ. ಸಾಕ್ಷಿ ಇಲ್ಲದ್ದು ಚರಿತ್ರೆಯಾಗಲಾರದು ಎಂಬುದನ್ನು ಆ ನಿಯಮ ಧ್ವನಿಸುತ್ತದೆ. ಆದರೆ ಚರಿತ್ರೆಗೆ ಕಾರಣವಾದ ಸಂದರ್ಭಗಳಿಗೆ ಮತ್ತು ಸಮುದಾಯಗಳಿಗೆ ಸಾಕ್ಷಿ ದೊರೆಯುವುದಿಲ್ಲ. ಈ ಮಾತು ಕೆಲವೊಮ್ಮೆ ಅಮೂರ್ತವಾಗಿ ಕಾಣುತ್ತದೆ. ಏಕೆಂದರೆ ರಾಜ ಅರಮನೆಯನ್ನು ಕಟ್ಟಿಸಿದ, ಸಾಮ್ರಾಜ್ಯಗಳನ್ನು ಸದೆಬಡಿದು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದ ಎಂದು ಹೇಳುವುದು ಚರಿತ್ರೆಯೆ ಸರಿ. ಆದರೆ ರಾಜನಾದವನು ನಿಜವಾಗಿಯೂ ಯುದ್ಧ ಮಾಡಿದ್ದಾನೆಯೆ ಎಂದು ಖಚಿತಪಡಿಸಿಕೊಳ್ಳಲು ಅನ್ಯ ಸಾಕ್ಷಿಗಳು ಸಿಗದೇ ಹೋಗಬಹುದು. ಹಾಗಾಗಿ ಚರಿತ್ರೆಗೆ ಇಲ್ಲಿ ವಸ್ತುನಿಷ್ಠತೆ ಮುಖ್ಯವಾಗಿ, ವಸ್ತುನಿಷ್ಠತೆ ಒಳಗಿನ ವಾಸ್ತವ ಏನೆಂಬುದು ಮುಖ್ಯವಲ್ಲ. ವಸ್ತುನಿಷ್ಠತೆಯ ಆಚೆಗಿನ ಭಾವನಿಷ್ಠತೆಯು ಚರಿತ್ರೆಯಾಗಬಲ್ಲದು ಎನ್ನುವುದಕ್ಕೆ ಅಪವಾದ ಓಬವ್ವನ ಚರಿತೆ. ಏಕೆಂದರೆ ಹೈದರನ ಕಪಿಮುಷ್ಠಿಯಿಂದ, ಕಾಕದೃಷ್ಟಿಯಿಂದ ತಪ್ಪಿಸಲು ಏಕಾಂಗಿಯಾಗಿ ಹೋರಾಡಿದ ಕೆಚ್ಚೆದೆಯ ಓಬವ್ವನ ಘಟನೆ ಗತ ಘಟನೆಯಾಗಿದೆ. ಆದರೆ ಚರಿತ್ರೆಯ ಜೊತೆಗೆ ಬದುಕುವ ಜನಪದರು ಚರಿತ್ರೆಯನ್ನು ಎಂದೂ ಗತಸ್ಥಿತಿ ಎಂದು ನಂಬುವುದೇ ಇಲ್ಲ. ಜನಪದರು ಸಾಂಸ್ಕೃತಿಕ ವೀರರು ಕಾಲದ ಹಂಗಿಗೆ ಒಳಪಡುವುದೇ ಇಲ್ಲ.

ಒಂದು ಇತಿಹಾಸವನ್ನು ರಚಿಸಲು ಕೇವಲ ಆಧಾರಗಳ ಮೇಲೆಯೇ ಆಧರಿಸಬೇಕಾಗಿಲ್ಲ, ಗತಕಾಲದ ಪ್ರಜ್ಞೆಯು ಸಹ ಸಾಕ್ಷಿಯಾಗುತ್ತದೆ. ಮುಖ್ಯ ಆಧಾರವು ಆಗುತ್ತದೆ. ಸಂಸ್ಕೃತಿನಿಷ್ಠವಾದ ಸಮುದಾಯಗಳ ಆತ್ಮಕಥನದ ನಿರೂಪಣೆಯನ್ನು ಆಧರಿಸಬೇಕು. ಆಗ ಗತಕಾಲದ ಗತಿಸಿದ ಘಟನೆಗೆ ಜೀವ ಬರುತ್ತದೆ. ಮರುಜೀವಂತಿಕೆಯನ್ನು ಪಡೆದು ಚರಿತ್ರೆಯಾಗಬಲ್ಲದು. ಈ ನಿಟ್ಟಿನಲ್ಲಿ

ವಿದ್ವಾಂಸರು, ಚರಿತ್ರೆಕಾರರು ತಮ್ಮ ಅನಿಸಿಕೆಗಳನ್ನು ಚರಿತ್ರೆಯ ಅತ್ಯಂತ ವಿಶಾಲವಾದ ನೆಲೆಗಳನ್ನೆಲ್ಲಾ ಸೀಮಿತ ಮಾಡಿಕೊಂಡಿದ್ದಾರೆ.

ಕೆಲವರು ಮೌಖಿಕ ಚರಿತ್ರೆಯ ಯತ್ನದಲ್ಲಿ ತೊಡಗಿರುವುದನ್ನು ಗಮನಿಸಬಹುದು. ಪ್ರೊ ಅಂಬಳಿಕೆ ಹಿರಿಯಣ್ಣ ಅವರು ಪಶ್ಚಿಮದ ಮೌಖಿಕ ಚರಿತ್ರೆಯ ನಿಲುವುಗಳನ್ನು ಕನ್ನಡೀಕರಿಸಿ ಅನ್ವಯಿಸುವ ಪ್ರಯತ್ನ ಮಾಡಿದ್ದಾರೆ. ಪಿ.ಕೆ. ರಾಜಶೇಖರ್ ಅವರಂತೂ "ಪಿರಿಯಾ ಪಟ್ಟಣದ ಕಾಳಗ" ದಂಥಹ ಚಾರಿತ್ರಿಕ ಕಥನ ಕಾವ್ಯವನ್ನು ಪ್ರಕಟಿಸಿ ಸ್ಥಳೀಯ ಚರಿತ್ರೆಯ ಶೈಲಿಯಲ್ಲಿ ಮೌಖಿಕ ಚರಿತ್ರೆಯ ಕಾವ್ಯಾನುಸಂಧಾನ ಮಾಡಿದರು. ಹನೂರು ಕೃಷ್ಣಮೂರ್ತಿಯವರು ಸಾಂಸ್ಕೃತಿಕ ವೀರರ ಬಹು ಪಠ್ಯಗಳ ಕಥನ ಗೀತೆಗಳನ್ನು ಮುಂದಿಟ್ಟುಕೊಂಡು ಪಶುಪಾಲಕ ಸಮಾಜದ ಮೌಖಿಕ ಚರಿತ್ರೆಯನ್ನು ಮಂಡಿಸಿದರು. ಹೀಗೆ ಮೌಖಿಕ ಪರಂಪರೆಯನ್ನು ಸಂಗ್ರಹಿಸಿ ಚರಿತ್ರೆಯ ದಾಖಲೆಯನ್ನು ಮಾಡಿದವರನ್ನು ನಾವು ಕಂಡೆವು. ಅದೇ ಚರಿತ್ರೆಯ ಬಗ್ಗೆ ಹಲವಾರು ವಿದ್ವಾಂಸರು ತಮ್ಮ ದೃಷ್ಟಿಕೋನದಲ್ಲಿ ಅಭಿವ್ಯಕ್ತ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಓಬವ್ವನ ಸಾಹಸಗಾಥೆಯನ್ನು ಕುರಿತು ವಿದ್ವಾಂಸರನ್ನು ಭೇಟಿ ಮಾಡಿದ್ದು ಅವರು ಅವರ ದೃಷ್ಟಿಕೋನವನ್ನು ವ್ಯಕ್ತಪಡಿಸಿದ್ದಾರೆ.

೭.೧. ಮೊದಲನೆಯದಾಗಿ **ಶ್ರೀಯುತರಾದ ಹಂಪಾ ನಾಗರಾಜಯ್ಯರವರನ್ನು** ಸಂದರ್ಶಿಸಲಾಗಿ ಶ್ರೀಯುತರು ತಮ್ಮ ದೃಷ್ಟಿಕೋನದಲ್ಲಿ ಓಬವ್ವನನ್ನು ವೀರಪರಂಪರೆಗೆ ಸೇರಬೇಕಾದವಳು. ಚಿತ್ರದುರ್ಗದ ಅಸ್ತಿತ್ವದೆಡೆ ಸಾಗಿದರೆ ಅಲ್ಲಿ ಓಬವ್ವ ಒಂದು ಮೈಲಿಗಲ್ಲು. ಅವಳ ವೀರಗಾಥೆಯನ್ನು ಎಲ್ಲರೂ ಮೆಚ್ಚುವಂಥಹದ್ದು. ಏಕೆಂದರೆ ಅವಳು ಒಬ್ಬ ಮುಗ್ಧ ಹೆಣ್ಣುಮಗಳು. ತನ್ನ ದುರ್ಗಕ್ಕೆ ಒದಗಿದ ಸ್ಥಿತಿ, ಹೈದರನ ದಾಳಿಯಿಂದ ಮುಕ್ತತೆ, ಆ ತಕ್ಷಣದ ಅವಳ ಮನಸ್ಥಿತಿಯಲ್ಲಿ ಅವಳು ಎದೆಗಾರಿಕೆಯಿಂದ ಶತ್ರುಸೈನ್ಯವನ್ನು ಚಚ್ಚುವಷ್ಟು ಧೈರ್ಯ ಪ್ರದರ್ಶಿಸಿದವಳು. ಆಕೆ ಒಬ್ಬ ಅವಿದ್ಯಾವಂತ ಮಹಿಳೆ, ವಿದ್ಯಾವಂತರು ಹೇಳುವಂಥಹ ಒಡೆಯನಿಗಾಗಿ, ಉಪ್ಪಿಟ್ಟ ಧಣಿಗಾಗಿ, ದೇಶಭಕ್ತಿಗಾಗಿ ಹೋರಾಡಬೇಕು. ಇಂಥಹ ದೊಡ್ಡದೊಡ್ಡ ಪದಗಳ ಅರ್ಥ ಬಹುಶಃ ಅವಳಿಗೆ ತಿಳಿದಿರಲಾರದು. ಕೇವಲ ಸಮಯಸ್ಫೂರ್ತಿಯಿಂದ ಕೆಚ್ಚೆದೆಯಿಂದ ನಾಡನ್ನು ರಕ್ಷಿಸಿದಂಥಹ ಅಪ್ರತಿಮ ಸಾಹಸಿ. ಅದೂ ಏಕಾಂಗಿಯಾಗಿ ಯಾರ ನೆರವಿಲ್ಲದೆ ಹೋರಾಡುವ ಅನಿವಾರ್ಯತೆಯೇನೂ ಅವಳಿಗಿರಲಿಲ್ಲ. ಆದರೆ ಕೋಟೆ, ನಾಡು ತನ್ನದು ಎಂಬ ಅದಮ್ಯವಾದ ಸ್ವಾಮಿನಿಷ್ಠೆಯನ್ನು ತುಂಬಿಕೊಂಡ ನಾಡು ಕಂಡ ವೀರಸಾಧ್ವಿ ಶಿರೋಮಣಿ ಓಬವ್ವೆ, ಅವಳು ಇತಿಹಾಸದಿಂದ ಬಹುದೂರ ಉಳಿದಿರಲು ಕಾರಣಗಳೇನೆ ಇರಬಹುದು, ಜಾತಿಯ ಬಗ್ಗೆ ನಿಖರವಾಗಿ ಸಾರುವ ದಾಖಲೆಗಳಿಲ್ಲದಿರಬಹುದು. ಆದರೆ ಜಾತಿಯನ್ನು ಹೊರತುಪಡಿಸಿ ನಾಡುಕಂಡ ಸಾಹಸಿ ವನಿತೆ ಓಬವ್ವ ಎಂದಿದ್ದಾರೆ. ಓಬವ್ವನ ವಿಷಯದಲ್ಲಿ ಮದಕರಿನಾಯಕನು ಕೆಳವರ್ಗದವರನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದನು ಎಂಬುದು ಓಬವ್ವನ ಘಟನೆಯಿಂದ ಸಾಬೀತಾಗಿದೆ. ಪಿಸುದನಿಯ ಮಾತನ್ನು ಕೇಳಿದ ಓಬವ್ವ

ಹೆದರದೆ, ಅಂಜದೆ, ಗಂಡೆದೆಯಿಂದ ಶತ್ರುವಿನ ನುಸುಳುವಿಕೆಯನ್ನು ಅರಿತ ಆಕೆಯ ಸಮಯಪ್ರಜ್ಞೆ ಜಾಗೃತವಾಯಿತು. ಅವರು ಒಳಬಂದರೆ ತನಗಷ್ಟೇ ಅಲ್ಲಾ ಕೋಟೆಗೆ ಆಪತ್ತೆಂದು ಕ್ಷಣದಲ್ಲೇ ನಿರ್ಧಾರಕ್ಕೆ ಬಂದ ಆಕೆ ಒಳನುಸುಳುವವರನ್ನೆಲ್ಲಾ ಒನಕೆಯಿಂದ ಬಡಿದು ಎಳೆದು ಬಿಸಾಕಿದ ಗಟ್ಟಿಗಿತ್ತಿ. ನಂತರ ಬಂದ ದುರ್ಗದ ಪಡೆ ಶತ್ರುಸೈನ್ಯವನ್ನು ಧೂಳಿಪಟ ಮಾಡಿತು. ಹೀಗೆ ಸಮಯಪ್ರಜ್ಞೆಯಿಂದ ತನ್ನ ಧೈರ್ಯಸಾಹಸದಿಂದ ಕ್ಷಣಮಾತ್ರದಲ್ಲಿ ತನ್ನ ನಾಡಿಗೆ ಒದಗಬಹುದಾದ ಕಂಟಕವನ್ನು ಪಾರುಮಾಡಿದ ವೀರವನಿತೆ ಓಬವ್ವ ಎಂದಿದ್ದಾರೆ.

ಇಲ್ಲಿ ನಮಗೆ ವೇದ್ಯವಾಗುವ ಅಂಶಗಳೆಂದರೆ ಓಬವ್ವ ನಾಡಿಗೆ ಸೇರಬೇಕಾದ ಸ್ವತ್ತೇ ವಿನಃ ಯಾವ ಒಂದು ಸಮುದಾಯ, ವರ್ಗಕ್ಕೆ ಸೀಮಿತವಾದವಳಲ್ಲ. ಇಲ್ಲಿ ಒಬ್ಬ ಮಹಿಳೆಯ ಸಂವೇದನೆ ಇಡೀ ಮಹಿಳಾ ಸಮುದಾಯಕ್ಕೆ ಸಬಲರು ತಾವೆಲ್ಲಾ ಎನ್ನುವ ಸಂದೇಶವನ್ನು ನೀಡಿದ್ದಾಳೆ. ಈ ಸಂವೇದನೆ ಸ್ತ್ರೀಸಶಕ್ತೀಕರಣಕ್ಕೆ ದನಿಯಾಗಿದೆ. ಆಧುನಿಕತೆಯ ಸ್ಪರ್ಶವಿಲ್ಲದ ಓಬವ್ವ ಆಧುನಿಕ ಸಮಾಜಕ್ಕೆ ಮಾದರಿಯಾಗಿದ್ದಾಳೆ. ಬ್ರಿಟೀಷ್ ವಸಹಾತುಶಾಹಿಯ ಬರವಣಿಗೆಗಳು ಓದಿದಾಗ ಸಾಂಸ್ಕೃತಿಕ ಭಾರತದ ಕಲ್ಪನೆಯಲ್ಲಿ ಪೌರುಷದ ಪ್ರಸ್ತಾಪ ಮಾಡಿದ್ದಾರೆ. ಹಾಗೆ ಹೋಲಿಸಿದಾಗ ಅವರ ಆಗಮನಕ್ಕಿಂತ ಮೊದಲೇ ತನ್ನ ಪೌರುಷವನ್ನು ಸಾರಿದ ಓಬವ್ವ ಭಾರತೀಯ ಪರಂಪರೆ ವೀರ ಪರಂಪರೆಯೆಂದು ಬಿಂಬಿಸುವಲ್ಲಿ ಸೋಪಾನವಾಗಿದೆ ಎನ್ನಬಹುದೇನೋ. ನಮ್ಮಲ್ಲಿ ಹಲವಾರು ಸಾಮಾಜಿಕ ಸಂಗತಿಗಳನ್ನು ಪರಶೀಲಿಸಿದಾಗ ಸತ್ಯಕ್ಕೆ ಹತ್ತಿರವಾದಂಥಹವುಗಳಲ್ಲಿ ನಮ್ಮ ಸಮಾಜದಲ್ಲಿರುವ ಜಾತಿ ಪದ್ಧತಿ, ಮಹಿಳೆಯರಿಗೆ ನೀಡಿರುವ ಎರಡನೇ ದರ್ಜೆಯ ಸ್ಥಾನಮಾನ ದಲಿತರನ್ನು ಅಂಚಿನ ಕೊನೆಯಲ್ಲಿಡುವ ಕ್ರಮ ಮುಂತಾದವುಗಳು ನಮ್ಮಲ್ಲಿ ಶತಶತಮಾನಗಳಿಂದಲೂ ಆಚರಣೆಯಲ್ಲಿವೆ. ಸಹಜವೂ ಆಗಿವೆ. ಇವು ಸತ್ಯಕ್ಕೆ ಎಷ್ಟು ಹತ್ತಿರವೆಂದರೆ ಸೂರ್ಯ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುವಷ್ಟು, ನೀರು ಎತ್ತರದಿಂದ ತಗ್ಗಿನ ಕಡೆ ಹರಿಯುವಷ್ಟೇ ಸತ್ಯವಾದವು. ಆದ್ದರಿಂದ ಇದರ ಬಗ್ಗೆ ಏಕೆ ತಲೆಕೆಡಿಸಿಕೊಳ್ಳಬೇಕು. ಸೂರ್ಯನ ಹುಟ್ಟುವಿಕೆಯನ್ನು, ನೀರಿನ ಹರಿಯುವಿಕೆಯನ್ನು–ಇವುಗಳನ್ನು ಬದಲಾಯಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಸಹಜವಾದ ವಿಷಯಗಳನ್ನು ಮನುಷ್ಯ ಚಿಂತನೆಗಳನ್ನು ಮಾಡಲು ಸಹಜವಾಗಿ ಹೋಗುವುದಿಲ್ಲ. ಪ್ರಾಚೀನ ಕಾಲದಿಂದಲೂ ಮಹಿಳೆಗೆ ಮೀಸಲಾಗಿ ಎರಡನೇ ಸ್ಥಾನದಲ್ಲಿ ನೋಡಿರುವಾಗ ಇನ್ನು ಇತಿಹಾಸದಲ್ಲಿ ತನ್ನ ಪ್ರಥಮ ಹೆಜ್ಜೆಯನ್ನು ಮೂಡಿಸುವುದು ಓಬವ್ವನಿಗೆ ಬಹಳ ಕಷ್ಟಕರವಾಯಿತು. ಆಕೆಯ ಚರಿತ್ರೆಗೆ ಶತಶತಮಾನಗಳಿಂದಲೂ ಮನುಷ್ಯ, ಮನುಷ್ಯರ ನಡುವೆ ಇರುವ ಕಂದಕಗಳಲ್ಲಿ, ಚರಿತ್ರೆಯಲ್ಲಿ ಸ್ಥಾನ ಪಡೆಯಬೇಕಿದ್ದ ಓಬವ್ವನಂಥಹ ಹಲವಾರು ವೀರರ ಕಥೆಗಳು ಮುಚ್ಚಿಹೋಗಿವೆ. ಅಧ್ಯಯನದ ಹಾದಿಯಲ್ಲಿ ಸಾಗುವಾಗ ಅನೇಕ ವಿಶ್ಲೇಷಣೆಗಳು ಎದುರಾಗುತ್ತವೆ. ಅವುಗಳನ್ನು ನಿರಾಕರಿಸದೆ ಸತ್ಯಾಂಶಗಳನ್ನು ಹುಡುಕುವುದೇ ಸಂಶೋಧಕರ ಗುರಿಯಾಗಬೇಕು.

೭.೨. ವಿದ್ವಾಂಸ ಎಂದರೆ ಒಂದು ಸಮಾಜದ ನಿರ್ಮಾಣ ಹಾಗೂ ವಿದ್ವತ್ತು ಯಾರೊಬ್ಬರ ಖಾಸಗಿಯ ಸ್ವತ್ತು ಅಲ್ಲ. ಎಲ್ಲರಿಗಾಗಿ ಅಭಿವ್ಯಕ್ತಗೊಳ್ಳುವ ಒಂದು ಬೌದ್ಧಿಕ ಪ್ರತಿಕ್ರಿಯೆ ಇದ್ದ ಹಾಗೆ. ಅಂಥಹ ಬೌದ್ಧಿಕ ಪ್ರಕ್ರಿಯೆಗಳ ದೃಷ್ಟಿಕೋನದಿಂದ ಓಬವ್ವನ ಬಗೆಗಿನ ಅನಿಸಿಕೆಗಳನ್ನು ಸಂಗ್ರಹಿಸುವಲ್ಲಿ ಶ್ರೀಯುತರಾದ ಹಂಪಾ ನಾಗರಾಜಯ್ಯ ಸರ್ ರವರ ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸಿದೆ. ಹಾಗೂ ಅವರ ಮನೋನಿಟ್ಟಿನಲ್ಲಿ ತೀರಾ ಗತವಲ್ಲದ, ತಿರಸ್ಕೃತ ಸಾಂಸ್ಕೃತಿಕ ವನಿತೆಯು ಓಬವ್ವ ಎಂದು ಅಭಿಪ್ರಾಯಪಟ್ಟಿದ್ದಾರೆ. **ಶ್ರೀಮತಿ ನಾಡೋಜ ಕಮಲಾ ಹಂಪನಾರವರು ಹೇಳುವಂತೆ** ನಾಡುಕಂಡ ಅಪ್ರತಿಮ ಯೋಧೆ ಓಬವ್ವ, ದುರ್ಗದಷ್ಟೇ ಖಚಿತವಾದ ಓಬವ್ವನ ಅಸ್ತಿತ್ವದ ಬಗ್ಗೆ ಗಟ್ಟಿನಿರ್ಧಾರದ ಮಾತನ್ನಾಡಿದರು. ಓಬವ್ವ ದೇಶೀಯ, ಅಪ್ಪಟ ಕನ್ನಡ ಮಹಿಳೆ. ನಿಷ್ಠುರವಾದ ಸಾಮಾಜಿಕ ವಿಮರ್ಶಾಜಾಗೃತಿಯ ಬಗ್ಗೆ ತಿಳಿಸಿದರು. ಜನಪದರ ಮೌನವೇ ಓಬವ್ವ, ಜೊತೆಗೆ ಓಬವ್ವ ಜಾತಿಯಲ್ಲಿ ನಾಯಕ ಜನಾಂಗಕ್ಕೆ ಸೇರಿದವಳೆಂದು, ಏಕೆಂದರೆ ಚಿತ್ರದುರ್ಗದ ಜಿಲ್ಲೆಯ ನಾಯಕ ಸಮುದಾಯದ ಪ್ರತಿಯೊಬ್ಬರ ಮನೆಯಲ್ಲಿ ಓಬವ್ವ ಎಂದೇ ನಾಮಕರಣ ಮಾಡಿರುವುದು ಕಂಡುಬರುತ್ತದೆ. ಹಾಗಾಗಿ ಓಬವ್ವ ಪಾಳೆಯಗಾರರಿಗೆ ಸೇರಿದ ಜಾತಿಯವಳು, ತಮ್ಮ ಬಹುಳ ಗುಚ್ಚದ ಓಬವ್ವನ ಕಥೆಯಲ್ಲಿ ಕಾಳನಾಯಕನ ಮಡದಿಯೆಂದೇ ಬರೆದಿರುವುದಾಗಿ ತಮ್ಮ ಅಭಿಪ್ರಾಯವನ್ನು ಉಲ್ಲೇಖಿಸಿದರು. ಮಾತು ಮುಂದುವರಿಸುತ್ತಾ ಸಾಂಸ್ಕೃತಿಕ ನಾಯಕ, ನಾಯಕಿಯರಿಗೆ ವ್ಯರ್ಥವಾದ ಜಾತಿಯ ಕಾಲಾಯಾಪನೆಯು ಇಡೀ ಸಮಾಜದ ಆಲೋಚನೆಯ ವಿಶ್ವಾಸವನ್ನೇ ಭಗ್ನಗೊಳಿಸುತ್ತದೆ. ಇಂಥಹ ಸಾಂಸ್ಕೃತಿಕ ವೀರನಾರಿಗೆ ಅಂಥಹ ಮೌಲ್ಯ ಪರಂಪರೆಗೆ ಇಲ್ಲದ ಜಾತಿ, ಧರ್ಮ. ಮತ, ಮೌಢ್ಯಗಳನ್ನು ಅಗತ್ಯಕ್ಕಾಗಿ ಆರೋಪಿಸಿ ಸಂಶೋಧನೆಯ ವಿಕಾರವನ್ನು ವಿಜೃಂಭಿಸಬಾರದು. ಕಾಲ–ದೇಶ–ಮತ ಮೂಲಗಳನ್ನು ಹುಡುಕಿ, ಆದರೆ ಮೂಲಭೂತ ಹಾಗೂ ಜಾತಿವಾದಗಳು ಬೇರುಬಿಡದೆ ಸಂಶೋಧನೆಯನ್ನು ಸುರೂಪಗೊಳಿಸಬೇಕೆಂದಿದ್ದಾರೆ.

ಅಡಿಟಿಪ್ಪಣಿ, ಗ್ರಂಥಋಣಗಳಿಗಿಂತಲೂ ಜನಪದ ತಿಳುವಳಿಕೆಯನ್ನು ನಿರೂಪಿಸಿದರೆ ಜಡಗದ್ಯವು ಮರೆಯಾಗಿ ತಿಳಿಯಾದ ಭಾವನೆಯ, ವೈಚಾರಿಕತೆಯ ಅಂಶಗಳು ಹೊರಬರುತ್ತವೆ. ಮೌಖಿಕ ಪರಂಪರೆಯ ನಿರೂಪಣೆಗಳ ಒಳದನಿ ಯಾವತ್ತೂ ಸತ್ಯಕ್ಕೆ ಹತ್ತಿರವಾಗಿರುತ್ತದೆ. ಹಾಗಾಗಿ ಈ ನಿಟ್ಟಿನಲ್ಲಿ ಸಾಗಿದ ಸಂಶೋಧನೆಗಳು ಹೊಸ ಶೋಧದ ಸಾಂಸ್ಕೃತಿಕ ಹೆಗ್ಗುರುತಾಗುತ್ತವೆ. ಚಿತ್ರದುರ್ಗದ ಚಾರಿತ್ರಿಕತೆ ತ.ರಾ.ಸು ರವರಿಂದ ಪುಟ್ಟಣ್ಣ ಕಣಗಾಲ್‌ರವರೆಗೆ ಸಾಗಿ ಸಾಹಿತ್ಯಾಸಕ್ತರ ಮನದಲ್ಲಿ ಉಳಿದು ಜನಮೆಚ್ಚಿಗೆಯನ್ನು ಗಳಿಸಿದೆ. ಚಿತ್ರದುರ್ಗದ ಕೋಟೆಯ ಪತನಾನಂತರ ೧೭೭೯ರಲ್ಲಿ ಎಡ್ವರ್ಡ್ ಮೂರ್ ಎಂಬ ಆಂಗ್ಲ ಸೇನಾಧಿಕಾರಿಯು ಇಂಗ್ಲೆಂಡಿನಲ್ಲಿ ಮುದ್ರಿತವಾಗಿರುವ ತಮ್ಮ ಗ್ರಂಥದಲ್ಲಿ "ಚಿತ್ರದುರ್ಗ ಕೋಟೆಯನ್ನು ಇಂಡಿಯಾ ದೇಶದಲ್ಲೇ ಅತೀ ಬಲಾಢ್ಯ ಕೋಟೆ ಎಂದೂ, ರಕ್ಷಣಾ ವ್ಯವಸ್ಥೆಗಳು ಸರಿಯಾಗಿದ್ದಿದ್ದರೆ ಕೋಟೆಯನ್ನು ಜಯಿಸಲು ಸಾಧ್ಯವಿರಲಿಲ್ಲ" ಎಂದು ಉಲ್ಲೇಖಿಸಿದ್ದಾನೆ.[೧] ಅಂದರೆ ಅಭೇದ್ಯವಾದ ಕೋಟೆ, ಕೋಟೆಗಾಗಿ ಪ್ರಾಣ ಕೊಡಲು

ಪಣತೊಟ್ಟಿದ್ದ ವೀರರು ಹೈದರಾಲಿ ವಿರುದ್ದ ಒಬ್ಬ ಹೆಣ್ಣು ತೋರಿದ ಅಪ್ರತಿಮ ಸಾಹಸ ಇದು. ದುರ್ಗದ ಚರಿತ್ರೆಗೆ ಗರಿಯಂತಿದೆ. ಅಂದಿನ ಹೆಣ್ಣಿಗೂ ಇಂದಿನ ಹೆಣ್ಣಿನ ಸ್ಥಿತಿಗೂ ಹೆಚ್ಚು ಅಂತರವಿಲ್ಲ. ಆದರೂ ಅವಳ ಸಾಹಸಗಾಥೆ ಮೆಚ್ಚುವಂತದ್ದು. ಬೆಂಕಿಯ ಮಧ್ಯದಲ್ಲಿಯೂ ಎದ್ದು ನಿಲ್ಲುತ್ತಾಳೆ. ನೀರಲ್ಲಿ ಮುಳುಗದೆ ಈಜಿ ಬರುತ್ತಾಳೆ ಹೆಣ್ಣು. ಆದರೆ ಅವಳು ಭಾವನೆಗಳು ಅರಳುವ ಮೊದಲೇ ಬತ್ತಿ ಹೋಗುವ ಸನ್ನಿವೇಶಗಳೇ ಹೆಚ್ಚು ಹಾಗಾಗಿ ಹೆಣ್ಣಿನ ಸಾಹಸಗಾಥೆಯನ್ನು ಬರೆಯುವಲ್ಲಿ ಮುಂದೆಜ್ಜೆಯಿಡು, ಹಿನ್ನಡೆಯಬೇಡ ಎಂದು ಧೈರ್ಯದ ಭರವಸೆಯನ್ನು ಹಂಪಾನಾರವರು ಹೇಳಿದರು. ಕರ್ನಾಟಕಕ್ಕೆ ಸ್ತ್ರೀಯರು ಸಲ್ಲಿಸಿರುವ ಸೇವೆಯ ಮಾತು ಬಂದಾಗ ದತ್ತಿ–ದಾನದ ವಿಷಯದಲ್ಲಿ ಅತ್ತಿಮಬ್ಬೆ, ಲಲಿತ ಕಲೆಗಳಲ್ಲಿ ಶಾಂತಲಾದೇವಿ, ಕವಿಯಿತ್ರಿಯರಲ್ಲಿ ಕಂತಿ, ಅಕ್ಕಮಹಾದೇವಿ, ಸಂಚಿಹೊನ್ನಮ್ಮನನ್ನೂ, ಐತಿಹಾಸಿಕ ವ್ಯಕ್ತಿಗಳಲ್ಲಿ ಮಹಾಮಂಡಲೇಶ್ವರಿ, ಚನ್ನಬೈರಾದೇವಿ, ರಾಣಿಯರಾದ ಹಿರಿಯ ಅಬ್ಬಕ್ಕ, ಕಿರಿಯ ಅಬ್ಬಕ್ಕ, ಕಿತ್ತೂರು ರಾಣಿ ಚನ್ನಮ್ಮ, ಬೆಳವಡಿಯ ಮಲ್ಲಮ್ಮ, ಅವರ ಸಾಲಿನಲ್ಲಿ ಸೇರಬೇಕಾದವಳು ವೀರ ವನಿತೆ ಓಬವ್ವ ಎಂದು ಇವರ ನಿಸ್ವಾರ್ಥ ಸೇವೆಯನ್ನು ಕೊಂಡಾಡಿದರು. ಒಬ್ಬ ಚಿಕ್ಕ ಮುಗ್ಧ ಬಾಲಕಿಯ ಮನಸ್ಸಿನಲ್ಲಿ ಓಬವ್ವೆಯ ಚಿತ್ರಣ ಮೂಡುವಂತೆ ಲೇಖನ ರಚಿಸಿದ್ದು ತಂದೆಯ ಮುಖಾಂತರ ಅವಳ ಸಾಹಸಗಾಥೆಯನ್ನು ಹೇಳಿಸಿ, ಆ ಶತ್ರುಗಳ ಕೈಯಿಂದಲೇ ಓಬವ್ವ ಹತಳಾದುದಾಗಿ ಬರೆದಿದ್ದು, ಅದನ್ನು ಕೇಳಿದ ಮಗುವಿನ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯುತ್ತಿತ್ತು ಎಂಬಲ್ಲಿಗೆ ಕಥೆ ಮುಗಿಸಿದ್ದಾರೆ. ಆದರೆ ಮುಗ್ಧ ಮಗುವಿನ ಮನಃಪಟಲದಲ್ಲಿ ಕೋಟೆಯಲ್ಲಿರುವ ಓಬವ್ವನ ಕಿಂಡಿ, ಅದರ ಹಿಂದಿರುವ ದುರಂತ ಕತೆಯನ್ನು ಅರುಹಿದ್ದಾರೆ. ಹಾಗಾಗಿ ಪರಾಕ್ರಮಿಗಳಾದವರಿಗೆ ಅವರ ಅರಿವಿನ ಸಾಮರ್ಥ್ಯವೇ ಅವರಿಗೆ ಅರಿವಿಲ್ಲದಂತೆ ಇರುತ್ತಾರೆ . ತಾವೆಲ್ಲಾ ಸಾಮಾನ್ಯರೇ ಎಂದು ತಿಳಿದಿರುತ್ತಾರೆ. ಅದೇ ಭಾವನೆಯಲ್ಲಿದ್ದ ಸಾಮಾನ್ಯ ಕುಟುಂಬದ ಹೆಣ್ಣು, ದುರ್ಗದ ಕೋಟೆಯ ಕಣ್ಣಾದಳು ಎಂದು ಆ ಘಟನೆಯ ಮರು ನೆನಪಲ್ಲಿ ಮೌನವಾದರು.

೭.೩ ವಿದ್ವಾಂಸರು ಚಿತ್ರದುರ್ಗದ ಇತಿಹಾಸದ ಸಂಶೋಧಕರೆಂದೇ ಖ್ಯಾತಿವೆತ್ತ ಶ್ರೀಯುತ **ಲಕ್ಷ್ಮಣ್ ತೆಲಗಾವಿಯವರದ್ದು** ಹುಲ್ಲೂರು ಶ್ರೀನಿವಾಸ ಜೋಯಿಸರ ನಂತರ ಚಿತ್ರದುರ್ಗ ಕಲ್ಲಿನಕೋಟೆಯ ಸಾಹಿತ್ಯ ಮತ್ತು ಸಂಸ್ಕೃತಿ ಬಗ್ಗೆ ಅಧ್ಯಯನ ನಡೆಸುವವರು, ನಡೆಸಿದವರು ಯಾರೂ ಎಂಬುದಕ್ಕೆ ಉತ್ತರವೇ ಪ್ರೊ. ಶ್ರೀಯುತ ಲಕ್ಷ್ಮಣ್ ತೆಲಗಾವಿ ಅವರ ಹೆಸರು ಚಿತ್ರದುರ್ಗ ಜಿಲ್ಲೆಯ ನಾಯಕರ ಅರಸರ ಬಗ್ಗೆ ಪಕ್ಕಾ ಸಂಶೋಧನೆಯನ್ನು, ಕೋಟೆಯ ಬಗೆಗಿನ ಇತಿಹಾಸವನ್ನು ದಾಖಲಿಸಿರುವ, ಸಂಶೋಧನೆ ನೆಡೆಸಿ ಆ ಬಗ್ಗೆ ಅನೇಕ ಮಾಹಿತಿ ದಾಖಲೆಗಳನ್ನು ಶೋಧಿಸಿ ಸಂಗ್ರಹಿಸಿ ಪ್ರಕಟಿಸಿರುವ ಪ್ರೊ. ಶ್ರೀಯುತ ಲಕ್ಷ್ಮಣ್ ತೆಲಗಾವಿಯವರದ್ದು ಸಂಶೋಧನಾ ಕ್ಷೇತ್ರದಲ್ಲಿ ರಾಜ್ಯಮಟ್ಟದಲ್ಲಿ ಹೆಸರು. ಚಿತ್ರದುರ್ಗದ ಇತಿಹಾಸದ ಪುಟಗಳಲ್ಲಿ ಸಾಧನೆ ಮಾಡಿದವರು. "ಚಂದ್ರವಳ್ಳಿ"– ಚಿತ್ರದುರ್ಗ ಇತಿಹಾಸವನ್ನು ಕುರಿತ ಲೇಖನವನ್ನು ಡಾ. ಎಂ.ವಿ. ಶ್ರೀನಿವಾಸರವರ ಜೊತೆ ಸೇರಿ ಸಂಪಾದನೆ ಮಾಡಿದವರು.

ಲಕ್ಷ್ಮಣ್ ತೆಲಗಾವಿಯವರು ಓಬವ್ವನನ್ನು ಕುರಿತು ಚಾರಿತ್ರಿಕತೆಯನ್ನು ಒಳಗೊಂಡ ಒಂದು ಕೃತಿಯನ್ನು ಬರೆದಿದ್ದಾರೆ. ಅದರಲ್ಲಿ ಓಬವ್ವನ ವೃತ್ತಾಂತವನ್ನು ಸರಿಯಾದ ದಿನಾಂಕಗಳ ಸಹಿತ ಬರೆದಿದ್ದಾರೆ. ಚಾರಿತ್ರಿಕವಾಗಿ ವಿವೇಚಿಸಿದ್ದಾರೆ. ಇವರ ದೃಷ್ಟಿಕೋನದಲ್ಲಿ ಓಬವ್ವೆಯ ಘಟನೆಯು ಚಿತ್ರದುರ್ಗ ಚರಿತ್ರೆಯಿಂದ ಬೇರ್ಪಡಿಸಲಾಗದಷ್ಟು ಗಟ್ಟಿಯಾಗಿ ಬೆಸೆದುಕೊಂಡಿದೆ. ಹಾಗೆಯೇ ಚಿತ್ರದುರ್ಗ ಗೆಝೆಟಿಯರ್‌ನಲ್ಲಿ ಬೇಡ ಮಹಿಳೆ ಎಂದಿದ್ದ ಓಬವ್ವೆಯ ಜಾತಿಯನ್ನು ಸೂಕ್ತ ದಾಖಲಾತಿಗಳ ಸಹಾಯದಿಂದ ಛಲವಾದಿ ಹೆಣ್ಣುಮಗಳೆಂದು ತಿದ್ದುಪಡಿ ಮಾಡುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದಾರೆ. ಹಾಗೆ ಓಬವ್ವೆ ತೋರಿದ ಘಟನೆ ಸಾರ್ವತ್ರಿಕ ಸತ್ಯವಾದುದು ಎಂದಿದ್ದಾರೆ. ಅವರು ಹೇಳಿದ ಪ್ರಕಾರ ಘಟನೆಗೆ ಸಂಬಂಧಿಸಿ ದಾಖಲಾತಿಗಳನ್ನು ಸಂಗ್ರಹಿಸಿ ಕೃತಿ ರಚಿಸಿದ್ದಾಗಿ ತಿಳಿಸಿದರು. ಬಿಚ್ಚುಗತ್ತಿ ದೊಡ್ಡ ಮದಕರಿನಾಯಕರು, ಚಿತ್ರದುರ್ಗದ ಛಲವಾದಿ ಮತಸ್ಥರಿಗೆ ತಮ್ಮ ಸ್ವಹಸ್ತದಿಂದ ಬರೆದುಕೊಟ್ಟ ರಹದಾರಿ ಪತ್ರದಲ್ಲಿ ಓಬವ್ವ ಚಾರಿತ್ರಿಕ ವ್ಯಕ್ತಿಯೇ ಅಹುದೆಂಬುದಕ್ಕೆ ಮಾಹಿತಿ ಇರುವುದಾಗಿ ಹೇಳಿದರು. ಆ ರಹದಾರಿ ಪತ್ರವನ್ನು ೧೯೭೩ರಲ್ಲಿ ಪಡೆದುದಾಗಿ ಹೇಳಿದರು. ದಿ. ಟಿ.ಎನ್. ಗಂಡುಗಲಿಯವರು ದುರ್ಗದ ಕೋಟೆಯಲ್ಲಿನ ದಿಡ್ಡಿಬಾಗಿಲಲ್ಲಿಯೇ ಓಬವ್ವ ತನ್ನ ಸಾಹಸವನ್ನು ತೋರಿದ್ದರೆಂಬ ಹೇಳಿಕೆಯನ್ನು ಉಲ್ಲೇಖಿಸಿದರು.

ಮದಕರಿನಾಯಕರ ಪುತ್ರರೂ ಚಿತ್ರದುರ್ಗ ಜಿಲ್ಲೆ ಸೀಮೆಯ ವಾಲ್ಮೀಕಿ ಮತವಿಚಾರಕ್ಕೆ ಮೊಕ್ತೇಸರರೂ ಆಗಿದ್ದ ·ರಾಜಾ.ಎನ್. ಪಾಳೇಗಾರ್ ಪರಶುರಾಮನಾಯ್ಕರು ತಾವು ಛಲವಾದಿ ವಂಶಸ್ಥರಿಗೆ ನೀಡಿದ ರಹದಾರಿ ಪತ್ರದ ನಕಲು ಪ್ರತಿ ತೋರಿಸಿದರು. ಅದರಲ್ಲಿ ಓಬವ್ವೆಯ ಘಟನೆಯ ಉಲ್ಲೇಖವಿದ್ದು ವನಕೆ ಕಿಂಡಿ, ಓಬವ್ವೆಯ ಜಲಧಿ ಉತ್ಸವ, ವಗೈರೆ ಮಾಡಿರುವಂತೆ ದಾಖಲೆಯಿದೆ. ಓಬವ್ವೆಯು ಕ್ರಿ.ಶ.೧೭೬೯ರ ಸೆಪ್ಟೆಂಬರ್‌ನಲ್ಲಿ ದೈವಾಧೀನಳಾದಳು. ಆಕೆಯನ್ನು ಮೆರವಣಿಗೆ ನಂತರ ತಣ್ಣೀರು ಚಿಲುಮೆಯ ಪೂರ್ವಕ್ಕೆ ಸಮಾಧಿ ಮಾಡಿ ಕಲ್ಲು ಮಂಟಪ ನಿರ್ಮಿಸಲಾಗಿದೆ ಎಂದು ಎ.ಡಿ. ಕೃಷ್ಣಯ್ಯನವರು ತಿಳಿಸಿದ್ದಾರೆ. ಒಟ್ಟಿನಲ್ಲಿ ಆಕರಗಳ ಸಹಿತ ಓಬವ್ವ ಒಬ್ಬ ಚಾರಿತ್ರಿಕ ಮಹಿಳೆಯಾಗಿದ್ದಾಳೆ. ಆಕೆ ದುರ್ಗದ ಇತಿಹಾಸದಲ್ಲಿ "ವನಕೆ ಕಿಂಡಿ ಓಬವ್ವ"ಳಾಗಿದ್ದಾಳೆ. ದಾಖಲೆಗಳ ಪ್ರಕಾರ ಓಬವ್ವೆ ತನ್ನ ಸಾಹಸ ತೋರಿದ ನಂತರವೂ ಸುಮಾರು ಮೂರು ವರ್ಷಗಳವರೆಗೆ ಅಂದರೆ ಕ್ರಿ.ಶ. ೧೭೬೬ ಅಕ್ಟೋಬರ್‌ನಿಂದ ೧೭೬೯ ಸೆಪ್ಟೆಂಬರ್‌ವರೆಗೆ ಜೀವಿಸಿದ್ದು ಆಕೆ ತನ್ನ ಸಾಹಸದ ಸಂದರ್ಭದಲ್ಲಿ ಹತಳಾಗಲಿಲ್ಲ ಎಂಬುದನ್ನು ವೇದ್ಯಪಡಿಸಿದರು. ಸ್ವಾಭಾವಿಕ ಮರಣ ಹೊಂದಿರುವುದಾಗಿ ದಾಖಲೆಗಳಿಂದ ಸ್ಪಷ್ಟವಾಗಿದೆ. ಹೈದರಾಲಿ ದಾಳಿಯ ನಂತರ ಕ್ರಿ.ಶ.೧೭೭೯ ಏಪ್ರಿಲ್ ೫ ನೇ ತಾರೀಖು ರಾತ್ರಿ ೨ ಗಂಟೆ ಸಮಯದಲ್ಲಿ ಚಿತ್ರದುರ್ಗ ಬಿಟ್ಟು ಬೆಳಗಿನಜಾವ ೪ ಗಂಟೆಗೆ ಕುಟುಂಬ ಪರಿವಾರದವರೆಲ್ಲಾ ದೊಡ್ಡಸಿದ್ದವ್ವನಹಳ್ಳಿಗೆ ಹೋದ ಬಗ್ಗೆ ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ. ಅಲ್ಲಿಂದ ಮುಂದೆ ವಂಶಾವಳಿ ಬೆಳೆದಿದ್ದು ವಂಶವೃಕ್ಷವನ್ನು ನೀಡಿದ್ದಾರೆ.

ರಾಜಾ.ಎಸ್. ಪಾಳೇಗಾರ್ ಪರಶುರಾಮನಾಯ್ಕರ ಲಾಂಛನವನ್ನು ಹಗುರವಾಗಿ ಮಾತನಾಡಿದವರ ಬಗ್ಗೆಯೂ ಬರೆದಿದ್ದಾರೆ. ನಂತರ ಓಬವ್ವನ ಉತ್ಸವ ಆಹ್ವಾನ ಪತ್ರಿಕೆಯನ್ನು (೧೯೬೨)ತಮ್ಮ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಓಬವ್ವನ ಸಂತತಿಯವರು ಈ ಉತ್ಸವವನ್ನು ನೆಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿದ್ದಾರೆ. ನಂತರ ಸವಿವರವಾದ ವಂಶವೃಕ್ಷವನ್ನು ನೀಡಿದ್ದಾರೆ. ಹೀಗೆ ಓಬವ್ವ ಚಾರಿತ್ರಾತ್ಮಕ ವ್ಯಕ್ತಿಯಾಗಿದ್ದರೂ ಚಾರಿತ್ರಿಕ ನೆಲೆಯಲ್ಲಿ ಅಧಿಕೃತವಾಗಿ ಸಮರ್ಥಿಸಲು ಪೂರಕವಾದ ದಾಖಲೆಗಳು ಇಲ್ಲದ್ದರಿಂದ ಘಟನೆಯನ್ನು ನಿರೂಪಿಸಲು ಕಷ್ಟಸಾಧ್ಯವಾಯಿತು. ಆದರೆ ಉತ್ಪ್ರೇಕ್ಷೆ ಸನ್ನಿವೇಶಗಳು ಸೃಷ್ಟಿಯಾಗಿದ್ದರೂ ಅವು ಆಕೆಯ ಜನಪ್ರಿಯತೆಯಿಂದ ಹುಟ್ಟಿದ್ದರೂ, ಈ ಘಟನೆ ಹೈದರಾಲಿಯೊಡನೆ ಚಿತ್ರದುರ್ಗದ ಕೊನೆಯ ಅರಸ ರಾಜಾ ವೀರಮದಕರಿನಾಯಕನ ಆಡಳಿತಾವಧಿಯಲ್ಲಿ ಯುದ್ಧ ಸಂದರ್ಭದಲ್ಲಿ ನೆಡೆದ ವಾಸ್ತವದ ಘಟನೆ. ಆದರೆ ೬.೪ ಸಂಭವಿಸಿದ ತೇದಿಯನ್ನು ನಮೂದಿಸುವಲ್ಲಿ ಸ್ವಲ್ಪ ಮರುನಿರ್ಧಾರ ಅಗತ್ಯ ಎಂದಿದ್ದಾರೆ.

೭.೪. ಚಿತ್ರದುರ್ಗದ ಇತಿಹಾಸಕಾರರು, ಶಾಸನ ತಜ್ಞರೆಂದೇ ಹೆಸರುವಾಸಿಯಾದ **ಡಾ. ಬಿ.ರಾಜಶೇಖರಪ್ಪ** ಅವರನ್ನು ಸಂದರ್ಶಿಸಲಾಗಿ ಚಿತ್ರದುರ್ಗದ ಇತಿಹಾಸಕಾರರಿಂದ ಶ್ರೀಯುತ ಹುಲ್ಲೂರು ಶ್ರೀನಿವಾಸ ಜೋಯಿಸರ ಸಮಸ್ತ ಮಾಹಿತಿಯನ್ನು ಸಂಗ್ರಹಿಸಿ "ಇತಿಹಾಸ ಸಂಶೋಧಕ ಹುಲ್ಲೂರು ಶ್ರೀನಿವಾಸ ಜೋಯಿಸರು" ಎಂಬ ಕೃತಿಯನ್ನು ಬರೆದು ನಾಡಿಗೆ ಸಮರ್ಪಿಸಿದಂತವರು.

ಇವರ ಪ್ರಕಾರ ಇತಿಹಾಸದ ವಾಸ್ತವಿಕತೆಯೆ ಬೇರೆ, ಜನರ ನಂಬಿಕೆಯೆ ಬೇರೆ. ಚಿತ್ರದುರ್ಗದ ವೀರವನಿತೆ ಓಬವ್ವನಿಗೆ ಇತಿಹಾಸದ ವಾಸ್ತವಿಕತೆಯಲ್ಲಿ ಯಾವುದೇ ದಾಖಲಾತಿಗಳಿಲ್ಲ, ಅಥವಾ ಇದ್ದರೂ ಲಭ್ಯವಾಗಲಿಲ್ಲ. ಹಾಗಾಗಿ ಇತಿಹಾಸದ ವಾಸ್ತವಿಕತೆಯಿಂದ ಬಹುದೂರ ಉಳಿದಿದ್ದಾಳೆ ಓಬವ್ವ, ಜನರ ನಂಬಿಕೆಯಲ್ಲಿ ಆಳವಾಗಿ ಬೇರೂರಿದ್ದಾಳೆ. ಅಂದಿನಿಂದ ಇಂದಿನವರೆಗೂ ಜನಪದರಲ್ಲಿ, ನಂಬಿಕೆಯಲ್ಲಿ ಉಳಿದು ಸಾಗಿ ಬಂದಿದ್ದಾಳೆ. ಜನಪ್ರಚುರವಾಗಿದ್ದಾಳೆ ಎಂದರು.

ಜೋಯಿಸರ ಸಂಶೋಧನಾಸಕ್ತಿ, ಅಧ್ಯಯನ ಲೇಖನಗಳ ವ್ಯಾಪ್ತಿ ವಿಸ್ತಾರವಾದುದು. ಆಗಿನ ಕಾಲಕ್ಕೆ ಹುಲ್ಲೂರು ಶ್ರೀನಿವಾಸ ಜೋಯಿಸರು ಒಂದು ಸಂಸ್ಥೆ ಮಾಡಬಹುದಾದಷ್ಟು ಕೆಲಸವನ್ನು ಅವರು ಒಬ್ಬರೇ ಕೈಗೊಂಡು ಮಾಡಿದ್ದಾರೆ. ಇದು ಅತಿಶಯೋಕ್ತಿಯಂತೂ ಅಲ್ಲ ಎನ್ನುತ್ತಾ ಚಿತ್ರದುರ್ಗದ ಇತಿಹಾಸದ ಗತಕ್ಕೆ ಜಾರಿದರು.

ಹಾಗೆಯೇ ಜೋಯಿಸರ ಸಾಹಿತ್ಯ ಕೃಷಿಯ ಬಗ್ಗೆ ಹೇಳುತ್ತಾ ಕನ್ನಡನಾಡಿನ ವೀರರನ್ನೂ ವೀರಮಹಿಳೆಯರನ್ನು ಕುರಿತು ಜೋಯಿಸರು ಅನೇಕ ಲೇಖನಗಳನ್ನೂ ಪುಸ್ತಕಗಳನ್ನು ಬರೆದಿರುವ ಬಗ್ಗೆ ಮಾಹಿತಿ ನೀಡುತ್ತಾ "ಗಂಡುಗಲಿ ಕುಮಾರರಾಮಚರಿತೆ ಗಂಭೀರ ಶೈಲಿಯ ಕೃತಿಗಳಾದರೆ, ಮಯೂರಶರ್ಮ ಮತ್ತು ಇತರ ಕಥೆಗಳು ನಾಡ ಕಥೆಗಳಾಗಿವೆ. ಹುಳಿಯಾರು ಮಾರ ಭೂಪಾಲ, ಸಳ, ಕಪೋತವಾಕ್ಯ– ಇವು ಜನಪ್ರಿಯ ಶೈಲಿಯ ಕಥನ ರೂಪದ ಪುಸ್ತಕಗಳಾಗಿವೆ. ಹೊಯ್ಸಳಾನ್ವಯ ಪ್ರತಾಪ, ಹೊಯ್ಸಳ ವಿನಯಾದಿತ್ಯ, ಬಾಬಮ್ಮ, ವೀರಮಲ್ಲಮ್ಮ, ವೀರರಮಣಿ ಓಬವ್ವ– ಮುಂತಾದವು

ಸಹ ಜನಪ್ರಿಯ ಧಾಟಿಯ ಆದರೆ ಗಂಭೀರ ವಿಷಯದ ಲೇಖನಗಳಾಗಿವೆ. ಹೀಗೆ ಜೋಯಿಸರು ೧೯೩೨ ಮೇ ರಲ್ಲಿ ಸರಸ್ವತಿ ಪತ್ರಿಕೆಯಲ್ಲಿ "ವೀರ ಕನ್ನಡಗಿತ್ತಿ ಓಬವ್ವ" ಎಂಬ ಲೇಖನವನ್ನು ನವೆಂಬರ್ ೧೯೫೩ ರಲ್ಲಿ ಸುಬೋಧ ಪತ್ರಿಕೆಯಲ್ಲಿ ವೀರರಮಣಿ ಓಬವ್ವ ಎಂಬ ಲೇಖನವನ್ನು ಪ್ರಕಟಿಸಿರುವುದಾಗಿ ತಿಳಿಸಿದರು. ಹೀಗೆ ಓಬವ್ವ ಇತಿಹಾಸದಲ್ಲಿ ವಾಸ್ತವಿಕವಾಗಿ ದಾಖಲಾಗಬೇಕಿತ್ತಾದರೂ ಯಾವುದೇ ವಾಸ್ತವಿಕ ದಾಖಲಾತಿಗಳು ಲಭ್ಯವಿಲ್ಲ. ಹಾಗಾಗಿ ಜನರ ನಂಬಿಕೆಯಲ್ಲಿ ಬೆಳೆದಿದ್ದಾಳೆ ಓಬವ್ವ ಎಂದಿದ್ದಾರೆ. ಈ ಘಟನೆಗೆ ಸಂಬಂಧಿಸಿದ ಜನಪದ ನಂಬಿಕೆಗಳು ತಲೆಮಾರುಗಳಿಂದ ಬಂದಿವೆ

೭.೫. ಚಿತ್ರದುರ್ಗ ಜಿಲ್ಲೆಯ ಹಿರಿಯ ಜಾನಪದ ವಿದ್ವಾಂಸರು, ಜಿಲ್ಲೆಯ ಮಣ್ಣಿನ ಮಗನಾಗಿ ಹಲವಾರು ಸಂಶೋಧನೆಗಳನ್ನು ನೆಡೆಸಿ ಜಿಲ್ಲೆಯಲ್ಲಿ ಅನೇಕ ವಿಷಯಗಳನ್ನು ಕುರಿತಂತೆ ಲೇಖನ ಕೃತಿಗಳನ್ನು ಪ್ರಕಟಿಸುತ್ತಿರುವ **ಡಾ. ಪಿ.ಬಿ.ಶಿವಣ್ಣರರವರು** ಓಬವ್ವ ನಾಡುಕಂಡ ಜನಪದರಲ್ಲಿ ಉಳಿದು ಬಂದಿರುವ ವೀರಮಾತೆಯಾಗಿದ್ದಾಳೆ ಆಕೆ. ಆದರೆ ಆಕೆಯ ಬಗ್ಗೆ ಸಾಕಷ್ಟು ಲಿಖಿತ ದಾಖಲೆಗಳು ಲಭ್ಯವಿಲ್ಲದಿರುವುದು ಖೇದಕರ ಎಂದಿದ್ದಾರೆ. ಏಕೆಂದರೆ ದುರ್ಗದಷ್ಟೆ ಇತಿಹಾಸದಲ್ಲಿ ಓಬವ್ವ ಇದ್ದದ್ದು ನಿಜ. ಆದರೆ ಆಕೆಯ ಇರುವಿಕೆಯ ಬಗ್ಗೆ ದಿನಾಂಕಗಳಾಗಲಿ, ತೇದಿಗಳಾಗಲಿ, ಸಾಹಸ ಘಟನೆಯನ್ನು ವಿವರಿಸುವಲ್ಲಿ ಕೈಫಿಯತ್ತುಗಳು ಮೌನವಹಿಸಿವೆ. ಎಂದಿದ್ದಾರೆ. ಹಾಗೆಯೇ ಚಿತ್ರದುರ್ಗ ಗೆಝೆಟಿಯರ್‌ನಲ್ಲಿ ಓಬವ್ವನನ್ನು ಬೇಡ ಮಹಿಳೆ ಎಂದು ಬರೆದಿದ್ದು ತದ ನಂತರ ಶ್ರೀಯುತ ಲಕ್ಷ್ಮಣ್ ತೆಲಗಾವಿ ಮೊದಲಾದ ವಿದ್ವಾಂಸರು ಸೇರಿ ಗೆಝೆಟಿಯರ್‌ನಲ್ಲಿದ್ದ ಬೇಡ ಮಹಿಳೆ ಎಂದಿರುವುದನ್ನು 'ಛಲವಾದಿ' ಮಹಿಳೆ ಎಂದು ತಿದ್ದುಪಡಿಮಾಡಬೇಕಾಗಿದೆ ಎಂಬುದರ ಬಗ್ಗೆ ತಿಳಿಸುತ್ತಾ ಅದು ತಪ್ಪೂ ಅಲ್ಲಾ, ಅಪರಾಧವೂ ಅಲ್ಲ. ಏಕೆಂದರೆ ಮೊದಲಿಗೆ ಇತಿಹಾಸದಲ್ಲಿ ಆಕೆಯ ಬಗ್ಗೆ ಇರುವ ಐತಿಹ್ಯವನ್ನು, ಕುರುಹನ್ನು ಆಧರಿಸಿ ಬರೆಯಲಾಗಿತ್ತು. ಆದರೆ ಕಾಲಾನಂತರದಲ್ಲಿ ಸಿಕ್ಕ ದಾಖಲಾತಿಗಳು, ಖಚಿತತೆಯನ್ನು ಆಧರಿಸಿ ಹೊಸ ದಾಖಲಾತಿಗಳು ಸಿಕ್ಕಾಗ ತಿದ್ದುಪಡಿ ಮಾಡಬಹುದು, ಮಾಡಿದ್ದಾರೆ. ನಂತರ ಆಕೆಯ ವಂಶಸ್ಥರೆಂದು ಹೇಳಿಕೊಂಡಿರುವವರು, ಆಕೆಯ ಸಮುದಾಯಕ್ಕೆ ಸೇರಿದವರೆಂದು ಹೇಳಲಾದವರ ಹೇಳಿಕೆಗಳು, ವಂಶವೃಕ್ಷ ಕುಟುಂಬಕ್ಕೆ ಸೇರಿದವರು ಇವೆಲ್ಲಾ ಬೆಳಕಿಗೆ ಬರುಬರುತ್ತಾ ಆಕೆ 'ಛಲವಾದಿ' ಜಾತಿಗೆ ಸೇರಿದವಳೆಂದು ತಿಳಿದು ಬಂದಿದ್ದು ಅದನ್ನು ಗೆಝೆಟಿಯರ್‌ನಲ್ಲಿ ಬದಲಾವಣೆ ಮಾಡಲು ಪ್ರಯತ್ನಿಸಿದ ಬಗ್ಗೆ ತಿಳಿಸುತ್ತಾ ಏಕೆಂದರೆ ಇತಿಹಾಸ ಬೆಳಕಿಗೆ ಬರುತ್ತಾ ಹೊಸ ಹೊಸ ಸಂಶೋಧನೆಗಳು ನಡೆಯುತ್ತಾ, ಹೊಸ ವಿಷಯಗಳು ಬೆಳಕಿಗೆ ಬಂದಂತೆಲ್ಲಾ ಬದಲಾವಣೆಗಳು ಸಹಜ. ಸತ್ಯಾಸತ್ಯಗಳನ್ನು ನಮೂದಿಸುವುದು ಅವಶ್ಯಕವಾಗಿರುತ್ತದೆ. ಅದು ಸರಿಯಷ್ಟೇ. ಹಾಗಾಗಿ ಐತಿಹ್ಯಗಳನ್ನು ಆಧರಿಸಿ ಹಲವಾರು ವಿದ್ವಾಂಸರು ಓಬವ್ವನನ್ನು ಕುರಿತು ಬರೆದಿರುವುದಾಗಿ ತಿಳಿಸಿದರು. ಮತ್ತು ಇತಿಹಾಸದುದ್ದಕ್ಕೂ ನಾವು ಗಮನಿಸುತ್ತಾ ಬಂದಾಗ ಎಲ್ಲಿಯೂ ಲಿಖಿತವಾಗಿಯೂ ಬರವಣಿಗೆಗಳು ಓಬವ್ವನ ಬಗ್ಗೆ

ದೊರಕಿದ್ದು ಆಕೆಗಾಗಿ ಒಂದು ಅಧ್ಯಯನ ಮಾಡುತ್ತಿರುವುದು ತುಂಬಾ ಸಂತಸದ ವಿಷಯ ಮತ್ತು ಅದಕ್ಕಾಗಿ ತಮ್ಮ ಸಂಪೂರ್ಣ ಅಭಿಮತವನ್ನು ವ್ಯಕ್ತಪಡಿಸಿದರು.

ಜೀವನಾನುಭವಗಳನ್ನು ಜನರು ಕಥೆ ಕಟ್ಟಿ ಹೇಳತೊಡಗುತ್ತಾರೆ. ಅದರಲ್ಲೂ ಸಾಹಸದ ರೋಚಕತೆಯನ್ನು ಹಾಡಿಹೊಗಳುತ್ತಾರೆ. ಕಟ್ಟಿಕೊಂಡ ಆಶಯಗಳು, ಕಂಡ ಕನಸುಗಳು, ಕಂಡುಂಡ ನೋವುಗಳು ಈ ಕಥೆಗಳ ತಿರುಳಾಗಿರುತ್ತವೆ. ಕೊನೆಗೆ ಇವೇ ಜನಪದ ಕಥೆಗಳಾಗಿ ರೂಪು ಪಡೆಯುತ್ತವೆ. 'ಕವಿರಾಜ ಮಾರ್ಗ' ಕಾರ ಕುರಿತೊದದೆಯುಂ ಕಾವ್ಯ ಪ್ರಯೋಗ ಮತಿಗಳ್ ಎಂದು ಹೇಳುತ್ತಾ ಜನಪದರ ಈ ಕಾವ್ಯ ಕಟ್ಟುವ ಗುಣವನ್ನು ಮೆಚ್ಚಿ ನುಡಿಯುತ್ತಾನೆ. ಇಂಥಹ ಕಾವ್ಯ ಕಟ್ಟುವ ಗುಣ ಜಗತ್ತಿನಾದ್ಯಂತ ಜನಪದರಿಗಿತ್ತೆಂದು ಸೋಜಿಗವೆನಿಸುತ್ತದೆ. ಅವರು ಹಳ್ಳಿಗರಾಗಿರಲಿ, ಗಿರಿಜನರಾಗಿರಲಿ, ಪಶುಪಾಲಕರಾಗಿರಲಿ ಅವರವರ ಹಿನ್ನೆಲೆಯ ಬದುಕು ಹಾಡಾಗಿ ಹೊರಹೊಮ್ಮಿದೆ. ಮಹಾಕಾವ್ಯದ ಕಥೆಗಳು ಒಂದು ಕಾಲ ಘಟ್ಟದವೂ ಆಗಿರಲಾರವು ಎನ್ನುವುದಕ್ಕೂ ನಮಗೆ ಪ್ರಾಕ್ತನ ಆಧಾರಗಳೇ ದೊರಕುತ್ತವೆ. ಹಾಗಾಗಿ ಭಾರತ ದೇಶದ ಚರಿತ್ರೆ ಬರೆಯುವುದು ದೊಡ್ಡ ಕಷ್ಟವೇ ಸರಿ. ಏಕೆಂದರೆ ಬಹುಮತಾವಲಂಬಿಗಳ, ಅಸಂಖ್ಯಾತ ರಾಜ್ಯಗಳುಳ್ಳ ಹಾಗೂ ವೈವಿಧ್ಯಮಯ ಭಾಷೆ, ಸಂಸ್ಕೃತಿ ಮತ್ತು ಕೋಟೆ–ಕೊತ್ತಲಗಳಿರುವ ದೇಶವೆನಿಸಿದೆ. ಕಾಲ ಕಾಲಕ್ಕೆ ಇಂಥಾ ರಾಜರೇ ಇಂತಿಂಥ ಪ್ರದೇಶಗಳಲ್ಲಿ ಆಳ್ವಿಕೆ ನೆಡೆಸಿದರು. ಇಂಥವರೇ ಕೋಟೆ ಕಟ್ಟಿದರು ಎಂದು ನಿಖರವಾಗಿ ಹೇಳುವುದು ಕಷ್ಟ. ಅದಕ್ಕೆ ಕಾರಣವಾದರೂ ಸೂಕ್ತ ಸಾಧನಗಳ ಅಭಾವ ಅಥವ ಲಭ್ಯವಿರುವ ಸಾಮಗ್ರಿಯಲ್ಲಿ ಅಡಕವಾಗಿರುವ ಉತ್ಪ್ರೇಕ್ಷೆಯ ಅಂಶಗಳು. ಆದರೂ ನಾಡಿನ ಪ್ರಗತಿಗಾಗಿ, ಆದರ್ಶಕ್ಕಾಗಿ, ನಾಡಿನ ಇತಿಹಾಸವನ್ನು ಐತಿಹಾಸಿಕತೆಯನ್ನು ಸದಾಕಾಲ ಸಾಧ್ಯವಾದದ್ದನ್ನು ಕ್ರೋಢೀಕರಿಸಿ ಕೂಡಿಸಿ ಹಿಂದಿನ ಚರಿತ್ರೆಯನ್ನು ಇಂದಿನವರಿಗಾಗಿ ಮುಂದಿನವರಿಗಾಗಿ ಬರೆಯಲೇಬೇಕಿದೆ. ಹಾಗೆಯೇ ಚಿತ್ರದುರ್ಗ ಪ್ರದೇಶದ ಚರಿತ್ರೆಯನ್ನು ತೆಗೆದುಕೊಂಡಾಗ ಓಬವ್ವನ ಸಾಹಸಗಾಥೆಯು ಇದೇ ಚರಿತ್ರೆಯಲ್ಲಿ ಇದೆ ಎಂಬುದು ವೇದ್ಯವಾಗುತ್ತದೆ. ಹಿಂದಿನವರು ಬರೆಯದೇ ಇರುವ ಚರಿತ್ರೆಯನ್ನು ಇಂದು ಬರಹ ರೂಪದಲ್ಲಿಳಿಸಿದರೆ ಅದು ಮುಂದಿನವರಿಗೆ ಚರಿತ್ರೆಯಾಗಬಹುದೇನೋ. ಚಿತ್ರದುರ್ಗ ಜಿಲ್ಲೆಯು ಬಹು ಪ್ರಾಚೀನ ಇತಿಹಾಸವನ್ನು ಹೊಂದಿದ್ದು ಲಭ್ಯವಿಲ್ಲದೇ ಇರುವ ಚರಿತ್ರೆಯನ್ನು ಸಾಮಾನ್ಯ ಜನರಿಂದ ಪ್ರಚುರವಾದ ಚಿತ್ರಮಯ ಚಿತ್ರದುರ್ಗದ ರೋಮಾಂಚಕಾರಿ ಈ ಸಾಹಸಗಾಥೆಯನ್ನು ವಿದ್ವಾಂಸರ ಅಭಿಪ್ರಾಯ, ಸಲಹೆ, ಸೂಚನೆಗಳನ್ನು ಪಡೆದು ಸ್ಪಷ್ಟೀಕರಣ ಮಾಡಬೇಕಾಗಿದೆ ಎಂದರು.

೭.೬. ಜನಪದ ಹೋರಾಟಗಾರರು, ಸಾಹಿತಿಗಳು ಹಾಗೂ ಪ್ರಸ್ತುತ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು ಆದ **ಶ್ರೀಯುತ ಬಂಜಗೆರೆ ಜಯಪ್ರಕಾಶರವರು** ಚಿತ್ರದುರ್ಗದ ಜಿಲ್ಲೆಯವರಾಗಿದ್ದಾರೆ. ಇವರ ಸ್ವಭಾವತಃ ವ್ಯಕ್ತಿಗತ ಹಿತಾಸಕ್ತಿಗಳನ್ನು ಮೀರಿ ಸತ್ಯಗಳನ್ನು ಮಂಡಿಸಬೇಕೆನ್ನುವ ಮನಃಸ್ಥಿತಿಯವರು ಕಾಣಿಸಿದ ಗುರುತುಗಳನ್ನು ವಿಶ್ಲೇಷಣೆಗೊಳಪಡಿಸಿ

ಒರೆಹಚ್ಚಬೇಕೆನ್ನುವ ಸಾಮರ್ಥ್ಯವುಳ್ಳವರು. ಇವರನ್ನು ಬೇಟಿಯಾಗಿ ಪ್ರಸ್ತುತ ವಿಷಯದ ಬಗ್ಗೆ ಚರ್ಚಿಸಿದಾಗ ತಮ್ಮದೇ ದೃಷ್ಟಿಕೋನವನ್ನು ಬಿಚ್ಚಿಟ್ಟರು. ಓಬವ್ವ ಚಿತ್ರದುರ್ಗದ ಚರಿತ್ರೆಯಲ್ಲಿ ವರ್ಣರಂಜಿತ ಸ್ಥಾನವನ್ನು ಹೊಂದಿದವಳಾಗಿದ್ದಾಳೆ. ಈ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯ, ಸಾಹಿತ್ಯ ಕೃತಿಗಳು, ಸಾಮಾಜಿಕ ವಿದ್ಯಮಾನಗಳು, ಸಾಂಸ್ಕೃತಿಕ ಅಂಶಗಳ ಅಸ್ತಿತ್ವದ ಬಗ್ಗೆ ತಿಳಿಸಿದರು. ಈ ಓಬವ್ವ ಚಾರಿತ್ರಿಕತೆಯ ಆವರಣದಲ್ಲಿ ಬರುವ ಹೆಣ್ಣುಮಗಳು. ಆದರೆ ಈ ಸಾಂಸ್ಕೃತಿಕ ಸಾಧ್ವಿಯ ಚಿತ್ರಣ ಇತಿಹಾಸದ ಗರ್ಭದಲ್ಲಿ ಪ್ರಸ್ತಾಪಿಸಿದ್ದರೂ ಲಿಖಿತ ದಾಖಲೆಗಳ ಕೊರತೆಯಿದ್ದು ಅದನ್ನು ಆವರಿಸಿ ಗಮನದಲ್ಲಿಟ್ಟುಕೊಂಡು ಜನಪದರ ಮನದ ವಸ್ತುನಿಷ್ಠತೆಯನ್ನು ಗ್ರಹಿಸಿ ಹಿಂದಿನಿಂದ ಹೇಳುತ್ತಾ ಬಂದಿರುವ ವಿಷಯವನ್ನು ಸಾಹಿತ್ಯ ಕೃತಿಗಳಲ್ಲಿ ಲಭ್ಯವಿರುವ ವಿಷಯವನ್ನು ಸಮೀಕರಿಸಿ ವಾಸ್ತವಕ್ಕೆ ಹತ್ತಿರವಾದ ಸಂಭಾವ್ಯತೆಯನ್ನು ಗ್ರಹಿಸಬೇಕೆಂದರು. ಯಾವುದೇ ವಿಷಯದ ಚಾರಿತ್ರಿಕ ಘಟ್ಟವನ್ನು ಕಂಡುಕೊಳ್ಳಬೇಕೆಂದರೆ ಅದಕ್ಕೆ ಇಸವಿ, ತೇದಿ ಇತ್ಯಾದಿಗಳನ್ನು ಕಂಡುಹಿಡಿಯುವುದು ಮುಖ್ಯವಲ್ಲ. ಆ ಘಟನೆಯ ಸತ್ಯಾಸತ್ಯತೆಯನ್ನು ಖಚಿತವಾಗಿ ಗ್ರಹಿಸುವುದು ಮುಖ್ಯ ಎಂದರು. ಒಂದು ಚಾರಿತ್ರಿಕ ಘಟ್ಟ ಅಂದಿನ ಸಮಾಜದ ಪರಿಸ್ಥಿತಿ, ರೀತಿ ರಿವಾಜು, ಪ್ರಕ್ರಿಯೆ, ಸಾಮಾಜಿಕ ಸಂಘರ್ಷಗಳನ್ನು ಗ್ರಹಿಸಲು ನೆರವು ನೀಡುತ್ತದೆ. ಹಾಗಾಗಿ ಓಬವ್ವನ ಘಟನೆ ಖಚಿತವಾಗಿ ಇಂಥದ್ದೇ ತೇದಿಯಂದು ನಡೆಯಿತೆಂದು ತಿಳಿಸಲು ಸಾಕ್ಷ್ಯಾಧಾರಗಳ ಕೊರತೆಯಿದ್ದರೂ ಓಬವ್ವನ ಘಟನೆಯ ಉಲ್ಲೇಖ ಅಂದಿನಿಂದ ಇಂದಿನವರೆಗೂ ಉಲ್ಲೇಖವಾಗುತ್ತಾ ಬಂದಿದೆ. ಇಂದು ರಾಷ್ಟ್ರೀಯ ಮಟ್ಟದಲ್ಲಿ ಚಿತ್ರದುರ್ಗ ಎಂದರೆ ವೀರವನಿತೆಯ ನಾಡು ಎಂದೇ ಗುರುತಿಸುತ್ತಿದ್ದಾರೆ. ಅದು ನಮ್ಮ ನಾಡಿಗೆ ಸಂದ ಹೆಮ್ಮೆ ಎಂದರು.

ಹಾಗೆಯೇ ಭಾರತೀಯ ಸಮಾಜದಲ್ಲಿ ಪ್ರತಿಯೊಂದನ್ನು ಲಿಖಿತ ದಾಖಲೆಗಳಲ್ಲಿ ಹುಡುಕುವುದು ಹಾಗೂ ನಿರೀಕ್ಷಿಸುವುದು ಕಷ್ಟದ ವಿಷಯ. ಹಾಗೆಂದರೆ ಅದು ಅಸಾಧ್ಯವಾದ ವಿಷಯ ಎಂದರ್ಥವಲ್ಲ. ಚಾರಿತ್ರಿಕ ಸಂದರ್ಭವನ್ನು ಗ್ರಹಿಸಿಕೊಳ್ಳಲು ನಾವು ಇತರ ಮೂಲಗಳ ಮಾಹಿತಿಯನ್ನು ಪರಿಶೀಲಿಸಬೇಕಾಗುತ್ತದೆ ಅಷ್ಟೇ. ಜನಪದ ಕಾವ್ಯ, ಜನರ ನಡುವೆ ಬಳಕೆಯಲ್ಲಿರುವ ನಾಣ್ಣುಡಿ, ಗಾದೆಗಳು, ಸಾಂಸ್ಕೃತಿಕ ಆಚರಣೆಗಳು, ಕುಲಕಥನಗಳು ಮುಂತಾದ ನೂರಾರು ಬಗೆಯ ಮಾಹಿತಿ ಕೋಶ ನಮ್ಮ ಸಮಾಜದಲ್ಲಿ ಲಭ್ಯವಿವೆ. ಈ ಮಾಹಿತಿ ಕೋಶದಿಂದ ನಮ್ಮ ಅಧ್ಯಯನಕ್ಕೆ ಅಗತ್ಯವಿರುವ ಸಾಕ್ಷ್ಯಾಧಾರಗಳನ್ನು ನಾವು ಪಡೆದುಕೊಳ್ಳಬಹುದಾಗಿದೆ. ಇವು ಕೆಲವು ಸಲ ಸಂಗ್ರಹಿತ ರೂಪದಲ್ಲಿ ಇರಬಹುದು ಮತ್ತೆ ಕೆಲವು ಸಲ ಸಮುದಾಯದಲ್ಲಿ ಮೌಖಿಕವಾಗಿ ಅಥವ ಆಚರಣಾತ್ಮಕವಾಗಿಯೂ ಉಳಿದುಕೊಂಡಿರುತ್ತವೆ. ಅವುಗಳನ್ನು ತಿಳಿದುಕೊಳ್ಳಲು ಕ್ಷೇತ್ರಕಾರ್ಯದಲ್ಲಿ ತೊಡಗಿ ಸಂಗ್ರಹಿಸಬಹುದಾದ ಅನಿವಾರ್ಯತೆಯಿರುತ್ತದೆ. ಅಂಥಹ ಕ್ಷೇತ್ರಕಾರ್ಯವನ್ನು ಓಬವ್ವನ ಬಗ್ಗೆ ಕೈಗೊಂಡು ವಿಷಯ ಸಂಗ್ರಹಣೆ ಮಾಡಬೇಕಿದೆ ಎಂಬುದು ಇಲ್ಲಿ ವೇದ್ಯವಾಗುತ್ತದೆ. ಓಬವ್ವನ ಬಗೆಗಿನ ಆಚರಣೆಗಳನ್ನು ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಲಾಗಿದೆ.

ಹೀಗೆ ಒಂದು ಚಾರಿತ್ರಿಕ ಘಟನೆಯ ವ್ಯಾಪ್ತಿ ತಿಳಿದು ಹೈದರ್‌ನ ದಾಳಿಯ ಹಿನ್ನಲೆಯಲ್ಲಿ ಓಬವ್ವ ತನ್ನ ಸಾಹಸಗಾಥೆಯಲ್ಲಿ ಅನಿವಾರ್ಯವಿಲ್ಲದೆಯೇ ಕೆಚ್ಚನ್ನು ಪ್ರದರ್ಶಿಸಿದ ಓಬವ್ವೆಗೆ, ಹೋರಾಟ ಮಾಡಬೇಕಾಗಿತ್ತೇ? ಅದಕ್ಕೆ ಪೂರಕವಾದ ಯಾವ ಅಂಶಗಳು ಆಕೆಯ ಮೇಲೆ ಪರಿಣಾಮ ಬೀರಿದ್ದವು. ಅಂದಿನ ಆಳ್ವಿಕೆಗಾರರ ಸಮಾಜ ಅಂಥ ಘಟನೆಗಳನ್ನು ಮರೆಸಿ ಮಿಕ್ಕ ಅಂಶಗಳನ್ನು ಗೌಣಗೊಳಿಸುವ ಪ್ರವೃತ್ತಿ ಬೆಳೆಸಿಕೊಂಡಿತ್ತು. ಹೀಗೆ ಅತ್ಯಂತ ವ್ಯವಧಾನದಿಂದ ಸೂಕ್ಷ್ಮವಾಗಿ ಆ ಚಾರಿತ್ರಿಕ ಘಟನೆಯ ಸಂಭಾವ್ಯತೆಯ ಹಿಂದಕ್ಕೂ ಮುಂದಕ್ಕೂ ಗಮನಹರಿಸಿ, ಆಧಾರಗಳನ್ನು ಪರಿಶೀಲಿಸಿ ನೋಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಓಬವ್ವನ ಬಗ್ಗೆ ಅಧ್ಯಯನ ನೆಡೆಸಲು ಸೂಚಿಸಿ ಓಬವ್ವ ದುರ್ಗದ ಇತಿಹಾಸದ ಗರಿಯಿದ್ದಂತೆ ಎಂದಿದ್ದಾಗಿ.

೭.೭. ಶ್ರೀ ಬಸವನಾಗಿ ದೇವರು ಛಲವಾದಿ ಸಂಸ್ಥಾನ. ಚಿತ್ರದುರ್ಗ : ಚಿತ್ರದುರ್ಗದಲ್ಲಿ ಹಿಂದೆ ಯಾರೇ ಆಳ್ವಿಕೆ ನೆಡೆಸಿದ್ದರೂ ಚಿತ್ರದುರ್ಗವೆಂದರೆ ಪಾಳೆಯಗಾರರು, ಪಾಳೆಯಗಾರರೆಂದರೆ ಚಿತ್ರದುರ್ಗ ಎನ್ನುವಷ್ಟರ ಮಟ್ಟಿಗೆ ತಮ್ಮ ವೀರ, ಶೌರ್ಯ, ಪರಾಕ್ರಮಗಳಿಂದಾಗಿ ತಮ್ಮದೇ ಛಾಪು ಮೂಡಿಸಿ ಇಂದಿಗೂ ಅಜರಾಮರರಾಗಿದ್ದಾರೆ. ಪಾಳೆಯಗಾರರು ಕೇವಲ ಆಡಳಿತ, ಯುದ್ಧ, ಹೋರಾಟಕ್ಕೆ ಮಾತ್ರ ಸೀಮಿತರಾಗದೇ ಬಹಳಷ್ಟು ಧರ್ಮಬೀರುಗಳಾಗಿದ್ದರು. ಗುಡಿಗೋಪುರಗಳು, ದೇವಾಲಯಗಳು, ಮಠಮಾನ್ಯ ನಿರ್ಮಾಣಕ್ಕೆ ಕಾರಣವಾಗಿ ರಾಜಕೀಯವಾಗಿ ಮಾತ್ರವಲ್ಲ ದುರ್ಗವು ಧಾರ್ಮಿಕ ನೆಲೆವೀಡಾಗಲೂ ಭಕ್ತಿಪೂರ್ವಕವಾಗಿ ಶ್ರಮಿಸಿ ಶಕ್ತಿ, ಭಕ್ತಿಗಳ ಪರಮಸಂಗಮವೆಂದೇ ಖ್ಯಾತರು. ಅಂದು ಸ್ಥಾಪಿಸಿದ ಹಲವಾರು ಮಠಗಳಲ್ಲಿ ಕೆಲವು ಕಾಲಗರ್ಭದಡಿ ಸೇರಿವೆಯಾದರೂ ಮುರುಘರಾಜೇಂದ್ರ ಬೃಹನ್ಮಠವು ಅಂದಿಗೂ ಇಂದಿಗೂ ಅದೇ ವೈಭವವನ್ನು ಅಪಾರ ಭಕ್ತ ಸಮೂಹವನ್ನು ಹೊಂದಿದ್ದು ಜಿಲ್ಲೆಯ ಐತಿಹಾಸಿಕ ಪರಂಪರೆಯ ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ.

ಮಠದಲ್ಲಿ ಕುಳಿತು ಕೇವಲ ಪೂಜೆ, ಧ್ಯಾನ, ಆಶಿರ್ವಾದ ಮಾಡುವುದಷ್ಟೇ ಸ್ವಾಮೀಜಿ ಕರ್ತವ್ಯ ಮೀಸಲಾಗಿಡಲಿಲ್ಲ. ಜನಸಮುದಾಯದ ನೋವು, ಸಂಕಷ್ಟದಲ್ಲಿ ಪಾಲ್ಗೊಳ್ಳುವಿಕೆ ಅತೀ ಮುಖ್ಯವೆಂದು ಸಮಾಜಮುಖಿ ಹಾಗೂ ಮಾನವೀಯ ಸ್ಪಂದನದ ದಿಕ್ಕಿನಲ್ಲಿ ಹೊಸ ಹೆಜ್ಜೆ ಹಾಕಿದವರು ಶಿವಮೂರ್ತಿ ಮುರುಘಾ ಶರಣರು.

ಇಂಥಹ ಡಾ. ಶಿವಮೂರ್ತಿ ಶರಣರು ಪ್ರತಿಯೊಂದು ಜನಾಂಗವು ಸಂಘಟಿತವಾಗಲಿ, ಉದ್ಧಾರವಾಗಲಿ, ರಾಜಕೀಯ ಲಾಭ ಪಡೆಯಲಿ ಎಂದೇನೋ ಆಲೋಚಿಸಿ ಜಾತಿಗೊಬ್ಬ ಸ್ವಾಮಿಗಳನ್ನು ಮಾಡಿ ತರಬೇತಿಯನ್ನೂ ನೀಡಿ, ತಲಾ ಐದೈದು ಎಕರೆಯಷ್ಟು ಭೂಮಿಯನ್ನು ಮಠಗಳ ಸ್ವಾಯತ್ತತೆಗೆ ಸೀಮಿತಗೊಳಿಸಿ ಪ್ರತಿಯೊಂದು ಮಠ ಬೆಳೆಯಲು ತರಬೇತಿ ನೀಡಿದ್ದಾರೆ. ಹೀಗೆ ಜಾತಿಗೊಬ್ಬ ಸ್ವಾಮಿ ಮಾಡಿದರೆ ಜಾತಿ ಎಲ್ಲಿಗೆ ಹೋಗುತ್ತೇ?, ಇದರಿಂದ ಮುಂದೆ ಆಗುವ ಬೆಳವಣಿಗೆ, ಜಾತಿಗೊಬ್ಬ ಸ್ವಾಮಿಗಳನ್ನು ನೇಮಕ ಮಾಡಿದ್ದು ಅನೇಕರಿಗೆ ಸರಿಕಾಣಲಿಲ್ಲ. ಜಾತಿಗೊಬ್ಬ

ಸ್ವಾಮೀಜಿಯಾದರೆ ಜಾತಿ ಎಲ್ಲಿ ನಾಶವಾಗುತ್ತದೆ ಎಂಬುದು ಹಲವರ ವಾದ. ಹಿಂದುಳಿದವರೆಲ್ಲರೂ ಒಂದಾಗಲು ರಾಜಕೀಯ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕವಾಗಿ ಮುಂದುವರಿಯಲು ಜಾತಿಗೊಬ್ಬ ಸ್ವಾಮೀಜಿಯ ಅಗತ್ಯವಿದೆ ಎಂಬುದು ಪ್ರತಿ ವಾದವಾಗಿದೆ. ಇದೀಗ ಚಿತ್ರದುರ್ಗದ ಆಸುಪಾಸಿನಲ್ಲಿ ಯಾದವಾನಂದರ ಗುರುಪೀಠವಿದೆ. ಮಾದಾರ ಚನ್ನಯ್ಯ ಗುರುಪೀಠ, ರಾಜನಹಳ್ಳಿಯಲ್ಲಿ ವಾಲ್ಮೀಕಿ ಗುರುಪೀಠ ಇನ್ನೂ ಅನೇಕ ಪೀಠಗಳೊಂದಿಗೆ ಮಠಗಳು ತಲೆಯೆತ್ತಿವೆ. ಅದರಲ್ಲಿ ಛಲವಾದಿ ಮಹಾಸಂಸ್ಥಾನವೂ ಒಂದು. ಅದರ ಸ್ವಾಮೀಜಿಯನ್ನಾಗಿ ದೊಡ್ಡಸಿದ್ದವ್ವನಹಳ್ಳಿಯ ನಿವಾಸಿಗಳಾದ ಓಬವ್ವನ ವಂಶದವರು ತಾವೆಂದು ಹೇಳಿಕೊಂಡಿರುವವರಲ್ಲಿ ಒಬ್ಬರಾದ ಬಾಲಚಂದರ್‌ರವರ ಮಗ ಸಿ.ನಾಗೇಂದ್ರರಾವ್ ಮತ್ತು ಜಯಮ್ಮರವರ ಮಗನನ್ನು ಈ ಛಲವಾದಿ ಗುರುಪೀಠದ ಶರಣರನ್ನಾಗಿ ನೇಮಿಸಿ ಶ್ರೀಶ್ರೀ ಬಸವನಾಗಿ ದೇವರೆಂದೇ ಹೆಸರಿಸಿದ್ದಾರೆ. ಈ ಪೀಠದ ಬಸವನಾಗಿ ದೇವ ಇವರನ್ನು ಸಂದರ್ಶಿಸಲಾಗಿ ಓಬವ್ವ ನೇರವಾಗಿ ತಮ್ಮ ವಂಶಕ್ಕೆ ಸೇರಿದವಳೆಂದು ಹೇಳಿದರು. ಜೊತೆಗೆ ವಂಶಪಾರಂಪರ್ಯವಾಗಿ ತಮ್ಮ ವಂಶೀಕರು ನೂರಾರು ವರ್ಷಗಳಿಂದ ಓಬವ್ವನ ಸಮಾಧಿಗೆ ಪೂಜೆ ಮಾಡಿಕೊಂಡು ಬರುತ್ತಿರುವುದಾಗಿ ಅದು ಇಂದು ನೆನ್ನೆಯದಲ್ಲ, ಮೂರು – ನಾಲ್ಕು ತಲೆಮಾರುಗಳಿಂದಲೂ ತಾವು ತಮ್ಮ ಸಮುದಾಯದವರು ಆಚರಿಸಿಕೊಂಡು ಬರುತ್ತಿರುವ ಬಗ್ಗೆ ತಿಳಿಸಿದರು. ಚಿತ್ರದುರ್ಗದ ಚರಿತ್ರೆಯೆಷ್ಟು ಸತ್ಯವೋ ಓಬವ್ವ ಇದ್ದದ್ದು ಅಷ್ಟೇ ಸತ್ಯ ಸಂಗತಿ ಎಂದಿದ್ದಾರೆ. ತಮ್ಮ ಪೂರ್ವಜರ ಅಪೂರ್ವ ಇತಿಹಾಸವನ್ನು, ಸತ್ಯಾಂಶಗಳನ್ನು ಹೊರತರಲು ಶ್ರಮಿಸುತ್ತಿರುವುದಾಗಿ, ಏಕೆಂದರೆ ಇದುವರೆವಿಗೂ ಚಿತ್ರದುರ್ಗದ ಒನಕೆ ಓಬವ್ವಳ ಸಾಹಸವನ್ನು ಗುರುತಿಸುವ ಯಾವ ಶ್ರೇಷ್ಠಮಟ್ಟದ ಸಂಶೋಧನೆಯಾಗಲೀ, ಸತ್ಯಾಸತ್ಯಗಳ ನಿರೂಪಣೆಗಳಾಗಲೀ ಹೊರಬಂದಿಲ್ಲ. ಬಹುಶಃ ಇನ್ನು ಹಲವಾರು ವರ್ಷಗಳಾದ ನಂತರ ಈಕೆಯ ಸಾಹಸ ಘಟನೆಯೇ ಕಾಲಗರ್ಭದಲ್ಲಿ ಕಳೆದು ಹೋದರೂ ಆಶ್ಚರ್ಯಪಡಬೇಕಾಗಿಲ್ಲ. ದಾಖಲೆಗಳನ್ನು ಶೃತಪಡಿಸಿ ತಮ್ಮ ನಾಲ್ಕು ತಲೆಮಾರಿನ ಹಿಂದಿನ ರೋಮಾಂಚಕಾರಿ ಘಟನೆಯನ್ನು ಕುರಿತು ಹೇಳಬೇಕಾದದ್ದು ತುಂಬಾ ಸಂದಿಗ್ಧ ಪರಿಸ್ಥಿತಿಯಾಗಿದ್ದು ದಾಖಲೆಗಳ ಕೊರತೆಯಿಂದಾಗಿ ಕ್ಷೇತ್ರ ಕಾರ್ಯದಲ್ಲಿಯೇ ಜನಪದರ ಬಳಿ ಸಾಗಿ ಸಂಗ್ರಹಿಸಿ ಎಂದು ಸೂಚಿಸಿದರು.

ತಮ್ಮ ವಂಶ ವೀರರ ರಾಜವಂಶವಲ್ಲ, ಛಲದಂಕಮಲ್ಲ, ಆತನ ಹೆಂಡತಿ ಬ್ರಹ್ಮಕುಮಾರಿಯಾದ ಮಾಯಾದೇಶೀ ಎಂಬುವರಿಂದ ಉದ್ಭವವಾದ 'ಛಲವಾದಿ' ವಂಶ ತಮ್ಮದು. ತಮ್ಮ ವಂಶಕ್ಕೆ ಸೇರಿದ ಮಹಿಳೆಯೋರ್ವಳು ಮಾಡಿದಳೆನ್ನಲಾದ ಈ ಘಟನೆ ಕಟುಸತ್ಯವಾದುದು. ಓಬವ್ವ ಗುಡಿಕೋಟೆ ಸಂಸ್ಥಾನದಲ್ಲಿದ್ದ ಛಲವಾದಿ ಚಿನ್ನಪ್ಪನ ಮಗಳಾಗಿದ್ದು ಆಕೆಯ ಚಿತ್ರದುರ್ಗ ಕೋಟೆಯ ಕಹಳೆಯವನಾದ ಮದ್ದಹನುಮಪ್ಪನನ್ನು ವಿವಾಹವಾಗಿ ಕೋಟೆಯನ್ನು ಪ್ರವೇಶಿಸಿದ್ದು ಅಲ್ಲಿಂದ ಕೊನೆಯ ಅರಸರಾದ ರಾಜಾ ವೀರಮದಕರಿನಾಯಕರ ಕಾಲದಲ್ಲಿ ಈ ಘಟನೆ ನಡೆಯಿತು ಎಂದಿದ್ದಾರೆ.

ಹಾಗಾಗಿ ತಮ್ಮ ವಂಶಕ್ಕೆ ಸೇರಿದ ಈ ಧೀರಮಹಿಳೆಯ ಸಾಹಸಗಾಥೆ ಇತಿಹಾಸದಿಂದ ಹೊರತಾದಾಗ ಕಾರಣಗಳು ನೂರಾರು ಕಾಡುತ್ತವೆ. ಆ ಹಿನ್ನೆಲೆಯಲ್ಲಿ ಇತಿಹಾಸಕಾರರು ತಾವೆಂದು ಪ್ರಚಾರ ಪಡೆದುಕೊಂಡವರನ್ನು ಕೇಳಲು ನೂರಾರು ಪ್ರಶ್ನೆಗಳ ಪಟ್ಟಿಯೇ ತಮ್ಮ ಬಳಿಯಿದ್ದು ಕೇವಲ ಗತದಲ್ಲಿ ಬರೆದಿಟ್ಟ ತಾಳೆಗರಿ, ತಾಮ್ರಪಟ, ಶಿಲಾಶಾಸನಗಳನ್ನು ಆಧಾರವಾಗಿಟ್ಟುಕೊಂಡು ಇತಿಹಾಸವನ್ನು ರಚಿಸಿದವರೆ ಈ ಇತಿಹಾಸಕಾರರು. ಆದಾಗಿ ದಾಖಲೆಯಿಂದ ವಂಚಿತವಾದ ವೀರಕಥೆಗಳು ಜನಪದರ ಮನದಲ್ಲಿ ಹಾಸುಹೊಕ್ಕ ಕಥೆಗಳಾಗಿ ಬಂದರೂ ಅವುಗಳಿಗೆ ಮಾನ್ಯತೆಯಿಲ್ಲ. ಅಂಥಹ ಮಾನ್ಯತೆಯನ್ನು ಓಬವ್ವ ಪಡೆಯಲು ಎಲ್ಲಾ ಅರ್ಹತೆಗಳನ್ನು ಹೊಂದಿದ್ದಾಳೆ. ಆಕೆಯ ಆಶಯದಂತೆ ಆಕೆಯನ್ನು ಆಕೆಯ ವಂಶಜರೆಲ್ಲರೂ ಸೇರಿ ಕುಲದೇವತೆಯನ್ನಾಗಿ ಮಾಡಿಕೊಂಡು ಪೂಜಿಸುತ್ತಿರುವುದಾಗಿ ತಿಳಿಸಿದರು. ಆಕೆಗಾಗಿ ತಮ್ಮ ಮನೆಗಳವರೆಲ್ಲರೂ ಸೇರಿಕೊಂಡು ಒಂದು ಪುಟ್ಟ ದೇವಸ್ಥಾನವನ್ನು ನಿರ್ಮಿಸಿಕೊಂಡು ಆಕೆಯನ್ನು ಕಪ್ಪುಶಿಲೆಯಲ್ಲಿ ಸಾಕಾರಗೊಂಡಿರುವ ದೇವತೆಯನ್ನಾಗಿ ಪೂಜಿಸುತ್ತಿದ್ದುದಾಗಿ, ಮದಕರಿನಾಯಕನ ಕಾಲದಲ್ಲಿ ಆಕೆಯ ಮೂರ್ತಿಯನ್ನು ಕಳ್ಳಗಂಡಿಯ ಬಳಿ ಪೂರ್ವಾಭಿಮುಖವಾಗಿ ನಿರ್ಮಿಸಿದ್ದು, ಹೈದರಾಲಿಯ ದಾಳಿಯನಂತರ ಮೂರ್ತಿ ಭಗ್ನವಾಗಿದ್ದು, ಪಾದುಕೆಗಳು ಮಾತ್ರ ಉಳಿದಿದ್ದು ಅವುಗಳನ್ನು ತಂದು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಿರುವುದಾಗಿ ವಿವರಿಸಿದರು. ತಮ್ಮ ವಂಶಸ್ಥರು ಸ್ವಾಮಿಭಕ್ತಿ ಮತ್ತು ರಾಜಸೇವೆಯಲ್ಲಿ ಅನನ್ಯ ನಂಬಿಕೆಯುಳ್ಳ ಹಾಗೂ ನಮ್ರ ಕಿಂಕರರಾಗಿ ಸೇವೆ ಸಲ್ಲಿಸುತ್ತಿದ್ದು 'ಹದಿಮೂರು ಗಡಿ ಕಹಳೆಯವರು'– ಎಂಬ ಹೆಸರು ಪಡೆದಿದ್ದರು. ಈಗಲೂ ಅವರೆಲ್ಲಾ ಪಿಳ್ಳೆಕೆರೆನಹಳ್ಳಿ, ತಮಟಕಲ್ಲು, ಕಸವನಹಳ್ಳಿ, ಅತ್ತಿಗೆರೆ, ಸಜ್ಜನಕೆರೆ, ಸೊಂಡೆಕೆರೆ, ಸಾಣಿಕೆರೆ, ದುಮ್ಮಿ ಮುಂತಾದೆಡೆಗಳಲ್ಲಿ ವಾಸಿಸುತ್ತಿರುವುದಾಗಿ ತಿಳಿಸಿದರು.

ಭಾರತದ ಇತರ ವೀರನಾರಿಯರ ಪಂಕ್ತಿಯಲ್ಲಿ ಸಮಗೌರವ, ಭಾವನೆಗಳೊಡನೆ ಓಬವ್ವೆಯ ಸಾಹಸವೂ ರಾರಾಜಿಸುವಂತೆ ಇತಿಹಾಸವು ಪ್ರದರ್ಶಿಸುವ ಸಿರಿವಂತಿಕೆ ಪಡೆಯಲಿ ಎಂದು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದರು.

೨೦೦೭ ರಲ್ಲಿ ಚಿತ್ರದುರ್ಗದಲ್ಲಿ ಏರ್ಪಡಿಸಿದ್ದ ವೀರವನಿತೆ ಒನಕೆ ಓಬವ್ವನ ಜಯಂತಿಯಲ್ಲಿ ಆಗಿನ ವಿಧಾನ ಪರಿಷತ್ ಸದಸ್ಯೆಯಾಗಿದ್ದ ಶ್ರೀಮತಿ ಮೋಟಮ್ಮ ರವರು ಭಾಗವಹಿಸಿ ನಿರಂತರ ಶೋಷಣೆ, ದೌರ್ಜನ್ಯಕ್ಕೆ ಒಳಗಾಗುತ್ತಿರುವವರು ಓಬವ್ವನನ್ನು ಆದರ್ಶವಾಗಿಟ್ಟುಕೊಂಡು ಸಮಸ್ಯೆಗಳನ್ನು ಎದುರಿಸಬೇಕೆಂದು ಸಲಹೆ ನೀಡಿದರು. ವಿಧಾನ ಪರಿಷತ್ ಸದಸ್ಯರಾಗಿದ್ದ ಶ್ರೀ ಡಿ.ಎಸ್.ವೀರಯ್ಯನವರು ಮಾತನಾಡಿ ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಛಲವಾದಿ ಸಮಾಜದ ಓಬವ್ವಳ ಧೈರ್ಯ, ಶೌರ್ಯ, ಪ್ರಾಮಾಣೀಕತೆ ಶ್ಲಾಘನೀಯ ಎಂದಿದ್ದಾರೆ. ಧೈರ್ಯ, ಸ್ಫೂರ್ತಿ, ಪ್ರಾಮಾಣೀಕತೆಗೆ ಪ್ರೇರಣೆಯಾಗಿರುವ ವೀರವನಿತೆ ಓಬವ್ವ ಎಲ್ಲರಿಗೂ ಆದರ್ಶವಾಗಬೇಕು ಎಂದು ಚಿತ್ರದುರ್ಗ ಬೃಹನ್ಮಠದ ಶಿವಮೂರ್ತಿ ಮುರುಘಾಶರಣರು ಹೇಳಿದರು. ಹಾಗೆಯೇ ಜಿಲ್ಲಾ

ಉಸ್ತುವಾರಿ ಮಂತ್ರಿಯಾಗಿದ್ದ ಸಚಿವ ಬಸವರಾಜ್ ಹೊರಟ್ಟಿಯವರು ಒನಕೆ ಓಬವ್ವನ ಹೆಸರಿನಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಹೇಳಿದ್ದರು, ಎಂದು ಶ್ರೀಗಳು ನೆನಪಿಸಿಕೊಂಡರು. ಹಾಗೆಯೇ ೨೦೧೦ರಲ್ಲಿ ಶ್ರೀಯುತ ಡಿ.ಎಸ್.ವೀರಯ್ಯನವರು,ವಿಧಾನಪರಿಷತ್ ಸದಸ್ಯರು, ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್.ಯಡಿಯೂರಪ್ಪರವರಿಗೆ ಪತ್ರ ಬರೆದು ಒನಕೆ ಓಬವ್ವನ ಸ್ಮಾರಕ ನಿರ್ಮಾಣಕ್ಕೆ ಪತ್ರಬರೆದಿದ್ದು ಸರ್ಕಾರ ೫ ಕೋಟಿ ಕಾಯ್ದಿರಿಸಿ, ಸ್ಮಾರಕ ನಿರ್ಮಾಣಕ್ಕೆ ಬೇಕಾಗಿರುವ ಭೂಮಿಯ ಪ್ರಸ್ತಾವನೆಯ ಕ್ರಿಯೆಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದು ಅನುದಾನ ಸಿದ್ದವಿದೆ ಸ್ಮಾರಕಕ್ಕೆ ಎಂದರು. ಒನಕೆ ಓಬವ್ವನನ್ನು ಕನ್ನಡನಾಡಿನ ವೀರ ಮಹಿಳೆಯರ ಸಾಲಿಗೆ ಓಬವ್ವನನ್ನು ಸೇರ್ಪಡೆ ಮಾಡುವುದೇ ಅವರ ಆಶಯವಾಗಿತ್ತು.

ಈ ರೀತಿಯಾಗಿ ಹಲವಾರು ವಿದ್ವಾಂಸರು ಹಲವು ಬಗೆಯಲ್ಲಿ ಈ ವೀರರಮಣಿಯ ಬಗ್ಗೆ ತಮ್ಮ ವಿಚಾರಧಾರೆಯನ್ನು ಹರುಹಿದರು. ಓಬವ್ವ ಜನಪದರ ಜನಮನದಲ್ಲಿ ತನ್ನ ಛಾಪನ್ನು ಮೂಡಿಸಿದ್ದಾಳೆ. ಚಿತ್ರದುರ್ಗ ಕರ್ನಾಟಕದಲ್ಲಿಯೇ ಬಹುತೇಕ ತನ್ನಲ್ಲಿ ಹುದುಗಿಸಿಕೊಂಡಿರುವ ವಿಚಿತ್ರತೆಗಾಗಿ ಒಟ್ಟಾರೆ ಓಬವ್ವನ ಹೆಸರಿನಿಂದಲೇ ಚಿರಪರಿಚಿತವಾಗಿದೆ. ದುರ್ಗದ ಕಾಲಗರ್ಭದಲ್ಲಿ ಹುದುಗಿಸಿಕೊಂಡಿದ್ದ ಘಟನಾವಳಿಗಳನ್ನು ಬಿಚ್ಚಿ ಹರಡಿಕೊಳ್ಳುತ್ತಾ, ಕೆದಕಿದಷ್ಟು ಆಳಕ್ಕಿಳಿಯುತ್ತಾ, ಹುಡುಕಿದಷ್ಟು ಎತ್ತರಕ್ಕೇರುತ್ತಾ, ಪ್ರತಿ ಹೆಜ್ಜೆಗೂ ಕುತೂಹಲ ಕೆರಳಿಸುತ್ತಾ ಹುಡುಕಾಟ ಹೆಚ್ಚಿಸುತ್ತಿದೆ. ಏನಾದರೂ ಆಗಬಹುದು ಎಂದು ಹುಡುಕುತ್ತಾ ಹೊರಟಾಗ ಇಲ್ಲಿಯ ಭೌಗೋಳಿಕ ಹಿನ್ನೆಲೆ, ಇಲ್ಲಿಯ ಇತಿಹಾಸ ಈ ನೆಲದಲ್ಲಿ ಆಳಿ–ಬಾಳಿದವರ ಬದುಕಿನ ರುದ್ರ ರಮಣೀಯತೆಯತ್ತ ಕೊಂಡೊಯ್ಯುತ್ತದೆ. ಜಿಲ್ಲೆಯ ಉದ್ದಗಲಕ್ಕೂ ಹರಡಿ ಹಬ್ಬಿರುವ ಬೆಟ್ಟ–ಗುಡ್ಡಗಳು, ಕಣಿವೆ ಸಾಲುಗಳು, ಕೋಟೆ–ಕೊತ್ತಲಗಳು, ಸ್ಮಾರಕಗಳು, ಗುಡಿ–ಗೋಪುರಗಳು, ಮಠ–ಮಾನ್ಯಗಳು, ವೀರಗಲ್ಲು–ಮಾಸ್ತಿಕಲ್ಲುಗಳು, ಶಾಸನಗಳು, ಇವೆಲ್ಲಾ ಚಿತ್ರದುರ್ಗದ ಪ್ರಾಚೀನವಾದ, ಭವ್ಯವಾದ ಇತಿಹಾಸವನ್ನು ತೆರೆದಿಡುತ್ತವೆ. ಇಂಥಹ ಚಿತ್ರದುರ್ಗದ ಕೋಟೆಯ ಇತಿಹಾಸದಲ್ಲಿ ವೀರರಮಣಿ ಓಬವ್ವ ತನ್ನ ಸಾಹಸದಿಂದ ಅಮರಳಾಗಿದ್ದಾಳೆ. ಕೋಟೆಗೆ ದಿನವೂ ಸಹಸ್ರಾರು ಪ್ರವಾಸಿಗರು ಬರುತ್ತಾರೆ. ಪ್ರಾಚ್ಯವಸ್ತು ಇಲಾಖೆಯವರು ಪ್ರಾಚೀನತೆಯನ್ನು ಉಳಿಸಿಕೊಂಡು ಹಾಳಾಗುತ್ತಿದ್ದ ಕೋಟೆಯನ್ನು ನಯವಾದ ಕಾಮಗಾರಿಯಿಂದ ಉಳಿಸಿದ್ದಾರೆ. ಹಸಿರು ಬೆಳೆಸಿದ್ದಾರೆ. ಯಾವುದೇ ಒಂದು ಪ್ರದೇಶವು "ಪ್ರವಾಸಿ ಕೇಂದ್ರ" ಅನ್ನಿಸಿಕೊಳ್ಳಲು ಅದು ಐತಿಹಾಸಿಕ ಸ್ಥಳವಾಗಿರಬೇಕು, ಪ್ರಕೃತಿ ಸೌಂದರ್ಯದ ಸೊಬಗಿರಬೇಕು, ಮಾನವ ಸಾಹಸದ ಪ್ರತೀಕ ಕಾಣಬೇಕು, ಸಂಚಾರ ಸೌಲಭ್ಯಗಳ ವ್ಯವಸ್ಥೆಯೂ ಇರಬೇಕು. ಈ ಎಲ್ಲಾ ಅರ್ಹತೆಯನ್ನು "ಗಂಡುಮೆಟ್ಟಿದ ನಾಡು" ಚಿತ್ರದುರ್ಗ ಹೊಂದಿದೆ. ಇಲ್ಲಿನ ಇನ್ನೊಂದು ಸೂಕ್ಷ್ಮ ವಿಚಾರವನ್ನು ಪರಿಶೀಲಿಸಿದಾಗ ಬೇರೆಯ ಇತಿಹಾಸದಂತೆ ಇಲ್ಲಿ ಆಳಿದ ಪಾಳೆಯಗಾರರು ಆಳಿದ ಬಗ್ಗೆ ದೇವಾಲಯಗಳನ್ನು ಕೋಟೆ–ಕೊತ್ತಲು, ಸಾಹಸ ಕಾರ್ಯಗಳ ಬಗ್ಗೆ ಎಲ್ಲಿಯೂ ಅಷ್ಟಾಗಿ ಬರೆದಿಟ್ಟಿರುವ ಬಗ್ಗೆ ನಮಗೆ

ಶಾಸನಗಳು ಕಂಡುಬರುವುದಿಲ್ಲ. ಹಾಗಾಗಿ ನಾಯಕರುಗಳು ತಮ್ಮ ಪ್ರಚಾರತೆಗೆ ಅಷ್ಟು ಪ್ರಾಧಾನ್ಯತೆ ನೀಡಿರಲಿಲ್ಲವೋ, ಅಥವ ತಿಳುವಳಿಕೆಯ ಕೊರತೆಯೋ ತಿಳಿಯದು. ಬೇರೆ ಬೇರೆ ಮೂಲಗಳಿಂದ ಇಲ್ಲಿನ ಇತಿಹಾಸವನ್ನು ಇತಿಹಾಸಕಾರರು ಅರಿಯಲು ಪ್ರಯತ್ನಿಸಿರುವುದು ಗೋಚರಿತವಾಗಿದೆ. ಉದಾಹರಣೆಗೆ ಅವರ ಪತ್ರ ವ್ಯವಹಾರಗಳು, ದೇವರ ಹೆಸರುಗಳು, ಆದ ಯುದ್ಧಗಳ ವರ್ಣನೆಯಿಂದ, ಇಂಥವರ ಮಧ್ಯದಲ್ಲಿ ಇದ್ದ ಓಬವ್ವನ ಸಾಹಸಗಾಥೆಯು ಪ್ರಸ್ಥಾವಿತವಾಗಿದೆ. ಹಾಗಾಗಿ ಜನಪದರ ಜೀವನದಲ್ಲಿ ಹಾಸುಹೊಕ್ಕಿರುವ ಈಕೆಯನ್ನು ಅವರಿಂದಲೇ ಅರಿಯುವಂತಾಗಿದೆ. ನಾಯಕರುಗಳ ಇತಿಹಾಸವನ್ನು ತಮ್ಮ ವಿಶಿಷ್ಟ ಲೇಖನಗಳ ಮೂಲಕ ಅಂದಿನ ಪತ್ರಿಕೆಗಳಿಗೆ ಬರೆದು ದಾಖಲಿಸಿ ಇತಿಹಾಸದ ಎಳೆಯನ್ನು ಬೆಳಗಿದ ಜೋಯಿಸರೇ ಓಬವ್ವನ ಇತಿಹಾಸವನ್ನು ಮರುನೆನಪಿಸಿದ್ದಾರೆ. ಇತಿಹಾಸದಲ್ಲಿ ಬೆಳಗಿದ್ದಾರೆ. ಶತಶತಮಾನಗಳಿಂದಲೂ ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಸಾಹಿತ್ಯವಾಗಿ ವಂಚಿತವಾದ ಹೆಣ್ಣುಕುಲ ಇಲ್ಲಿ ಶಕ್ತಿ ಮತ್ತು ಅಸ್ತಿತ್ವವನ್ನು ಗುರುತಿಸಿಕೊಂಡಳು. ಪ್ರಾಚೀನ ಕಾಲದಿಂದಲೂ ಹೆಣ್ಣಿನ ಬದುಕು ಮತ್ತು ಸ್ಥಾನಮಾನಗಳು ವಿರೋಧಾಭಾಸಗಳಿಗೆ ಒಳಗಾಗಿಯೇ ಬೆಳೆದುಕೊಂಡು ಬಂದಿದೆ ಎಂಬುದು ಒಂದು ಅಭಿಪ್ರಾಯವಾದರೆ ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬ ಮಾತು ಮತ್ತೊಂದು ಕಡೆ ಕಾಣಿಸುತ್ತದೆ. ಪಂಚ ಪತಿವ್ರತೆಯರನ್ನು ಸೃಷ್ಟಿ ಮಾಡಿ ಅವರಿಗೊಂದು ದೊಡ್ಡ ಸ್ಥಾನವನ್ನು ಕಲ್ಪಿಸಿಕೊಟ್ಟು ವಿಶೇಷಣಗಳನ್ನು ಹಚ್ಚಿದ ಸಮಾಜದಲ್ಲಿಯೇ ಹೆಣ್ಣು ಅನಾದರಕ್ಕೊಳಗಾಗಿ ಹೇಗೆಂದರೆ ಹಾಗೆ ದುರುಪಯೋಗಗೊಂಡು ಭೋಗದ ವಸ್ತುವಾಗಿಯೇ ಜೀವನ ಮಾಡಿದ ಸಂಧರ್ಭಗಳೇ ಹೆಚ್ಚು. ಪ್ರಾಚೀನ ಕಾಲದಿಂದಲೂ ಬಾಲ್ಯ ವಿವಾಹ, ದೇವದಾಸಿ ಪದ್ಧತಿ, ಸಾರ್ವಜನಿಕ ಹಿತಕ್ಕಾಗಿ ಸ್ತ್ರಿಯನ್ನು ಬಲಿಕೊಡುವುದು, ಸಹಗಮನ ಇವೆಲ್ಲವೂ ಹೆಣ್ಣು ಮಕ್ಕಳ ಮೇಲೆ ಸಾಕಷ್ಟು ದಾಳಿ ನಡೆಸಿವೆ.

ಕೆಂಡ ಕೊಂಡವಾದವರ ಮತ್ತು ನೀರು ಪಾಲಾದವರ ಕಥೆಗಳಲ್ಲಿ ಸ್ತ್ರೀಯ ತ್ಯಾಗದ, ಪತಿ ಪ್ರೇಮದ ಒಂದು ಮುಖವನ್ನು ಕಾಣುತ್ತೇವೆ. ಚಿತ್ರದುರ್ಗದ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಜನಪದ ಬದುಕಿರುವುದೇ ನಿಮ್ನ ವರ್ಗದವರ ಬಾಯಲ್ಲಿ, ಜನಾಂಗದಲ್ಲಿ ಕ್ವಚಿತ್ತಾಗಿ ಉಳಿದಿದೆ. ಈ ಜಿಲ್ಲೆಯಲ್ಲಿ ಗಮನಿಸಬೇಕಾದದ್ದು ಎಂದರೆ ವೀರರನ್ನು ಕುರಿತ ಆಚರಣೆ,ಸಾಹಿತ್ಯವನ್ನು ವೀರನಿದ್ದ ಎನ್ನುವ ಕುರುಹಾದ ಕತ್ತಿ, ಚಾಕು, ವೀರನಿಗೆ ಸಂಬಂಧಿಸಿದ ಕಲ್ಲು, ಗುಡಿ, ಸಮಾದಿಗಳು, ಸತಿಯರ ಕೊಂಡಗಳು ಮೊದಲಾದವನ್ನು ಆದಿಮ ಕಾಲದಿಂದಲೂ ಇವರು ಪೂಜಿಸುತ್ತಾ ಬಂದಿದ್ದಾರೆ. ಇಲ್ಲಿ ಜನಪದ ಸಂಸ್ಕೃತಿಯೊಳಗಿದ್ದು ಶಿಷ್ಟಗೊಂಡ ಹೆಣ್ಣನ್ನು ಕಾಣಬಹುದು. ಶಿಷ್ಟದಲ್ಲಿದ್ದೂ ಜನಪದ ಸಂಸ್ಕೃತಿಯನ್ನು ಉಳಿಸಿಕೊಂಡಿರುವ ಹೆಣ್ಣನ್ನು ಕಾಣಬಹುದು. ಭೂಮಿಯನ್ನು ಸ್ತ್ರೀಯರೊಡನೆ ಹೋಲಿಸುವುದನ್ನು ಸಂಸ್ಕೃತಿಯ ಬೇರೆ ಬೇರೆ ಹಂತದ ಚಿಂತನೆಯಲ್ಲಿ ಕಾಣಬಹುದು. ಇಲ್ಲಿ ಇಂಥಹ ಮೌಖಿಕ ಕಥನಗಳು ವರ್ತಮಾನದಿಂದ ಇತಿಹಾಸವನ್ನು ನಿರೂಪಿಸುತ್ತವೆ ಎನ್ನುವುದಕ್ಕೆ ಸ್ತ್ರೀ ಓಬವ್ವ

ಹೆಣ್ಣು ಎಂದರೆ ದೇಹವಲ್ಲ, ಹೆಣ್ಣು ಎಂದರೆ ಕೇವಲ ಕಾಮವಲ್ಲ, ದುರಂತವೆಂದರೆ ನಮ್ಮ ಚರಿತ್ರೆ ಕೇವಲ ಹೆಣ್ಣು ದೇಹವಾಗಿಯೇ ಗ್ರಹಿಸುತ್ತಾ ಬಂದಿದೆ. ಅಂಥಹ ಮಾನವ ಚರಿತ್ರೆಯಲ್ಲಿ ಓಬವ್ವನ ಘಟನೆ ಸ್ತುತ್ಯಾರ್ಹ. ಅಂಥಹ ಮಾನವ ಚರಿತ್ರೆಗೆ, ಗಂಡು ಸಂತತಿಗೆ ಅಕ್ಕ ಕೊಟ್ಟ ಉತ್ತರ ಎಚ್ಚರಿಕೆಯೂ ಹೌದು.

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದಡೆ
ತನುವಿನ ಸೂತಕಕ್ಕೆ ತೆರಹುಂಟೆ[೨]

ಅಡಿ ಟಿಪ್ಪಣಿಗಳು

೧. ಡಾ. ಲಕ್ಷ್ಮಣ ತೆಲಗಾವಿ, ಹರಿತಿ ಸಿರಿ, ೧೯೮೭, ಪುಟ ಸಂಖ್ಯೆ-೧೮೬

೨. ಪ್ರೊ. ಕೆ.ಸೀತಮ್ಮ, ಮಹಿಳಾ ಅಧ್ಯಯನದ ಮಜಲುಗಳು, ೨೦೦೮, ಪುಟ ಸಂಖ್ಯೆ-೧೦

ಭೇಟಿ ಮಾಡಿದ ವಿದ್ವಾಂಸರು

೧. ಹಂಪಾ ನಾಗರಾಜಯ್ಯ, ಹಂಪನಕಟ್ಟೆ, ಚಿಕ್ಕಬಳ್ಳಾಪುರ.ಜಿಲ್ಲೆ

೨. ನಾಡೋಜ ಕಮಲ ಹಂಪನಾ, ಬೆಂಗಳೂರು.

೩. ಲಕ್ಷ್ಮಣ ತೆಲಗಾವಿ, ಸಂಶೋಧಕರು ಚಿತ್ರದುರ್ಗ

೪. ಬಿ. ರಾಜಶೇಖರಪ್ಪ, ಇತಿಹಾಸ ಸಂಶೋಧಕರು ಚಿತ್ರದುರ್ಗ

೫. ಡಾ. ಪಿ.ಬಿ ಶಿವಣ್ಣ, ನಿವೃತ್ತ ಪ್ರಾಧ್ಯಾಪಕರು, ಮೀರಾಸಾಬಿಹಳ್ಳಿ, ಚಿತ್ರದುರ್ಗ ಜಿಲ್ಲೆ

೬. ಡಾ. ಬಂಜಗೆರೆ ಜಯಪ್ರಕಾಶ್‌ರವರು, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೭. ಶ್ರೀ ಬಸವ ನಾಗೀದೇವರವರು, ಛಲವಾದಿ ಪೀಠ, ಚಿತ್ರದುರ್ಗ

ಅಧ್ಯಾಯ : ೮

ಓಬವ್ವನ ನಾಡ ಪ್ರೇಮ ಮತ್ತು ಆಶಯ

ಅಧ್ಯಾಯ : ಎಂಟು

ಓಬವ್ವನ ನಾಡ ಪ್ರೇಮ ಮತ್ತು ಆಶಯ

ದುರ್ಗದ ಇತಿಹಾಸದಲ್ಲಿ ಕೆಂಪು ರಕ್ತವನ್ನು ಸುರಿಸಿದ ಚಿತ್ರದುರ್ಗ ಕೋಟೆಯು ತನ್ನದೇ ಆದ ಮೌಲ್ಯವನ್ನು ಉಳಿಸಿಕೊಂಡಿದೆ. ಅದರಲ್ಲಿ ಒಬ್ಬಳಾದ ಒನಕೆ ಓಬವ್ವನನ್ನು ಮರೆಯಲು ಅಸಾಧ್ಯವಾದ ಇತಿಹಾಸ ಜೀವಂತಿಕೆಯಾಗಿದೆ. ಓಬವ್ವ ನಾಡಪ್ರೇಮ, ಕಾಳಜಿ, ಮನೋಸ್ಥೈರ್ಯ, ಸೇವಾ ಮನೋಭಾವವನ್ನು ರೂಢಿಸಿಕೊಂಡವಳೆಂಬುದು ಸಾಬೀತಾಗಿದೆ. ಓಬವ್ವನಿಗೂ ಹಾಗೂ ಚಿತ್ರದುರ್ಗದ ಸಂಸ್ಕೃತಿಗೂ ಅವಿನಾಭಾವ ಸಂಬಂಧ ಬೆಳೆದಿದ್ದು, ಓಬವ್ವಳ ಬಗ್ಗೆ ಅನೇಕ ವಿದ್ವಾಂಸರು ತಮ್ಮದೇ ಆದ ಭಾವನೆಗಳನ್ನು ಆಕೆಯ ಬಗೆಗೆ ವ್ಯಕ್ತಪಡಿಸಿದ್ದಾರೆ.

ವರ್ಗ ಮತ್ತು ವರ್ಣ ಸಂಸ್ಕೃತಿಯ ತಾರತಮ್ಯ ಭಾರತದಲ್ಲಿ ನಿರಂತರವಾಗಿ ಸಂಘರ್ಷವಾಗಿದೆ. ದುರ್ಗದ ಓಬವ್ವನ ಬಗೆಗೆ ಅಧ್ಯಯನ ಮಾಡಲು ಹೊರಟಾಗ ಮೊದಲು ಎದುರಾದದ್ದು ಜಾತಿಯ ವಿಷಯ, ತಾವು ಓಬವ್ವನ ವಂಶಜರೆಂದು ಹೇಳಿಕೊಂಡವರ ಭಕ್ತಿ, ಭಾವ ತುಂಬಾ ವಿಚಿತ್ರವಾಗಿತ್ತು, ಗಾಢವಾಗಿತ್ತು. ಚರಿತ್ರೆಯ ಏರಿಳಿತ ನೋಡಿದಾಗ ಉಪನಿಷತ್ ಕಾಲದ ಧರ್ಮ ಅಂತರಂಗದ ಉನ್ನತಿಗೆ ಹಾತೊರೆದಿತ್ತು. ಮುಂದೆ ಜಾತಿ ಪದ್ಧತಿಯನ್ನು ವೈಭವೀಕರಿಸಿ ಅದೇ ಧರ್ಮ ಎಂಬಂತಾಯ್ತು. ಈಗ ಚೇತರಿಕೊಳ್ಳುತ್ತಿರುವ ಕಾಲದಲ್ಲಿ ಈ ಭಿನ್ನತೆ ಮತ್ತೆ ಭುಗಿಲೆದ್ದಿದೆ. ಈ ಭಿನ್ನತೆಯ ಅಂಟು ಜಾಡ್ಯ ಯಾವುದನ್ನೂ ಬಿಟ್ಟಿಲ್ಲ. ಸಮಾನತೆಗಾಗಿ ದುಡಿದ ಚಿಂತಕರಲ್ಲೂ ಈ ಭಿನ್ನತೆಯನ್ನು ಕಾಣುತ್ತೇವೆ. ಅವರ ಚಿಂತನೆಗಳಲ್ಲೂ ಭಿನ್ನತೆ ಕಾಣುತ್ತೇವೆ. ಇನ್ನಾದರೂ ನಮ್ಮ ನೋಟ ಬದಲಾಗಬೇಕು ಎನ್ನಿಸುತ್ತದೆ. ಇಲ್ಲಿ ಬಹು ಪ್ರಮುಖವಾದ ಅಂಶ ಯಾವುದೇ ಚಿಂತಕನೂ ಪೂರ್ಣನಲ್ಲ. ಯಾವುದೇ ಚಿಂತನೆಯೂ ಪೂರ್ಣವಲ್ಲ. ಅಂಬೇಡ್ಕರ್, ಗಾಂಧಿ, ಲೋಹಿಯಾ, ಮಾರ್ಕ್ಸ್ ಯಾರೇ ಆಗಲಿ ಅವರ ನಡುವೆ ಸಾಮ್ಯ ಗುರುತಿಸುವ ಪ್ರವೃತ್ತಿ

ಬೆಳೆಸಿಕೊಳ್ಳಬೇಕಾಗಿದೆ, ಕಸಿ ಮಾಡುವ ಐಕ್ಯತೆಯ ಕಣ್ಣು ನಮ್ಮದಾಗಬೇಕಿದೆ. ಸಮಾಜದಲ್ಲಿನ ಹಲವಾರು ಅನಿವಾರ್ಯತೆಗಳಿಂದ ಸರ್ವರೂ ಎಲ್ಲಾ ಘಟನೆಗಳಿಗೆ ದಾಖಲೆಗಳನ್ನಿಡುವುದು ಅಸಾಧ್ಯ. ಆಳುವ ವರ್ಗದ ಕೃಪೆಯಿಂದ ಮೇಲ್ವರ್ಗದವರಲ್ಲಿ ಕೆಲವು ಸಮಾನ ಲಕ್ಷಣಗಳನ್ನು ಕಾಣಬಹುದು. ದನಿ ಇಲ್ಲದೇ ಮಲಗಿರುವವರ ದನಿಯಾಗಬೇಕು ಇತಿಹಾಸ. ಅದಲ್ಲದೆ ದಾಖಲೆಗಳಲ್ಲಿ ದಾಖಲಾಗದ ಓಬವ್ವನದು ಒಂದು ಪಾತ್ರ ಚಿತ್ರಣದಂತೆ ಎಂಬುದು ಹಲವರ ಅಭಿಪ್ರಾಯ, ಏಕೆಂದರೆ ಲಿಖಿತವಾಗಿ ತಾಳೆಗರಿಗಳಲ್ಲಾಗಲೀ, ಶಾಸನಗಳಲ್ಲಾಗಲೀ, ಎಲ್ಲೂ ಒಂದು ಸಾಲಿನ ಉಲ್ಲೇಖವಿಲ್ಲ ಹಾಗಾಗಿ ಓಬವ್ವನದು ಲಿಖಿತವಲ್ಲದ ಇತಿಹಾಸವಾಗಿದೆ ಎನ್ನುವುದು ಹಲವರ ಅಭಿಪ್ರಾಯ. ಇದನ್ನು ಅವಲೋಕಿಸುತ್ತಾ ಸಾಗಿದರೆ ಇತಿಹಾಸವೆಂದರೇನು? ಎಂಬ ಪ್ರಶ್ನೆ ಧುತ್ತನೆ ಎದುರಾದಾಗ ಉತ್ತರ ಏನು..? "ದ್ವಂದ್ವ ಚಿಂತನೆ ಕೆಲವೊಮ್ಮೆ ಅನಿವಾರ್ಯ. ಜಾತಿ, ಧರ್ಮ, ಲಿಂಗ, ತಾರತಮ್ಯಗಳ ನಡುವೆ ದ್ವಂದ್ವ ಚಿಂತನೆಯು ಒಂದು ಬಗೆಯಲ್ಲಿ ಪ್ರತಿರೋಧವಾಗಿ ಮೈದಾಳಿರುತ್ತದೆ. ಅದು ತಪ್ಪಲ್ಲ."[೧] ಅಭಿವ್ಯಕ್ತಿಯ ಕೊಂಡಿಗಳನ್ನುಬೆಸೆಯುವಲ್ಲಿ ದ್ವಂದ್ವ ಪ್ರಮುಖವಾದರೂ ಅದು ಪ್ರಸ್ತುತ, ಅನಿವಾರ್ಯ. ಇಲ್ಲಿ ದುರ್ಗದ ಇತಿಹಾಸವನ್ನು ಅವಲೋಕಿಸಿದಾಗ ಓಬವ್ವ ಎಂಬ ಮೂರಕ್ಷರ ನಾರೀಮಣಿ ಧುತ್ತೆಂದು ಏಕಾಏಕಿಜನತೆಯ ಬಾಯಲ್ಲಿ ಬಂದವಳಲ್ಲ ಎಂಬುದನ್ನು ನಾವು ಮನಗಾಣಬೇಕು. ಹಾಗೆಯೇ ದುರ್ಗವನ್ನಾಳಿದ ನಾಯಕಮಣಿಗಳು ಜನಪ್ರಿಯತೆಗಳ ಬೆನ್ನತ್ತಿ ಹೋದವರಲ್ಲ ಎಂಬುದು ಸಹ ದುರ್ಗದ ಇತಿಹಾಸದಿಂದ ತಿಳಿದುಬಂದಿರುವ ವಿಚಾರ. ಇಂಥವರ ನಾಡಿನಲ್ಲಿದ್ದ ಓಬವ್ವ, ಆಕೆಯ ಸಾಹಸದ ಘಟನೆಯು ಉಲ್ಲೇಖಗೊಳ್ಳದೇ ಇರಲು ಇದೇ ಕಾರಣಗಳು ಇರಬಹುದೇನೋ ಎಂಬ ಸಂದೇಹ ಮೂಡುತ್ತದೆ. ಪೂರ್ವ ಘಟನೆಗಳಲ್ಲಿ ಅಲ್ಲದಿದ್ದರೂ ಜನಪದರ ಆಚರಣೆಗಳಲ್ಲಿ ಸಾಗಿ ಬಂದಿದ್ದಾಳೆ ಓಬವ್ವ "ಜನತೆ ಸತ್ಕಾರ್ಯ ಶೀಲರಿಗೆ ಇಂಥ ಅಪೂರ್ವ ಸ್ಮಾರಕಗಳನ್ನು ತಮ್ಮ ನಾಲಗೆಯಲ್ಲಿಯೇ ನಿರ್ಮಿಸಿಕೊಂಡು ಅವರ ಆದರ್ಶ ಜೀವನವನ್ನು ಸ್ಮರಿಸುತ್ತಾ ಕೊಂಡಾಡುತ್ತಾರೆ.[೨] ತನ್ನ ಒಂದು ತ್ಯಾಗ, ವೀರ, ನಿಷ್ಠೆ, ಸತ್ಯ, ಧರ್ಮಗಳಿಂದ ಜನತೆಯ ಶ್ರೇಯಸ್ಸಿಗಾಗಿ ತಮ್ಮ ಪ್ರಾಣಾರ್ಪಣೆ ಮಾಡಿದವರಿಗೆಲ್ಲಾ ಕಾಲಕ್ರಮದಲ್ಲಿ ದೇವರ ಪಟ್ಟವೇ ದೊರಕುತ್ತದೆ. ಆರಾಧಿತರಾಗುವ ಬದುಕಿನ ಭಾಗ್ಯ ದೊರೆಯುತ್ತದೆ. ಆಕೆಯ ಜಾತಿಯನ್ನು ಕುರಿತು ಚಿತ್ರದುರ್ಗದ ಗೆಜೆಟಿಯರ್‌ನಲ್ಲಿ ಬೇಡ ಮಹಿಳೆ ಎಂದು ನಮೂದಿಸಲಾಗಿದೆ. ದಾಖಲಾತಿಗಳು ಸಿಕ್ಕದೇ ಇದ್ದ ಕಾಲಘಟ್ಟದಲ್ಲಿ ಸಿಕ್ಕ ಐತಿಹ್ಯದ ಆಧಾರದ ಮೇಲೆಯೇ ಓಬವ್ವನ ಜಾತಿ ಬಗ್ಗೆ ಉಲ್ಲೇಖಿಸಲಾಗಿತ್ತು. ಆದರೆ ಕಾಲಾ ನಂತರದಲ್ಲಿ ಅನೇಕ ಲೇಖನಗಳು. ಸಂಶೋಧನೆಗಳು ಬೆಳಕಿಗೆ ಬಂದು ನಿಖರವಾದ ಆಚರಣೆಗಳು, ರೂಢಿ–ಸಂಪ್ರದಾಯಗಳು, ವಾರ್ಷಿಕ ಆಚರಣೆಗಳು ಬೆಳಕಿಗೆ ಬಂದು ಛಲವಾದಿಗರ ಹೆಣ್ಣುಮಗಳೆಂದು, ಆಕೆಯ ವಂಶಜರ ಇರುವಿಕೆಯು ಜ್ಞಾತವಾಗಿದೆ. ಹಾಗಾಗಿ ಆಕೆಯ ವಂಶಸ್ಥರು ತಾವು ಎಂದು ತಿಳಿಸಿ ಅದಕ್ಕೆ ಪೂರಕವಾದ ಹಲವು ದಾಖಲೆಗಳನ್ನು ನೀಡಿರುತ್ತಾರೆ. ರಾಜಾ ಎಸ್ ಪಾಳೆಗಾರರು

ಪರುಶುರಾಮನಾಯ್ಕರು ನೀಡಿದ್ದರು ಎನ್ನಲಾದ ರಹದಾರಿ ಪತ್ರವನ್ನು ನೀಡಿರುತ್ತಾರೆ. ಹಾಗಾಗಿ ಆಕೆ ಛಲವಾದಿ ವಂಶವಳಾಗಿದ್ದಾಳೆ. ಆಕೆಗೆ ಸಂಬಂಧಪಟ್ಟವರು ತಾವು ಎಂದು ಹೇಳಿ, ಆಕೆಯ ವಂಶಜರ ಕಥನಗಳನ್ನು ಹೇಳಿ ನಿರೂಪಿಸಿದ್ದಾರೆ. ಹಾಗೂ ದೇವಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ. ಕುಲದೇವತೆಯ ಆಚರಣೆ, ವಾರ್ಷಿಕ ಆಚರಣೆಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಈ ಹಿಂದೆ ಇಂದಿನಷ್ಟು ಜಾತಿ ಭೂತಾಕಾರವಾಗಿ ಬೆಳೆದಿರಲಿಲ್ಲ. ಬೇರೆ ಬೇರೆ ಜಾತಿಯವರು ತುಂಬಾ ಆತ್ಮೀಯರಾಗಿದ್ದರು. ಒಂದು ಮನೆಯ ಹೊಸ್ತಿಲ ಒಳಗೆ ಮೇಲು ಎಂದವ ಹೊಸ್ತಿಲ ಹೊರಗೆ ಕೆಳಗೆ ಎಂದವರು ಕುಳಿತು ಊಟ ಮಾಡುತ್ತಿದ್ದರು, ಆತ್ಮೀಯವಾಗಿದ್ದರು. ಜನ ಬದುಕಲೆಂದು ಬರುವೆನೆಂದು ಹೇಳಿದ ರಾಘವಾಂಕ ಕವಿ ಹೇಳಿದ ಮಾತು ಇಲ್ಲಿ ತುಂಬಾ ಪ್ರಸ್ತುತವಾಗುವುದು. ಎಲ್ಲಾ ಇದ್ದದ್ದು ಜನಕ್ಕಾಗಿ, ಸಾಹಿತ್ಯ, ಸಂಗೀತ, ಕಲೆ, ಪುರಾಣ, ಧರ್ಮ, ದೇವರು, ದೇಶವನ್ನು, ಜನತೆಯನ್ನು ನಾಶಮಾಡುವ ಯಾವುದೇ ವಿಷಯ ಜನ ವಿರೋಧಿಯಾಗುವುದು, ಅಂಥ ಜನ ವಿರೋಧಿಯಾದ ಯಾವುದೇ ವಸ್ತುವಿಗೆ ನಾವು ಜೀವಂತವಾಗಿರಲು ಬಿಡಬಾರದು.

ಓಬವ್ವನ ವಂಶಸ್ಥರು ತಾವೆಂದು ಗುರುತಿಸಿಕೊಂಡವರು, ಹೇಳುವ ಪ್ರಕಾರ ತಾವು ಅಂದರೆ ಓಬವ್ವ ಎಂದರ್ಥ. ಆದರೆ ಓಬವ್ವನ ನಿಸ್ವಾರ್ಥದ ಸಾಹಸದ ಮಾತಿರಿಲಿ, ಆಕೆಯ ಹೆಸರನ್ನೂ ಉಲ್ಲೇಖಿಸದೇ, ಸ್ಮರಿಸದೇ ಚಿತ್ರದುರ್ಗದ ಇತಿಹಾಸವನ್ನು ಹಲವು ವಿದ್ವಾಂಸರು ರಚಿಸಿರುವುದು ಅತಿಸೋಜಿಗದ ಹಾಗೂ ಖೇದದ ಸಂಗತಿ ಎಂದಿದ್ದಾರೆ.. ಬಹುಶಃ ಪರಿಶಿಷ್ಟ ಜಾತಿಯ ಈ ಓಬವ್ವಳ ಬಗ್ಗೆ ಬರೆದ ಬರವಣಿಗೆ ಕರ್ನಾಟಕದ ಇತಿಹಾಸಕ್ಕೆ ಕಳಂಕವನ್ನುಂಟು ಮಾಡೀತೆಂಬ ಧೋರಣೆಯೋ ಏನೋ ಎಂದಿದ್ದಾರೆ. ಪ್ರಾಜ್ಞರು ಈ ಜಿಜ್ಞಾಸೆಯನ್ನು ನಿರ್ಧರಿಸಲಿ ಹಾಗೂ ನಿವಾರಿಸಲಿ. ನಿಷ್ಪಕ್ಷಪಾತದಿಂದ ವಿವೇಚಿಸದೇ ಈ ಒನಕೆ ಓಬವ್ವಳು ಪ್ರದರ್ಶಿಸಿರುವ ಸ್ಥಿತಪ್ರಜ್ಞೆ ಶ್ಲಾಘನೀಯ ಎಂದು ಹೇಳಿದ್ದಾರೆ, ತಿಳಿದಿದ್ದಾರೆ.

ಇಲ್ಲಿ ಪರಿಗಣಿಸಬೇಕಾದ ಸಂಗತಿಯೆಂದರೆ ಹಲವೊಮ್ಮೆ ಇತಿಹಾಸಕಾರರು ಸಣ್ಣಮಟ್ಟ ಹಾಗೂ ಪರಿಗಣಿಸಲರ್ಹವಲ್ಲದ ಘಟನೆಗಳನ್ನು ಮರೆಯದೆ ಉಲ್ಲೇಖಿಸಿದ್ದಾರೆ. ಆದರೆ ಇಂತಹ ಸಾಹಸೀ ಮಹಿಳೆಯ ರೋಮಾಂಚಕಾರಿ ಘಟನೆ ದಾಖಲಿಡುವಲ್ಲಿ ಜಾತೀಯತೆಯಾಗಲೀ, ಪ್ರಚಾರತೆಯಾಗಲೀ ಪ್ರಮುಖ ಕಾರಣವಲ್ಲ ಎಂಬುದನ್ನು ಮನಗಾಣಬೇಕು. ಏಕೆಂದರೆ ಇತಿಹಾಸದ ದಾಖಲೆಗಳು ಲಿಖಿತ ರೂಪದಲ್ಲಿ ದೊರೆತಾಗ ಅವು ಯಾವ ದಾಖಲಾತಿಗಳೇ ಆಗಲಿ ಅವು ಪ್ರಚುರವಾಗುತ್ತವೆ. ಇತಿಹಾಸವೆಂದರೆ ಪುರಾಣ, ಪುರಾಣವೆಂದರೆ ನಮಗೆ ಇತಿಹಾಸ. ಪಾಶ್ಚಾತ್ಯ ವಿದ್ವಾಂಸರು ಅಥವಾ ಸ್ಥಳೀಯ ಸಾಂಪ್ರದಾಯಸ್ಥ ವಿದ್ವಾಂಸರು ಎನಿಸಿಕೊಂಡಿರುವವರು ಬರೆದರೆ ಮಾತ್ರ ಅದು ಅಧಿಕೃತ ಬರಹ ಎಂಬ ಕಾಲವೊಂದಿತ್ತು. ಆದರೆ ಇಂದು ಇತಿಹಾಸ ದೃಷ್ಟಿಕೋನ ಬದಲಾಗಿದೆ. ಕಾಲಮಾನದ ಪೂರ್ವಗ್ರಹ ಪೀಡಿತರ 'ಚರಿತ್ರೆ' ರಚನೆಯನ್ನು ಪುನರ್ ಪರಿಶೀಲಿಸಿ, ವಾಸ್ತವತೆಗೆ ಹೆಚ್ಚು ಗಮನವನ್ನು ಹರಿಸಬೇಕಾದ ಕೆಲಸ ಜರೂರಾಗಿ ನಡೆಯಬೇಕಾಗಿದೆ.[3] ಎಂಬುದು ಈಗಿನ ವಾಸ್ತವವಾಗಿದೆ.

ವೇದ ನಡುಗಿತ್ತು, ಶಾಸ್ತ್ರವನಗಲಿ ಕೆಲಕ್ಕೆ ಸಾದಿತ್ತಯ್ಯಾ
ತರ್ಕ ತರ್ಕಿಸಲರಿಯದೆ ಮೂಗುವಟ್ಟೆದಿತ್ತಯ್ಯಾ!
ಆಗಮ ಹೊರತೊಲಗಿ ಅಗಲಿದಿತ್ತಯ್ಯಾ !
ನಮ್ಮ ಕೂಡಲ ಸಂಗಯ್ಯನು

ಮಾದಾರ ಚೆನ್ನಯನ ಮನೆಯಲುಂಡ ಕಾರಣ ಬಸವಣ್ಣನವರ ಈ ಸಾಲಿನಲ್ಲಿ ವೈದಿಕ ಶ್ರೇಣಿಕೃತ ಸಮಾಜದ ಕಟ್ಟಕಡೆಯ ಜಾತಿಯಾದ ಮಾದಾರ ಜಾತಿಯ ಚನ್ನಯ್ಯನವರ ಮನೆಯಲ್ಲಿ ಅಂಬಲಿಯನ್ನು ಕುಡಿಯುವುದರ ಮೂಲಕ ಬಸವಣ್ಣನವರು ದೇವರು ಮತ್ತು ವೈದಿಕ ವ್ಯವಸ್ಥೆಗೆ ಪ್ರಶ್ನಾತೀತವಾದರು. ಅಂದರೆ ಹನ್ನೆರೆಡನೆಯ ಸೃಜನಶೀಲ ಸಾಹಿತ್ಯದ ಬೆಳವಣಿಗೆಯಿಂದ ಅಂದಾಗ ಇದರ ಪ್ರಚುರತೆಯನ್ನು ಗಮನಿಸಿದ ಇತಿಹಾಸಕ್ಕೆ ಜಾತೀಯತೆಯ ಸೋಂಕು ಅಷ್ಟಾಗಿ ಇರಲಾರದೆಂಬುದು ವೇದ್ಯ. "ಸರ್ವೇಜನ ಸುಖಿನೋಭವಂತು" ಜಗತ್ತಿನ ಎಲ್ಲಾ ಜನರು ಸುಖವಾಗಿರಲಿ ಅನ್ನುವುದು ಹಿಂದೂಗಳ ಸನಾತನ ಹಿಂದು ಧರ್ಮದ ಭೋಧನೆ. ಪುರಾಣಗಳು ನಮ್ಮ ವೈದಿಕ ಧರ್ಮದ ಪ್ರಾಚೀನ ಗ್ರಂಥಗಳು. ಇವು ನಮ್ಮ ಇತಿಹಾಸ ಮತ್ತು ಭೌಗೋಳಿಕ ದಾಖಲೆಗಳು ಹೌದು ಇವು ಒಂದು ದೊಡ್ಡ ವಿಶ್ವಕೋಶದಂತಿವೆ.

ಇತಿಹಾಸದಲ್ಲಿ ಮಹತ್ತರ ಮೌಲ್ಯವಿರುವ ಚಿತ್ರದುರ್ಗ ಜಿಲ್ಲೆ ತ್ಯಾಗ, ಶೌರ್ಯ ಹಾಗೂ ಸಂಪ್ರದಾಯವನ್ನು ಮೆರೆದಿದೆ. ಓಬವ್ವ ಸಮಯೋಚಿತ ಧೈರ್ಯವನ್ನು ಹಾಗೂ ಯುಕ್ತಿಯನ್ನು ಜನ ಮನ ತುಂಬಿ ನೆನೆಯುತ್ತಾರೆ, ಇಂದು ಚಿತ್ರದುರ್ಗದ ವಿಶೇಷತೆಯನ್ನು ಗಮನಿಸಿದಾಗ, ಅದರ ಪ್ರಸಿದ್ಧತೆಯನ್ನು ವೀಕ್ಷಿಸಿದಾಗ ಬಯಲು ಸಂಗ್ರಹಾಲಯವೆಂದೇ ಕರೆಯಬಹುದಾದ ಈ ಏಳು ಸುತ್ತಿನ ಕೋಟೆಯಲ್ಲಿ ೧೯ ಮಹಾದ್ವಾರಗಳು, ೩೮ ದಿಡ್ಡಿಬಾಗಿಲುಗಳು, ೩೫ ಕಿಂಡಿಗಳು, ೪ ಗುಪ್ತದ್ವಾರಗಳಿವೆ ಎನ್ನಲಾಗಿದೆ. ವಿಸ್ತಾರವಾದ ಕೋಟೆಗೆ ಐದು ಪ್ರಮುಖ ಮಹಾದ್ವಾರಗಳು ಪ್ರವೇಶ ಮಾರ್ಗಗಳಾಗಿವೆ. ಓಬವ್ವನ ಕಿಂಡಿಯಿಂದ ಇಂದು ಕೋಟೆ ಜಗತ್‌ಪ್ರಸಿದ್ಧವಾಗಿದೆ.

ಒಂದು ಪ್ರದೇಶದ ಜಾನಪದ ಆ ಪ್ರದೇಶದ ಜನಜೀವನದ ಸಾರ, ಆಚರಣೆಯ ಮೂಲಬೇರು, ಆಯಾ ಪ್ರದೇಶದ ಜಾನಪದದಲ್ಲಿ ಅಡಗಿರುತ್ತದೆ. ಯಾವುದೇ ಜನಪದ ಸಮುದಾಯದ ಆಯಾಕಾಲದ ನೋವು, ನಲಿವು, ಏಳು, ಬೀಳುಗಳನ್ನು ಕಥೆ, ಕವನ, ಗೀತೆ, ಗಾದೆ, ಐತಿಹ್ಯ, ಒಗಟು, ನುಡಿಗಟ್ಟು, ನಂಬಿದ ಸಂಪ್ರದಾಯ ಕಲೆಗಳ ಮೂಲಕ ಒಂದು ತಲೆಮಾರಿನಿಂದ ಮುಂದಿನ ತಲೆಮಾರಿಗೆ ವರ್ಗಾಯಿಸಿರುತ್ತದೆ ಎನ್ನುವುದಕ್ಕೆ ನಿದರ್ಶನವೇ ವೀರವನಿತೆ ಓಬವ್ವನ ಸಾಹಸಗಾಥೆ. ಇದಕ್ಕೆ ಜನಪದರೇ ನೇರ ಸಾಕ್ಷಿಗಳು. ಆದ್ದರಿಂದ ಜನಪದ ಸಾಹಿತ್ಯ, ಜನಪದರ ಅಭಿವ್ಯಕ್ತಿಯ ಸಾಧನೆ, ಜನಪದರ ಅನುಭವದ ಸಂಪತ್ತಿನಿಂದ ರೂಪು ಪಡೆದ ಜನಪದ ಸಾಹಿತ್ಯದಲ್ಲಿ ಆ ಸಮುದಾಯದ ಮೌಲ್ಯ, ನೀತಿ, ವಿವೇಕ, ಆದರ್ಶಗಳು ಅಡಗಿರುತ್ತವೆ. ಜನಪದ ಮಾತುಗಳು, ಕಾವ್ಯವಲ್ಲದ ಕಾವ್ಯ, ಮೌನವೇ ಧ್ವನಿ, ಧ್ವನಿಯ ಅರ್ಥ, ಪಿಸುಗುಡುವಿಕೆಯೇ

ಮಾತು. ಅವರ ಬದುಕೇ ಮೌಲ್ಯಗಣಿ. ಹೀಗಾಗಿ ಜನಪದ ಸಾಹಿತ್ಯವೆಂದರೇ ಪರಂಪರೆಯ ಬೇರುಗಳ ಅರಿವಿನ ಆಗರವೇ ಆಗಿರುತ್ತದೆ. ಕಾಲಾದೇಶಕ್ಕನುಗುಣವಾಗಿ ಬರಹ ಕುರಿತ ಆಲೋಚನ ವಿನ್ಯಾಸಗಳು ಬದಲಾದರೂ ಮೌಖಿಕ ಪರಂಪರೆಯ ಚರಿತ್ರೆಯನ್ನು ಹಲವು ಸ್ತರಗಳಲ್ಲಿ ಕಟ್ಟುತ್ತಾ ಬರುತ್ತಿವೆ. ಮೌಖಿಕ ಪರಂಪರೆ ಮತ್ತು ಬರಹದ ಜೊತೆ ಜೊತೆಯಲ್ಲೇ ಸಾಗಿ ಬರುತ್ತಿವೆ. ಮಾತುಗಳಲ್ಲಿರುವ ಜನಸಾಮಾನ್ಯರ ತಿಳುವಳಿಕೆಯು 'ಬರಹ' ರೂಪಕ್ಕೆ ಬಂದು ಬರಹ ಓದುವ ಜನವರ್ಗದಲ್ಲಿ ಸಂವಹನಗೊಳ್ಳುತ್ತಿದೆ. ಆದರೆ ಲೋಕದ ಚರಿತ್ರೆಯನ್ನು ಗ್ರಹಿಸುವಾಗ ಇಂತಹ ಮಾತಿನಲ್ಲಿರುವ ಲೋಕಜ್ಞಾನ ಕಡೆಗಣಿಸಲ್ಪಟ್ಟು, ಬರಹ ರೂಪದ ಜ್ಞಾನ ಪರಿಗಣನೆಗೆ ಒಳಗಾಗುತ್ತಿದೆ. ಇಂತಹ ಬರಹವೂ ಕೂಡ ಮಾತಿನಿಂದ ರೂಪಿಸಲ್ಪಟ್ಟಿದ್ದು ಎಂಬುದನ್ನು ಮರೆಯುವಂತಿಲ್ಲ. ಕರ್ನಾಟಕದ ಸಂಸ್ಕೃತಿಯನ್ನು ನಿರ್ವಹಿಸುವಾಗಲೂ ಶಾಸನ, ಹಸ್ತಪ್ರತಿ, ಕೃತಿ ರೂಪದ ಬರಹ ಸಾಹಿತ್ಯವನ್ನೇ ಪ್ರಧಾನ ಎಂದು ಭಾವಿಸಲಾಗಿದೆ. ಯಾವುದನ್ನು ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ಅಧಿಕೃತ ದಾಖಲೆಗಳು ಎಂದು ಪರಿಗಣಿಸಲಾಗಿದೆಯೋ ಅಂಥಹವುಗಳ ಒಳಗೆ ಮಾತಿನ ಪರಂಪರೆಯ ಕುರುಹುಗಳಿವೆ. ಹಲ್ಮಿಡಿ ಶಾಸನದಿಂದ ಕವಿರಾಜಮಾರ್ಗಕಾರನ ಬರಹರೂಪದ ಸಾಹಿತ್ಯದಿಂದಲೂ ಮೌಖಿಕ ರೂಪಗಳನ್ನು ಗುರುತಿಸುವ ಅಧ್ಯಯನಗಳು ಕರ್ನಾಟಕದಲ್ಲಿ ಸಾಕಷ್ಟು ನಡೆದಿವೆ. ಅದರಲ್ಲಿ ಓಬವ್ವನ ಐತಿಹ್ಯ, ಆಕೆಯ ಬಗೆಗಿನ ಚರಿತ್ರೆಯ ನೆಲೆಯೂ ಒಂದಾಗಿದೆ.

ಹಾಗಾಗಿ ಓಬವ್ವನ ಬಗ್ಗೆ ಆಕೆಯ ಜೀವನ ಚರಿತ್ರೆಯ ಮೂಲವನ್ನರಿಯಲು ಸಾಕಷ್ಟು ಆಧಾರಗಳು ದೊರೆಯುತ್ತಿಲ್ಲ ಎಂಬು ಒಂದು ನೆಪಮಾತ್ರದಿಂದ ಒಂದು ಸಾಂಸ್ಕೃತಿಕ ಚರಿತ್ರೆಯೇ ಮರೆಯಾಗಬಾರದು. ಓಬವ್ವಳು ಕೇವಲ ಕಹಳೆಯನ್ನೂದುವವನ ಹೆಂಡತಿ, ಆಕೆಗೆ ಇತಿಹಾಸದಲ್ಲಿ ಮಹತ್ವದ ಸ್ಥಾನ ನೀಡಬೇಕಾದ ಅವಶ್ಯಕತೆಯಿಲ್ಲ ಎಂಬ ಭಾವನೆಯಿಂದ ಈ ಸಾಹಸ ವೃತ್ತಾಂತವನ್ನೇನಾದರೂ ಇತಿಹಾಸಕಾರರು ಕೈಬಿಟ್ಟಿದ್ದರೆ ಇದು ಪ್ರಾಜ್ಞರ ವಿವೇಕಕ್ಕೆ ಬಿಟ್ಟ ವಿಷಯವಾಗುತ್ತದೆ. "ಇತಿಹಾಸ ರಚನೆಗೆ ಚಾರಿತ್ರಿಕ ಆಕರಗಳ ಕೊರತೆಯುಂಟಾದಾಗ,ಜನಪದ ಸಾಹಿತ್ಯ ರಚನೆಗಳು ಗ್ರಾಮೀಣ ಸೊಗಡಿನ ಶೈಲಿಯಲ್ಲಿ ವರ್ಣಿಸುತ್ತವಾದರೂ, ಆಕರಗಳ ಕೊರತೆಯನ್ನು ನೀಗಿ ಸಾಹಿತ್ಯ ಪ್ರಾಕಾರಗಳು, ಕೈಫಿಯತ್ತುಗಳಂಥಹ ಅಪರೂಪದ ಆಕರಗಳು ತುಂಬುವಂಥವ' ಎಂದು ಇತಿಹಾಸ ತಜ್ಞರಾದ ಪ್ರೊ. ಎಂ.ವಿ. ಶ್ರೀನಿವಾಸ್ ರವರು ಹೇಳಿದ್ದಾರೆ."[೪] ಇದನ್ನು ನಾವು ಮೆಕೆಂಝಿಯವರ ಸಂಗ್ರಹಗಳಲ್ಲಿ ಕಾಣಬಹುದು. ಮೆಕೆಂಝಿ ಯವರ ಸಂಗ್ರಹಗಳಲ್ಲಿ ಜನಸಾಮಾನ್ಯರ ಹೇಳಿಕೆಗಳು ಅವರ ಮನೋಭಾವ, ಪ್ರಸ್ತುತ ಘಟನೆಗಳ ವಿವರಣೆಗಳನ್ನು ದಾಖಲಿಸಿದ್ದು ಬಹಳ ಮುಖ್ಯ. ಆ ದಾಖಲೆಗಳೇ ಕೈಫಿಯತ್ತುಗಳಾಗಿ ರೂಪುಗೊಂಡವು.

ಇಲ್ಲಿ ಓಬವ್ವ ಜಾತಿಯ ಕಬಂಧ ಬಾಹುವಿನ ಹಿಡಿತವಿಲ್ಲದ ಅಥವಾ ಅದರ ಅಗತ್ಯವೂ, ಅನಿವಾರ್ಯವೋ ಇಲ್ಲದ ಸರ್ವಧರ್ಮಗಳ ಸಮನ್ವಯಿಗಳಾದ ನಾಯಕಮಣಿಗಳ ಆಡಳಿತಾವಧಿಯಲ್ಲಿ ಬಂದಂತಹ ನಾರೀಮಣಿ. "ಬ್ರಿಟೀಷರ ಆಡಳಿತದ ಸಂದರ್ಭದಲ್ಲಿ ಬೇಡ ನಾಯಕರು ಈ ದೇಶದ

ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮದೇ ಆದ ಕಾಣಿಕೆಯನ್ನು ನೀಡಿದವರು."[೫] ಇಂತಹ ನಾಯಕ ಮಣಿಗಳ ಆಳ್ವಿಕೆಯಲ್ಲಿ ಇದ್ದವಳು ಓಬವ್ವ ಯಾವುದೇ ಬಿರುದು ಬಾವಲಿಗಳಿಗೆ ಆಸೆ ಪಡದ ನಾಯಕರು. ಇವರ ಕಾಲದಲ್ಲಿಕನ್ನಡ ನಾಡಿನ ತಾಯಿಯ ಒಡಲಲ್ಲಿ ಹುಟ್ಟಿಬಂದಳು. ಹಾಗಾಗಿ ಆಕೆಯ ಚರಿತ್ರೆಗೆ ಯಾವ ಸೋಂಕಾಗಲೀ, ಪೂರ್ವಾಗ್ರಹ ಪೀಡಿತಗಳಾಗಲೀ ಬಂದಿಲ್ಲ. ಆದರೆ ದಾಖಲೆಗಳ ಕೊರತೆಯಿಂದ ಅಕೆಯ ಚರಿತ್ರೆ ವಿಮುಖವಾಗಿ ಉಳಿದಿದೆ. ಭಾರತವು ಗಣರಾಜ್ಯವಾಗಿದೆ, ಪ್ರಜಾಪ್ರಭುತ್ವದ ಆಡಳಿತಕ್ಕೊಳಪಟ್ಟ ರಾಷ್ಟ್ರ. ಇದು ತನ್ನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ದೇಶದಲ್ಲಿ ಮಹಾನ್ ಸಾಧನೆಗೈದ ನಾಡಿಗಾಗಿ ಶ್ರಮಿಸಿ ಹುತಾತ್ಮರಾದ ವೀರರಿಗೆ ವಿರೋಚಿತವಾದ ಗೌರವವನ್ನು ನೀಡುವುದರೊಂದಿಗೆ ಅವರಿಗೆ ಸ್ಮಾರಕ, ಮನ್ನಣೆಗಳನ್ನು ಸಲ್ಲಿಸಿ ಆದರಿಸುತ್ತಿರುವ ನಾಡು ನಮ್ಮದು. ಇಂತಹ ನಾಡಿಗಾಗಿ ಹುತಾತ್ಮರಾದ ಎಷ್ಟು ಮಂದಿಯ ವೀರಗಾಥೆಗಳನ್ನು ಚರಿತ್ರೆಯ ಪುಟಗಳಲ್ಲಿ ರಚಿಸಿ ನಾಡಿನಾದ್ಯಂತ ಸಾರುವ ಕೆಲಸವನ್ನು ನಮ್ಮ ಲೇಖಕರು, ವಿದ್ವಾಂಸರು ಮಾಡಿದ್ದಾರೆ. ಅಂಥಹವರ ಸಾಲಿನಲ್ಲಿ ಓಬವ್ವನ ಚರಿತೆಯನ್ನು ಸೇರಿಸಿ, ಆಕೆಯ ಕೀರ್ತಿ ಅಜರಾಮರವಾಗಿ ನಿಲ್ಲುವಂತೆ, ಆಕೆಗೊಂದು ಸ್ಮಾರಕವನ್ನು ಸ್ಥಾಪಿಸುವುದರೊಂದಿಗೆ, ಈ ಓಬವ್ವೆಯ ಸಾಹಸದ ಮನನವು ಸದಾ ಸರ್ವರ ಹೃದಯಗಳಲ್ಲಿ ನೆಲೆಸಬೇಕೆಂಬುದೇ ನನ್ನ ಆಶಯ.

ಅಂತೆಯೆ ಕರ್ನಾಟಕ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಐದು ಲಕ್ಷ ವೆಚ್ಚದಲ್ಲಿ ಸ್ಮಾರಕ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಿದ್ದು, ಜಿಲ್ಲಾಡಳಿತದ ಸಲಹೆಗಾಗಿ ಕಾಯುತ್ತಿದೆ. ಇಂದು ದುರ್ಗದಾದ್ಯಂತ ಹಗಲು ರಾತ್ರಿ ಪಹರೆ ಕಾಯುವ ಹೊಯ್ಸಳ ವಾಹನಗಳು ಮತ್ತು ಪ್ರತೀ ಪೊಲೀಸ್ ವಾಹನದ ಮೇಲೂ "ಓಬವ್ವನ ಪಡೆ" ಎಂದು ಬರೆಯಿಸಲಾಗಿದೆ. ಸರ್ಕಾರವು ಸ್ತ್ರೀ ಸಬಲತೆಯನ್ನು ಸಾರುವ ಕಾರ್ಯಕ್ರಮದಲ್ಲಿ ಒನಕೆ ಓಬವ್ವನಂತೆ ಪ್ರತಿಯೊಬ್ಬ ಮಹಿಳೆಯು ಧೈರ್ಯವಂತಳಾಗಬೇಕೆಂದು ಜಾಹಿರಾತನ್ನು ಕೊಡುವ ಮೂಲಕ ಆಕೆಯ ಇರುವನ್ನು ಸಾರುತ್ತಿದೆ. ಇದನ್ನು ಗಮನಿಸಿದಾಗ ದುರ್ಗದ ಓಬವ್ವ ಅಜರಾಮರವಾಗಿದ್ದಾಳೆ.ಇಂಥ ವೀರವನಿತೆ ಓಬವ್ವ ಜಾತಿ, ಲಿಂಗ, ಧರ್ಮಗಳೆಲ್ಲವನ್ನೂ ಮೀರಿದ ಓರ್ವ ಸಾಂಸ್ಕೃತಿಕ ರಾಯಭಾರಿಯಾಗಿದ್ದಾಳೆ. ಇದೊಂದು ಅಪೂರ್ವ ಸಾಹಸ ಘಟನೆ. ಅಕೆಯನ್ನು ಒಂದು ಒಂದು ವರ್ಗ, ಸಂಘಟನೆ, ಸಮುದಾಯವಾಗಲೀ, ಅಷ್ಟಕ್ಕೇ ಸೀಮಿತವಾದವಳು ಎಂಬುದನ್ನು ಕಲ್ಪನೆಯಲ್ಲೂ ಕಾಣದೇ ಆಕೆ ನಾಡು ಕಂಡ ವೀರಮಹಿಳೆ. ಆಕೆ ಇಡೀ ಕನ್ನಡ ನಾಡಿನ ಇತಿಹಾಸದಲ್ಲಿ ಸೇರುತ್ತಾಳೆ ವಿನಃ ಸೀಮಿತವಾದ ಪರಿಧಿಯೊಳಗಲ್ಲ. ಹೈದರಾಲಿಯ ಮಹತ್ವಾಕಾಂಕ್ಷೆಗೆ ತಣ್ಣೀರೆರೆದು ದುರ್ಗವನ್ನು ಅಂದಿನ ಮಟ್ಟಿಗೆ ಕಾಪಾಡಿದವಳು. ಹಾಗಾಗಿಆಕೆಯ ಹೆಸರೇ ರೋಮಾಂಚನ ಮೂಡಿಸುತ್ತದೆ. ಎಲ್ಲರಿಗೂ ಆದರ್ಶಪ್ರಾಯಳು. ಇತಿಹಾಸದ ಪುಟದಲ್ಲಿ ಸೇರ್ಪಡೆಯಾಗಲು ಎಲ್ಲಾ ಅರ್ಹತೆಯುಳ್ಳ ವೀರಮಹಿಳೆ.

ಅಡಿ ಟಿಪ್ಪಣಿಗಳು

೧. ಡಾ. ಮೊಗಳ್ಳಿ ಗಣೇಶ್, ಅರುಹು ಕುರುಹು ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ ದೇಸಿ ಕಥನ, ಮೌನ, ಕುವೆಂಪು ರಸ್ತೆ, ಮೈಸೂರು, ೨೦೧೬, ಪುಟ ಸಂಖ್ಯೆ-೧,

೨. ಜೀ.ಶಂ. ಪರಮಶಿವಯ್ಯ, ಜನಪದ ಸಾಹಿತ್ಯ ಸಮೀಕ್ಷೆ, ಪುಟ ಸಂಖ್ಯೆ-೧೩೭

೩. ಡಾ. ಪುಟ್ಟಸ್ವಾಮಿ, ಕರ್ನಲ್ ಮೆಕೆಂಜಿ ಮತ್ತು ಕೈಫಿಯತ್ತುಗಳು, ಪುಟ ಸಂಖ್ಯೆ-೧೦

೪. ಅದೇ ಕೃತಿ. ಪುಟ ಸಂಖ್ಯೆ-೧೩

೫. ಡಾ. ಮಂಜುನಾಥ ಬೇವಿನಕಟ್ಟಿ, ವ್ಯಾಧ ಚರಿತೆ ಬೇಡ ಮೂಲದ ಕಥನಗಳು, ಪ್ರಸಾರಾಂಗ ಕನ್ನಡ ವಿ ವಿ, ಹಂಪಿ. ೨೦೦೭, ಪುಟ ಸಂಖ್ಯೆ-೪೫

ಅಧ್ಯಾಯ : ೯

ಸಮಾರೋಪ

ಅಧ್ಯಾಯ : ಒಂಬತ್ತು

ಸಮಾರೋಪ

೧೮ನೇ ಶತಮಾನದ ಮಧ್ಯಭಾಗ ಕರ್ನಾಟಕದ ಪಾಲಿಗೆ ಒಂದು ದುರದೃಷ್ಟಕರದ ಅವಧಿ ಎನ್ನಬಹುದು. ಮೈಸೂರು ಸಂಸ್ಥಾನದ ಅರಾಜಕತೆ ಮತ್ತು ಪಿತೂರಿಗಳಿಗೆ ಒಳಗಾಗಿ ಅಧಿಕಾರ ಕಳೆದುಕೊಂಡಿದ್ದು ಒಂದೆಡೆಯಾದರೆ, ಬಲಿಷ್ಠ ಸಂಸ್ಥಾನವಾಗಿದ್ದ ಕೆಳದಿ ಸಂಸ್ಥಾನದ ಆಳ್ವಿಕೆ ರಕ್ತಸಿಕ್ತ ಮತ್ತು ದುರಂತ ಅಂತ್ಯ ಕಂಡ ಸಮಯವದು. ಕನ್ನಡಿಗರ ಹೆಮ್ಮೆಯೆನಿಸಿದ್ದ ಈ ಎರಡೂ ಸಂಸ್ಥಾನಗಳ ನಾಶಕ್ಕೆ ಕಾರಣವಾದ ವ್ಯಕ್ತಿ ಒಬ್ಬನೇ !ಆತನೇ ಹೈದರಾಲಿ. ಮೈಸೂರು ಅರಸರ ದೌರ್ಬಲ್ಯ ಹೈದರಾಲಿಯ ಪ್ರಾಬಲ್ಯಕ್ಕೆ ಕಾರಣವಾಯಿತು. ಮೈಸೂರು ಅರಸರನ್ನೇ ಮಣ್ಣುಮುಕ್ಕಿಸಿದ ಹೈದರಾಲಿ ಪಾಳೆಯಗಾರರನ್ನು ಗೆಲ್ಲಲು ಕಷ್ಟಪಡಬೇಕಾಗಿರಲಿಲ್ಲ. ಹಾಗಾಗಿ ಹೈದರ್ ಸುಸಜ್ಜಿತವಾದ, ಅಬೇದ್ಯವಾದ ಚಿತ್ರದುರ್ಗದ ಕೋಟೆಯನ್ನು ಕ್ಷಣ ಮಾತ್ರದಲ್ಲಿ ತನ್ನದಾಗಿಸಿಕೊಳ್ಳಬೇಕೆಂಬ ಆತುರದಲ್ಲಿ ಬಂದವನಿಗೆ ಅದು ಬೆಲ್ಲದ ಅಚ್ಚಾಗಿರದೆ ಕಬ್ಬಿಣದ ಕಡಲೆಯಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ನೇರವಾಗಿ ದುರ್ಗವನ್ನು, ಕೋಟೆಯನ್ನು ವಶಪಡಿಸಿಕೊಳ್ಳುವುದು ಅಸಾಧ್ಯ ಎಂದರಿತ ಹೈದರ್ ಕುಟಿಲತನವನ್ನು ಹೊರಗೆಡಹಿದ. ತನ್ನ ಗೂಢಾಚಾರರು ತಂದ ಕೋಟೆಯ ವಾಯುವ್ಯ ಭಾಗದ ಕಳ್ಳಗಂಡಿಯ ವಿಚಾರವನ್ನು ದುರ್ಗದ ಪ್ರಧಾನಿಯಾಗಿ ವಜಾಗೊಂಡಿದ್ದ ಕಳ್ಳೀನರಸಪ್ಪನಿಂದ ತಿಳಿದುಕೊಂಡು ರಾತ್ರೋರಾತ್ರಿ ತನ್ನ ಸೈನ್ಯವನ್ನು ನುಗ್ಗಿಸಿ ದುರ್ಗವನ್ನು ಬೇದಿಸಲು ಪ್ರಯತ್ನಪಟ್ಟನು. ಆದರೆ ಆಗ ಅಡ್ಡಿಯಾಗಿ ನಿಂತವಳೇ ವೀರನಾರಿ ಒನಕೆ ಓಬವ್ವ

ಒನಕೆ ಓಬವ್ವನೆಂದೇ ದುರ್ಗದ ಇತಿಹಾಸದುದ್ದಕ್ಕೂ ಚಿರಪರಿಚಿತಳಾಗಿ ಬಂದ ಓಬವ್ವ ಹೈದರನ ಮಹತ್ವಾಕಾಂಕ್ಷೆಯನ್ನು ಕ್ಷಣ ಮಾತ್ರದಲ್ಲಿ ಮಣ್ಣುಮುಕ್ಕಿಸಿದ್ದಳು. ತೆವಳಿಕೊಂಡು ಒಳನುಗ್ಗಿ ಬಂದ ಶತ್ರುಪಡೆಯನ್ನು ಒಬ್ಬೊಬ್ಬರನ್ನಾಗಿ ತನ್ನ ಕೈಗೆ ಸಿಕ್ಕ ಒನಕೆಯಿಂದಲೇ ಚಚ್ಚಿ ಹೊಡೆದು

ಸಾಯಿಸಿದ ವೀರರಮಣಿ. ಇತ್ತ ತನ್ನ ಬಿಡಾರದಲ್ಲಿ ಕುಳಿತುಕೊಂಡು ಇನ್ನೇನು ದುರ್ಗದ ಹನುಮದ್ಗರುಡ ಧ್ವಜವನ್ನು ಇಳಿಸಿದೆನೆಂಬ ಹುಂಬತನದಿಂದ ಜಯದಪತಾಕೆ ಹಾರಿಸುವ ಕನಸು ಕಾಣುತ್ತಿದ್ದ ಹೈದರನಿಗೆ ಬರಸಿಡಿಲಿನಂತೆ ಬಂದೆರಗಿದುದು ಓರ್ವ ಹೆಣ್ಣಿನ ಸಾಹಸ. ಇದು ಅಲ್ಲಿನ ಸ್ಥಳೀಯ ಚರಿತ್ರೆಯಾಗಿದೆ.

ಚರಿತ್ರೆಯ ಅಧ್ಯಯನ ಅಥವ ಸಂಶೋಧನೆಯ ಶಿಸ್ತು ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಇರುತ್ತದೆ. ಸಾಮ್ರಾಜ್ಯದ ಮೂಲಕ ಕಟ್ಟಿಕೊಡುವ ಚರಿತ್ರೆ ಇಂದು ಮಹತ್ವವನ್ನು ಕಳೆದುಕೊಳ್ಳುತ್ತಿದೆ. ಸ್ಥಳೀಯ ಚರಿತ್ರೆ ಬರವಣಿಗೆಗಳು ರಾಜ್ಯಕ್ಕೆ ಅಥವ ರಾಜ್ಯವ್ಯವಸ್ಥೆಗೆ ಯಾವುದೇ ರೀತಿಯ ಅವಘಡ ಜರುಗದಂತೆ ಮಾಡಿದ ಸೇವೆ, ತ್ಯಾಗ, ಬಲಿದಾನಗಳನ್ನು ಮಾಡಿದವರ ಚರಿತ್ರೆ ಕಾಲಗರ್ಭದಲ್ಲಿ ಅಡಗಿ ಹೋಗದಂತೆ ನಿರೂಪಿಸುತ್ತವೆ. ಸಾಂಪ್ರದಾಯಿಕ ಚರಿತ್ರೆ ರಚಿಸುವ ಸಂದರ್ಭದಲ್ಲಿ ಬಳಸಿಕೊಳ್ಳುವ ಆಕರಗಳು ಈ ಸಂದರ್ಭದಲ್ಲಿ ದೊರಕುವುದು ವಿರಳ. ಆದರೂ ಅಂಥಹ ಆಕರಗಳನ್ನು ಉಳಿಸಿಕೊಳ್ಳುವುದರ ಜೊತೆಗೆ ಮೌಖಿಕ ಕಥನಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಬೇಕಿದೆ. ಅಂಥಹ ಗೌಣವಾದ ಒಂದು ಸ್ಥಳೀಯವಾದ, ದುರ್ಗದ ಇತಿಹಾಸದಲ್ಲಿ ಮಹತ್ವವನ್ನು ಪಡೆದ ಓಬವ್ವನ ಸಾಹಸಗಾಥೆಯನ್ನು ಸಾರುವ "ದುರ್ಗದ ಓಬವ್ವ–ಸಾಂಸ್ಕೃತಿಕ ಸಂಕಥನ".

ದುರ್ಗದ ಇತಿಹಾಸಕ್ಕೆ ಸಂಬಂಧಿಸಿದಂತೆ ದುರ್ಗದ ಪಾಳೆಯಗಾರರು ಪರಾಕ್ರಮಗಳು, ಶೌರ್ಯವಂತರು, ಸಾಹಸಿಗಳಾಗಿದ್ದು ವಾಲ್ಮೀಕಿ ಗೋತ್ರದ ಶ್ರೀಮನ್ಮಹಾನಾಯಕರು ಕಾಮಗೇತಿ ಕಸ್ತೂರಿ ಎನಿಸಿದವರು. ಇವರು ಹಗಲು ಕಗ್ಗೂಲೆಯ ಮಾನ್ಯ ಚಂದ್ರಗಾವಿ ಛಲದಂಕ ಮಲ್ಲರು, ಗಂಡುಗೊಡಲಿಸರ್ಜಾ ದೂಳ್ ಕೋಟೆ ವಜೀರ, ಗಾರಿಮಲೆ ಹೆಬ್ಬುಲಿ, ವೀರಮದಕರಿಗಳೆಂದು ಬಿರುದಾಂಕಿತರವರಾಗಿದ್ದರು. ರಾಜನೀತಿ ನಿಪುಣರು, ರಣಕಲಿಗಳು, ಧರ್ಮದುರಂಧರರು, ನ್ಯಾಯನಿಷ್ಠುರರು ಇತ್ಯಾದಿ ಬಿರುದಾಂಕಿತರು ಇವರ ಬಗ್ಗೆ ಚರಿತ್ರೆಯ ಪುಟ ಪುಟಗಳು ಹಾಡಿಹೊಗಳಿವೆ. ಇನ್ನು ಐತಿಹಾಸಿಕ ದುರ್ಗವನ್ನು ನೆನಪಿಸಿಕೊಂಡ ಕ್ಷಣ, ತಟ್ಟನೆ ನೆನಪಿಗೆ ಬರುವವರು ರಾಜವೀರ ಗಂಡುಗಲಿ ಮದಕರಿನಾಯಕ ಮತ್ತು ವೀರ ವನಿತೆ ಓಬವ್ವ, ದುರ್ಗದ ಅಭಿವೃದ್ಧಿ ಪುರಜನರ ಸೌಖ್ಯಕ್ಕಾಗಿ ದುಡಿದ ವೀರಾಗ್ರಣಿಗಳು, ಧರ್ಮಬೀರುಗಳು ಹಲವರಿದ್ದಾರೆ ಅದರಲ್ಲಿ ಓಬವ್ವ ಒಬ್ಬಳಾಗಿದ್ದಾಳೆ

ಓಬವ್ವೆ ಎಂಬ ವೀರವನಿತೆವನ್ನು ಕುರಿತು ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು, ಶ್ರೀ ಎಂ.ಎಸ್.ಪುಟ್ಟಣ್ಣನವರು ಸೇರಿದಂತೆ ಅನೇಕ ವಿದ್ವಾಂಸರು ಅನೇಕ ಲೇಖನಗಳನ್ನು ಬರೆದರು, ಕೃತಿಗಳನ್ನು ರಚಿಸಿದರು. ಅಂದು ಅವರು ನೀಡಿರುವ ಮಾಹಿತಿ ಇಂದು ಅತ್ಯಮೂಲ್ಯ ಆಧಾರಗಳಾಗಿ ಉಳಿದಿವೆ. ಪಾಳೆಯಗಾರರ ಆಳ್ವಿಕೆ ಹೈದರನ ಕುತಂತ್ರದಿಂದ ಕೊನೆಗೊಂಡು, ಶೂರಾಗ್ರಣಿ ಮದಕರಿನಾಯಕನ ಪತನ ಹೊಂದಿದ ಸಂಗತಿ ಸಾತ್ವಿಕ ಪ್ರವೃತ್ತಿಯ ಜೋಯಿಸರ ರಕ್ತ

ಕುದಿಯುವಂತೆ ಮಾಡಿತು. ಈ ದುರಂತವನ್ನು ಕುರಿತು ತಮ್ಮನ್ನು ತಾವೇ ಮರೆತು ಕೆಲವು ಬಾರಿ ಇತಿಹಾಸಕಾರನಿಗಿರುವ ಸಂಯಮವನ್ನು ಮೀರಿ ಲೇಖನ ಬರೆದರು. ಅದರಂತೆಯೇ ಆದರ್ಶ ವ್ಯಕ್ತಿಗಳಾಗಿ ದುರಂತಕ್ಕೀಡಾದ ಐತಿಹಾಸಿಕ ವ್ಯಕ್ತಿಗಳ ಚಿತ್ರಣವೂ ಅವರ ಲೇಖನಿಯಿಂದ ಮೂಡುತ್ತಾ ಹೋಯಿತು. ಅಂತಹ ವ್ಯಕ್ತಿಗಳ ಸಾಲಿಗೆ ಕುಮಾರರಾಮನನ್ನು ಮೊದಲಿಗೆ ಸೇರಿಸಿಕೊಂಡರು. ಕುಮಾರರಾಮ ಸಾಹಿತ್ಯ ಬರೆದು ವ್ಯಾಪಕ ಅಧ್ಯಯನ ಕೈಗೊಂಡು ಅಮೂಲ್ಯ ಕಾಣಿಕೆಯನ್ನು ಇತಿಹಾಸಕ್ಕೆ ನೀಡಿದರು. ಚರಿತ್ರೆಯಲ್ಲಿ ಕಂಡು ಬಂದ ಶುದ್ಧ ಚಾರಿತ್ರ್ಯದ, ದೇಶಪ್ರೇಮಿ ಪಾತ್ರಗಳ ಬಗ್ಗೆ ನಿಷ್ಕಲ್ಮಷ ಹೃದಯದ ಜೋಯಿಸರಿಗೆ ಅದಾವ ಅಭಿಮಾನವೋ ಏನೋ, ಮತ್ತೆ ಮತ್ತೆ ಅಂಥವರನ್ನು ಕುರಿತು ಚಿಂತಿಸಿ ಸಂಶೋಧಿಸಿ ಎಲ್ಲಕ್ಕಿಂತ ಹೆಚ್ಚಾಗಿ ಮೆಚ್ಚಿ ಲೇಖನಗಳನ್ನು ಬರೆದಿದ್ದಾರೆ ಅದರಲ್ಲಿ "ವೀರ ಸಿಂಹಿಣಿ ಓಬವ್ವ" ಲೇಖನವೂ ಒಂದು. ಅದೇ ಚರಿತ್ರೆಯ ಅವ್ಯಕ್ತ ಸಂವೇದನೆಯನ್ನು ಹುಡುಕುವುದೆಂದರೆ ಹೆಚ್ಚು ಸ್ವತಂತ್ರ್ಯವನ್ನು ರೂಪಿಸಿಕೊಂಡಂತೆ, ಚರಿತ್ರೆಯ ಜೈವಿಕತೆಗೆ ಸಂಬಂಧಿಸಿದಂತೆ ಜೈವಿಕತೆಗೆ ನೆನಪಿನ ಆಧಾರಗಳನ್ನು ಒದಗಿಸುವುದೇ ಮನುಷ್ಯನ ನಡವಳಿಕೆ, ವರ್ತನೆ, ಸ್ವಭಾವ, ನಂಬಿಕೆ, ಆಚಾರ-ವಿಚಾರಗಳು, ಸಂಪ್ರದಾಯಗಳು ಪ್ರಭುತ್ವ ಕೇಂದ್ರಿಕ ಚರಿತ್ರೆಗೆ ಸಿಕ್ಕಿರುವಷ್ಟು ಅವಕಾಶ ಬೇರಾವ ಮಾನವನ ಇತಿಹಾಸದ ಸಂಗತಿಗಳಿಗೂ ಸಿಕ್ಕಿಲ್ಲ. ಚರಿತ್ರೆಯಲ್ಲಿ ಬಾಯಿ ಇದ್ದವರ ಮಾತೇ ದಾಖಲಾಗುತ್ತದೆ ಎಂಬುದು ನಿಜವಿದ್ದರೂ ಮೂಕರ ಮೌನ ಕೂಡ ದಾಖಲಾಗಬಲ್ಲದು. ಮಾತಿನ ಹಂಗು ಮೀರಿದ ಮೌನವು ಘನವಾದ ಭಾವವನ್ನು ತುಂಬಿಕೊಂಡಿರುತ್ತದೆ. ಸಾಮ್ರಾಟರ ಯುದ್ಧದ ಸದ್ದು ಗದ್ದಲವಾಗಲಿ, ಪಾಳೆಯಗಾರರ ಪರಾಕ್ರಮದ ಕಹಳೆಗಳಾಗಲಿ, ದೌರ್ಜನ್ಯ ಎಸಗಿ ಮೆರೆದವರ ಆರ್ಭಟವಾಗಲಿ, ಮೌನಿಗಳ ಮೌನದಲ್ಲೇ ಸಮಾಧಿಯಾಗಬೇಕಾಗಿರುವುದು. ಮೌನವೂ ಒಂದು ಅಭಿವ್ಯಕ್ತಿಯು, ಮೌನದ ಅನುಸಂಧಾನವನ್ನು ಮೌಖಿಕ ಪರಂಪರೆಗಳು ಸದ್ದಿಲ್ಲದೆ ಮಾಡಿವೆ. ಮೌಖಿಕತೆ ಎಂದ ಕೂಡಲೆ ಶಾಬ್ದಿಕವಾದ ಹೊರ ಮೈಯ್ಯನ್ನು ಗಮನಿಸುವುದಕ್ಕಿಂತ ವ್ಯಕ್ತವಾದ ದನಿಯ ಹಿಂದಿನ ಮರೆಯ ದನಿಯನ್ನು ಆಲಿಸಿದರೆ ಮಾತ್ರ ದನಿಯ ದನಿ ಕೇಳಿಸುವುದು. ಅಂಥಹ ದನಿಯ ದನಿಯೇ ಓಬವ್ವ, ಕೋಟೆಯ ವಾಯುವ್ಯದತ್ತ ಕಳ್ಳಗಂಡಿಯಿದ್ದು ಒಬ್ಬರೇ ತೆವಳಿ ಬರುವಂತಹ ಸಂದಿಯಿದ್ದು ಅದರ ಪಕ್ಕದ್ದೇ ಓಬವ್ವ ಮತ್ತು ಮದ್ದಹನುಮಪ್ಪನ ಗವಿಮನೆ. ಆ ಸಂದಿಯಿಂದು ಓಬವ್ವನ ಕಿಂಡಿಯೆಂದೇ ಜಗತ್ಪ್ರಸಿದ್ದವಾಗಿದೆ. ಓಬವ್ವ ರಣಚಂಡಿಯಾಗಿ ಶತ್ರುಗಳ ಮಾರಣಹೋಮ ನೆಡೆಸಿದ ಸ್ಥಳವದು. ಓಬವ್ವೆಯನ್ನು ದುರ್ಗದ ಇತಿಹಾಸದಲ್ಲಿ ಸಮರ್ಪಣಾಭಾವದ ಕಲಿತನದ ಗುಣ. ಈಕೆಯ ಆದರ್ಶ ಇವೇ ಮೂಲಾಂಶಗಳನ್ನು ಈ ಅಧ್ಯಯನದಲ್ಲಿ ತಿಳಿದ ಮಹತ್ವದ ಅಂಶಗಳಾಗಿವೆ.

"ದುರ್ಗದ ಓಬವ್ವ-ಸಾಂಸ್ಕೃತಿಕ ಕಥನ"- ಈ ಪ್ರಬಂಧದಲ್ಲಿ ಮೌಖಿಕವಾಗಿ ದುರ್ಗದ ಇತಿಹಾಸದಲ್ಲಿ, ಜನಪದರ ದೃಷ್ಟಿಯಲ್ಲಿ ಆಕೆ ಪಡೆದಿರುವ ಸ್ಥಾನ, ಆಕೆಯ ಬಗ್ಗೆ ಜನಪದರಿಗಿರುವ ಚಾರಿತ್ರಿಕ ಪ್ರಜ್ಞೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಶೋಧಿಸಲಾಗಿದೆ. ನಂತರ ಅಧ್ಯಯನದ

ಅನುಕೂಲಕ್ಕಾಗಿ ಓಬವ್ವನನ್ನು ಕುರಿತು ರಚನೆಯಾದ ಶಿಷ್ಟಸಾಹಿತ್ಯವನ್ನು ಶೋಧಿಸಿ ಆ ಘಟ್ಟದಲ್ಲಿ ಗದ್ಯ, ಲೇಖನ, ನಾಟಕಗಳನ್ನು ಕ್ರೋಢೀಕರಿಸಿ ಆ ಚಿತ್ರಣಗಳಲ್ಲಿ ಓಬವ್ವನ ವ್ಯಕ್ತಿತ್ವವನ್ನು ಚರ್ಚಿಸಿಲಾಗಿದೆ. ಅಲ್ಲಿನ ಆಶಯಗಳನ್ನು ನಿವೇದಿಸಿದೆ.

ಅಧ್ಯಯನದ ಅನುಕೂಲಕ್ಕಾಗಿ ಒಂಬತ್ತು ಅಧ್ಯಾಯಗಳಲ್ಲಿ ಮಹಾಪ್ರಬಂಧವನ್ನು ಮಂಡಿಸಲಾಗಿದೆ.

ಅಧ್ಯಾಯ ಒಂದರಲ್ಲಿ ಉದ್ದೇಶ ಮತ್ತು ವ್ಯಾಪ್ತಿಯನ್ನು ಸವಿವರವಾಗಿ ತಿಳಿಸಲಾಗಿದೆ. ಅರಿಕೆ ಮಾಡಿಕೊಂಡ ವಿಧಾನದಲ್ಲೇ ಇಡೀ ಸಂಶೋಧನಾ ಮಹಾಪ್ರಬಂಧವನ್ನು ನಿರೂಪಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ನೀಡಿರುವ ಸ್ಥಾನಮಾನ ಮತ್ತು ಆಗಿನ ಸಮಾಜದ ಸಂಸ್ಕೃತಿಯ ಹಿರಿಮೆ, ನಾಗರೀಕತೆಯ ಗರಿಮೆಯನ್ನು ಅದರ ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ಆಧ್ಯಾತ್ಮಿಕ ಮಹಿಮೆಯನ್ನು ಎತ್ತಿ ಹಿಡಿಯಲಾಗಿದೆ. ಸ್ತ್ರೀಯರು ಸಂಸ್ಕೃತಿ–ನಾಗರೀಕತೆಯ ಸಂರಕ್ಷಕರೂ, ಪೋಷಕರೂ, ಪ್ರವಾಚಕರೂ ಮತ್ತು ಪ್ರಚಾರಕರೂ ಆಗಿದ್ದರೂ ಎಂಬುದು ಆ ಕಾಲದ ಆವಾರಗಳಲ್ಲಿ ಪ್ರತಿಧ್ವನಿಸುತಿತ್ತು. ವಾದಗಳ ಕಾಲದಿಂದಲೂ ಭರತಖಂಡದಲ್ಲಿ ಸ್ತ್ರೀಯರಿಗೆ ಗೌರವಪೂರ್ಣವಾದ ಸ್ಥಾನ ಸಂದಾಯವಾಗುತಿತ್ತು ಎಂಬುದನ್ನು ಈ ಅಧ್ಯಾಯದ ಮೂಲಕ ಚರ್ಚಿಸಿದೆ. ಋಗ್ವೇದದ ಕಾಲದಲ್ಲಿ ಸ್ತ್ರೀ ಸ್ವತಂತ್ರಳಾಗಿದ್ದಳು ಎಂಬುದನ್ನು ತಿಳಿಸಿದೆ.

ಅಧ್ಯಾಯ ಮೂರರಲ್ಲಿ ಜನಪದರಲ್ಲಿ ಅಡಗಿರುವ ಓಬವ್ವನ ಬಗೆಗಿನ ಚಾರಿತ್ರಾತ್ಮಕ ಭಾವನೆ, ಇಂದಿಗೂ ದುರ್ಗದ ಇತಿಹಾಸವೆಂದರೆ ಓಬವ್ವನ ಕಿಂಡಿಯು ವಹಿಸುತ್ತಿರುವ ಮಹತ್ತರ ಪಾತ್ರ. ಜನಪದರ ಆಚರಣೆ ಕಥೆಗಳಲ್ಲಿ ಹಾಸುಹೊಕ್ಕಿರುವ ಓಬವ್ವ ಅವರ ದೃಷ್ಟಿಕೋನದಲ್ಲಿ ಜನಸಾಮಾನ್ಯರಿಗೆ ಹತ್ತಿರವಾಗಿದ್ದ ಓಬವ್ವ ಸಾಮಾನ್ಯ ಮಹಿಳೆ ನಾಡಿಗಾಗಿ, ಧಣಿಗಾಗಿ ತನ್ನ ಪ್ರಾಣವನ್ನೇ ಪಣವಾಗಿಟ್ಟು ಹೋರಾಡಿ ದುರ್ಗದ ದೇವತೆ ಎನಿಸಿಕೊಂಡಳು. ಆಕೆಯ ವಂಶದವರು ಎಂದು ಗುರುತಿಸಿಕೊಂಡವರು ಆಕೆಯನ್ನು ಮನೆದೇವತೆಯನ್ನಾಗಿ ವಾರ್ಷಿಕ ಆಚರಣೆಗಳನ್ನು ಮಾಡುವರು. ಇಡೀ ದುರ್ಗದ ಜನತೆ ಅಲ್ಲದೆ ಅಕ್ಕ–ಪಕ್ಕದವರೆಲ್ಲರೂ ತಾವೂ ಸೇರಿ ಓಬವ್ವನ ಉತ್ಸವವನ್ನು ಆಚರಿಸುತ್ತಾ ತಾವು ಅದರಲ್ಲಿ ಭಾಗವಹಿಸಿರುವ ಹೆಮ್ಮೆಯನ್ನು ಹೇಳಿಕೊಳ್ಳುವ ಅವರ ಸಂತೃಪ್ತಿ ಇವೆಲ್ಲವೂ ಆಕೆಯ ಬಗೆಗೆ ಪ್ರಜ್ಞೆಯನ್ನು ಮೂಡಿಸುವಂಥದನ್ನು ಮಂಡಿಸಿದೆ.

ಅಧ್ಯಾಯ ನಾಲ್ಕರಲ್ಲಿ ಓಬವ್ವನ ಬಗೆಗಿನ ಶಿಷ್ಟ ಸಾಹಿತ್ಯವನ್ನು ಮತ್ತು ಲೇಖನ, ಬರವಣಿಗೆಗಳನ್ನು ಸಂಗ್ರಹಿಸಲಾಗಿದೆ. ಲಿಖಿತ ದಾಖಲೆಗಳಲ್ಲಿ ಅಷ್ಟಾಗಿ ಚಿತ್ರಿತವಾಗದಿದ್ದರೂ ಲಭ್ಯವಿರುವ ಕೃತಿಗಳಲ್ಲಿ, ಚಿತ್ರದುರ್ಗದ ಅಪೂರ್ವ ಇತಿಹಾಸಕಾರ ಶ್ರೀಯುತ ಹುಲ್ಲೂರು ಶ್ರೀನಿವಾಸ ಜೋಯಿಸರಿಂದ ಇಲ್ಲಿಯವರೆಗೆ ಬಂದ ಲೇಖನಗಳು, ಕೃತಿಗಳು, ನಾಟಕಗಳು, ಕಾದಂಬರಿಗಳನ್ನು ಒಟ್ಟಾಗಿ ಸಂಗ್ರಹಿಸಿ ಅವುಗಳಲ್ಲಿ ಓಬವ್ವನ ಚಿತ್ರಣವನ್ನು ಅಲ್ಲಿ ಪ್ರಸ್ತಾಪಿತವಾಗಿರುವ ಓಬವ್ವನ ಸಾಹಸಗಾಥೆಯ

ಚಿತ್ರಣವನ್ನು ಸವಿವರವಾಗಿ ದಾಖಲಿಸಲಾಗಿದೆ, ಚರ್ಚಿಸಲಾಗಿದೆ. ಓಬವ್ವನನ್ನೇ ಕೇಂದ್ರೀಕೃತವಾಗಿ ರಚಿತವಾದ ಎರಡು ನಾಟಕಗಳು ಲಭ್ಯವಿಲ್ಲದ ಕಾರಣ ಅಲ್ಲಿನ ಕಥಾವಸ್ತುವನ್ನು ಕುರಿತು ತಿಳಿಸಿದ ಲಭ್ಯ ವಿಷಯಗಳನ್ನು ಕ್ರೋಢೀಕರಿಸಿದೆ. ಶ್ರೀಮಾನ್ ಪುಟ್ಟಣ್ಣ ಕಣಗಾಲರ ಗ್ರೀಕಿನ ರೋಮಿಗೆ ಚಿತ್ರದುರ್ಗದ ಹೋಲಿಕೆ, ಚಿತ್ರದಲ್ಲಿ ಓಬವ್ವನ ಸಾಹಸಗಾಥೆಯನ್ನು ಸಾರುವ ಐತಿಹಾಸಿಕ ತುಣುಕನ್ನು ಸೇರಿಸಿಕೊಳ್ಳುವಷ್ಟರ ಮಟ್ಟಿಗೆ ಕಣಗಾಲರ ಅಂತರಾಳಕ್ಕೆ ಓಬವ್ವ ಲಗ್ಗೆ ಹಾಕಿದ್ದಳು. ಅಮರಳಾದಳು ಓಬವ್ವ ಎಂಬ ಸಾಲು ಎಂಥ ಕನ್ನಡಿಗನ ಕಣ್ಣಲೂ ಕಣ್ಣೀರನ್ನು ತರುವಂಥ ಸಾಲು ರಚಿತವಾದುದು. ಇದರ ಸಂಪೂರ್ಣ ಮಾಹಿತಿಯನ್ನು ಈ ಅಧ್ಯಾಯದಲ್ಲಿ ದಾಖಲಿಸಿದ್ದೇನೆ. ನಂತರ ಶಿಷ್ಟಸಾಹಿತ್ಯದಲ್ಲಿ ಕಳೆದುಹೋದ ಓಬವ್ವನ ಕಥೆಗೆ, ತುಳಿತಕ್ಕೆ ಒಳಗಾದವರ ಶೋಷಣೆ ಥಳಕುಹಾಕಿಕೊಂಡು ಇತಿಹಾಸವೇ ಮರೆಯಾಯಿತೇನೋ ಎನ್ನುವ ನೋವಿನ ದನಿಗಳ ಅಂತರಾಳದ ಮಾತುಗಳ ಸಂವೇದನೆಯ ಕೃತಿಗಳನ್ನು, ಆ ಕಥಾವಸ್ತುವನ್ನು ಚರ್ಚಿಸಲಾಗಿದೆ. ಒಟ್ಟಿನಲ್ಲಿ ಶಿಷ್ಟಸಾಹಿತ್ಯದ ಮೂಲ ಜನಪದವೇ ಆಗಿದ್ದರೂ ಶಿಷ್ಟತೆ ಲಿಖಿತವನ್ನು ಅಪೇಕ್ಷಿಸುವುದು, ಅದರ ಒಳದನಿ ಓಬವ್ವನ ಶಿಷ್ಟತೆಯನ್ನು ಏಕೀಕರಿಸಿ ಅಧ್ಯಾಯದಲ್ಲಿ ನಿರೂಪಿಸಲಾಗಿದೆ.

ಅಧ್ಯಾಯ ಐದರಲ್ಲಿ ಓಬವ್ವನ ಬಗೆಗೆ ರಚಿತವಾದ ಜನತೆ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಹಾಡುಗಳ ಶೋಧನೆ ಇತ್ತೀಚೆಗೆ ರಚಿತವಾಗಿದ್ದರೂ ಮಹತ್ವಪೂರ್ಣವೆಂದೇ ಪರಿಗಣಿತವಾಗಿವೆ ನಮ್ಮ ಜನಪದರಿಗೆ. ಏಕೆಂದರೆ ಅಷ್ಟಾಗಿ ಈಕೆಯ ಬಗ್ಗೆ ಲಿಖಿತ ಆಧಾರಗಳು ದೊರಕದಿರುವುದರಿಂದ ಜನಪದರ ಮೊರೆ ಹೋಗಲಾಗಿದೆ. ಕ್ಷೇತ್ರಕಾರ್ಯದಲ್ಲಿ ಅಲ್ಲಿನ ಜನರ ಭಾವನೆ ಹಾಡುಗಳ ಮೂಲಕ ಹೊರಹೊಮ್ಮಿದೆ. ನಂತರ ಕಥೆಗಳು ಅಷ್ಟೇ ಓಬವ್ವ ಎಂಬ ಪದವೇ ಮೂರು-ನಾಲ್ಕು ತಲೆಮಾರುಗಳಿಂದ ಬಂದ ಜನಜನಿತ ಪದವಾಗಿದೆ. ಚಿತ್ರದುರ್ಗ ಎಂದಾಗ ಜೊತೆಗೆ ಬರುವ ಪದವೇ ಒನಕೆ ಓಬವ್ವ, ಈಕೆಯ ಬಗ್ಗೆ ಹಲವಾರು ಐತಿಹಾಸಿಕ ಲೇಖನಗಳು, ಅಲ್ಲಿನ ಜನಸಾಮಾನ್ಯರ ಬಾಯಲ್ಲಿ ಬರುವ ಕಥೆಗಳನ್ನು ನಮೂದಿಸಿದೆ. ಇನ್ನು ಪ್ರಮುಖ ಐತಿಹ್ಯವಾಗಿ ಅಧಿಕೃತವಾಗಿ ನಾಯಕರ ಕಾಲದಿಂದಲೂ ಓಬವ್ವನ ಕಿಂಡಿಯೆಂದೇ ಮುದ್ರೆಯೊತ್ತಿಸಿಕೊಂಡು ಗತಸಾಹಸವನ್ನು ಸಾರುತ್ತಿರುವ ಓಬವ್ವನ ಕಿಂಡಿ ಹಾಗೂ ವಂಶೀಕರೆನಿಸಿಕೊಂಡವರೆಲ್ಲಾ ಸೇರಿಕೊಂಡು ತಾವೇ ನಿರ್ಮಿಸಿಕೊಂಡಿರುವ ಒನಕೆ ಓಬವ್ವ ದೇವಸ್ಥಾನ ಹಾಗೂ ತಪ್ಪದೇ ಭಾದ್ರಪದ ಮಾಸದಲ್ಲಿ ಸಮಾಧಿ ಪೂಜೆಯನ್ನು ಮಾಡುತ್ತಾ ಓಬವ್ವನ ಸಮಾಧಿಯೆಂದೇ ಗುರುತಿಸಲ್ಪಟ್ಟಿರುವ ಸಮಾಧಿ ಸ್ಥಳ, ಓಬವ್ವ ಮತ್ತು ಮದ್ದಹನುಮಪ್ಪ ವಾಸವಿದ್ದರು ಎನ್ನಲಾದ ಗವಿಮನೆ ಮೊದಲಾದೆಲ್ಲವನ್ನು ಕ್ರೋಢೀಕರಿಸಿ ಈ ಅಧ್ಯಾಯದಲ್ಲಿ ನಿರೂಪಿಸಿದೆ. ಐತಿಹ್ಯಗಳಿಗಿದ್ದ ಮಹತ್ವ ಮುಂದಿನ ಪೀಳಿಗೆಗೆ ಇತಿಹಾಸವನ್ನು ಸಾಗಿಸುವ, ದಾಖಲಿಸುವ ಮಹತ್ವದ ಪಳೆಯುಳಿಕೆಗಳೇ ಈ ಐತಿಹ್ಯಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ.

ಓಬವ್ವನ ಬಗೆಯ ಲಾವಣಿಗಳನ್ನು ಜೋಯಿಸರು ಸಿ.ರಂಗಯ್ಯರವರಿಂದ ರಚಿಸಿದ್ದು ಶರಣ ಸಾಹಿತ್ಯದಲ್ಲಿ ಪ್ರಕಟಿಸಲಾಗಿದೆ ಎಂದರೂ ಅದು ಲಭ್ಯವಿಲ್ಲದ ಕಾರಣ ಮರಡೀಹಳ್ಳಿ ನಾಟಕಕಾರ ಸೀತಾರಾಮರೆಡ್ಡಿಯವರು ಬರೆದಿದ್ದರು ಎನ್ನಲಾದ ಒಂದು ಲಾವಣಿಯನ್ನು ಬರೆಯಲಾಗಿದೆ. ಜೊತೆಗೆ ಸ್ಥಳೀಯ ಸ್ತ್ರೀಯರು ಇತ್ತೀಚೆಗೆ ಕಟ್ಟಿ ಹಾಡಿದ ಹಾಡುಗಳನ್ನು ಸಂಗ್ರಹಿಸಲಾಗಿದೆ.

ಓಬವ್ವನ ಸಂಬಂಧಿಕರ ಕಥನಗಳನ್ನು ಅವರವರ ಮನೆಗಳಿಗೆ ಹೋಗಿ ಸಂಗ್ರಹಿಸಿದೆ. ಓಬವ್ವನ ವಂಶೀಕರು ತಾವು ಎಂದು ಮುಂದೆ ಬಂದು ತಮ್ಮಲ್ಲಿದ್ದ ನಾಯಕರ ನಿರೂಪಪತ್ರ, ವಂಶವೃಕ್ಷ ಕೆಲವು ಭಾವಚಿತ್ರಗಳನ್ನು ನೀಡಿದ್ದು, ಜೊತೆಗೆ ತಮ್ಮ ಪೂರ್ವಜರು ಓಬವ್ವನ ಬಗ್ಗೆ ಹೇಳುತ್ತಿದ್ದ ಕಥೆಗಳನ್ನು ಹೇಳಿದ್ದು ಅದನ್ನು ಪಡೆದು ದಾಖಲಿಸಲಾಗಿದೆ. ಕೆಲವು ಸ್ಮೃತಿಗಳನ್ನು ಕೂಡ ದಾಖಲಿಸಿದೆ. ಅಂದರೆ ಪೂರ್ವಜರಿಂದ ನೆನಪಿಗೆ ಬರುವಂಥಹ ಮಾತುಗಳು, ಓಬವ್ವನ ಸಾಹಸತನ, ಹೈದರಾಲಿಯ ಆಕ್ರಮಣದ ನಂತರ ದೊರೆಯಿಲ್ಲದ ದುರ್ಗದಲ್ಲಿ ಇರಲು ಹೆದರಿದ ಕಹಳೆಯವರು ದುರ್ಗ ಬಿಟ್ಟು ಹೋಗಿ ನೆಲೆಸಿದ ಸ್ಥಳಗಳು. ಆಗಿನ ಕಷ್ಟಕರವಾದ ಜೀವನಗಾಥೆಯನ್ನು ಅವರಿಂದಲೇ ಕೇಳಿ ತಿಳಿದು ದಾಖಲಿಸಿದೆ.

ಒಟ್ಟಾರೆ ಈ ಅಧ್ಯಾಯದಲ್ಲಿ ಓಬವ್ವನ ಚರಿತೆಯು "ಜಗದ ಜನರೇ ನಾನು ನಗಲಿಲ್ಲ, ಅಳಲಿಲ್ಲ, ಧರ್ಮಲೋಕದ ಶ್ರೇಷ್ಠನಾರಿಯ ಪಟ್ಟಕ್ಕೆ ಆಸೆಪಡಲಿಲ್ಲ ನಾನು" ಎನ್ನುವ ಮಾತನ್ನು ಓಬವ್ವ ಜನಪದರ ಮುಖಾಂತರ ನುಡಿದು ಚರಿತ್ರೆಕಾರರಿಗೆ ಸವಾಲೆಸೆದಿದ್ದಾಳೆ. ಜನಮನದಲ್ಲಿ ಸಾಂಸ್ಕೃತಿಕ ರಾಯಭಾರಿಯಾಗಿ ನಿಂತಿದ್ದಾಳೆ ಎಂಬುದನ್ನು ನಿಚ್ಚಳವಾಗಿ ಶೋಧಿಸಿ ಬರೆಯಲಾಗಿದೆ.

ಅಧ್ಯಾಯ-ಆರರಲ್ಲಿ ಓಬವ್ವನ ಆಚರಣೆಗಳನ್ನು ಕುರಿತು ಬರೆಯಲಾಗಿದೆ. ಆಚರಣೆಗಳಲ್ಲಿ ಜೀವನಾವರ್ತನ ಮತ್ತು ವಾರ್ಷಿಕ ಆಚರಣೆಗಳಿದ್ದು ಇವುಗಳಿಗೆ ಹೋಲಿಸಿಕೊಂಡಾಗ ಓಬವ್ವನನ್ನು ಒಂದು ಸಮುದಾಯದವರು ಎಡಬಿಡದೆ ತಾವು ತಮ್ಮ ಕುಲದೇವತೆಯನ್ನಾಗಿ ಆಚರಿಸಿಕೊಂಡು ಬರುತ್ತಿರುವುದಾಗಿ ತಿಳಿಸಿದ್ದಾರೆ. ಲಭ್ಯವಾದ ದಾಖಲೆಗಳ ಪ್ರಕಾರ ಚಿತ್ರದುರ್ಗದ ಗೆಜೆಟಿಯರ್‌ನಲ್ಲೂ ತಿದ್ದಿಸಿದ್ದು ಆಕೆ ತಮ್ಮ ಜನಾಂಗಕ್ಕೆ ಸೇರಿದ ಮಹಿಳೆ ಎಂಬುದಾಗಿ ತಿಳಿಸಿದ್ದಾರೆ. ಆಕೆಯ ಬಗ್ಗೆ ಅವರು ಆಚರಿಸಿಕೊಂಡು ಬರುತ್ತಿರುವ ಆಚರಣೆಗಳನ್ನು ತಿಳಿಸಿದ್ದು ಅವನ್ನು ಈ ಅಧ್ಯಾಯದಲ್ಲಿ ದೊರಕಿಸಿದ್ದೇನೆ. ಮುಗ್ಧ ಜನಪದರ ನಂಬಿಕೆಗಳು ಎಷ್ಟು ಬಲವಾಗಿರುತ್ತವೆ ಎಂದರೆ ಮೂರ್ತಿ ಸ್ವರೂಪದಲ್ಲಿ ತಮ್ಮ ಅಮೂರ್ತ ಭಾವನೆಗಳನ್ನು ದೇವತೆಗೆ ಹೋಲಿಸಿ ಪೂಜೆ ಸಲ್ಲಿಸುವಷ್ಟು ಮನುಷ್ಯ ಭಾವನಾ ಜೀವಿಯಾಗುತ್ತಾನೆ ಎಂದಾಗ ಆ ಮನಃಸ್ಥಿತಿಯನ್ನು, ನಿವೇದನೆಯನ್ನು ಚರ್ಚಿಸಲಾಗಿದೆ.

ಅಧ್ಯಾಯ-ಏಳರಲ್ಲಿ ವಿದ್ವಾಂಸರ ದೃಷ್ಟಿಕೋನ ಮತ್ತು ಓಬವ್ವ ಇತಿಹಾಸದಲ್ಲಿ ವೀರಮಹಿಳೆಯರ ಸಾಲಿನಲ್ಲಿ ಓಬವ್ವ ಮೊದಲನೇ ಸ್ಥಾನವನ್ನೇರುವವಳು. ಅಗ್ರಸ್ಥಾನ ಆಕೆಯದೇ. ಆದರೆ ಆಕೆಯ ಚರಿತ್ರೆ ಬೂದಿಯಲ್ಲಿ ಮುಚ್ಚಿದ ಕೆಂಡದಂತಿದೆ. ಆದಾಗಿ ಅದರ ಬಗ್ಗೆ ಹಲವಾರು ಸಾಹಿತಿಗಳು

ವಿದ್ವಾಂಸರೊಡನೆ ಚರ್ಚಿಸಿ ಅವರಲ್ಲಿದ್ದ ಆಕೆಯ ಬಗೆಗಿನ ಐತಿಹಾಸಿಕತೆ, ದೃಷ್ಟಿಕೋನವನ್ನು ದಾಖಲಿಸಲಾಗಿದೆ. ವಿಭಿನ್ನ ನಿಲುವನ್ನು ಹೊಂದಿರುವ ಚಿತ್ರದುರ್ಗದ ಜಿಲ್ಲೆಗೆ ಸಂಬಂಧಿಸಿರುವ ವಿದ್ವಾಂಸರನ್ನು ಭೇಟಿ ಮಾಡಿ ಓಬವ್ವನ ಬಗೆಗಿನ ಅವರ ನಿಲುವನ್ನು, ಆಕೆಯ ಐತಿಹಾಸಿಕ ಸ್ಥಾನವನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ-ಎಂಟರಲ್ಲಿ ಓಬವ್ವನ ನಾಡಪ್ರೇಮದ ಬಗ್ಗೆ ಸ್ಪಷ್ಟತೆ ಮತ್ತು ಅಧ್ಯಯನದ ಆಶಯವನ್ನು ಬರೆಯಲಾಗಿದೆ. ಓಬವ್ವ ಮೊದಲು ಏನೂ ದಾಖಲೆಗಳು ಲಭ್ಯವಿಲ್ಲದ ಸಮಯದಲ್ಲಿ ಬೇಡಮಹಿಳೆ ಎಂದು ನಮೂದಿಸಿದ್ದರೂ. ತದನಂತರ ವಾಸ್ತವಕ್ಕೆ ಹತ್ತಿರವಾದ ಹಲವಾರು ಕುರುಹುಗಳು, ದಾಖಲೆಗಳು ಸಿಕ್ಕ ನಂತರ ಆಕೆ ಓರ್ವ ಛಲವಾದಿ ಜನಾಂಗಕ್ಕೆ ಸೇರಿದ ಮಹಿಳೆಯಾಗಿದ್ದಳು ಎಂದು ನಮೂದಿಸಿರುವುದು ನಿರ್ವಿವಾದ. ಆದರೆ ಆಕೆ ಈ ಎಲ್ಲಾ ಯಾವ ಸಮುದಾಯ, ವರ್ಗಕ್ಕೆ ಸೀಮಿತಳಾಗದೆ ನಾಡರಕ್ಷಣೆಗೆ ನಿಂತ ಮಹಿಳೆಯಾಗಿದ್ದು ಆಕೆಯನ್ನು ಯಾವುದೇ ವರ್ಗ, ಸಮುದಾಯಗಳಿಗೆ ಸೀಮಿತಗೊಳಿಸಿ, ರಂಗುರಂಗಿನ ಚರಿತ್ರೆ ಕಟ್ಟುವುದಾಗಲೀ, ಅಥವ ಅಲಕ್ಷ್ಯಗೊಳಿಸುವುದಾಗಲಿ ಇದಾವುದಲ್ಲದೆ ಆಕೆ ಇತಿಹಾಸದಲ್ಲಿ ಈ ಮಣ್ಣಿನ ಮಗಳೆಂದೇ ಗುರುತಿಸಬೇಕಾದ ಆಸೆ, ಇದನ್ನು ದಾಖಲಿಸಿದೆ. ಇದು ಪ್ರತಿಯೊಬ್ಬ ಸ್ಥಳೀಯ ವೀರನನ್ನು, ಸ್ಥಳೀಯ ಚರಿತ್ರೆಯು ಕಳೆದು ಹೋಗದಂತೆ ಉಳಿಸುವುದು ನಾಡಿನ ಪ್ರಜೆಯ ಕರ್ತವ್ಯವೂ ಹೌದು. ಈ ವಿಚಾರವನ್ನು ಇಲ್ಲಿ ಬರೆಯಲಾಗಿದೆ.

ಆಕೆಯನ್ನು ಆಕೆಯ ಹೆಸರಿನಿಂದ ಗುರುತಿಸಲು ಇತಿಹಾಸದಲ್ಲಿ ಜಾಗವಿಲ್ಲವೇ ಅಥವ, ನಿರಾಕರಣೆಯೆ ಅಥವಾ, ಸ್ತ್ರೀ ಎಂಬ ಲಿಂಗ ಧೋರಣೆಯೇ ಅಥವ ಇವೆಲ್ಲವನ್ನು ಹೊರತು ಪಡಿಸಿದ ಇತಿಹಾಸದ ಮತ್ತೊಂದು ದಾರಿಯಾವುದು. ಎಷ್ಟೆಂದರೂ ಮಹಿಳಾ ಕಥನಗಳು ಬಹುತೇಕ ಬೆರಳೆಣಿಕೆಯಷ್ಟು ಸ್ತ್ರೀಯರನ್ನು ಹೊರತುಪಡಿಸಿದರೆ ಉಳಿದವೆಲ್ಲಾ ಮೌಖಿಕ ಪರಂಪರೆಯನ್ನು ಆಶ್ರಯಿಸಿವೆ ಎಂದರೆ ತಪ್ಪಾಗಲಾರದೇನೋ.

ಒಟ್ಟಿನಲ್ಲಿ ಕರ್ನಾಟಕ ಹೆಣ್ಣು ಮೊದಲಿನಿಂದಲೂ ತನಗಾಗಿ, ತನ್ನ ನಾಡಿಗಾಗಿ ಒಂದಲ್ಲಾ ಒಂದು ರೀತಿಯಲ್ಲಿ ಸೇವೆ ಮಾಡುತ್ತಿದ್ದಳೆಂಬುದನ್ನು ಇತಿಹಾಸದಲ್ಲಿ ಸ್ತ್ರೀಯರ ಪಾತ್ರವನ್ನು ಗಮನಿಸುತ್ತಾ ಬಂದಂತೆಲ್ಲಾ ವೇದ್ಯವಾಗುತ್ತದೆ. ನಾಯಕರ ನಾಡಿನಲ್ಲಿ ಹರಿದ ಓಬವ್ವನ ರಕ್ತಕ್ಕೂ ಅದೇ ಗುಣವಿತ್ತೇನೋ, ಅವಳು ನಾಡಿನಾಡಿಯಲ್ಲೂ ತುಂಬಿ ಹರಿಯುತ್ತಿರುವ ಪರಂಪರಾನುಗತ ಸಂಸ್ಕೃತಿಯ ಸಿರಿ, ತಾಯಿ ಎದೆಹಾಲಿನಂತೆ ಹರಿದು ಬಂದ ಅವಳ ಚೈತನ್ಯದ ಸೆಲೆ, ಕಳ್ಳಗಂಡಿಯಿಂದ ನುಗ್ಗಿ ಬಂದ ವೈರಿ ಪಡೆಯನ್ನು ಚೆಂಡಾಡುವಂತೆ ಮಾಡಿತು. ರಕುತದ ಕೋಡಿಯನ್ನು ಹರಿಸಿದಳು. ದೊರೆಯನ್ನು ಸಕಾಲದಲ್ಲಿ ಎಚ್ಚರಿಸುವಂತೆ ತನ್ನ ಗಂಡನಿಗೆ ಕೈಸನ್ನೆಯಿಂದಲೇ ತಿಳಿಸಿ ತನ್ನ ದುರ್ಗವನ್ನು ಕಾಪಾಡಿದಳು. ಇನ್ನೇನು ದುರ್ಗವನ್ನು ಗೆದ್ದೇಬಿಟ್ಟೆ ಎಂಬ ಹುಂಬುತನದಿಂದ ಬಂದ ಹೈದರಾಲಿಗೆ, ದುರ್ಗ ಕೆಂಡದ ಉಂಡೆ ಎಂಬುದನ್ನು

ತೋರಿಸಿದಳು. ರಾಜ ಮಹಾರಾಜರುಗಳ ಬದುಕುಗಳೇ ಚರಿತ್ರೆ ಎನಿಸಿದ ಕಾಲದಲ್ಲಿ ಓಬವ್ವ ಮಿಂಚಿದವಳು. ಮಿಂಚಿನಂತಹ ತನ್ನ ಛಾಪನ್ನು ಉಳಿಸಿಹೋದವಳು. ತನ್ನ ವಂಶಸ್ಥರಿಗೆ ರಣಕಹಳೆಯವರೆಂದೇ ಗುರುತಿಸುವಂಥಹ ಘನಕಾರ್ಯ ಮಾಡಿದವಳು. ಏಕೆಂದರೆ ರಣರಂಗದ ಸಂಪೂರ್ಣ ಅನುಭವ ತರಬೇತು ಪಡೆದ ಓರ್ವ ಮಹಾವೀರನು ಓಬವ್ವನಿಗೆ ಒದಗಿಸಿದಂಥಹ ನೀರವ ರಾತ್ರಿಯ ಉತ್ಕಟ ಪರಿಸ್ಥಿತಿ ಒದಗಿದ್ದರೆ, ಸೈನ್ಯದ ನೆರವಿಲ್ಲದೆ, ಆಯುಧಗಳ ನೆರವಿಲ್ಲದೆ, ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಟಕ್ಕಿಳಿದು ತನ್ನ ನಿಸ್ವಾರ್ಥ ಸಾಹಸವನ್ನು ಪ್ರದರ್ಶಿಸುತ್ತಿದ್ದನೇ ಎಂಬ ಬಹು ದೊಡ್ಡ ಸಂದೇಹ ನಮ್ಮನ್ನು ಕಾಡದಿರಲಾರದು. ಇಂಥಹದರಲ್ಲಿ ಓಬವ್ವನ ಸಾಹಸವನ್ನು ಕೇಳಿದಂಥಹ ಪ್ರತಿಯೊಬ್ಬ ನಾಡಜೀವಿಗೆ ಆಳುವ ವರ್ಗದ ಅಹಂ, ಹೋರಾಡಿದ ವರ್ಗವನ್ನು ಪರಿಗಣಿಸದೆ ತಮ್ಮ ಅಧಿಕಾರದ ಮಾತುಗಳನ್ನೇ ಶಾಸನಗಳಾಗಿ ಬರೆಸಿರುವುದನ್ನು ನಾವು ಕಾಣುತ್ತೇವೆ. ಆದರೆ ಇಲ್ಲಿ ಚಿತ್ರದುರ್ಗದ ಇತಿಹಾಸದಲ್ಲಿ ಓಬವ್ವನ ಈ ಕಾರ್ಯವನ್ನು ಉದಾತ್ತ ಮನದಿಂದ ಶ್ಲಾಘಿಸಿದ ನಾಯಕ ಆಕೆ ಕೇಳಿದ ಸವಲತ್ತುಗಳನ್ನು ಪೂರೈಸುತ್ತಾನೆ. ಆಕೆಯನ್ನು ತನ್ನ ಸಾಕು ತಾಯಿ ಓಬವ್ವ ನಾಗತಿಗೆ ಹೋಲಿಸಿಕೊಳ್ಳುತ್ತಾನೆ ಚಿನ್ಮೂಲಾದ್ರಿಗೆ ಕವಿದಿದ್ದ ಕರಾಳತೆಯನ್ನು ಹೋಗಲಾಡಿಸಿದ ತಾಯಿ ಎಂದು ಶ್ಲಾಘಿಸುತ್ತಾನೆ. ಇದು ನಾಯಕನ ಜನ ಸಾಮಾನ್ಯರ ನಡುವಿನ ಬಾಂಧವ್ಯಕ್ಕೆ ಸಾಕ್ಷಿಯಂತಿದೆ.

ವಾಸ್ತವವಾಗಿ, ಆಧುನಿಕವಾಗಿ ಓಬವ್ವನನ್ನು ಚಿಂತನೆಗೊಳಪಡಿಸಿದ ಚಿತ್ರದುರ್ಗದ ಪ್ರಭುತ್ವ ಓಬವ್ವನ ಸಾಹಸಗಾಥೆಗೆ ಗೌರವ ನೀಡಿ ದುರ್ಗದ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿ ವೀರವನಿತೆ ಓಬವ್ವ ಎಂದು ನಾಮಾಂಕಿತ ನೀಡಿದೆ. ಹಾಗೆಯೇ ಔಪಚಾರಿಕ ನಿಯಂತ್ರಣವಾದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಪೊಲೀಸ್ ಇಲಾಖೆಯ ಪಹರೆಯ ವಾಹನಗಳ ಮೇಲೆ ಓಬವ್ವ ಪಡೆ ಎಂದು ಬರೆದಿದ್ದು ನಗರದೆಲ್ಲೆಡೆ ಸಂಚರಿಸುವ ದೃಶ್ಯ ಸರ್ವೇಸಾಮಾನ್ಯವಾಗಿದೆ. ಹಾಗೆಯೇ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆ, ಚಿತ್ರದುರ್ಗ ಘಟಕದಲ್ಲಿರುವ ಸರ್ಕಾರಿ ಬಸ್ಸುಗಳ ಮೇಲೆ "ವೀರವನಿತೆ ಒನಕೆ ಓಬವ್ವ ಎಕ್ಸ್‌ಪ್ರೆಸ್" ಎಂದು ಬರೆದಿರುವುದನ್ನು ಗಮನಿಸಿದರೆ ನಿಜಕ್ಕೂ ಜಿಲ್ಲಾಡಳಿತಕ್ಕೆ ಒಂದು ಸೆಲ್ಯೂಟು. ಹೀಗೆ ನಾಡಿನ ಹಲವಾರು ಕ್ರೀಡಾಂಗಣಗಳಿಗೆ ಓಬವ್ವ ಕ್ರೀಡಾಂಗಣ ಎಂದು ಹೆಸರಿಸಿರುವ ಉದಾಹರಣೆಗಳು ಇವೆ. ಹೀಗೆ ಐತಿಹಾಸಿಕ ಮಹಿಳೆ ಓಬವ್ವನನ್ನು ಜನಪದರು, ಜಿಲ್ಲಾಡಳಿತ ಜೀವಂತವಾಗಿ ಇಡುವಲ್ಲಿ ಹೆಣಗಾಟವೆ ನೆಡೆಸಿದ್ದಾರೆ. ಆದರೆ ಇತಿಹಾಸ ಮಾತ್ರ ಮೌನವಾಗಿದೆ. ಆದರೂ ನನ್ನ ಜಿಲ್ಲೆಯ ಈ ಸಾಂಸ್ಕೃತಿಕ ರಾಯಭಾರಿಯಾದ ಓಬವ್ವ, ಸವಾಲುಗಳನ್ನು ಎದುರಿಸುತ್ತಾ, ಇತಿಹಾಸಕಾರರಿಗೆ ದುರ್ಗದ ದುರ್ಗೆಯೆಂದು ಎಚ್ಚರಿಸುತ್ತಾ, ಶತ್ರುಗಳಿಗೆ ರಣಹುಚ್ಚಿಯಾಗಿ, ಮಹಿಳೆಯರಿಗೆ ಆದರ್ಶ ಪ್ರಾಯಳಾಗಿದ್ದಾರೆ.

ಕೋಟೆ ವೀಕ್ಷಿಸಲು ಬಂದ ಪ್ರವಾಸಿಗನಿಗೆ ಮೌನವಾಗಿಯೇ ತನ್ನ ಇತಿಹಾಸವನ್ನು ಬಿತ್ತುತ್ತಾಳೆ. ಪಾಳೆಯಗಾರರ ವಂಶೀಕರೆಂದೇ ಅಧಿಕೃತವಾಗಿ ಮುದ್ರೆಯೊತ್ತಿಸಿಕೊಂಡು ಸರ್ಕಾರದಿಂದಲೇ ಗುರ್ತಿಸಲ್ಪಟ್ಟ ವಂಶದವರಾದ ಶ್ರೀಮಾನ್ ವೀರಭದ್ರನಾಯಕರು ಹೇಳುವ ಪ್ರಕಾರ ಓಬವ್ವ ದೇಶ್‌ಭಾಗ್ ಹೆಣ್ಣು ಮಕ್ಕಳ ಪಡೆಯಲ್ಲಿ ತರಬೇತಿ ಪಡೆದ ಹೆಣ್ಣು. ಈಕೆ ಗುಡೇಕೋಟೆಯ ಪೆದ್ದಕ್ಕ ನಾಗತಿಯ ಆಪ್ತ ಸಹಾಯಕಿದ್ದು, ಅಲ್ಲದೆ ಹೆಣ್ಣು ಸೈನಿಕೆಯಂತೆ ಈಕೆಯ ಪ್ರವೇಶ ಚಿತ್ರದುರ್ಗದ ಕೋಟೆಗೆ ಆದುದು ಎಂಬುದನ್ನು ತಮ್ಮ ಪೂರ್ವಿಕರಿಂದ ಕೇಳಿ ತಿಳಿದುದಾಗಿ ತಿಳಿಸಿರುತ್ತಾರೆ. ಇಂಥಹ ಮಹಿಳೆಯು ಹಿರಿಯರಿಗೆ ಬೆನ್ನೆಲುಬಾಗಿ ನಿಂತ ಗಾದ್ರಿ ಪಾಲಿನಾಯಕ, ಸಂಗೊಳ್ಳಿರಾಯಣ್ಣ, ಕುಮಾರರಾಮ, ಜುಂಜಪ್ಪನಂತಹ ಶೂರರನ್ನು ಕುರಿತು ಮೌಖಿಕ ಪರಂಪರೆ ಪರಿಚಯಿಸುತ್ತದೆ. ಅಂಥಹವರ ಪಾಲಿಗೆ ಸೇರುವ ಅರ್ಹತೆಯುಳ್ಳವಳು ಓಬವ್ವ ಹಾಗೆಯೇ ಅಂದಿನಿಂದ ಇಂದಿನವರೆಗೂ ತನ್ನ ಸ್ಥಾನ ಕಾಯ್ದುಕೊಂಡು ಬಂದ ಓಬವ್ವನ ಪರ–ವಿರೋಧಗಳ ಮಧ್ಯೆ ಸತ್ಯ ಶೋಧಗಳ ಸಂಸ್ಕೃತಿಯನ್ನು ಭಿನ್ನವಾಗಿಸಲು ಚಿತ್ರದುರ್ಗದ ಅನೇಕರು, ವಿದ್ವಾಂಸರು ಶಿಷ್ಟಸಾಹಿತ್ಯದ ಮೂಲಕ ಆಕೆಯ ಇರುವನ್ನು ಶ್ರುತಪಡಿಸಿದ್ದಾರೆ.

ಹೀಗೆ ವಸ್ತುನಿಷ್ಠತೆ ಮತ್ತು ಸತ್ಯ ಶೋಧನೆಗಳು ಚರಿತ್ರಾಕಾರನೋರ್ವನ ಮುಖ್ಯ ಧ್ಯೇಯವಾಗುತ್ತವೆ. ನಾಡಿನ ರಕ್ಷಣೆಗಾಗಿ, ಊರಿನ ಕ್ಷೇಮಕ್ಕಾಗಿ, ಸ್ತ್ರೀಯರ ಮಾನರಕ್ಷಣೆಗಾಗಿ ಪ್ರಾಣ ನೀಗಿದ ವೀರರ ಕಥೆಗಳನ್ನು ನಮ್ಮ ಕನ್ನಡ ನಾಡಿನ ಶಿಲೆಗಳು ಸಾರಿ ಹೇಳುತ್ತಿವೆ. ದೇಶವೇ ದೇವರು ಎಂದು ಹಲವರು ಭಾವಿಸಿರುವುದುಂಟು. ನಮ್ಮ ಜನಪದರು ಸಾವನ್ನು ಕೆಚ್ಚೆದೆಯಿಂದ ಸ್ವಾಗತಿಸುತ್ತಿದ್ದರು ಅಂಥಹ ಧೀರರಾಗಿದ್ದರು ಎಂಬುದನ್ನು ಜನಪದ ಸಾಹಿತ್ಯದಲ್ಲಿ ತಿಳಿದಿದ್ದೇವೆ. ಇದಕ್ಕೆ ಮಾದರಿ ಓಬವ್ವ ಹಣದಾಸೆ, ಕೀರ್ತಿಯನ್ನು ನೀಡಲು ಬಂದ ದೊರೆಗೆ ತಮ್ಮ ಆಡಳಿತದಲ್ಲಿ ತಾವು ಸುಖವಾಗಿ ಇರುವುದಾಗಿ ತಿಳಿಸಿ ಕೇವಲ ಒಂದು ವೀಳೆಬಲವನ್ನು ತನ್ನವಾಸಿದವರಿಗೆ ಕೊನೆಯವರೆಗೂ ನಾಯಕ ವಂಶದವರು ನೀಡಬೇಕಾಗಿ ಕೋರಿದಳು.

ಜನ್ಮಭೂಮಿಗಿಂತ ಬೇರೆ ಸ್ವರ್ಗವಿಲ್ಲ. ನಾಡಿನ ಗೌರವ ಕಾಪಾಡುವುದೇ ತನ್ನ ಕರ್ತವ್ಯ. ಕಾಯಕವೇ ಕೈಲಾಸ. ಸದಾಚಾರ ನೀತಿ ನಿಷ್ಠೆಯಿದ್ದರೆ ನಿಜಕ್ಕೂ ಜಗತಿಗೆ ಜ್ಯೋತಿಯಾಗುತ್ತಾರೆ ಎನ್ನುವುದಕ್ಕೆ ಓಬವ್ವನ ಘಟನೆಯೇ ಒಂದು ಜ್ವಲಂತ ನಿದರ್ಶನ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಧ್ಯಯನದ ಫಲಿತಗಳು ಈ ಕೆಳಗಿನಂತಿವೆ.

೧. ಚಿತ್ರದುರ್ಗದ ಇತಿಹಾಸದಲ್ಲಿ ದಾಖಲಾಗಿರುವ ಓಬವ್ವನ ಸಾಹಸಗಾಥೆಯನ್ನು ಮೊದಲ ಬಾರಿಗೆ ಜಾನಪದರ ಸಾಂಸ್ಕೃತಿಕ ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಪ್ರಸ್ತುತ ಮಹಾಪ್ರಬಂಧದ್ದಾಗಿದೆ.

೨. ೧೭ನೇ ಶತಮಾನದ ಓರ್ವ ಅನಕ್ಷರಸ್ಥ ಮಹಿಳೆಯ ಧೈರ್ಯವನ್ನು, ಸಮಯ ಸ್ಫೂರ್ತಿಯನ್ನು ಹಲವರು ಗುರುತಿಸಿದ್ದರೂ ಸಮಗ್ರ ಅಧ್ಯಯನದ ಪ್ರಯತ್ನ ಈ ಮಹಾಪ್ರಬಂಧದ್ದಾಗಿದೆ.

೩. ಚಿತ್ರದುರ್ಗದ ಕೋಟೆಗೆ ಓಬವ್ವನ ಪ್ರವೇಶದಿಂದ ಹಿಡಿದು ಆಕೆಯ ಸಾಹಸ ಮನೋಭಾವ, ಸ್ವಾಮಿನಿಷ್ಠೆ ಇತಿಹಾಸದಿಂದ ಅಷ್ಟಾಗಿ ಪರಿಗಣಿತವಾಗಿರದ ಬಗ್ಗೆ ಅಂದಿನ ಸಮಾಜದಲ್ಲಿನ ಯಾವ ಶೋಷಿತ ಅಂಶ ಓಬವ್ವನ ಇತಿಹಾಸವನ್ನು ದಾಖಲಿಸುವಲ್ಲಿ ನಿರಾಕರಣೆಯನ್ನು ವ್ಯಕ್ತಪಡಿಸಿದೆ. ಆ ನೆಲೆಗಳ ಸಮಗ್ರ ಸಂಶೋಧನೆ ಈ ಮಹಾಪ್ರಬಂಧದ ಮೂಲ ಉದ್ದೇಶವಾಗಿದೆ.

೪. ಇತಿಹಾಸವನ್ನು ಸಾರುವಲ್ಲಿ ಶಿಷ್ಟಸಾಹಿತ್ಯವು ಮೌನವಾಗಿದ್ದರೂ, ಜನಪದರು, ಮೌಖಿಕ ಕಥೆಗಳು ಪ್ರಮುಖ ಧ್ವನಿಗಳಾಗುತ್ತವೆ ಎಂಬುದು ಈ ಅಧ್ಯಯನದಿಂದ ಸ್ಪಷ್ಟಗೊಂಡಿದೆ.

೫. ಚರಿತ್ರೆಯನ್ನು ರಚಿಸುವಲ್ಲಿ ಸಾಕ್ಷಿಯೇ ಮುಖ್ಯವಲ್ಲ. ಭಾವ ನಿಷ್ಠತೆಯು ಪ್ರಮುಖವಾಗುತ್ತದೆ. ಹಲವಾರು ವಿದ್ವಾಂಸರು ಮೌಖಿಕ ಪರಂಪರೆಯ ಚರಿತ್ರೆಗಳನ್ನು ಸಂಗ್ರಹಿಸಿ ಚರಿತ್ರೆಯ ದಾಖಲೆ ಮಾಡಿದ್ದಾರೆ. ಇಂಥಹ ಮೌಖಿಕ ಪರಂಪರೆಯ ಐತಿಹಾಸಿತೆಗೆ ಈ ಮಹಾಪ್ರಬಂಧ ನಿದರ್ಶನವಾಗಿದೆ.

೬. ಓಬವ್ವನ ಕಾಲಮಾನವನ್ನು ಕುರಿತು ಚಿತ್ರದುರ್ಗದ ಕೈಫಿಯತ್‌ನಲ್ಲಿ ಒಂದು ಕಾಲಮಾನವಿದ್ದು, ಲಭ್ಯವಾದ ಕೃತಿಗಳಲ್ಲಿ ಒಂದು ಕಾಲಮಾನವಿದ್ದು, ಕ್ಷೇತ್ರಕಾರ್ಯದಿಂದ ವಿವರಣಾತ್ಮಕವಾಗಿ ಶೋಧಿಸಿ, ನಿಖರವಾಗಿ ಕಟ್ಟಿಕೊಡುವ ಪ್ರಯತ್ನ ಇದಾಗಿದೆ.

೭. ನಾಯಕ ಅರಸರ ವಂಶಸ್ಥರು ಒನಕೆ ಓಬವ್ವನ ವಂಶಸ್ಥರಿಗೆ ಕೊಟ್ಟಿರುವ ನಿರೂಪ ಅಧಿಕಾರ ಹಾಗೂ ದೊರೆತ ಮಾಹಿತಿಗಳನ್ನು ಸಂಶೋಧಿಸಿ ಶಿಷ್ಟಸಾಹಿತ್ಯದಲ್ಲಿ ಅಷ್ಟಾಗಿ ಕಂಡುಬರದೇ ಕಳೆದು ಹೋಗಿದ್ದ ಸ್ತ್ರೀ ಓಬವ್ವನನ್ನು ಜಾನಪದಿಕವಾಗಿ ದಾಖಲಿಸಲಾಗಿದೆ.

೮. ಪುರುಷ ನಿರ್ಮಿತ ಭಾಷೆಯಲ್ಲಿ ಹೆಣ್ಣು ಕೇವಲ ಒಂದು ಸಾಧನವಾಗಿ ಪುರುಷ ವ್ಯವಸ್ಥೆಯ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾಳೆ. ಗ್ರಾಮೀಣ ಸಂಸ್ಕೃತಿಯ ಸಮಾಜದ ಮಹಿಳೆ ಹೃದಯವಂತಿಕೆಯ ವ್ಯಕ್ತಿಯಾಗಿದ್ದು ಪ್ರೀತಿ, ವಾತ್ಸಲ್ಯ, ವಿಶ್ವಾಸ, ಒಳ್ಳೆಯ ನಡತೆ, ನಂಬಿಕೆ, ದಕ್ಷತೆ, ಪ್ರಾಮಾಣಿಕತೆ, ಕರುಣೆ, ದಯ, ಅನುಕಂಪವುಳ್ಳ ದೇಸೀ ಸಂಸ್ಕೃತಿಯ ಮೂಲ ಚೈತನ್ಯ ಮಹಿಳೆಯಾಗಿದ್ದು, ಐತಿಹಾಸಿಕವಾಗಿಯೂ ಮಹಿಳೆ ಹೆಸರಾಗಿದ್ದು, ಅವರಲ್ಲಿ ಓಬವ್ವನ ಛಾಪನ್ನು ಮೂಡಿಸುವಲ್ಲಿ ಈ ಅಧ್ಯಯನದಲ್ಲಿ ತಿಳಿದುಬರುತ್ತದೆ.

೯. ಶತಶತಮಾನಗಳ ಇತಿಹಾಸ ಮತ್ತು ಮಾನವ ಜನಾಂಗದ ಚರಿತ್ರೆಯನ್ನು ಅವಲೋಕಿಸುವಾಗ ಮಹಿಳೆಯ ಸ್ಥಾನಮಾನಗಳು ಬಹಳ ಹಿನ್ನೆಡೆಯನ್ನು ಪಡೆದಿವೆ. ಕಾರ್ಮಿಕ ಮಹಿಳೆಯೇ ಮೇಲ್ವರ್ಗದ ಮಹಿಳೆಗಿಂತಲೂ ಎಷ್ಟೋ ವಾಸಿ ಎಂದು ಹೇಳಬಹುದು. ಯಾವುದೇ ಅಧಿಕಾರ, ಅಂತಸ್ತುಗಳನ್ನು ಲೆಕ್ಕಿಸದೆ ಗಂಡನ ಸರಿಸಮಾನಳಾಗಿ ಬದುಕುತ್ತಾ ಬಂದವಳೆಂದರೆ ತಳಸಮುದಾಯದ ಮಹಿಳೆ ಅಂಥಹ ತಳಸಮುದಾಯದ ಮಹಿಳೆಯ ಸಾಹಸ ಗಾಥೆಯನ್ನು ಪ್ರತಿನಿಧಿಸಲಾಗಿದೆ.

೧೦. ಓಬವ್ವನ ನಾಡ ಭಕ್ತಿ, ದೇಶಸೇವೆ, ದೇಶಾಭಿಮಾನದ ಬಗ್ಗೆ ಯಾರೂ ಉಪದೇಶ ಮಾಡಿರಲಿಲ್ಲ. ಆದರೂ ತನ್ನಿಂದಾದ ಅಳಿಲು ಸೇವೆಯನ್ನು ಸಲ್ಲಿಸಿ ಆ ಸಮಯಕ್ಕೆ ತನ್ನ ನಾಡನ್ನು

ರಕ್ಷಿಸಿದವಳು. ಇದರಿಂದ ನಮಗೆ ತಿಳಿಯುವ ಬಹುಮುಖ್ಯ ಅಂಶ ಸಾಮಾನ್ಯರು ಅಸಮಾನ್ಯರ ಪಟ್ಟಿಗೆ ಸೇರುವುದು ತಮ್ಮ ನಿಸ್ವಾರ್ಥ ಸೇವೆ, ದೇಶಸೇವೆ ಮತ್ತು ಬಲಿದಾನಗಳಿಂದ ಹೊರತು ಹಣ, ಮತ, ಜಾತಿ ಬಲದಿಂದಲ್ಲ ಎಂಬುದನ್ನು ವೇದ್ಯಗೊಳಿಸಿದೆ.

೧೧. ಚಿತ್ರದುರ್ಗದಲ್ಲಿ ಆಕೆಯ ವಂಶದವರು ತಾವೆಂದು ಹೇಳಿಕೊಂಡಿರುವವರು, ಗುರುತಿಸಿಕೊಂಡಿರುವವರು ನೀಡಿರುವ ಸಾಕ್ಷ್ಯಾಧಾರಗಳಿಂದ ರಾಜಾ ಎಸ್. ಪಾಳೇಯಗಾರರು ನೀಡಿರುವ ನಿರೂಪ ಪತ್ರ, ಹಾಗೆಯೇ ಚರಿತ್ರೆಯಲ್ಲಿ ದಾಖಲಾಗಿರುವ ಹೈದರಾಲಿಯ ನಾಲ್ಕು ಬಾರಿಯ ದಾಳಿಗಳನ್ನು ಆಧಾರವಾಗಿಟ್ಟುಕೊಂಡು ಓಬವ್ವೆಯ ಘಟನೆಯ ಸಂಪೂರ್ಣ ಚಿತ್ರಣವನ್ನು ಈ ಮಹಾಪ್ರಬಂಧದಲ್ಲಿ ಪ್ರಸ್ತುತಪಡಿಸಿದೆ.

೧೨. ಐತಿಹ್ಯಗಳ ಸಾಲಿಗೆ ಸೇರಿಸಲು ಅಷ್ಟೇನೂ ಪುರಾತನವಾದದಲ್ಲದ ಇತ್ತೀಚೆಗೆ ಆಕೆಯ ವಂಶಸ್ಥರರೆಂದೇ ಗುರುತಿಸಿಕೊಂಡವರು ತಾವೇ ಆಕೆಗಾಗಿ ಒಂದು ದೇವಸ್ಥಾನ ನಿರ್ಮಿಸಿಕೊಂಡಿದ್ದು ನಾಯಕರ ಕಾಲದಿಂದಲೂ ನಡೆಸಿಕೊಂಡು ಬರುತ್ತಿರುವ ಆಚರಣೆಗಳನ್ನು ಇಂದಿನವರೆಗೂ ನಡೆಸಿಕೊಂಡು ಬರುತ್ತಿದ್ದು ಅವುಗಳನ್ನು ಸವಿವರವಾಗಿ ದಾಖಲಿಸಿದೆ.

೧೩. ವೀರನಾರಿ ಓಬವ್ವೆಯ ಸಾಹಸಕ್ಕೆ ತಕ್ಕ ಪುರಸ್ಕಾರ ಚಿತ್ರದುರ್ಗ ಜಿಲ್ಲಾಡಳಿತ ಮತ್ತು ಪ್ರಭುತ್ವ ಸೇರಿ ಸ್ಥಳೀಯರ ನೆರವಿನೊಂದಿಗೆ ಓಬವ್ವೆಯ ಕಂಚಿನ ಪುತ್ತಳಿಯನ್ನು ನಿರ್ಮಿಸಿ, ಜಿಲ್ಲಾಮಟ್ಟದಲ್ಲಿ ಆಕೆಯ ಹೆಸರಿನಲ್ಲಿ ಪುರಸ್ಕಾರ ನೀಡುವುದಾಗಿ ಘೋಷಿಸಿದ ವಿವರಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂತೆ ಓಬವ್ವನ ಸ್ಮಾರಕಕ್ಕಾಗಿ ಐದು ಕೋಟಿ ಕಾಯ್ದಿರಿದ್ದು ನಿರ್ಮಾಣ ಕೈಗೊಂಡರೆ ನಿಜವಾಗಿ ಚಿತ್ರದುರ್ಗ ಓಬವ್ವ ನಾಡಾಗಿ ಪರಣಮಿಸುತ್ತದೆ. ಇಡೀ ನಾಡಿಗೆ ಓಬವ್ವ ಆದರ್ಶ ಮಹಿಳೆಯಾಗುತ್ತಾಳೆ.

೧೪. ಓಬವ್ವ ನಾಡಿಗೆ ಸೇರಬೇಕಾದ ಸ್ವತ್ತೇ ವಿನಃ ಯಾವ ಒಂದು ಸಮುದಾಯ, ವರ್ಗಕ್ಕೆ ಸೀಮಿತವಾದವಳಲ್ಲ. ಇಲ್ಲಿ ಮಹಿಳಾ ಸಂವೇದನೆ ಸ್ತ್ರೀಸಶಕ್ತೀಕರಣಕ್ಕೆ ನಾಂದಿಯಾಗಿದ್ದಾಳೆ. ಓಬವ್ವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಲ್ಲಿ ಒಬ್ಬ ಮುಸ್ಲಿಂ ಸಮುದಾಯಕ್ಕೆ ಸೇರಿದ ರಜಿಯಾ ಎಂಬ ಮಹಿಳೆ "ಒನಕೆ ಓಬವ್ವ ಸ್ತ್ರೀಸಶಕ್ತಿ ಸಂಘ" ಎಂಬ ಹೆಸರಿನಲ್ಲಿ ಸಂಘ ಸ್ಥಾಪಿಸಿಕೊಂಡು ಆ ಮೂಲಕ ಅಬಲೆಯರಿಗೆ, ಶೋಷಣೆಗೆ ಒಳಗಾದವರಿಗೆ, ಆರ್ಥಿಕವಾಗಿ ತೊಂದರೆಗೊಳಗಾದ ಮಹಿಳೆಯರಿಗೆ ಸಂಘದ ಮುಖಾಂತರ ಸಹಾಯ ಮಾಡುತ್ತ ಬಂದಿರುವುದು ಈ ಮಹಾಪ್ರಬಂಧದ ಕ್ಷೇತ್ರಕಾರ್ಯದಿಂದ ತಿಳಿದಿದೆ. ಇದು ಶ್ಲಾಘನೀಯ ಕಾರ್ಯವಾಗಿದೆ.

೧೫. ದುರ್ಗದ ಇತಿಹಾಸದಲ್ಲಿ ಓಬವ್ವ ವರ್ಣರಂಜಿತ, ಸಾಂಸ್ಕೃತಿಕ ಸ್ಥಾನ ಹೊಂದಿದ ಸ್ತ್ರೀಯಾಗಿದ್ದ, ರಾಷ್ಟ್ರಮಟ್ಟದಲ್ಲಿ ಚಿತ್ರದುರ್ಗ ಎಂದರೆ ಓಬವ್ವೆಯ ನಾಡೆಂದೇ ಗುರುತಿಸಲ್ಪಟ್ಟಿದ್ದಾಳೆ.

೧೬. ಇತಿಹಾಸದಲ್ಲಿ ಸೇರ್ಪಡೆಯಾಗಲು ಎಲ್ಲಾ ಅರ್ಹತೆಗಳನ್ನು ಹೊಂದಿದ ವೀರನಾರಿಯ ವೀರೋಚಿತ ಚರಿತ್ರೆಯನ್ನು ದಾಖಲಿಸಿದೆ.

ಅನುಬಂಧಗಳು

೧. ಗ್ರಂಥಋಣ
೨. ನಕಾಶಗಳು
೩. ವಕ್ತ್ರ ವಿವರ
೪. ವಂಶವೃಕ್ಷ
೫. ಪತ್ರಿಕಾ ಪ್ರಕಟಣೆಗಳು
೬. ಛಾಯಾಚಿತ್ರಗಳು

ಗ್ರಂಥಋಣ

೧. ಕಮಲ ಹಂಪನಾ (ಲೇ), ಬಹುಳ ಕಥಾಗುಚ್ಚ ಸಂಪುಟ-೬, ಸ್ವಪ್ನ ಬುಕ್ ಹೌಸ್, ಬೆಂಗಳೂರು-೨೦೧೧

೨. ಕಲಬುರ್ಗಿ ಎಂ.ಎಂ., (ಲೇ), ಮಾರ್ಗ-೧, ಕರ್ನಾಟಕ ಬುಕ್ ಏಜನ್ಸಿ ಪ್ರಕಾಶನ ಬೆಂಗಳೂರು-೧೯೮೮

೩. ಕಲಬುರ್ಗಿ ಎಂ.ಎಂ., ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ-೧೯೯೪

೪. ಕಲಾವತಿ ಬಿ.ಜಿ., ಮಾಧ್ಯಮ ಮತ್ತು ಮಹಿಳೆ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ-೨೦೧೦

೫. ಕಾಳೇಗೌಡ ನಾಗವಾರ, ತ್ರಿಪದಿ ರಗಳೆ ಮತ್ತು ಜನಪದ ಸಾಹಿತ್ಯ, ಸ್ವಪ್ನ ಬುಕ್ ಹೌಸ್, ಬೆಂಗಳೂರು-೧೯೭೫

೬. ಕೃಷ್ಣಯ್ಯ ಎ.ಡಿ., ಭಾರತದ ಧೀರ ಮಹಿಳೆ ಒನಕೆ ಓಬವ್ವ, ಬೆಳಗು ಪ್ರಕಾಶನ, ನೆಲ್ಲಿಕಟ್ಟೆ, ಚಿತ್ರದುರ್ಗ-೧೯೭೬

೭. ಕೃಷ್ಣಪ್ಪ ಜಿ., ಬೇಂದ್ರಯವರ ಸಾಹಿತ್ಯದಲ್ಲಿ ಸ್ತ್ರೀ : ಒಂದು ಅಧ್ಯಯನ, ಕಾಮಧೇನು ಪ್ರಕಾಶನ-೨೦೦೧

೮. ಕೊಸಾಂಬ ಡಿ. (ಲೇ), ವೇಣುಗೋಪಾಲ ಟಿ.ಎಸ್., ಶೈಲಜಾ (ಅನು) ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ, ಚಿಂತನ ಪ್ರಕಾಶನ, ಬೆಂಗಳೂರು-೨೦೧೧

೯. ಗಂಡುಗಲಿ ಟಿ.ಎನ್., ಪ್ರಮುಖ, ಹರ್ಷ ಪ್ರಿಂಟರ್ಸ್, ಮೈಸೂರು-೧೯೯೫

೧೦. ಗಂಗಾ ನಾಯಕ್ ಕೆ.ಎನ್. (ಪ್ರ. ಸಂ), ಡಾ. ವೃಷಭಕುಮಾರ (ಸಂ), ಜಾನಪದ ತಜ್ಞರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.-೨೦೧೧

೧೧. ಗಿರಿಜಾ, ಚಿತ್ರದುರ್ಗ ಜಿಲ್ಲಾ ದರ್ಶಿನಿ

೧೨. ಗಿರಿಜ ಟಿ. (ಲೇ),ದುರ್ಗದ ನಾಗತಿಯರು, ಚಿತ್ರದುರ್ಗದ ಇತಿಹಾಸದ ಮಹಿಳೆಯರು, ಟಿ. ಗಿರಿಜ ದೀಕ್ಷಿತ್ ಪ್ರಕಾಶನ, ದಾವಣಗೆರೆ-೨೦೧೩

೧೩. ಗಿರೀಶ್ ಕರ್ನಾಡ್, ಟಿಪ್ಪು ಸುಲ್ತಾನ ಕಂಡ ಕನಸು (ನಾಟಕ), ಮನೋಹರ ಗ್ರಂಥಮಾಲಾ, ಧಾರವಾಡ-೨೦೧೨

೧೪. ಗುರುಪ್ರಸಾದ್ ಸಿ.ಟಿ., ಕನ್ನಡ ಜಾನಪದ ಗ್ರಂಥಸೂಚಿ ಸಂಕಲನ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ-೨೦೦೦

೧೫. ಗೋಪಾಲ ಆರ್. (ಸಂ), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಸಂಶೋಧನ ಮತ್ತು ಪ್ರಾಚ್ಯ ಮಂಡಳಿ, ಚಿತ್ರದುರ್ಗ

೧೬. ಚಂದ್ರಶೇಖರ ಬಿ.ಆರ್., ಕರ್ನಾಟಕ ಜನಗಣತಿ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ-೨೦೧೨

೧೭. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. ೪೫೦-೧೧೫೦), ಚಿದಾನಂದ ಸಮಗ್ರ ಸಂಪುಟ-೧, ಸ್ವಪ್ನ ಬುಕ್ ಹೌಸ್, ಬೆಂಗಳೂರು-೧೯೬೬

೧೮. ಚಿಕ್ಕಣ್ಣ ಯಣ್ಣೆಕಟ್ಟೆ, ಚಿತ್ರದುರ್ಗ ಜಿಲ್ಲೆಯ ಜನಪದ ಕಲಾವಿದರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೯೫

೧೯. ಜ್ಯೋತಿ ಶಶಿಕುಮಾರ, ಮಹಿಳೆ ಮತ್ತು ಸಾಮಾಜಿಕತೆ, ಮಹಿಳಾ ಅಧ್ಯಯನ ಕೇಂದ್ರ, ಹಂಪಿ-೨೦೦೭

೨೦. ತಿಪ್ಪೇಸ್ವಾಮಿ ಡಾ. ಜಿ.ಆರ್. (ಲೇ), ಮೌಖಿಕ ಕಥನ, ವಿಜಯಲಕ್ಷ್ಮೀ ಪ್ರಕಾಶನ, ಮೈಸೂರು-೨೦೦೫

